# ಅಧ್ಯಾಯ – ೧೪

## ಸಾಹಿತ್ಯ ಮತ್ತು ಸಂಸ್ಕೃತಿ

ರಾಜ್ಯದ ಆಗ್ನೇಯ ಭಾಗದಲ್ಲಿರುವ ತುಮಕೂರು ಜಿಲ್ಲೆಯು ವಿಶಾಲವಾದ ಬಯಲು ಪ್ರದೇಶದಿಂದ ಕೂಡಿದ್ದು ಇಲ್ಲಿಯ ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರಗಳು ವೈವಿಧ್ಯ ಶಿಲ್ಪಕಲೆ, ಸಂಗೀತ, ಸಾಹಿತ್ಯ, ನೃತ್ಯ ಮುಂತಾದ ಲಲಿತ ಕಲೆಗಳ ಬೀಡೆನಿಸಿದ್ದು ಜನಪದ, ಯಕ್ಷಗಾನ, ರಂಗಭೂಮಿಗಳ ತ್ರಿವೇಣಿ ಸಂಗಮವಾಗಿದೆ. "ಕಲ್ಪತರು ನಾಡು" ಎಂಬ ಅನ್ವರ್ಥನಾಮವನ್ನು ಹೊಂದಿದ್ದು ಗಂಗರಸ ದುರ್ವಿನೀತನ ಕಾಲದ ತಾಮ್ರಶಾಸನವೊಂದರಲ್ಲಿ ಉಲ್ಲೇಖಿತವಾಗಿರುವಂತೆ 'ಸುಜನ ಜನಪದ'ರೆಂಬ ನುಡಿಗಟ್ಟನ್ನು ಅರ್ಥವತ್ತಾಗಿಸಿದೆ. ಕರ್ನಾಟಕದ ಪ್ರಮುಖ ರಾಜಮನೆತನವಾದ ಗಂಗರ ಆಳ್ವಿಕೆಗೆ ಜಿಲ್ಲೆಯ ದಕ್ಷಿಣಭಾಗವು ಒಳಪಟ್ಟಿದ್ದು ಅವರ ಕಾಲದ ಶಾಸನ, ವಾಸ್ತುಶಿಲ್ಪಗಳು ಇಂದಿಗೂ ಉಳಿದು ಬಂದಿವೆ. ಈ ಮನೆತನದೊಂದಿಗೆ ರಕ್ತಸಂಬಂಧವಿರಿಸಿಕೊಂಡಿದ್ದ ನೊಳಂಬರು ಜಿಲ್ಲೆಯ ಪೂರ್ವಭಾಗದ ಮೇಲೆ ನಿಯಂತ್ರಣ ಹೊಂದಿದ್ದು, ಆ ಭಾಗದಲ್ಲಿ ರಾಜಕೀಯ ಚಟುವಟಿಕೆಯಲ್ಲಿ ತೊಡಗಿದ್ದು ಶಾಸನೋಕ್ತವಾಗಿವೆ. ನೊಳಂಬರ ರಾಜಧಾನಿಯಾಗಿದ್ದ ಹೇಮಾವತಿಯು (ಹೆಂಜೇರು–ಮಡಕಶಿರಾ ತಾಲೂಕು, ಅನಂತಪುರ ಜಿಲ್ಲೆ, ಆಂಧ್ರಪ್ರದೇಶ) ಹಿಂದೆ, ತುಮಕೂರು ಜಿಲ್ಲೆಯಲ್ಲಿಯೇ ಇದ್ದು, ಜಿಲ್ಲೆಯ ಹಲವೆಡೆ ನೊಳಂಬರ ವಾಸ್ತುಶಿಲ್ಪ ಪ್ರಭಾವ ಕಂಡುಬರುತ್ತದೆ. ರಾಷ್ಟ್ರಕೂಟ ಕೃಷ್ಣನ ಗುಬ್ಬಿ ತಾಮ್ರಶಾಸನವು ಅವರ ವಂಶಾವಳಿ ಹಾಗೂ ಎಲ್ಲೋರಾದಲ್ಲಿ ನಿರ್ಮಾಣಗೊಂಡ ದೇವಾಲಯದ ಬಗ್ಗೆ ಮಾಹಿತಿಯನ್ನು ಒದಗಿಸುವ ಅಪೂರ್ವ ಶಾಸನವಾಗಿದೆ.

ಹೊಯ್ಸಳರ ನೆಲೆವೀಡಾಗಿದ್ದ ಹಾಸನ ಜಿಲ್ಲೆಗೆ ತಾಕಿಕೊಂಡಿರುವ ತುಮಕೂರು ಜಿಲ್ಲೆಯಲ್ಲಿ ಗಂಗರ ಕಾಲದಿಂದ ಆಧುನಿಕ ಕಾಲದವರೆಗೂ ನೂರಾರು ಶಾಸನಗಳು, ಅಸಂಖ್ಯಾತ ದೇವಾಲಯಗಳೂ ಕಂಡುಬರುತ್ತವೆ. ಚೋಳರ ಕೆಲವು ಶಾಸನಗಳು ಕಂಡು ಬರುತ್ತವೆಯಾದರೂ ವಾಸ್ತುಶಿಲ್ಪ ಪ್ರಭಾವ ಆದಂತಿಲ್ಲ. ಜಿಲ್ಲೆಯಲ್ಲಿ ವಿಜಯನಗರ ಕಾಲದ ದೇವಾಲಯಗಳ ದೊಡ್ಡಪಟ್ಟಿಯೇ ಲಭಿಸುತ್ತದೆ. ಜಿಲ್ಲೆಯಲ್ಲಿ ಹಲವಾರು ಪಾಳೇಗಾರರು, ಸ್ಥಳೀಯ ಅರಸು ಮನೆತನಗಳು ಆಳ್ವಿಕೆ ನಡೆಸಿದ್ದು ಸ್ವಾತಂತ್ರ್ಯಾನಂತರ ತಮ್ಮ ಅಸ್ತಿತ್ವ ಕಳೆದುಕೊಂಡವು. ಆದರೆ ಸಾಹಿತ್ಯ ಸಂಸ್ಕೃತಿಗಳಿಗೆ ಅವು ನೀಡಿದ ಕಾಣಿಕೆ ಅಪಾರ.

ಹಳಗನ್ನಡ ಸಾಹಿತ್ಯದಲ್ಲಿ ಗುಬ್ಬಿಮಲ್ಲಣ್ಣ, ತೋಂಟದ ಸಿದ್ಧಲಿಂಗಯತಿ ಮುಂತಾದವರು ಸೇರಿದಂತೆ ವಚನಕಾರರು, ಇನ್ನಿತರ ಸಾಹಿತ್ಯ ಪ್ರಕಾರದ ನೂರಾರು ಸಾಹಿತಿಗಳನ್ನು ಈಗಾಗಲೇ ಗುರುತಿಸಲಾಗಿದ್ದು, ಅವರ ಕೃತಿಗಳು ಪ್ರಕಟವಾಗಿವೆ. ನವೋದಯ ಕವಿ, ಸಾಹಿತಿ, ಸಂಶೋಧಕರಲ್ಲಿ ಬಿ.ಎಂ.ಶ್ರೀಕಂಠಯ್ಯ, ತೀ.ನಂ.ಶ್ರೀಕಂಠಯ್ಯ, ಡಿ.ಎಲ್.ನರಸಿಂಹಾಚಾರ್, ಬೆಳ್ಳಾವೆ ವೆಂಕಟನಾರಾಣಪ್ಪ, ನರಹರಿಶಾಸ್ತ್ರಿ, ಕೆ.ವೆಂಕಟರಾಮಪ್ಪ ಮುಂತಾದ ದೊಡ್ಡ ವಿದ್ವತ್ ಪರಂಪರೆಯೇ ಜಿಲ್ಲೆಯಲ್ಲಿದೆ. ಆಧುನಿಕ ಸಾಹಿತಿಗಳಲ್ಲಿ ಪ್ರೊ. ಜಿ.ಎಸ್.ಸಿದ್ಧಲಿಂಗಯ್ಯ, ಸಾ.ಶಿ.ಮರುಳಯ್ಯ, ಬರಗೂರು ರಾಮಚಂದ್ರಪ್ಪ, ದೊಡ್ಡರಂಗೇಗೌಡ, ವೀಚಿ, ಹೆಚ್.ಜಿ.ಸಣ್ಣಗುಡ್ಡಯ್ಯ, ಎಸ್.ಜಿ.ಸಿದ್ಧರಾಮಯ್ಯ, ಕಮಲಾ ಹಂಪನಾ, ನಿರುಪಮಾ, ಟಿ.ಸುನಂದಮ್ಮ ಮುಂತಾದವರು ಇಂದಿಗೂ ಉಲ್ಲೇಖಿಸಲ್ಪಡುತ್ತಾರೆ. ಜನಪದ ಸಾಹಿತ್ಯ ಹಾಗೂ ಅಭಿವ್ಯಕ್ತಿ ಮಾಧ್ಯಮಗಳಿಗೆ ಸಂಬಂಧಿಸಿದಂತೆ ಮಧುಗಿರಿ, ಶಿರಾ ತಾಲೂಕುಗಳು ಖ್ಯಾತಿ ಪಡೆದಿದ್ದು, ರಂಗಭೂಮಿ ಹಾಗೂ ಸಿನಿಮಾ ಕ್ಷೇತ್ರಗಳಲ್ಲಂತೂ ಜಿಲ್ಲೆಯು ಇಡೀ ರಾಷ್ಟ್ರದಲ್ಲಿ ಬೆಳ್ಳಿ ಚುಕ್ಕೆಯನ್ನು ಮೂಡಿಸಿದೆ. ಗುಬ್ಬಿ ವೀರಣ್ಣ ಹಾಗೂ ಅವರ ನಾಟಕ ಸಂಸ್ಥೆಗಳು ರಾಜ್ಯ, ಹೊರರಾಜ್ಯಗಳಲ್ಲಿ ದುಂದುಭಿಯನ್ನು ಮೊಳಗಿಸಿವೆ. ಇದೇ ಜಿಲ್ಲೆಯವರಾದ ರಾಜಮ್ಮ, ನರಸಿಂಹರಾಜು, ಮಾಸ್ಟರ್ ಹಿರಣ್ಣಯ್ಯ ಸೇರಿದಂತೆ ಬಿ.ಜಯಶ್ರೀ, ಸಿದ್ಧಲಿಂಗಯ್ಯ, ಬರಗೂರು ರಾಮಚಂದ್ರಪ್ಪ, ಪಿ.ಶೇಷಾದ್ರಿ ಮುಂತಾದ ಹಲವಾರು ಕಲಾವಿದರು ಸಿನಿಮಾ ಕ್ಷೇತ್ರದಲ್ಲಿಯೂ ಹೆಸರು ಮಾಡಿದ್ದಾರೆ.

ರಾಜ್ಯಮಟ್ಟದಲ್ಲಿ ಜಿಲ್ಲೆಯದೇ ಆದ ಪತ್ರಿಕೆಗಳು ಇಲ್ಲವಾದರೂ ಆರಂಭಿಕ ಕಾಲದಿಂದ ಸ್ಥಳೀಯವಾಗಿ ಅನೇಕ ಪತ್ರಿಕೆಗಳು ಜನಿಸಿ ಕೆಲಕಾಲ ನಡೆದು ಕಣ್ಮರೆಯಾಗಿದ್ದರೂ ಇಂದಿಗೂ ವಿಜಯವಾಣಿ (ಈಗ ವಿಜಯ ಸಂಕೇಶ್ವರ ಅವರ ಮಾಲಿಕತ್ವಕ್ಕೆ ಹೋಗಿ ರಾಜ್ಯಮಟ್ಟದ ಪತ್ರಿಕೆಯಾಗಿದೆ) ಅಮರ ಸಂದೇಶ, ಪ್ರಜಾಪ್ರಗತಿ, 'ತುಮಕೂರು ವಾರ್ತೆಯೂ ಸೇರಿದಂತೆ ಹಲವಾರು ಪತ್ರಿಕೆಗಳು ಹೊರಬರುತ್ತಿವೆ. ಭಿತ್ತಿಚಿತ್ರ, ವರ್ಣಚಿತ್ರಗಳು ಜಿಲ್ಲೆಯ ಸೀಬಿ, ಕೆರೆಗೋಡಿ ರಂಗಾಪುರ ಸೇರಿದಂತೆ ಇನ್ನೂ ಹಲವೆಡೆ ಇಂದಿಗೂ ಉಳಿದು ಬಂದಿದ್ದು ರಾಜ್ಯದಲ್ಲಿಯೇ ಹೆಚ್ಚು ಭಿತ್ತಿಚಿತ್ರಗಳನ್ನುಳ್ಳ ಸ್ಥಳಗಳನ್ನು ಹೊಂದಿರುವ ಹೆಗ್ಗಳಿಕೆ ಈ ಜಿಲ್ಲೆಯದಾಗಿದೆ. ಅಂತೆಯೇ ಪ್ರಾಚೀನ ವಾಸ್ತುಶಿಲ್ಪಗಳೂ ಜಿಲ್ಲೆಯಾದ್ಯಂತ ಚದುರಿದಂತಿವೆ. ಈ ಎರಡೂ ಕ್ಷೇತ್ರಗಳಲ್ಲಿ ಇಂದಿಗೂ ನಿರತರಾಗಿರುವ ನುರಿತ ಕಲಾವಿದರು ಈ ಜಿಲ್ಲೆಯಲ್ಲಿದ್ದಾರೆ. ಜಿಲ್ಲೆಯಲ್ಲಿ ಖ್ಯಾತ ಸಂಗೀತ – ನೃತ್ಯಶಾಲೆಗಳೂ ಇದ್ದು ಅವುಗಳಿಂದ ಹೆಸರಾಂತ ಕಲಾವಿದರು ಹೊರಬಂದಿದ್ದಾರೆ. ಈ ಎಲ್ಲದರ ಬಗ್ಗೆ ಸಂಕ್ಷಿಪ್ತವಾಗಿ ಪ್ರಸ್ತುತ ಅಧ್ಯಾಯದಲ್ಲಿ ವಿವರಿಸಲಾಗಿದೆ.

**ಶಾಸನ ಕವಿಗಳು**

ತುಮಕೂರು ಜಿಲ್ಲೆಯು ಪ್ರಾಕೃತಿಕವಾಗಿ, ಚಾರಿತ್ರಿಕವಾಗಿ, ಶೈಕ್ಷಣಿಕವಾಗಿ, ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಗಳ ಶ್ರೀಮಂತಿಕೆಯಿಂದಾಗಿ ರಾಜ್ಯದ ಗಮನ ಸೆಳೆದಿದೆ. ಗಂಗ, ರಾಷ್ಟ್ರಕೂಟ, ನೊಳಂಬ, ಚೋಳ, ಹೊಯ್ಸಳ, ವಿಜಯನಗರ ಮುಂತಾದ ಪ್ರಮುಖ ರಾಜಮನೆತನಗಳಲ್ಲದೆ ಸಾಕಷ್ಟು ಸಂಖ್ಯೆಯಲ್ಲಿ ಸ್ಥಳೀಯ ರಾಜರು, ಮಾಂಡಲಿಕರು, ಪಾಳೇಗಾರರು ಆಡಳಿತ ನಡೆಸಿದ್ದು ಇವರೆಲ್ಲರೂ ಸಾಹಿತ್ಯ ಮತ್ತು ಕಲಾ ಕ್ಷೇತ್ರಗಳಿಗೆ ಸಾಕಷ್ಟು ಪ್ರೋತ್ಸಾಹ ನೀಡಿದರು. ಈ ರಾಜಮನೆತನಗಳಿಗೆ ಸಂಬಂಧಿಸಿದ ಶಾಸನಗಳಲ್ಲಿ, ಶಾಸನ ರಚಿಸಿದ,ಬರೆದ (ಲಿಪಿಕಾರ) ಹಾಗೂ ಕೆತ್ತಿ(ಕೊರೆ)ದ ವ್ಯಕ್ತಿಗಳ ಹೆಸರು ಕ್ವಚಿತ್ತಾಗಿ ದಾಖಲಾಗಿರುವುದು ಉಲ್ಲೇಖಾರ್ಹವಾಗಿದೆ. ಜಿಲ್ಲೆಯ ಶಾಸನಕವಿಗಳಲ್ಲಿ ಲಭ್ಯವಿರುವ ಪ್ರಾಚೀನ ಉಲ್ಲೇಖ ಸುಮಾರು ೪೫೦ರಲ್ಲಿ ಮೇಳೆಕೋಟೆಯ ತಾಮ್ರಶಾಸನವನ್ನು ರಚಿಸಿದ ಚಾವುದತ್ತನದಾಗಿದೆ. ಕಡಗತ್ತೂರಿನ ಕ್ರಿ.ಶ.೪೮೨ರ ಜೈನ ತಾಮ್ರಶಾಸನ ಕೂಟಶಾಸನವಾದರೂ ಚಿಕ್ಕಣ್ಣ ಎಂಬಾತ ಬರೆದು ಕೆತ್ತಿದ್ದನ್ನು ತಿಳಿಸುತ್ತದೆ. ಕೊಂಡಜ್ಜಿಯ ೭೩೩ರ ಶಾಸನವನ್ನು ವಿಶ್ವಕರ್ಮಚಾರ್ಯ ರಚಿಸಿದ್ದರೆ, ನಿಡಗಲ್ಲು ಬೆಟ್ಟದ ಸುಮಾರು ೯೦೦ರ ಶಾಸನವನ್ನು ಚಂದ್ರಶೇಖರ ರಚಿಸಿದ್ದಾನೆ. ಗಂಗ ಸತ್ಯವಾಕ್ಯನು ನೀಡಿರುವ ೯೭೨ರ ಕಿಬ್ಬನಹಳ್ಳಿ ಶಾಸನವನ್ನು ಕಾವಯ್ಯನ ಮಗ ಸೇನಭೋವ ಕಾಮಯ್ಯ ರಚಿಸಿದ್ದರೆ, ಬೆಳಗೆರೆಯ ೧೧೦೭ರ ಶಾಸನವನ್ನು ಹಡಪಾಲ ಬುವಯ್ಯನ ಮಗ ಹಡವಾಳ ಬೊಮ್ಮಯ್ಯ ರಚಿಸಿದ್ದಾನೆ. ಇದೇ ಬೆಳಗೆರೆಯ ೧೧೩೦ರ ಶಾಸನ, ವಿಷ್ಣುವರ್ಧನನ ಕಾಲದ್ದಾಗಿದ್ದು ಹೊನ್ನುಡಿಮಯ್ಯನು ಬರೆದಿದ್ದು, ಮುದ್ದೇನಹಳ್ಳಿಯ ೧೧೩೩ರ ಶಾಸನವನ್ನು ಹಂದಲಕೆರೆ ಸೇನಭೋವ ರಚಿಸಿದ್ದಾನೆ. ಎಳನಡು ಗ್ರಾಮದ ೧೧೫೭ರ ಶಾಸನವನ್ನು ಭೈರೋಜ ಬರೆದಿದ್ದು, ಸೀಗೆಬಾಗಿಯ ೧೧೬೧ರ ಶಾಸನವನ್ನು ಚತುಷ್ಷತಿ ಚಕ್ರವರ್ತಿ ಕಾಳಿದಾಸಿ ಕವಿ ಹಂಸದೇವ ಹೇಳಿ ಬರೆಸಿದನೆಂದು ಉಲ್ಲೇಖಿಸಲಾಗಿದೆ, ನೇರಳಗೆರೆಯ ೧೧೭೨ರ ಶಾಸನವು ತಿಕ್ಕರಸನ ಬರಹವಾಗಿದ್ದು,

ಚಿಕ್ಕನಾಯಕನಹಳ್ಳಿ ತಾಲೂಕಿನ ಬೂದಿಹಾಳಿನ ೧೧೮೭ರ ಶಾಸನವು ಬಮ್ಮೋಜನ ಮಗ ಸೂರ್ಯಾಚಾರಿಯ ರಚನೆಯಾಗಿದೆ. ನೊಣವಿನಕೆರೆ ಹೋಬಳಿಯ ಮತ್ತಿಗಟ್ಟದ ೧೨೯೧ರ ವೀರಗಲ್ಲನ್ನು ಮಲ್ಲರಸ ರಚಿಸಿದ್ದು, ಹೆಗ್ಗೆರೆಯ ೧೩೧೪ರ ಶಾಸನವನ್ನು ಸೇನಭೋವ ಮಹಾದೇವನ ಮಗ ಮಾದಣ್ಣ ರಚಿಸಿದ್ದಾನೆ. ಬರಗಿಹಳ್ಳಿಯ ೧೩೧೮ರ ಶಾಸನ ಸೋಮಪ್ಪನ ರಚನೆಯಾದರೆ, ಕಂದಕೆರೆಯ ಶಾಸನವನ್ನು ರಚಿಸಿದಾತ ಸೇನಭೋವ ಚಾವಣ್ಣ.

ಗುಬ್ಬಿ ತಾಲೂಕಿನ ಸಂಪಿಗೆ ಗ್ರಾಮದ ೧೩೩೧ರ ಶಾಸನವನ್ನು ರಚಿಸಿದಾತ ಜೋಯಿಸ ಸುಧಾಕರದೇವ. ತುರುವೇಕೆರೆಯ ೧೩೮೮ರ ಶಾಸನವನ್ನು ಮಲ್ಲಣ್ಣಾರಾಧ್ಯ ರಚಿಸಿದ್ದರೆ, ನಾಗಲಮಠದಲ್ಲಿ ದೊರೆತ ತಾಮ್ರಶಾಸನವು ಹಳೆಯ ಶಾಸನವೊಂದರ ನಕಲಾಗಿದ್ದು, ೧೩೯೪ರಲ್ಲಿ ಕಂಸಾಲ ವೀರಾಚಾರಿಯು ಬರೆದ್ದಿದ್ದು, ವಿಕ್ರಮ ಶಖೆಯ ಉಲ್ಲೇಖವಿರುವುದು ಗಮನಾರ್ಹ. ಸುಮಾರು ಹದಿನೈದನೇ ಶತಮಾನದ ಬ್ಯಾಡನೂರಿನ ಶಾಸನ ಬಹರಾಯಿದನ ರಚನೆಯಾದರೆ, ೧೪೧೫ ವಳ್ಳೂರು ಗ್ರಾಮದ ತೆಲಗು ಶಾಸನವನ್ನು ಬುಕ್ಕ ಶಂಕರಯ್ಯ ಬರೆದದ್ದು. ಸಂಗಮದ ೧೪೨೬ರ ಶಾಸನ ವೀರಣ್ಣಾಚಾರ್ಯನದಾದರೆ, ಗುಬ್ಬಿ ತಾಲೂಕಿನ ಸಂಪಿಗೆ ಗ್ರಾಮದ ೧೪೭೦ರ ಶಾಸನವನ್ನು ಬಲ್ಲೇಹದ ಮಲ್ಲಣ್ಣ ರಚಿಸಿದ್ದು, ಶಿವನಗೆರೆಯ ೧೫೦೬ರ ಶಾಸನವನ್ನು ನರಸಿಂಹ ಎಂಬಾತ ಬರೆದಿದ್ದಾನೆ. ದೊಡ್ಡ ಮಾಲೂರಿನ ೧೫೧೦ರ ಕೃಷ್ಣದೇವರಾಯನ ಕಾಲದ ಶಾಸನವನ್ನು ಬರೆದಾತ ಮಲ್ಲಣ್ಣಾಚಾರ್ಯ. ಪಾವಗಡದ ೧೫೧೭ರ ಶಾಸನವನ್ನು ಸಭಾಪತಿ ರಚಿಸಿದ್ದಾನೆ. ೧೫೨೨ರ ಹೊಸಕೋಟೆಯ ತಾಮ್ರಶಾಸನವನ್ನು ದುಗ್ಗಯ್ಯ ಬರೆದಿದ್ದು. ಆತನಿಗೆ ಒಂದು ಸೇರು ಬಿತ್ತನೆ ಪ್ರಮಾಣದ ಭೂಮಿಯನ್ನು ದತ್ತಿಯಾಗಿ ನೀಡಲಾಯಿತು. ಚಿಕ್ಕನಾಯಕನಹಳ್ಳಿ ತಾಲೂಕಿನ ಬೂದಿಹಾಳಿನ ಕೃಷ್ಣದೇವರಾಯನ ಕಾಲದ ೧೫೨೫ರ ಶಾಸನ; ಹಾಗೂ ಪೋತಗಾನಹಳ್ಳಿಯ ೧೫೩೧ರ ಶಾಸನಗಳು ಸಭಾಪತಿಯಿಂದ ರಚಿಸಲ್ಪಟ್ಟಿವೆ. ದೊಡ್ಡ ಮಾಲೂರಿನ ೧೫೩೧ರ ಶಾಸನ ಅಚ್ಯುತಾಚಾರಿಯ ರಚನೆ ಎಂದು ಗೊತ್ತಾಗುತ್ತದೆ. ಗುಂಡ್ಲಹಳ್ಳಿಯ ೧೫೩೪ರ ಶಾಸನ ಸಿದ್ಧಾಚಾರಿಯ ರಚನೆಯಾಗಿದ್ದು, ಹೊನ್ನವಳ್ಳಿಯ ೧೫೪೫ರ ಶಾಸನವನ್ನು ಸೇನಬೋವನು ರಚಿಸಿದ್ದಾನೆ. ಕೊಡ್ಲಪುರದ ೧೫೬೫ರ ಶಾಸನ ಬರೆದದ್ದು ನರಸಿಂಹ, ಮಧುಗಿರಿ ತಾಲೂಕಿನ ೧೫೭೭ರ ಚೇಲಗೊಂಡನಹಳ್ಳಿಯ ಶಾಸನವನ್ನು ಕೆಂಪಯ್ಯ ರಚಿಸಿದ್ದರೆ, ತುಮಕೂರಿನ ೧೫೭೧ರ ತಾಮ್ರಶಾಸನವನ್ನು ಸಭಾಪತಿಯ ಮಗ (ಹೆಸರು ನಾಶವಾಗಿದೆ) ರಚಿಸಿದ್ದಾನೆ. ಶಿರಾದ ವಾಜರಹಳ್ಳಿಯ ೧೫೭೭ರ ಶಾಸನವನ್ನು ಕೆಂಚತಿಮ್ಮಯ್ಯ ಬರೆದಿದ್ದು, ಗಾಣದ ಹುಣಸೆಯ ೧೫೮೩ರ ಶಾಸನವನ್ನು ವೋಬಿಯ ಮಗ ಮಲ್ಲಣ್ಣ ಬರೆದಿದ್ದಾನೆ. ಹುಳಿಯಾರಿನ ೧೫೮೯ರ ತಾಮ್ರಶಾಸನವನ್ನು ರಚಿಸಿದಾತ ಸಭಾಪತಿಯ ಮೊಮ್ಮಗ ಕೃಷ್ಣ ಕವಿ ಕಾಮಕೋಟಿ. ಬೆಳವಾಡಿಯ ೧೫೮೯ರ ಶಾಸನವನ್ನು ನಾಗದೇವಣ್ಣ ರಚಿಸಿದ್ದಾನೆ. ಹೊನ್ನವಳ್ಳಿಯ ೧೬೦೦ರ ಶಾಸನವನ್ನು ಸೇನಬೋವ ವೀರಪ್ಪ ರಚಿಸಿರುವುದು ಕಂಡುಬರುತ್ತದೆ. ಕುಣಿಗಲ್ ತಾಲೂಕಿನ ಹಾಲಗೆರೆಯ ೧೬೬೨ರ ಶಾಸನವನ್ನು ಶಾನುಭೋಗ ಬರೆದಿದ್ದಾನೆ. ಕೆರೆಗೋಡಿ ರಂಗಾಪುರದ ದೀಪಾಲೇಕಂಬದ ಮೇಲಿನ ೧೬೭೧ರ ಶಾಸನವನ್ನು ಕೋಟಿಲಿಂಗಯ್ಯ ಎಂಬಾತನೂ, ಹೊಸಕೋಟೆಯ ೧೬೭೯ರ ಶಾಸನವನ್ನು ಅಣಲಪುರಿ ಶಾನುಭೋಗ ನರಸಯ್ಯನ ಮರಿ ಮೊಮ್ಮಗ ರಾಯತಿಮ್ಮಪ್ಪನ ಮಗ ರಾಮರಸ ಬರೆದಿದ್ದಾರೆ. ದೇವರಾಯದುರ್ಗದ ೧೬೯೯ರ ಶಾಸನವನ್ನು ದೊಡ್ಡಯ್ಯನ ಮಗ ಹುಚ್ಚಣ್ಣ ಬರೆದಿದ್ದು, ದೇವರಾಯದುರ್ಗದ ೧೭೧೯ರ ಶಾಸನ ಬರೆದಾತ ಚೆನ್ನಮಲ್ಲಯ್ಯ. ತುಮಕೂರಿನ ಲಕ್ಷ್ಮೀಕಾಂತ ದೇವಾಲಯದಲ್ಲಿರುವ ೧೭೬೦ರ ಶಾಸನವು ನಾರಾಯಣಯ್ಯ ಎಂಬಾತನಿಂದ ರಚಿಸಲ್ಪಟ್ಟಿದೆ. ಹೀಗೆ ಜಿಲ್ಲೆಯ ಶಾಸನಗಳಲ್ಲಿ ಶಾಸನ ರಚನಾಕಾರರ ಬಗ್ಗೆ ಮಾಹಿತಿ ದೊರೆತಿರುವುದು ಉಲ್ಲೇಖಾರ್ಹ.

## ಸಂಸ್ಕೃತ ಸಾಹಿತ್ಯ

ತುಮಕೂರು ಜಿಲ್ಲೆಯಲ್ಲಿ ಸಂಸ್ಕೃತ ಯಾವಾಗ ಪ್ರಾರಂಭವಾಯಿತು, ಹೇಗೆ ಬಂತು ಎಂಬುದನ್ನು ತಿಳಿಯುವುದು ಕಷ್ಟ. ಮೂಲಾಧಾರಗಳು ದೊರಕುವುದಿಲ್ಲ. ಅತೀ ಪ್ರಾಚೀನ ಶಾಸನಗಳು ಪ್ರಾಕೃತ, ಬ್ರಾಹ್ಮಿ, ಪಾಲಿ ಭಾಷೆಗಳಲ್ಲಿ ಕಂಡುಬಂದಿದ್ದು, ಸಂಸ್ಕೃತದ ಬಗೆಗೆ ಮಾಹಿತಿ ಲಭ್ಯವಿಲ್ಲ. ಆದರೆ,ನಾಲ್ಕನೇ ಶತಮಾನದ ತರುವಾಯ, ಸಂಸ್ಕೃತದ ಪ್ರಚಲಿತತೆ ಕಂಡು ಬಂದು ಅಲ್ಲಿಯವರೆಗೆ ಪ್ರಾಕೃತದಲ್ಲಿ ಕೃತಿ ರಚಿಸುತ್ತಿದ್ದ ಜೈನಕವಿಗಳು ಸಂಸ್ಕೃತಕ್ಕೆ ಬದಲಾಯಿಸಿಕೊಂಡಂತೆ ತೋರುತ್ತಿದ್ದು, ಕ್ರಿ.ಶ. ಒಂಬತ್ತನೆಯ ಶತಮಾನದ ಮೇಲೆ ಕನ್ನಡದಲ್ಲಿ ಬರೆಯತೊಡಗಿದರು. ಕನ್ನಡ ದ್ರಾವಿಡ ಭಾಷಾ ವರ್ಗಕ್ಕೂ, ಪ್ರಾಕೃತ ಮತ್ತು ಸಂಸ್ಕೃತ ಇಂಡೋ–ಆರ್ಯನ್ ಭಾಷಾವರ್ಗಕ್ಕೂ ಸೇರಿವೆ. ಕನ್ನಡವು ಬಹುತೇಕ ಸಂಸ್ಕೃತ ವ್ಯಾಕರಣ ಮಾದರಿಯನ್ನು ಅನುಸರಿಸಿದೆ. ಕನ್ನಡ ಲಿಪಿ ಹಾಗೂ ಸಂಸ್ಕೃತವನ್ನು ಬರೆಯಲು ಬಳಸುವ ದೇವನಾಗರಿ ಲಿಪಿಗಳ ಮೂಲ ಬ್ರಾಹ್ಮಿಲಿಪಿಯಾಗಿದೆ.

ಕರ್ನಾಟಕದಲ್ಲಿ ಸಂಸ್ಕೃತ ಕೃತಿ ರಚನಾಕಾರರು ಅಥವಾ ಸಂಸ್ಕೃತ ಸಾಹಿತ್ಯ ಬಹಳಷ್ಟು ದೊರೆಯುವುದಾದರೂ ಈ ಜಿಲ್ಲೆಯ ಸಂದರ್ಭದಲ್ಲಿ ಸಂಸ್ಕೃತ ಸಾಹಿತ್ಯದ ಮೊದಲ ಹೆಜ್ಜೆ ಯಾವುದೆಂದು ಗುರುತಿಸಲಾಗುವುದಿಲ್ಲ. ಈ ಜಿಲ್ಲೆಯಲ್ಲಿ ಶ್ರೀಸಿದ್ಧಗಂಗಾ ಕ್ಷೇತ್ರದಲ್ಲಿ ಶ್ರೀ ಉದ್ದಾನ ಶಿವಯೋಗಿಗಳು ವೇದಪಾಠಶಾಲೆಯನ್ನು ಸು.೧೮೮೦ರಲ್ಲಿ ಪ್ರಾರಂಭಿಸಿದರು. ಮುಂದೆ ೧೯೧೭ರಲ್ಲಿ ವೇದಪಾಠಶಾಲೆಯ ಜೊತೆಗೆ ಸಂಸ್ಕೃತ ಪಾಠಶಾಲೆಯನ್ನೂ ಆರಂಭಿಸಿದ ಸಂಗತಿ ತಿಳಿದುಬರುತ್ತದೆ. ಸಿದ್ಧಗಂಗಾ ಕ್ಷೇತ್ರದ ಡಾ.ಶಿವಕುಮಾರ ಮಹಾಸ್ವಾಮಿಯವರು ಸ್ವತಃ ಸಂಸ್ಕೃತ ವಿದ್ವಾಂಸರಾಗಿದ್ದು ಸಂಸ್ಕೃತವು ಉನ್ನತ ಮಟ್ಟದಲ್ಲಿ ಬೆಳೆದು ಬರಲು ಕಾರಣಕರ್ತರಾಗಿದ್ದಾರೆ.

ಜಗ್ಗು ಶಿಂಗ್ರಯ್ಯಂಗಾರ್ ೧೯೫೦ರ ದಶಕದಲ್ಲಿದ್ದವರು. ಪ್ರಸನ್ನ ಕಾಶ್ಯಪ, ಅದ್ಭುತ ದೂತಃ, ಅದ್ಭುತಾಂಕುಶ, ಪ್ರತಿಜ್ಞಾ ಕೌಟಿಲ್ಯಮ್, ಮುಂತಾದ ನಾಟಕಗಳನ್ನು ರಚಿಸಿದ್ದಾರೆ. ಮುಳುಕುಂಟೆ ಲಕ್ಷ್ಮೀನರಸಿಂಹ ಭಟ್ಟರು ಪರಶುರಾಮ(೨೦೦೧) ಎಂಬ ಕೃತಿ ಹಾಗೂ 'ಶ್ರೀ ಸಿದ್ಧಗಂಗಾ ಮಹಿಮೆ' ಕುರಿತಂತೆ ಅನೇಕ ಶ್ಲೋಕಗಳನ್ನು ರಚಿಸಿದ್ದಾರೆ. ವಿದ್ವಾನ್ ಬಿ.ಗಂಗಪ್ಪ ಅವರು ಶಿವಕುಮಾರಾಷ್ಟಕಮ್, ಹಾಗೂ ಇನ್ನಿತರೆ ಮುಕ್ತಕ ಹಾಗೂ ಅಷ್ಟಕಗಳನ್ನು ರಚಿಸಿದ್ದಾರೆ. ಇವರ ಬದುಕು ಬರಹ ಕುರಿತ 'ಸೇವಕ' ಎಂಬ ಕೃತಿ ೨೦೦೩ರಲ್ಲಿ ಪ್ರಕಟವಾಗಿದೆ. ಕೋ.ರಂ.ಬಸವರಾಜು ಅವರು ಕನ್ನಡ-ಸಂಸ್ಕೃತ ಭಾಷೆಗಳೆರಡರಲ್ಲೂ ಕೋವಿದರಾಗಿದ್ದು, ಗುರುಶಿಷ್ಯ ಸ್ವರೂಪಕೋಶಃ, ಶಿವಪಂಚವಿಂಶತಿ ಲೀಲಾಶತಕಂ, ಶಿವಕುಮಾರಾಷ್ಟಕಂ, ಉದ್ದಾನೇಶ್ವರ ಅಷ್ಟೋತ್ತರ ಶತನಾಮಾವಳಿ ಸಸ್ತೋತ್ರಂ ಮುಂತಾದ ೧೫ಕ್ಕೂ ಹೆಚ್ಚು ಕೃತಿ ರಚನೆ ಮಾಡಿದ್ದಾರೆ. ರಾಜ್ಯ ಪ್ರಶಸ್ತಿ, ಸಾಹಿತ್ಯ ಸುಧಾಕರಃ ಮುಂತಾದ ಬಿರುದು ಸಹಿತ ಗೌರವ ಪಡೆದಿದ್ದಾರೆ. ಇವರಲ್ಲದೇ ಸಿ.ಎಂ.ರುದ್ರಾರಾಧ್ಯ ಶರ್ಮ, ಬಿ.ರಾಜಶೇಖರಯ್ಯ, ಟಿ.ಎನ್.ಸತ್ಯವತಿ, ಟಿ.ಎನ್. ಪ್ರಭಾಕರ, ಸೋ.ನರಸಿಂಹನ್ ಮುಂತಾದ ಸಂಸ್ಕೃತ ವಿದ್ವಾಂಸರು ಜಿಲ್ಲೆಯಲ್ಲಿದ್ದಾರೆ.

**ಪ್ರಾಚೀನ ಕನ್ನಡ ಸಾಹಿತ್ಯ**

ತುಮಕೂರು ಜಿಲ್ಲೆಯು ಹಲವು ರಾಜಮನೆತನಗಳ ರಾಜಕೀಯ ಏಳುಬೀಳುಗಳಿಗೊಳಗಾಗಿ ವಿಭಿನ್ನ ಧಾರ್ಮಿಕ ಹಾಗೂ ಸಾಂಸ್ಕೃತಿಕ ಪ್ರಭಾವಕ್ಕೆ ಒಳಗಾಗಿದ್ದು, ಈ ವಿವರವನ್ನು ಸ್ಥಳೀಯವಾಗಿ ಲಭ್ಯವಿರುವ ಶಾಸನ ಹಾಗೂ ಸಾಹಿತ್ಯ ಕೃತಿಗಳ ಮೂಲಕ ಅರಿಯಬಹುದಾಗಿದೆ. ಕನ್ನಡ ಸಾಹಿತ್ಯ ದೃಷ್ಟಿಯಿಂದ ತುಮಕೂರು ಜಿಲ್ಲೆಯು ಸಂಪದ್ಭರಿತವಾಗಿದೆ. ಜಿಲ್ಲೆಯ ಸಾಹಿತ್ಯ ೧೨ನೇ ಶತಮಾನದಿಂದಲೇ ತಕ್ಕಮಟ್ಟಿಗೆ ಗೋಚರವಾಗುವುದಾದರೂ ಹದಿನೈದು, ಹದಿನಾರನೇ ಶತಮಾನಗಳಲ್ಲಿ ಸಾಹಿತ್ಯ ಸೃಷ್ಟಿಯ ಸುಗ್ಗಿಯೇ ಆಗಿದೆ. ವೀರಶೈವ, ಜೈನ, ವೈದಿಕ ಧರ್ಮಕ್ಕೆ ಸಂಬಂಧಪಟ್ಟ ಸಾಹಿತ್ಯ ನಿರ್ಮಾಣವಾಗಿದೆ. ಜಿಲ್ಲೆಯ ಸಾಹಿತ್ಯ ಕೃಷಿಯಲ್ಲಿ ನಡುಗನ್ನಡಕ್ಕೆ ಸಂಬಂಧಿಸಿದ ಕೃತಿಗಳ ರಚನೆಯೇ ಅಧಿಕವಾಗಿದೆ. ತುಮಕೂರು ಜಿಲ್ಲಾ ಪರಿಸರವು ಮಧ್ಯಕಾಲೀನ ಯುಗದಿಂದ ಕನ್ನಡ ಸಾಹಿತ್ಯ ವಾಹಿನಿಗೆ ತನ್ನದೇ ಆದ ಕೊಡುಗೆಯನ್ನು ನೀಡಿದೆ. ಹದಿನೈದು ಹದಿನಾರನೇ ಶತಮಾನಗಳಲ್ಲಿ ಇಲ್ಲಿಯ ಕವಿಗಳಿಂದ ಕನ್ನಡ ಸಾಹಿತ್ಯದ, ಅದರಲ್ಲೂ ವೀರಶೈವ ಸಾಹಿತ್ಯದ ಕೃಷಿ ಹುಲುಸಾಗಿ ನಡೆದಿದೆ. ಧಾರ್ಮಿಕ ದೃಷ್ಟಿಯಿಂದ ಹೇಳುವುದಾದರೆ ವೀರಶೈವ ಕವಿಗಳದ್ದೇ ಸಿಂಹಪಾಲು. ಅನಂತರದ ಸ್ಥಾನ ಜೈನಕವಿಗಳದ್ದು. ಉಳಿದ ಮತೀಯರು ಅಪರೂಪಕ್ಕೆ ಕಂಡುಬರುತ್ತಾರೆ. ಜಿಲ್ಲೆಯಲ್ಲಿ ಸಾಹಿತ್ಯ ನಿರ್ಮಾಣ, ವಚನ ಸಾಹಿತ್ಯ, ವಚನ ಸಂಕಲನ ಸಾಹಿತ್ಯ, ಚಂಪು, ಷಟ್ಪದಿ, ರಗಳೆ, ಕಂದ, ಸಾಂಗತ್ಯ ತ್ರಿಪದಿ ಹಾಗೂ ಹಾಡುಗಬ್ಬ (ಸ್ವರ ವಚನಗಳು) ಪ್ರಕಾರಗಳಲ್ಲಿ ನಡೆದಿದೆ. ಅಮರಗೊಂಡ ಮಲ್ಲಿಕಾರ್ಜುನ, ಗುಬ್ಬಿಯ ಮಲ್ಲಣ, ಗುಬ್ಬಿಯ ಮಲ್ಲಣಾರ್ಯ, ತೋಂಟದ ಸಿದ್ಧಲಿಂಗಯತಿ, ಗೂಳೂರು ಸಿದ್ಧವೀರಣ್ಣೊಡೆಯ, ದೊಡ್ಡಣಾಂಕ, ವಿರಕ್ತ ತೋಂಟದಾರ್ಯ, ಸುವ್ವಿಮಲ್ಲ, ಮಲ್ಲಿಕಾರ್ಜುನ ಕವಿ, ಗರಣಿಯ ಬಸವಲಿಂಗ, ಶಂಕರದೇವ, ಚಂದ್ರಸಾಗರ ವರ್ಣಿಯಂತಹ ಕವಿಗಳ ನೆಲೆವೀಡಾಗಿದೆ.

ಹರಿಹರನ ನಂತರ ರಗಳೆ ಪ್ರಕಾರದಲ್ಲಿ ಹೆಚ್ಚಿನ ಸಂಖ್ಯೆಯ ಕಾವ್ಯಗಳನ್ನು ರಚಿಸಿರುವ ಯಶಸ್ಸಿಗೆ ಜಿಲ್ಲೆಯ ಶಂಕರದೇವ ಪಾತ್ರನಾಗಿದ್ದಾನೆ. ಇಲ್ಲಿಯ ಬಹುತೇಕ ಕವಿಗಳು ಸಂಸ್ಕೃತ ಮತ್ತು ಕನ್ನಡ ಭಾಷೆಗಳ ಬಲ್ಲಿದರಾಗಿದ್ದು ಉಭಯ ಭಾಷೆಗಳಲ್ಲಿಯೂ ಕಾವ್ಯ ರಚಿಸಿದವರಾಗಿದ್ದಾರೆ. ವಚನ ಸಾಹಿತ್ಯ ಪರಂಪರೆಯ ದ್ವಿತೀಯ ಘಟ್ಟದ ಪರಂಪರೆಯ ಪ್ರವರ್ತಕರಾಗುವುದರ ಜೊತೆಗೆ, ಹನ್ನೆರಡನೇ ಶತಮಾನದ ವಚನಗಳನ್ನು ಸಂರಕ್ಷಣೆ, ಸಂಕಲನ, ವ್ಯಾಖ್ಯಾನಗಳ ಮೂಲಕ ರಕ್ಷಿಸಿಕೊಂಡು ಬರಲು ಇಲ್ಲಿಯ ವಚನಕಾರರು ಮತ್ತು ಸಂಕಲನಕಾರರು ಕಾರಣೀಭೂತರಾಗಿದ್ದಾರೆ. ತುಮಕೂರು ಪರಿಸರದ ಎಡೆಯೂರು, ಗುಬ್ಬಿ, ಗೂಳೂರು ಸುತ್ತಮುತ್ತಲ ಪ್ರಾಂತವು, ಕಲ್ಯಾಣದ ವಿಘಟನೆಯ ನಂತರ ಸಂಘಟನೆಯ

ಪ್ರಧಾನ ಕೇಂದ್ರವಾಗಿದ್ದು ವೀರಶೈವ ಧರ್ಮದ ಅಧ್ಯಯನ ಹಾಗೂ ಸಾಹಿತ್ಯ ಚಟುವಟಿಕೆಗಳಿಗೆ ಸೂಕ್ತ ಪರಿಸರವನ್ನು ಕಲ್ಪಿಸಿಕೊಟ್ಟಿದ್ದರ ಫಲವಾಗಿ ವೀರಶೈವ ಸಾಹಿತ್ಯ ಹುಲುಸಾಗಿ ಬೆಳೆದಿದೆ. ಜಿಲ್ಲೆಯಲ್ಲಿ ವೀರಶೈವ ತಾಂತ್ರಿಕ ಗ್ರಂಥಗಳ ಅಧ್ಯಯನವೂ ನಡೆದಿರುವುದು ಗಮನಿಸತಕ್ಕ ಸಂಗತಿಯಾಗಿದೆ. ಜಿಲ್ಲೆಯ ಪ್ರಾಚೀನ ಸಾಹಿತ್ಯವು ಕಾವ್ಯ, ಕಾವ್ಯಕ್ಕಿಂತ ಶಾಸ್ತ್ರದ ಕಡೆ, ಪ್ರತಿಭೆಗಿಂತ ಪಾಂಡಿತ್ಯದತ್ತ ಹರಿದಿರುವುದೇ ಹೆಚ್ಚಾಗಿ ಕಂಡುಬರುತ್ತದೆ. ಸ್ವರವಚನಗಳಂತಹ ಹಾಡುಗಬ್ಬ ಪ್ರಕಾರಗಳಲ್ಲಿ ಸಾಹಿತ್ಯ ಕೃಷಿ ಮಾಡಿರುವುದು ಕಂಡುಬರುತ್ತದೆ. ಶಂಕರದೇವ, ವಿರಕ್ತ ತೋಂಟದಾರ್ಯ, ಮಲ್ಲಿಕಾರ್ಜುನಕವಿ, ಸೋಮೇಕಟ್ಟೆ ಚೆನ್ನವೀರಸ್ವಾಮಿ, ಚಂದ್ರಸಾಗರವರ್ಣಿ ಗಳಂತಹ ಜಿಲ್ಲೆಯ ಕವಿಗಳು ಸಾಹಿತ್ಯ ಪ್ರಕಾರಗಳಲ್ಲಿ ಅತಿ ಹೆಚ್ಚು ಸಂಖ್ಯೆಯಲ್ಲಿ ಕಾವ್ಯ ರಚನೆಯನ್ನು ಮಾಡಿದ ಕೀರ್ತಿಗೆ ಭಾಜನರಾಗಿದ್ದಾರೆ. ಜಿಲ್ಲೆಯಲ್ಲಿ ಉಪಲಬ್ಧವಿರುವ ಕೃತಿಗಳಲ್ಲಿ ಮೊದಲನೆಯವು ವೀರಶೈವ ಕೃತಿಗಳೇ ಆಗಿವೆ. ಜಿಲ್ಲೆಯ ಕವಿಗಳು ಮಹಾಕವಿಗಳ ಮಟ್ಟಕ್ಕೇರದಿದ್ದರೂ ಕೆಲವು ಕವಿಗಳಾದರೂ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ತಮ್ಮದೇ ಆದ ಸ್ಥಾನವನ್ನು ಗಳಿಸಿಕೊಂಡಿರುವುದು ಕಂಡುಬರುತ್ತದೆ. ಜಿಲ್ಲೆಯ ಸಾಹಿತ್ಯ ಕನ್ನಡ ಸಾಹಿತ್ಯದ ಬೆಳವಣಿಗೆಯ ದೃಷ್ಟಿಯಿಂದ ಮಹತ್ತರ ಎಂದು ಹೇಳಬಹುದಾಗಿದೆ. ಕಾವ್ಯಸತ್ವದ ದೃಷ್ಟಿಯಿಂದ ಇಲ್ಲಿಯ ಬಹುತೇಕ ಕವಿಗಳು ಉತ್ತಮ ಕವಿಗಳು ಎಂದೆನಿಸಿದ್ದು ಕನ್ನಡ ಸಾಹಿತ್ಯ ವಾಹಿನಿಯ ಮುಂದುವರಿಕೆಯ ದೃಷ್ಟಿಯಿಂದ ಉಲ್ಲೇಖಾರ್ಹರಾಗಿದ್ದಾರೆ.

## ಪ್ರಾಚೀನ ಕವಿಗಳು

ಪ್ರಾಯಶಃ ಜಿಲ್ಲೆಯ ಪ್ರಥಮ ಕವಿ ಎಂದರೆ ೧೪೭೦ರಲ್ಲಿ ಬದುಕಿದ್ದ ಹಾಗೂ ವಿಜಯನಗರದ ವಿರೂಪಾಕ್ಷನ ಕಾಲದಲ್ಲಿದ್ದ ತೋಂಟದ ಸಿದ್ದೇಶ್ವರ. ಈತ ಕುಣಿಗಲ್ ಸಮೀಪದ ಎಡೆಯೂರಿನಲ್ಲಿ ಸಮಾಧಿಯನ್ನು ಹೊಂದಿದನು. ಇಂದಿಗೂ ಸಿದ್ಧಲಿಂಗೇಶ್ವರ ದೇವಾಲಯದಲ್ಲಿರುವ ೧೫೦೦ರ ಶಾಸನ; ಹಾಗೂ ವಿರೂಪಾಕ್ಷ ಪಂಡಿತನ ಚೆನ್ನಬಸವ ಪುರಾಣ (೧೫೮೪), ವಿರಕ್ತ ತೋಂಟದಾರ್ಯನ ಸಿದ್ದೇಶ್ವರ ಪುರಾಣ (೧೫೬೦) ಹಾಗೂ ಶಾಂತೇಶನ ತೋಂಟದ ಸಿದ್ದೇಶ್ವರ ಪುರಾಣ (೧೫೬೧) ಗ್ರಂಥಗಳಲ್ಲಿಯೂ ಈತನನ್ನು ಸ್ತುತಿಸಲಾಗಿದೆ. ಸಿದ್ದೇಶ್ವರನು ರಚಿಸಿರುವ 'ಷಟ್ಸ್ಥಲಜ್ಞಾನ ಸಾರಾಮೃತ' ಎಂಬ ವಚನ ಗ್ರಂಥದಲ್ಲಿ ೭೦೦ಕ್ಕೂ ಹೆಚ್ಚು ವಚನಗಳಿದ್ದು, ಪ್ರತೀ ವಚನವು 'ಮಹಾಲಿಂಗ ಗುರುಶಿವ ಸಿದ್ದೇಶ್ವರ ಪ್ರಭುವೆ' ಎಂಬ ಅಂಕಿತದಿಂದ ಮುಕ್ತಾಯಗೊಳ್ಳುತ್ತದೆ. ಇದರಲ್ಲಿ ಷಟ್ಸ್ಥಲ ಭಾಗವು ವಿಸ್ತಾರವಾಗಿ ಬಂದಿದೆ.

ಸುಮಾರು ೧೭೦೦ರಲ್ಲಿದ್ದ ತುರುವೇಕೆರೆಯ ನಾರಾಯಣನ ಮಗ ರಾಮ ಬ್ರಹ್ಮಾನಂದನು ಎಂಬಾತ 'ಭಾಷಾಕುಸುಮ ಮಂಜರಿ' ಎಂಬ ವೇದಾಂತ ಪ್ರಧಾನ ಟೀಕೆಯನ್ನು ಬರೆದಿದ್ದಾನೆ. ಆಧುನಿಕ ಕಾಲದವನಾದ ದಂಡಿನಶಿವಾರದ ಅಪ್ಪಾಭಟ್ಟನು 'ಮಾರ್ಕಂಡೇಯ ನಾಟಕ'ವನ್ನು ಬರೆದಿದ್ದಾನೆ. ಗುಬ್ಬಿ ತಾಲೂಕಿನ ಬಿದರೆಯಲ್ಲಿ ಉಪಾಧ್ಯಾಯನಾಗಿದ್ದ ಪಾಂಡುರಂಗಯ್ಯನು 'ಹರಿಹರನಾಮಾಮೃತ ಸಾರಸಂಗ್ರಹ' ಎಂಬ ಕೃತಿಯನ್ನು ರಚಿಸಿದ್ದಾನೆ. ೧೮ನೇ ಶತಮಾನದಲ್ಲಿದ್ದ ತುರುಗೆರೆಯ ಬೇಟೆರಾಯ ಎಂಬಾತ ಬೇಟೆರಾಯಸ್ವಾಮಿ ಆರಾಧಕನಾಗಿದ್ದು, 'ಮಾರ್ಕಂಡೇಯ ಚರಿತೆ' ಕೃತಿಯನ್ನು ರಚಿಸಿದ್ದಾನೆ. ಅಚಲಾನಂದ ವಿಠಲ ಅಂಕಿತದಲ್ಲಿ ಉಗಾಭೋಗಗಳನ್ನು ರಚಿಸಿದ ಅಚಲಾನಂದ ದಾಸರು ಮತ್ತು ಬೇಟೆರಾಯ ದೀಕ್ಷಿತರು ಸ್ವತಃ ಕವಿ ಹಾಗೂ ಸಂಗೀತಗಾರರಾಗಿದ್ದರೆಂದು ತಿಳಿದುಬರುತ್ತದೆ. ಬೆಳ್ಳಾವೆಯ ಸೋಮನಾಥಯ್ಯ (೧೮೫೪–೧೯೧೪) ೧೮೭೪ರಲ್ಲಿಯೇ ಹೆಣ್ಣುಮಕ್ಕಳ ಶಾಲೆಯೊಂದನ್ನು ಸ್ಥಾಪಿಸಿದ್ದು ಅದು ಅಂದಿನ ಮೈಸೂರು ಸಂಸ್ಥಾನದಲ್ಲಿ ಹೆಣ್ಣು ಮಕ್ಕಳಿಗಾಗಿ ಸ್ಥಾಪಿಸಿದ ಪ್ರಪ್ರಥಮ ಶಾಲೆಯಾಗಿತ್ತೆಂಬ ಅಭಿಪ್ರಾಯವಿದೆ. ಇವರು ಹಲವಾರು ಪುಸ್ತಕ ಹಾಗೂ ನಾಟಕಗಳನ್ನು ರಚಿಸಿದ್ದಾರೆ. ಗಯ್ಯಾಳಿಯನ್ನು ಸಾಧು ಮಾಡುವಿಕೆ (ಶೇಕ್ಸ್‌ಪಿಯರ್ ಕವಿಯ 'ಟೇಮಿಂಗ್ ಆಫ್ ದ ಶ್ರುವ್' ನಾಟಕವನ್ನವಲಂಬಿಸಿದ ವೀರೇಶಲಿಂಗಂ ಪಂತುಲು ಅವರ ತೆಲುಗು ಪುಸ್ತಕದ ಭಾಷಾಂತರಂ–೧೮೯೭) ಗೆದ್ದತ್ತೆ ಸೋತಳಿಯ, ಬೃಂದಾವನೋತ್ಸವ, ವಿವೇಕ ಚಂದ್ರಿಕೆ, ವಿಜ್ಞಾನ ದೀಪಿಕೆ, ಶ್ರೀರಂಗಪಟ್ಟಣವು ಹುಟ್ಟಿ ಬೆಳೆದ ಕಥೆ, ಶಂಕರ ಚರಿತ್ರಕಾಲ ವಿಚಾರ, ಶೃಂಗೇರಿ ಮಠದ ಚರಿತ್ರೆ, ಸತೀಮಣಿ ವಿಜಯ (ಶೇಕ್ಸ್‌ಪಿಯರ್ ಕೃತಿ 'ಆಲ್ ಇಸ್ ವೆಲ್ ದಟ್ ಎಂಡ್ಸ್ ವೆಲ್' ನಾಟಕವನ್ನು ಅವಲಂಬಿಸಿದ ವೀರೇಶಲಿಂಗಂ ಅವರ ತೆಲುಗು ಪುಸ್ತಕದ ಭಾಷಾಂತರ). ಸುಮಾರು ೧೯ನೇ ಶತಮಾನದಲ್ಲಿದ್ದ ತುರುವೇಕೆರೆಯ ಶ್ರೀನಿವಾಸ ಕವಿಯು ಹಿಂದೂ ದೇಶದ ಚರಿತ್ರೆ, ನಿರ್ವಚನ ಪದ್ಯ ಹಾಗೂ ಕಾವ್ಯ ಗ್ರಂಥಗಳನ್ನು ರಚಿಸಿದ್ದಾನೆ.

ಆಧುನಿಕ ಸಾಹಿತ್ಯ ಕ್ಷೇತ್ರದಲ್ಲಿ ಹೆಚ್ಚು ಪ್ರಸಿದ್ಧರಾದ ಬೆಳ್ಳಾವೆ ವೆಂಕಟನಾರಣಪ್ಪ (೧೮೭೧-೧೯೪೩) ಅವರು ಕನ್ನಡಕ್ಕಾಗಿ ಶ್ಲಾಘನೀಯ ಕಾರ್ಯಗಳನ್ನು ಮಾಡಿದ್ದರು. ಕನ್ನಡ ಸಾಹಿತ್ಯ ಪರಿಷತ್, ಕರ್ನಾಟಕ ಸಂಘ ಮುಂತಾದವು ಗಳೊಂದಿಗೆ ಸಂಪರ್ಕವಿದ್ದು ಕನ್ನಡ, ಇಂಗ್ಲಿಷ್ ಶಬ್ದಕೋಶದ ಸಂಪಾದಕರಾಗಿದ್ದರು. ವಿಜ್ಞಾನ ಎಂಬ ಪತ್ರಿಕೆಯನ್ನು ತರುತ್ತಿದ್ದರು. ಜಮಖಂಡಿಯಲ್ಲಿ ೧೯೩೭ರಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ೨೩ನೇ ಅಧಿವೇಶನದ ಅಧ್ಯಕ್ಷರಾಗಿದ್ದರು. ಗುಣಸಾಗರ, ಜೀವವಿಜ್ಞಾನ ಗ್ರಂಥಗಳನ್ನು ರಚಿಸಿದ್ದಲ್ಲದೆ ಪಂಪಭಾರತ, ಪಂಪರಾಮಾಯಣ ಇತ್ಯಾದಿ ಕೃತಿಗಳನ್ನು ಪರಿಷ್ಕರಿಸಿ ಪ್ರಕಟಿಸಿದ್ದಾರೆ.

ಬೆಳ್ಳಾವೆಯ ಮತ್ತೊಬ್ಬ ವಿದ್ವಾಂಸರೆಂದರೆ ೧೮೮೨ರಲ್ಲಿ ಜನಿಸಿದ ನರಹರಿಶಾಸ್ತ್ರಿ. ಚಲನಚಿತ್ರ ಕಲಾವಿದರೂ ಆಗಿದ್ದ ಅವರು ಅಷ್ಟಾವಧಾನವನ್ನು ನೆರವೇರಿಸುತ್ತಿದ್ದರು. ಕೋಲಾರದ ನಾಗರಿಕರಿಂದ 'ಕರ್ನಾಟಕ ಕವಿ ಕೇಸರಿ' ಎಂಬ ಬಿರುದನ್ನು ಪಡೆದಿದ್ದರು. ಗುಬ್ಬಿ ನಾಟಕ ಮಂಡಳಿಯ ಅನೇಕ ನಾಟಕಗಳಿಗೆ ಸಂಭಾಷಣೆ ಬರೆದಿದ್ದರು. ಅನಂತರ ಚಲನಚಿತ್ರಗಳಿಗೂ ಕಥೆ ಹಾಡುಗಳನ್ನು ರಚಿಸಿ ಕೊಟ್ಟಿದ್ದರು. ೬೦ಕ್ಕೂ ಹೆಚ್ಚು ನಾಟಕ, ಕಥೆ, ಕವನಗಳನ್ನು ರಚಿಸಿದ್ದರು. ಮುಖ್ಯವಾಗಿ ಆಕಾಶ ಗಮನ ಸಾಹಸ ಕಲ್ಯಾಣ, ಗೀತಮಂಜರಿ, ಜಲಂಧರ, ಪ್ರಭಾವತಿ, ಪಾಪಿ ಯಾರು, ಮದನ ಮೋಹನ ಚರಿತೆ, ರಾಜಶೇಖರ ವಿಳಾಸ, ಶ್ರೀ ಕೃಷ್ಣ ಪಾರಿಜಾತ, ಸತ್ಯ ಹರಿಶ್ಚಂದ್ರ, ಸಾಧ್ವಿ ಅನುಸೂಯ ಮುಂತಾದ ಇವರ ೫೦ಕ್ಕೂ ಹೆಚ್ಚು ಗ್ರಂಥಗಳು ಪ್ರಕಟವಾಗಿವೆ. ಚತುರ ನೀತಿ ಶತಕ, ರೇಣುಕಾ ವಿಜಯ, ಉಷಾ ಸ್ವಯಂವರ, ಸತ್ಯ ನಾರಾಯಣ ಆಂಗ್ಲನಾಟಕ ಕಥಾಮಂಜರಿ, ಸಂಸ್ಕೃತ ನಾಟಕ ಕಥಾ ಮಂಜರಿ ಇತ್ಯಾದಿ ೧೫ಕ್ಕೂ ಹೆಚ್ಚು ಗ್ರಂಥಗಳು ಅಪ್ರಕಟಿತ. ತುಮಕೂರು ಸಿದ್ದಪ್ಪ ಚೆನ್ನಮಲ್ಲಣ್ಣ ಅವರು ೧೮೮೫ರಲ್ಲಿ ಶಿವಕಥಾಸಾರ ಎಂಬ ಗ್ರಂಥವನ್ನು ಸಂಪಾದಿಸಿದ್ದಾರೆ. ಬಿ.ಗೋಪಾಲಯ್ಯ ಅವರು ಔರಂಗಜೇಬ್ ನಾಟಕವನ್ನು ರಚಿಸಿದ್ದಾರೆ. ಗುಬ್ಬಿಯ ಮುರುಘಾರಾಧ್ಯ ಅವರು ಶೃಂಗಾರ ಚಾತುರ್ಯೋಲ್ಲಾಸಿನಿ ಗ್ರಂಥವನ್ನು ೧೮೯೬ರಲ್ಲಿ ರಚಿಸಿದ್ದಾರೆ. ಇದೇ ಬೆಳ್ಳಾವೆಯ ಹನುಮಾನ್ ವೆಂಕಟರಾಯ ಕವಿ ಅವರು ೧೮೮೦ರಲ್ಲಿ ಜನಿಸಿದ್ದು ಹಳೆಗನ್ನಡ ಗ್ರಂಥಗಳ ಪರಿಶೋಧನೆಯಲ್ಲಿ ಎಂ.ಎ.ರಾಮಾನುಜಯ್ಯಂಗಾರ್ ಅವರೊಂದಿಗೆ ಕಾರ್ಯನಿರ್ವಹಿಸಿದ್ದರು. ೧೯೦೭ರಲ್ಲಿ ಧಾರವಾಡದಲ್ಲಿ ನಡೆದ ಗ್ರಂಥಕರ್ತರ ಸಮ್ಮೇಳನದಲ್ಲಿ ಪ್ರತಿನಿಧಿಗಳಾಗಿದ್ದರು. ಇವರು ಕುರುಕುಲ ಕಲ್ಯಾಣ, ಚಂದ್ರಹಾಸಾಭ್ಯುದಯಂ, ಜಾನಕೀ ಪರಿಣಯ ನಾಟಕಂ, ಭಾವನಾತ್ರಯಂ ಇತ್ಯಾದಿ ಗ್ರಂಥಗಳನ್ನು ರಚಿಸಿದ್ದಾರೆ. ಆರ್ಯಮತ ತತ್ವಂ, ಉತ್ತರರಾಮ ಚರಿತಂ, ತಿರುಳ್ಗನ್ನಡದ ಪುರುಳ್, ಪೂರ್ವರಾಮ ಚರಿತಂ, ಬಾಲಕೃಷ್ಣ ಚರಿತಂ, ಮುಕುಂದಾನಂದಂ, ವಾಸವದತ್ತ ವೃತ್ತಂ, ಸಂತಾಪ ಶತಕಂ ಮುಂತಾದವು ಇನ್ನೂ ಅಪ್ರಕಟಿತ. ವೆಂಕಟರಾಯರ ಹಿರಿಯ ಸಹೋದರ ಸಂಜೀವರಾಯ ಕವಿ (೧೮೮೬-೧೯೪೩) ವೆಂಕಟೇಶ ವಿಜಯ ಎಂಬ ಗ್ರಂಥವನ್ನು ಬರೆದಿದ್ದಾರೆ.

**ಅಮರಗೊಂಡ ಮಲ್ಲಿಕಾರ್ಜುನ ತಂದೆ:** ಈತನು ವೀರಶೈವ ಮಹಿಮಾನ್ವಿತ ವ್ಯಕ್ತಿ. ಜಿಲ್ಲೆಯ ಪ್ರಥಮ ವಚನಕಾರ ಹಾಗೂ ಗುಬ್ಬಿ ಕವಿಗಳ ಪರಂಪರೆಯ ಮೂಲಕರ್ತೃ. ಈತನ ಕಾಲ ಸುಮಾರು ೧೨ನೇ ಶತಮಾನದ ಉತ್ತರಾರ್ಧ. ಈತನ ಹೆಸರು ಗಣಸಹಸ್ರ ನಾಮಾವಳಿಯಲ್ಲಿದೆ. ಈತನ ಬಗ್ಗೆ ನಿಖರವಾದ ಸಾಹಿತ್ಯ ಉಪಲಬ್ಧವಿಲ್ಲ. ಮಾಗುಡದ ಮಲ್ಲಿಕಾರ್ಜುನದೇವಾ ಅಂಕಿತದಲ್ಲಿ ಅನೇಕ ವಚನಗಳನ್ನು ರಚಿಸಿದ್ದು ಸದ್ಯಕ್ಕೆ ಎರಡು ವಚನಗಳು ಉಪಲಬ್ಧವಿದೆ. (ಎಂ. ಎಂ.ಕಲಬುರ್ಗಿಯವರು ಸಂಕೀರ್ಣ ವಚನ ಸಂಪುಟ ೧ರ ಪುಟ ೧೦೫-೧೦೬ರಲ್ಲಿ (೧೯೯೩) ಪ್ರಕಟಿಸಿದ್ದಾರೆ).

**ಪುರದ ನಾಗಣ್ಣ:** ನಿಟ್ಟೂರು ಸನಿಹದ ಪುರದಲ್ಲಿ ಆಗಿಹೋದ ವಚನಕಾರ. ಕವಿಚರಿತೆಕಾರರ ಪ್ರಕಾರ ಈತನ ಕಾಲ ಕ್ರಿ.ಶ.೧೧೬೦. ಗಣಸಹಸ್ರನಾಮಾವಳಿಯಲ್ಲಿಯ ಈತನ ಉಲ್ಲೇಖ ಬಿಟ್ಟರೆ ಉಳಿದೆಡೆ ವೈಯಕ್ತಿಕ ವಿವರಗಳಾವುವು ಕಂಡುಬರುವುದಿಲ್ಲ. 'ಅಮರಗೊಂಡದ ಮಲ್ಲಿಕಾರ್ಜುನ ಎಂಬ ಅಂಕಿತದಲ್ಲಿ ವಚನಗಳನ್ನು ರಚಿಸಿದ್ದು ಒಂಬತ್ತು ವಚನಗಳು ಉಪಲಬ್ಧವಿದೆ. ಒಂದು ವಚನದಲ್ಲಿ ತನಗಿಂತ ಹಿಂದಿನ ನೂತನ ವಚನಕಾರರನ್ನು ಸ್ತುತಿಸಿದ್ದಾನೆ. ಪುರದ ನಾಗಣ್ಣನ 'ನಾನಾ ಯೋನಿಗಳಲ್ಲಿ ಬಂದು ಫಲವೇನಯ್ಯ? ಪುಣ್ಯ-ಪಾಪವೆಂದರಿಯದನ್ನಕ್ಕ ಎಂದು ಪ್ರಾರಂಭವಾಗುವ ವಚನವು, ವಚನ ಸಾಹಿತ್ಯದ ಹದಿನಾರು ಪ್ರಾಚೀನ ಆಕರಕೋಶಗಳಲ್ಲಿ ಉಲ್ಲೇಖಿಸಲ್ಪಟ್ಟಿದೆ.

**ಗುಬ್ಬಿಯ ಮಲ್ಲಣ:** ಈತನ ಕಾಲ ಕ್ರಿ.ಶ.೧೪೫೦. ಅಮರಗುಂಡ ಮಲ್ಲಿಕಾರ್ಜುನನ ವಂಶೋದ್ಭವನಾದ ಈತ ಗೋಸಲ ಚನ್ನಬಸವೇಶ್ವರರ ಸಮಕಾಲೀನ. ಈತನು ೧. ಗಣಭಾಷ್ಯರತ್ನಮಾಲೆ, ೨. ವಾತೂಲಾಗಮ ತಂತ್ರ ವ್ಯಾಖ್ಯಾನ, ೩ ವರರುಚಿಯ ಏಕಾಕ್ಷರಿ ನಿಘಂಟು ಟೀಕೆ, ೪. ಕಾಲಜ್ಞಾನ ತಂತ್ರಟೀಕೆ, ೫. ಯೋಗ ಷಟ್ಸ್ಥಲ ಟೀಕೆ (ಚಿತ್ರದುರ್ಗದ

ಬೃಹನ್ಮಠದ ಹಸ್ತಪ್ರತಿ ಸಂಗ್ರಹದಲ್ಲಿದೆ). ೬. ದಿವ್ಯಾಗಮಸಾರ ಪಂಚಮ ಪಟಲ ಟೀಕೆ ಎಂಬ ಕೃತಿಗಳನ್ನು ರಚಿಸಿದ್ದಾನೆ. ಕೊನೆಯ ಮೂರು ಅಪ್ರಕಟಿತ ಕೃತಿಗಳಾಗಿವೆ. ಗಣಭಾಷ್ಯ ರತ್ನಮಾಲೆಯಲ್ಲಿ ವೀರಶೈವರು ಆಚರಿಸಬೇಕಾದ ಆಚರಣೆಗಳನ್ನು ಅನುಭವಾದಿ ಸದ್ಭಕ್ತ ಮಹಿಮಾಂತವಾದ ನೂರೊಂದು ಸ್ಥಳಗಳಲ್ಲಿ ಸಂಗ್ರಹಿಸಿ, ವೇದಾಗಮ ಪುರಾಣೇತಿಹಾಸಾದಿ ಗ್ರಂಥಗಳಿಂದ ಪ್ರಮಾಣಗಳನ್ನಾಧರಿಸಿದ, ಪುರಾತನರ ವೀರಶೈವ ಸಿದ್ಧಾಂತ ಮತ್ತು ಆಚಾರ ಧರ್ಮಗಳ ವಿವರಣೆ ಕಂಡು ಬರುತ್ತದೆ. ಒಟ್ಟಾರೆ ಗಣಭಾಷ್ಯ ರತ್ನಮಾಲೆಯು ವೀರಶೈವ ವಚನ ಸಂಕಲನ ಕೃತಿಗಳಲ್ಲಿ ಒಂದೆನಿಸಿದೆ. ವಾತೂಲಾಗಮ ತಂತ್ರ ಟೀಕೆ ಅಥವಾ ವ್ಯಾಖ್ಯಾನವು, ವೀರಶೈವ ಧರ್ಮದ ಪರವಾಗಿ ವಾತೂಲಾಗಮಕ್ಕೆ ಬರೆದ ಕನ್ನಡ ವ್ಯಾಖ್ಯಾನವಾಗಿದೆ. ಈ ಕೃತಿಗಳ ಜೊತೆಗೆ ತೆಲುಗಿನಲ್ಲಿ 'ರಾಮಸ್ತವ ರಾಜ' ಎಂಬ ಗ್ರಂಥವನ್ನು ರಚಿಸಿದ್ದಾನೆಂದು ಛಂದೋಂಬುಧಿಯ ಪೀಠಿಕೆಯಲ್ಲಿ ಆರ್.ಎಫ್.ಕಿಟ್ಟೆಲ್ ಹೇಳಿದ್ದಾರೆ.

**ಗೋಸಲ ಚನ್ನಬಸವೇಶ್ವರರು:** ಈತ ತೋಂಟದ ಸಿದ್ಧಲಿಂಗರ ಗುರು. ಇವನ ಕಾಲ ಇತ್ತೀಚಿನ ಸಂಶೋಧನೆಯ ಪ್ರಕಾರ ೧೪೫೦–೧೫೨೫. ಕೃತಿ ರಚನೆಯ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿದ್ದರೂ, ೧.ಮಹಾಜ್ಞಾನರತ್ನಮಾಲೆ ೨.ಗಣೇಶ್ವರ ಶತಕ ೩ ಗುರುಲಿಂಗಜಂಗಮಾಷ್ಟಕ ಹಾಗೂ ಕೆಲವು ಸ್ವರವಚನಗಳಲ್ಲದೇ, ಶ್ರೀ ಕ್ಷೇತ್ರಜ್ಞ ಚನ್ನಮಲ್ಲಿಕಾರ್ಜುನನೆ ಸುಮನೋಹರವಾದ ಕೃತಿಯನ್ನು ರಚಿಸಿದ್ದಾನೆಂದು ಅಭಿಪ್ರಾಯವಿದೆ. ಆದರೆ ಗುಬ್ಬಿ ಶ್ರೀ ಚನ್ನಬಸವೇಶ್ವರರ ಅಂಕಿತದಲ್ಲಿ ರಚಿಸಿರುವ ಸ್ವರವಚನಗಳು ಲಭ್ಯವಿದೆ.

**ಸಾಸಲ ಚಿಕ್ಕಣಾರಾಧ್ಯ:** ಅಮರಗೊಂಡದ ಮಲ್ಲಿಕಾರ್ಜುನ ವಂಶೋದ್ಭವನಾದ ಶಾಂತಲಿಂಗನ ಮಗನು. ಈತನ ಕಾಲವನ್ನು ಕವಿಚರಿತೆಕಾರರು ಕ್ರಿ.ಶ.೧೪೫೦ ಎಂದು ಗುರುತಿಸಿದ್ದಾರೆ. 'ಪಂಚ ಬ್ರಹ್ಮೋದಯ ಭಾಷ್ಯ ಎಂಬ ಗದ್ಯಕೃತಿಯನ್ನು ರಚಿಸಿದ್ದಾನೆ. ಇದು ಒಂಬತ್ತು ಅಧ್ಯಾಯಗಳನ್ನು ಒಳಗೊಂಡಿದ್ದು ಅಥರ್ವಣ ವೇದಮಂತ್ರದ ವ್ಯಾಖ್ಯೆಯಾಗಿದೆ. ಕೃತಿಯ ಕೊನೆಯಲ್ಲಿ ಪಂಚಾಚಾರ್ಯರು, ಅವರ ಸಂತತಿಯವರು, ತತ್ಪೃಥಗ್ರಂಥಗಳೇ ಮುಂತಾದ ವಿಷಯಗಳು ಉಕ್ತವಾಗಿವೆ.

**ಚಿನ್ನವೀರ:** ತುಮಕೂರು ಪಟ್ಟಣದ ಮಹಾಮಠ ಕಂಥಾಚಾರ್ಯ ನಂಬ್ಯಣ್ಣನ ಕರಕಮಲ ಸಂಜಾತನಾದ ಇವನು ಗೂಳೂರು ಸಮೀಪದ ಕುಂಟಿಕಾಪುರ (ಕೊಂಡಾಪುರ) ನವನಾಗಿದ್ದಾನೆ. ಈತನ ಕಾಲ ಕ್ರಿ.ಶ.೧೭೦೦. ಈತನು 'ಕಾಶಕೃತ್ಯ ಶಬ್ದಕಲಧಾತು ಪಾಠಕ್ಕೆ ಕನ್ನಡ ಟೀಕೆಯನ್ನು ಬರೆದಿದ್ದಾನೆ. ಜೊತೆಗೆ 'ಸಾರಸ್ವತ ವ್ಯಾಕರಣಪುರುಷಸೂಕ್ತ, ನಮಕ–ಚಮಕಗಳಿಗೆ ಕನ್ನಡ ಟೀಕೆ, ಜಂಗಮ ತಾರಾವಳಿ ಮತ್ತು ವೀರಶೈವಾಗಮದ ಕೆಲವು ಭಾಗಗಳಿಗೆ ಟೀಕೆ ಬರೆದಿದ್ದಾನೆ.

**ಗುಬ್ಬಿಯ ಮಲ್ಲಣಾರ್ಯ:** ಗುಬ್ಬಿಯ ಮಲ್ಲಣ್ಣನ ಮೊಮ್ಮಗನೀತ. ತಂದೆ ಗುರುಭಕ್ತ, ತಾಯಿ ಸಪ್ಪೆಯಮ್ಮ. ಈತನ ಗುರು ಶಾಂತನಂಜೇಶ. ಬಸವ ಪುರಾಣದಲ್ಲಿ ನಿಷ್ಣಾತನಾಗಿದ್ದರಿಂದ 'ಬಸವ ಪುರಾಣದ ಮಲ್ಲಣಾರ್ಯ ಎಂಬ ಹೆಸರಿನಿಂದಲೂ ಕರೆಯಲ್ಪಟ್ಟಿದ್ದಾನೆ. ಈತನ ಕಾಲ ಕ್ರಿ.ಶ.೧೫೧೩. ಪ್ರಕಾಂಡ ಪಂಡಿತನೂ ಬಹುಭಾಷಾ ಸಂಪನ್ನನೂ ಆಗಿದ್ದನು. ಈತನು ೧.ಭಾವಚಿಂತಾರತ್ನ ೨ ವೀರಶೈವಾಮೃತ ಮಹಾಪುರಾಣ ೩.ಪುರಾತನ ರಗಳೆ ಕೃತಿಗಳನ್ನು ರಚಿಸಿದ್ದುದಾಗಿ ತಿಳಿದುಬರುತ್ತದೆ. ಭಾವಚಿಂತಾರತ್ನವು ತಿರುಜ್ಞಾನ ಸಂಬಧೀಶನು ತಮಿಳು ಭಾಷೆಯಲ್ಲಿ ಬರೆದಿದ್ದ ಸತ್ಯೇಂದ್ರ ಚೋಳನ ಕಥೆಯನ್ನು ಕುರಿತು ಕನ್ನಡದಲ್ಲಿ ವಾರ್ಧಕ ಷಟ್ಪದಿಯಲ್ಲಿ ರಚಿತವಾಗಿದ್ದು ಒಂಬತ್ತು ಸಂಧಿ, ೩೭೧ ಪದ್ಯಗಳನ್ನು ಒಳಗೊಂಡಿದೆ. ಈ ಕೃತಿಯಲ್ಲಿ ಪಂಚಾಕ್ಷರೀ ಮಂತ್ರ ಮಹಿಮೆ. ಚೋಳರಾಜನ ನ್ಯಾಯನಿಷ್ಠೆ ಮಹತ್ವದ್ದಾಗಿವೆ. ಶಿವಪೂಜೆಯಾರ್ಯನ ಅಪ್ಪಣೆಯ ಮೇರೆಗೆ ಈ ಕೃತಿಯನ್ನು ರಚಿಸಿದ್ದಾನೆ. ವೀರಶೈವಾಮೃತ ಮಹಾಪುರಾಣವು ೭೧೦೦ ವಾರ್ಧಕಷಟ್ಪದಿಗಳಿಂದ ಕೂಡಿದ್ದು ವೀರಶೈವಧರ್ಮದ ವಿಶ್ವಕೋಶವೆಂದೆನಿಸಿದೆ. ಈ ಕೃತಿಯು ಶಿವನ ಪಂಚವಿಂಶತಿ ಲೀಲೆಗಳು, ವೇದಪುರಾಣ ಶಾಸ್ತ್ರಾಗಮಗಳ ವಚನಾರ್ಥ, ಪುರಾತನ ನೂತನ ಭಕ್ತರ ಚರಿತ್ರೆ, ಶೈವ–ವೀರಶೈವ ತತ್ವವಿಚಾರ, ಧರ್ಮಾಧರ್ಮ ಸ್ವರೂಪ, ಬಸವಪುರಾಣ, ಶಿವತತ್ತ್ವ ಚಿಂತಾಮಣಿ ಮೊದಲಾದ ಪುರಾಣ ಕಾವ್ಯಗಳ ಸಂಕಲನವಾಗಿದೆ. ಸಾಹಿತ್ಯ, ಚರಿತ್ರೆ, ಪುರಾಣ, ಸಿದ್ಧಾಂತ, ವೇದಾಂತ ಮುಂತಾದ ಶಾಸ್ತ್ರ ವಿಚಾರಗಳನ್ನು ಕಾವ್ಯಮಯವಾಗಿ ವಿವರಿಸಿರುವುದನ್ನು ಕಾಣಬಹುದು. ಈತನ 'ಪುರಾತನರ ರಗಳೆ' ಸದ್ಯಕ್ಕೆ ಉಪಲಬ್ಧವಿಲ್ಲ.

**ಚೇರಮಾಂಕ:** ಈತನು ಗುಬ್ಬಿಯ ಮಲ್ಲಣಾರ್ಯನನ್ನು ಸ್ತುತಿಸಿರುವುದರಿಂದ ಇವನು ಈ ಪ್ರದೇಶದವನಿದ್ದು, ಆತನ ಶಿಷ್ಯನಾಗಿರಬಹುದು. ಇವನ ಕಾಲ ಕ್ರಿ.ಶ.೧೫೨೬. ಚೇರಮಾಂಕ ಕಾವ್ಯವನ್ನು ಇವನು ಬರೆದಿದ್ದಾನೆ. ಈ ಕಾವ್ಯವು

ತಮಿಳುನಾಡಿನ ಅರವತ್ತಮೂರು ಪುರಾತನರಲ್ಲಿ ಒಬ್ಬನಾದ ಚೇರಮಾಂಕನನ್ನು ಕುರಿತದ್ದಾಗಿದೆ. ಹರಿಹರನ ತರುವಾಯ ಚೇರಮನನ್ನು ಕುರಿತು ಷಟ್ಪದಿಯಲ್ಲಿ ಕಾವ್ಯ ರಚಿಸಿರುವವರಲ್ಲಿ ಈತ ಎರಡನೆಯವನು.

**ತೋಂಟದ ಸಿದ್ಧಲಿಂಗಯತಿ:** ಇತ್ತೀಚಿನ ಸಂಶೋಧನೆಯ ಪ್ರಕಾರ ಇವರ ಕಾಲ ಕ್ರಿ.ಶ.೧೫೬೧. ತೋಂಟದ ಸಿದ್ಧಲಿಂಗರಿಗೆ ವಚನ ಪರಂಪರೆಯ ಇತಿಹಾಸದಲ್ಲಿ ಗಮನಾರ್ಹ ಸ್ಥಾನವಿದೆ. ವಚನ ಪರಂಪರೆಯಲ್ಲಿ ಇವರ ಸ್ಥಾನ ಎರಡು ರೀತಿಯಲ್ಲಿ ಮಹತ್ವದ್ದು. ೧.ವಚನಸೃಷ್ಟಿ ೨. ವಚನ ಸಂರಕ್ಷಣೆ ಮತ್ತು ವ್ಯಾಖ್ಯಾನ. ವಚನ ಸಾಹಿತ್ಯದ ದ್ವಿತೀಯ ಹಂತದ ನೇತಾರರಾಗಿ, ಸಂಕಲನ, ವ್ಯಾಖ್ಯಾನಗಳ ಕೇಂದ್ರವ್ಯಕ್ತಿಯಾಗಿ ತಮ್ಮ ಶಿಷ್ಯ ಪರಂಪರೆಯ ಮೂಲಕ ಆ ಕಾರ್ಯವನ್ನುಗಳನ್ನು ನಡೆಸಿದರು. ಇವರ ಕೃತಿ 'ಷಟ್ಸ್ಥಲಜ್ಞಾನ ಸಾರಾಮೃತ. ಇದರಲ್ಲಿ ೭೦೧ ವಚನಗಳೂ, ಏಳು ವೃತ್ತಗಳೂ ಇದ್ದು ಪ್ರತೀ ವಚನವೂ 'ಮಹಾಲಿಂಗ ಗುರು ಶಿವಸಿದ್ದೇಶ್ವರ ಪ್ರಭುವೇ ಎಂಬ ಅಂಕಿತವನ್ನು ಒಳಗೊಂಡಿದೆ. ಈ ಕೃತಿಯಲ್ಲಿ ಷಟ್ಸ್ಥಲದ ವಿಚಾರವು ಸವಿಸ್ತಾರವಾಗಿ ನಿರೂಪಿತವಾಗಿದೆ. ಕೃತಿಯಲ್ಲಿ ೧೫೨ ಬೆಡಗಿನ ವಚನಗಳಿದ್ದು ಸೋಮಶೇಖರ ಶಿವಯೋಗಿಯು ಟೀಕೆಯನ್ನೂ ಬರೆದಿದ್ದಾನೆ.

**ಶಾಂತೇಶ:** ಈತನು ಗುಬ್ಬಿಯ ಮಲ್ಲಣಾರ್ಯನ ಮಗ. ಕಾಲ ಕ್ರಿ.ಶ.೧೫೬೧. ಇವನು ಎಡೆಯೂರು ಸಿದ್ಧಲಿಂಗೇಶ್ವರರ ಜೀವನ ಚರಿತ್ರೆಯನ್ನು ಭಾಮಿನಿ ಷಟ್ಪದಿಯಲ್ಲಿ 'ಸಿದ್ದೇಶ್ವರ ಪುರಾಣ ಎಂಬ ಹೆಸರಿನಲ್ಲಿ ರಚಿಸಿದ್ದಾನೆ. ಈ ಕೃತಿಯು ಏಳು ಸಂಧಿ, ೧೦೦೦ ಪದ್ಯಗಳನ್ನೊಳಗೊಂಡಿದ್ದು, ಸಿದ್ಧಲಿಂಗರ ಚರಿತ್ರೆಗಿಂತ ಅವರು ಸಾಧಿಸಿಕೊಂಡಿದ್ದ ಅಂತರಂಗದ ಸಿದ್ಧಿ, ಶಿವಯೋಗದ ಮಹಿಮೆಗಳ ವಿವರಗಳೇ ಹೆಚ್ಚಾಗಿ ನಿರೂಪಿತವಾಗಿವೆ.

**ದೊಡ್ಡಣಾಂಕ:** ಈತನನ್ನು ಜಿಲ್ಲೆಯ ಪ್ರಥಮ ಜೈನಕವಿ ಎಂದು ನಂಬಲಾಗಿದೆ. ಇವನು ನಿಟ್ಟೂರ ಆದಿಸೆಟ್ಟಿಯ ಮೊಮ್ಮಗ ಹಾಗೂ ಗುಮ್ಮಿಸೆಟ್ಟಿಯ ಮಗನಾಗಿದ್ದು, ಕವಿಚರಿತೆಕಾರರ ಪ್ರಕಾರ ಈತನ ಕಾಲ ಕ್ರಿ.ಶ.೧೫೭೮. ಈತನು ಭಾಮಿನಿ ಷಟ್ಪದಿಯಲ್ಲಿ ಎಂಟನೇ ತೀರ್ಥಂಕರನಾದ ಚಂದ್ರಪ್ರಭನ ಚರಿತೆಯನ್ನು ಬರೆದಿದ್ದಾನೆ.

**ಗೂಳೂರ ಸಿದ್ಧವೀರಣ್ಣೊಡೆಯ:** ಗುಮ್ಮಳಾಪುರದ ಸಿದ್ಧಲಿಂಗದೇವರ ತರುವಾಯ ಇವನು ನಿರಂಜನ ಪೀಠದ ಅಧಿಪತಿಯಾಗಿದ್ದು (ಕ್ರಿ.ಶ.೧೫೯೦-೧೬೭೦) ನಾಲ್ಕನೇ ಶೂನ್ಯ ಸಂಪಾದನೆಯನ್ನು ಸಂಪಾದಿಸಿದ್ದಾರೆ. ಶಿವಗಣ ಪ್ರಸಾದಿ ಮಹದೇವಯ್ಯಗಳು ಮುಕ್ತಕಗಳಾಗಿ ಚದುರಿ ಹೋಗಿದ್ದ ಶಿವಾದ್ವೈತ ವಚನಗಳನ್ನು ಸಂಗ್ರಹಿಸಿದ್ದು, ಅದನ್ನು ಗುಮ್ಮಳಾಪುರದ ಸಿದ್ಧಲಿಂಗಯತಿಗಳು ಪರಿಷ್ಕರಿಸಿದ್ದು, ಅದನ್ನೆ ತಾನೂ ಅನುಸರಿಸಿರುವುದಾಗಿ ಕೃತಿಯಲ್ಲಿ ಹೇಳಿಕೊಂಡಿದ್ದಾರೆ. ಗೂಳೂರ ಸಿದ್ಧವೀರಣ್ಣೊಡೆಯನ ಶೂನ್ಯ ಸಂಪಾದನೆಯ ಹಸ್ತಪ್ರತಿಯನ್ನು ಕ್ರಿ.ಶ.೧೬೧೬ರಲ್ಲಿ ವಿರಕ್ತ ತೋಂಟದಾರ್ಯರು ಪ್ರತಿ ಮಾಡಿದ್ದಾರೆ.

**ಶಂಕರದೇವರು:** ಈತನ ಕಾಲದ ಬಗ್ಗೆ ವಿವಿಧ ಅಭಿಪ್ರಾಯಗಳಿವೆ. ಎಸ್.ಶಿವಣ್ಣನವರ ಪ್ರಕಾರ ಕ್ರಿ.ಶ.೧೫೮೦.ಈ ಕವಿಯು ತನ್ನ ಸ್ವರವಚನವೊಂದರಲ್ಲಿ ತುಮಕೂರು ಪರಿಸರದ ಸ್ಥಳಗಳನ್ನು ಉಲ್ಲೇಖಿಸಿರುವುದರಿಂದ ಹಾಗೂ ಅಜ್ಞಾತ ಟೀಕಾಕಾರನೊಬ್ಬ ಈ ಕವಿಯ ಷಡಕ್ಷರ ರಗಳೆಯ ೯ನೆಯ ಪಂಕ್ತಿಯನ್ನು ವ್ಯಾಖ್ಯಾನಿಸುತ್ತಾ, ಶಂಕರದೇವರನ್ನು ಕುರಿತು 'ದೇವರಾಯಪಟ್ಟಣದೊಳಗಿರ್ದ ಶಂಕರದೇವರೆಂಬ ಶಿವಶರಣರು' ಎಂದು ಉಲ್ಲೇಖಿಸಿರುವುದರಿಂದ, ಇವನನ್ನು ತುಮಕೂರು ಜಿಲ್ಲೆಯ ದೇವರಾಯಪಟ್ಟಣದವನೆಂದು ಪರಿಗಣಿಸಲಾಗಿದೆ. ಶಂಕರದೇವನು ಶಿವಶರಣರು ಹಾಗೂ ಅಷ್ಟಾವರಣಗಳಿಗೆ ಸಂಬಂಧಿಸಿದಂತೆ ೨೪ ರಗಳೆ ಕಾವ್ಯಗಳನ್ನು ರಚಿಸಿದ್ದಾನೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ರಗಳೆ ಪ್ರಕಾರದಲ್ಲಿ ಹರಿಹರನನ್ನು ಬಿಟ್ಟರೆ ಹೆಚ್ಚಿನ ಕೃತಿಗಳನ್ನು ರಚಿಸಿದ ಯಶಸ್ಸು ಇವನಿಗೇ ಸಲ್ಲುತ್ತದೆ. ರಗಳೆ, ವೃತ್ತ, ಕಂದ, ದಂಡಕ, ಷಟ್ಪದಿ ಮುಂತಾದ ಪ್ರಕಾರಗಳಲ್ಲಿ ಕಾವ್ಯ ರಚಿಸಿದ್ದಾನೆ. ಗುರುಶಂಕರೇಶ್ವರ ಶತಕ, ಪುಷ್ಪಶತಕ, ಶಂಕರ ಶತಕ, ಶಂಕರೇಶ್ವರ ಶತಕಗಳನ್ನು ವೃತ್ತದಲ್ಲಿಯೂ 'ಶಂಕರದೇವರ ಕಂದಗಳು' ಎಂಬ ಕಂದ ಕೃತಿಯನ್ನೂ ನಿಜಲಿಂಗಚಿಕ್ಕಯ್ಯನ ದಂಡಕವನ್ನು ದಂಡಕ ಪ್ರಕಾರದಲ್ಲಿಯೂ ರಚಿಸಿದ್ದಾನೆ. 'ಶಂಕರದೇವರ ಸ್ವರವಚನಗಳು' ಎಂದು ಕರೆಯುವ ಈ ಕೃತಿಯಲ್ಲಿ ೧೨೮ ಸ್ವರವಚನಗಳಿವೆ. ಶಂಕರದೇವನ ನಂತರದ ಕಂಬಾಳ ಶಾಂತಮಲ್ಲೇಶನ (೧೬೦೦) ಗಣವಚನ ರತ್ನಾವಳಿ, ಚೆನ್ನವೀರಾಚಾರ್ಯನ (೧೬೦೦) ಶಿವಯೋಗ ಪ್ರದೀಪಿಕೆ, ಅಜ್ಞಾತ ಸಂಕಲನಕಾರನ (೧೮೦೦) 'ಬಿಡಿ ಸ್ವರವಚನ ಕೃತಿಗಳು' ಎಂಬ ಸ್ವರವಚನ ಸಂಕಲಿತ ಕೃತಿಗಳಲ್ಲಿ ಇವನನ್ನು ಉದಾಹರಿಸಿದ್ದಾರೆ. ಈತನು ವಿವಿಧ ಛಂದೋಪ್ರಕಾರಗಳಲ್ಲಿ ಕೃತಿ ರಚಿಸುವ ಸಾಮರ್ಥ್ಯ ಹೊಂದಿದ್ದನ್ನು ಮನಗಾಣಬಹುದು.

**ಕೆಸ್ತೂರದೇವ:** ಸುಮಾರು ೧೬ನೆಯ ಶತಮಾನದಲ್ಲಿದ್ದ ಈತ ಗುರುಸಿದ್ಧಲಿಂಗ ಎಂಬ ಅಂಕಿತವನ್ನು ಬಳಸಿ ೧೦೦ ಸ್ವರ ವಚನಗಳನ್ನು ರಚಿಸಿದ್ದಾನೆ. ತುಮಕೂರು ಜಿಲ್ಲೆಯ ಕೆಸ್ತೂರಿನವನಾದ ಈತನು ತೋಂಟದ ಸಿದ್ಧಲಿಂಗರ ಪರಂಪರೆಯವನಾಗಿದ್ದಾನೆ. ಈತನ ಸ್ವರವಚನಗಳನ್ನು ಎಂ.ಎಸ್.ಸುಂಕಾಪುರ ಅವರು ಎರಡು ಓಲೆ ಪ್ರತಿಗಳನ್ನುಪಯೋಗಿಸಿ ಸಂಪಾದಿಸಿ ಗದಗಿನ ವೀರಶೈವ ಅಧ್ಯಯನ ಸಂಸ್ಥೆಯ ಮೂಲಕ ಪ್ರಕಟಿಸಿದ್ದಾರೆ.

**ಗರಣಿಯ ಬಸವಲಿಂಗ:** ಮಧುಗಿರಿ ತಾಲೂಕಿನ ಗರಣಿಯವನಾದ ಈತನ ಕಾಲ ಕ್ರಿ.ಶ.೧೬೦೦. ಬಸವಾದಿ ಶಿವಶರಣರ ಕಥೆಯನ್ನೊಳಗೊಂಡ ಬಸವೇಶ್ವರ ಕಾವ್ಯ, ಬಸವರಾಜ ದೇವರ ತಾರಾವಳಿ, ಸಿದ್ಧೇಶ್ವರ ಪವಾಡದ ತಾರಾವಳಿ ಕೃತಿಗಳನ್ನು ರಚಿಸಿದ್ದಾನೆ. 'ಬಸವೇಶ್ವರ ಕಾವ್ಯ' ಸಾಂಗತ್ಯದಲ್ಲಿ ರಚಿತವಾಗಿದ್ದು ೧೯ ಸಂಧಿಗಳನ್ನು ಹೊಂದಿದೆ. ಈ ಕೃತಿ ರಚಿಸುವಲ್ಲಿ ಭೀಮಕವಿಯ (೧೩೬೯) ಬಸವ ಪುರಾಣವನ್ನು ಕವಿ ಅನುಸರಿಸಿದ್ದಾನೆ. ಏಕೈಕ ಪ್ರತಿ ಆಧರಿಸಿ ಈ ಕೃತಿಯನ್ನು ಹ.ಕ.ರಾಜೇಗೌಡ ಅವರು ಸಂಪಾದಿಸಿದ್ದು ಮೈಸೂರು ವಿಶ್ವವಿದ್ಯಾನಿಲಯವು ೧೯೮೨ರಲ್ಲಿ ಪ್ರಕಟಿಸಿದೆ.

**ಸುವ್ವಿಮಲ್ಲ:** ಗುಬ್ಬಿ ಪರಿಸರದ ತುರುಗೆರೆಪುರದ ಈತನು ತೋಂಟದ ಸಿದ್ಧಲಿಂಗರ ಜೀವನ ಚರಿತ್ರೆಯನ್ನು ಕುರಿತ 'ತೋಂಟದ ಸಿದ್ಧೇಶ್ವರ ಸಾಂಗತ್ಯ ಎಂಬ ಕೃತಿ ಹಾಗೂ ತೋಂಟದ ಸಿದ್ಧಲಿಂಗೇಶ್ವರ ತಾರಾವಳಿಯನ್ನು ರಚಿಸಿದ್ದಾನೆ. ಈತನ ಕಾಲ ೧೫೪೦–೧೬೨೦. ತೋಂಟದ ಸಿದ್ಧೇಶ್ವರನ ಸಾಂಗತ್ಯ ಕೃತಿಯಲ್ಲಿ ತೋಂಟದ ಸಿದ್ಧಲಿಂಗರ ಬಗ್ಗೆ ಮತ್ತವರ ಅಂತಿಮ ಜೀವನಘಟ್ಟದ ಬಗ್ಗೆ, ಮತ್ತು ಪ್ರಥಮ ರಥೋತ್ಸವಕ್ಕೆ ಆಗಮಿಸಿದ ಸಿದ್ಧಲಿಂಗರ ಸಮಕಾಲೀನ ವ್ಯಕ್ತಿಗಳ ಬಗೆಗೆ ಕೊಟ್ಟಿರುವ ಐತಿಹಾಸಿಕ ಮಾಹಿತಿಗಳಿಂದಾಗಿ ಸಿದ್ಧಲಿಂಗರನ್ನು ಕುರಿತ ಸಾಹಿತ್ಯ ಕೃತಿಗಳಲ್ಲಿಯೇ ಇದು ಅತ್ಯಂತ ವಿಶಿಷ್ಟ ಮತ್ತು ಮಹತ್ತರವಾದುದಾಗಿದೆ. ಈ ಕೃತಿಯನ್ನು ವಿದ್ವಾನ್ ಎಂ.ಎಸ್.ಬಸವರಾಜಯ್ಯನವರು ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಕೇಂದ್ರದ ಹಸ್ತಪ್ರತಿ ವಿಭಾಗದಲ್ಲಿಯ ಏಕೈಕಹಸ್ತಪ್ರತಿಯನ್ನುಪಯೋಗಿಸಿಕೊಂಡು ಸಂಪಾದಿಸಿ ೧೯೯೫ರಲ್ಲಿ ಪ್ರಕಟಿಸಿದ್ದಾರೆ.

**ಕವಿ ಪವಾಡ:** ಮಧುಗಿರಿ ತಾಲೂಕಿನ ಬಿಜ್ಜಾವರದ ಈತನ ಕಾಲ ಸುಮಾರು ಕ್ರಿ.ಶ.೧೬೦೦. ಈತನು 'ತೋಂಟದ ಸಿದ್ಧಲಿಂಗ ತಾರಾವಳಿ'ಯನ್ನು ರಚಿಸಿದ್ದಾನೆ. ತೋಂಟದ ಸಿದ್ಧಲಿಂಗರ ಜೀವಿತಾವಧಿಯಲ್ಲಿ ಸಂಭವಿಸಿದ ಘಟನೆಗಳನ್ನು ಈ ತಾರಾವಳಿಯಲ್ಲಿ ಉಲ್ಲೇಖಿಸಿದ್ದಾನೆ. ಇದರಲ್ಲಿ ಪಲ್ಲವಿ ಹಾಗೂ ಹನ್ನೊಂದು ನುಡಿಗಳಿದ್ದು, ಎಸ್.ಶಿವಣ್ಣನವರು ಸಂಪಾದಿಸಿ 'ಬಸವ ಪಥ' ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ

**ಪ್ರಸನ್ನ ದೇಶಿಕ:** ತಿಪಟೂರು ತಾಲೂಕು ಹೊನ್ನವಳ್ಳಿಯವನು. ಕಾಲ ಕ್ರಿ.ಶ.೧೬೦೦. ಈತನು 'ಹೊನ್ನವಳ್ಳಿ ಸಿದ್ಧವೀರೇಶ್ವರನ ಪವಾಡ' ಎಂಬ ಕೃತಿಯನ್ನು ರಚಿಸಿದ್ದು, ಇದರಲ್ಲಿ ಪಲ್ಲವಿ ಸಹಿತವಾದ ೧೧ ನುಡಿಗಳು ಹಾಗೂ ಅಂತ್ಯದಲ್ಲಿ ಎರಡು ಕಂದಗಳಿವೆ. ಹೊನ್ನವಳ್ಳಿ ಕರಿಸಿದ್ಧೇಶ್ವರ ಮಠದ ಸಂಗ್ರಹದಲ್ಲಿದ್ದ ಹಸ್ತಪ್ರತಿಯನ್ನು ಆಧರಿಸಿ ಎಸ್.ಶಿವಣ್ಣನವರು ಸಂಪಾದಿಸಿ ಪರಂಜ್ಯೋತಿ ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ.

**ಮಲ್ಲಿಕಾರ್ಜುನ ಕವಿ:** ಈತ ಬಿಜ್ಜಾವರ ಮಹಾನಾಡ ಪ್ರಭುಗಳ ರಾಜಾಶ್ರಯದಲ್ಲಿದ್ದವನು. ಕಾಲ ಕ್ರಿ.ಶ.೧೫೮೯–೧೬೫೦. ಈತ ಸಂಸ್ಕೃತ ಹಾಗೂ ಕನ್ನಡ ಭಾಷೆಗಳೆರಡರಲ್ಲಿ ಕೃತಿ ರಚನೆ ಮಾಡಿದ್ದರೂ ಹೆಚ್ಚಿನ ಕೃತಿಗಳನ್ನು ಸಂಸ್ಕೃತದಲ್ಲಿ ರಚಿಸಿದ್ದಾನೆ. ಕನ್ನಡದಲ್ಲಿ ಬಿಜ್ಜಾವರದ ಮಹಾನಾಡ ಪ್ರಭುಗಳ ಚರಿತ್ರೆಯನ್ನು ಕುರಿತು 'ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ' ಎಂಬ ಕೃತಿಯನ್ನು ರಚಿಸಿದ್ದಾನೆ. ಈ ಕೃತಿಯ ಹಸ್ತಪ್ರತಿಯ ಮೇಲೆ 'ಕಾಳಗದ ವೀರವರ ತೋಂಟದರಾಯ ಸಾಂಗತ್ಯ' ಎಂಬ ಹೆಸರಿದೆ. ಈ ಸಾಂಗತ್ಯ ಕೃತಿಯಲ್ಲಿ ಉಲ್ಲೇಖಗೊಂಡ ವ್ಯಕ್ತಿನಾಮ, ಗ್ರಂಥನಾಮ, ರಾಜಕೀಯ ಸಂಘರ್ಷ, ಧಾರ್ಮಿಕ ಕ್ರೌರ್ಯ, ಜೀವನಮೌಲ್ಯ ಆಚರಣೆಗಳ ಮೂಲಕ ೧೬ನೆಯ ಶತಮಾನದ ವೀರಶೈವ ಪಾಳೆಯಗಾರರ ಪರಿವಾರ ಮತ್ತು ಪ್ರಜೆಗಳನ್ನು ಪರಿಚಯ ಮಾಡಿಕೊಳ್ಳಬಹುದಾಗಿದೆ. ಮಲ್ಲಿಕಾರ್ಜುನ ಕವಿಯು ಸಂಸ್ಕೃತದ ೧೧ ಕೃತಿಗಳಿಗೆ ಕನ್ನಡದಲ್ಲಿ ಟೀಕೆಯನ್ನು ರಚಿಸಿದ್ದಾನೆ. ಆದರೆ ಅವೆಲ್ಲವೂ ಅಪ್ರಕಟಿತ ಕೃತಿಗಳಾಗಿವೆ.

**ವಿರಕ್ತ ತೋಂಟದಾರ್ಯ:** ತೋಂಟದ ಸಿದ್ಧಲಿಂಗರ ಶಿಷ್ಯ ಪರಂಪರೆಗೆ ಸೇರಿದವನು. ಎಸ್.ಶಿವಣ್ಣನವರ ಪ್ರಕಾರ ಈತನ ಕಾಲ ಕ್ರಿ.ಶ.೧೬೧೬. ಈತನ ಸಾಹಿತ್ಯ ಸೃಷ್ಟಿ ವಿಪುಲ ಹಾಗೂ ವೈವಿಧ್ಯವಿದ್ದು, ಸತ್ವ ಹಾಗೂ ಸಂಖ್ಯೆಯ ದೃಷ್ಟಿಯಿಂದಲೂ ಗಮನಾರ್ಹ ಎನಿಸಿದೆ. ವಿವಿಧ ವಸ್ತು ಹಾಗೂ ಛಂದೋಬಂಧಗಳಲ್ಲಿ ೨೪ ಕೃತಿಗಳನ್ನು ರಚಿಸಿದ್ದು ಪುರಾಣ, ಶತಕ,

ರಗಳೆ, ನಿಘಂಟು, ನಾಮಾವಳಿ, ಟೀಕೆ, ಗದ್ಯ, ಚಂಪು, ಸ್ವರವಚನ ಹಸ್ತಪ್ರತಿ ನಕಲು ಎಂದು ವಿಭಾಗಿಸಬಹುದು. ಈತನ ಸಮಾಧಿಯು ಮಧುಗಿರಿ ತಾಲೂಕಿನ ಬೇಡತ್ತೂರಿನಲ್ಲಿರುವುದನ್ನು ಸಂಶೋಧಕರಾದ ಡಾ॥ ಬಿ.ನಂಜುಂಡಸ್ವಾಮಿ ಪತ್ತೆ ಹಚ್ಚಿದ್ದಾರೆ. ಈತನ ಕೃತಿಗಳೆಂದರೆ, ಶ್ರೀ ಸಿದ್ಧೇಶ್ವರ ಪುರಾಣ, ಪಾಲ್ಕುರಿಕೆ ಸೋಮೇಶ್ವರ ಪುರಾಣ (ವಾರ್ಧಕ ಷಟ್ಪದಿಗಳು) ಎಂಬ ಪುರಾಣ ಕೃತಿಗಳು, ನಿರಂಜನಲಿಂಗ ಶತಕ, ನಿರಂಜನ ಶತಕ, ಸಿದ್ಧಲಿಂಗೇಶ್ವರ ಶತಕ, ಸರ್ವಮಂಗಳೆ ಶತಕ (ಅಪ್ರಕಟಿತ) ಮುಂತಾದ ಶತಕ ಕೃತಿಗಳು, ತೋಂಟದಾರ್ಯ ರಗಳೆ, ನೂತನ ಪುರಾತನರ ರಗಳೆಗಳು, ಕರ್ನಾಟಕ ಶಬ್ದಮಂಜರಿ (ವಾರ್ಧಕ ಷಟ್ಪದಿ) ನಿಘಂಟು, ಸ್ವರವಚನ ೧) ಬಸವೇಶ್ವರನನೂರೆಂಟು ನಾಮ (ಅಪ್ರಕಟಿತ), ೨) ಬಸವೇಶ್ವರನ ಸಹಸ್ರನಾಮ (ಸಂಸ್ಕೃತ), ೩) ಶಿವಸಹಸ್ರನಾಮ (ಅಪ್ರಕಟಿತ) ೪) ದೇವಿಯ ಸಹಸ್ರನಾಮ ೫) ಶರಣೆಯರ ನೂರೆಂಟು ನಾಮ ೬) ಪಿಂಡೋತ್ಪತ್ತಿಪದ (ಅಪ್ರಕಟಿತ) ನಾಮಾವಳಿಗಳು; ಮನೋವಿಜಯರ ತಾತ್ಪರ್ಯಚಂದ್ರಿಕೆ, ಶತಕತ್ರಯಟೀಕೆ, ಕೈವಲ್ಯಸಾರದ ಟೀಕೆ, ಪಂಚಗದ್ಯದ ಟೀಕೆ, ಶೈವಸಂಜೀವಿನಿ ಟೀಕಾಕೃತಿಗಳು, ಅನಾದಿ ವೀರಶೈವ ಸಂಗ್ರಹ ಎಂಬ ಗದ್ಯ ಕೃತಿ, ಚಿದಾನಂದ ಸಿಂಧು, ಷಟ್ಸ್ಥಲ ಜ್ಞಾನ ಚಿಂತಾಮಣಿ (ಅಪ್ರಕಟಿತ) ಎಂಬ ಚಂಪು ಕೃತಿ ರಚಿಸಿದ್ದು, ಗೂಳೂರು ಸಿದ್ಧವೀರಣ್ಣೊಡೆಯರ ಶೂನ್ಯಸಂಪಾದನೆಯನ್ನು ಪ್ರತಿ ಮಾಡಿದ್ದಾನೆ. ವಿರಕ್ತ ತೋಂಟದಾರ್ಯನು ವೀರಶೈವ ಸಿದ್ಧಾಂತ ಕ್ಷೇತ್ರಕ್ಕೆ ಕಾವ್ಯ, ಛಂದಸ್ಸು, ನಿಘಂಟು, ಟೀಕೆ ಹಾಗೂ ಕೋಶ ಕ್ಷೇತ್ರಗಳಿಗೆ ಅದ್ವಿತೀಯ ಕೊಡುಗೆಯನ್ನು ಸಲ್ಲಿಸಿದ್ದಾನೆ. ಈ ಕೃತಿಗಳ ಬಗ್ಗೆ ಅಧ್ಯಯನ ನಡೆಯಬೇಕಿದೆ.

**ಸೋಸಲೆ ರೇವಣಾಚಾರ್ಯ:** ಕವಿಚರಿತೆಕಾರರ ಪ್ರಕಾರ ಈತನ ಕಾಲ ಕ್ರಿ.ಶ.೧೬೨೩. ಹಾಗಲವಾಡಿ ಪಾಳೆಯಗಾರರ ಆಶ್ರಯದಲ್ಲಿ ಉಭಯಭಾಷೆಗಳಲ್ಲಿ ಕೃತಿ ಹಾಗೂ ಟೀಕಾ ಸಾಹಿತ್ಯವನ್ನು ಬರೆದಿದ್ದಾನೆ. ಈತನು ಮಹಿಮ್ನಸ್ತವ, ವೀರಶೈವ ಸಿದ್ಧಾಂತ ಶಿಖಾಮಣಿ, ಶಿವಾಕ್ಯಶಿಖಾಮಣಿ ಮತ್ತು ಸದ್ಗುರು ರಗಳೆ ಕೃತಿಗಳಿಗೆ ಕನ್ನಡ ವ್ಯಾಖ್ಯಾನವನ್ನು ನೀಡಿದ್ದು, ಶಾರೀರ ಪ್ರಕಾಶಿಕೆ, ಅಂತಃಕರಣ ಪ್ರಕಾಶಿಕೆ, ಸ್ವಸ್ವರೂಪ ಪ್ರಕಾಶಿಕೆ, ಪರಮಾತ್ಮ ಪ್ರಕಾಶಿಕೆ, ನಿಜದೀಪ್ತಿ ಪ್ರಕಾಶಿಕೆ ಎಂಬ ಗ್ರಂಥಗಳನ್ನು ರಚಿಸಿದ್ದಾನೆ. ಈತನು ರುದ್ರಭಾರತ ಗ್ರಂಥಕ್ಕೆ ಟೀಕೆಯನ್ನೂ ಬರೆದಿದ್ದಾನೆ.

**ಮುಮ್ಮಡಿ ಚಿಕ್ಕಭೂಪಾಲ**: ಈತನ ಕಾಲ ಕ್ರಿ.ಶ.೧೬೪೬. ಈತ ಬಿಜ್ಜಾವರ ರಾಜಮನೆತನದ ಅರಸು. ಈತನು ಸಂಸ್ಕೃತದಲ್ಲಿ 'ಅಭಿನವಭರತ ಸಾರಸಂಗ್ರಹ' ಎಂಬ ಸಂಗೀತ ಪ್ರಧಾನ ಕೃತಿಯನ್ನು ರಚಿಸಿದ್ದಾನೆ. ಇದರಲ್ಲಿ ವೇದ್ಯಾಧ್ಯಾಯ ಮತ್ತು ಗೀತಾಧ್ಯಾಯ ಎಂಬ ಅಧ್ಯಾಯಗಳಿವೆ.

**ಹಾಗಲವಾಡಿ** ಸಿದ್ಧ**ರಾಮಪ್ಪನಾಯಕ**: ಈತ ಹಾಗಲವಾಡಿ ಪಾಳೆಯಗಾರರಲ್ಲಿ ಒಬ್ಬನಾಗಿದ್ದು ಕ್ರಿ.ಶ.೧೬೭೧-೧೭೦೧ರವರೆಗೆ ಆಳಿದ ರಾಮಪ್ಪ ನಾಯಕನೇ ಈತನೆಂದು ಸಂಶೋಧಕರ ಅಭಿಪ್ರಾಯ. ಈತ "ಮಹಾನುಭಾವ ಪ್ರಕಾಶಿಕೆ ಎಂಬ ಗದ್ಯಗ್ರಂಥವನ್ನು ರಚಿಸಿದ್ದನೆ.

**ಹೇರಂಬ ಕವಿ:** ತುಮಕೂರು ಜಿಲ್ಲೆಯ ಹೆಬ್ಬೂರಿನವನು. ಈತನ ಕಾಲ ಕ್ರಿ.ಶ.೧೭೭೯-೧೭೮೯. ತೋಂಟದ ಸಿದ್ಧಲಿಂಗೇಶ್ವರರ ಜೀವನವನ್ನು ಕುರಿತು ಸಾಂಗತ್ಯ ಪ್ರಕಾರದಲ್ಲಿ ಸಿದ್ಧಲಿಂಗೇಶ್ವರ ಸಾಂಗತ್ಯ ಕೃತಿಯನ್ನು ರಚಿಸಿದ್ದಾನೆ. ಈ ಕೃತಿಯಲ್ಲಿ ೧೯೧೬ ಪದ್ಯಗಳಿದ್ದು, ೨೫ ಸಂಧಿಗಳಲ್ಲಿ ರಚಿತವಾಗಿದೆ. ಈತನು ಬ್ರಾಹ್ಮಣಕವಿ. ವೀರಶೈವೇತವರಿಂದ ರಚನೆಗೊಂಡ ಈ ಕೃತಿ ತೋಂಟದ ಸಿದ್ಧಲಿಂಗರ ಜೀವನ ಚರಿತ್ರೆಯನ್ನು ಅರಿಯುವಲ್ಲಿ ವಿಭಿನ್ನವಾಗಿದೆ.

**ಹಾಗಲವಾಡಿ ಮುದ್ದವೀರಸ್ವಾಮಿ:** ಈತ ಹಾಗಲವಾಡಿ ಅರಸರ ರಾಜಗುರುವಾಗಿದ್ದು ಉಭಯ ಭಾಷೆಗಳಲ್ಲಿ ಸಾಹಿತ್ಯ ರಚಿಸಿದ್ದಾನೆ. ಈತನ ಕಾಲ ಸುಮಾರು ಕ್ರಿ.ಶ.೧೭೮೫. ಈತನು "ಶಿವತತ್ವ ಸುಜ್ಞಾನ ಪ್ರದೀಪಿಕೆ ಎಂಬ ಕಾವ್ಯವನ್ನು ಭಾಮಿನಿ ಷಟ್ಪದಿಯಲ್ಲಿ ಬರೆದಿದ್ದಾನೆ. ಇದು ಸಂಸ್ಕೃತದ 'ಷಟ್ಸ್ಥಲ ಬ್ರಹ್ಮದೀಪಿಕಾ ಕೃತಿಯ ಸಾರಸಂಗ್ರಹ ರೂಪ. ಈ ಕೃತಿಯಲ್ಲಿ ವೇದ, ಆಗಮ, ಉಪನಿಷತ್ತುಗಳಿಂದ ಸಂಸ್ಕೃತ ಶ್ಲೋಕಗಳನ್ನು ಎತ್ತಿಕೊಂಡು ಉದ್ಧರಿಸುತ್ತ, ವೀರಶೈವ ಷಟ್ಸ್ಥಲ ತತ್ವವನ್ನು ಸರಳ ಷಟ್ಪದಿಯಲ್ಲಿ ನಿರೂಪಿಸಲಾಗಿದೆ. ಜೊತೆಗೆ ೧೦೭ ಸ್ವರವಚನಗಳನ್ನು ರಚಿಸಿದ್ದಾನೆ. ಸ್ವರವಚನಗಳಲ್ಲಿ ತತ್ವಭೋಧೆ ಮತ್ತು ಲೋಕನೀತಿಗಳು ಪ್ರಕಟವಾಗಿದ್ದು ಉತ್ತಮ ಅನುಭಾವ ಕವಿ ಎಂಬುದು ವ್ಯಕ್ತವಾಗುತ್ತದೆ. ಕನ್ನಡ ಅಧ್ಯಯನ ಕೇಂದ್ರದ ಹಸ್ತಪ್ರತಿ ವಿಭಾಗದ ಸಂಗ್ರಹದಲ್ಲಿ (ಕ್ರಮಾಂಕ: ಬಿ-೬೭೧-೩೧ ಮುಂಭಾಗ ೩೨ ಹಿಂಭಾಗ) ಹಾಗಲವಾಡಿ ಮುದ್ದವೀರಸ್ವಾಮಿ ರಚಿಸಿರುವ ಅಪ್ರಕಟಿತ ೧೧ ವಾರ್ಧಕಷಟ್ಪದಿ ನುಡಿಗಳ ಸ್ವರವಚನದಲ್ಲಿಯ ೮ನೇ

ನುಡಿಯಲ್ಲಿ ವೀರಶೈವ ಕೃತಿಕಾರರು ಮತ್ತು ಮಠಾಧೀಶರ ಉಲ್ಲೇಖವಿರುವುದನ್ನು ಎಸ್.ಶಿವಣ್ಣನವರು ಗುರುತಿಸಿದ್ದಾರೆ. 'ಗುರುಸಂಗಮೇಶ್ವರ ಲಿಂಗವೇ ಎಂಬ ಅಂಕಿತದಲ್ಲಿ ಹಾಗಲವಾಡಿ ಮುದ್ದವೀರಪ್ಪ ನಾಯಕನ ಮಗಳು: (ಹೆಸರು ಲಭ್ಯವಿಲ್ಲ) ಸ್ವರವಚನ ಬರೆದಿದ್ದಾಳೆ.

**ಕವಿ ಬೊಮ್ಮಣ್ಣ:** ಜೈನಕವಿ. ಕಾಲ ಕ್ರಿ.ಶ.೧೭೭೯. ಈತನು ನಾಗಕುಮಾರ ಷಟ್ಪದಿಯನ್ನು ಬರೆದಿದ್ದಾನೆ. ೧೭೪೪ರಲ್ಲಿ ಲಿಂಗಮಂತ್ರಿಯ ಕಬ್ಬಿಗರ ಕೈಪಿಡಿಯನ್ನು, ೧೭೪೯ರಲ್ಲಿ ನಯಸೇನನ ಧರ್ಮಾಮೃತ ಕೃತಿಯನ್ನು ಪ್ರತಿ ಮಾಡಿದ್ದಾನೆ.

**ಸೋಮೇಕಟ್ಟೆ ಚೆನ್ನವೀರಸ್ವಾಮಿ:** ಈತ ತುಮಕೂರಿನ ಸೋಮೇಕಟ್ಟೆ ಮಠದ ಪರಂಪರೆಗೆ ಸೇರಿದ ಮಠಾಧೀಶನಾಗಿದ್ದು, ಈತನ ಕಾಲ ಕ್ರಿ.ಶ. ೧೭೪೦. ಈತ ರಚಿಸಿರುವ ಸಾಹಿತ್ಯ ಕೃತಿಗಳನ್ನು ಲಘು ಕೃತಿಗಳು ಹಾಗೂ ಸ್ವರ ವಚನಗಳು ಎಂದು ವಿಂಗಡಿಸಬಹುದಾಗಿದೆ. ಸುಮಾರು ೨೨ ಲಘು ಕೃತಿಗಳನ್ನು ರಚಿಸಿದ್ದು, ಅವುಗಳನ್ನು ಇತ್ತೀಚೆಗೆ ಜಿ.ಎ.ಶಿವಲಿಂಗಯ್ಯ, ಡಾ॥ ಸಾ.ಶಿ.ಮರುಳಯ್ಯ, ಹಾಗೂ ಡಾ॥ ಬಿ.ನಂಜುಂಡಸ್ವಾಮಿ, ಸಂಯುಕ್ತವಾಗಿ 'ತುಮಕೂರು ಸೋಮೇಕಟ್ಟೆ ಚೆನ್ನವೀರಸ್ವಾಮಿಗಳ ಕೃತಿಗಳು' ಎಂಬ ಶೀರ್ಷಿಕೆಯಡಿ ಸಂಪಾದಿಸಿ ಗದಗಿನ ವೀರಶೈವ ಅಧ್ಯಯನ ಸಂಸ್ಥೆಯ ಮೂಲಕ ೧೯೭೭ರಲ್ಲಿ ಪ್ರಕಟಿಸಿದ್ದಾರೆ.

**ನಿಡುಗಲ್ಲು ಚನ್ನಪ್ಪ:** ಪಾವಗಡ ತಾಲೂಕಿನ ನಿಡುಗಲ್ಲು ಗ್ರಾಮದವನು. ಈತನ ಕಾಲ ಕ್ರಿ.ಶ.೧೭೭೦೦ ರಿಂದ ೧೭೫೦. ಈತನು ನಿಡುಗಲ್ಲು ಪಾಳೇಗಾರರ ಕಾಲದಲ್ಲಿದ್ದವನು. ಶರಣಲೀಲಾಮೃತ, ಬಸವಪುರಾಣ, ನಿಡುಗಲ್ಲು ಬೆಟ್ಟದ ತುದಿಯಲ್ಲಿರುವ ಬಸವನ ಜಾತ್ರೆಯನ್ನು ನೋಡಿ ಬರೆದಿರುವ 'ಶಿಖರದ ಬಸವನ ಜಾತ್ರೆಯ ತಾರಾವಳಿ', ಚನ್ನಬಸವೇಶ್ವರ ದೇವರ ಕಾಲಜ್ಞಾನ, ನಿಡುಗಲ್ಲು ವೀರಭದ್ರಾಷ್ಟಕ, ಹಾಗೂ ನಿಡುಗಲ್ಲು ದುರ್ಗದ ಬಗ್ಗೆ ಐದು ಹಾಡುಗಳನ್ನು ರಚಿಸಿದ್ದಾನೆ.

**ನಿಟ್ಟೂರ ನಂಜಯ್ಯ:** ಕಾಲ ಕ್ರಿ.ಶ.೧೭೫೦, ಉಭಯಭಾಷೆಗಳಲ್ಲಿ ಕಾವ್ಯ ಹಾಗೂ ಟೀಕೆಗಳನ್ನು ಬರೆದಿದ್ದಾನೆ. ಸಂಸ್ಕೃತದಲ್ಲಿ ವೇದಾಂತಸಾರ, ವೀರಶೈವ ಚಿಂತಾಮಣಿಯನ್ನು ರಚಿಸಿದ್ದಾನೆ. ಕನ್ನಡದಲ್ಲಿ 'ಕೇಶಿರಾಜನ ಶಬ್ಧಮಣಿದರ್ಪಣ' ಕ್ಕೆ ಟೀಕೆಯನ್ನು ಬರೆದಿದ್ದಾನೆ.

**ತೋವಿನಕೆರೆ ರಾಯಣ್ಣ:** ಈತ ಜೈನಕವಿ. ಕಾಲ ಕ್ರಿ.ಶ.೧೭೫೫. ತೋವಿನಕೆರೆಯ ಬಸ್ತಿ ಇಂದ್ರವರ್ಗದ ಪದ್ಮಣ್ಣನ ಮಗ. 'ಪದ್ಮಾವತಿ ಕೊರವಂಜಿ' ಎಂಬ ಯಕ್ಷಗಾನ ಕೃತಿಯನ್ನು ರಚಿಸಿದ್ದಾನೆ. ಈ ಕೃತಿಗೆ 'ರಾಮ ಜನನ' ಎಂಬ ಹೆಸರೂ ಉಂಟು. ಈ ಕೃತಿಯಲ್ಲಿ ಪದ್ಮಾವತಿದೇವಿ ಕೊರವಂಜಿಯ ವೇಷ ಧರಿಸಿ ಕೌಸಲ್ಯೆಯ ಬಳಿಗೆ ಹೋಗಿ ಅವಳಿಗೆ ಗಂಡುಮಗು ಆಗುವುದೆಂದು ಹೇಳಿದ ಕಥೆ. ಅಲ್ಲದೆ, 'ಮನ್ಮಥ ಮಣಿದರ್ಪಣ' ಎಂಬ ಕೃತಿಯನ್ನು ಭಾಮಿನಿ ಷಟ್ಪದಿಯಲ್ಲಿ ರಚಿಸಿದ್ದಾನೆ. ಮಿಗಿಲಾಗಿ ದೊಡ್ಡಣಾಂಕನ ಚಂದ್ರಪ್ರಭ ಷಟ್ಪದಿಯ ಕೆಲವು ಭಾಗಗಳನ್ನು ಪ್ರತಿ ಮಾಡಿದ್ದಾನೆ.

**ಚಂದ್ರಸಾಗರವರ್ಣಿ:** ಜೈನಕವಿ, ಕೊರಟಗೆರೆ ತಾಲೂಕಿನ ತೋವಿನಕೆರೆಯವನು. ಈತನ ಕಾಲ ೧೮ನೇ ಶತಮಾನದ ಉತ್ತರಾರ್ಧ ಹಾಗೂ ೧೯ನೇ ಶತಮಾನದ ಪೂರ್ವಾರ್ಧ ಭಾಗ. ಈತನು ವಸ್ತು ಹಾಗೂ ಛಂದೋ ವೈವಿಧ್ಯತೆಯಿಂದ ಕೂಡಿದ ೪೬ಕ್ಕೂ ಹೆಚ್ಚಿನ ಕೃತಿಗಳನ್ನು ರಚಿಸಿ ಪ್ರಮುಖ ಜೈನ ಕವಿಗಳಲ್ಲಿ ಒಬ್ಬನೆನಿಸಿದ್ದಾನೆ. ಈ ಕವಿಯ ಅಪ್ರಕಟಿತ ೧೮ ಕೃತಿಗಳನ್ನು ಹಂಪನಾಗರಾಜಯ್ಯ ಮತ್ತು ಎಸ್.ಶಿವಣ್ಣನವರು ಸಂಪಾದಿಸಿ ಪ್ರಕಟಿಸಿದ್ದಾರೆ.

**ಕಾಡಸಿದ್ಧೇಶ:** ಕ್ರಿ.ಶ.೧೭೨೫ರಲ್ಲಿ ಈತನು ಇಷ್ಟಲಿಂಗ ಶತಕ ಎಂಬ ಕೃತಿಯನ್ನು ಮತ್ತು ಕಾಡಿನೊಳಗಾದ ಶಂಕರಪ್ರಿಯ ಚೆನ್ನಕದಂಬ ಲಿಂಗನಿರ್ಮಾಣ ಪ್ರಭುವೇ ಎಂಬ ಅಂಕಿತದಲ್ಲಿ ವಚನಗಳನ್ನು ಬರೆದಿರುವುದಾಗಿ ತಿಳಿದುಬರುತ್ತದೆ.

**ಗುಬ್ಬಿ ಕಿಡಿಗಣ್ಣಪ್ಪ** : ಕಾಲ ಕ್ರಿ.ಶ.೧೮೦೮–೭೯, ನೊಣವಿನಕೆರೆ ಕರಿಬಸವಸ್ವಾಮಿಗಳ ಶಿಷ್ಯನಾದ ಈತನು ಕೆಲವು ಹಾಡುಗಳನ್ನು ರಚಿಸಿದ್ದಾನೆ.

**ಮದ್ದಗಿರಿಯ ನಂಜಪ್ಪ:** ಕ್ರಿ.ಶ.೧೮೪೦ದಲ್ಲಿದ್ದ ಈತನು ಕೃಷ್ಣರಾಜೇಂದ್ರ ವಿಳಾಸ ಎಂಬ ವಾರ್ಧಕ ಷಟ್ಪದಿ ಕೃತಿಯನ್ನು ಮತ್ತು ವರನಂದಿಕಲ್ಯಾಣ ಎಂಬ ಯಕ್ಷಗಾನ ನಾಟಕವನ್ನು ರಚಿಸಿರುವುದಾಗಿ ತಿಳಿದುಬರುತ್ತದೆ.

**ಮತಕೂರು ನಂಜುಂಡ ಶಿವಯೋಗಿ:** ಕಾಲ ಕ್ರಿ.ಶ.೧೮೬೦. ಇವನು ಅನೇಕ ಮಹತ್ವದ ಕೃತಿಗಳನ್ನು ರಚಿಸಿದ್ದಾನೆ. ಅವುಗಳೆಂದರೆ ೧)ಮಾರ್ಕಂಡೇಯ ವಿಳಾಸ ಎಂಬ ಯಕ್ಷಗಾನ ಕೃತಿ, ೨)ಶ್ರೀ ಮದಟವೀಶ್ವರ ಗುರುಭಕ್ತಿ ಸಾರ (ಭಾಮಿನಿ

ಷಟ್ಪದಿ) ೩)ಅಟವೀಶ್ವರ ಗೀತಾಮಂಜರಿ ೪) ಸುರಭಾಂಡೇಶವರೋಪಖ್ಯಾನ ೫)ಹಾಲಾಹಲ ಭಕ್ಷಣೆಯ ಕಥೆ ೬) ಅಟವೀಶ್ವರ ಚರಿತೆ ಹಾಗೂ ೭)ಕಾಳಿಕಾಂಬ ಶತಕ ಕೃತಿಗಳನ್ನು ರಚಿಸಿದ್ದಾನೆ. ಈತ ಒಳ್ಳೆಯ ಕಲಾಕಾರನಾಗಿದ್ದು ಪೌರಾಣಿಕ ಚಿತ್ರಪಟಗಳನ್ನು ರಚಿಸಿದ್ದಾನೆ.

**ಗುಬ್ಬಿ ವೀರೇಶ್ವರ ಶಾಸ್ತ್ರಿ:** ಕಾಲ ಕ್ರಿ.ಶ.೧೮೬೦. ಈತ ಉಭಯ ಭಾಷೆಗಳಲ್ಲಿ ಕೃತಿ ರಚಿಸಿದ್ದಾನೆ. ಸಂಸ್ಕೃತದಲ್ಲಿ 'ವೀರಶೈವಾನ್ವಯ ಚಂದ್ರಿಕಾ' ಕೃತಿಯನ್ನು ರಚಿಸಿದ್ದು ಸ್ವತಃ ಕವಿಯೆ ಈ ಕೃತಿಗೆ ಕನ್ನಡದಲ್ಲಿ ಟೀಕೆ ರಚಿಸಿದ್ದಾನೆ. ಕನ್ನಡದಲ್ಲಿ ೧) ಗುಲೇಬ ಕಾವಲಿ (ಯಕ್ಷಗಾನ) ೨)ಜಗನ್ಮೋಹಿನಿ ಚರಿತೆ ನಾಟಕ ೩)ಸೋಮಶೇಖರ ಚಿತ್ರಶೇಖರ ಚರಿತೆ ಅಥವಾ ಚೋರ ಚರಿತೆ ೪) ಸಿರಿಯಾಳ ಚರಿತೆ ೫) ಸತ್ಯವ್ರತನ ಚರಿತೆ ಹಾಗೂ ೬)ಹರಿಶ್ಚಂದ್ರ ನಾಟಕ ಕೃತಿಗಳನ್ನು ರಚಿಸಿದ್ದಾನೆ.

**ಗುಬ್ಬಿ ವಿ.ಪಾ. ಗುರುಸಿದ್ದಪ್ಪ:** ೧೯ನೇ ಶತಮಾನದವನಾದ ಈತನು ಶಿವಗಂಗಾ ಮೇಗಣಗವಿ ಮಠಾಧ್ಯಕ್ಷ ಚೆನ್ನವೀರಸ್ವಾಮಿ ಕರಸಂಜೋದ್ಭವ. ಈತನು ಕೀರ್ತನೆ, ನಾಟಕ, ಲಾವಣಿ, ಜಾವಳಿ ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ ೧೫ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾನೆ.

**ಗುಬ್ಬಿಯ ಮಲ್ಲಣ್ಣಾ ರಾಧ್ಯ:** ಈತನು ಸಿದ್ಧ ಪ್ರಭುವೇ ಎಂಬ ಅಂಕಿತದಲ್ಲಿ ಸ್ವರವಚನಗಳನ್ನು ರಚಿಸಿದ್ದಾನೆ.

**ಗುಬ್ಬಿ ಸೋ. ಮುರಿಗಾರಾಧ್ಯ:** ಕಾಲ ೧೮೯೬. ಸ್ವತಂತ್ರ ಕಾಲ್ಪನಿಕ ಶೃಂಗಾರಾದ್ಭುತವಾದ ವಸ್ತುವೊಂದನ್ನು ತೆಗೆದುಕೊಂಡು ಕಾದಂಬರಿ ರಚಿಸಿದ ಕೀರ್ತಿ ಇವನಿಗೆ ಸಲ್ಲುತ್ತದೆ. 'ಶೃಂಗಾರಚಾತುರ್ಯೋಲ್ಲಾಸಿನಿ' ಕಾದಂಬರಿಯು ಕನ್ನಡದ ನವೋದಯ ಸಾಹಿತ್ಯದ ಆರಂಭಕಾಲದಲ್ಲಿ ಪ್ರಮುಖವಾದುದಾಗಿದೆ. ಜೊತೆಗೆ ಷಡಕ್ಷರ ಕವಿಯನ್ನು ಕುರಿತು 'ಷಡಕ್ಷರಿದೇವಂ' ಎಂಬ ಮೊದಲ ವಿಮರ್ಶಾ ಕೃತಿಯನ್ನು ರಚಿಸಿದ್ದಾನೆ.

**ಕಲ್ಲೂರಿನ ರುದ್ರಮುನಿ ಸ್ವಾಮಿ:** ೧೯ನೇ ಶತಮಾನದ ಅನುಭಾವಿ ಕವಿ. ಸ್ತೋತ್ರ, ಅಂಬಾಸ್ತುತಿ, ಅಷ್ಟಕಗಳು ಹಾಗೂ ಕೀರ್ತನೆಗಳನ್ನು ರಚಿಸಿದ್ದಾನೆ.

**ಕೊಂಡಮಾಚಾರ್ಯ:** ಶೌದಾತ್ ವೈಷ್ಣವ ಕವಿಯಾದ ಈತನು ಶೌದಾತ್ ಶ್ರೀ ವೈಷ್ಣವ ಮತಸಾರ ಸಂಗ್ರಹ ಕೃತಿಯಲ್ಲಿ ವಿಷ್ಣುಸ್ತೋತ್ರಗಳನ್ನು ಅದ್ಭುತವಾಗಿ ರಚಿಸಿದ್ದಾನೆ.

## ಆಧುನಿಕ ಕನ್ನಡ ಸಾಹಿತ್ಯ

ಬಯಲುನಾಡಿನ ಮಡಿಲಲ್ಲಿ ಹರಡಿಕೊಂಡಿರುವ ತುಮಕೂರು ಜಿಲ್ಲೆ ತೆಂಗು, ಅಡಿಕೆಗಳಿಂದಾಗಿ ಹೊರ ಜಗತ್ತಿಗೆ ಪರಿಚಯವಾಗಿದೆ. ಧಾರ್ಮಿಕ ಇತಿಹಾಸದಲ್ಲಿ ತನ್ನದೇ ಆದ ಪರಂಪರೆಯನ್ನು ಹೊಂದಿರುವ ಈ ಜಿಲ್ಲೆ ಶಾಂತಿ, ಸೌಹಾರ್ದಗಳಿಗೆ ಹೆಸರಾಗಿದೆ. ಹದವಾದ ಮಳೆ, ಮಿದುವಾದ ಮಣ್ಣು ಹೊಂದಿರುವ ಈ ಜಿಲ್ಲೆ ವೇಗವಾಗಿ ಬೆಳೆಯುತ್ತಿದೆ. ಇದೇ ವೇಗದಲ್ಲಿಯೇ ಕನ್ನಡ ಭಾಷಾ ಸಾಹಿತ್ಯವೂ ಬೆಳೆಯುತ್ತಿರುವುದನ್ನು ಗಮನಿಸಿದರೆ, ಇಲ್ಲಿ ಬರಹಗಾರರಿಗೇನೂ ಕೊರತೆ ಕಾಣಿಸದು. ಇಪ್ಪತ್ತನೆಯ ಶತಮಾನದ ತುಮಕೂರು ಜಿಲ್ಲೆಯ ಸಾಹಿತ್ಯಲೋಕದ ಸ್ಥೂಲ ಪರಿಚಯ ಈ ರೀತಿಯಾಗಿದೆ.

**ಹೊಸಕೆರೆ ಚಿದಂಬರಯ್ಯ (ಕ್ರಿ.ಶ.೧೮೭೦-೧೯೩೮):** ಇವರ ಸಾಹಿತ್ಯ ಕೃಷಿಯು ಆಧ್ಯಾತ್ಮಿಕ ಕ್ಷೇತ್ರಕ್ಕೆ ಸಂಬಂಧಿಸಿದ್ದಾಗಿದೆ. ಪ್ರಮುಖವಾದವೆಂದರೆ ೧. ಭಗವದ್ಗೀತಾಸಾರ ವಿಚಾರ ೨. ವೇದಾಂತದ ರೂಪುರೇಖೆ ೩. ನೀತಿಗಳ ನೆಲೆಗಟ್ಟು ೪.ಗೀತೆಯ ಕೈಗನ್ನಡಿ ೫.ಜೀವನ್ಮುಕ್ತಿ ೬. ಶ್ರೀರಾಮಮಹಿಮೆ ಹಾಗೂ ೭. ಭರತಖಂಡದ ಜೀವಜ್ಯೋತಿಗಳು. ಕೀರ್ತನೆಗೆ ಸಂಬಂಧಪಟ್ಟ ಕೃತಿಗಳು ೧. ಕೀರ್ತನ ಕಂಠಾಭರಣ ೨. ಹರಿಕಥಾಮೃತಸಾರ ವ್ಯಾಖ್ಯಾನ ೩. ಮಹಲಿಂಗರಂಗನ ಅನುಭವಾಮೃತಕ್ಕೆ ವ್ಯಾಖ್ಯಾನ ಇತ್ಯಾದಿ ಹೆಸರಿಸಬಹುದು. ಕ್ರಿ.ಶ.೧೮೭೦ರಲ್ಲಿ ಗುಬ್ಬಿ ತಾಲೂಕಿನ ಹೊಸಕೆರೆಯಲ್ಲಿ ಜನಿಸಿದ ಇವರು ಪ್ರಾರಂಭದಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿ, ನಡುವೆ ರಾಜೀನಾಮೆ ನೀಡಿ ಆಧ್ಯಾತ್ಮಮುಖಿಯಾಗಿ, ಧಾರವಾಡದ ರಾಷ್ಟ್ರೀಯ ಶಿಕ್ಷಣ ಸಮಿತಿಯಲ್ಲಿ ಶಿಕ್ಷಕರಾಗಿ ಸೇರಿ ಗದ್ಯ, ಪದ್ಯ, ನಾಟಕ, ಟೀಕೆ ಮೊದಲಾದ ಎಲ್ಲಾ ಪ್ರಾಕಾರಗಳಲ್ಲಿಯೂ ಕೃತಿ ರಚಿಸಿ ಉಪಾಧ್ಯಾಯ ವೃತ್ತಿಗೆ ಮಾರ್ಗದರ್ಶನವೆಂಬಂತೆ ತಮ್ಮ ಅನುಭವ ಮೂಸೆಯಲ್ಲಿ ಕಂಡು ಬಂದ ಅಂಶಗಳನ್ನು ತಿಳಿವಳಿಕೆ ರೂಪದಲ್ಲಿ ವಿವರಿಸಿದ್ದಾರೆ. ಅದರಲ್ಲಿ ಮನೋಶಿಕ್ಷಣ, ಬೋಧನಾ ಸ್ವಭಾವ, ಉಪಾಧ್ಯಾಯರ ಯೋಗ್ಯತೆಗಳು, ಗಣೀತಾಬ್ಜ ಭಾಸ್ಕರ ಎಂಬ ಕೃತಿಗಳು ಗಮನ ಸೆಳೆಯುತ್ತವೆ. ಇವರು ರಚಿಸಿದ 'ಆರ್ಯಧರ್ಮ ಪ್ರದೀಪ' ಶ್ರೇಷ್ಠ

ಗ್ರಂಥವೆನಿಸಿದ್ದು, ೫೫೦ ಪುಟಗಳಲ್ಲಿ ಜಗತ್ತು, ದೇವರು, ವಿದ್ಯಾರ್ಥಿ, ವೃತ್ತಿಧರ್ಮ, ಅವತಾರ, ಜನ್ಮಾಂತರ, ಕರ್ಮಯೋಗ, ರಾಜಯೋಗ, ಭಕ್ತಿಯೋಗ, ಜ್ಞಾನಯೋಗ ಮುಂತಾದವುಗಳನ್ನು ಅನೇಕ ಕಥೆ, ಉದಾಹರಣೆಗಳೊಂದಿಗೆ ವಿವರಿಸಲಾಗಿದೆ. ಮರಾಠಿ ಭಾಷೆಯ ಮನಾಚೀ ಶ್ಲೋಕ ಎಂಬುದನ್ನು ಕನ್ನಡದಲ್ಲಿ ‘ಮನಸ್ಸಿಗುಪದೇಶ’ ಎಂಬುದಾಗಿ ಹೊರತಂದಿದ್ದಾರೆ. ೧೯೨೯ರಲ್ಲಿ ‘ಗೀತಾರ್ಥ ಚಂದ್ರಿಕೆ’ಯನ್ನು ಪ್ರಕಟಿಸಿದ್ದು, ಮರಾಠಿಯ ಸಾಕಿ, ದಿಂಡಿ, ಛಂದಸ್ಸು ಇತ್ಯಾದಿಗಳನ್ನು ಕನ್ನಡಕ್ಕೆ ತಂದಿದ್ದಾರೆ. ಇವರು ತಮ್ಮ ಕೊನೆಯ ದಿನಗಳನ್ನು ತಿರುಮಕೂಡಲು ನರಸೀಪುರದ ಬಳಿ ನದೀತೀರದಲ್ಲಿ ಕಳೆದು ೧೩–೦೪–೧೯೩೮ರಲ್ಲಿ ದೈವಾಧೀನರಾದರು.

**ಬಿ.ಎಂ.ಶ್ರೀಕಂಠಯ್ಯ(೦೩.೦೧.೧೮೮೪–೫.೧.೧೯೪೭):** ಕನ್ನಡದ ಕಣ್ವ, ಬಿ.ಎಂ.ಶ್ರೀ ಎಂದೆಲ್ಲಾ ಕರೆಯಲಾಗುವ ಬೆಳ್ಳೂರು ಮೈಲಾರಯ್ಯ ಶ್ರೀಕಂಠಯ್ಯ ತುರುವೇಕೆರೆ ತಾಲೂಕು ಸಂಪಿಗೆ ಗ್ರಾಮದಲ್ಲಿ ಜನಿಸಿದರು. ತಾಯಿ ಭಾಗೀರಥಮ್ಮ. ೧೯೦೯ರಲ್ಲಿ ಇಂಗ್ಲೀಷ್ ಎಂ.ಎ. ಮಾಡಿ, ‘ದಿ ಹ್ಯಾಂಡ್ ಬುಕ್ ಆಫ್ ರಿಟಾರಿಕ್’ (“The Handbook of Rhetoric”) ಎಂಬ ಚಿಕ್ಕ ಪುಸ್ತಕವನ್ನು ವಿದ್ಯಾರ್ಥಿಗಳಿಗಾಗಿ ರಚಿಸುವ ಮೂಲಕ ಬರಹಗಾರಿಕೆಗೆ ತೊಡಗಿದರು. ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗಳಲ್ಲಿಯೂ ಪರಿಣಿತರಾಗಿದ್ದರು. ಇವರ, ಇಂಗ್ಲೀಷ್ ಗೀತೆಗಳು ಕೃತಿ ಹೊಸಗನ್ನಡ ಕಾವ್ಯಕ್ಷೇತ್ರದಲ್ಲಿ ಅರುಣೋದಯವೆನಿಸಿತು. ವಿಭಿನ್ನ ದೃಷ್ಟಿಕೋನದಿಂದ ಸಾಹಿತ್ಯವನ್ನು ನೋಡುವ ಪರಿಕ್ರಮ ಪ್ರಾರಂಭವಾಯಿತು. ಗದಾಯುದ್ಧ ನಾಟಕಂ, ಸೋಪೋಕ್ಲೀಸನ ರುದ್ರನಾಟಕ ‘ಏಜಾಕ್ಸ್ ಆಧರಿಸಿ ಅಶ್ವತ್ಥಾಮನ್, ಈಸ್ಕಿಲಸ್, ಹೊಂಗನಸು ಮತ್ತು ಪಾರಸಿಕರು ಮುಂತಾದ ಕೃತಿಗಳು ರಚಿಸಲ್ಪಟ್ಟವು. ೧೯೨೮ರಲ್ಲಿ ಕಲಬುರ್ಗಿಯಲ್ಲಿ ನಡೆದ ೧೪ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸಮ್ಮೇಳನಾಧ್ಯಕ್ಷರಾಗಿ ಆಯ್ಕೆಯಾಗಿದ್ದರು. ೧೯೩೮ರಲ್ಲಿ ಮೈಸೂರು ಮಹಾರಾಜರು ರಾಜ ಸೇವಾಸಕ್ತ ಎಂಬ ಬಿರುದು ನೀಡಿ ಗೌರವಿಸಿದರು. ೧೯೩೮–೧೯೪೨ರವರೆಗೆ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಉಪಾಧ್ಯಕ್ಷರಾಗಿದ್ದರು. ೧೯೪೧ರಲ್ಲಿ ‘ಸಂಭಾವನೆಎನ್ನುವ ಅಭಿನಂದನಾ ಗ್ರಂಥ ಅರ್ಪಿತವಾಯಿತು. ೧೯೪೭ರ ಜನವರಿ ಐದರಂದು ಕನ್ನಡಿಗರಿಂದ ಮರೆಯಾದರು.

**ಬಿ.ಶಿವಮೂರ್ತಿಶಾಸ್ತ್ರಿ (೨೩.೨.೧೯೦೩–೧೫.೧.೧೯೭೬):** ತುಮಕೂರಿನ ಇವರು ಸಾಹಿತ್ಯ ಸಂಗೀತಗಳ ಸಂಸರ್ಗದಲ್ಲಿ ಬೆಳೆದವರು. ತಂದೆ ಪುರಾಣಿಕ ಬಸವಯ್ಯಸ್ವಾಮಿ, ತಾಯಿ ನೀಲಮ್ಮ. ಶಾಸ್ತ್ರಿಯವರು ಗುಬ್ಬಿಯಲ್ಲಿ ಉಪಾಧ್ಯಾಯ ವೃತ್ತಿ ಪ್ರಾರಂಭಿಸಿದರು. ಮುಂದೆ ಅದನ್ನು ತ್ಯಜಿಸಿ ಮೈಸೂರು ಆಸ್ಥಾನ ವಿದ್ವಾಂಸರಾದ ಪಿ.ಆರ್.ಕರಿಬಸವಶಾಸ್ತ್ರಿಗಳ ಬಳಿ ಅಧ್ಯಯನ ಮಾಡಿದರು. ೧೯೨೭ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರು ಬಂದಾಗ ಒಂದು ಪುಟ್ಟ ಚಂಪು ಕಾವ್ಯ ರಚಿಸಿ ಅರಸರ ಕೃಪೆಗೆ ಪಾತ್ರರಾಗಿ ಆಸ್ಥಾನ ವಿದ್ವಾಂಸರೂ ಆದರು. ಹಿಂದಿ, ಇಂಗ್ಲೀಷ್, ತೆಲುಗು, ತಮಿಳು ಭಾಷೆಗಳ ಜ್ಞಾನವಿದ್ದು ಸಂಸ್ಕೃತದಲ್ಲಿ ವಿದ್ವಾಂಸರೆನಿಸಿದ್ದರು. ೧೯೪೮ರಲ್ಲಿ ಪಂಡಿತ ರತ್ನಂ ಎಂಬ ಪ್ರಶಸ್ತಿ ಪಡೆದರು. ಭಾರತ ಸ್ವಾತಂತ್ರ್ಯ ಹಾಗೂ ಏಕೀಕರಣ ಚಳವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದು ಕೀರ್ತನೆಗಳ ಮೂಲಕ ಜನಜಾಗೃತಿ ಮೂಡಿಸಿದರು. ಇವರು ೧೯೩೭ರಲ್ಲಿ ಪತ್ರಿಕೆಯೊಂದನ್ನು ಪ್ರಾರಂಭ ಮಾಡಿದ್ದು ೧೯೭೩ರವರೆಗೂ ಪ್ರಕಟವಾಗುತ್ತಿತ್ತು. ಸ್ವತಂತ್ರ ಕರ್ನಾಟಕ ಎಂಬ ವಾರಪತ್ರಿಕೆಯನ್ನು (೧೯೩೯–೪೨) ಸಹ ಹೊರತಂದಿದ್ದರು. ೧೯೫೬–೧೯೬೪ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಧಾರೇಶ ಚರಿತೆ, ಪುರಾತತ್ವ ತ್ರಿವಿಧಿ, ಷಡಕ್ಷರ ಮಂತ್ರ ಮಹಿಮೆ, ಮಾದೇಶ್ವರ ಸಾಂಗತ್ಯ, ವೀರಶೈವ ಸಾಹಿತ್ಯ, ಇತಿಹಾಸ, ಕರ್ನಾಟಕ ಸಂದರ್ಶನ ಮುಂತಾದವು ಇವರ ಕೃತಿಗಳು. ಖ್ಯಾತ ಕವಿ ಹೆಚ್.ಎಸ್. ಶಿವಪ್ರಕಾಶ್ ಇವರ ಪುತ್ರ.

**ಕ.ವೆಂ.ರಾಘವಾಚಾರ್:** (೧೯೦೪–೧೯೭೭) ಕಡಬಾದ ಇವರು ಅಧ್ಯಾಪಕರಾಗಿ, ಮೈಸೂರು ವಿಶ್ವವಿದ್ಯಾನಿಲಯದ ನಿಘಂಟು ವಿಭಾಗ, ದೆಹಲಿ ವಿಶ್ವವಿದ್ಯಾನಿಲಯಗಳಲ್ಲಿ ಕೆಲಸ ಮಾಡಿದ್ದಾರೆ. ಗ್ರೀಕ್ ಪಾಂಡಿತ್ಯ ಪಡೆದು ನಾಟಕಗಳನ್ನು ಕನ್ನಡಕ್ಕೆ ತಂದರು. ಕನ್ನಡ ಭಾಷಾ ಏಳಿಗೆಗೆ ಅಹರ್ನಿಶಿ ದುಡಿದಿದ್ದಾರೆ.

**ಡಿ.ಎಲ್.ನರಸಿಂಹಾಚಾರ್(೨೭.೧೦.೧೯೦೬–೮.೫.೧೯೭೧):** ತುಮಕೂರುಜಿಲ್ಲೆ ಕ್ಯನಾಯಕನಹಳ್ಳಿಯಲ್ಲಿ ೨೭–೧೦–೧೯೦೬ರಲ್ಲಿ ಜನಿಸಿದರು. ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಕನ್ನಡದಲ್ಲಿ ಹೆಚ್ಚು ಅಂಕ ಪಡೆದು ಚಿನ್ನದ ಪದಕ ಮತ್ತು ಬಹುಮಾನ ಗಳಿಸಿಕೊಂಡವರು. ವೀರಶೈವ ಸಾಹಿತ್ಯದ ಆರಂಭಕಾಲ ಕುರಿತು ಸಂಶೋಧನೆ ಕೈಗೊಂಡರು.

೧೯೩೦ರಲ್ಲಿ ಪ್ರಾಚ್ಯ ವಿದ್ಯಾ ಸಂಶೋಧನಾ ಸಂಸ್ಥೆಯಲ್ಲಿ ರೆಸಿಡೆಂಟ್ ಕನ್ನಡ ಪಂಡಿತರಾಗಿ, ನಂತರ ಮೈಸೂರು, ಬೆಂಗಳೂರು ವಿಶ್ವವಿದ್ಯಾನಿಲಯಗಳಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಕನ್ನಡ–ಕನ್ನಡ ನಿಘಂಟಿನ ಪ್ರಧಾನ ಸಂಪಾದಕರಾದರು. ಕನ್ನಡ–ಇಂಗ್ಲೀಷ್ ಎರಡೂ ಭಾಷೆಗಳಲ್ಲಿ ನೂರಾರು ಸಂಶೋಧನಾ ಲೇಖನ ರಚಿಸಿದ್ದಾರೆ.

**ಮಾ.ನಾ.ಚೌಡಪ್ಪ(೧೯೦೯–೧೯೮೫):** ತುರುವೇಕೆರೆ ತಾಲೂಕು ಮಾಯಸಂದ್ರ ಗ್ರಾಮದವರು. ವಿದ್ಯಾರ್ಥಿದೆಸೆಯಲ್ಲಿಯೇ ದೇಶಪ್ರೇಮ ಬೆಳೆಸಿಕೊಂಡು ರಾಮಕೃಷ್ಣಾಶ್ರಮದ ಸಂಪರ್ಕದಿಂದ ಸಾಹಿತ್ಯ, ಸಂಸ್ಕೃತಿ, ಆಧ್ಯಾತ್ಮದತ್ತ ಒಲವು ಬೆಳೆಸಿಕೊಂಡರು. ಅ.ನ.ಕೃ ಒಡನಾಟದಲ್ಲಿ ಪತ್ರಿಕೋದ್ಯಮಕ್ಕೆ ಧುಮುಕಿದರು. 'ಕಥಾಂಜಲಿ' ಮಾಸಪತ್ರಿಕೆಯ ಸಹಾಯಕ ಸಂಪಾದಕರಾಗಿ, 'ಪ್ರಜಾಮತವಾರಪತ್ರಿಕೆಯಲ್ಲಿ ಕೆಲಸ ಮಾಡಿದ್ದಲ್ಲದೇ, ಬಾನುಲಿಯಲ್ಲಿಯೂ ಕಾರ್ಯ ನಿರ್ವಹಿಸಿದರು. ಗಾಂಧೀಜಿಯವರು ಹರಿಜನ ಪತ್ರಿಕೆಯಲ್ಲಿ ಬರೆಯುತ್ತಿದ್ದ ಲೇಖನಗಳನ್ನು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಿದ್ದರು. ಅನೇಕ ರೇಡಿಯೋ ನಾಟಕ ಬರೆದು ಜನಜಾಗೃತಿ ಮೂಡಿಸಲು ಅಪಾರ ಶ್ರಮವಹಿಸಿದ್ದರು. ಗಡೀಪಾರು ಮಾಡಿದರೂ ಗಡಿಯಿಂದಾಚೆನಿಂದಲೇ ಪತ್ರಿಕೆ ಪ್ರಕಟಿಸುತ್ತಿದ್ದರು. ನಾಟಕ, ಚಲನಚಿತ್ರರಂಗಕ್ಕೆ ಮೀಸಲಾದ 'ವಾಕ್ಚಿತ್ರ ಪತ್ರಿಕೆಯನ್ನು ಒಂದು ದಶಕದವರೆಗೆ ನಡೆಸಿದರು. ಇವರ 'ಕುಂತಿ' ಎಂಬ ಪೌರಾಣಿಕ ನಾಟಕ ಹೈಸ್ಕೂಲಿಗೆ ಪಠ್ಯವಾಗಿದ್ದಿತು. ಶ್ರೀ ಕೃಷ್ಣ ಭೂಪಾಲ ಕಾದಂಬರಿಗೆ ೧೯೫೮ರಲ್ಲಿ ರಾಜ್ಯ ಸರ್ಕಾರದ ಪ್ರಶಸ್ತಿ ದೊರಕಿದೆ. ಚಂದ್ರಗುಪ್ತ, ತಾರಾಮಂಡಲ, ಕುಮಾರಸಂಭವ ಮುಂತಾದ ನಾಟಕಗಳು; ಭಾರತ–ಭಾರತಿ ಪುಸ್ತಕಮಾಲೆಯಲ್ಲಿ ವಿಧುರ, ಪಿ.ಕೋದಂಡರಾವ್, ಕೆ.ಶೇಷಾದ್ರಿ ಅಯ್ಯರ್ ಮೊದಲಾದ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. 'ರಂಗಕಲಾವಿದರು' ಎಂಬ ಹವ್ಯಾಸಿ ರಂಗತಂಡವನ್ನು ಬೆಂಗಳೂರಿನಲ್ಲಿ ಕಟ್ಟಿ ಬೆಳೆಸಿದರು. ಕಿರಿಯರ ವಿಶ್ವಕೋಶ ಹಾಗೂ 'ಜ್ಞಾನಗಂಗೋತ್ರಿ'ಯ ಸಾಹಿತ್ಯ ಸಂಪುಟಗಳ ಸಂಪಾದಕರಾಗಿ ಸೇವೆ ಸಲ್ಲಿಸಿದ್ದರು.

**ಕೆ.ವೆಂಕಟರಾಮಪ್ಪ:** ಪಾವಗಡ ತಾಲೂಕು ಕೋಟಗುಡ್ಡದಲ್ಲಿ ಜನಿಸಿ ಮೈಸೂರಿನಲ್ಲಿ ಉನ್ನತ ಶಿಕ್ಷಣ ಪಡೆದು ೧೯೩೦ರಲ್ಲಿ ಕಾಲೇಜು ಅಧ್ಯಾಪಕರಾಗಿ ಸೇವೆ ಪ್ರಾರಂಭಿಸಿದರು. ನಿವೃತ್ತರಾದ ನಂತರವೂ ಶಾರದಾ ವಿಲಾಸ ಕಾಲೇಜಿನಲ್ಲಿ ಸೇವೆ ಸಲ್ಲಿಸಿದ್ದಲ್ಲದೇ, ಯುಜಿಸಿ ರಿಸರ್ಚ್ ಅವಾರ್ಡ್ ಪಡೆದು ಸಂಶೋಧನೆ ಮಾಡಿ 'ಕೃಷ್ಣದೇವರಾಯನ ಆಸ್ಥಾನದ ಕನ್ನಡ–ತೆಲುಗು ಕವಿಗಳು–ಅವರ ಕೃತಿ ಸಮೀಕ್ಷೆ, ಮತ್ತು ಕುಮಾರವ್ಯಾಸನ ವ್ಯಾಕರಣಾಂಶಗಳು ಎಂಬ ಕೃತಿಗಳನ್ನು ರಚಿಸಿದ್ದಾರೆ. ಇವಲ್ಲದೇ ಕನ್ನಡ ಸಾಹಿತ್ಯ ಚರಿತ್ರೆ, ತೆಲುಗು ಚಾಟು ಪದ್ಯಗಳು, ಶ್ರೀನಾಥ, ವೇಮನ, ಶ್ರೀ ಪುರಂದರದಾಸ, ಪಂಪ–ನನ್ನಯ್ಯ, ಸಮೀಕ್ಷೆ, ರಾಘವಾಂಕ, ಕಾವ್ಯಮಂಥನ (ವಿಮರ್ಶೆ) ಹಾಗೂ ಪ್ಲೇಟೋನ ಆದರ್ಶ ರಾಜ್ಯ, ಇಂಗ್ಲೀಷ್ ನಾಟಕ ಕಥೆಗಳು, ರುದ್ರಮಾದೇವಿ, ಹರವಿಲಾಸ ಎಂಬ ಅನುವಾದಿತ ಕೃತಿಗಳು, ಪಂಚತಂತ್ರದ ಕಥೆಗಳು, ಗಣೇಶನ ಮದುವೆ ಮುಂತಾದ ಶಿಶುಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ. ೧೯೮೦ರಲ್ಲಿ ತಿಪಟೂರಿನಲ್ಲಿ ನಡೆದ ಎರಡನೇ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

**ಕಾಶಿ ವಿಶ್ವನಾಥಶೆಟ್ಟಿ:** ಇವರು ನಾಟಕ ಕಾವ್ಯ ಮುಂತಾದ ಪ್ರಕಾರಗಳಲ್ಲಿ ಕೃತಿ ರಚನೆ ಮಾಡಿದ್ದಾರೆ. ಮಾವುಮಲ್ಲಿಗೆ, ಗೃಹದೇವತೆ, ಧರ್ಮನಂದನ, ಸೀತಕ್ಕನ ಸವತಿ, ಸಮಾಗಮ ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಅಲ್ಲದೆ, ಚರಿತಾಮೃತ ಮಹಾ ಮಧು ಬುದ್ಧ ಮಹಾಕಾವ್ಯವನ್ನೂ ರಚಿಸಿದ್ದಾರೆ.

**ಮೈಸೂರು ಶಿವಾನಂದ್**: ಇವರು ಸಮ್ಮುಖ ರಂಗ ಸಂಪನ್ಮೂಲ ಕೇಂದ್ರದ ಅಧ್ಯಕ್ಷರಾಗಿದ್ದರು. ಇವರು ನಮಗೂ ಬದ್ಕಕೆ ಬಿಡಿ, ಗ್ರಹಣ, ಲಕ್ಷ್ಮಣರೇಖೆ ಮತ್ತು ಮಡಿವಾಳ ಮಾಚಿದೇವ ನಾಟಕಗಳನ್ನು ರಚಿಸಿದ್ದು, 'ಇವರ ಗಿಳಿಯ ಸಾವಿನ ಸುತ್ತ ಕವನ ಸಂಕಲನ ಪ್ರಕಟವಾಗಿದೆ.

**ನಿಟ್ಟೂರು ಶ್ರೀನಿವಾಸರಾವ್**: ಗುಬ್ಬಿ ತಾಲೂಕು ನಿಟ್ಟೂರು ಗ್ರಾಮದವರು. ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿಯೂ, ಕರ್ನಾಟಕದಲ್ಲಿ ಸ್ವಲ್ಪ ಕಾಲ ರಾಜ್ಯಪಾಲರಾಗಿಯೂ ಸೇವೆ ಸಲ್ಲಿಸಿದ್ದರು. ೧೯೭೭ರಲ್ಲಿ ರಾಜ್ಯ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿ ನೀಡಿದೆ. ತುಮಕೂರು ಜಿಲ್ಲಾ ಐದನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿದ್ದರು.

**ಕಡಬಾ ದೊರೆಸ್ವಾಮಿ ಅಯ್ಯಂಗಾರ್**: ಬಹುಭಾಷಾ ಪಂಡಿತರೆಂದು ಕರೆಸಿಕೊಂಡಿದ್ದ ಇವರು ಆಂಗ್ಲ, ಸಂಸ್ಕೃತವನ್ನು ಆಳವಾಗಿ ಅಧ್ಯಯನ ಮಾಡಿದ ವಿಚಾರವಂತರಾಗಿದ್ದರು. ಸಂಗೀತ, ಕೃಷಿ, ಯೋಗಾಭ್ಯಾಸದಲ್ಲಿ ಪರಿಣಿತಿ ಪಡೆದಿದ್ದರು.

೫ನೇ ಚಕ್ರವರ್ತಿ ಸಾರ್ವಭೌಮ ಎಂಬ ಇವರ ಕೃತಿ ಲೋಯರ್ ಸೆಕೆಂಡರಿ ತರಗತಿಗೆ ಪಠ್ಯವಾಗಿತ್ತು. ದೀನಬಂಧು ಸಿ.ಎಸ್. ಅಂಡರ್ಸನ್ ಜೀವನ ಚರಿತ್ರೆ ಎಸ್.ಎಸ್.ಎಲ್.ಸಿಗೂ, ರಾಜಾರಾಮ ಮೋಹನರಾಯರ ಜೀವನ ಚರಿತ್ರೆಯು ಮುಂಬಯಿ ವಿಶ್ವವಿದ್ಯಾನಿಲಯದಲ್ಲಿಯೂ ಪಠ್ಯವಾಗಿತ್ತು. ಅನೇಕ ಶಾಲಾ ಕಾಲೇಜುಗಳಲ್ಲಿ ಬೋಧಕರಾಗಿ ದುಡಿದಿರುವರು. ರಾಮಾಯಣವನ್ನು ಯಥಾವತ್ತಾಗಿ ಪದ್ಯರೂಪಕ್ಕೆ ಮೊದಲು ಭಾಷಾಂತರಿಸಿದವರು ಇವರು.

**ಎಂ.ಎನ್.ಕೋಟೆ ನಾಗಭೂಷಣ:** ಸ್ವಾತಂತ್ರ್ಯ ಹೋರಾಟಗಾರ ಎಂ.ಎಸ್.ಹನುಮಂತರಾವ್ ಕುರಿತಂತೆ 'ನೆನಪಿನ ಯಾನ' ಕೃತಿ ಹಾಗೂ ಇನ್ನಿತರೆ ಕೃತಿಗಳು ಪ್ರಕಟವಾಗಿವೆ. ಪತ್ರಕರ್ತ, ಲೇಖಕ, ಮಾನವ ಹಕ್ಕುಗಳ ಹೋರಾಟಗಾರ, ಜನಪದ ಚಿಂತಕ, ನಾಟಕ, ಸಾಹಿತ್ಯ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಕ್ರಿಯಾಶೀಲರಾಗಿದ್ದರು.

**ಟಿ. ಎನ್.ಮಹದೇವಯ್ಯ(೧೯೧೪-೧೯೬೧):** ಬಹುಮುಖ ಪ್ರತಿಭೆಯುಳ್ಳ ಟಿ.ಎನ್.ಮಹದೇವಯ್ಯ ಕಂದಾಯ ಇಲಾಖೆಯಲ್ಲಿದ್ದು ಅಪಾರ ಸಾಹಿತ್ಯ ರಚನೆ ಮಾಡಿದ್ದಾರೆ. ಕಡಲ ಸೇಡು, ತೋಟದ ಮನೆ, ಪುರ್ಣಿಮಾ, ರೋಸಿನ ಎಂಬ ನಾಲ್ಕು ಕಾದಂಬರಿಗಳನ್ನೂ, ವೀಣಾ, ಹಂಪೆಯ ಕನಸು, ಭಾಷ್ಪಾಂಜಲಿ, ಪುಷ್ಪಾಂಜಲಿ ಎಂಬ ಕವನ ಸಂಕಲನಗಳನ್ನೂ ಶುಭಶಕುನ, ಮಮತಾ ಮೊದಲಾದ ಹತ್ತು ಕಥಾ ಸಂಕಲನಗಳನ್ನು ಕ್ರಾಂತಿಯ ದೀಪ, ಆರ್ಕಿಮಿಡೀಸ್, ವಿಜಯಶ್ರೀ, ಮೇವಾಡಪಥನ ಮೊದಲಾದ ಮೂವತ್ತೆರಡು ನಾಟಕಗಳನ್ನು, ಒಂಬತ್ತು ರೇಡಿಯೋ ಏಕಾಂಕ ನಾಟಕ, ಕಡಲ ಕಡೆಗೆ, ಕಲ್ಹತ್ತ ಗಿರಿ ಎಂಬ ಪ್ರವಾಸ ಕಥನ, ಕೃಷ್ಣದೇವರಾಯ, ಅಕ್ಕಮಹಾದೇವಿ, ಕನ್ಫ್ಯೂಷಿಯಸ್ ಎಂಬ ಜೀವನ ಚರಿತ್ರೆಗಳನ್ನು ರಚಿಸಿದ್ದಾರೆ. ಇವರ ಅನೇಕ ಕೃತಿಗಳು ತೆಲುಗು, ಹಿಂದಿ, ಉರ್ದು, ಇಂಗ್ಲೀಷ್ ಭಾಷೆಗಳಿಗೆ ಅನುವಾದಗೊಂಡಿವೆ.

**ನೀಲತ್ತಹಳ್ಳಿ ಕಸ್ತೂರಿ:** ಕುಣಿಗಲ್ ತಾಲೂಕು ನೀಲತ್ತಹಳ್ಳಿಯಲ್ಲಿ ೧೯೩೧ರಲ್ಲಿ ಜನಿಸಿದ ಇವರು ಅಂಚೆ ಇಲಾಖೆಯಲ್ಲಿ ಸೇವೆ ಸಲ್ಲಿಸಿದ್ದರು. ಅಖಂಡ ಗಾಂಧಿವಾದಿಗಳಾಗಿದ್ದರು. ಗಾಂಧಿ ಸಾಹಿತ್ಯವನ್ನು ಅನುವಾದಿಸಿ ಪ್ರಕಟಿಸಿದ್ದರು. ಗಾಂಧಿ ಸಾಹಿತ್ಯ, ಮಕ್ಕಳ ಸಾಹಿತ್ಯ, ಸರ್ವೋದಯ, ಗಮಕ, ಗಣೇಶವಂದನಂ, (ಗಮಕ ರೂಪಕ) ಮುಂತಾದವಲ್ಲದೇ ೩೦ಕ್ಕೂ ಹೆಚ್ಚು ಕೃತಿಗಳು ಪ್ರಕಟವಾಗಿವೆ. ಸಿದ್ದವನಹಳ್ಳಿ ಕೃಷ್ಣಶರ್ಮರ ಕಟ್ಟ ಅನುಯಾಯಿ ಜಿ.ಪಿ.ರಾಜರತ್ನಂ ಕುರಿತು 'ಆರದ ಬೆಳಕು ಎಂಬ ಕೃತಿಯನ್ನು ಪ್ರಕಟಿಸಿದ್ದಾರೆ. ಕೃಷ್ಣಶರ್ಮರ ಬಗ್ಗೆ ಬರೆದಿರುವ ಪುಸ್ತಕಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

**ಆರ್.ಬಸವರಾಜು: (೧೯೩೦-೨೦೧೨)**: ತಿಪಟೂರು ತಾಲೂಕು ಈಡೇನಹಳ್ಳಿ ಗ್ರಾಮದಲ್ಲಿ ಜನಿಸಿದ ಇವರು ವೃತ್ತಿಯಲ್ಲಿ ಶಿಕ್ಷಕರಾಗಿ, ಉಪನ್ಯಾಸಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರು. ರಂಗಕಲಾವಿದರಾಗಿದ್ದ ಇವರು ಕಿರಿಯರಿಗೆ ಸಾಹಿತ್ಯ ಚರಿತ್ರೆ, ಈಸೂರಿನ ಚಿರಂಜೀವಿಗಳು, ಮದಲಿಂಗನ ಕಣಿವೆ, ಅನುರಾಗದ ಸುಳಿಯಲ್ಲಿ, ಆತ್ಮಾಹುತಿ, ಪಥಭ್ರಾಂತರು, ತಿಪಟೂರು ತಾಲೂಕು ದರ್ಶನ, ರಾಬಿನ್ಹುಡ್ ಸಾಹಸಗಳು, ಹರಿಹರನ ಕಾಲದ ಸಾಹಿತ್ಯ, ಲವಕುಶ ನಾಟಕ, ಹೀಗೊಬ್ಬ ಕಲಾ ಸಾಮ್ರಾಟ್, ಮೂವರು ಬಂದೂಕುಧಾರಿಗಳು, ಒಂದು ಕಪ್ಪುಕುದುರೆಯ ಆತ್ಮಕಥೆ, ಕಾದಂಬರಿ, ಮಕ್ಕಳ ಸಾಹಿತ್ಯ ಮುಂತಾದ ಇನ್ನಿತರೆ ಪ್ರಕಾರಗಳಲ್ಲಿ ೧೦೦ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ತಂತ್ರಗಾರಿಕೆ ಆಧರಿಸಿದ ಮೋಡಿ ಮಾಟ, ಅದ್ಭುತ ಮಾಯಾಜಾಲ ಎಂಬ ಕೃತಿಯನ್ನು ಕೂಡ ಪ್ರಕಟಿಸಿದ್ದಾರೆ. ಚಿಕ್ಕನಾಯಕನಹಳ್ಳಿ ತಾಲೂಕು ಎರಡನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ತಾಲೂಕು, ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ಅಖಿಲಭಾರತ ಸಾಹಿತ್ಯ ಸಮ್ಮೇಳನಗಳಲ್ಲದೇ ಅನೇಕ ಸಂಘ ಸಂಸ್ಥೆಗಳೂ ಸನ್ಮಾನಿಸಿ, ಗೌರವಿಸಿವೆ.

**ವೀ. ಚಿಕ್ಕವೀರಯ್ಯ:** ವೀಚಿ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಇವರು, ಪ್ರಣಯ ಚೈತ್ರ, ವಿಷಾದ ನಕ್ಷೆ, ಸಂಕರ ತಳಿ, ನವಿಲಮನೆ, ಅಭಿನಯದ ಬಯಲು, ನಿತ್ಯ ಮದುವಣಗಿತ್ತಿ, ಬಂತೆಂದರೂ ಇದ್ದೇ ಇತ್ತು ಎಂಬ ಕವನ ಸಂಕಲನಗಳನ್ನು ಹೊರತಂದಿದ್ದು, "ಸಿದ್ಧರ ಬೆಟ್ಟ ದರ್ಶನ" ಕ್ಷೇತ್ರ ದರ್ಶನ ಕೃತಿ, ಇವರು ನನ್ನವರು, ನೆಚ್ಚಿನವರು, ಇಷ್ಟಮಿತ್ರ, ಗದ್ಯ ಕೃತಿಗಳು. "ನಾಲ್ಕು ಶ್ರೇಷ್ಠ ಸತ್ಯಗಳು" ಎನ್ನುವ ಕೃತಿಯನ್ನು ಕೆ.ಬಿ.ಸಿದ್ದಯ್ಯನವರ ಜೊತೆಯಲ್ಲಿ ಇಂಗ್ಲೀಷಿನಿಂದ ಕನ್ನಡಕ್ಕೆ ಅನುವಾದಿಸಿದ್ದರು. ೧೯೯೫ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ. ೧೯೯೩ರಲ್ಲಿ ತುಮಕೂರು ತಾಲೂಕು, ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಹಣ್ಣು ಮೆಟ್ಟಿದ ಅವರೆ ಎಂಬ ಅಭಿನಂದನಾ ಗ್ರಂಥವನ್ನು ಇವರಿಗೆ ಅರ್ಪಿತವಾಗಿದೆ. ಹಿಂದೆ ತುಮಕೂರು ನಗರಸಭಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು. ಇವರ ಹೆಸರಿನಲ್ಲಿ ಪ್ರತಿವರ್ಷ ಅತ್ಯುತ್ತಮ ಸಾಹಿತ್ಯ ಕೃತಿಗೆ ಪ್ರಶಸ್ತಿ ನೀಡಲಾಗುತ್ತಿದೆ. ಉತ್ತಮ ಕೃಷಿಕರೂ ಆಗಿದ್ದ ಇವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಲಭಿಸಿದೆ.

**ಕೆ.ಹಿರಣ್ಣಯ್ಯ:** ಜಿಲ್ಲೆಯ ತುರುವೇಕೆರೆ ಬಳಿಯ ಕಣತ್ತೂರು ಇವರ ಪೂರ್ವಿಕರ ಊರು. ಇವರು ಬೆಂಗಳೂರಿನ ಶಂಕರಪುರದಲ್ಲಿ ವಾಸವಾಗಿದ್ದರು. ಹಿರಣ್ಣಯ್ಯ ಹುಟ್ಟಿದ್ದು ೧೯೦೫ ರಲ್ಲಿ. ಬಾಲ್ಯದಿಂದಲೂ ರಂಗಭೂಮಿಯತ್ತ ಒಲವನ್ನು ಹೊಂದಿದ್ದ ಇವರು ತಮ್ಮ ಮಹದಾಕಾಂಕ್ಷೆಯೊಂದನ್ನು ೧೯೪೭ರಲ್ಲಿ ಸಾಧಿಸಿಕೊಂಡರು. ಇದರಲ್ಲಿ ಗುಬ್ಬಿ ಕಂಪೆನಿಯಲ್ಲಿದ್ದ ಅಚ್ಯುತರಾಯರೂ ಇವರೊಂದಿಗೆ ಸೇರಿದ್ದರು. ಪ್ರಸಿದ್ಧ ಹಾರ್ಮೋನಿಯಂ ವಾದಕರಾದ ಪಿ. ಕೃಷ್ಣರಾಯರೂ ಇದ್ದರು. ವೃತ್ತಿ ನಾಟಕ ಸಂಸ್ಥೆಗಳವರಿಗೂ 'ಗುರು'ಗಳೆಂದೇ ಇವರು ಪರಿಚಿತರು. ಈ ಎಲ್ಲ ಮಿತ್ರರ ಶ್ರಮದ ಫಲವಾಗಿ ಹಿರಣ್ಣಯ್ಯನವರ ನಾಯಕತ್ವದಲ್ಲಿ 'ಹಿರಣ್ಣಯ್ಯ ಮಿತ್ರ ಮಂಡಳಿ ತಂಡವಾಗಿ ಜನ್ಮ ತಾಳಿತು. ದೇವದಾಸಿ, ಎಚ್ಚಮನಾಯಕ, ಕಪಿಮುಷ್ಠಿ ಮುಂತಾದ ನಾಟಕಗಳ ಕರ್ತೃವಾಗಿದ್ದ ಇವರು ಕನ್ನಡ ರಂಗಭೂಮಿಯ ಅಪೂರ್ವ ಪ್ರತಿಭೆಯಾಗಿ ಬೆಳಗಿ ಕಣ್ಮರೆಯಾದ ದಿವ್ಯ ತಾರೆ.

**ಹೆಚ್.ಜಿ.ಸಣ್ಣಗುಡ್ಡಯ್ಯ:** ತುಮಕೂರು ಸರ್ಕಾರಿ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ನಿವೃತ್ತರಾಗಿದ್ದರು. ಇವರ ಕೃತಿಗಳು, ಅಭೀಪ್ಸೆ (ಕವನ ಸಂಕಲನ), ಏಕಾಂತ ಮತ್ತು ಇತರ ಪ್ರಬಂಧಗಳು, ಹದ್ದು ಮತ್ತು ಇತರ ಪ್ರಬಂಧಗಳು, ಭಾಸನ 'ಪ್ರತಿಮಾ' ನಾಟಕವನ್ನು ಸಂಸ್ಕೃತದಿಂದ ಕಥನರೂಪವಾಗಿ ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತು ಇವರು ಸಂಪಾದಿಸಿದ 'ಪಾರಿಜಾತ' ಕವನ ಸಂಕಲನವನ್ನು ಪ್ರಕಟಿಸಿದೆ. 'ವಿಚಾರ ಸಾಹಿತ್ಯ' (ಸಂಪಾದಿತ), ರಾಜ್ಯಶಾಸ್ತ್ರ (ಅನುವಾದ), ತೀ.ನಂ.ಶ್ರೀ (ಜೀವನ ಪರಿಚಯ) ಕೃತಿಗಳು ಪ್ರಕಟವಾಗಿವೆ. 'ಅಭೀಪ್ಸೆ' ಕೃತಿಗೆ ಕರ್ನಾಟಕ ಸರ್ಕಾರದ ಪ್ರಶಸ್ತಿ ಬಂದಿದೆ (೧೯೬೨). 'ಏಕಾಂತ ಮತ್ತು ಇತರೆ ಪ್ರಬಂಧಗಳು' ಕೃತಿಗೆ ೧೯೭೨ರಲ್ಲಿ ಹಾಗೂ 'ಹದ್ದು ಮತ್ತು ಇತರೆ ಪ್ರಬಂಧಗಳು' ಕೃತಿಗೆ ೧೯೭೮ರಲ್ಲಿ ಅಕಾಡೆಮಿ ಪ್ರಶಸ್ತಿ ಸಂದಿದೆ.

**ಬಿ.ವೀರಭದ್ರಯ್ಯ:** ತುಮಕೂರಿನ ಸಿದ್ಧಗಂಗಾ ಕಾಲೇಜಿನ ನಿವೃತ್ತ ರಾಜ್ಯಶಾಸ್ತ್ರ ಪ್ರಾಧ್ಯಾಪಕರು, ಅಕಾಡೆಮಿ ಸದಸ್ಯರು ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಶಿವಧಮರು, ಅರ್ಪಣ, ಮಹಾದೇವಿ ಅಕ್ಕನವರು (ಕವನ ಸಂಕಲನ), ಗುಪ್ತ ಗಂಗಾ, ಶರಣ ಸುನೀತ, ಜ್ಯೋತಿ (ಸಂಪಾದಿತ ಕೃತಿಗಳು) ಕನ್ನಡದ ನವೋದಯದ ಮಹತ್ವದ ಕವಿಗಳಲ್ಲೊಬ್ಬರಾದ ಟಿ.ಎನ್.ಎಂ ಹೆಸರಿನಲ್ಲಿ ಗ್ರಂಥಮಾಲೆ ಸ್ಥಾಪಿಸಿ ಸುಮಾರು ೨೦ ಕೃತಿಗಳನ್ನೂ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿ ೧೧ ಕೃತಿಗಳನ್ನು ಪ್ರಕಟಿಸಿರುವರು. ಆಂಧ್ರದ ಮುಕ್ತಿಶ್ರೀ ಪ್ರಕಾಶನ, ಸಾಹಿತ್ಯ ಗೌರಿ ಪ್ರಕಾಶನ, ಸಾಹಿತ್ಯ ಪರಿಷತ್ ಪತ್ರಿಕೆ, ಸಿದ್ಧಗಂಗಾ ಮತ್ತು ವಿಶ್ವಕರ್ಮ ಪತ್ರಿಕೆಗಳಲ್ಲಿ ಸಹಸಂಪಾದಕರಾಗಿದ್ದರು. 'ಟಿ.ಎನ್.ಎಮ್' ಅವರ ಸಮಗ್ರ ಕಾವ್ಯವನ್ನೂ ಇವರು ಪ್ರಕಟಿಸಿದ್ದಾರೆ.

**ಜಿ.ವಿ.ನಾರಾಯಣಮೂರ್ತಿ:** ಗಾಂಧೀವಾದಿ, ಸಾಹಿತಿ, ಸಮಾಜ ಸೇವಾರ್ಕರ್ತರಾದ ಇವರು ಗಾಂಧೀ ಜೀವನ ಚರಿತ್ರೆಯ ಕೆಲವು ಭಾಗಗಳನ್ನು ಅನುವಾದಿಸಿದ್ದಾರೆ. ಡಾ.ಪಣಿಕರ್ ರವರ ಭಾರತೀಯ ಇತಿಹಾಸ ಸಮೀಕ್ಷೆಯನ್ನು ಡಾ.ಕೆ.ಪಿ.ಜಯಸ್ವಾಲರ ಹಿಂದೂ ಪಾಲಿಟಿ ಗ್ರಂಥವನ್ನು ಕನ್ನಡಕ್ಕೆ ತರ್ಜುಮೆ ಮಾಡಿದ್ದಾರೆ. ಇವರ 'ವಿನೋಭಾ ಜೀವನ ದರ್ಶನ' ಕೃತಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

**ಹೊ.ಗ.ಮನೋಹರ್:** ತುರುವೇಕೆರೆ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು, ಶಿಕ್ಷಕರು. ಕನ್ನಡ ಸಾಹಿತ್ಯ ಮತ್ತು ಧರ್ಮ, ಕ್ರಾಂತಿಯ ಕಿಡಿಗಳು, ಗ್ರಾಮೀಣ ಕ್ರೀಡೆಗಳು, ಹೊಸಚಿಗುರು ಮುಂತಾದ ಕೃತಿ ಪ್ರಕಟವಾಗಿವೆ. ಆದರ್ಶ ಶಿಕ್ಷಕ ಪ್ರಶಸ್ತಿ, ಪಂಜೆ ಮಂಗೇಶರಾಯರ ದತ್ತಿ ಪ್ರಶಸ್ತಿ ಪಡೆದಿದ್ದಾರೆ.

**ಎನ್.ಕೆ.ಹನುಮಂತಯ್ಯ:** ತಿಪಟೂರು ತಾಲೂಕು ನಾಗರಘಟ್ಟದ ಇವರು ಕವಿಯಾಗಿ, ಉಪನ್ಯಾಸಕರಾಗಿ ಭರವಸೆ ಹುಟ್ಟಿಸಿದ ಪ್ರತಿಭಾವಂತ. ಹಿಮದ ಹೆಜ್ಜೆ, ಚಿತ್ರದ ಬೆನ್ನು (ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ). ಕೃತಿಕಾರರು ಇವರು ಸಾಹಿತ್ಯ ಪತ್ರಿಕೆಯನ್ನೂ ಪ್ರಾರಂಭಿಸಿದ್ದರು. ೩೭ನೇ ವಯಸ್ಸಿಗೇ ಅಕಾಲಮೃತ್ಯುವಿಗೀಡಾದರು.

**ಡಾ.ಲಿಂಗದೇವರು ಹಳೇಮನೆ:** ಚಿಕ್ಕನಾಯಕನಹಳ್ಳಿ ತಾಲೂಕು ಹಾಲುಗೊಣ ಗ್ರಾಮದ ಇವರು ಮೈಸೂರಿನಲ್ಲಿ ದಕ್ಷಿಣ ಭಾರತೀಯ ಭಾಷಾ ವಿಜ್ಞಾನ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿ ನಿವೃತ್ತರಾಗಿದ್ದರು. ಚಿಕ್ಕದೇವಭೂಪ, ಹೈದರ್, ಅಂತೆಂಬರ ಗಂಡ, ತಸ್ಕರ, ಶಾಪ, ಡಾ.ಬೆಥೂನ್, ಮಟಾಶ್ರಾಜ, ಧರ್ಮಪುರಿಯ ದೇವದಾಸ, ಮದರ್ ಕರೇಜ್, ಮನುಷ್ಯ ಅಂದ್ರೆ ಮನುಷ್ಯನೇ ಎಂಬ ನಾಟಕಗಳು; ಕನ್ನಡ ಕಲಿ, ಭಾಷೆ, ಭಾಷೆ ಮತ್ತು ಸಾಮಾನ್ಯ ಮನುಷ್ಯ ಎಂಬ ಭಾಷಾ

ವಿಜ್ಞಾನ ಕೃತಿಗಳು; ಪ್ರಸ್ತುತ, ಸಂದರ್ಭ, ನಿಲುವು, ಆಶಯ, ಸಂವಾದ, ರೂಪ–ರೂಪಗಳನು ದಾಟಿ ಎಂಬ ಅಂಕಣ ಬರಹಗಳ ಸಂಕಲನ ಪ್ರಕಟವಾಗಿವೆ. ಮರಣ ಹೊಂದುವ ಸಮಯದಲ್ಲಿ ಮೈಸೂರು ರಂಗಾಯಣದ ನಿರ್ದೇಶಕರಾಗಿದ್ದರು. ಕರ್ನಾಟಕ ನಾಟಕ ಅಕಾಡೆಮಿ, ಡಾ॥ ಹಾಮಾನಾ ಪ್ರಶಸ್ತಿ, ಕೆ.ವಿ.ಸುಬ್ಬಣ್ಣ ನಾಟಕ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಬಂದಿವೆ. ರಂಗಭೂಮಿ ಸಾಕ್ಷರತಾ ಆಂದೋಲನ ಹಾಗೂ ನವ ಸಾಕ್ಷರರ ಸಾಹಿತ್ಯಕ್ಕೆ ಇವರ ಕೊಡುಗೆ ಅಪಾರ.

**ಸಿ.ಬಿ.ಚಂದ್ರಶೇಖರ್:** ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ಸಮಾಜವಾದಿ ಸಾಹಿತಿ ಎನಿಸಿದ್ದರು. ಮೂಲತಃ ದಾವಣಗೆರೆ ಜಿಲ್ಲೆ ಚನ್ನಗಿರಿಯವರು. ಸರ್.ಎಂ.ವಿಶ್ವೇಶ್ವರಯ್ಯನವರ ಕೈಕೆಳಗೆ ಕೆಲಸ ಮಾಡಿ ಅಪಾರ ಅನುಭವ ಗಳಿಸಿದ್ದು, ಕೆಲವು ವರ್ಷ ಬಿಹಾರದಲ್ಲಿ ಕೆಲಸ ಮಾಡಿದ್ದ ಸಂದರ್ಭದ ಅನುಭವಗಳನ್ನಾಧರಿಸಿ 'ಗಂಗೆಗೆ ಬಿದ್ದ ಬೆಂಕಿಎಂಬ ಕಾದಂಬರಿ ರಚಿಸಿದ್ದರು. ಅದು ಪದವಿ ತರಗತಿಗೆ ಪಠ್ಯವಾಗಿತ್ತು. ಕಾಗೋಡು ಸತ್ಯಾಗ್ರಹ ಮೊದಲಾದ ಚಳವಳಿ–ಹೋರಾಟಗಳಲ್ಲಿ ಭಾಗವಹಿಸಿ, ದೇವರಾಜ್ ಅರಸ್, ಜೆ.ಹೆಚ್.ಪಟೇಲ್ ಮೊದಲಾದವರೊಂದಿಗೆ ಉತ್ತಮ ಒಡನಾಟ ಹೊಂದಿದ್ದರು. ಇವರ 'ಕಾಗೋಡು ಸತ್ಯಾಗ್ರಹ ಸುಧಾ ಪತ್ರಿಕೆಯಲ್ಲಿ ಧಾರವಾಹಿಯಾಗಿ ಪ್ರಕಟಗೊಂಡಿತ್ತು, ಇವರ ಸಮಾಜದ ಗರ್ಭದಲ್ಲಿ, ಸಹಕಾರ ಪುರುಷ ಮುಂತಾದ ಕೃತಿ ಪ್ರಕಟವಾಗಿದ್ದವು.

**ಪ್ರೊ.ಜಿ.ಎಸ್.ಸಿದ್ಧಲಿಂಗಯ್ಯ:** ಖ್ಯಾತ ವಿಮರ್ಶಕ, ಕವಿ, ಸಾಹಿತಿ ಡಾ॥ ಜಿ .ಎಸ್. ಸಿದ್ದಲಿಂಗಯ್ಯ ೨೦–೨–೧೯೩೧ ರಲ್ಲಿ  ಜಿಲ್ಲೆಯ ಬೆಳ್ಳಾವೆಯಲ್ಲಿ ಜನಿಸಿದರು. ಕನ್ನಡ ಎಂ.ಎ, ಪದವಿಯನ್ನು (೧೯೬೧) ಮೊದಲ ದರ್ಜೆಯಲ್ಲಿ ಮುಗಿಸಿ ಪ್ರಾಚಾರ್ಯರಾಗಿ, ಪ್ರಾಧ್ಯಾಪಕರಾಗಿ, ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಅಧಿಕ ನಿರ್ದೇಶಕರಾಗಿ, ನಿರ್ದೇಶಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ೧೯೮೯ ರಿಂದ ೧೯೯೨ ರವರೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಮೈಸೂರು ದಸರಾ ಬಹುಭಾಷಾ ಕವಿಗೋಷ್ಠಿ, ಕೊಪ್ಪಳ ಸಾಹಿತ್ಯ ಸಮ್ಮೇಳನ ಕವಿಗೋಷ್ಠಿ, ಹಂಪಿ ಕವಿಗೋಷ್ಠಿ ಹಾಗೂ ಬೆಳದಿಂಗಳ ಕವಿಗೋಷ್ಠಿಗಳ ಅಧ್ಯಕ್ಷತೆಯನ್ನು ವಹಿಸಿದ್ದರು. ಇವರು ಮಧುಗಿರಿ (೧೯೯೬) ಯಲ್ಲಿ ಜರುಗಿದ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದರು. ಇವರು ರಸಗಂಗೆ, ಉತ್ತರ, ಚಿತ್ರ–ವಿಚಿತ್ರ, ಐವತ್ತರ ನೆರಳು, ಋಷ್ಯಶೃಂಗ, ಹೇಮಕೂಟ, ಬಿಂದು, ಮುಖಾಮುಖಿ, ಮಣ್ಣಿಗಿಳಿದ ಆಕಾಶ, ಮುಂತಾದ ಹತ್ತಾರು ಕವನ ಸಂಕಲನಗಳನ್ನು ರಚಿಸಿದ್ದಾರೆ. ಶ್ರೀ ಕವಿ ಲಕ್ಷ್ಮೀಶ, ಹೊಸಗನ್ನಡ ಕಾವ್ಯ, ಪಂಚಮುಖ ಚಾಮರಸ, ವಚನ ಸಾಹಿತ್ಯ–ಒಂದು ಇಣುಕು ನೋಟ, ಹರಿದಾಸ ಸಾಹಿತ್ಯ ಪರಂಪರೆ, ವಚನ ವಾಙ್ಮಯ ಮತ್ತು ಭಾಷೆ, ಶೂನ್ಯ ಸಂಪಾದನೆಗಳು–ಒಂದು ಅವಲೋಕನ, ಶೂನ್ಯ ಸಂಪಾದನೆ–ಒಂದು ಮರುಚಿಂತನೆ, ಗೂಳೂರು ಸಿದ್ದವೀರಣ್ಣ, ನವ್ಯಕಾವ್ಯ–ಒಂದು ಚಿಂತನೆ, ಶ್ರೀನಿವಾಸ, ನವರಾತ್ರಿ, ಶೂನ್ಯ ಸಂಪಾದನೆ, ಹೊಸ ತಿರುವು, ಶೂನ್ಯ ಸಂಪಾದನೆ–ಕೆಲವು ಪ್ರಶ್ನೆಗಳು, ಭಾಷೆ ಗೀಷೆ–ಬೇಂದ್ರೆ–ಕುವೆಂಪುರವರು, ಅಲ್ಲಮ ಪ್ರಭು, ಮೇದಾರ ಕೇತಯ್ಯ, ನೆನಪಿನೋಣಿಯಲ್ಲಿ, ಬಸವ–ಅಲ್ಲಮರ–ನೂರು ವಚನಗಳು, ಶಬ್ದ ಸೋಪಾನ, ಹರಿಹರ, ಶೂನ್ಯ ಸಂಪಾದನಗಳು–ಪರಿಷ್ಕರಣಗಳು, ಲಯವೂ ಅದರ ಪರಿವಾರವೂ, ಯಶೋಧರ ಚರಿತೆ, ವಚನ ಸಾಹಿತ್ಯ–ಹಕ್ಕಿನೋಟ, ನೂರೊಂದರ ಸುತ್ತ,ಇವರ ವಿಮರ್ಶಾ ಕೃತಿಗಳು;  ಮಹಾನುಭವ ಬುದ್ಧ, ವಿರತಿಯ ಸಿರಿಸಪ್ಪಣ್ಣನವರು, ಬಸವಣ್ಣ, ವಚನ ಗುಮ್ಮಟ (ವಾಸ್ವಾನಿಯವರ ಕೃತಿಗಳು) ಡಾ॥ಸಿದ್ಧಯ್ಯ ಪುರಾಣಿಕ, ಭಾಲ್ಕಿಯ ಪಟ್ಟದ್ದೇವರು, ಇವರು ರಚಿಸಿರುವ ಜೀವನಚರಿತ್ರೆ ಕೃತಿಗಳು. ಸಜ್ಜನರಿಗೇಕೆ ಕಷ್ಟಗಳು ಬರುತ್ತವೆ?, ಸ್ವಾಮಿ ನಿಗಮಾನಂದ, ನೂರೊಂದು, ಕತೆಗಳು, ದಾದಾ ಉತ್ತರಿಸುತ್ತಾರೆ, ಕೋಪ ನಮ್ಮನ್ನು ಉರಿಸುವ ಮೊದಲು ಅದನ್ನು ಉರಿಸಿ ಬಿಡಬೇಕು, ಯೋಗಿ ಗುರು, ಸಾವಿನ ಮುಂದಿನ ಬದುಕು, ಪ್ರಕಟಿಸುವ ಸ್ಥೈರ್ಯ ಇವರ ಅನುವಾದಿಸಿರುವ ಕೃತಿಗಳು; ಶತಾಬ್ದಿ ದೀಪ, ಅಣ್ಣನ ನೂರೊಂದು ವಚನಗಳು, ಸಿದ್ಧಲಿಂಗೇಶ್ವರರ ೫೦ ವಚನಗಳು, ಶರಣೆ ರಾಯಮ್ಮ, ಗಣೇಶ ಮಸಣಯ್ಯ, ಮುದನೂರು, ಜಂಗಮ ಜ್ಯೋತಿ, ಬಸವ ಸಂದೇಶ, ಬಂದ ಸಂತಂಮಣ್ಣ, ಜನ್ನ, ಶರಣ ಆದಯ್ಯ, ಅಂಬಿಗರ ಚೌಡಯ್ಯ, ಮುರುಗೋಡು, ಶರಣ ಬಸವೇಶ್ವರರು, ನುಲಿಯ ಚಂದಯ್ಯ, ಭಕ್ತಿ ಪರಂಪರೆ–ಸಮಾಜೋ ಧಾರ್ಮಿಕ ಕಾಳಜಿಗಳು, ಇವರ ಸಂಪಾದಿತ ಕೃತಿಗಳು.  ಸಾಹಿತ್ಯ ಅಕಾಡೆಮಿಯ ವಿಶೇಷ ಗೌರವ ಪ್ರಶಸ್ತಿ.(೧೯೯೬), ಕಾವ್ಯಾನಂದ ಪ್ರಶಸ್ತಿ (೧೯೯೭), ಮುರುಘಶ್ರೀ ಪ್ರಶಸ್ತಿ (೧೯೯೮)ರ ಶಿವರಾತ್ರೀಶ್ವರ ಪ್ರಶಸ್ತಿ (೧೯೯೯), ರಾಜ್ಯೋತ್ಸವ ಪ್ರಶಸ್ತಿ (೨೦೦೦) , ಸಾರಸ್ವತ ಪ್ರಶಸ್ತಿ (೨೦೦೩), ಬಾಪು ಪ್ರಶಸ್ತಿ (೨೦೦೪) , ಮೂಜಗಂ ಪ್ರಶಸ್ತಿ (೨೦೦೬), ರಾಜ್ಯರತ್ನ (೨೦೦೭), ರಮಣಶ್ರೀ–ಶರಣ ಪ್ರಶಸ್ತಿ (೨೦೦೮), ವಚನ ಸಾಹಿತ್ಯಶ್ರೀ ಪ್ರಶಸ್ತಿ ಮತ್ತು ಕೆಂಪೇಗೌಡ ಪ್ರಶಸ್ತಿ (೨೦೧೦), ಬಸವಶ್ರೀ ಪ್ರಶಸ್ತಿ(೨೦೧೧), ಮಾಸ್ತಿ ಪ್ರಶಸ್ತಿ(೨೦೧೨), ಸೇರಿದಂತೆ ಅನೇಕ ಪ್ರಶಸ್ತಿಗಳು ಇವರಿಗೆ ಲಭಿಸಿದೆ. ಇವರು ಅಖಿಲ ಭಾರತ ಶರಣ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದರು.

**ಅರಗಂ ಲಕ್ಷ್ಮಣರಾಯರು**: 'ಹೊಯ್ಸಳ ಕಾವ್ಯನಾಮದಿಂದ ಮಕ್ಕಳ ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಮಧುಗಿರಿಯಲ್ಲಿ ಅಧ್ಯಾಪಕರಾಗಿದ್ದರು. 'ಧರೆಯೊಳೆಲ್ಲೇ ಇರಲಿ ನಾನು ಮರೆಯಲಾರೆ ಮಧುಗಿರಿ ಎಂದಿದ್ದಾರೆ. ಆಕಾಶವಾಣಿ ಮಕ್ಕಳ ಕಾರ್ಯಕ್ರಮ ನಿರ್ವಾಹಕರಾಗಿ, ಪ್ರಜಾವಾಣಿ ಮಕ್ಕಳ ವಿಭಾಗದ ಅಣ್ಣಾಜಿಯಾಗಿ ಪ್ರಸಿದ್ಧರು. ಮಕ್ಕಳಿಗಾಗಿ 'ಕನಕ' ಪತ್ರಿಕೆ ಮಾಡಿದ್ದರು, ತಿರುಗ–ಮುರುಗ ಗದ್ಯಪದ್ಯ, ಸಂತಮ್ಮಣ್ಣ, ನೋವು, ಆನೆ–ಇರುವೆ ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಇವರ ಸಮಗ್ರ ಕೃತಿ ಸಂಗ್ರಹವನ್ನು ಪ್ರೊ.ಜಿ.ಎಸ್.ಸಿದ್ಧಲಿಂಗಯ್ಯ ಸಂಪಾದಿಸಿ 'ಬಂದಾ ಸಣ್ತಮಣ್ಣ ಎಂಬ ಅಭಿನಂದನಾ ಗ್ರಂಥವನ್ನು ಹೊರತಂದಿದ್ದಾರೆ.

**ಗುಂಡಗಲ್ ರಾಮರಾವ್**: ರಕ್ಷಣಾ ಇಲಾಖೆಯಲ್ಲಿದ್ದವರು. ಪ್ರಭು ಪ್ರಕಾಶನವನ್ನು ಸ್ಥಾಪಿಸಿ ಅವಲೋಕನ, ವಚನ ಮಂಜರಿ, ತ್ರಿಸಂಕಲ್ಪ, ಅವತಾರ ವರಿಷ್ಠ, ಪರಿಚಾರಕ, ಸೂಕ್ತಿ ಸುಧಾಮೃತ, ಮುಂತಾದ ಕೃತಿಗಳನ್ನು ರಚಿಸಿದ್ದಾರೆ.

**ಟಿ.ವಿ.ಮುತ್ತಾಚಾರ್**: ಇವರಿಗೆ ಚಿತ್ರಕಲೆ, ಸಂಗೀತ, ಸಾಹಿತ್ಯದಲ್ಲಿ ಅಪಾರ ಆಸಕ್ತಿ ಚಂದ್ರಮತಿ ವೃತ್ತಾಂತಂ ಎಂಬ ಖಂಡಕಾವ್ಯ, ಕರ್ಮಯೋಗಿ ಸಿದ್ಧರಾಮ ಎಂಬ ನಾಟಕ, ಹಂಸನಾದ, ಪೌರುಷ, ಪಾಂಚಜನ್ಯ ಮುಂತಾದ ಕವನ ಸಂಕಲನಗಳು, ಭಾವಶಿಲ್ಪ ಭಾವ ಗೀತೆಗಳ ಸಂಕಲನ, ಸೂರಯ್ಯನ ಮದುವೆ, ಸತ್ಯಕ್ಕೆ ಜಯ, ಕನ್ನಡ ಗಾನಾರಾಧನೆ, ಸಿರಿಗನ್ನಡ ವರ್ಣಗಳು, ಜಾವಳಿಗಳು ಎನ್ನುವ ಸಂಗೀತ ರಚನೆಗಳನ್ನೂ, ವಾಗ್ಗೇಯಕಾರರೂ 'ಸಂಗೀತದಲ್ಲಿ ಛಂದಸ್ಸು' ಎಂಬ ಗ್ರಂಥಗಳನ್ನು ರಚಿಸಿದ್ದಾರೆ. ಇವರು ಸಂಗೀತಗಾರರಾಗಿದ್ದು, ಸಂಸ್ಕೃತ ವಿದ್ವಾಂಸರಾದ ಇವರು ಭಾಮಿನಿ ಷಟ್ಪದಿಯಲ್ಲಿ ವಿಶ್ವಕರ್ಮಪುರಾಣ, ವಿಶ್ವಕರ್ಮಚರಿತ್ರೆ, ನಾಗರಖಂಡ, ವಿಶ್ವಕರ್ಮವಂಶವಿರಾಸ ಮುಂತಾದ ಗ್ರಂಥಗಳನ್ನು ರಚಿಸಿದ್ದಾರೆ. ಅಲ್ಲದೇ, ವಿಶ್ವಕರ್ಮಪ್ರಕಾಶ ಪತ್ರಿಕೆಯ ಸಂಪಾದಕರಾಗಿದ್ದರು.

**ಜಿ.ಬ್ರಹ್ಮಪ್ಪ:** ಅರಸಾಪುರದ ಇವರು ಮೈಸೂರಿನಲ್ಲಿ ಪ್ರಾಧ್ಯಾಪಕರಾಗಿ ನಿವೃತ್ತಿ ಹೊಂದಿರುತ್ತಾರೆ. ಸಿದ್ಧಾಂತ ಕೀರ್ತಿ ಪ್ರಶಸ್ತಿ, ರತ್ನಾಕರ, ರನ್ನ, ಚಾವುಂಡರಾಯ ಮುಂತಾದ ಪ್ರಶಸ್ತಿಗಳನ್ನು ಗಳಿಸಿದ್ದು, ರತ್ನಾಕರ, ದಾನಚಿಂತಾಮಣಿ, ಸಾಮ್ರಾಟ ಖಾರವೇಲ ಎಂಬ ಕಾದಂಬರಿಗಳು, ಬ್ರಹ್ಮಾಯಣ (ಆತ್ಮಚರಿತ್ರೆ) ವಿಶ್ವಧರ್ಮ ಪ್ರವರ್ತಕ, ರತ್ನಾಕರ ಶತಕ ರತ್ನಾಕರ ವೈಭವ, ಜಿನಸೇನ ಮತ್ತು ಗುಣಭದ್ರರ ಜೈನಪುರಾಣಗಳು ಮುಂತಾದ ಅನುವಾದ ಕೃತಿಗಳಲ್ಲದೆ ಜೀವನಚರಿತ್ರೆಯೂ ಪ್ರಕಟಗೊಂಡಿವೆ.

**ಆರ್.ರಾಚಪ್ಪ**: ಬೆಂಗಳೂರಿನ ರೇಣುಕಾಚಾರ್ಯ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ನಿವೃತ್ತಿ ಹೊಂದಿರುವ ಪ್ರೊ. ಆರ್.ರಾಚಪ್ಪ, ಸಾಹಿತ್ಯ ಮನನ (ವಿಮರ್ಶಾ ಕೃತಿ), ಮಾರುತ್ತರ (ಕವನ ಸಂಕಲನ), ಜೇಡರ ದಾಸಿಮಯ್ಯನ ವಚನಗಳು, ಸ್ನೇಹ ಕಾರ್ತೀಕ (ಸಂಪಾದಿತ), ಗುಬ್ಬಿ ತೋಟದಪ್ಪನವರ ಜೀವನ ಚರಿತ್ರೆ ಮುಂತಾದ ಕೃತಿಗಳನ್ನೂ ಹಲವಾರು ಲೇಖನಗಳನ್ನೂ ಬರೆದಿದ್ದಾರೆ.

**ಕೆ.ಎಸ್.ಧರಣೇಂದ್ರಯ್ಯ**: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾಗಿ ನಿವೃತ್ತಿ ಹೊಂದಿರುವ ಇವರು ವನಮಾಲೆ (ಕಾದಂಬರಿ), ಭಕ್ತಿ ಕುಸುಮಾಂಜಲಿ, ಗೊಮ್ಮಟ ಸ್ತುತಿ ಮುಂತಾದ ಕೃತಿಗಳನ್ನು ರಚಿಸಿದ್ದಾರೆ.

**ಖಾದ್ರಿ ಶಾಮಣ್ಣ**: ಮಧುಗಿರಿ ತಾಲೂಕು ಗರಣಿ ಗ್ರಾಮದವರು. ಪತ್ರಿಕೋದ್ಯಮದಲ್ಲಿ ಅಪಾರ ಸಾಧನೆಗೈದವರು. ಕನ್ನಡಪ್ರಭ ಸೇರಿದಂತೆ ಅನೇಕ ಪತ್ರಿಕೆಗಳಲ್ಲಿ ಸಂಪಾದಕರಾಗಿದ್ದರು. ಹರಿತವಾದ ಸಂಪಾದಕೀಯಕ್ಕೆ ಹೆಸರಾಗಿದ್ದರು. ಕರ್ನಾಟಕ ಪತ್ರಿಕಾ ಅಕಾಡೆಮಿ ಅಧ್ಯಕ್ಷರಾಗಿದ್ದರು. ಅನೇಕ ಕೃತಿಗಳನ್ನೂ ರಚಿಸಿದ್ದಾರೆ.

**ತೂಬಿನಕಟ್ಟೆ ವಿದ್ವಾನ್ ಟಿ.ವೆಂಕಟರಾಮಯ್ಯ**: ಇವರು ಭಾರತರತ್ನ, ಲಾಲ್ ಬಹದ್ದೂರ್ ಶಾಸ್ತ್ರಿ ಜೀವನ ಚರಿತ್ರೆ, ಲಾಲಲಜಪತರಾಯ್, ಸಿದ್ದಗಂಗಾ ಕ್ಷೇತ್ರ ಕುರಿತಂತೆ ಕೃತಿ ರಚಿಸಿದ್ದಾರೆ.

**ಡಾ.ಎಂ.ವಿ.ಶ್ರೀನಿವಾಸ್**: ಹಿರೇಹಳ್ಳಿಯ ಇವರು ಇತಿಹಾಸಜ್ಞರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇತಿಹಾಸ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಅನೇಕ ಸಂಶೋಧಕರಿಗೆ ಮಾರ್ಗದರ್ಶಿಗಳಾಗಿ, ಕರ್ನಾಟಕ ಹಿಸ್ಟರಿ ಕಾಂಗ್ರೆಸ್‌ನ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದರು. ಜ್ಯೋತಿ, ಮಧುಕರ, ಸಮರಸ ಗ್ರಂಥಗಳು; ರತ್ನಾಕರ ಮತ್ತು ಮಸ್ತಾನಿ ಎನ್ನುವ ಪ್ರಸಿದ್ಧ ಐತಿಹಾಸಿಕ ಕಾದಂಬರಿ; ಹಾಗೂ ಇತಿಹಾಸ ಸಂಶೋಧನಾ ಕೃತಿಗಳು ಸೇರಿ ಒಟ್ಟು ೨೫ ಗ್ರಂಥಗಳನ್ನು

ರಚಿಸಿದ್ದಾರೆ. ತುಮಕೂರು ಜಿಲ್ಲಾ ಬರಹಗಾರರ ಸಂಘ (೧೯೬೧-೬೮)ದ ಸಂಸ್ಥಾಪಕ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿರುವ ಇವರಿಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯೂ ಸೇರಿದಂತೆ ಅನೇಕ ಪ್ರಶಸ್ತಿ, ಗೌರವ ಸನ್ಮಾನಗಳು ಬಂದಿವೆ. ಏಳನೇ ತುಮಕೂರು ಜಿಲ್ಲಾ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿದ್ದರು.

**ಸಿ.ಹೆಚ್.ಮರಿದೇವರು:** ತುಮಕೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು. ನೃಪತುಂಗ ವಿದ್ಯಾಸಂಸ್ಥೆಯನ್ನು ನಡೆಸುತ್ತಿದ್ದಾರೆ. ಮೂಲತಃ ರಾಜ್ಯಶಾಸ್ತ್ರದ ಪ್ರಾಧ್ಯಾಪಕರಾಗಿದ್ದ ಇವರು ಕೃಷಿಕರು ಕೂಡ. ಶಿಕ್ಷಣ ತತ್ವಶಾಸ್ತ್ರ, ಮುನ್ನಡೆದ ಶಿಕ್ಷಣ ಮನಃಶಾಸ್ತ್ರ, ಹಾಗೂ 'ಆಗ್ನೇಷಿಯಾ ಮತ್ತು ಜಪಾನ್ ರಾಷ್ಟ್ರಗಳಲ್ಲಿ ಮರಿದೇವರು', 'ನೇಪಾಳ – ಒಂದು ಸಿರಿ ಭೂವಲಯ' ಎಂಬ ಪ್ರವಾಸ ಸಾಹಿತ್ಯವನ್ನು ರಚಿಸಿದ್ದಾರೆ. ಕವಿತೆಗಳು ಹುಟ್ಟಬೇಕು, ಶಬ್ದ ಪಾಕ ಕವನ ಸಂಕಲನಗಳು ಪ್ರಕಟವಾಗಿದೆ. ಇವರಿಗೆ ದೇವರಾಜ ಬಹದ್ದೂರ್ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಶಸ್ತಿಗಳು ಲಭಿಸಿವೆ. ೨೦೧೩ರಲ್ಲಿ ಚಿಕ್ಕನಾಯಕನ ಹಳ್ಳಿಯಲ್ಲಿ ನಡೆದ ಜಿಲ್ಲಾ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದರು.

**ಹೆಚ್.ವಿ.ವೀರಭದ್ರಯ್ಯ:** ಸಿದ್ದಗಂಗಾ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ನಿವೃತ್ತರಾಗಿದ್ದಾರೆ. ಜನಪದ ಸಾಹಿತ್ಯದಲ್ಲಿ ವಿಶೇಷ ಆಸಕ್ತಿಯುಳ್ಳ ಇವರ ಪ್ರಕಟಿತ ಕೃತಿಗಳು 'ಹೇಮಲತೆ' (ಕವನ ಸಂಕಲನ), 'ಜನಪದ ಸಾಹಿತ್ಯದಲ್ಲಿ ಬಸವಣ್ಣ', 'ತ್ರಿವಿಧಿಗಳು', 'ಸಿದ್ಧಗಂಗಾ ಶ್ರೀ ಗುರುವಚನಗಳು'. ಇವರು ಜನಪದ ಸಾಹಿತ್ಯದಲ್ಲಿ ಸಲ್ಲಿಸಿದ ಸೇವೆಗಾಗಿ ೧೯೯೫ರಲ್ಲಿ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಸಂದಿದೆ. ಇವರು ಸಿದ್ಧಗಂಗಾ ಮಾಸಪತ್ರಿಕೆಯ ಸಂಪಾದಕರಾಗಿದ್ದಾರೆ.

**ಡಾ॥ ಕೆ.ವಿ.ಕೃಷ್ಣಮೂರ್ತಿ:** ತುಮಕೂರು ತಾಲೂಕು ಕೆಸ್ತೂರಿನವರು. ಸಿದ್ಧಗಂಗಾ ಕಾಲೇಜು, ಮಧುಗಿರಿಯ ಟಿ.ವಿ.ವಿ.ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಇವರು ಕನ್ನಡದಲ್ಲಿ ಸಮಾಜಶಾಸ್ತ್ರ, ಸಾಮಾಜಿಕ ಸಂಶೋಧನಾ ವಿಧಾನಗಳು, ಸಮಾಜ ಶಾಸ್ತ್ರ ಪ್ರವೇಶಿಕ, ಸಾಮಾಜಿಕ ಸಮೂಹಗಳು ಮತ್ತು ಸಂಸ್ಥೆಗಳು, ಮಾನವಶಾಸ್ತ್ರ, ಭಾರತದಲ್ಲಿ ಸಮಾಜಶಾಸ್ತ್ರ ಮುಂತಾದ ಗ್ರಂಥಗಳನ್ನು ರಚಿಸಿದ್ದು, 'ಮಾನವಿಕ ವಿಜ್ಞಾನ ವಾಹಿನಿ ಪತ್ರಿಕೆಯ ಪ್ರಧಾನ ಸಂಪಾದಕರಾಗಿದ್ದರು. ಶಿಲ್ಪಶ್ರೀ ಎಂಬ ನಾಟಕವನ್ನು ರಚಿಸಿದ್ದಾರೆ. ಇವರ ಪಿ.ಎಚ್.ಡಿ. 'Traditional Artisans of South India' ಗ್ರಂಥವನ್ನು ವಿ.ಎಸ್.ಸೂರ್ಯನಾರಾಯಣಚಾರ್ ರವರು (ದಕ್ಷಿಣ ಭಾರತದ ಪಾರಂಪರಿಕ ಕುಶಲ ಕರ್ಮಿಗಳು) ಕನ್ನಡಕ್ಕೆ ಅನುವಾದಿಸಿದ್ದಾರೆ. ಸಮಾಜಶಾಸ್ತ್ರಜ್ಞರಾದ ಇವರು ತುಮಕೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದರು. ಕರ್ನಾಟಕ ರಾಜ್ಯ ವಿಶ್ವಕರ್ಮ ಸಾಹಿತ್ಯ ಪರಿಷತ್ತಿನಲ್ಲಿ ಅಧ್ಯಕ್ಷರಾಗಿದ್ದಾರೆ. ಸಮಾಜ ಸೇವಾರತ್ನ, ಪ್ರಿಯದರ್ಶಿನಿ ಇಂದಿರಾಗಾಂಧಿ ಪ್ರಶಸ್ತಿಗಳು ಬಂದಿವೆ.

**ಟಿ.ಎಸ್.ನಾಗರಾಜಶೆಟ್ಟಿ:** ತಿಪಟೂರಿನ ಕಾಲೇಜಿನಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾಗಿ ನಿವೃತ್ತರಾಗಿರುವ ಇವರು ಮಕ್ಕಳ ಸಾಹಿತ್ಯ ರಚನೆಯಲ್ಲಿ ಸಿದ್ಧಹಸ್ತರು. ತಮ್ಮದೇ ನಿರ್ಮಲ ಪ್ರಕಾಶನದಡಿ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಸುಮಾರು ೩೦ಕ್ಕೂ ಹೆಚ್ಚು ಕೃತಿ ರಚಿಸಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಸೇರಿದಂತೆ ಅನೇಕ ಪ್ರಶಸ್ತಿ ಗೌರವ ಸಮ್ಮಾನಗಳು ಸಂದಿವೆ. ಅನೇಕ ರಾಷ್ಟ್ರೀಯ ವಿಚಾರಗೋಷ್ಠಿ, ಕಮ್ಮಟಗಳಲ್ಲಿ ಭಾಗವಹಿಸಿದ್ದು, ಮಕ್ಕಳ ಸಾಹಿತ್ಯ ಕ್ಷೇತ್ರಕ್ಕೆ ಇವರ ಕೊಡುಗೆ ಅಪಾರ.

**ಡಾ. ಎಸ್.ಜಿ.ಸಿದ್ಧರಾಮಯ್ಯ:** ಇವರು ಕನ್ನಡ ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಜನಪದದ ದೇಸೀ ಪರಂಪರೆಯ ಒಲವಿರುವ ಇವರ ಅನೇಕ ಕೃತಿ ಮತ್ತು ಕವನ ಸಂಕಲನಗಳು ಪ್ರಕಟವಾಗಿವೆ. ಗಾಳ್ಪ ಉಬ್ಬಿನ ಮೇಲೆ, ಕಾಡುವ ಬೇಲಿ ಹೂಗಳು, ಅವಳೆದೆಯ ಜಂಗಮ, ಸೊಲ್ಲು ಫಲವಾಗಿ, ಕರೆ ಬಳಗ, ಬೀದಿ ಅಲ್ಲಮ ಮತ್ತು ಕಾಯ ಮತ್ತು ಮಾಯದ ಹಾಡು ಕವನ ಸಂಕಲನಗಳು, ದಂಡೆ ಹಾಗೂ ದಾಳ ಎಂಬ ಎರಡು ನಾಟಕಗಳೂ ಪ್ರಕಟವಾಗಿವೆ. ಅಂಬಿಗರ ಚೌಡಯ್ಯ ಒಂದು ಅಧ್ಯಯನ, ಯೆಡೆಕುಂಟೆಗೆಣೆ ಸಾಲು ಕೇಡಿಲ್ಲವಾಗಿ, ಸಾಲಾವಳಿ, ನಿಶ್ಯಬ್ದದ ಜಾಡು, ಕಣ್ಣ ಗಾಯದ ಕಾಲು ದಾರಿಗಳು, ಇವರ ವಿಮರ್ಶಾ ಲೇಖನ ಸಂಕಲನಗಳು. ಅವಳೆದೆಯ ಜಂಗಮ, ದಾಳ ಕೃತಿಗಳಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯೂ, 'ಸೊಲ್ಲು ಫಲವಾಗಿ ಕೃತಿಗೆ ಪು.ತಿ.ನ, ಪ್ರಶಸ್ತಿ ಕರೆಬಳಗ ಗ್ರಂಥಕ್ಕೆ ಜಿ.ಎಸ್.ಎಸ್. ಪ್ರಶಸ್ತಿಗಳು ದೊರೆತಿವೆ. ಇವರು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿದ್ದರು.

**ಎಂ.ಡಿ.ಶ್ರೀನಿವಾಸ್**: ಶಿಕ್ಷಣ ಇಲಾಖೆಯಲ್ಲಿ ಕಾರ್ಯನಿರ್ವಹಿಸಿ ನಿವೃತ್ತರಾಗಿದ್ದಾರೆ. ಇತಿಹಾಸ ಲೇಖನ, ಕೃತಿಗಳ ರಚನೆ ಮಾಡಿದ್ದು, ಮಧುಗಿರಿ ಇತಿಹಾಸ, ಕೊರಟಗೆರೆ ಇತಿಹಾಸ, ಡಾ॥ ಸರ್ವಪಲ್ಲಿ ರಾಧಾಕೃಷ್ಣ, ಶ್ರೀ. ದಂಡಿನ ಮಾರಮ್ಮನವರ ಸಮಗ್ರ ಮಾಹಿತಿ, ಗುರುನಂಜಮ್ಮನವರ ಕಥೆ, ಮಿಡಿಗೇಶಿ ಮುಂತಾದ ಹದಿಮೂರು ಕೃತಿಗಳು ಪ್ರಕಟವಾಗಿವೆ. ಮಧುಗಿರಿಯಲ್ಲಿ ನಡೆದ  ಐದನೇ ತಾಲೂಕು ಕನ್ನಡ ಸಮ್ಮೇಳನಾಧ್ಯಕ್ಷರಾಗಿದ್ದರು.

**ಸೋ.ಮು.ಭಾಸ್ಕರಾಚಾರ್**: ತುಮಕೂರು ತಾಲೂಕು ಸೋರೆಕುಂಟೆಯ ಇವರು ತುಮಕೂರು ನಗರದ ವಿದ್ಯಾವಾಹಿನಿ ಪದವಿಪೂರ್ವ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಬಂಡಾಯ ಸಾಹಿತ್ಯ ಚಟುವಟಿಕೆಯ ಮುಂಚೂಣಿಯಲ್ಲಿದ್ದರು. ಸುತ್ತಾಟದ ಸುಳಿಯಲ್ಲಿ, ಅಂಟು ಮಣ್ಣಿನ ನಂಟು  ಕಾದಂಬರಿಗಳು, 'ಗಾಂಧಿ ತಾತಾ' ಎಂಬ ಕವನ ಸಂಕಲನ, ಒಳತೋಟಿ ಕಥಾಸಂಕಲನವನ್ನು ಹೊರತಂದಿದ್ದಾರೆ. ಸರ್ದಾರ್ ಭಗತ್‌ಸಿಂಗ್, ಆಲ್ಬರ್ಟ್ ಐನ್ಸ್ಟೀನ್ ಎಂಬ ವ್ಯಕ್ತಿಚಿತ್ರ ಕೃತಿಗಳನ್ನು ತಂದಿದ್ದಾರೆ. 'ಆಧುನಿಕ ಕನ್ನಡ ಕಾವ್ಯದಲ್ಲಿ ಮಾತೃತ್ವದ ಸ್ವರೂಪ' ಇವರ ಸಂಶೋಧನಾ ಪ್ರಬಂಧ. ತುಮಕೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದವರು (೨೦೧೨).

**ಟಿ.ಜಿ.ಪ್ರಭಾಕರ್**: ಬೆಂಗಳೂರು ವಿಶ್ವವಿದ್ಯಾಲಯದ ಹಿಂದಿ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದ ಇವರು ಕನ್ನಡದಲ್ಲಿ ಅಂಕುರ, ಪಲ್ಲವ, ನೀನು ನಾನಲ್ಲವಲ್ಲ ಕವನ ಸಂಕಲನಗಳಲ್ಲದೇ ಮೀರಾಬಾಯಿ, ಆಜ್ಞೇಯ, ಮೂವರು ಸಂತಕವಿಗಳು, ಸೂರ್ಯನ ಸುತ್ತ, ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ರಾಜ್ಯ ಸರ್ಕಾರದಿಂದ ಅನುವಾದ ಪ್ರಶಸ್ತಿ, ಕೇಂದ್ರ ಸರ್ಕಾರದ ಹಿಂದಿಯೇತರ ಹಿಂದಿ ಲೇಖಕ ಪ್ರಶಸ್ತಿ ಪಡೆದಿದ್ದಾರೆ.

**ಹ.ವೆಂ.ಸೀತಾರಾಮಯ್ಯ**: ಪತ್ರಕರ್ತರಾಗಿ ಸೇವೆ ಸಲ್ಲಿಸಿರುವ ಇವರು 'ಕರ್ನಾಟಕ ರಂಗಭೂಮಿ' ಎಂಬ ಉದ್ಗ್ರಂಥವನ್ನೂ, ಇದು ನನ್ನ ಕಥೆ, ಅಭಿನಯ ಶಾರದೆ, ಪ್ರತಿಭಾನ್ವಿತರು ಎಂಬ ಕಿರುಕೃತಿಗಳನ್ನೂ ರಚಿಸಿದ್ದಾರೆ.

**ಟಿ.ಜಿ.ಸಿದ್ದಪ್ಪಾರಾಧ್ಯ**: ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕರಾಗಿರುವ ಇವರು ಸಾಹಿತ್ಯ ದರ್ಪಣ, ರಸ ಗಂಗಾಧರ, ಮುಂತಾದ ೨೦ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ದರ್ಶನ ವಿಶಾರದ, ದರ್ಶನ ಕಲಾರತ್ನ ಎಂಬ ಬಿರುದು ಪಡೆದುಕೊಂಡಿದ್ದಾರೆ.

**ಜಿ.ಎನ್.ಸೋಮಶೇಖರಯ್ಯ**: ವಚನ ಸಾಹಿತ್ಯದಲ್ಲಿ ನುಡಿಮುತ್ತುಗಳು, ಜೈನ ಸಾಹಿತ್ಯದಲ್ಲಿ ನುಡಿ ಮುತ್ತುಗಳು ಮತ್ತು ತಮಿಳು–ಕನ್ನಡ ನಿಘಂಟು (ಅಪ್ರಕಟಿತ) ಇವರ ಪ್ರಮುಖ ರಚನೆಗಳಾಗಿವೆ.

**ನೇಗಲಾಲದ ಶಿವರಾಮಯ್ಯ**: ನೇ.ನಂ.ಶಿ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಶಿವರಾಮಯ್ಯನವರು ನುಡಿಮಲ್ಲಿಗೆ, ಶುಭದಿನದ ಪ್ರೀತಿಯ ಕಾಣಿಕೆ ಎಂಬ ಕವನ ಸಂಕಲನ, ಮತ್ತು ಶಿವಾನಂದ ಲಹರಿ ಎಂಬ ಅನುವಾದಿತ ಕೃತಿಯನ್ನು ರಚಿಸಿದ್ದಾರೆ.

**ಡಾ. ಕರೀಗೌಡ ಬೀಚನಹಳ್ಳಿ**: ಕುಣಿಗಲ್ ತಾಲೂಕು ಬೀಚನಹಳ್ಳಿಯವರು. ಹಂಪಿ ಕನ್ನಡ ವಿಶ್ವವಿದ್ಯಾನಿಲಯದಲ್ಲಿ ಭಾಷಾಂತರ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾಗಿದ್ದಾರೆ. 'ವ್ಯಷ್ಟಿ ಸಮಷ್ಟಿ ನವ್ಯಕಥೆಗಳ ಅಧ್ಯಯನ–ಇದು ಇವರ ಸಂಶೋಧನಾ ಪ್ರಬಂಧ. ಸಣ್ಣಕಥೆ ಪ್ರಕಾರದಲ್ಲಿ ಹೆಚ್ಚಿನ ಸಾಧನೆ, ಕರಿಮಣ್ಣಿನ ಬೊಂಬೆಗಳು, ಸಂಧಾನ, ನೆನಪಲ್ಲ ವಾಸ್ತವ, ಕಡಲ ಮಂತು, ಹಕ್ಕಿ ಚಂದೋ ಹಕ್ಕಿಮರಿ ಚಂದೊ, ಹೊತ್ತಿನ ಕಣ್ಣಿನ ಮಿಂಚು ಮುಂತಾದ ಕಥಾ ಸಂಕಲನಗಳು, ಸಂಕಥನ, ಶತಮಾನದ ಸಣ್ಣ ಕಥೆಗಳು, ಸಾಹಿತ್ಯ ವಿಸ್ತಾರ, ಕನ್ನಡದಲ್ಲಿ ಷೇಕ್ಸ್‌ಪಿಯರ್ ಮುಂತಾದ ವಿಮರ್ಶಾ ಕೃತಿಗಳು ಹಾಗೂ ಇನ್ನಿತರೆ ಸಂಪಾದಿತ, ಅನುವಾದಿತ ಕೃತಿಗಳು ಪ್ರಕಟವಾಗಿವೆ.

**ಮಾಸ್ಟರ್ ಹಿರಣ್ಣಯ್ಯ**: ತುರುವೇಕೆರೆ ತಾಲೂಕು ಕಣತೂರಿನ ಖ್ಯಾತ ಕಲಾವಿದ ಕೆ. ಹಿರಣ್ಣಯ್ಯನವರ ಮಗ.  ಪ್ರಸಿದ್ಧ ನಾಟಕಕಾರ, ಚಿತ್ರನಟ, ಕಿರುತೆರೆ ನಟ. ಕನ್ನಡ ರಂಗಭೂಮಿ ಕಂಡ ಮಹಾನ್ ಕಲಾವಿದ. ತಮ್ಮ ವಿಡಂಬನಾತ್ಮಕ ವಾಗ್ವೈಕರಿ, ಅಭಿನಯ, ನಿರೂಪಣೆಗಳಿಂದ ಪ್ರಸಿದ್ಧರು. ಲಂಚಾವತಾರ, ನಡುಬೀದಿ ನಾರಾಯಣ, ಭ್ರಷ್ಟಾಚಾರ, ಕಲ್ಕ್ಯಾವತಾರ, ಮಿತಸಂತಾನ(ಅನಾಚಾರ), 'ಪುರುಷಾಮೃಗ ನಾಟಕಗಳನ್ನು ರಚಿಸಿದ್ದಾರೆ. ಮಾಸ್ಟರ್ ಹಿರಣ್ಣಯ್ಯನವರಿಗೆ ಕರ್ನಾಟಕ

ನಾಟಕ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಅತ್ಯುನ್ನತ ರಂಗ ಪ್ರಶಸ್ತಿಯಾದ ಡಾ. ಗುಬ್ಬಿ ವೀರಣ್ಣ ಪ್ರಶಸ್ತಿಯೂ ಸೇರಿದಂತೆ ಹಲವಾರು ಪ್ರಶಸ್ತಿಗಳು ಲಭ್ಯವಾಗಿವೆ. ಇವೆಲ್ಲಕ್ಕೂ ಮಿಗಿಲಾಗಿ ದೇಶ ವಿದೇಶಗಳಲ್ಲಿರುವ ಕನ್ನಡಿಗರು ಅವರ ನಾಟಕಗಳನ್ನೂ ಅವರನ್ನೂ ನಿರಂತರವಾಗಿ ಗೌರವಿಸಿದ್ದಾರೆ. ಕರ್ನಾಟಕ ಮುಕ್ತವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪದವಿಗೆ ಇವರು ಭಾಜನರಾಗಿದ್ದಾರೆ.

**ಎಸ್.ವಿ.ಶ್ರೀನಿವಾಸರಾವ್**: ಕಾದಂಬರಿಕಾರರಾದ ಇವರು ಬೆಂಗಳೂರಿನಲ್ಲಿ ನೆಲೆಸಿದ್ದು, ಕನ್ಯಾದಾನ, ಸ್ವರದೊಳು, ಸ್ವಾತಿಯ ಹನಿ, ಗೆಜ್ಜೆ ಕಟ್ಟಿದ ಹೆಜ್ಜೆ ಮುಂತಾದ ಕಾದಂಬರಿಗಳನ್ನು ರಚಿಸಿದ್ದಾರೆ. ನಾಲ್ಕು ಕಥಾಸಂಕಲನ, ಇಮ್ಮಡಿ ಪುಲಿಕೇಶಿ, ಕೆರೂರ ವಾಸುದೇವಾಚಾರ್ಯ ಎಂಬ ಪುಸ್ತಕಗಳನ್ನು ಮಕ್ಕಳಿಗಾಗಿ ಪ್ರಕಟಿಸಿದ್ದಾರೆ. ಇವರ ಒರಿಯಾ ಕಥಾ ಸಂಕಲನಕ್ಕೆ ೧೯೮೪ರಲ್ಲಿ ರಾಜ್ಯಸರ್ಕಾರ ಪ್ರಶಸ್ತಿ ನೀಡಿದೆ. ಅಲ್ಲದೆ ಆರ್ಯಭಟ ಪ್ರಶಸ್ತಿ ಪಡೆದುಕೊಂಡಿದ್ದಾರೆ.

**ನಾ. ದಯಾನಂದ:** ಚಿಕ್ಕನಾಯಕನಹಳ್ಳಿಯ ನಾ.ದಯಾನಂದ, ಸೆಂಟ್ ಜೋಸೆಫ್ ಕಾಲೇಜಿನಲ್ಲಿ ಸಮಾಜಶಾಸ್ತ್ರ ಪ್ರಾಧ್ಯಾಪಕರಾಗಿದ್ದು ನಿವೃತ್ತಿ ಹೊಂದಿದ್ದಾರೆ. ಈವರೆವಿಗೂ ೨೭ ಕೃತಿಗಳನ್ನು ರಚಿಸಿದ್ದಾರೆ. ಕಾವ್ಯ, ಪ್ರಬಂಧ, ಜೀವನ ಚಿತ್ರಣ ಇವರ ಸಾಹಿತ್ಯ ಆಸಕ್ತಿಯ ಕ್ಷೇತ್ರಗಳು. ನಮ್ಮ ಕಥೆ (ವಿಸ್ತಾರ ಕಾವ್ಯ), ಸುಳಿವು, ಶಿಲ್ಪಕಿಟಕಿ ಇವರ ಕಾವ್ಯ ಸಂಕಲನಗಳು. ಆಂಗ್ಲ ಭಾಷೆಯ ಕಾವ್ಯಾನುವಾದಗಳಾದ ಸ್ವಪ್ನ, ಕನಸಿನ ಕ್ಷಣಗಳು, ಗಾಳಿಯ ನೀರವದಲ್ಲಿ,ಮುಖ್ಯವಾದ ಕೃತಿಗಳು. ಇವರ 'ಸಮದರ್ಶಿಕೃತಿಯು ತಂದೆ ಜಿ.ವಿ.ನಾರಾಯಣಮೂರ್ತಿ ಯವರ ಜೀವನ ಚಿತ್ರಣವನ್ನು ನೀಡುತ್ತದೆ. ಇವರು ಕನ್ನಡ ಹಾಗೂ ಆಂಗ್ಲ ಭಾಷೆಗಳೆರಡರಲ್ಲೂ ಉತ್ತಮ ಕೃಷಿ ಮಾಡಿದ್ದಾರೆ.

**ಗೌಡನಕಟ್ಟೆ ತಿಮ್ಮಯ್ಯ:** ತುಮಕೂರು ಅಕ್ಷರ ಮುದ್ರಣದ ಮಾಲೀಕರು. ಇವರು ರೀಲು ಪುರಾಣ, ಚಕ್ಕಲಗುಳಿ ಎಂಬ ಹಾಸ್ಯ ಸಂಕಲನಗಳನ್ನು, ಆಕ್ರಂದನ ಎಂಬ ಕವನ ಸಂಕಲನವನ್ನೂ ರಚಿಸಿದ್ದಾರೆ. 'ರಸಾಯನ' ಎಂಬ ಕೃತಿಯನ್ನು ಸಂಪಾದಿಸಿದ್ದಾರೆ. ಪ್ರಸ್ತುತ ಇವರು ನಗರದ ನಗೆಮಲ್ಲಿಗೆ ಎಂಬ ಹಾಸ್ಯ ಸಂಸ್ಥೆಯ ಅಧ್ಯಕ್ಷರಾಗಿದ್ದಾರೆ. ಹೆಚ್.ಎಂ.ಟಿ ಕಾರ್ಖಾನೆ ನೌಕರರಾಗಿ, ನಾಟಕ ಕಲಾಕ್ಷೇತ್ರದಲ್ಲಿ ಸೇವೆ ಸಲ್ಲಿಸಿರುವರು. ಪುಸ್ತಕ ಮಾರಾಟ ಇವರ ಹವ್ಯಾಸ. ಪ್ರತಿ ವರ್ಷ ಏಪ್ರಿಲ್ ೧ರಂದು ನಡೆಸುವ ಮೂರ್ಖರ ದಿನಾಚರಣೆ ಜನಪ್ರಿಯ ಕಾರ್ಯಕ್ರಮವಾಗಿದೆ. ಇವರ ಬಗ್ಗೆ 'ನಗೆಜಂಗಮ ಎಂಬ ಅಭಿನಂದನ ಗ್ರಂಥ ಹೊರತರಲಾಗಿದೆ.

**ರಾಮಚಂದ್ರ ಸ್ಯಾದ್ವಾದಿ:** ನಿವೃತ್ತ ಶಾಲಾ ಶಿಕ್ಷಕರಾದ ಇವರು ಆದಿನಾಥ ಚರಿತ್ರೆ, ಯಶೋಧರ ಚರಿತ್ರೆ, ಜೈನಧರ್ಮ ಪಂಚಮಿ ಎಂಬ ಧಾರ್ಮಿಕ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಸ್ಯಾದ್ವಾದ್ವಿ, ಶ್ರಾವಕ ರತ್ನ, ಜೈನಧರ್ಮ ದಿವಾಕರ ಎಂಬ ಪ್ರಶಸ್ತಿಗಳು ಲಭಿಸಿವೆ.

**ಡಾ. ಜಿ.ವಿ.ಆನಂದಮೂರ್ತಿ**: ಪದವಿಪೂರ್ವ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿರುವ ಇವರು ಅನೇಕ ಕೃತಿಗಳನ್ನು ರಚಿಸಿದ್ದಾರೆ. ಬುದ್ಧ ತೋರಿದ ದಾರಿ (ಜೀವನ ಚರಿತ್ರೆ), ತತ್ವಪದಕಾರರು (ಸಂಕಲನ), ಗಂಧರ್ವ ಲೋಕದ ಗೆಣೆಕಾರರು (ಸಂಗ್ರಹ), ಶಾಂತವೇರಿ ಗೋಪಾಲಗೌಡರ ನೆನಪಿನ ಸಂಪುಟ (ಸಂಪಾದಿತ), ಹಲವು ತೋಟದ ಹೂಗಳು (ಜಾನಪದ ಸಂಕಲನ), ಮೂರು ದಲಿತ ಕಮ್ಮಟಗಳು, ಜಾನಪದ ಸಮಾಚಾರ ಕರಾವಳಿ ಯಕ್ಷಗಾನ ಮುಂತಾದ ಕೃತಿಗಳನ್ನು ರಚಿಸಿದ್ದು, ಅನೇಕ ಕೃತಿಗಳನ್ನು ಸಂಪಾದಿಸಿದ್ದಾರೆ. ಇವರ 'ನೀರಗಂಧ ಕವನ ಸಂಕಲನ ಪ್ರಕಟವಾಗಿದೆ.

**ಕೊಳಾಲ ಸಿದ್ಧಬಸವಯ್ಯ:** ಕೊಳಾಲ ಕಾಲೇಜಿನಲ್ಲಿ ಉಪನ್ಯಾಸಕರಾಗಿ ನಿವೃತ್ತರಾಗಿರುವ ಇವರು ನಮ್ಮ ಕವಿಗಳು, ಕನ್ನಡ ವ್ಯಾಕರಣ, ಸ್ಫಟಿಕ, ತಡಪಸಲು ಎಂಬ ಕೃತಿಗಳನ್ನು ಪ್ರಕಟಿಸಿದ್ದಾರೆ. ಅಡ್ನಾಡಿಯ ಹಾಸ್ಯ ಪ್ರಸಂಗಗಳು ತುಮಕೂರು ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಇವರ ಪತ್ನಿ ಲಲಿತ ಸಿದ್ಧಬಸವಯ್ಯ ಕೂಡ ಖ್ಯಾತ ಕವಯಿತ್ರಿ.

**ಸಿದ್ದಗಂಗಪ್ಪ:** ಸಿದ್ಧಗಂಗಾ ತಾಂತ್ರಿಕ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿರುವ ಇವರು ಅನೇಕ ವಿಜ್ಞಾನ ಕೃತಿಗಳನ್ನು ರಚನೆ ಮಾಡಿದ್ದಾರೆ. ಶಕ್ತಿಗತಿ ಚಲನಶಾಸ್ತ್ರ, ಮೈಕೆಲ್ ಫ್ಯಾರಡೆ ಅಲ್ಲದೆ ನೊಬೆಲ್ ಪಾರಿತೋಷಕ ವಿಜೇತ ಭೌತವಿಜ್ಞಾನಿಗಳು ಎನ್ನುವ ಮಾಲೆಯಲ್ಲಿ ೧೦ ಕೃತಿಗಳನ್ನು ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದೆ.

**ಕೆ.ಬಿ.ಸಿದ್ದಯ್ಯ:** ಸಿದ್ಧಾರ್ಥ ಪದವಿಪೂರ್ವ ಕಾಲೇಜಿನಲ್ಲಿ ಆಂಗ್ಲ ಉಪನ್ಯಾಸಕರಾಗಿರುವ ಇವರು ದಲಿತ, ಬಂಡಾಯ ಸಾಹಿತ್ಯ ಚಿಂತಕರು, ವಿಮರ್ಶಕರೂ ಆಗಿದ್ದಾರೆ. ಬಕಾಲ, ದಕ್ಲಕಥಾದೇವಿಕಾವ್ಯ, ಅನಾತ್ಮ ಹಾಗೂ ಗಲ್ಲೆಬಾನಿ ಎನ್ನುವ ಕೃತಿಗಳನ್ನು ರಚಿಸಿದ್ದಾರೆ. 'ನಾಲ್ಕುಶ್ರೇಷ್ಠ ಸತ್ಯಗಳು' ಎನ್ನುವ ಕೃತಿಯನ್ನು ಸಂಪಾದಿಸಿದ್ದಾರೆ. ೨೦೧೩ನೇ ಸಾಲಿನ ಕರ್ನಾಟಕ ರಾಜ್ಯ ರಾಜ್ಯೋತ್ಸವ ಪ್ರಶಸ್ತಿ ಪಡೆದಿದ್ದಾರೆ.

**ಎಂ.ಜಿ.ವೆಂಕಟೇಶ್:** ನಿವೃತ್ತ ಶಿಕ್ಷಕರಾಗಿರುವ ಇವರು ಜ್ಞಾನ ಸಿಂಧು, ಜ್ಞಾನ ಜ್ಯೋತಿ, ಪುಷ್ಪಾಂಜಲಿ, ನುಡಿ ಮಲ್ಲಿಗೆ ಮತ್ತು ಜ್ಞಾನ ದೀಪ್ತಿ ಎಂಬ ಕೃತಿಗಳನ್ನು ಪ್ರಕಟಿಸಿದ್ದಾರೆ.

**ಕೆ.ಪಿ.ನಟರಾಜ್:** ತುರುವೇಕೆರೆ ತಾಲೂಕು ಕಲ್ಕೆರೆಯ ಇವರು ಹೆಚ್.ಎಂ.ಟಿ. ಕಾರ್ಖಾನೆಯ ಉದ್ಯೋಗದಲ್ಲಿದ್ದು ಸ್ವಯಂ ನಿವೃತ್ತಿ ಪಡೆದಿರುವರು. ಚಿಂತಕ, ಹೋರಾಟಗಾರ ಹಾಗೂ ವಿಮರ್ಶಕರು. ಓ ಕಪ್ಪು ಹುಡುಗಾ, ಮತ್ತೆ ನನ್ನ ಆಕಾಶ, ಶಿವ ಶಿವೆ ಕವನ ಸಂಕಲನ ಹಾಗೂ ಮಧುರಚೆನ್ನ ಎಂಬ ಕೃತಿ ರಚಿಸಿದ್ದಾರೆ.

**ಜಿ.ವಿ.ವಿ.ಶಾಸ್ತ್ರಿ:** ಪ್ರಕೃತಿ ಪ್ರತಿಷ್ಠಾನ ಸಂಸ್ಥೆಯ ಸ್ಥಾಪಕರಾದ ಇವರು ಗಾಂಧೀಜಿಯವರಿಂದ ಪ್ರೇರಿತರಾಗಿ ನಿಸರ್ಗೋಪಚಾರದಲ್ಲಿ ತೊಡಗಿಸಿಕೊಂಡಿದ್ದು, ನಿಸರ್ಗ ಜೀವನ, ಮನುಜ! ಏನು ನಿನ್ನ ಸಾಹಿತ್ಯ ಪರಿಷತ್ತಿನಲ್ಲಿ ಅಧ್ಯಕ್ಷರಾಗಿದ್ದಾರೆ. ಸಮಾಜ ಸೇವಾರತ್ನ, ಪ್ರಿಯದರ್ಶಿನಿ ಇಂದಿರಾಗಾಂಧಿ ಪ್ರಶಸ್ತಿಗಳು ಬಂದಿವೆ.

**ಡಾ. ಬಿ.ನಂಜುಂಡಸ್ವಾಮಿ:** ವೃತ್ತಿಯಿಂದ ವೈದ್ಯರಾಗಿದ್ದು ಪ್ರವೃತ್ತಿಯಲ್ಲಿ ಇತಿಹಾಸ ಹಾಗೂ ಸಾಹಿತ್ಯಾಸಕ್ತರು. ಇವರು ಇತರರ ಜೊತೆಯಲ್ಲಿ ಚೆನ್ನುಡಿ, ನಮಃ ಶಿವಾಯ, ಬಹುಧಾನ್ಯ ಸಿರಿ, ಮಹಾದಾಸೋಹಿ, ಸೋಮೆಕಟ್ಟೆ ಚೆನ್ನವೀರ ಸ್ವಾಮಿ ಮುಂತಾದ ಕೃತಿಗಳನ್ನು ಸಂಪಾದಿಸಿದ್ದಾರೆ. ಸಂಶೋಧನೆಯಲ್ಲಿ ಆಸಕ್ತಿ ಇರುವ ಇವರು ೫೦ಕ್ಕೂ ಹೆಚ್ಚು ಸಂಶೋಧನಾ ಲೇಖನಗಳನ್ನು ಬರೆದಿದ್ದಾರೆ.

**ಡಾ.ಡಿ.ಎನ್.ಯೋಗೀಶ್:** ಸಿದ್ಧಗಂಗಾ ಮಹಿಳಾ ಕಾಲೇಜಿನಲ್ಲಿ ಇತಿಹಾಸ ಪ್ರಾಧ್ಯಾಪಕರಾಗಿರುವ ಇವರು ಸಂಶೋಧಕರು. ಈ ಜಿಲ್ಲೆಗೆ ಸಂಬಂಧಿಸಿದಂತೆ ಸುಮಾರು ೨೭ ಸಂಶೋಧನಾ ಲೇಖನಗಳನ್ನು ವಿಚಾರ ಸಂಕಿರಣಗಳಲ್ಲಿ ಮಂಡಿಸಿದ್ದಾರೆ. ಹಾಗಲವಾಡಿ ನಾಯಕರ ಬಗೆಗೆ ಸಂಶೋಧನೆ ಮಾಡಿ ಮೈಸೂರು ವಿಶ್ವವಿದ್ಯಾಲಯದಿಂದ ಪಿಹೆಚ್.ಡಿ. ಪಡೆದಿದ್ದಾರೆ. ಇತರರೊಡನೆ ಬಹುಧಾನ್ಯ ಸಿರಿ, ಸಂತೃಪ್ತಿ ಎಂಬ ಸಂಪಾದಿತ ಕೃತಿ ಹಾಗೂ ಸ್ವತಂತ್ರವಾಗಿ ಹೆಂಜೇರು, ಅಕಾಡೆಮಿಕ್ ವಾಯ್ಸ್ ಎಂಬ ಸಂಚಿಕೆಗಳನ್ನು ಸಂಪಾದಿಸಿದ್ದಾರೆ. ಕಲ್ಪಸೌಧ ಎಂಬ ಲೇಖನ ಸಂಕಲನ ಸೇರಿದಂತೆ ಇವರ ಹಲವಾರು ಕೃತಿಗಳು ಪ್ರಕಟವಾಗಿವೆ.

**ಶಿವರಾಮಯ್ಯ:** ಮಧುಗಿರಿ ತಾಲೂಕು ಆವಿನಮಡು ಗ್ರಾಮದ ಇವರು ನಿವೃತ್ತ ಅಧ್ಯಾಪಕರು. ಸಾಹಿತ್ಯ, ಸಂಸ್ಕೃತಿ, ರಾಜಕೀಯ ವಿಶ್ಲೇಷಣೆ, ಸಾಮಾಜಿಕ ಸಮಸ್ಯೆಗಳಿಗೆ ಪ್ರತಿಕ್ರಿಯೆ ಮೂಲಕ ಸಾಹಿತ್ಯರಚನೆಗೆ ತೊಡಗಿದ್ದಾರೆ. ವಿಮರ್ಶಾನೆಲೆಯಲ್ಲಿ ಇವರ ಬರಹಗಳು ವಿಚಾರಪ್ರದವಾಗಿವೆ. ಅನೇಕ ಸಾಹಿತ್ಯ ಪತ್ರಿಕೆಗಳಿಗೆ ಲೇಖನ ಬರೆಯುತ್ತಿದ್ದಾರೆ. ಸ್ವಪ್ನ ಸಂಚಯ, ಗಂಡೊಂದು ಹೆಣ್ಣಾರು, ನಾವು ಕಟ್ಟಿದ ಸ್ವರ್ಗ, ಬಣ್ಣದಹುಳು, ಮುಂತಾದ ಕವನಸಂಕಲನ, ಸಾಹಿತ್ಯ ಪರಿಸರ, ಸಾಹಿತ್ಯ ಮತ್ತು ಚರಿತ್ರೆ, ಉರಿಯ ಉಯ್ಯಾಲೆ, ಇಮ್ಮಾವು, ಅಂತರ್ಜಲ, ಸುನಯ ಮುಂತಾದ ವಿಮರ್ಶಾಕೃತಿಗಳು, ಪ್ರಾಚೀನ ಕನ್ನಡ ಕಾವ್ಯ-೪, ವಿರಹಿಗಳ ಶೃಂಗಾರ, ಅರಸುಗಳಿಗಿದು ವೀರ, ಹಾಗೂ ಪ್ರವಾಸಕಥನ ಸೇರಿದಂತೆ ಇವರ ಅನೇಕ ಕೃತಿಗಳು ಪ್ರಕಟವಾಗಿವೆ.

**ಹೀ.ಚಿ.ಶಾಂತವೀರಯ್ಯ:** ತಿಪಟೂರು ತಾಲೂಕು ಹೀಚನೂರಿನ ಇವರು ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ನಿವೃತ್ತ ಸಂಪಾದಕರು. ದೇಶಮುದ್ರೆ ಮಲ್ಲಪ್ಪ, ಬಿ.ಪುಟ್ಟಸ್ವಾಮಯ್ಯ, ಅಕ್ಕಮಹಾದೇವಿ, ಐಜಿಪಿ ವೀರಭದ್ರಯ್ಯ, ನೊಳಂಬ ಸಿದ್ದೇಶ್ವರ ಮೊದಲಾದವರ ಜೀವನ ಚರಿತ್ರೆ, ಕನ್ನಡ ಸಾಹಿತ್ಯ ಪರಿಚಯ, ವಚನಸಾರ, ಶಾಸನ ಪರಿಚಯ, ಬಸವಣ್ಣನವರ ವಚನಗಳಲ್ಲಿ ವೃಕ್ಷ, ಮುಂತಾದ ವಿಮರ್ಶಾ ಸಂಕಲನಗಳು, ಕನ್ನಡ ಜನಪದ ಕಥೆಗಳು, ಗುಣಗಳುಳ್ಳ ಕಥೆಗಳು, ಚುಟುಕುಗಳು ಅಂದು-ಇಂದು, ಉದಯೋನ್ಮುಖ ಕವಿಗಳಿಗೆ ಒಂದು ಕಿವಿಮಾತು, ಯಮಲೋಕದಲ್ಲಿ ರಾಜ್ಯೋತ್ಸವ, ಸೋಮೇಶ್ವರ

ಶತಕ, ಅರಸೀಕೆರೆ ದರ್ಶನ ಮುಂತಾದ ಕೃತಿಗಳಲ್ಲದೇ ಭಾಷಾ ವಿಜ್ಞಾನಿಯಾಗಿ, ಕನ್ನಡ ಸಾಹಿತ್ಯ ಪರಿಷತ್ತಿನಿಂದ ಕನ್ನಡ ನಿಘಂಟು, ಸಂಕ್ಷಿಪ್ತ ನಿಘಂಟು, ಅಲ್ಲದೇ ವೀರಶೈವ ಪಾರಿಭಾಷಿಕ ಮುಂತಾದ ಕೃತಿಗಳು ಪ್ರಕಟಿಸಲ್ಪಟ್ಟಿವೆ.

**ಸಿ.ಕೆ.ಪರಶುರಾಮಯ್ಯ:** ವಾರ್ತಾ ಮತ್ತು ಪ್ರಚಾರ ಇಲಾಖೆಯಲ್ಲಿ ಜಂಟಿ ನಿರ್ದೇಶಕರಾಗಿ ನಿವೃತ್ತರಾಗಿರುವ ಇವರು ಚಿಕ್ಕನಾಯಕನಹಳ್ಳಿಯವರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಎಂ.ಎ., ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಭಾಷಾಶಾಸ್ತ್ರ ಎಂ.ಎ., ಪಡೆದು ಅನೇಕ ಕಡೆ ಅಧ್ಯಾಪಕ ವೃತ್ತಿ ಕೈಗೊಂಡು, ೧೯೬೪ರಲ್ಲಿ ವಾರ್ತಾ ಇಲಾಖೆ ಸೇರಿದರು. ಜನಪದ ವಾರ್ತಾ ಪತ್ರಿಕೆಗಳ ಸಂಪಾದಕರಾಗಿದ್ದರು. ಭಾಷಾಂತರ ಇಲಾಖೆಯಲ್ಲಿ ಸೇವೆ, ಇಲಾಖೆಯ ಸಂಗೀತ, ನಾಟಕ ವಿಭಾಗ, ಆರೋಗ್ಯ ಇಲಾಖೆಯ ಭಾರತ ಜನಸಂಖ್ಯಾ ಯೋಜನೆ–೩ರ ಪ್ರಕಟಣಾ ಉಪನಿರ್ದೇಶಕರಾಗಿ, ವಿವಿಧ ಆರೋಗ್ಯ ಯೋಜನೆಗಳ ನಿರ್ವಹಣೆ, ಮದ್ಯಪಾನ ಸಂಯಮ ಮಂಡಳಿ ಕಾರ್ಯದರ್ಶಿಯಾಗಿ, ಸರ್ಕಾರದ ಅನೇಕ ಪ್ರಕಟಣೆಗಳ ಸಂಪಾದಕರಾಗಿ, ಲೇಖಕರಾಗಿ ಹಾಗೂ ಸಾಕ್ಷ್ಯಚಿತ್ರ ಮತ್ತು ವಾರ್ತಾಚಿತ್ರಗಳಿಗೆ ಸಾಹಿತ್ಯ ರಚನೆ, ನಿರೂಪಣೆ ಮಾಡಿದ್ದಾರೆ. ನೀಲಲೋಚನೆಯ ವಚನಗಳು, ಚೌಡಿಕೆಯವರು, ಪ್ರಾಚೀನ ಆದರ್ಶ ಬಾಲಕರು, ಸಂತಕವಿ ಕನಕದಾಸ, ತಾಯಂದಿರಿಗೆ ತಿಳಿದಿರಲಿ, ಹೈನುಗಾರಿಕೆ, ಕುಡಿತದ ಗೀಳು–ಬಾಳಿನ ಗೋಳು, ಮುಂತಾದ ಅನೇಕ ಕೃತಿಗಳು ಪ್ರಕಟವಾಗಿವೆ. ಹೀಗೆ ಬಹುಮುಖ ಸೇವೆ ಸಲ್ಲಿಸಿದ ಇವರಿಗೆ ಅನೇಕ ಗೌರವ ಸನ್ಮಾನಗಳು ಸಂದಿವೆ.

**ಡಾ.ಬಿ.ನಂ.ಚಂದ್ರಯ್ಯ:** ಕೊರಟಗೆರೆ ತಾಲೂಕು ಬಿದಲೋಟಿ ಗ್ರಾಮದ ಇವರು ಬಹುಭಾಷಾ ಪಂಡಿತರು. ದ್ರಾವಿಡ ಭಾಷಾ ತಜ್ಞರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿ ಮಂಡ್ಯ ಸ್ನಾತಕೋತ್ತರ ವಿಭಾಗದ ನಿರ್ದೇಶಕರಾಗಿದ್ದರು. ಬಸವ ಪುರಾಣ, ಶಾಂತೇಶನ ಸಿದ್ದೇಶ್ವರ ಪುರಾಣ ಕೃತಿಗಳಿಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯಲ್ಲದೇ ೨೦೦೫ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಮುಂತಾದ ಅನೇಕ ಪ್ರಶಸ್ತಿಗಳು ಬಂದಿವೆ. ಬೌದ್ಧ ಸಾಹಿತ್ಯದಲ್ಲಿ ಅಪಾರ ಪರಿಶ್ರಮ ಹೊಂದಿ ಅನೇಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಚಿತ್ರಲೇಖಾ, ಮಲ್ಲಿಕಾ, ಆಲದ ನೆರಳು ಮತ್ತು ಆರು ಸಂಪುಟಗಳ ಬುದ್ದನ ಜಾತಕ ಕಥೆಗಳು ಹೊರಬಂದಿವೆ. ಇದನ್ನು ಪಾಳಿ ಭಾಷೆಯಲ್ಲಿದ್ದ ಓಲೆಗರಿಯಿಂದ ನೇರ ಅನುವಾದ ಮಾಡಲಾಗಿವೆ. ಅಲ್ಲದೆ ಇಂಗ್ಲಿಷ್‌ನಲ್ಲೂ ಕೃತಿಗಳನ್ನು ಪ್ರಕಟಿಸಿದ್ದಾರೆ. ತುಮಕೂರು ಜಿಲ್ಲೆಯ ತಿಪಟೂರಿನಲ್ಲಿ ನಡೆದ ಆರನೆಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

**ಡಾ. ಟಿ.ಆರ್.ಅನಂತರಾಮು:** ನೂರಕ್ಕೂ ಹೆಚ್ಚು ಶಿರಾ ತಾಲೂಕು ತಾಳಗುಂದ ಗ್ರಾಮದ ಇವರು ಬೆಂಗಳೂರಿನಲ್ಲಿ ಹಿರಿಯ ಭೂ ವಿಜ್ಞಾನಿಯಾಗಿ ಸೇವೆ ಸಲ್ಲಿಸಿ. ಹಲವಾರು ವೈಜ್ಞಾನಿಕ ಕೃತಿಗಳನ್ನು ರಚಿಸಿದ್ದು, ಹಿಮದ ಸಾಮ್ರಾಜ್ಯದಲ್ಲಿ, ಭೂಕಂಪನಗಳು, ಕಾಲಗರ್ಭಕ್ಕೆ ಕೀಲಿಕೈ, ಕನ್ನಡದಲ್ಲಿ ಭೂವಿಜ್ಞಾನ ಸಾಹಿತ್ಯ, ಭೂಮಿಯ ಅಂತರಾಳ, ರತ್ನಗಳು, ಅಂಟಾರ್ಟಿಕ್, ಬಾನಂಗಳದ ಬತ್ತಳಿಕೆಯಲ್ಲಿ ಮುಂತಾದ ಕೃತಿಗಳು; ರಾಷ್ಟ್ರಪತಿ ಅಬ್ದುಲ್ ಕಲಾಂ, ಬೀರಬಲ್, ಸಾಹ್ನಿ, ವರಾಹ ಮಿಹಿರ, ಎಂ.ಎಸ್.ಕೃಷ್ಣನ್, ಆಲ್ಫ್ರೆಡ್ ವೆಗೆನರ್ ಮುಂತಾದವರ ಜೀವನ ಪರಿಚಯ, ಹಾಗೂ ಅನುವಾದ ಕೃತಿಗಳು ಪ್ರಕಟವಾಗಿವೆ. ಕನ್ನಡ ವಿಶ್ವವಿದ್ಯಾನಿಲಯ ಪ್ರಕಟಿಸುವ ವಿಜ್ಞಾನ ಸಂಗಾತಿ ನಿಯತಕಾಲಿಕೆಯ ಸಂಪಾದಕರಾಗಿದ್ದರು. ಮೂರು ಬಾರಿ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪುಸ್ತಕ ಬಹುಮಾನಕ್ಕೆ ಪಾತ್ರರಾಗಿದ್ದಾರೆ. ತುಮಕೂರು ವಿ.ವಿ. ಗೌರವ ಡಾಕ್ಟರೇಟ್ ಪ್ರದಾನ ಮಾಡಿದೆ.

**ಹಾಲ್ದೊಡ್ಡೇರಿ ಸುಧೀಂದ್ರ:** ಬೆಂಗಳೂರಿನ ಜೈನ್ ಕಾಲೇಜಿನಲ್ಲಿ ಇಂಜಿನಿಯರಿಂಗ್ ಬೋಧಿಸುವ ತಾಂತ್ರಿಕ ವಿಜ್ಞಾನಿ. ಕನ್ನಡ ವಿಜ್ಞಾನ ಲೇಖಕರು. ಇವರ ಅನೇಕ ಕೃತಿಗಳು ಹೊರಬಂದಿವೆ. ಕಂಪ್ಯೂಟರ್ ವಿಜ್ಞಾನದ ಬಗ್ಗೆ ಅಂಕಣ ಬರಹಗಾರರಾಗಿ ಅನೇಕ ಪತ್ರಿಕೆಗಳಿಗೆ ಬರೆದಿದ್ದಾರೆ.

**ಡಾ.ಡಿ.ಕೆ.ಚಿತ್ತಯ್ಯ ಪೂಜಾರ:** ಪಾವಗಡ ತಾಲೂಕು ದವಡಬೆಟ್ಟದ ಇವರು ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ಪ್ರಾಧ್ಯಾಪಕರು. 'ನಿಡುಗಲ್ಲು ಒಂದು ಸಾಂಸ್ಕೃತಿಕ ಅಧ್ಯಯನ' ಪ್ರಬಂಧಕ್ಕೆ ಡಾಕ್ಟರೇಟ್ ಪಡೆದಿದ್ದಾರೆ. ಇವರ ಭೂತ ಎಂಬ ನಾಟಕ, ಜೋಳಿಗೆ ಹೊನ್ನು, ನಿಜದನೆಲೆ, ಸ್ಥಳೀಯ ಸಂಸ್ಕೃತಿ ಚರಿತ್ರೆಯ ನಿರ್ವಚನ, ನಿಡುಗಲ್ಲು ಚನ್ನಪ್ಪ–ಬದುಕು ಬರಹ, ಮುಂತಾದ ಕೃತಿಗಳು ಪ್ರಕಟವಾಗಿವೆ.

**ಡಾ.ಅಬ್ದುಲ್ ಹಮೀದ್**: ನಿವೃತ್ತ ಕನ್ನಡ ಪ್ರಾಧ್ಯಾಪಕರಾದ ಇವರು ಚಿಕ್ಕನಾಯಕನಹಳ್ಳಿ ತಾಲೂಕು ಹಂದನಕೆರೆಯವರು. ೨೦೧೨ರಲ್ಲಿ ಚಿಕ್ಕನಾಯಕನಹಳ್ಳಿಯಲ್ಲಿ ನಡೆದ ತಾಲೂಕು ಸಮ್ಮೇಳನಾಧ್ಯಕ್ಷರಾಗಿದ್ದರು. 'ಸೂಫಿಪಂಥ ಮತ್ತು ಶರಣರ ಪಥಗಳ ತೌಲನಿಕ ಅಧ್ಯಯನ' ಇವರ ಪಿಹೆಚ್.ಡಿ., ಪ್ರಬಂಧ. ಹಜ್ರತ್ ಬಂದೇ ನವಾಜ್, ಸಾಮಾಜಿಕ ಅನಿಷ್ಟಗಳು, ನೆಹರು ಮತ್ತು ಸಂಸದರು (ಹಿಂದಿ); ಸಿದ್ಧಾಂತ ಶಿಖಾಮಣಿಯಲ್ಲಿ ಸಾರ್ವತ್ರಿಕ ಮೌಲ್ಯಗಳು, ವಚನಕಾರರು ಮತ್ತು ಸೂಫಿ ಸಂತರು ಮುಂತಾದ ಕೃತಿಗಳನ್ನು ಇವರು ರಚಿಸಿದ್ದಾರೆ.

**ಡಾ.ಕೆ.ಜಿ.ನಾಗರಾಜಪ್ಪ**: ಕನ್ನಡ ಸಾಹಿತ್ಯ ಮತ್ತು ವಿಮರ್ಶಾವಲಯದಲ್ಲಿನ ರೂಢಿಗತ ಕಲ್ಪನೆಗಳನ್ನು ಭಗ್ನಗೊಳಿಸಿದ ವಿಮರ್ಶಕ ಎಂಬ ಖ್ಯಾತಿವೆತ್ತ ಇವರು ಗುಬ್ಬಿತಾಲೂಕು ಕಲ್ಲೂರಿನವರು. ಸಿದ್ದಗಂಗಾ ಕಾಲೇಜಿನಲ್ಲಿ ಅಧ್ಯಾಪಕರಾಗಿ, ನಿವೃತ್ತಿ ಹೊಂದಿ ಹಾಲಿ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಇವರ 'ಮರುಚಿಂತನೆ' ಮುಂತಾದ ಕೃತಿಗಳು ಪ್ರಕಟವಾಗಿದ್ದು, ದೊಡ್ಡ ಸಂಕಣ್ಣ ನಾಯಕ ಎಂಬ ಕಾದಂಬರಿಗೆ ರಾಜ್ಯಪ್ರಶಸ್ತಿ ಬಂದಿದ್ದು ವಿಶ್ವವಿದ್ಯಾನಿಲಯಕ್ಕೆ ಪಠ್ಯವಾಗಿತ್ತು. ರಾಜ್ಯೋತ್ಸವ ಪ್ರಶಸ್ತಿ, ಅಕಾಡೆಮಿ ಪ್ರಶಸ್ತಿ ಮುಂತಾದ ಗೌರವಗಳು ದೊರಕಿವೆ. ಗುಬ್ಬಿಯಲ್ಲಿ ನಡೆದ ಪ್ರಥಮ ತಾಲೂಕು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

**ಎಂ.ವಿ.ನಾಗರಾಜರಾವ್**: ಚಿಕ್ಕನಾಯಕನಹಳ್ಳಿಯ ಇವರು ನಿವೃತ್ತ ಪ್ರಾಚಾರ್ಯರು. ೧೯೮೫ರಿಂದ ಶೃಂಗಾರ ಪ್ರಕಾಶನದಡಿ ನೂರಾರು ಕೃತಿಗಳನ್ನು, ಮಕ್ಕಳಿಗಾಗಿ ಸಿ.ಡಿಗಳನ್ನು ಪ್ರಕಟಿಸಿದ್ದಾರೆ. ರೋಟರಿ ಕ್ಲಬ್ ಹಾಗೂ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದವರು. ಕನ್ನಡ , ಹಿಂದಿ, ಭಾಷೆಗಳಲ್ಲಿ ಪರಿಣತಿ ಹೊಂದಿ ಸುಮಾರು ೫೦ಕ್ಕೂ ಹೆಚ್ಚು ಕಥೆ, ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ನೂರಾರು ಲೇಖನ, ಹಾಗೂ ೧೩ ಧಾರಾವಾಹಿಗಳು ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಮಹಾಭಾರತ ಸಂಪುಟಗಳಿಗೆ (೧೨) ಪುಸ್ತಕ ಪ್ರಾಧಿಕಾರದ ಪುಸ್ತಕ ಸೊಗಸು ಬಹುಮಾನ ಬಂದಿದೆ. ಇವರ 'ಕಂಪನ' ಕಾದಂಬರಿ ಚಲನಚಿತ್ರವಾಗಿದ್ದು, ಅವರೇ ಸಂಭಾಷಣೆ ಬರೆದಿದ್ದಾರೆ. ಇವರ ಶೃಂಗಾರ ಶಯ್ಯೆ, ಅಘೋರಿಗಳ ನಡುವೆ, ನಾಲ್ಕನೇ ಆಯಾಮ ಮುಂತಾದ ಕಾದಂಬರಿಗಳು ಜನಪ್ರಿಯವಾಗಿವೆ. ಶೆರ್ಲಾಕ್ಹೋಮ್ಸ್ ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಅನೇಕ ಪ್ರಶಸ್ತಿ ಬಹುಮಾನ ಬಂದಿವೆ. ೨೦೧೩ರಲ್ಲಿ ಶಿವಮೊಗ್ಗ ಕರ್ನಾಟಕ ಸಂಘದಿಂದ ಮಕ್ಕಳ ಸಾಹಿತ್ಯದ ಕೊಡುಗೆಗಾಗಿ ಪ್ರಶಸ್ತಿ ಲಭಿಸಿದೆ. ಸುಮಾರು ೨೦೦ ಕೃತಿಗಳು ಪ್ರಕಟವಾಗಿವೆ.

**ಭೈರಪ್ಪ ಕೆ.**: ತುರುವೇಕೆರೆ ತಾಲೂಕು ವಿಠಲಾಪುರದ ಇವರು ನಿವೃತ್ತ ಪ್ರಾಚಾರ್ಯರು. ಇವರ ಮಕ್ಕಳ ಮನಸು, ಬಾಲರ ಭಾವನೆ, ಕಿಶೋರರ ಕಿರಣ, ಚಿಣ್ಣರ ಚಿಲಿಪಿಲಿ ಮುಂತಾದ ಮಕ್ಕಳ ಸಾಹಿತ್ಯ; ಕಾರ್ಲ್‌ಮಾರ್ಕ್ಸ್, ಮನು, ಕೌಟಿಲ್ಯ, ಬಸವೇಶ್ವರ, ಗಾಂಧಿ, ಅಂಬೇಡ್ಕರ್, ದಯಾನಂದ ಸರಸ್ವತಿ, ಅರವಿಂದರು ಮುಂತಾದವರ ಜೀವನ ಚರಿತ್ರೆ, ಮೇಡಂ ರತ್ನ, ರಶ್ಮಿ, ದೇವಪುರ, ಬೃಂದ, ಯಶಸ್ವಿನಿ, ಎಂಬ ಕಾದಂಬರಿಗಳು; ಸಾಮಾಜಿಕ ಅನಿಷ್ಟಗಳು, ಸಮಾಜಶಾಸ್ತ್ರ, ಸಮಗ್ರ ಗ್ರಾಮೀಣ ಸಮಾಜ, ಔದ್ಯೋಗಿಕ ಸಮಾಜಶಾಸ್ತ್ರ, ದಿನಾಚರಣೆಗಳು, ಸುಳ್ಳಾಗದ ಗಾದೆ, ಭಾಷಣ ಕಲೆ ಮುಂತಾದ ಹಲವಾರು ಕೃತಿಗಳು ಪ್ರಕಟವಾಗಿವೆ. ತುರುವೇಕೆರೆ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ರಾಜ್ಯೋತ್ಸವ ಪ್ರಶಸ್ತಿ, ಸಿಟಿಜನ್ಸ್ ಸೊಸೈಟಿ ಆಫ್ ಇಂಡಿಯಾ ಶ್ರೇಷ್ಠತಾ ಪ್ರಶಸ್ತಿಗಳು ಇವರಿಗೆ ಸಂದಿವೆ.

**ಡಾ. ಓ.ಅನಂತರಾಮಯ್ಯ**: ಕೊರಟಗೆರೆಯ ಇವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ, ತುಮಕೂರು ವಿಶ್ವವಿದ್ಯಾನಿಲಯದ ಪ್ರಥಮ ಕುಲಪತಿಗಳಾಗಿದ್ದರು. ಇತಿಹಾಸಕ್ಕೆ ಸಂಬಂಧಿಸಿದಂತೆ ಅನೇಕ ಕೃತಿಗಳು ಹಾಗೂ ನಿಯತಕಾಲಿಕೆಗಳ ಸಂಪಾದಕರು. ಆರ್.ಚನ್ನಿಗರಾಮಯ್ಯನವರ ಜೀವನ ಚರಿತ್ರೆ ರಚಿಸಿದ್ದಾರೆ. ೪೦ ಕ್ಕೂ ಹೆಚ್ಚು ಸಂಶೋಧನಾ ಲೇಖನಗಳು ಪ್ರಕಟವಾಗಿವೆ.

**ಡಾ. ಹೆಚ್.ಎಸ್.ಶಿವಪ್ರಕಾಶ್**: ಇಂಗ್ಲೀಷ್ ಪ್ರಾಧ್ಯಾಪಕರಾಗಿ ಸೇವೆ ಪ್ರಾರಂಭಿಸಿದ ಇವರು ದೆಹಲಿಯ ಜವಹರ್‌ಲಾಲ್ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಜರ್ಮನಿಯ ಬರ್ಲಿನ್ ನಗರದಲ್ಲಿರುವ ಟ್ಯಾಗೋರ್ ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಅಧ್ಯಯನ ಪೀಠಕ್ಕೆ ನಿರ್ದೇಶಕರಾಗಿದ್ದಾರೆ. ಪ್ರಗತಿಪರ ಚಿಂತನೆ, ನವ್ಯ-ದೇಸೀ ನೆಲೆಯಲ್ಲಿ ಸಾಹಿತ್ಯ ರಚಿಸಿದ ಕವಿ. ಮಿಲರೇಪ, ಮಳೆ ಬಿದ್ದ ನೆಲದಲ್ಲಿ, ಮಹಾಚೈತ್ರ, ಬತ್ತೀಸ ರಾಗ ಮುಂತಾದ ಕೃತಿಗಳು ಪ್ರಕಟವಾಗಿವೆ. ರಂಗಭೂಮಿ,

ನಾಟಕ ರಚನೆಯಲ್ಲಿಯೂ ಸಿದ್ಧಹಸ್ತರು. ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಪುರಸ್ಕೃತರಾಗಿದ್ದಾರೆ. ೨೦೧೨ನೇ ಸಾಲಿನಲ್ಲಿ 'ಮಬ್ಬಿನ ಹಾಗೆ ಕಣಿವೆಯಾಸಿ' ಕವನ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ.

**ಡಾ. ಹಿ.ಚಿ.ಬೋರಲಿಂಗಯ್ಯ:** ಕುಣಿಗಲ್ ತಾಲೂಕು ಹಿತ್ತಲಪುರದ ಇವರು ಬುಡಕಟ್ಟು ಸಂಸ್ಕೃತಿ ಅಧ್ಯಯನದ ಮೇಲೆ ಸಂಶೋಧನೆ ಮಾಡಿದ್ದಾರೆ. ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದಲ್ಲಿ ಲಲಿತಕಲಾವಿಭಾಗದ ಮುಖ್ಯಸ್ಥರಾಗಿ, ಪ್ರಸಾರಾಂಗದ ನಿರ್ದೇಶಕರಾಗಿ, ರಿಜಿಸ್ಟ್ರಾರ್, ಕುಲಪತಿ, ಜಾನಪದ ಅಕಾಡೆಮಿ ಹಾಗೂ ರಿಜಿಸ್ಟ್ರಾರ್ ಆಗಿ ಆಡಳಿತಾತ್ಮಕ ಅನುಭವ ಹೊಂದಿರುವುದಲ್ಲದೇ ಕುಪ್ಪಳ್ಳಿಯ ಕುವೆಂಪು ವಿದ್ಯಾ ಕೇಂದ್ರದಲ್ಲಿ ಪ್ರಾಧ್ಯಾಪಕರೂ ಆಗಿದ್ದರು ಅನೇಕ ಸಾಹಿತ್ಯ ಅಧ್ಯಯನ ಪತ್ರಿಕೆಗಳ ಸಂಪಾದಕರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ಉಜ್ಜನಿ ಚೌಡಮ್ಮ, ದಾಸಪ್ಪ-ಜೋಗಪ್ಪ, ಗಿರಿಜನ ನಾಡಿಗೆ ಪಯಣ, ಸಿದ್ದಿಯರ ಸಂಸ್ಕೃತಿ, ಗಿರಿಜನರು-ವಿಸ್ಕೃತಿ ಮತ್ತು ಸಂಸ್ಕೃತಿ, ಬುಡಕಟ್ಟು ದೈವಾರಾಧನೆ, ಗೊಂಡರ ರಾಮಾಯಣ, ಗಿರಿಜನ ಕಾವ್ಯ, ಕಾಗೋಡು ಚಳವಳಿ, ಮಂಟೇಸ್ವಾಮಿ, ಕರ್ನಾಟಕ ಜನಪದ ಕಲೆಗಳ ಕೋಶ ಮುಂತಾದ ಕೃತಿಗಳು ಪ್ರಕಟವಾಗಿದೆ. ಅನೇಕ ಪ್ರಶಸ್ತಿ ಗೌರವ ಸಮ್ಮಾನಗಳು ಲಭ್ಯವಾಗಿವೆ. ದೇಶ-ವಿದೇಶಗಳಲ್ಲಿ ನಡೆದ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿದ್ದಾರೆ.

**ಪ್ರೊ.ಡಿ.ಚಂದ್ರಪ್ಪ:** ಗುಬ್ಬಿ ತಾಲೂಕು ತಿಪ್ಪೂರು ಪಾಳ್ಯದ ಇವರು ೨೦೦೮-೨೦೧೨ರ ಅವಧಿಯಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಅಧ್ಯಾಪಕರ ಸಂಘಟನೆ; ನಿಟ್ಟೂರು ಗ್ರಾಮದಲ್ಲಿ ಶ್ರೀ ಸಿದ್ಧಶ್ರೀ ವಿದ್ಯಾಸಂಸ್ಥೆ ಸಂಸ್ಥಾಪಕ ಕಾರ್ಯದರ್ಶಿ ಕೂಡ. 'ಸಿದ್ಧಗಂಗಾ' ಪತ್ರಿಕೆಯ ಸಹ ಸಂಪಾದಕರಾಗಿದ್ದರು. ಉತ್ತಮ ಶಿಕ್ಷಕ ಪ್ರಶಸ್ತಿ, ಪ್ರತಿಭಾ ಪ್ರಶಸ್ತಿ ಮುಂತಾದ ಗೌರವಗಳಿಗೆ ಪಾತ್ರರಾಗಿದ್ದಾರೆ. ಚಿಗುರು, ನವರತ್ನಮಾಲೆ ನುಡಿಸೇವಕರು, ಕಾವಿಯುಟ್ಟ ಗೊಮ್ಮಟ, ನವರತ್ನ ಮುಂತಾದ ಸಂಪಾದಿತ ಕೃತಿಗಳು ಪ್ರಕಟವಾಗಿವೆ.

**ಕಂಟಲಗೆರೆ ಸಣ್ಣಹೊನ್ನಯ್ಯ:** ಚಿಕ್ಕನಾಯಕನಹಳ್ಳಿ ತಾಲೂಕಿನ ಕಂಟಲಗೆರೆಯ ಇವರು ಕನ್ನಡ ಉಪನ್ಯಾಸಕರು. ಜಾನಪದ ಕಲಾವಿದರು, ಲೇಖಕರು, ಸಂಘಟಕರು. ಜಾನಪದದ ಎಲ್ಲಾ ಪ್ರಕಾರದ ಕರಪಾಲಮೇಳ, ಯಕ್ಷಗಾನ, ಕೋಲಾಟ, ಸೋಮನಕುಣಿತ, ರಂಗಕೀರ್ತನ, ಗಮಕ, ಚಿಟ್ಟಿಮೇಳ, ಮುಂತಾದವುಗಳನ್ನು ಆಸಕ್ತರಿಗೆ ತರಬೇತಿ ನೀಡುವುದಲ್ಲದೇ ಕಲಾವಿದರನ್ನು ಸಂಘಟಿಸಿದ್ದು "ಕರ್ನಾಟಕ ಜಾನಪದ ಸಂಗೀತ ಮತ್ತು ಯಕ್ಷಗಾನ ಬಯಲಾಟ ಕಲಾವಿದರ ಸಂಘ ದ ಸ್ಥಾಪಕ ಅಧ್ಯಕ್ಷರಾಗಿದ್ದಾರೆ. ಆಕಾಶವಾಣಿ ದೂರದರ್ಶನಗಳಲ್ಲಿ ಕಲಾಪ್ರದರ್ಶನ, ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ಶಿಕ್ಷಕರತ್ನ ಮುಂತಾದ ಅನೇಕ ಪ್ರಶಸ್ತಿ, ಗೌರವ ಸಂದಿವೆ. ವಡ್ಡಗೆರೆ ನಾಗಮ್ಮ, ನೂರೊಂದು ದನಿ, ರಂಗಕೀರ್ತನ, ಸಾಧನೆಯ ಹಾದಿಯಲ್ಲಿ, ಕರಪಾಲಮೇಳ ಒಂದು ಅಧ್ಯಯನ, ತುಮಕೂರು ಜಿಲ್ಲೆಯ ಆಸಾದಿಗಳ ಬದುಕು ಮತ್ತು ಸಂಸ್ಕೃತಿ, ತುಮಕೂರು ಜಿಲ್ಲೆಯ ಗಂಡು ದೇವರ ಜಾತ್ರೆಗಳು, ಶಕ್ತಿದೇವತೆಗಳು, ಮುಂತಾದ ಕೃತಿಗಳು ಪ್ರಕಟವಾಗಿವೆ.ಅಲ್ಲದೇ ಹಲವಾರು ಜಾನಪದ ದೊಡ್ಡಾಟ ಅಥವಾ ಕಥಾಕೀರ್ತನದ ಕಥೆಗಳನ್ನು ರಚಿಸಿದ್ದಾರೆ.

**ಹೊಸಕೆರೆ ರಿಜ್ವಾನ್ ಪಾಷ:** ಶಿಕ್ಷಣ ಇಲಾಖೆಯಲ್ಲಿ ಸೇವೆ, ಮಧುಗಿರಿ ತಾಲೂಕು ಹೊಸಕೆರೆಯವರು. ಇವರ ಬದುಕಿನ ಶಿಕ್ಷಣ ಕೃತಿ ೨೦೦೪ರಲ್ಲಿ ಬಿಡುಗಡೆಯಾಗಿದೆ. ಅನೇಕ ಲೇಖನ, ಕವನ, ರೇಡಿಯೋ, ಸಿದ್ಧಾರ್ಥ ಎಫ್.ಎಂ ರೇಡಿಯೋನಲ್ಲಿ ಶಿಕ್ಷಣ ಕಾರ್ಯಕ್ರಮ ನಡೆಸಿಕೊಟ್ಟಿದ್ದಾರೆ.

**ಗುಬ್ಬಚ್ಚಿ ಸತೀಶ್:** ಗುಬ್ಬಿಯ ಇವರು ವೀರಶೈವ ಸಹಕಾರ ಬ್ಯಾಂಕ್ ಉದ್ಯೋಗಿ. ಮಳೆಯಾಗು ನೀ, ಮುಗುಳ್ನಗೆ ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಪ್ರಕಾಶನ ಸಂಸ್ಥೆ ನಡೆಸುತ್ತಿದ್ದಾರೆ.

**ಟಿ.ಎಸ್.ರಾಮಚಂದ್ರರಾವ್:** ಇಂಗ್ಲೀಷ್ ಅಧ್ಯಾಪಕರಾಗಿ ಪ್ರಿನ್ಸಿಪಾಲರಾಗಿ ನಿವೃತ್ತರಾಗಿದ್ದಾರೆ. ಶಿವಛತ್ರಪತಿ ಕಾದಂಬರಿ, ಷೇಕ್ಸ್‌ಪಿಯರ್ ನಾಟಕಗಳ ಕಥಾರೂಪ, ೧೦೮ ಲೀಡಿಂಗ್ ಲೈಟ್ಸ್ ಫ್ರಂ ಸಿದ್ದಗಂಗಾ ಶ್ರೀ, ಮುಂತಾದ ಕೃತಿಗಳು ಪ್ರಕಟವಾಗಿವೆ.

**ಕುಚ್ಚಂಗಿ ಪ್ರಸನ್ನ:** ಕರ್ನಾಟಕ ಸಚಿವಾಲಯದಲ್ಲಿ ಉದ್ಯೋಗಿ-ಪತ್ರಿಕೋದ್ಯಮ, ಕಲೆ, ಸಾಹಿತ್ಯದಲ್ಲಿ ಪರಿಶ್ರಮ. ತಳ ಒಡೆದ ಮಡಕೆ (ಜೆನ್ ಪರಿಚಯ) ಇವರ ಪ್ರಕಟಿತ ಕೃತಿ.

**ಗಂಗಾಧರ ಕೊಡ್ಲಿಯವರ**: ಹೊರೆಗಲ್ಲು, ಮುಂಜಾವಿನ ನಿರೀಕ್ಷೆ, ಕವನ ಸಂಕಲನ, ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷರು, ವೃತ್ತಿಯಲ್ಲಿ ಇಂಜಿನಿಯರ್. ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನಲ್ಲಿ ಕ್ರಿಯಾಶೀಲರಾಗಿದ್ದಾರೆ. ರಾಕ್ ಲೈನ್ ಪ್ರಶಸ್ತಿ, ರಾಷ್ಟ್ರೀಯ ಸಮ್ಮಾನ್ ಪುರಸ್ಕಾರ್ ಮುಂತಾದ ಗೌರವಗಳು ಇವರಿಗೆ ಸಂದಿವೆ.

**ಜಿ.ರಂಗಯ್ಯ**: ನಿವೃತ್ತ ಮುಖ್ಯೋಪಾಧ್ಯಾಯರಾದ ಇವರು ನಿಂಗ–ನಿಂಗಿ, ಸ್ವಾತಂತ್ರ್ಯ ಸಂಗ್ರಾಮ, ಟೋಪಿಗೆ ಟೋಪಿ, ಭಕ್ತ ಧ್ರುವ, ಪರಶುರಾಮ, ಅತಿಸಂತಾನ ಮುಂತಾದ ನಾಟಕಗಳನ್ನು ರಚಿಸಿದ್ದಾರೆ.

**ಕಟಾರಿವೀರನಹಳ್ಳಿ ಜನ್ನಪ್ಪ**: ಶಿರಾ ತಾಲೂಕು ಕಟಾರಿ ವೀರನಹಳ್ಳಿಯ ಇವರು ಸ್ವಲ್ಪ ಕಾಲ ಉಪನ್ಯಾಸಕರಾಗಿದ್ದು ವಾಣಿಜ್ಯ ತೆರಿಗೆ ಅಧಿಕಾರಿಯಾಗಿ ಸೇವೆ ಸಲ್ಲಿಸಿದಮೇಲೆ ಕೆಎಎಸ್ ಮಾಡಿ ವಿಶೇಷ ಜಿಲ್ಲಾಧಿಕಾರಿ ಹುದ್ದೆಯಲ್ಲಿದ್ದಾರೆ. ಇವರ ಮೊದಲ ಕವನ ಸಂಕಲನ 'ಗೀಜುಗ', 'ನಮ್ಮೂರು–ನಮ್ಮವರು ಎಂಬ ಕೃತಿಗಳನ್ನು ಪ್ರಕಟಿಸಿದ್ದಾರೆ.

**ಎಸ್.ಗಂಗಾಧರಯ್ಯ**: ಚಿಕ್ಕನಾಯಕನಹಳ್ಳಿ ತಾಲೂಕು ಮಾಕುವಳ್ಳಿಯವರಾದ ಇವರು ಆಂಗ್ಲಭಾಷಾ ಅಧ್ಯಾಪಕರು, ಚಿಂತಕರು, ವಿಮರ್ಶಕರು, ಅನುವಾದಕರು. ಇವರ ವೈಕಂ ಕಥೆಗಳು, ಹಲವು ರೆಕ್ಕೆಯ ಹಕ್ಕಿ, ಲೋರ್ಕಾ ನಾಟಕ–ಎರ್ಮಾ, ಚರಮ ಗೀತೆ–ಲೋರ್ಕಾ ಕಾವ್ಯ, ಬೇಟೆಗಾರನ ಹಕ್ಕಿ (ಅನು), ನವಿಲ ನೆಲ ಮುಂತಾದ ಕಥಾಸಂಕಲನ ಪ್ರಕಟವಾಗಿವೆ. ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದಿರುವರು.

**ಕೆ.ಮುದ್ದೇಗೌಡ;** ಕೆ.ರಂಗನಹಳ್ಳಿಯವರಾದ ಇವರು ಗಂಟು, ಅವಳೇ ಇವಳು (ಕವನಸಂಕಲನ) ತಕರಾರು ಕಥಾ ಸಂಕಲನಗಳನ್ನು ಪ್ರಕಟಿಸಿರುತ್ತಾರೆ. ಇವರು ೨೦೧೧ರಲ್ಲಿ ತಮ್ಮ ೫೫ನೇ ವಯಸ್ಸಿನಲ್ಲಿ ಗತಿಸಿದರು.

**ಡಾ. ನಂ.ತಪಸ್ವೀಕುಮಾರ್**: ತುರುವೇಕೆರೆ ತಾಲೂಕು ಮಾಯಸಂದ್ರ ಹೋಬಳಿ, ಮುತ್ತುಗದಹಳ್ಳಿಯವರಾದ ಇವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಉಪನ್ಯಾಸಕರಾಗಿ, ಸಂಶೋಧಕರಾಗಿ, ನಿವೃತ್ತಿ ಹೊಂದಿ ಮೈಸೂರಿನಲ್ಲಿ ನೆಲೆಸಿದ್ದಾರೆ. ಜಾನಪದ ಕ್ಷೇತ್ರದಲ್ಲಿ ವಿಶೇಷ ಸಂಶೋಧನೆ ನಡೆಸಿದ್ದು. ಕನ್ನಡ ಒಗಟುಗಳ ಸಮೀಕ್ಷೆ, ಜಾನಪದ ಅಧ್ಯಯನದ ಸಂಕ್ಷಿಪ್ತ ಇತಿಹಾಸ ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ೨೦೦೯ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಬಂದಿದೆ. ಜಾನಪದ ತಜ್ಞ ಪ್ರಶಸ್ತಿ ಸೇರಿದಂತೆ ಅನೇಕ ಗೌರವ ಸನ್ಮಾನಗಳು ಸಂದಿವೆ. ತುರುವೇಕೆರೆ ತಾಲೂಕು ತೃತೀಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

**ಡಾ.ಡಿ.ಕೆ.ರಾಜೇಂದ್ರ;** ತುರುವೇಕೆರೆ ತಾಲೂಕು ದಂಡಿನಶಿವರ ಗ್ರಾಮದ ಇವರು ಮೈಸೂರಿನ ಕನ್ನಡ ಅಧ್ಯಯನ ಸಂಸ್ಥೆಯ ನಿವೃತ್ತ ನಿರ್ದೇಶಕರು. ಜಾನಪದ ವಿದ್ವಾಂಸರು, ಜಾನಪದ ಸಂಚಯ, ದೇವಗಂಗೆ ಮುಂತಾದ ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಜೀಶಂಪ ಪ್ರಶಸ್ತಿ ಲಭಿಸಿದೆ.

**ಡಾ. ಬಿ.ವಿ.ಸುಬ್ಬರಾಯಪ್ಪ;** ಗುಬ್ಬಿ ತಾಲೂಕು ಬಿದರೆಯ ಇವರು ವಿಜ್ಞಾನಿ, ವಿಜ್ಞಾನ ಲೇಖಕರು. ಜಾಗತಿಕ ಮಟ್ಟದಲ್ಲಿ ಸಾಧನೆ ಮಾಡಿದವರು. ವಿಜಯ ಕಾಲೇಜಿನಲ್ಲಿ ವಿಜ್ಞಾನ ಬೋಧಕರಾಗಿದ್ದುರು, ಮೈಸೂರು ಕೇಂದ್ರೀಯ ಆಹಾರ ಸಂಶೋಧನಾ ಸಂಸ್ಥೆಯಲ್ಲಿ ವಿಜ್ಞಾನಿಯಾಗಿ, ದೆಹಲಿ, ಮುಂಬಯಿ, ಮುಂತಾದೆಡೆ ವಿವಿಧ ಹುದ್ದೆಗಳಲ್ಲಿ ನಿರ್ವಹಣೆ ಮಾಡಿದ್ದಾರೆ. ೧೯೬೭ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಡಾಕ್ಟರೇಟ್ ಪದವಿ, ಕನ್ನಡದಲ್ಲಿ ವಿಜ್ಞಾನ ಲೇಖನಗಳನ್ನು ಬರೆಯತೊಡಗಿದರು. ವಿಚಿತ್ರಲೋಕದಲ್ಲಿ ವಿದ್ಯಾಲಂಕಾರ (ಅನು) ಹಾಗೂ ಅನೇಕ ಕೃತಿಗಳು ಪ್ರಕಟವಾದವು. ದೇಶವಿದೇಶದ ವಿಜ್ಞಾನ ಸಂಸ್ಥೆಗಳಲ್ಲಿ ಸದಸ್ಯತ್ವ ಹಾಗೂ ಗೌರವದ ಸ್ಥಾನಮಾನಗಳು ಲಭಿಸಿದವು. ವಿಜ್ಞಾನ ಇತಿಹಾಸಕಾರರಾಗಿ ಸಾಧನೆ. ಇವರ ನೂರಾರು ಇಂಗ್ಲೀಷ್ ಕನ್ನಡ ಲೇಖನಗಳು ಪ್ರಕಟವಾಗಿವೆ. ಇಂಗ್ಲೀಷಿನಲ್ಲಿ ಸುಮಾರು ೧೪ ಕೃತಿಗಳು, ಕನ್ನಡದಲ್ಲಿ ಐದು ಕೃತಿಗಳು ಪ್ರಕಟವಾಗಿವೆ. ಪೋಲೆಂಡಿನ ಕೋಪರ್ನಿಕಸ್ ಪದಕ, ಇಟಲಿಯ ಬೊಲೋನಾ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (೨೦೦೮) ಮುಂತಾದ ಗೌರವಗಳೂ ಸಂದಿವೆ.

**ಡಾ.ತೀ.ನಂ.ಶಂಕರನಾರಾಯಣ:** ಚಿಕ್ಕನಾಯಕನಹಳ್ಳಿ ತಾಲೂಕಿನ ತೀರ್ಥಪುರದವರಾದ ಇವರು ತೀ.ನಂ.ಶ್ರೀಕಂಠಯ್ಯನವರ ಮೊಮ್ಮಗ, ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ಜಾನಪದ ವಿದ್ವಾಂಸರು. ಮೈಸೂರು

ವಿಶ್ವವಿದ್ಯಾನಿಲಯದ ಜಾನಪದ ವಿಭಾಗದಲ್ಲಿ ಮೊದಲ ತಂಡದ ವಿದ್ಯಾರ್ಥಿಯಾಗಿ ಪ್ರಥಮ ಸ್ಥಾನ ಪಡೆದವರು. 'ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು ಇವರ ಸಂಶೋಧನಾ ಕೃತಿ. ಜನಪದ ಮಹಾಕಾವ್ಯ, ಫಿನ್ಲೆಂಡಿನ ಜಾನಪದ ವಿದ್ವಾಂಸರು, ಸಂಕೀರ್ಣ ಜನಪದ ಕಥೆಗಳು, ಶ್ರೀಕಂಠತೀರ್ಥ, ದ್ರಾವಿಡ ಜನಪದ ಮುಂತಾದ ಅನೇಕ ಸಂಪಾದಿತ ಕೃತಿ ಪ್ರಕಟವಾಗಿವೆ. ಜಾನಪದ ಅಕಾಡೆಮಿ ಪ್ರಶಸ್ತಿ ಜಾನಪದ ತಜ್ಞ ಮುಂತಾದ ಅನೇಕ ಪ್ರಶಸ್ತಿಗಳು ಬಂದಿವೆ.

**ಡಾ.ಸಾ.ಶಿ.ಮರುಳಯ್ಯ:** ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲೂಕಿನ ಸಾಸಲು ಗ್ರಾಮದವರು. ನಾಡಿನ ಹೆಸರಾಂತ ಸಾಹಿತಿ, ಕವಿ ಮತ್ತು ಉತ್ತಮ ವಾಗ್ಮಿ. ಕನ್ನಡ ಉಪನ್ಯಾಸಕರಾಗಿ ಪ್ರಾಂಶುಪಾಲರಾಗಿ ಕಾರ್ಯ ನಿರ್ವಹಿಸಿ ನಿವೃತ್ತರಾಗಿದ್ದಾರೆ. ಗಣನೀಯ ಸಾಹಿತ್ಯ ಸೇವೆ ಸಲ್ಲಿಸಿ ಹಲವಾರು ಕೃತಿಗಳನ್ನು ಪ್ರಕಟಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು. ತುಮಕೂರು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕೇಂದ್ರ ಹಾಗೂ ರಾಜ್ಯ ಅಕಾಡೆಮಿ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿ ಸಂದಿವೆ. ಇವರು ರಚಿಸಿದ ನಾಡುನುಡಿ, ದೇಶಭಕ್ತಿ-ಭಾವಗೀತೆಗಳ ಧ್ವನಿಸುರಳಿಗಳು ನಾಡಿನಾದ್ಯಂತ ಜನರ ಮನಸೆಳೆದಿವೆ.

**ಡಾ.ಬರಗೂರು ರಾಮಚಂದ್ರಪ್ಪ:** ಶಿರಾ ತಾಲೂಕಿನ ಬರಗೂರಿನ (ಜನನ:೧೮-೧೦-೧೯೪೬)ಇವರು ಪ್ರಾಧ್ಯಾಪಕರಾಗಿ, ಬರಹಗಾರರಾಗಿ, ಉತ್ತಮ ಆಡಳಿತಗಾರರಾಗಿ, ಎಡಪಂಥೀಯ ಚಿಂತಕರಾಗಿ ರಂಗಭೂಮಿ, ಚಲನಚಿತ್ರ ಹಾಗೂ ಸಂಘಟನಾ ರಂಗಗಳಲ್ಲಿ ಹೆಸರು ಮಾಡಿದ್ದಾರೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾಗಿ ಅತ್ಯುತ್ತಮ ಸಾಧನೆ ಮಾಡಿರುವರು. ದಲಿತ ಬಂಡಾಯ ಸಾಹಿತ್ಯ-ಸಂಘಟನೆಗಳೆರಡನ್ನೂ ಎತ್ತರಕ್ಕೆ ಕೊಂಡೊಯ್ದ ಕೀರ್ತಿ ಇವರಿಗಿದೆ. ಪ್ರಖರ ಚಿಂತನೆ ಹಾಗೂ ಪ್ರಭಾವಶಾಲಿ ಭಾಷಣಕಾರರು. ಕಥೆ, ಕಾದಂಬರಿ, ಕಾವ್ಯ, ವಿಚಾರ ವಿಮರ್ಶೆ, ಚಲನಚಿತ್ರಗಳಲ್ಲಿಯೂ ಮನ್ನಣೆ ಗಳಿಸಿದ್ದಾರೆ. ಕನಸಿನ ಕನ್ನಿಕೆ, ಮರಕುಟಿಗ, ನೆತ್ತರಲ್ಲಿ ನೆಂದ ಹೂವು, ಗುಲಾಮಗೀತೆ, ಮಗುವಿನ ಹಾಡು ಕವನ ಸಂಕಲನಗಳು; ಸುಂಟರಗಾಳಿ, ಬಯಲಾಟದ ಭೀಮಣ್ಣ ಮುಂತಾದ ಕಥಾ ಸಂಕಲನ, ಸೂತ್ರ, ಹುತ್ತ, ಉಕ್ಕಿನಕೋಟೆ, ಒಂದು ಊರಿನ ಕಥೆ, ಬೆಂಕಿ, ಸೂರ್ಯ, ಗಾಜಿನ ಮನೆ, ಸ್ವಪ್ನ ಮಂಟಪ ಮುಂತಾದ ಕಾದಂಬರಿ; ಹಲವಾರು ನಾಟಕ, ಸಾಹಿತ್ಯ ಮತ್ತು ರಾಜಕಾರಣ, ಸಂಸ್ಕೃತಿ ಮತ್ತು ಸೃಜನಶೀಲತೆ, ರಾಜಕೀಯ ಚಿಂತನೆ, ಸಂಸ್ಕೃತಿ-ಉಪಸಂಸ್ಕೃತಿ ಮುಂತಾದ ವಿಚಾರ ವಿಮರ್ಶಾಕೃತಿಗಳು; ಬಂಡಾಯ ಕಾವ್ಯ, ಕೋಮುವಾದ, ಮುಂತಾದ ಸಂಪಾದಿತ ಕೃತಿಗಳೂ ಸೇರಿದಂತೆ ಹಲವಾರು ಕೃತಿಗಳು ಪ್ರಕಟವಾಗಿವೆ. ಇವರು ನಿರ್ದೇಶಿಸಿದ ಅನೇಕ ಚಲನಚಿತ್ರಗಳು ರಾಜ್ಯ-ರಾಷ್ಟ್ರೀಯ ಪ್ರಶಸ್ತಿ ಗಳಿಸಿವೆ. ನಾಡೋಜ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಮುಂತಾದ ಪ್ರಶಸ್ತಿಗಳು ಇವರಿಗೆ ಸಂದಿವೆ. ಶಿರಾದಲ್ಲಿ ನಡೆದ ೮ನೇ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ೨೦೧೩ನೇ ಸಾಲಿನಲ್ಲಿ ನೃಪತುಂಗ ಪ್ರಶಸ್ತಿ ಪಡೆದಿರುವರು.

**ಡಾ.ದೊಡ್ಡರಂಗೇಗೌಡ:** ಮಧುಗಿರಿ ತಾಲೂಕು ಕುರುಬರಹಳ್ಳಿಯ ಇವರು ನಿವೃತ್ತ ಪ್ರಾಚಾರ್ಯರು. 'ಕನ್ನಡದಲ್ಲಿ ನವೋಲ್ಲಾಸ ಸಾಹಿತ್ಯ ಕುರಿತ ಸಂಶೋಧನಾ ಪ್ರಬಂಧಕ್ಕೆ ಡಾಕ್ಟರೇಟ್ ಬಂದಿದೆ. ಕನ್ನಡದ ಅನನ್ಯ ಕವಿ. ಕರ್ನಾಟಕ ವಿಧಾನಪರಿಷತ್ ಸದಸ್ಯರಾಗಿ, ಲೇಖಕರಾಗಿ ಭಾವಗೀತೆ, ಚಲನಚಿತ್ರ ಗೀತರಚನಕಾರರಾಗಿ ಜನಮನ್ನಣೆ ಗಳಿಸಿರುವರು. ಅನೇಕ ಧ್ವನಿಸುರಳಿ, ಸಿ.ಡಿಗಳು ಹೊರಬಂದಿವೆ. ಹಲವಾರು ಚಲನಚಿತ್ರಗಳಿಗೆ ಇವರು ಬರೆದ ಹಾಡುಗಳು ನಿತ್ಯಹಸಿರಾಗಿದೆ. ಕಣ್ಣು ನಾಲಿಗೆ ಕಡಲು, ಮೌನಸ್ಪಂದನ, ಚದುರಂಗದ ಕುದುರೆ, ಜಗಲಿ ಹತ್ತಿ ಇಳಿದು, ನಾಡಾಡಿ, ಏಳು ಬೀಳಿನ ಹಾದಿ, ಕುದಿಯುವ ಕುಲುಮೆ ಮುಂತಾದ ಕವನ ಸಂಕಲನ, ಸಾಹಿತ್ಯ ಸರಸ್ವತಿ, ನವ್ಯ ನಿಕಷ, ಆಕೃತಿ ಮತ್ತು ಅನುಸಂಧಾನ, ಜೀವಂತ ಜಾನಪದ ಅಭ್ಯುದಯ, ಗಾರುಡಿಗ ಕವಿ, ಅಭಿನಯ ವಾಲ್ಮೀಕಿ ಮುಂತಾದ ವಿಮರ್ಶಾ ಸಂಕಲನಗಳು, ಇಂಗ್ಲೀಷಿನಲ್ಲಿ 'ದಿ ವ್ಹೀಲ್ ಆಫ್ ಟೈಮ್ ಅಂಡ್ ದಿ ವಾಯ್ಸ್ ಆಫ್ ದಿ ಏಜ್' ಎಂಬ ಕಾವ್ಯ ಸಂಗ್ರಹ ಪ್ರಕಟವಾಗಿವೆ. ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಮುದ್ದಣ ಕಾವ್ಯ ಪ್ರಶಸ್ತಿ, ರತ್ನಾಕರವರ್ಣಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಮೊದಲಾದ ಗೌರವಗಳು ಸಂದಿವೆ. ಸಾವಿರಕ್ಕೂ ಹೆಚ್ಚು ಗೀತೆಗಳನ್ನು ರಚಿಸಿದ್ದಾರೆ.

**ಕೇಶವರೆಡ್ಡಿ ಹಂದ್ರಾಳ:** ಮಧುಗಿರಿ ತಾಲೂಕು ಹಂದ್ರಾಳ ಗ್ರಾಮದ ಇವರು ಓದಿದ್ದು ಅರ್ಥಶಾಸ್ತ್ರ. ಉಪನ್ಯಾಸಕರಾಗಿ, ನಂತರ ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಅಧಿಕಾರಿಯಾಗಿ ಸೇವೆ. ವಿಶಿಷ್ಟ ಶೈಲಿಯಲ್ಲಿ ಕಥೆ ಹೇಳುವ ಇವರ ಸಂಕಲನಗಳು

ವಿಸ್ಮಯಕಾರಕ. ಇನ್ನೂರಕ್ಕೂ ಹೆಚ್ಚು ಕಥೆ ಬರೆದಿದ್ದಾರೆ. ಹಂದ್ರಾಳ, ಅಂತ:ಪುರ, ಬರದ ನಾಡಲ್ಲಿ ಬೆಳದಿಂಗಳು, ಜಡೆಗೆ ಗುಲ್ಮೊಹರ್ ಕೈಗಳು, ಮೋಡ ಕರಗುವ ಮುನ್ನ, ಒಂದು ಹಿಡಿ ಮಣ್ಣು ಮುಂತಾದ ಕಥಾಸಂಕಲನಗಳು ಪ್ರಕಟವಾಗಿವೆ. ರಾಜ್ಯ ಪ್ರಶಸ್ತಿ ಪಡೆದ 'ಯುದ್ಧ ಮತ್ತು ಸ್ವಾತಂತ್ರ್ಯ ಎಂಬ ಸಿನಿಮಾಕ್ಕೆ ಕಥೆ, ಸಂಭಾಷಣೆ ಬರೆದಿದ್ದಾರೆ.

**ಡಾ. ಕವಿತಾಕೃಷ್ಣ:** ಶಿಕ್ಷಕರಾಗಿದ್ದ ಕ್ಯಾತ್ಸಂದ್ರದ ಕೆ.ಕೆ.ರಾಜಣ್ಣ ಅವರು ಕವಿತಾಕೃಷ್ಣರಾಗಿ ರೂಪುಗೊಂಡಿದ್ದು ಸಾಹಿತ್ಯದ ಮೂಲಕ. ಬಾಲ್ಯದಿಂದಲೇ ಸಾಹಿತ್ಯಾಸಕ್ತಿ ಹೊಂದಿ ಬರವಣಿಗೆ ಪ್ರಾರಂಭಿಸಿದ ಇವರು ಸಮಾಜದ ಎಲ್ಲಾ ಕ್ಷೇತ್ರದಲ್ಲೂ ತಮ್ಮ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಪಠ್ಯಪುಸ್ತಕ ಸಮಿತಿ, ಭಾಷಾ ಅಧ್ಯಕ್ಷರಾಗಿ, ಅನೇಕ ಕನ್ನಡ ಪರ ಸಂಘಟನೆಗಳ ಸಂಘಟಕರಾಗಿ ಜನಪ್ರಿಯ ಭಾಷಣಕಾರರಾಗಿ ಹೆಸರು ಮಾಡಿದ್ದಾರೆ. ದೊರೆತ ಪ್ರಶಸ್ತಿ, ಸನ್ಮಾನಗಳಿಗೆ ಲೆಕ್ಕವಿಲ್ಲ. ಸರ್ವೋತ್ತಮ ಆಚಾರ್ಯ, ವಿದ್ಯಾ ವಾಚಸ್ಪತಿ, ಚುಂಚಶ್ರೀ, ಗೊರೂರು ಪ್ರಶಸ್ತಿ ಮುಂತಾದವು ಪ್ರಮುಖವಾದವು. ಕವನ ಸಂಕಲನ, ನಾಟಕ, ಶೈಕ್ಷಣಿಕ, ಮಕ್ಕಳ ಸಾಹಿತ್ಯ ಮುಂತಾದ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ೧೬೦ಕ್ಕೂ ಹೆಚ್ಚು ಪುಸ್ತಕ ಪ್ರಕಟವಾಗಿವೆ. ಇವರ, ಬಾಳೇ ಬಂಗಾರ ಎಂಬ ನಾಟಕ ೧೭ ಮುದ್ರಣ ಕಂಡಿದೆ. ತುಮಕೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ (೧೯೯೩-೯೮)ರಾಗಿದ್ದರಲ್ಲದೆ, ತುಮಕೂರು ತಾಲೂಕು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಆಗಿದ್ದರು.

**ತುರುವೇಕೆರೆ ಪ್ರಸಾದ್**: ಹಾಸ್ಯ-ವಿಡಂಬನಾತ್ಮಕ ಸಾಹಿತ್ಯ ರಚಿಸಿದ್ದು, ನಮಸ್ಕಾರ, ವೈಫ್ ಮತ್ತು ವೆಹಿಕಲ್, ಮುಚ್ಚಿಡದ ಮಾತು (ಅಂಕಣ ಬರಹ), ಅಶ್ವಮೇಧ, ಭ್ರಮರ (ಕಾದಂಬರಿ), ಧೂಮಕೇತು(ನಾಟಕ), ಚಾನಲ್ ಚಕ್ಕಂದ (ಕಿರುತೆರೆ ಸಂಭಾಷಣೆ) ಹಾಗೂ ಹಲವಾರು ಧಾರಾವಾಹಿ ಮತ್ತು ಚಲನಚಿತ್ರಗಳಿಗೆ ಸಂಭಾಷಣೆ ಬರೆದಿದ್ದಾರೆ. ಇವರಿಗೆ 'ರನ್ನ ಸಾಹಿತ್ಯ ಪ್ರಶಸ್ತಿ ದೊರಕಿದೆ. ತಾಲೂಕು ಸಮ್ಮೇಳನದ ಅಧ್ಯಕ್ಷರಾಗಿದ್ದ ಹೆಗ್ಗಳಿಕೆ ಇವರದಾಗಿದೆ.

**ಡಾ. ಸಿದ್ಧಗಂಗಯ್ಯ ಹೊಲ್ತಾಳ್**: ಕೊರಟಗೆರೆ ತಾಲೂಕು ಹೊಲ್ತಾಳ್ ಗ್ರಾಮದ ಇವರು ತಿಪಟೂರಿನಲ್ಲಿ ಉಪನ್ಯಾಸಕರಾಗಿದ್ದಾರೆ. ಕಾವ್ಯ ಸಂವಹನ ಇವರ ಪಿಹೆಚ್.ಡಿ., ಪ್ರಬಂಧ. ತಿರುವು ಕಾದಂಬರಿ, ಕಿರಣ ಎಂಬ ಆಕಾಶವಾಣಿ ಬರಹಗಳು, ವೋಝೋ ಆಲ್ಬರ್ಟ್ (ಅನುವಾದಿತ ನಾಟಕ), ದಿಸಾಂಗ್ ಆಫ್ ಸೈಲನ್ಸ್ ಕುವೆಂಪು ಅವರ ಕವಿತೆಗಳ ಅನುವಾದ ಪ್ರಕಟವಾಗಿವೆ. ಅನುವಾದ, ಆತ್ಮಚರಿತ್ರೆ ಕೂಡ ಪ್ರಕಟವಾಗಿದೆ.

**ಅಗ್ರಹಾರ ಕೃಷ್ಣಮೂರ್ತಿ**: ಕೊರಟಗೆರೆ ತಾಲೂಕು ಅಗ್ರಹಾರ ಗ್ರಾಮದ ಇವರು ಕೇಂದ್ರ ಸಾಹಿತ್ಯ ಅಕಾಡೆಮಿ ಕಾರ್ಯದರ್ಶಿಗಳಾಗಿ ನಿವೃತ್ತರಾಗಿದ್ದಾರೆ. 'ಬೆಳ್ದಿಂಗಳಪ್ಪನ ಪೂಜೆ ಎಂಬ ಜನಪದ ಕೃತಿ ರಚಿಸಿದ್ದಾರೆ.

**ಕೃಷ್ಣಮೂರ್ತಿ ಬಿಳಿಗೆರೆ**: ತಿಪಟೂರು ತಾಲೂಕು ಬಿಳೆಗೆರೆಯ ಇವರು ಉಪನ್ಯಾಸಕರು. ಕಿಂಚಿತ್ತು ಪ್ರೀತಿಯ ಬದುಕು ಮುಂತಾದ ಕೃತಿಗಳನ್ನು ರಚಿಸಿದ್ದಾರೆ.

**ತುಂಬಾಡಿ ರಾಮಯ್ಯ**: ಕೊರಟಗೆರೆ ತಾಲೂಕು ತುಂಬಾಡಿಯ ಇವರು ಕಾರ್ಮಿಕ ಇಲಾಖೆಯಲ್ಲಿ ಅಧಿಕಾರಿಯಾಗಿದ್ದಾರೆ. ಮಣೆಗಾರ, ಮುತ್ತಿನಜೋಳ ಮುಂತಾದ ಕೃತಿಗಳನ್ನು ಪ್ರಕಟಿಸಿದ್ದಾರೆ.

**ಡಾ.ನಟರಾಜ್ ಹುಳಿಯಾರ್**: ಚಿಕ್ಕನಾಯಕನಹಳ್ಳಿ ತಾಲೂಕು ಹುಳಿಯಾರಿನ ಇವರು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಆಂಗ್ಲ ಪ್ರಾಧ್ಯಾಪಕರಾಗಿದ್ದಾರೆ. ಮತ್ತೊಬ್ಬ ಸರ್ವಾಧಿಕಾರಿ, ಸಣ್ಣ ಕಥಾ ಸಂಕಲನ, ರೂಪಕಗಳ ಸಾವು-ಕವನ ಸಂಕಲನ, ಗಾಳಿ ಬೆಳಕು ಮುಂತಾದ ಕೃತಿಗಳು ಪ್ರಕಟವಾಗಿವೆ. ಇತರರೊಂದಿಗೆ ಲೋಹಿಯಾ ಸಂಪುಟಗಳನ್ನು ಸಂಪಾದಿಸಿದ್ದಾರೆ. ಡಾ॥ ಶಿವರಾಮ ಕಾರಂತ ಪ್ರಶಸ್ತಿ, ದೆಹಲಿಯ ಕಥಾ ಪ್ರಶಸ್ತಿ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿವೆ. ವಿಮರ್ಶೆಗಳಲ್ಲದೇ ಆಂಗ್ಲ ಭಾಷೆಯಲ್ಲಿಯೂ ಕೃತಿ ರಚಿಸಿದ್ದಾರೆ.

**ಎಂ.ಎಚ್.ನಾಗರಾಜು**: ಗುಬ್ಬಿ ಪದವಿಪೂರ್ವ ಕಾಲೇಜಿನಲ್ಲಿ ಇತಿಹಾಸ ಪ್ರಾಧ್ಯಾಪಕರಾಗಿರುವ ಇವರು ಸಾಹಿತ್ಯ-ಸಾಂಸ್ಕೃತಿಕ ಸಂಘಟಕರು. ಕುಂಚಿಟಿಗರ ಸಾಂಸ್ಕೃತಿಕ ಇತಿಹಾಸ, ಮೊರಸು ಒಕ್ಕಲಿಗರು, ಫೌಜುದಾರ ಬೋರೇಗೌಡರು, ಮಾಲಿ ಮರಿಯಪ್ಪ, ಡಬ್ಲ್ಯೂ.ಹೆಚ್. ಹನುಮಂತಪ್ಪ, ಟಿ.ಆರ್.ರೇವಣ್ಣ ಮುಂತಾದ ಕೃತಿಗಳನ್ನು ಪ್ರಕಟಿಸಿದ್ದಾರೆ. ಕತ್ತಲೆಗೆ ಮೂರು ಬಣ್ಣ, ಅನ್ವೇಷಕ, ಹೆಣ್ಣು ಮೆಟ್ಟಿದ ಅವರೆ, ಹಾಗೂ 'ನಗೆ ಜಂಗಮ' ಎಂಬ ಅಭಿನಂದನಾ ಗ್ರಂಥವನ್ನು ಸಂಪಾದಿಸಿದ್ದಾರೆ.

**ಎಲ್.ಎನ್.ಮುಕುಂದರಾಜ್**: ತುಮಕೂರು ತಾಲೂಕು ಲಕ್ಕೇನಹಳ್ಳಿಯ ಇವರು ಬೆಂಗಳೂರಿನಲ್ಲಿ ಉಪನ್ಯಾಸಕರಾಗಿದ್ದಾರೆ. ದೇಶಕೋಶ ಪಾರಿವಾಳ, ನಿರಂಕುಶ, ಬೆರಗು ಮುಂತಾದ ಕವನ ಸಂಕಲನಗಳು, ವೈಶಂಪಾಯನ ತೀರ, ಇಗೋಪಂಜರ ಅಗೋಮುಗಿಲು, ಮುಳ್ಳಿನ ಕಿರೀಟ, ದೇವರ ಆಟ, ಜೀವಯಾತ್ರೆ ನಾಟಕಗಳು, ನಮ್ಮದಾರಿಯ ನೆರಳು, ಟಿ.ಆರ್.ಶಾಮಣ್ಣ, ಕೆ.ಹೆಚ್.ರಂಗನಾಥ್, ಪುಟ ಬಂಗಾರ ಮುಂತಾದ ಜೀವನ ಚರಿತ್ರೆಗಳು ಪ್ರಕಟವಾಗಿವೆ. ಕಾಲೇಜು ಅಧ್ಯಾಪಕರ ಸಂಘಟನೆ, ಕನ್ನಡ ಚಳವಳಿ, ರಂಗಭೂಮಿ ಕಿರುತೆರೆ ಮುಂತಾದ ಕ್ಷೇತ್ರಗಳಲ್ಲಿ ಕಾರ್ಯಪ್ರವೃತ್ತರಾಗಿದ್ದಾರೆ. ಅನೇಕ ಧಾರವಾಹಿಗಳಲ್ಲಿ ನಟಿಸಿದ್ದಾರೆ. ಸಂಘಟಕರೂ ಹೌದು.

**ಡಾ. ರಂಗಾರೆಡ್ಡಿ ಕೋಡಿರಾಂಪುರ**: ಮಧುಗಿರಿ ತಾಲೂಕು ಕೋಡಿರಾಂಪುರದ ಇವರು ಕನ್ನಡ ಪ್ರಾಧ್ಯಾಪಕರು. ನನ್ನೂರ ಹಾಡು (ಕವನ), ಪಿನಾಕಿನಿ ತೀರದಲ್ಲಿ, ನೀರು ಗಂಧಾದ ಚೆಲುವ ಎಂಬ ನಾಟಕಗಳು; ಶಿಕ್ಷಣ ಮತ್ತು ವೈಚಾರಿಕತೆ, ಜಾನಪದ ಗಂಗೋತ್ರಿ, ವಿಚಾರ ದರ್ಶನ, ಜಾನಪದ ಸಿದ್ಧಾಂತಗಳು, ಕಲ್ಲರಳಿ ಹೂವಾಗಿ, ತತ್ವಪದಗಳು, ಸಾಹಿತ್ಯ ಸಂವಾದ, ಹೊಸಗನ್ನಡ ಕವಿತೆಗಳು ಮುಂತಾದ ಸಂಪಾದಿತ ಕೃತಿಗಳು; ಮಹಾಕವಿ ಶ್ರೀ. ಶ್ರೀ. ಗುಬ್ಬಿ ವೀರಣ್ಣ, ಲಿಖಿತ ಜಾನಪದ, ಬಂಡಾಯ ಜಾನಪದ, ತೇರು ಹರಿದಾವು ಮುಂತಾದ ಕೃತಿಗಳು ಪ್ರಕಟವಾಗಿವೆ. ಕೋಲಾರ ಜಿಲ್ಲೆಯ ಜನಪದ ಕಲೆಗಳು ಇವರ ಪಿ.ಎಚ್.ಡಿ ಪ್ರಬಂಧ, ಗುಂಡ್ಮಿ ಜಾನಪದ ಪ್ರಶಸ್ತಿ, ಬಯಲು ಸೀಮೆ ಜಾನಪದ ಪ್ರಶಸ್ತಿ, ಕರ್ನಾಟಕ ನಾಟಕ ಅಕಾಡೆಮಿಯ ಸುವರ್ಣ ಕರ್ನಾಟಕ ಪ್ರಶಸ್ತಿ ಪಡೆದ ಇವರು ಸಾಹಿತ್ಯ, ಸಾಂಸ್ಕೃತಿಕ ಸಂಘಟನೆಗಳಲ್ಲಿ ಸಕ್ರಿಯರಾಗಿದ್ದಾರೆ.

**ಡಾ.ಎನ್.ನಂದೀಶ್ವರ:** ಮಧುಗಿರಿ ತಾಲೂಕು ಕಸಾಪುರ ಗ್ರಾಮದ ಇವರು ಕಳ್ಳಂಬೆಳ್ಳ ಪದವಿಪೂರ್ವ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿದ್ದಾರೆ. ಇತಿಹಾಸ ಅಧ್ಯಯನದ ಮೂಲಕ ಅನೇಕ ಕೃತಿ ಪ್ರಕಟಿಸಿದ್ದಾರೆ. 'ಮಧ್ಯಕಾಲೀನ ಕರ್ನಾಟಕದಲ್ಲಿ ಆಹಾರ ಮತ್ತು ಪಾನೀಯಗಳು ವಿಷಯವಾಗಿ ಸಂಶೋಧನಾ ಪ್ರಬಂಧ ಮಂಡಿಸಿ ಡಾಕ್ಟರೇಟ್ ಪಡೆದಿರುವರು. ಶಿರಾ ತಾಲೂಕು ದರ್ಶನ, ಶಿರಾ ತಾಲೂಕಿನ ಸ್ಮಾರಕಗಳು ಹಾಗೂ ಶಾಸನಗಳು ಎಂಬ ಕೃತಿಗಳು ಪ್ರಕಟವಾಗಿವೆ.

**ಡಾ. ಹೆಚ್.ಎಸ್. ನಿರಂಜನಾರಾಧ್ಯ**: ಹುಚ್ಚವೀರಯ್ಯನ ಪಾಳ್ಯದ ಇವರು ಸಿದ್ದಗಂಗಾ ಕಾಲೇಜಿನ ನಿವೃತ್ತ ಪ್ರಿನ್ಸಿಪಾಲರು. ವಿಜ್ಞಾನ ಚಳಚಳಿ, ಸಂಘಟನೆ ಹಾಗೂ ವಿಜ್ಞಾನ ಸಾಹಿತ್ಯ ರಚನೆಯಲ್ಲಿ ತೊಡಗಿದ್ದಾರೆ. ಚಾರ್ಲ್ಸ್ ಡಾರ್ವಿನ್, ಸಲೀಂ ಅಲಿ, ಜೀವಿ ಸಂರಕ್ಷಣೆ, ನಮ್ಮ ಪರಿಸರ, ಪರಿಸರ ಅಧ್ಯಯನ, ನಿಸರ್ಗ, ಸಮಾಜ ಮತ್ತು ವಿಜ್ಞಾನ, ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ವಿಜ್ಞಾನ ಪ್ರಶಸ್ತಿ ಪಡೆದಿದ್ದಾರೆ.

**ಬೀಚನಹಳ್ಳಿ ಗಂಗಾಧರ್**: ತುಮಕೂರು ಹೆಚ್.ಎಂ.ಟಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇವರು ಸಣ್ಣಕಥೆಗಳ ಕ್ಷೇತ್ರದಲ್ಲಿ ಪರಿಚಿತರು. ಕಥಾಸ್ಪರ್ಧೆಗಳಲ್ಲಿ ಅನೇಕ ಬಹುಮಾನ ಗಳಿಸಿದ್ದು ಇವರ 'ಆಕೃತಿಗಳು' ಎಂಬ ಕಥಾಸಂಕಲನ ಪ್ರಕಟವಾಗಿದೆ.

**ಹೆಚ್.ಎಸ್.ರಾಮಣ್ಣ:** ಹೆಬ್ಬೂರಿನ ಇವರು ತುಮಕೂರು ವಾರ್ತೆ ರಾಮಣ್ಣ ಎಂದೇ ಚಿರಪರಿಚಿತರು. ನೂರು ಸ್ವರ ನೂರು ತೆರ, ಸಂವೇದನೆ, ಧ್ವನಿಗಳು ಕೃತಿಗಳನ್ನು ಸಂಪಾದಿಸಿದ್ದಾರೆ. ಜಿಲ್ಲೆಯಲ್ಲಿ ಬರಹಗಾರರ ಸಂಘವನ್ನು ಹುಟ್ಟುಹಾಕಿ ಹಲವಾರು ವರ್ಷ ಮುನ್ನಡೆಸಿದ್ದರು.

**ಆಲೂರು ದೊಡ್ಡನಿಂಗಪ್ಪ**: ತಿಪಟೂರು ತಾಲೂಕು ಆಲೂರಿನ ಇವರು ಮೈಸೂರಿನಲ್ಲಿ ಗ್ರಂಥಪಾಲಕರಾಗಿದ್ದಾರೆ. ಇವರ ನೇಕಾರ, ಮುಟ್ಟು ಎಂಬ ಕವನ ಸಂಕಲನಗಳು, ಕಪ್ಪುಹಲಗೆ ಕೆಂಪು ಅಕ್ಷರ ಎಂಬ ನಾಟಕ, ತೊಟ್ಟಿಲ ಲೋಕ ಎಂಬ ಮಕ್ಕಳ ನಾಟಕ ಪ್ರಕಟವಾಗಿವೆ.

**ಭಗವಾನ್ ಕೆ.ಎನ್**: ಕೊರಟಗೆರೆ ತಾಲೂಕು ಕ್ಯಾಶವಾರದ ಇವರು ನಿವೃತ್ತಿ ಎಂಜಿನಿಯರ್ ಆಗಿದ್ದು ಮನದಿಂದ ಮುಗಿಲಿಗೆ (ಕವನ), ಕಥಾಚೈತ್ರ, ಆಷಾಡದ ಮಳೆ, ಅರ್ಧಸಂಬಂಧಿ, ಆಕಾಶಬುಟ್ಟಿ ಮತ್ತು ಏಣಿ, ನೀಲ ನಕ್ಷತ್ರ (ಕಥಾ ಸಂಕಲನ) ಕಾರ್ಖಾನೆ ಚಿತ್ರಗಳು, ಸ್ವಲ್ಪ ಪೆನ್ ಕೊಡ್ತೀರಾ (ಲಲಿತ ಪ್ರಬಂಧ) ಕನ್ನಡ ಜ್ಞಾನಕಲಶಗಳು, ಕಂಪನ ಮತ್ತು ಶಬ್ದ ಮಾಪನ, ಕಂಡಷ್ಟೂ ಜಗತ್ತು (ಪ್ರವಾಸ) ಮುಂತಾದ ಕೃತಿಗಳನ್ನು ಪ್ರಕಟಿಸಿದ್ದಾರೆ. ಗೊರೂರು ಸಾಹಿತ್ಯ ಪ್ರಶಸ್ತಿ ಮುಂತಾದ ಅನೇಕ ಸಮ್ಮಾನಗಳು ಸಂದಿವೆ.

**ಈಚನೂರು ಇಸ್ಮಾಯಿಲ್**: ತಿಪಟೂರು ತಾಲೂಕು ಈಚನೂರಿನ ಇವರು, ತುಮಕೂರು ಆಹಾರ ನಿಗಮದಲ್ಲಿ ಉದ್ಯೋಗಿಯಾಗಿದ್ದಾರೆ. ಹಲವಾರು ಕಥೆ, ಕವನ, ಚಿಂತನೆಗಳು ರಚಿತವಾಗಿ ಅನೇಕ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಕಸದ ಬುಟ್ಟಿ, ಅನುಪಮ, ತೊಯ್ದ ಹನಿಗಳು, ನೆನಪುಗಳ ಚಿತ್ತಾರ, ಮುದ್ದು ತಿಮ್ಮನ ಕಂತೆ ಮುಂತಾದ ೧೦ ಕವನ ಸಂಕಲನ, ಮೂರು ನಾಟಕ ರಚಿಸಿರುವುದಲ್ಲದೇ ಚಲನಚಿತ್ರಕಥೆ, ಧಾರವಾಹಿ ನಿರ್ದೇಶನ ಮಾಡಿದ್ದಾರೆ.

**ಮ.ಲ.ನ ಮೂರ್ತಿ**: ಮಧುಗಿರಿಯ ಇವರು ಕನ್ನಡ ಉಪನ್ಯಾಸಕರಾಗಿ ನಿವೃತ್ತರಾಗಿದ್ದಾರೆ. ಉತ್ತಮ ವಾಗ್ಮಿ. ಮಧುಗಿರಿ ದಂಡಿನ ಮಾರಮ್ಮ, ಕನ್ನಡದ ಮೇರುಶಿಖರಗಳು, ಹಳೆಯ ಬೇರು, ಜಾನಪದ ಪರಾಗ, ಜಾನಪದ ಅಡುಗೆ, ಮಾಲಿ ಮರಿಯಪ್ಪ, ಚಿಂತನ–ಚತುರ್ಮುಖ, ಮನದ ಮಾತು, ಚಿಂತನ ಚಿತ್ತಾರ, ಮುಂತಾದ ಕೃತಿಗಳು ಪ್ರಕಟವಾಗಿವೆ. ಅನೇಕ ಬಹುಮಾನ, ಪ್ರಶಸ್ತಿ ಬಂದಿವೆ. ೨೦೧೧ರ ಮಧುಗಿರಿ ತಾಲೂಕು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

**ಜಾಣಗೆರೆ ವೆಂಕಟರಾಮಯ್ಯ**: ಕುಣಿಗಲ್ ತಾಲೂಕು ಜಾಣಗೆರೆ ಗ್ರಾಮದ ಇವರು ಸಾಹಿತ್ಯ, ಪತ್ರಿಕೋದ್ಯಮ, ಕನ್ನಡ ಚಳವಳಿ ಮುಂತಾದ ಕ್ಷೇತ್ರದಲ್ಲಿ ತಮ್ಮದೇ ಛಾಪು ಮೂಡಿಸಿರುವರು. ದಲಿತ ಬಂಡಾಯ ಸಂವೇದನೆ ಇವರ ಕೃತಿಗಳಲ್ಲಿ ಮೂಡಿದ್ದು ನನ್ನ ನೆಲ–ನನ್ನ ಜನ, ಕಪ್ಪು ನ್ಯಾಯ, ಕತೆ ಮುಗಿಸಿದ ನಾಯಕ, ರಹೀಮನ ಪ್ರಣಯ ಪ್ರಸಂಗ ಮುಂತಾದ ಕಥಾಸಂಕಲನ, ಮಾಯಾನಗರಿಯ ಮಹಾಶಿಲ್ಪ ನಾಟಕ, ಗರ, ದಡ,ನೆಲೆ, ಮಹಾನದಿ, ಅವತಾರ ಪುರುಷ, ಕಾದಂಬರಿಗಳು; ಸುಡುಗುಂಡುಗಳ ನಾಡಲ್ಲಿ ಶಾಂತಿಯ ಕನಸು (ಪ್ರವಾಸ ಕಥನ), ಎದೆಯಾಳ, ನೆಲದ ಋಣ, ಸೀಳುನೋಟ, ಕಾಲಮಾನ, ಬೆಂಕಿ ಮತ್ತು ಬೆಳಕು ಮುಂತಾದ ಕೃತಿಗಳು; ಮತ್ತು ಸವೆಯದ ಹಾದಿ, ಮೂರು ಹಗಲು ಮೂರು ರಾತ್ರಿ ಎಂಬ ಆತ್ಮಕಥನಗಳು ಪ್ರಕಟವಾಗಿವೆ. ಕರುನಾಡ ಸಂಜೆ, ಜಾಣಗೆರೆ ಪತ್ರಿಕೆ ಮುಂತಾದ ಪತ್ರಿಕೆಗಳನ್ನು ನಡೆಸುತ್ತಿದ್ದರು.

**ಜಿಯಾವುಲ್ಲಾ ಯಳನಾಡು**: ಶಿರಾದಲ್ಲಿ ನೆಲೆಸಿರುವ ಇವರು ಖಜಾನೆ ಉದ್ಯೋಗಿ. ಆಲಯದೊಳಗೆ, ಸ್ಥಾವರ, ಸುತ್ತ, ಎಲ್ಲಾ ಕರಗುವ ಹೊತ್ತು, ಕವನ ಸಂಕಲನ, ನರಕದಲ್ಲಿ ನರಪ್ರಾಣಿ ಎಂಬ ನಾಟಕ, ಊರುಗೋಲು ಎಂಬ ಕಾದಂಬರಿ, ಮಾತ್ರೆ ಮಹಿಮೆ, ಮಂಕುಯಂಕ ಎಂಬ ಹಾಸ್ಯ ಸಾಹಿತ್ಯ ರಚಿಸಿದ್ದಾರೆ.

**ಡಾ. ಎಸ್.ಪಿ.ಪದ್ಮಪ್ರಸಾದ**: 'ಕಾವ್ಯ ಜೀವಿ' ಎಂಬ ಕಾವ್ಯನಾಮದಿಂದಲೂ ಸಾಹಿತ್ಯ ರಚನೆ ಮಾಡಿರುವ ಇವರು ಲಲಿತ ಪ್ರಬಂಧ, ಕವನ ಸಂಕಲನ, ನಾಟಕ, ಜೀವನ ಚರಿತ್ರೆ, ವಿಮರ್ಶಾ ಸಾಹಿತ್ಯ, ಸಂಪಾದಿತ ಕೃತಿಗಳು, ಶಿಕ್ಷಣ, ಜಾನಪದ ಸಾಹಿತ್ಯ, ಸಂಶೋಧನೆ, ಪ್ರವಾಸ ಸಾಹಿತ್ಯ, ಜೈನಧರ್ಮ, ಮಕ್ಕಳ ಸಾಹಿತ್ಯ, ಕಥಾ ಸಂಕಲನ ಮುಂತಾದ ಸುಮಾರು ೬೦ಕ್ಕೂ ಮೀರಿ ಕೃತಿ ಪ್ರಕಟಿಸಿದ್ದಾರೆ. ಇಂಗ್ಲೀಷ್‌ನಲ್ಲಿಯೂ ಕೂಡ ಕೃತಿಗಳನ್ನು ಪ್ರಕಟಿಸಿದ್ದಾರೆ. ಅಭಿನಂದನಾ ಗ್ರಂಥ ಹೊರಬಂದಿದೆ.

**ಕೆ.ಕರಿಸ್ವಾಮಿ**: ಶಿರಾ ತಾಲೂಕು ಜನಹಳ್ಳಿ ಗ್ರಾಮದ ಇವರು ಪತ್ರಕರ್ತರು, ಸಿಂಗಾರಿತ್ಲು ಎಂಬ ನಾಟಕ ರಚಿಸಿದ್ದು, ಬಿ.ಎಂ.ಟಿ.ಸಿ ಅರಳು ಪ್ರಶಸ್ತಿ, ಸಂಕ್ರಮಣ ಸಾಹಿತ್ಯ ಪುರಸ್ಕಾರ ಪಡೆದಿದ್ದಾರೆ.

**ಜಿ.ತಿಪ್ಪೇಸ್ವಾಮಿ ಬರಗೂರು**: ಹೃದಯ ತರಂಗಗಳು, ಹಾಲುಬೆಲ್ಲ, ಆಯ್ದ ಪ್ರಬಂಧಗಳು, ಶೈಕ್ಷಣಿಕ ಚಿಂತನೆಗಳು ಮುಂತಾದ ಕೃತಿಗಳು ಪ್ರಕಟವಾಗಿವೆ.

**ಡಾ.ಜಿ.ಆರ್.ತಿಪ್ಪೇಸ್ವಾಮಿ**: ಗುಜ್ಜನಡು ಗ್ರಾಮದ ಇವರು ಮೈಸೂರಿನ ಕನ್ನಡ ಅಧ್ಯಯನ ಸಂಸ್ಥೆಯಲ್ಲಿದ್ದಾರೆ. **'ಮೈಸೂರು ಚಾಮುಂಡಿ ಒಂದು ಅಧ್ಯಯನ'** ಇವರ ಪಿಎಚ್.ಡಿ., ಸಂಶೋಧನಾ ಪ್ರಬಂಧ. ಅಗ್ನಿಸಾಕ್ಷಿ ಕವನ ಸಂಕಲನ; ಪ್ರಸ್ತಾಪ, ಪ್ರಣೀತ, ಕನ್ನಡ ದಲಿತ ಸಾಹಿತ್ಯದ ನೆಲೆ, ಅರ್ಥಸುಗಂಧ, ಬಗೆ ಬಗೆವನಾರು, ಅಭಿಮುಖ ಮುಂತಾದ ವಿಮರ್ಶಾ ಕೃತಿಗಳು; ಕೋಲಾರಮ್ಮ, ಜಾನಪದ ಪರಿಭಾವನೆ, ದಾಸ ಸಾಹಿತ್ಯ ಮತ್ತು ಜಾನಪದ ಹಾಗೂ ಬಂದೀರೆ ನನ್ನ ಜಡೆವೊಳಗೆ, ಕಮಲಾಕೃತಿ ವಿಮರ್ಶೆ, ಕುಮಾರವ್ಯಾಸ, ವಿರಹಿಗಳ ಶೃಂಗಾರ, ಮೂಡಲವೈಭವ ಮುಂತಾದ ಕೃತಿಗಳು ಪ್ರಕಟವಾಗಿವೆ.

**ಚ.ಹ.ರಘುನಾಥ್**: ಮಧುಗಿರಿ ತಾಲೂಕು ಹರಳಾಪುರದ ಇವರು ಪ್ರಜಾವಾಣಿ ಸಮೂಹದಲ್ಲಿ ಪತ್ರಕರ್ತರು. ಹೊಳೆಯಲ್ಲಿ ಹರಿದ ನೀರು ಕವನ ಸಂಕಲನ, ಹೊರಗೂ ಮಳೆ ಒಳಗೂ ಮಳೆ, ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. ವಸುದೇವ ಭೂಪಾಲಂ, ಸಂಕ್ರಮಣ ಸಾಹಿತ್ಯ ಪುರಸ್ಕಾರ, ಕಥಾರಂಗಂ ಪುರಸ್ಕಾರ, ಸಾಂಬಶಿವಪ್ಪ ಸ್ಮಾರಕ ಪ್ರಶಸ್ತಿ ಮುಂತಾದ ಪ್ರಶಸ್ತಿ ದೊರಕಿವೆ.

**ಎನ್.ನಾಗಪ್ಪ:** ಗುಬ್ಬಿ ತಾಲೂಕಿನ ಇವರು ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಪ್ರಾಚಾರ್ಯರಾಗಿದ್ದಾರೆ. ಅನೇಕ ಸಂಘಟನೆಗಳಲ್ಲಿ ಸಕ್ರಿಯವಾಗಿ, ಭಾಷಣಕಾರರಾಗಿ, ಸರಳತೆಯಿಂದಾಗಿ ಜನಮನ ಸೆಳೆದವರು. ಸಾಕವ್ವ ಕವನಸಂಕಲನ, ಕುಂಬಾಗುಂಡಯ್ಯ, ಆರ, ಉತ್ಸಾಹಿ, ಬಡವರ ಬಂಧು, ಬಂಡಾಯ, ಹದಿನೈದು ವರ್ಷ ಮುಂತಾದ ಕೃತಿಗಳನ್ನು ಸಂಪಾದಿಸಿದ್ದಾರೆ. ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿಗಳು ಬಂದಿವೆ.

**ಲಕ್ಷ್ಮಣ ಕಳ್ಳಂಬೆಳ್ಳ:** ಶಿರಾ ತಾಲೂಕು ಕಳ್ಳಂಬೆಳ್ಳದ ಇವರು ನಾಗಮಂಗಲದಲ್ಲಿ ಪ್ರಾಂಶುಪಾಲರಾಗಿದ್ದಾರೆ. ಭಾವಸಂಗಮ, ಚುಟುಕು ಕವನ ಸಂಕಲನ, ಪ್ರೇಮದ ಪುತ್ಥಳಿ ಕಾದಂಬರಿ, ಬಾಳೊಂದು ಬವಣೆ, ಕೊಟ್ನಲ್ಲೋ ಕೈಯ್ಯ, ಸಂಪ್ರದಾಯದ ಸಂಕೋಲೆ, ಛಲಗಾರ ಚಾಣಕ್ಯ, ಉಷಾಹರಣ ಮುಂತಾದ ನಾಟಕಗಳನ್ನು ಪ್ರಕಟಿಸಿದ್ದಾರೆ.

**ಡಾ. ಆರ್.ಲಕ್ಷ್ಮೀನಾರಾಯಣ:** ತುಮಕೂರಿನ ಊರುಕೆರೆಯ ಇವರು ತುಮಕೂರು ಕೋಲಾರ ಮುಂತಾದೆಡೆ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ ಶಿಕ್ಷಣ ಇಲಾಖೆಯ ಜಂಟಿ ನಿವೃತ್ತ ನಿರ್ದೇಶಕರು ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ವಕ್ರೋಕ್ತಿ ಜೀವಿತ ಒಂದು ಅಧ್ಯಯನ ಇವರ ಪಿಹೆಚ್.ಡಿ., ಪ್ರಬಂಧ. ಆಹ್ಲಾದ, ಕನ್ನಡ ವಕ್ರೋಕ್ತಿ ಜೀವಿತ, ಮಾಸತಿ–ಬದುಕು ಬರಹ, ಮುಂತಾದ ವಿಮರ್ಶೆ, ಚಿನ್ನದ ಕಳಶ (ಚೀನಾ ಜಾನಪದ ಕಥೆಗಳು) ವಾಙ್ಮಯ ವಿವೇಕ, ಅನುರೂಪ, ಬ್ರೆಕ್ಟ್ ಮುಂತಾದ ಅನುವಾದಗಳು, ರುದ್ರಭಟ್ಟನ ಜಗನ್ನಾಥ ವಿಜಯ ಸಂಗ್ರಹ, ಹೊಸಗನ್ನಡ ಕಾವ್ಯ ಮುಂತಾದ ಸಂಪಾದಿತ ಕೃತಿಗಳು ಪ್ರಕಟವಾಗಿವೆ. ಕೇಂದ್ರ ಸಾಹಿತ್ಯ ಅಕಾಡೆಮಿ ಅನುವಾದ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಗೊರೂರು ಸಾಹಿತ್ಯ ಪ್ರಶಸ್ತಿ ಬಂದಿವೆ.

**ಟಿ.ಎಸ್.ದಕ್ಷಿಣಾಮೂರ್ತಿ:** ಚಿಕ್ಕನಾಯಕನಹಳ್ಳಿ ತಾಲೂಕು ತರಬೇನಹಳ್ಳಿ ಗ್ರಾಮದ ಇವರು ಕನ್ನಡ ಸಂಸ್ಕೃತಿ ಇಲಾಖೆಯಲ್ಲಿ ಜಂಟಿ ನಿರ್ದೇಶಕರಾಗಿ ನಿವೃತ್ತರಾಗಿದ್ದಾರೆ. ಕಪ್ಪು ಸೂರ್ಯ ಅನುವಾದಿತ ಕಾದಂಬರಿ, ಅಕಾಡೆಮಿಯ ಒಳಗು ಹೊರಗು, ಅನುಭವ ಕಥನ ಹಾಗೂ ಸಾಹಿತ್ಯ ಲೋಕದಲ್ಲೊಂದು ಸುತ್ತು ಮುಂತಾದ ಕೃತಿಗಳನ್ನು ಪ್ರಕಟಿಸಿದ್ದಾರೆ.

**ಟಿ.ಎಸ್.ಲೋಹಿತಾಶ್ವ:** ತುಮಕೂರು ತಾಲೂಕು ತೊಂಡಗೆರೆ ಗ್ರಾಮದ ಇವರು ಆಂಗ್ಲ ಉಪನ್ಯಾಸಕರಾಗಿ, ಪ್ರಿನ್ಸಿಪಾಲರಾಗಿ ನಿವೃತ್ತರಾಗಿದ್ದಾರೆ. ರಂಗಭೂಮಿ, ಚಲನಚಿತ್ರ, ಕಿರುತೆರೆ ನಟರಾಗಿ ಜನಪ್ರಿಯರಾಗಿದ್ದು ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಮುಖ್ಯಮಂತ್ರಿ, ಎರಡು ನಾಟಕಗಳು ಹಾಗೂ ಹೊತ್ತು ಹೋಗುವ ಮುನ್ನ ಎಂಬ ಕವನ ಸಂಕಲನ, ಅಕ್ಕಡಿ ಸಾಲು ವ್ಯಕ್ತಿ ಚಿತ್ರಗಳು, ಸಂತೆಯಲ್ಲಿ ನಿಂತ ಕಬೀರ ಮತ್ತು ಡಾ॥ತಿಪ್ಪೇಶಿ, ಸಲ್ಲಾಪ ಪ್ರಬಂಧಗಳು, ಚಾಪ್ಲಿನ್ ಜೀವನ ಚರಿತ್ರೆ ಮುಂತಾದವು ಪ್ರಕಟವಾಗಿವೆ. ಕರ್ನಾಟಕ ರಾಜ್ಯೋತ್ಸವ, ನಾಟಕ ಅಕಾಡೆಮಿ ಪ್ರಶಸ್ತಿ ಗಳಿಸಿದ್ದಾರೆ.

**ಡಾ. ನಟರಾಜ್ ಬೂದಾಳ್:** ಪದವಿ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರು. ಜಿ.ಎಸ್.ಸಿದ್ಧಲಿಂಗಯ್ಯ ಅವರ ಅಭಿನಂದನಾ ಗ್ರಂಥ 'ಹಣತೆಯ ಸಂಪಾದಕರಲ್ಲಿ ಒಬ್ಬರು. ಕಪ್ಪು ಹುಡುಗನ ಬೆಳಗು, ಸೂಜಿಗಲ್ಲಿನ ಹುಡುಗಿ, ತತ್ವ ಪದಕಾರರು (ಸಂ), ನಾಗಾರ್ಜುನನ ಮೂಲ ಮಾಧ್ಯಮ ಕಾರಿಕಾ ಮುಂತಾದ ಕೃತಿ ಪ್ರಕಟವಾಗಿವೆ. ಪುತಿನ ಕಾವ್ಯ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಗಳಿಸಿದ್ದಾರೆ.

**ಉಗಮ ಶ್ರೀನಿವಾಸ್:** ಪತ್ರಕರ್ತರೂ, ವಿಚಾರವಾದಿ, ಝೂನ್ ಟೀಮ್ ಸಾಂಸ್ಕೃತಿಕ ಸಂಘಟನೆಯ ಮುಖ್ಯಸ್ಥರೂ ಆಗಿರುವ ಇವರು ಜಿಲ್ಲೆಯಲ್ಲಿ ನಾಟಕಗಳ ಬಗ್ಗೆ ಸದಭಿರುಚಿ ಬೆಳೆಸುವಲ್ಲಿ ಮುಖ್ಯ ಪಾತ್ರವಹಿಸಿದ್ದಾರೆ. ಕವಿ–ಲೇಖಕರಾಗಿ ಗುರುತಿಸಿಕೊಂಡಿರುವ ಇವರು ಬಯಲು ಬಾಗಿಲು, ಒಂದು ಬಟ್ಟೆಯ ಚೂರು, ಅವಳ ಜೋಗಿ ಕವನ ಸಂಕಲನಗಳು, ಅಮೆರಿಕನ್ ಗೊಂಬೆ ಕಥಾಸಂಕಲನ, ಪೊನ್ನಮ್ಮಾಳ್ ಜೀವನ ಚಿತ್ರಣ, ತಿಪಟೂರು ತಾಲೂಕಿನ ಪ್ರಾತಿನಿಧಿಕ ಕವಿತಾ ಸಂಕಲನ, ಬೀದಿ(ಸಂಪಾದಿತ), ಮಳೆಕಾವು ವಿಮರ್ಶಾ ಸಂಕಲನ ಪ್ರಕಟಿಸಿದ್ದಾರೆ. ಕಾರ್ಯನಿರತ ಪತ್ರಕರ್ತರ ಸಂಘದ ಪ್ರಶಸ್ತಿ, ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ಹೂಗಾರ್ ಪ್ರಶಸ್ತಿ, ಅಕ್ಕ ಪ್ರಶಸ್ತಿ, ವಾಸುದೇವರಾವ್ ಪ್ರಶಸ್ತಿ, ಹಾಗೂ ೨೦೧೨–೧೩ನೇ ಸಾಲಿನ ಕರ್ನಾಟಕ ಮಾಧ್ಯಮ ಅಕಾಡೆಮಿ ಪ್ರಶಸ್ತಿ ಸಂದಿವೆ. ಇವರ ಕಥೆ, ಕವನಗಳು ಇಂಗ್ಲೀಷ್, ತೆಲುಗು ಮುಂತಾದ ಭಾಷೆಗಳಿಗೆ ಅನುವಾದಗೊಂಡಿದೆ.

**ಬ್ಯಾಡನೂರು ನಾಗಭೂಷಣ:** ಪಾವಗಡ ತಾಲೂಕು ಬ್ಯಾಡನೂರಿನ ಇವರು ಶಿಕ್ಷಕರು. ಅಶಕ್ತರು ಕಥಾ ಸಂಕಲನ, ಎಳೆಯರ ಗೆಳೆಯ, ಎಳೆಯರ ಅಂಗಳ, ಬಣ್ಣದಲೋಕ, ಮಕ್ಕಳ ಜನಪದ ಪ್ರಾಸಗಳು ಮುಂತಾದ ಮಕ್ಕಳ ಸಾಹಿತ್ಯ, ಆತ್ಮಗೀತೆ, ಕವನ ಸಂಕಲನ, ಬ್ಯಾಡನೂರು ದರ್ಶನ, ಸಂಶೋಧನಾತ್ಮಕ ಕೃತಿ, ಏನೋ ಮಾಡಲು ಹೋಗಿ ಏನೋ.. ಪ್ರಬಂಧ ಸಂಕಲನ, ಕೌಮಾರ್ಯ ಎಂಬ ಕನ್ನಡ ವ್ಯಾಕರಣ ಕೃತಿ ರಚಿಸಿ ಪ್ರಕಟಿಸಿದ್ದಾರೆ.

**ಡಾ॥ ಕೆ.ಬಿ.ರಂಗಸ್ವಾಮಿ:** ಶಿವಮೊಗ್ಗ ಜಿಲ್ಲೆಯ ಇವರು ಮಕ್ಕಳ ತಜ್ಞರೂ, ತುಮಕೂರಿನ ಶ್ರೀ ಸಿದ್ಧಾರ್ಥ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಉಪನ್ಯಾಸಕರೂ ಆಗಿದ್ದು ಇಲ್ಲಿಯೇ ನೆಲೆಸಿದ್ದಾರೆ. ಕೆಲವು ಸಾಮಾನ್ಯ ಕಾಯಿಲೆಗಳು ಎಂಬ ಅನುವಾದಿತ ಕೃತಿ ಪ್ರಕಟಿಸುವ ಮೂಲಕ ಸಾಹಿತ್ಯ ಕ್ಷೇತ್ರಕ್ಕೆ ಕಾಲಿಟ್ಟು, ಗರಿಕೆ, ಕವಿತೆಗಷ್ಟೇ ಸಾಧ್ಯ, ಬೆಳದಿಂಗಳ ಹೈಕುಗಳು (ಬೆಳದಿಂಗಳನ್ನೇ ಕುರಿತ ೨೩೪ ಹೈಕುಗಳು) ಹಕ್ಕಿ ಮತ್ತು ಮೋಡ (ಮಕ್ಕಳ ಕವಿತೆಗಳು) ಮುಂತಾದವನ್ನು ಪ್ರಕಟಿಸಿದ್ದಾರೆ. ತಾ.ಲ.ರಂಗನಾಥಶೆಟ್ಟಿ, ಕಾವ್ಯಶ್ರೀ (ಕವನ), ಸ್ಫೂರ್ತಿ ನೋಟಿನ ಸಮಾಜ (ಸಮಾಜ), ರೇಡಿಯೋ ನಾಟಕ ರಚಿಸಿದ್ದು, ಹಿಂದಿಯಿಂದ ಕೆಲವು ಕೃತಿಗಳನ್ನು ಅನುವಾದಿಸಿದ್ದಾರೆ.

**ತು.ರಾ.ಸುಂದರರಾಜ್:** ಜಿಲ್ಲಾ ಖಜಾನಾಧಿಕಾರಿಗಳಾಗಿ ನಿವೃತ್ತಿ ಹೊಂದಿರುವ ಇವರು ಸರ್ಕಾರಿ ನೌಕರರ ಸೇವಾವಿಷಯ ತಜ್ಞರಾಗಿ ತರಬೇತಿ, ಇಲಾಖಾ ಪರೀಕ್ಷೆಗಳಿಗೆ ಮಾರ್ಗದರ್ಶನ ನೀಡುವುದು, ಕೈಪಿಡಿ ಕ್ರೋಢೀಕರಣ ಮುಂತಾದ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಸಾಫಲ್ಯ, ಪ್ರೇಮಪಕ್ಷಿ, ಮೂರು ಮಾತು ನೂರು ಬಣ್ಣ, ಹೃದಯದಿಂದ ಹೃದಯಕ್ಕೆ ಮುಂತಾದ ಕೃತಿ ಪ್ರಕಟಿಸಿದ್ದಾರೆ. ಅನೇಕ ಪ್ರಶಸ್ತಿ ಗೌರವಗಳು ಸಂದಿವೆ. ಅನುವಾದ ಕಾರ್ಯ ಕೂಡ ಮಾಡಿರುತ್ತಾರೆ. ನೌಕರಬಂಧು ಪತ್ರಿಕೆಯ ಸಹ ಸಂಪಾದಕರು.

**ಡಾ॥ ಎಲ್.ಮಣ್ಣಿಗಯ್ಯ:** ತುಮಕೂರು ತಾಲೂಕು ಚಿಕ್ಕನಾಗಮಂಗಲದ ಇವರು ಬಿ.ವಿ.ವೆಂಕಟಸ್ವಾಮಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸಮಾಜಶಾಸ್ತ್ರ ಪ್ರಾಧ್ಯಾಪಕರಾಗಿದ್ದಾರೆ. ಏಡ್ಸ್ ಬಗ್ಗೆ ರಚಿಸಿರುವ ಮಹಾಪ್ರಬಂಧಕ್ಕೆ ಪಿ.ಎಚ್.ಡಿ ಪದವಿ ಪಡೆದಿರುತ್ತಾರೆ. ಕನ್ನಡದಲ್ಲಿ ಭಾರತೀಯ ಸಾಮಾಜಿಕ ರಚನೆ ಮತ್ತು ಬದಲಾವಣೆ ಗ್ರಂಥವನ್ನು ರಚಿಸಿದ್ದಾರೆ. ಅನೇಕ ಸಂಶೋಧನಾತ್ಮಕ ಲೇಖನಗಳನ್ನು ಪ್ರಕಟಿಸಿದ್ದಾರೆ.

**ಡಾ॥ ಎಂ.ಪಿ.ಶಂಕರಪ್ಪ:** ಕೊರಟಗೆರೆ ತಾಲೂಕು ಮಣೆವಿನಕುರಿಕೆಯವರಾದ ಇವರು ಸಿದ್ಧಗಂಗಾ ಕಾಲೇಜಿನಲ್ಲಿ ಸಮಾಜಶಾಸ್ತ್ರ ಪ್ರಾಧ್ಯಾಪಕರಾಗಿದ್ದು ನಿವೃತ್ತಿ ಹೊಂದಿದ್ದಾರೆ. ಕುವೆಂಪು ವಿಶ್ವವಿದ್ಯಾಲಯದಿಂದ ಪಿ.ಎಚ್.ಡಿ ಪದವಿ ಪಡೆದಿರುತ್ತಾರೆ. ಸಮಾಜಶಾಸ್ತ್ರ ಕೃತಿಗಳನ್ನು ರಚಿಸಿದ್ದಾರೆ.

## ಜಿಲ್ಲೆಯ ಇತರ ಲೇಖಕರು

ಹಲವಾರು ಲೇಖನ, ಕವನ, ಕತೆಗಳನ್ನು ಬರೆದು, ಪತ್ರಿಕೆ ನಿಯತಕಾಲಿಕೆಗಳಲ್ಲಿ ಪ್ರಕಟಿಸಿರುವ ಹಾಗೂ ಕೆಲವೊಂದು ಕೃತಿಗಳನ್ನು ಪ್ರಕಟಿಸಿರುವ ಅನೇಕಾನೇಕ ಬರಹಗಾರರು ಜಿಲ್ಲೆಯಲ್ಲಿ ಕಂಡುಬರುತ್ತಾರೆ. ಬಿ.ವಿ.ಶ್ರೀನಿವಾಸರಾವ್; ವೀರಶೈವ ಸಾಹಿತ್ಯ; ಮಲ್ಲಿಕಾರ್ಜುನ; ವಿರೂಪಾಕ್ಷ, ರಾಯಚೂರು ಇತಿಹಾಸ, ಸಂಜೀವ ರಾವ್ ಅರಕೆರೆ; ಸುಮಿತ್ರ, ರಾಜಾರಾಮನಾಥ, ಕಾದಂಬರಿಗಳು. ಆಲೂರು ಸತ್ಯನಾರಾಯಣ; ಶಿವಗಂಗಾ ಮಹಾತ್ಮೆ; ಬಿ.ಸೀತಾರಾಮಶಾಸ್ತ್ರಿ ಪಾವಗಡ (ಕ್ಷೀರಸಾಗರ ಕಾವ್ಯನಾಮ); ದೀಪಾವಳಿ ಕಲಹ, ಕುತೂಹಲ, ರೂಪಾಯಿ ಗಿಡ, ನಮ್ಮೂರಿಂದ ಪಶ್ಚಿಮಕ್ಕೆ, ನಾಟಕಗಳು ನೆಪೋಲಿಯನ್ ಜೀವನ ಚರಿತ್ರೆ; ಸುಬ್ಬಣ್ಣ ಸಂಪಿಗೆ; ದ್ಯಾವರು ಓದರೆ ಕಾದಂಬರಿ; ನಾರಾಯಣಚಾರ್: ಮಧುಗಿರಿಯ ಚರಿತ್ರೆ; ಜಿ.ಎಸ್.ಸೋಮಶೇಖರಯ್ಯ ಸಿಂದಗಿ; ವಚನಶಾಸ್ತ್ರದ ನುಡಿಮುತ್ತು; ಜೈನಶಾಸ್ತ್ರದ ನುಡಿಮುತ್ತು, ಬಿ.ಹೆಚ್.ಹನುಮಂತರಾಯಪ್ಪ; (ಕಾವ್ಯನಾಮ ವಿಜಯಸಾರಥಿ) ಕನ್ಯಾವತಾರ ನಾಟಕ; ಜಿ.ಹನುಮಂತರಾವ್: ಸಮಾಜದ ರೋಗರುಜಿನಗಳು, ಋಗ್ವೇದ ಸೂಕ್ತಗಳು, ತರ್ಕಶಾಸ್ತ್ರ, ಕುಟುಂಬ ಜೀವನ, ಆಧುನಿಕ ತತ್ವ ಶಾಸ್ತ್ರ; ಟಿ.ಹೆಚ್.ಹೊನ್ನಗಂಗಪ್ಪ (ಉಮಾಶಂಕರ ಕಾವ್ಯನಾಮ); ಸುಧಾ, ತರಂಗ, ಕರುಳು ಮಿಡಿದ ಕಂಬನಿ, ವಿಖ್ಯಾತ ಪ್ರಣಯ ಕಥೆಗಳು; ಟಿ.ಎನ್. ಲಕ್ಷ್ಮಣಗೌಡ: ಆದಿಚುಂಚನಗಿರಿ ಕ್ಷೇತ್ರ ಮಹಾತ್ಮೆ; ಟಿ.ಎಲ್.ಗಂಗಣ್ಣ; ದೈಹಿಕ ಶಿಕ್ಷಣ, ಸದ್ಭಾಳ್ವೆಗೆ ಸೋಪಾನಗಳು; ಹೆಚ್. ಆರ್.ಶಂಕರನಾರಾಯಣ(ಹಾರಾ ಕಾವ್ಯನಾಮ): ಕಬ್ಬು ಕುಡುಗೋಲು ನಗೆಬರಹ, ಹಣತೆ ವಿಡಂಬನ; ಬಿ.ನಂಜುಂಡಯ್ಯ; ಸಾಹಿತ್ಯ ಚರಿತಾಮೃತ, ಸಾಯಿಚರಿತಾಮೃತ, ನಮ್ಮ ಸಂಸ್ಕೃತಿ; ನರಸಿಂಹ ಪುರಾಣಿಕ್: ಕನ್ನಡ–ಸಂಸ್ಕೃತ ಲಘು ನಿಘಂಟು,

ಸಂಗೀತ ಬಾಲಬೋಧೆ, ಕೋಟನಾಯಕನಹಳ್ಳಿಯ ಪರಪ್ಪ; ಕನ್ನಡದ ರವಿ ಮೂಡಿದ, ಕೋಟನಾಯಕನಹಳ್ಳಿ ಕ್ಷೇತ್ರ ಮಹಿಮೆ, ವಚನ ಸಂದೇಶ, ನಂಬಿಕೆಯೇ ದೇವರು, ವಚನಗಳು ಹಾಗೂ ಧ್ವನಿಸುರಳಿಗಳು; ಡಾ.ಹೊನ್ನಗಾನಹಳ್ಳಿ ಕರಿಯಣ್ಣ; ಕಾಡಿನ ಹಾಡು; ಬಂದಕುಂಟೆ ಚಿಕ್ಕಈರಣ್ಣ ಕಾವ್ಯ, ತುಮಕೂರು ಜಿಲ್ಲೆಯ ಜನಪ್ರಿಯ ಗಾದೆಗಳು; ಡಾ.ಓ.ನಾಗರಾಜು; ತುಮಕೂರು ಜಿಲ್ಲೆಯ ಗ್ರಾಮದೇವತೆಗಳು ಸಂಗ್ರಹ; ಕೆ.ನರಸಿಂಹಯ್ಯ; ಗಿರಿಬನದ ಕುಸುಮಗಳು; ಎಲ್. ರಂಗನಾಥ್ ಶಿರಾ; ಕತ್ತಲನಾಡಿನ ಹಾಡು, ಬಂಡಾಯದ ಬಿಸಿಯುಸಿರು, ಸುಗ್ಗಿಯ ಕತೆ, ಬಾಲಗೌರಿ; ರಾಜೇಶ್: ಹಂಗು, ಇತಿಹಾಸ-೧, ಇತಿಹಾಸ-೨ ಇತಿಹಾಸ ದರ್ಪಣ (ಸಂಪಾದಿತ); ಶಂಕರಯ್ಯ ಜಿ: ಪಾಶ್ಚಿಮಾತ್ಯ ಸಾಹಿತ್ಯ ವಿಮರ್ಶೆಯ ಪಕ್ಷಿನೋಟ, ಯೂರೋಪಿನ ಮಧ್ಯಕಾಲೀನ ವೀರಗೀತೆಗಳು (ಗದ್ಯ ಕಥಾಸಾರ) ಕನ್ನಡ ಗೀತಗೋವಿಂದ; ಡಾ॥ ಶರತ್ ಕುಮಾರ್ ಸಿ.ರಾಮನಹಳ್ಳಿ; ಪುರುಷರಲ್ಲಿ ಬಂಜೆತನ, ಸ್ತ್ರೀಯರಲ್ಲಿ ಬಂಜೆತನ, ಆರೋಗ್ಯನುಡಿ, ಕ್ಯಾನ್ಸರ್, ನಮ್ಮ ಮನೆಯ ಮಲ್ಲಿಗೆ; ಓ.ಎನ್.ಲಿಂಗಣ್ಣಯ್ಯ (ಶ್ರೀಶೈಲ ಕಾವ್ಯನಾಮ); ಮೈಸೂರು ಒಡೆಯರ ಕಥೆಗಳು, ಇತಿಹಾಸದ ಕಥೆಗಳು; ಚಿತ್ರಲಿಂಗಯ್ಯ ಮಧುಗಿರಿ; ಸಂಕ್ಷಿಪ್ತ ಭಾಷಾ ವಿಜ್ಞಾನ; ವೈ.ಜಿ.ವೆಂಕಟೇಶಯ್ಯ; ಯಲಗಲವಾಡಿ ಸಣ್ಣೀರಪ್ಪ ಜಂಗಮರಹಳ್ಳಿ; ನೈದಿಲೆ; ತಿಮ್ಮನಹಳ್ಳಿ ವೇಣುಗೋಪಾಲ್: ಸಿಡಿದೆದ್ದವರ ಒಂದು ಅಧ್ಯಾಯ, ನೆಲಕುಲ ಪರದೇಸಿ; ಬೆಳಧರ ರೇಣುಕಾ ಪ್ರಸಾದ್; ಬೆಳ್ಳಿಚುಕ್ಕಿ; ಪಮ್ಮಿ (ಪರಮೇಶ್ವರ); ಪ್ರೇಮಿಕಾ; ನಿತ್ಯಾನಂದ ತೀತ: ಬೇವಾರಸು; ಸಂಪಿಗೆ ತೋಂಟದಾರ್ಯ; ತಮಾಷೆ, ಸುಳಿ-ಲೇಖನ ಸಂಕಲನ, ಕಾಮನಬಿಲ್ಲು-ಪತ್ತೇದಾರಿ ನಾಟಕ, ಅರಿವಿನ ಪಯಣ (ನಾಟಕ), ಚಂದ್ರ (ಅನು); ಗಣಪತಿ ಹೆಗಡೆ: ಶಿಶಿರ ಬಾಲೆ; ಜಿ.ಪ್ರಕಾಶ್; ಜಾಲಿಯ ಹೂವು; ಎಲ್.ಮಹಲಿಂಗಪ್ಪ ತಿಪಟೂರು; ನಿರಾಳ ಗರುಗದೊಡ್ಡಿ ನಟರಾಜ್; ಪ್ರೀತಿ ನೀನಿಲ್ಲದೇ ನಾನು ಹೇಗಿರಲಿ, ಒಲಂಪಿಕ್ಸ್ ಎಂಬ ಕೆಂಪು ದ್ವೀಪ (ಕಥಾ ಸಂಕಲನ); ಕಟಾರಿವೀರನಹಳ್ಳಿ ನಾಗರಾಜ್; ಬಿತ್ತನೆಸಾಲು; ವೈ.ಕೆ.ರಾಮಯ್ಯ; ನಾನು ಮತ್ತು ರೇಷ್ಮೆ; ಶಿವನಂಜಯ್ಯ ಬಾಳೆಕಾಯಿ; ಮಣ್ಣು ಧ್ಯಾನ; ಜಿ.ಇಂದ್ರಕುಮಾರ್; ಮಬ್ಬಿನಾಚೆಯ ಬೆಳಕು (ಕವನ) ಸಾಲಾವತಿ (ನಾಟಕ); ಈಚನೂರು ರಾಜರತ್ನಂ; ಹಣ ವಿಮೋಚನೆ, ಸಾಮಾಜಿಕ ಸಮಸ್ಯೆಗಳು, ಹಣ ಮತ್ತು ಬ್ಯಾಂಕುಗಳು; ಈಚನೂರು ಶ್ರೀಧರ ಮೂರ್ತಿ: ಚಂದ್ರವರ್ಮ, ಅವನು ಮತ್ತು ಆದರ್ಶ ದಾಳಗಳು, ಅನಾವರಣ, ಮಜಲುಗಳು; ಕರಿರಾಮನಹಳ್ಳಿ ಹೆಚ್.ಕೃಷ್ಣಪ್ಪ: ಮಿಶ್ರಭಾವ; ಹ.ಬ.ಮಹದೇವಪ್ಪ: ಮಧುಗಿರಿ ತಾಲೂಕುದರ್ಶನ, ಪರಿವರ್ತನೆ (ನಾಟಕ); ಸಿದ್ದರಾಜ್ ಐವಾರ್; ಕೆಂ.ಬ.ರೇಣುಕಯ್ಯ: ಸ್ಕೂಲ್ ಇನ್ಸ್ಪೆಕ್ಟರ್; ಡಿ.ಆರ್.ಬಸವರಾಜಪ್ಪ: ನಿಡುಗಲ್ಲು ಬೆಟ್ಟದ ಮೇಲೆ, ನಿಡುಗಲ್ಲು ಗರಿ-ಶ್ರೀ ತಿಪ್ಪೇಶ; ಮುದಿಗೆರೆ ರಮೇಶ್ ಕುಮಾರ್; ತಮದೊಡಲ ಜೀವಗಳು (ಸಂ); ಯಲದಬಾಗಿ ಚಿಕ್ಕರಂಗೇಗೌಡ; ಎಲ್ಲಿ ಜಾರಿತೋ ಮನವು. ದುರ್ಗದ ಲಕ್ಷ್ಮೀನಾರಾಯಣ; ಸಂಕೋಲೆ; ತು.ಮ.ಬಸವರಾಜು-ಬಂತೋ ವಸಂತ, ಅರಮನೆಯ ಸಿರಿಯಲ್ಲಿ, ವಸಂತ ಕುಸುಮಾಂಜಲಿ, ಗೀತ ಸಂಚಯ, ನಾಡುನುಡಿ ಗೀತೆಗಳು, ಗೀತ ಗಂಗೋತ್ರಿ, ಸೂರೇನಹಳ್ಳಿ ಶಿವರಾಮಯ್ಯ: ದೇವದರ್ಶನ, ಬೆಳಗುಂಬದ ಗದ್ದುಗೆ, ಕಾರೆಕುರ್ಚಿ, ಬೋರೇಗೌಡನ ಬಾರುಕೋಲು, ಯವಾರ, ಇತ್ಯಾದಿ. ಎಂ.ಈಶ್ವರಪ್ಪ: ಕನ್ನಡ ವ್ಯಾಕರಣ ಕೈಪಿಡಿ; ಎಲ್.ಮಹಲಿಂಗಪ್ಪ; ನಿರಾಳ; ಎಸ್.ತಮ್ಮಾಜಿರಾವ್; ಮನಸಿನ ಮಾತುಗಳು, ಇದು ಧರೆಯ ಬವಣೆ, ನಕ್ಕಾವು ಕಲ್ಲುಗಳು, ಯಮನ ಕೋಣವೂ-ಸಾವಂತ್ರಿಯ ಎಮ್ಮೆಯೂ, ಕೆ.ಆರ್.ನಾಯಕ್; ನೆನಪಿನಗೊಂಚಲು; ಬ್ಯಾಡರ ಹಳ್ಳಿ ಶಿವರಾಜ್: ಗುಡಿಸಲೊಳಗೊಂದು ಬೆಳ್ಳಿಚುಕ್ಕಿ; ವಿ.ಆರ್.ಚೆಲುವರಾಜ್; ಪಾವಗಡ ತಾಲೂಕು ದರ್ಶನ, ಕೆ.ನಂಜುಂಡರಾವ್; ಮಣಿ, ಮೊಗಲ್ ದರ್ಬಾರ್; ಗುಮ್ಮಘಟ್ಟದ ಹನುಮಂತರಾಯ; ಹರ್ಷಾಂಬುಧಿ; ಡಾ.ವಿ.ಕೆಚೌಧರಿ; ಕಂದಬಿಂಬ, ಕವನಕುಸುಮಾಂಜಲಿ, ಆರೋಗ್ಯ ಮಾಲಾಮದ್ದೆ ರವಿಕುಮಾರ್; ಕಡಿವಾಣ; ಅ.ರಾ.ಮಂಜುನಾಥ್; ಏಕಾಂಗಿ; ಮಲ್ಲಿಕಾರ್ಜುನಯ್ಯ; ಕಾಗೆ, ಪರಾಗದ ಕಣಗಳು; ಎ.ವಿ.ಶ್ರೀಧರ ಮೂರ್ತಿ; ಅದೃಷ್ಟದ ಆಟ, ನಿಲುಕದ ನಕ್ಷತ್ರ, ಕೆ.ಮಂಜೇಶ್ ತುರುವೇಕೆರೆ; ಗುಟ್ಕಾ ಗಮ್ಮತ್ತು, ಹುಚ್ಚು ಹರೆಯ, ನಗುಚಂದ, ನಗು ಅರಳಲಿ; ದಿ.ಮಹೇಶ್ ಹೊನ್ನುಡಿಕೆ;ಹಾದರರದ ಹೆಜ್ಜೆ; ಕೆ.ಪಿ.ಮೃತ್ಯುಂಜಯ; ಒಂದು ಅನುರಾಗಕ್ಕಾಗಿ ಎಷ್ಟೆಲ್ಲಾ, ಶಾರದಾತನಯ (ದಿ.ಎಂ.ಎ.ವೆಂಕಟಸುಬ್ಬರಾವ್); ಹೀನಪುಣ್ಯರು-ತೆಲುಗು-ಕನ್ನಡ ಅನುವಾದ ಸ್ವಾಮಿ.ನ.ಕೋಡಿಹಳ್ಳಿ: ಬೆಳಕಿಗೊಂದು ಹಣತೆ; ಜಿ.ನಾರಾಯಣಮೂರ್ತಿ; ಸಂಭ್ರಮ, ಸಂವೇದನೆ, ಪ್ರೇಮವಿಹಾರ, ಕನಸು, ರಂಗಪ್ರವೇಶ, ಇಬ್ಬರ ಒಂದು ಪಯಣ; ಪ್ರೊ.ರಾಮಪ್ಪ ದೊಣ್ಣೆರೆ; ನನ್ನ ನಿತ್ಯ ಪುಜೆ, ನೆನಪಿನ ಅಲೆಗಳು, ಶೆಟ್ಟೀಕೆರೆ ನಂಜಪ್ಪ ಸಿದ್ಧ ಲಿಂಗಪ್ಪ; ದೀಪಧಾರಣಿ; ಬೂವನಹಳ್ಳಿ ನಾಗರಾಜ್: ನೆಲದ ನುಡಿ, ಜಿ.ಎನ್.ಮೋಹನ್; ಡಂಕೆಲ್ ಸಾಂಸ್ಕೃತಿಕ ಪಿಡುಗು, ಪ್ರಶ್ನೆಗಳಿರುವುದು ಶೇಕ್ಸ್ಪಿಯರನಿಗೆ; ವಿ.ಎಸ್.ಪ್ರಭು;ಬಲು ಮೀನು; ವಿದ್ವಾನ್ ವೆಂಕಟರಾಮಯ್ಯ: ನೀಳ್ಗತಾ ಹೆಚ್.ಎನ್.ವಿಶ್ವನಾಥ-ಸತ್ಯಾಗ್ರಹ; ಡಾ.ಲಕ್ಷ್ಮಣ್, ಪೌಳಿ ಶಂಕರಾನಂದಪ್ಪ; ಆಸ್ಟ್ರೇಲಿಯಾದ ಮೂಲ ನಿವಾಸಿಗಳು ಒಂದು ಅಧ್ಯಯನ, ದಾರಿದೀಪ, ಹಿಮಾಲಯ ದರ್ಶನ, ಪೌಳಿ ಕೈಪಿಡಿ, ಅಂತರಾಳ; ಎಂ.ವಿ.ನಾಗಣ್ಣ; ಸಿದ್ಧ ಗಂಗೆಯ

ಶಿವಯೋಗಿ, ಸರ್ವೋತ್ತಮ ಆಚಾರ್ಯ ಕವಿತಾ ಕೃಷ್ಣ; ಎಸ್.ವಿ.ರವೀಂದ್ರನಾಥ ಟ್ಯಾಗೂರ್;ಜಲಪಾತ, ಬೆಳಕು, ಜಾತಕ ದನಿ; ಕೆ.ಎನ್.ಗುರುಲಿಂಗಯ್ಯ; ಕೈವಾರ ತಾತಯ್ಯ. ಎಸ್.ಕೃಷ್ಣಪ್ಪ; ಕುವೆಂಪು ಭಾವಯಾನ. ಡಾ.ವಡ್ಡಗೆರೆ ನಾಗರಾಜಯ್ಯ; ಬುದ್ದನೆಡೆಗೆ, ಆಸಾದಿ(ಖಂಡ ಕಾವ್ಯ) ಈ ಕೃತಿಗೆ ಅಕಾಡೆಮಿ ಪ್ರಶಸ್ತಿ ಬಂದಿದೆ; ಡಾ.ಸಿ.ಬಿ.ಹೊನ್ನಯ್ಯ;(ಹೊನ್ನು ಸಿದ್ದಾರ್ಥ) ಕನ್ನಡ ಸಣ್ಣ ಕಥೆಗಳಲ್ಲಿ ದಲಿತ ಸಂಸ್ಕೃತಿ, ಕೊರಟಗೆರೆಯ ರಾಜೇಶ್ ಗುಬ್ಬಿ; ಕನಸುಗಳು, ತಿಮ್ಮರಾಯಪ್ಪ ವಿಠಲಾಪುರ; ಹರಿಪೆಡೆಯ ನುಡಿಗಳು; ಕಲಾಮಂಜುನಾಥ್; ಮೊಗ್ಗಿನೆಡೆ. ಡಾ.ಜಿ.ಸಂಜೀವರಾಯ;ಹೊರಬೀಡು ದುರ್ಗದ ರಾಜೇಗೌಡ, ಶಿವಣ್ಣ ಎಸ್, ಶಿವಾನಂದ ಶಿವಾಚಾರ್ಯ, ಷಡಕ್ಷರಿ:ತಿಪಟೂರು; ಡಾ॥ ಮಿರ್ಜಾಬಷೀರ ಇವರಲ್ಲದೇ ಗಾಣಧಾಳು ಶ್ರೀಕಂಠ, ಮಲ್ಲಿಕಾರ್ಜುನ ಹೊಸಪಾಳ್ಯ, ಜಿ.ಕೃಷ್ಣಪ್ರಸಾದ್ ಮುಂತಾದವರು ಕೃಷಿರಂಗದ ವಿವಿಧ ಪ್ರಾಕಾರಗಳ ಬಗ್ಗೆ ಲೇಖನ ಹಾಗೂ ಪುಸ್ತಕಗಳನ್ನು ಬರೆದಿದ್ದಾರೆ.

## ತುಮಕೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು

ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು ಕೇಂದ್ರದ ಅಧ್ಯಕ್ಷರಾಗಿದ್ದ ಜಿ.ನಾರಾಯಣ ಅವರ ಪರಿಶ್ರಮ ಹಾಗೂ ಆಶಯದಿಂದ ಜಿಲ್ಲಾ ಘಟಕಗಳು ಪ್ರಾರಂಭಿಸಲ್ಪಟ್ಟವು. ಅಂತೆಯೇ ತುಮಕೂರು ಜಿಲ್ಲಾ ಘಟಕವು ೧೨-೦೫-೧೯೬೯ರಲ್ಲಿ ಪ್ರಾರಂಭವಾಯಿತು. ಸ್ವಾತಂತ್ರ್ಯ ಹೋರಾಟಗಾರ, ಕೈಗಾರಿಕೋದ್ಯಮಿ, ಪತ್ರಿಕೋದ್ಯಮಿ ಇತ್ಯಾದಿ ಬಹುಮುಖ ವ್ಯಕ್ತಿತ್ವದ ಆರ್.ಎಸ್.ಆರಾಧ್ಯ ಇದರ ಪ್ರಥಮ ಅಧ್ಯಕ್ಷರಾಗಿ, ಸುಮಾರು ಒಂಬತ್ತು ವರ್ಷ(೧೨-೦೫-೧೯೬೯ರಿಂದ ೨೩-೦೭-೧೯೭೮) ಅಧ್ಯಕ್ಷರಾಗಿದ್ದರು. ಇವರ ಅವಧಿಯಲ್ಲಿ ೧೯೭೧ರಲ್ಲಿ ಪ್ರಥಮ ಜಿಲ್ಲಾ ಸಮ್ಮೇಳನ, (ಡಾ.ಬಿ.ಶಿವಮೂರ್ತಿ ಶಾಸ್ತ್ರಿ ಸಮ್ಮೇಳನಾಧ್ಯಕ್ಷರು) ಮಹಿಳಾ ಸಮ್ಮೇಳನ, ಜಾನಪದ ಸಮ್ಮೇಳನ ಮುಂತಾದವು ನಡೆದವು. ಆರಾಧ್ಯರ ಪತ್ನಿ ಸುಲೋಚನಾದೇವಿ ಆರಾಧ್ಯ ಅವರು ಪ್ರಸಿದ್ಧ ಸಾಹಿತಿಯಾಗಿದ್ದರು. ನಂತರ ಡಿ.ಪಾರ್ಶ್ವನಾಥ್ ಅಧ್ಯಕ್ಷರಾಗಿದ್ದಾಗ (೨೪-೦೭-೧೯೭೮ರಿಂದ ೧೭-೦೮-೧೯೮೨). ೧೯೮೦ರಲ್ಲಿ ತಿಪಟೂರಿನಲ್ಲಿ ದ್ವಿತೀಯ ಜಿಲ್ಲಾ ಸಾಹಿತ್ಯ ಸಮ್ಮೇಳನ ನಡೆಯಿತು. (ಪ್ರೊ.ಕೆ.ವೆಂಕಟರಾಮಪ್ಪ ಸಮ್ಮೇಳನಾಧ್ಯಕ್ಷರು), ಶಾಂತಾ ಸನ್ಮತಿಕುಮಾರ್ (೧೮-೦೮-೧೯೮೨ರಿಂದ ೨೬-೦೯-೧೯೮೬) ಅಧ್ಯಕ್ಷರಾಗಿದ್ದಾಗ ೧೯೮೩ರಲ್ಲಿ ನಡೆಸಿದ ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನ ಇಂದಿಗೂ ಜನಮಾನಸದಲ್ಲಿ ಅಚ್ಚಳಿಯದೇ ಉಳಿದಿದೆ. ಸಿ.ಎ.ಸೋಮೇಶ್ವರ ಗುಪ್ತ ಇವರು (೨೭.೦೯.೧೯೮೬-೦೧.೦೪.೧೯೮೮) ಅಧ್ಯಕ್ಷರಾಗಿ, ಕ್ರೀಡೆ, ಸಮಾಜಸೇವೆ, ರೋಟರಿ ಮುಂತಾದ ಜನಸೇವೆ ಜೊತೆ ಸಾಹಿತ್ಯ ಸೇವೆಯನ್ನೂ ಮಾಡಿದರು. ಅನಂತರ ಕವಿತಾಕೃಷ್ಣ ಅವರು ಅಧ್ಯಕ್ಷರಾದರು. (೦೨.೨.೧೯೮೯-೩೧.೩.೧೯೯೩). ಇವರ ಅಧ್ಯಕ್ಷಾವಧಿಯಲ್ಲೂ ಸಾಕಷ್ಟು ಪ್ರಗತಿಯಾಯಿತು.

**ಹ.ಬ.ಮಹದೇವಪ್ಪ** (೨೨.೦೬.೧೯೯೫-೧೦.೭.೧೯೯೫) ನವರು ಅಧ್ಯಕ್ಷರಾಗಿದ್ದ ಕಾಲದಲ್ಲಿ ಮನೆ ಮನೆಗಳಲ್ಲಿ ಸಾಹಿತ್ಯದ ಕಾರ್ಯಕ್ರಮ ನಡೆಸಿ ಗ್ರಾಮೀಣ ಭಾಗದ ಹೋಬಳಿ, ಹಳ್ಳಿಗಳಿಗೆ ಸಾಹಿತ್ಯವನ್ನು ಕೊಂಡೊಯ್ದು ಸಮ್ಮೇಳನಗಳನ್ನು ನಡೆಸಿದರು. ಮೊದಲ ಬಾರಿಗೆ ಆಂಧ್ರದ ಹೇಮಾವತಿಯಲ್ಲಿ ಗಡಿನಾಡು ಸಾಹಿತ್ಯ ಸಮ್ಮೇಳನ ನಡೆಸಿದರು. ತುಮಕೂರು ಜಿಲ್ಲಾ ಮಹಿಳಾ ಸಾಹಿತ್ಯ ಸಮ್ಮೇಳನ, ಶರಣ ಸಾಹಿತ್ಯ ಪರಿಷತ್ತಿನ ವತಿಯಿಂದ ತುಮಕೂರು, ಕುಣಿಗಲ್ ಮುಂತಾದ ಕಡೆ ಸಾಹಿತ್ಯ ಸಮ್ಮೇಳನಗಳನ್ನು ನಡೆಸಿದರು.

**ಪ್ರೊ.ಬಿ.ವೀರಭದ್ರಯ್ಯನವರು** (೨೨.೦೬.೧೯೯೫-೧೬.೦೭.೧೯೯೮) ಅಧ್ಯಕ್ಷರಾದ ನಂತರ ಸಾಹಿತ್ಯ ಪರಿಷತ್ತು ಹೆಚ್ಚಿನ ಕಾರ್ಯಕ್ರಮ, ಪುಸ್ತಕ ಪ್ರಕಟಣೆ, ದತ್ತಿ ಕಾರ್ಯಕ್ರಮಗಳಿಗೆ ಮುಂದಾಯಿತು. ೧೯೯೫ರಲ್ಲಿ ಮಧುಗಿರಿಯಲ್ಲಿ ೪ನೇ ಜಿಲ್ಲಾ ಸಾಹಿತ್ಯ ಸಮ್ಮೇಳನ ನಡೆಯಿತು.(ಪ್ರೊ.ಜಿ.ಎಸ್.ಸಿದ್ಧಲಿಂಗಯ್ಯನವರು ಸಮ್ಮೇಳನಾಧ್ಯಕ್ಷರು) ಮತ್ತೆ ೧೯೯೭ರಲ್ಲಿ ಐದನೆಯ ಜಿಲ್ಲಾ ಸಾಹಿತ್ಯ ಸಮ್ಮೇಳನ ಗುಬ್ಬಿಯಲ್ಲಿ ನಿಟ್ಟೂರು ಶ್ರೀನಿವಾಸರಾಯದ ಅಧ್ಯಕ್ಷತೆಯಲ್ಲಿ ನಡೆಸಿದರು. ೧೯೯೮ರಲ್ಲಿ ಸಾ.ಶಿ.ಮರುಳಯ್ಯನವರ ಹುಟ್ಟೂರಿನಲ್ಲಿ (ಚಿಕ್ಕನಾಯ್ಕನಹಳ್ಳಿ ತಾಲೂಕು ಸಾಸಲು)ರಲ್ಲಿ, ತುರುವೇಕೆರೆಯಲ್ಲಿ ಡಾ.ಡಿ.ಕೆ. ರಾಜೇಂದ್ರ ಅವರ ಅಧ್ಯಕ್ಷತೆಯಲ್ಲಿ ತಾಲೂಕು ಸಮ್ಮೇಳನ ನಡೆಸಿದರು. ಪರಿಷತ್ತಿಗೆ ಬೆಳ್ಳಿಹಬ್ಬದ ಸಂದರ್ಭದಲ್ಲಿ ೨೫ ಸಾಹಿತ್ಯಕೃತಿ ಹೊರತರಲು ಪ್ರಯತ್ನ ಪಟ್ಟಿದ್ದರು. ಅವುಗಳಲ್ಲಿ ಒಂಬತ್ತು ಮಾತ್ರ ಅವರ ಜೀವಿತಾವಧಿಯಲ್ಲಿ ಪ್ರಕಟವಾದವು. ಟಿ.ಎನ್.ಎಂ ಸ್ಮಾರಕ ಗ್ರಂಥಮಾಲೆಯಲ್ಲಿ ಟಿ.ಎನ್.ಮಹಾದೇವಯ್ಯನವರ ಕೃತಿಗಳನ್ನು ಪ್ರಕಟಿಸಿದ್ದರು. ಪ್ರೊ.ಸಿ.ಹೆಚ್. ಮರಿದೇವರು (೧೦.೦೭.೧೯೯೮-೧೦.೭.೨೦೦೧) ಅಧ್ಯಕ್ಷರಾಗಿ, ಮನೆಮನೆಗಳಲ್ಲಿ ಸಾಹಿತ್ಯಗೋಷ್ಠಿ ನಡೆಸಿದರು.

ಟಿ.ನ.ಏಕೇಶ್ವರ್ (೧೦.೭.೨೦೦೧-೦೧.೧೧.೨೦೦೪) ಪತ್ರಕರ್ತರಾಗಿದ್ದ ಇವರು ಪರಿಷತ್ತಿನ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ೬೯ನೇ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಡಾ.ಯು.ಆರ್.ಅನಂತಮೂರ್ತಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಜಯಮಂಗಲಿ ಮತ್ತು ಕಲ್ಪಸಿರಿ ಎಂಬ ನೆನಪಿನ ಸಂಚಿಕೆಗಳನ್ನು ಹೊರತಂದರು. ಜಿಲ್ಲೆಯ ಸರ್ಕಾರಿ ನೌಕರರು ನೀಡಿದ ದೇಣಿಗೆ ಹಣದಲ್ಲಿ ಜಿಲ್ಲಾ ಕನ್ನಡ ಭವನ ನಿರ್ಮಿಸಲು ಉದ್ದೇಶಿಸಿ ನಿವೇಶನ ಪಡೆಯಲಾಯಿತು. ಬಡಾವಣೆ ಮಟ್ಟದಲ್ಲಿ ಸಮ್ಮೇಳನ ನಡೆಸಲು ಪ್ರಾರಂಭಿಸಲಾಯಿತು.

**ಆರ್.ಎಸ್.ಸದಾನಂದ** (೦೨.೧೧.೨೦೦೪-೩೦.೦೪.೨೦೦೮) ಶಿಕ್ಷಕರಾಗಿ ನಿವೃತ್ತಿ ಹೊಂದಿದ ಇವರು ಹಳ್ಳಿ ಹಳ್ಳಿಗಳಲ್ಲಿ, ಮನೆ ಮನೆಗಳಲ್ಲಿ ಪ್ರತಿ ಮಂಗಳವಾರ ಕಾರ್ಯಕ್ರಮ ನಡೆಸಿದರು. ಹೋಬಳಿ ಘಟಕ ಸ್ಥಾಪನೆ, ತಾಲೂಕು ಸಾಹಿತ್ಯ ಸಮ್ಮೇಳನ, ಹೋಬಳಿ ಸಾಹಿತ್ಯ ಸಮ್ಮೇಳನ, ನಡೆಸಿದುದಲ್ಲದೇ ಜಿಲ್ಲಾ ಮಹಿಳಾ ಸಮ್ಮೇಳನ, ಗಡಿನಾಡ ಜಾಗೃತಿ ಜಾಥಾ ಸಮ್ಮೇಳನ ನಡೆಸಿದರು.

**ಪ್ರೊ.ಡಿ.ಚಂದ್ರಪ್ಪ** (೨೭.೦೮.೨೦೦೮-೨೦೧೨) ಇವರ ಅವಧಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಭವನಕ್ಕೆ ಶಂಕುಸ್ಥಾಪನೆಯಾಯಿತು. ಅನೇಕ ತಾಲೂಕು, ಹೋಬಳಿ, ಜಿಲ್ಲಾ ಸಮ್ಮೇಳನ ಹಾಗೂ ದತ್ತಿ ಉಪನ್ಯಾಸ ಕಾರ್ಯಕ್ರಮಗಳು ನಡೆದವು. ಜಿಲ್ಲಾ ಸಾಹಿತ್ಯ ಕೃತಿಗಳು ಪ್ರಕಟವಾಗಿವೆ. ೨೦೧೨ ರಿಂದ ೨೮-೦೨-೨೦೧೬ರವರೆಗೆ ಡಾ.ಸೋ.ಮು.ಭಾಸ್ಕರಾಚಾರ್ ಅವರು ಪರಿಷತ್ತಿನ ಅಧ್ಯಕ್ಷರಾಗಿದ್ದರು. ೦೧-೦೩-೨೦೧೬ ರಿಂದ ಬಾ.ಹ. ರಮಾಕುಮಾರಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದು ೧೩ನೇ ಅಧ್ಯಕ್ಷರಾಗಿರುತ್ತಾರೆ. ಎಲ್ಲಾ ತಾಲೂಕುಗಳೂ ತಾಲೂಕು ಘಟಕವನ್ನು ಹೊಂದಿವೆ. ಅನೇಕ ಹೋಬಳಿ ಘಟಕಗಳೂ ಪ್ರಾರಂಭವಾಗಿದ್ದು, ಕ್ರಿಯಾಶೀಲವಾಗಿವೆ. ಜಿಲ್ಲಾ ಹಾಗೂ ತಾಲೂಕು ಸಮ್ಮೇಳನಗಳು ನಡೆದಿವೆ.

## ಕರ್ನಾಟಕ ಲೇಖಕಿಯರ ಸಂಘ, ತುಮಕೂರು ಜಿಲ್ಲಾ ಶಾಖೆ

ದಿನಾಂಕ ೨೨.೦೧.೨.೧೯೮೫ರಂದು ಪ್ರಾರಂಭವಾದ ಈ ಸಂಘಕ್ಕೆ ಬಾ.ಹ.ರಮಾಕುಮಾರಿ ಸ್ಥಾಪಕ ಅಧ್ಯಕ್ಷರಾಗಿದ್ದು, ಹತ್ತು ವರ್ಷಗಳ ಕಾಲ ಇದನ್ನು ಕಟ್ಟಿ ಬೆಳೆಸಿದರು. ನಂತರ ಬಿ.ಸಿ.ಶೈಲಾ ನಾಗರಾಜ್, ಅನ್ನಪೂರ್ಣ ವೆಂಕಟನಂಜಪ್ಪ, ಎಂ.ಸಿ.ಲಲಿತಾ ಹಾಗೂ ಸಿ.ಎನ್.ಸುಗುಣಾದೇವಿ ಕ್ರಮವಾಗಿ ಅಧ್ಯಕ್ಷರಾಗಿ ಸಂಘವನ್ನು ಮುನ್ನಡೆಸಿದರು. ಸಾಹಿತ್ಯ ಶಿಬಿರ, ಕವಿಗೋಷ್ಠಿ, ವಿಚಾರ ಸಂಕಿರಣ, ಪುಸ್ತಕ ಬಿಡುಗಡೆ, ವಾರ್ಷಿಕೋತ್ಸವ, ಸಾಹಿತಿಗಳ ಶತಮಾನೋತ್ಸವ, ವಿವಾದಿತ ಕೃತಿಗಳ ಬಗ್ಗೆ ವಿಚಾರ ಸಂಕಿರಣ (ಕೆ.ಎಸ್. ಭಗವಾನರ ಬದಲಾವಣೆ, ಎಂ.ಎಂ.ಕಲ್ಬುರ್ಗಿ ಅವರ ಮಾರ್ಗ-೧) ೧೯೯೧ರಲ್ಲಿ ಪ್ರಥಮ ಜಿಲ್ಲಾ ಲೇಖಕಿಯರ ಸಮ್ಮೇಳನ ಕಮಲಾ ಹಂಪನಾ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ದ್ವಿತೀಯ ಸಮ್ಮೇಳನ ಎ.ಪಂಕಜ ಅವರ ಅಧ್ಯಕ್ಷತೆಯಲ್ಲಿ ಗುಬ್ಬಿಯಲ್ಲಿ ನಡೆಯಿತು. ಪಂಪನಿಂದ ಕುವೆಂಪು, ಕುವೆಂಪು ಚಿತ್ರಯಾತ್ರೆ, ಮಹಿಳಾ ಸಮ್ಮೇಳನ ಮುಂತಾದ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದೆ.

**ಜಿಲ್ಲಾ ಬರಹಗಾರರ ಸಂಘ:** 'ತುಮಕೂರು ವಾರ್ತೆ ಪತ್ರಿಕೆಯ ಸಂಪಾದಕರಾಗಿದ್ದ ಹೆಚ್.ಎಸ್.ರಾಮಣ್ಣನವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಬರಹಗಾರರ ಸಂಘ ಅಸ್ತಿತ್ವಕ್ಕೆ ಬಂದಿದ್ದು, ಅನೇಕ ಕಾರ್ಯಕ್ರಮ, ಸಾಹಿತ್ಯ ಸಂವಹನ, ಕಮ್ಮಟ ಮುಂತಾದವು ನಡೆದು ಕೆಲವು ವರ್ಷ ಕ್ರಿಯಾಶೀಲವಾಗಿದ್ದ ಸಂಘ ಈಗ ಸ್ಥಗಿತಗೊಂಡಿದೆ.

**ತುಮಕೂರು ವಿಶ್ವವಿದ್ಯಾನಿಲಯ ಕರ್ನಾಟಕ ಸಂಘ:** ತುಮಕೂರಿನಲ್ಲಿ ಸ್ನಾತಕೋತ್ತರ ಕೇಂದ್ರ ಪ್ರಾರಂಭವಾದಾಗ ಬರಗೂರು ರಾಮಚಂದ್ರಪ್ಪ, ರಾಜಪ್ಪ ದಳವಾಯಿ ಹಾಗೂ ಎಸ್.ಜಿ.ಸಿದ್ಧರಾಮಯ್ಯ ಮೊದಲಾದವರ ಪ್ರೋತ್ಸಾಹದಿಂದ ಕರ್ನಾಟಕ ಸಂಘ ರಚನೆಯಾಗಿ, ಅನೇಕ ಸಾಹಿತ್ಯಕ-ಸಾಂಸ್ಕೃತಿಕ ಕಾರ್ಯಕ್ರಮಗಳು ವಿದ್ಯಾರ್ಥಿಗಳಿಗೆ ಮಾತ್ರವಲ್ಲ ಸಾರ್ವಜನಿಕರಿಗೂ ಉಪಯುಕ್ತವಾಗುವಂತಿದ್ದವು.

**ಹುಳಿಯಾರು ಹೋಬಳಿ ಕನ್ನಡ ಸಾಹಿತ್ಯ ಪರಿಷತ್:** ೧೯೮೯ರಲ್ಲಿ ಹುಳಿಯಾರು ಹೋಬಳಿ ಕನ್ನಡ ಸಾಹಿತ್ಯ ಪರಿಷತ್ ಘಟಕ ಪ್ರಾರಂಭವಾಯಿತು. ಬೇರೆಡೆಗಿಂತ ಇಲ್ಲಿ ಸಾಹಿತ್ಯ ಚಟುವಟಿಕೆಗಳು ಹೆಚ್ಚಿನ ರೀತಿಯಲ್ಲಿ ನಡೆದು ಜನಪ್ರಿಯತೆ ಗಳಿಸಿತು. ಸುಮಾರು ೨೦೦ರ ಹತ್ತಿರ ಆಜೀವ ಸದಸ್ಯರಿರುವ ಘಟಕ. ೧೯೯೧ರಿಂದ ಮನೆಮನೆಗಳಲ್ಲಿ ಸಾಪ್ತಾಹಿಕ ಕನ್ನಡ ಕವಿ ಕಾವ್ಯಗೋಷ್ಠಿ, ೩೬೫ ವಾರಗಳ ನಿರಂತರ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದೆ. ಸ್ಥಾಪಕ ಅಧ್ಯಕ್ಷರಾದ ತ.ಶಿ.ಬಸವಮೂರ್ತಿಯವರ ನೇತೃತ್ವದಲ್ಲಿ ೨೦೧೧ರಿಂದ ಕನ್ನಡ ದಿನದರ್ಶಿನಿ ಕ್ಯಾಲಂಡರ್ ಹೊರತರುತ್ತಿದ್ದು ಅನೇಕ

ಮೌಲಿಕ ವಿಚಾರಗಳು, ಪ್ರಸಿದ್ಧ ಕವಿಗಳ ಕವಿತೆ, ವಿಚಾರ, ಕನ್ನಡ ಸಾಹಿತ್ಯ ಕ್ಷೇತ್ರದ ಎಲ್ಲಾ ವಿವರಗಳು, ಸಾಹಿತ್ಯದ ಕಿರು ನೋಟ, ಪ್ರಶಸ್ತಿ ವಿಜೇತರು, ಪ್ರಮುಖ ಸಾಹಿತ್ಯ ಕೃತಿಗಳು ಹೀಗೆ ನಾನಾ ಜ್ಞಾನಪ್ರದ ಅಂಶಗಳಿಂದ ಕೂಡಿದ್ದು ವಿದ್ಯಾರ್ಥಿಗಳ ಕೈಪಿಡಿಯೆನಿಸಿದೆ. ಕನ್ನಡ ಭವನ ನಿರ್ಮಿಸಲು ತನ್ನದೇ ಆದ ನಿವೇಶನವನ್ನು ಹೊಂದಿದೆ. ಹೋಬಳಿ ಮಟ್ಟದ ಕನ್ನಡ ಸಾಹಿತ್ಯ ಪರಿಷತ್ತು ತನ್ನ ಸಾಧನೆಯಿಂದ ಇತರ ಹೋಬಳಿಗಳಿಗೆ ಮಾದರಿಯಾಗಿದೆ. ಅದೇ ರೀತಿ ಅನೇಕ ಕನ್ನಡ ಪರ ಸಂಘಟನೆಗಳು, ಸಾಹಿತ್ಯಕ ಸಾಂಸ್ಕೃತಿಕ ವೇದಿಕೆಗಳು, ಪುಸ್ತಕ ಪ್ರಕಾಶನ ಸಂಸ್ಥೆಗಳೇ ಮುಂತಾದ ಸಂಘಟನೆಗಳು ಜಿಲ್ಲೆಯಲ್ಲಿ ಕಾರ್ಯನಿರತವಾಗಿವೆ.

## ಮಹಿಳಾ ಸಾಹಿತ್ಯ

ಮಹಿಳಾ ಸಾಹಿತ್ಯದ ದೃಷ್ಟಿಯಿಂದಲೂ ಜಿಲ್ಲೆಯು ಸಮೃದ್ಧವಾಗಿದ್ದು ಜಿಲ್ಲೆಯಲ್ಲಿ ಸಾಕಷ್ಟು ಮಹಿಳಾ ಸಾಹಿತಿಗಳಿದ್ದು ಕಥೆ, ಕಾದಂಬರಿ, ಕಾವ್ಯ, ಕವನ, ನಾಟಕ, ಜಾನಪದ, ವೈಚಾರಿಕ ಸಾಹಿತ್ಯ ಮುಂತಾದ ಕ್ಷೇತ್ರಗಳಿಗೆ ತಮ್ಮದೇ ಆದ ಕೊಡುಗೆ ನೀಡಿದ್ದು, ಈ ಹಿನ್ನೆಲೆಯಲ್ಲಿ ಜಿಲ್ಲೆಯ ಮಹಿಳಾ ಸಾಹಿತ್ಯ ಲೋಕವನ್ನಿಲ್ಲಿ ಪರಿಚಯಿಸಲಾಗಿದೆ.

**ತಿರುಮಲೆ ರಾಜಮ್ಮ:** ತಿರುಮಲೆ ತಾತಾಚಾರ್ಯರ ಪತ್ನಿಯಾದ ಇವರು 'ಭಾರತಿ' ಎಂಬ ಕಾವ್ಯನಾಮದಿಂದ ತಪಸ್ವಿನಿ, ಮಹಾಸತಿ, ವಾತ್ಸಲ್ಯ (ಕಾವ್ಯ ನಾಟಕಗಳು), ರಾಷ್ಟ್ರಭಕ್ತಿ, ರಾಷ್ಟ್ರಶಕ್ತಿ, (ಗೀತ ಸಂಗ್ರಹ) ಸ್ವರ್ಗ ನಿರಸನ, ದುಂಧುಬಿ (ಕಿರುನಾಟಕಗಳು) ರಚಿಸಿದ್ದಾರೆ. ೧೯೬೦ರಲ್ಲಿ ಇವರಿಗೆ ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಲಭಿಸಿದೆ. ಇವರ ೧೪ ಕೃತಿಗಳು ಪ್ರಕಟವಾಗಿದೆ. **ಸುಲೋಚನಾದೇವಿ ಆರಾಧ್ಯ:** ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಆರ್.ಎಸ್.ಆರಾಧ್ಯರ ಪತ್ನಿಯಾದ ಇವರು ಜ್ಯೋತಿಪಥ, ಓಜಸ್ವಿನಿ, ಜಂಗಿನ ಮುರುಗಯ್ಯ, ಕೆಳದಿಯ ಕಳಸ, ಕಿಂಕರ ಕಿರಣ, ಮಹಿಳೆ ಮತ್ತು ಧರ್ಮ ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಮಹಿಳಾ ರತ್ನ ಮತ್ತು ಸಾಹಿತ್ಯರತ್ನ ಎನ್ನುವ ಪ್ರಶಸ್ತಿಗಳು ಲಭಿಸಿವೆ.

**ಡಾ.ನಿರುಪಮಾ:** ಕೊರಟಗೆರೆ ತಾಲೂಕು ಹೊಳವನಹಳ್ಳಿಯವರಾದ ಇವರ ಮೂಲ ಹೆಸರು ಪದ್ಮ. ತಡವಾಗಿ ಬರವಣಿಗೆ ಪ್ರಾರಂಭಿಸಿದರೂ ಎಲ್ಲಿಯೂ ನಿಲ್ಲದಂತೆ ಇವರ ಲೇಖನಿ ಹರಿದು ನೂರಾರು ಕೃತಿಗಳು ಬಂದಿವೆ. ಪರಿತ್ಯಕ್ತೆ, ಅಮೃತಕಲಶ, ಭುವನ ವಿಜಯ, ರಾಗರಾಗಿಣಿ, ಮಿಡಿತ-ಸಿಡಿತ, ವೈಶಾಲಿಯ ನಗರ ವಧು, ಪುನರ್ಮಿಲನ, ಮುಂತಾದ ಕಾದಂಬರಿಗಳು, ತುಂಗಭದ್ರೆಯ ಮಡಿಲಲ್ಲಿ, ಬಾವುಟ ಅತ್ತಿತು, ಕೆರೆ, ಅಸ್ತ್ರ ಮುಂತಾದ ಕಥಾಸಂಕಲನ, ಭಾರತೀಯ ನಾರಿ ನಡೆದು ಬಂದ ದಾರಿ, ತೆಲುಗು ಸಾಹಿತ್ಯ ಸಮೀಕ್ಷೆ, ಮಕ್ಕಳ ಸಾಹಿತ್ಯ ಸಮೀಕ್ಷೆ, ಮೊದಲಾದ ವಿಮರ್ಶಾ ಕೃತಿಗಳು, ನಾಟಕಗಳು, ಸಂಪಾದಿತ ಕೃತಿಗಳು, ಬಂಗಾಳಿಯಿಂದ, ತೆಲುಗಿನಿಂದ ಅನುವಾದಗೊಂಡ ಅನೇಕ ಕೃತಿಗಳು ಪ್ರಕಟವಾಗಿವೆ. ಹಲವಾರು ಸಂಘ-ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ್ದರು. ಶಾಂತಿನಿಕೇತನದಿಂದ ಗೌರವ ಡಾಕ್ಟರೇಟ್, ಕೆನಡಾದ ಮಾಂಟ್ರಿಯಲ್ ವಿಶ್ವವಿದ್ಯಾಲಯದಿಂದ ಫೆಲೋಷಿಪ್, ರಾಜ್ಯ, ರಾಷ್ಟ್ರಮಟ್ಟದಲ್ಲಿ ಗೌರವ ಸಮ್ಮಾನಗಳು ಸಂದಿವೆ. ತೆಲುಗಿನಲ್ಲಿಯೂ ಕೃತಿ ರಚಿಸಿದ್ದಾರೆ. ೨೦೦೬ರಲ್ಲಿ ತುಮಕೂರಿನಲ್ಲಿ ಜಿಲ್ಲಾ ಪ್ರಥಮ ಮಹಿಳಾ ಸಮ್ಮೇಳನದ ಅಧ್ಯಕ್ಷರಾಗಿದ್ದರು.

**ಟಿ.ಸುನಂದಮ್ಮ:** ಪ್ರಸಿದ್ಧ ಹಾಸ್ಯ ಸಾಹಿತಿಗಳಾದ ಸುನಂದಮ್ಮನವರು ಜಂಭದ ಚೀಲ, ಪೆಪ್ಪರ್ಮೆಂಟ್, ಬಣ್ಣದ ಚಿಟ್ಟೆ, ಮುಂತಾದ ಹಾಸ್ಯ ಕೃತಿಗಳನ್ನೂ ಚಕ್ರದುಕ್ಕೆ, ಬಾದರಾಯಣ ಎಂಬ ನಗೆ ನಾಟಕಗಳನ್ನೂ ರಚಿಸಿದ್ದಾರೆ.

**ವಿಶಾಲಾಕ್ಷಿ ಲಕ್ಷ್ಮಣಗೌಡ:** 'ವಿನುತ ಎಂಬ ಕಾವ್ಯನಾಮದಿಂದ ಸುಪರಿಚಿತರಾದ ಇವರು ಗುಬ್ಬಿಯ ಫೌಜುದಾರ್ ಬೋರೇಗೌಡರ ಮನೆತನದವರು. ಚಿರಸ್ಮೃತಿ, ಕೈಕೇಯಿ, ಶಾಪದ ಮಗು, ಮುದುಕರು, ಶಾಕುಂತಲಾ (ಗೀತ ರೂಪಕ) ಬೆಳಕಿನೆಡೆಗೆ, ಅಕ್ಕಮಹಾದೇವಿ ಮುಂತಾದ ಕಿರು ಕೃತಿಗಳನ್ನು ರಚಿಸಿದ್ದಾರೆ.

**ಜಗ್ಗು ಪ್ರಿಯದರ್ಶಿನಿ:** ಶಿಕ್ಷಕಿಯಾಗಿದ್ದ ಇವರು 'ಲಂಬಾಣಿ ಲಕ್ಕಿ ಎಂಬ ಕಾದಂಬರಿ ರಚಿಸಿದ್ದು ಅದು ಚಲನಚಿತ್ರವಾಗಿದೆ. ಮಕ್ಕಳಿಗೆ ಮಧು, ನಾಗಸಾಕಿ, ಕಂದಕ ಕಾಮಧೇನು, ಅಂತರಂಗದ ಅಲೆ, ಕಥಾ ಕುಸುಮಾಂಜಲಿ ಮುಂತಾದವುಗಳನ್ನು ರಚಿಸಿದ್ದಾರೆ. ಪರಿವರ್ತನ ಎಂಬ ಮಕ್ಕಳ ನಾಟಕವನ್ನು ಬರೆದಿರುವ ಇವರಿಗೆ ಉತ್ತಮ ಶಿಕ್ಷಕ ಪ್ರಶಸ್ತಿ ಲಭಿಸಿದೆ. ಮಕ್ಕಳ ಸಾಹಿತ್ಯಕ್ಕೆ ಕಾವ್ಯಾನಂದ ಪುರಸ್ಕಾರ, ೧೯೯೨ರಲ್ಲಿ ಶಿಕ್ಷಣ ಇಲಾಖೆ ರಾಜ್ಯ ಪ್ರಶಸ್ತಿ ನೀಡಿದೆ.

**ಛಾಯಾದೇವಿ ನಂಜಪ್ಪ** : ತುಮಕೂರು ಜಿಲ್ಲೆ ಹೊನಸಿಗೆರೆಯಲ್ಲಿ ಜನಿಸಿದ ಇವರು ಹರುಷದ ಹೊನಲು, ಮಾತೃವಾತ್ಸಲ್ಯ, ಸಂಗಮ, ಆಸೆಯ ಅಲೆಗಳು, ಗೂಡು ಸೇರಿದ ಹಕ್ಕಿ, ಹೊಸಹೆಜ್ಜೆ, ಕೊನೆಯ ಭೇಟಿ ಮುಂತಾದ ಹಲವಾರು ಕಾದಂಬರಿಗಳನ್ನು ರಚಿಸಿದ್ದಾರೆ.

**ಡಾ.ಕಮಲಾ ಹಂಪನಾ:** ತುಮಕೂರು ಜಿಲ್ಲೆ ಕ್ಯಾತ್ಸಂದ್ರದ ಸಿ.ಎಸ್.ಕಮಲಮ್ಮ ಸಾಹಿತ್ಯ, ಶಿಕ್ಷಣ ಕ್ಷೇತ್ರಗಳಲ್ಲಿ ಉನ್ನತ ಸ್ಥಾನಗಳನ್ನು ಅಲಂಕರಿಸಿ ಕಾರ್ಯನಿರ್ವಹಿಸಿದ್ದಾರೆ. ಕಥೆ,ಕಾವ್ಯ,ನಾಟಕ,ಸಂಶೋಧನೆ,ಸಂಪಾದನೆ, ವಿಮರ್ಶೆ ಮುಂತಾದ ಕ್ಷೇತ್ರಗಳಲ್ಲಿ ಕೃಷಿ ಮಾಡಿದ್ದು, 'ತುರಂಗ ಭಾರತ– ಒಂದು ಅಧ್ಯಯನ' ಇವರ ಸಂಶೋಧನಾ ಪ್ರಬಂಧ, ಹಲವಾರು ಕೃತಿಗಳನ್ನು ರಚಿಸಿರುವ ಇವರಿಗೆ ಅಭಿನಂದನಾ ಗ್ರಂಥಗಳು, ೧೯೯೬ರ ರಾಜ್ಯೋತ್ಸವ ಪ್ರಶಸ್ತಿ, ದಾದ ಆಮ್ಟೆ ರಾಷ್ಟ್ರೀಯ ಪ್ರಶಸ್ತಿ, ದಾನ ಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ, ರಾಜ್ಯ ಸಾಹಿತ್ಯ ಅಕಾಡೆಮಿ ಸೇರಿದಂತೆ ಅನೇಕ ಪ್ರಶಸ್ತಿ, ಬಿರುದು, ಸಮ್ಮಾನಗಳು ಲಭ್ಯವಾಗಿವೆ. ಜಿಲ್ಲಾ ಲೇಖಕಿಯರ ಸಂಘ ನಡೆಸಿದ ಮೊದಲನೇ ಲೇಖಕಿಯರ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದರು. ಇವರನ್ನು ಹಾಗೂ ಇವರ ಸಾಹಿತ್ಯವನ್ನು ಕುರಿತೇ ಸಂಶೋಧನಾ ಪ್ರಬಂಧಗಳು ರಚಿತವಾಗಿವೆ. ಅನೇಕ ಪ್ರತಿಷ್ಠಿತ ಪ್ರಶಸ್ತಿಗಳು ಸಂದಿವೆ. ದೇಶ–ವಿದೇಶಗಳಲ್ಲಿ ಪ್ರವಾಸ ಮಾಡಿರುವುದಲ್ಲದೇ ಅಂತರಾಷ್ಟ್ರೀಯ ಸಾಹಿತ್ಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಮೂಡಬಿದ್ರೆ(೨೦೦೩)ಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿದ್ದರು.

**ಸರೋಜ ಅನಂತರಾಮಯ್ಯ:** ೧೯೫೫ರಲ್ಲಿ ಕೊನೆಯ ಭೇಟಿ ಎಂಬ ಕಾದಂಬರಿಯನ್ನು, ಮಕ್ಕಳಿಗಾಗಿ ದ್ರೋಣಾಚಾರ್ಯ ಎಂಬ ಕಿರುಕೃತಿಯನ್ನು ರಚಿಸಿದ್ದಾರೆ. ಕಾವ್ಯಗಾಯನ ಬೋಧಿನಿ ಎಂಬ ಗಮಕಕೃತಿ ಕೂಡ ಪ್ರಕಟವಾಗಿದೆ.

**ರಾಧಾಮೂರ್ತಿ:** ನಗ್ನ ಕುಂಚ, ಓದಿ ನಕ್ಕು ಬಿಟ್ಟೇರಿ ಮತ್ತು ಉಡುಗೊರೆ ಕೃತಿಗಳನ್ನು ರಚಿಸಿದ್ದಾರೆ.

**ಎ.ಪಂಕಜ:** ಮೂಲತಃ ಪಾವಗಡದ ಇವರು ಕಾದಂಬರಿ ಕ್ಷೇತ್ರದಲ್ಲಿ ಅಪಾರ ಕೃತಿ ರಚಿಸಿದ್ದಾರೆ. ಮಹಾಪುರುಷ, ಕೊಲ್ಲೂರು ಮೂಕಾಂಬಿಕೆ, ವೇದಾಂತ ದೇಶಿಕಾಚಾರ್ ಮೊದಲಾದವರ ಜೀವನ ಚರಿತ್ರೆ, ನಂದಾದೀಪ, ಮಕ್ಕಳ ಸಾಹಿತ್ಯ, ಮದುವೆ ಮತ್ತು ಸ್ತ್ರೀ ಎಂಬ ವಿಚಾರ ಸಾಹಿತ್ಯ, ಪ್ರಾಚೀನ ಕಥಾಸಾಗರ, ಆತ್ಮಕಥನ, ನೂರಾರು ಕಥೆ ಮುಂತಾದ ಸಣ್ಣ ಕಥಾ ಸಂಕಲನ; ನಾದಬಂಧ, ವಿಜಯಗೀತೆ, ಬಂಗಾರದ ಬಲೆ, ಕಾಗದದ ದೋಣಿ, ಅನುರಾಗ ಬಂಧನ, ಪ್ರೇಮಸಂಗಮ, ನೀಲಿಡೈರಿ, ನೀನಾ, ಒಲಿದ ಜೀವ ಮುಂತಾದ ಹಲವಾರು ಕಾದಂಬರಿಗಳು ಪ್ರಕಟವಾಗಿವೆ. ಕೇಂದ್ರ ಸಾಹಿತ್ಯ ಪ್ರಶಸ್ತಿ, ಗಳಗನಾಥ ಪ್ರಶಸ್ತಿ, ಬಿ.ಸರೋಜಾದೇವಿ ಪ್ರಶಸ್ತಿ, ಅತ್ತಿಮಬ್ಬೆ ಪ್ರತಿಷ್ಠಾನ ಪ್ರಶಸ್ತಿ ಮುಂತಾದ ಪ್ರಶಸ್ತಿಗಳು ಸಂದಿವೆ. ಗುಬ್ಬಿಯಲ್ಲಿ ನಡೆದ ಜಿಲ್ಲಾ ಲೇಖಕಿಯರ ಸಂಘದ ಲೇಖಕಿಯರ ಎರಡನೆಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

**ವೈ.ಕೆ.ಸಂಧ್ಯಾಶರ್ಮ**: ಕುಣಿಗಲ್ ತಾಲೂಕಿನ ಇವರು ವಾರ್ತಾ ಇಲಾಖೆಯಲ್ಲಿ ಹಿರಿಯ ಸಹಾಯಕ ನಿರ್ದೇಶಕರಾಗಿ ನಿವೃತ್ತಿ ಹೊಂದಿದ್ದಾರೆ. ಸಂಗೀತ, ನೃತ್ಯ, ಸಾಹಿತ್ಯ, ಕಲಾವಿದೆ ಹೀಗೆ ಬಹುಮುಖ ಪ್ರತಿಭೆಯುಳ್ಳ ಇವರು ಉರಿದುಹೋದ ಕನಸುಗಳು ಕವನ ಸಂಕಲನ ಸೇರಿದಂತೆ, ಕಥಾಸಂಕಲನ, ಕಾದಂಬರಿ, ವಿಚಾರಸಾಹಿತ್ಯ, ಜೀವನ ಚರಿತ್ರೆ, ನಾಟಕ ಮುಂತಾದ ಪ್ರಾಕಾರದಲ್ಲಿ ಹಲವಾರು ಕೃತಿ ರಚಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತು, ಲೇಖಕಿಯರ ಪರಿಷತ್ತುಗಳಿಂದ ಪ್ರಶಸ್ತಿ ಗೌರವ ಸಂದಿವೆ, ಸರ್.ಎಂ.ವಿ.ಪ್ರಶಸ್ತಿ, ಕೆಂಪೇಗೌಡ ಪ್ರಶಸ್ತಿ, ಅತ್ತಿಮಬ್ಬೆ, ಗೊರೂರು ಸಾಹಿತ್ಯ ಪ್ರಶಸ್ತಿ,ಮುಂತಾದ ಪ್ರಶಸ್ತಿ ದೊರಕಿವೆ.

**ಪಾರ್ವತಿ ಕೃಷ್ಣಮೂರ್ತಿ**: ಹಾಸನದಲ್ಲಿ ನೆಲೆಸಿರುವ ಇವರು ಖ್ಯಾತ ಪತ್ರಕರ್ತ ಕೃ.ನ.ಮೂರ್ತಿಯವರ ಪತ್ನಿ. ಹ್ಯಾಮ್ಲೆಟ್, ಸೆಳೆವಿನ ಸುಳಿ ಮೂವರ ಕಥೆಗಳು ಬಿಡುಗಡೆಯ ಬಂಧನ, ಗೃಹದೇವಿ, ಭಾವನಾ ಮುಂತಾದ ಕಿರುಕೃತಿಗಳನ್ನು ರಚಿಸಿದ್ದಾರೆ.

**ಶಾಂತಾ ಸನ್ಮತಿಕುಮಾರ್**: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರಾದ ಇವರು ಕರ್ಮಪ್ರಕೃತಿ, ಛಹಡಾಲ (ಅನುವಾದಿತ) ಕೃತಿಗಳನ್ನು ರಚಿಸಿದ್ದಾರೆ. ಕರ್ಮಪ್ರಕೃತಿಗೆ ೧೯೮೫ರ ದೇವೇಂದ್ರ ಕೀರ್ತಿ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ. ವರದಕ್ಷಿಣೆ, ಮಡಿಲಕ್ಕಿ, ಅರ್ಘಪೂರ್ಣ ಅಷ್ಟವಿಧಾರ್ಚನೆ ಮುಂತಾದವುಗಳನ್ನು ಬರೆದಿದ್ದಾರೆ. ಜೈನಗೀತೆ, ಧರ್ಮಧ್ಯಾನ ಮುಂತಾದ ಸಿ.ಡಿ. ಹೊರತಂದಿರುವರು. ೧೯೮೮ರಲ್ಲಿ ಸಮಾಜ ಸೇವಾಪ್ರಶಸ್ತಿ ೨೦೦೦ರಲ್ಲಿ ಶ್ರೀ ಗೋಮಟೇಶ್ವರ ವಿದ್ಯಾಪೀಠ ಪ್ರಶಸ್ತಿ, ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ಜೈನಕೋವಿದ, ಬ್ರಾಹ್ಮಿ ಸುಂದರಿನ್ಯಾಸ್, ಮಹಿಳಾ

ಚೇತನ, ಜನವಾಣಿ ಮುಂತಾದ ಪ್ರಶಸ್ತಿಗಳು ಲಭಿಸಿವೆ. ರಾಜ್ಯ ಸರ್ಕಾರದ ವಿವಿಧ ಮಂಡಳಿ, ಸಮಿತಿಗಳಲ್ಲಿ ಸದಸ್ಯರಾಗಿ ಸೇವೆ ಸಲ್ಲಿಸಿರುತ್ತಾರೆ. ಅತ್ತಿಮಬ್ಬೆ ವಿದ್ಯಾಮಂದಿರದ ಸ್ಥಾಪಕರು.

**ಈಚನೂರು ಜಯಲಕ್ಷ್ಮಿ**: ಈಚನೂರಿನವರಾದ ಇವರು ಖ್ಯಾತ ಕಾದಂಬರಿಗಾರ್ತಿ, ಪ್ರೇಮಬಂಧನ, ಕನಸುಗಳು, ಮೋಡದಮನೆ, ಹಿಮದಬೊಂಬೆ, ನಾಂದಿ, ಆಗಂತುಕರು, ಅಂತರ್ಗೀತ, ಕಡಲಿನ ಒಡಲು, ಅಗ್ನಿರೇಖೆ ಮುಂತಾದ ಕಾದಂಬರಿಗಳೂ, ನಂಬಿಕೆ, ಒಳಗೂ ಹೊರಗೂ, ಒಮ್ಮೊಮ್ಮೆ ಮುಂತಾದ ಕಥಾಸಂಕಲನಗಳನ್ನು ಹೊರತಂದಿದ್ದಾರೆ.

**ಈಚನೂರು ಶಾಂತ**: ಬೆಂಗಳೂರಿನ ಸರ್ಕಾರಿ ವಿಜ್ಞಾನ ಕಾಲೇಜಿನಲ್ಲಿ ಗ್ರಂಥಾಲಯಾಧಿಕಾರಿಯಾಗಿ ನಿವೃತ್ತರಾಗಿರುತ್ತಾರೆ. ಅಲೆಗಳು, ಹೆಜ್ಜೆಗಳು, ಗೋಡೆಗಳ ನಡುವೆ, ಧ್ವನಿಗಳು, ಮುಖವಾಡ, ಸಂಪನ್ನರು, ಜೇಡರಬಲೆ, ಗೆಲುವು ಮುಂತಾದ ಕಾದಂಬರಿಗಳು, ಅಪರಿಚಿತ ಮುಂತಾದ ಕಥಾಸಂಕಲನಗಳೂ ಪ್ರಕಟವಾಗಿವೆ. ಹಲವಾರು ನವಸಾಕ್ಷರ ಸಾಹಿತ್ಯ ರಚಿಸಿದ್ದಾರೆ.

**ಸಾಯಿಸುತೆ**: ಜನಪ್ರಿಯ ಕಾದಂಬರಿಗಾರ್ತಿಯಾದ ಇವರು ಈಗ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಬಾಡದ ಹೂ, ಗಂಧರ್ವಗಿರಿ, ಶ್ವೇತಗುಲಾಬಿ, ಮಿಂಚು, ಅಪೂರ್ವಮೈತ್ರಿ ಮೊದಲಾದ ಒಟ್ಟು ೧೨೦ ಕಾದಂಬರಿಗಳು ಪ್ರಕಟವಾಗಿವೆ. ಇವರಿಗೆ ೧೬ಕ್ಕೂ ಹೆಚ್ಚಿನ ಪ್ರಶಸ್ತಿಗಳು ಬಂದಿವೆ. ಇವರ ಹಲವಾರು ಕಾದಂಬರಿಗಳು ಚಲನಚಿತ್ರಗಳಾಗಿವೆ.

**ಕಮಲಾ ಸಂಪಳ್ಳಿ:** ಮೂರನೇ ಕೃಷ್ಣ, ವೀರ ಬಂಕೆಯ, ಬೆಂಗಳೂರು ಉತ್ತರ ಎನ್ನುವ ಕಿರು ಪುಸ್ತಕಗಳನ್ನು ಬರೆದಿದ್ದಾರೆ. ೧೯೮೭ರಲ್ಲಿ ಇವರಿಗೆ ಕರ್ನಾಟಕ ರಾಜ್ಯ ಶಿಕ್ಷಕ ಪ್ರಶಸ್ತಿ ದೊರೆತಿದೆ.

**ಕಲಾಶ್ರೀ:** ಜಿ.ಸಿ.ಭ್ರಮರಾಂಭ ಹೆಸರಿನ ಇವರು ಶಿಕ್ಷಕರಾಗಿ ನಿವೃತ್ತರಾಗಿದ್ದು ನಿವೇದನೆ ಲೇಖನ ಸಂಕಲನ, ಒತ್ತೆ ಇಟ್ಟ ಮಾನ, ಬೆಳಗು ಮೂಡಿದಾಗ, ಬಂತೋ ಬಂತು ಯುಗಾದಿ, ಮಧುರ ಪ್ರೇಮ ಮುಂತಾದ ಕೃತಿಗಳನ್ನು ಹಾಗೂ ಒಂದು ಪ್ರವಾಸ ಕೃತಿಯನ್ನು ರಚಿಸಿದ್ದಾರೆ.

**ತಾ.ಸ.ಪುಷ್ಪ:** ಶಿರಾ ತಾಲೂಕು ತಾವರೆಕೆರೆಯ ಇವರು ವೃತ್ತಿಯಲ್ಲಿ ಶಿಕ್ಷಕರಾಗಿದ್ದು, ಪ್ರೇಮತ್ಯಾಗ, ನಿಡುಗಲ್ ವೈಭವ, ಪ್ರೇಮಬಂಧಿ ಕಾದಂಬರಿಗಳನ್ನು, ಕೇಳು ಮಗು, ಸಿರಿಸಂಪದ ಎಂಬ ಐತಿಹಾಸಿಕ ಕಥಾಸಂಕಲನವನ್ನೂ ಪ್ರಕಟಿಸಿದ್ದಾರೆ. ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ಉತ್ತಮ ಶಿಕ್ಷಕ ಪ್ರಶಸ್ತಿ ಮುಂತಾದವಕ್ಕೆ ಇವರು ಭಾಜನರಾಗಿದ್ದಾರೆ.

**ಬಾ.ಹ.ರಮಾಕುಮಾರಿ:** ಜಿಲ್ಲಾ ಲೇಖಕಿಯರ ಸಂಘದ ಸ್ಥಾಪಕ ಅಧ್ಯಕ್ಷರಾಗಿ, ಸಾಕ್ಷರತಾ ಆಂದೋಲನದ ವಿವಿಧ ಹುದ್ದೆಗಳನ್ನು ನಿರ್ವಹಿಸಿ 'ಅಕ್ಷರ ಹೊಂಬಾಳೆ' ಪತ್ರಿಕೆಯ ಸಂಪಾದಕಿಯಾಗಿ, ವರದಕ್ಷಿಣೆ ವಿರೋಧಿ ವೇದಿಕೆ, ಸಮತಾ ಮಹಿಳಾ ಸಂಘಟನೆ, ಸಾಹಿತ್ಯ ಪರಿಷತ್, ವಿಶ್ವ ಮಹಿಳಾ ದಿನಾಚರಣೆ ಸಮಿತಿ, ಸಹಕಾರ ಸಂಘಗಳಲ್ಲಿ ನಿರ್ದೇಶಕರಾಗಿ, ಗೋಕಾಕ್ ಚಳವಳಿ, ಕಾವೇರಿ ನೀರಿನ ಚಳವಳಿಗಳಲ್ಲಿ ಸಕ್ರಿಯ ಪಾತ್ರವಹಿಸಿರುವರು. ಇವರು ಮೂಲತಃ ಕಂದಾಯ ಇಲಾಖೆ ಹಾಗೂ ಗ್ಯಾಸೆಟಿಯರ್ ಇಲಾಖೆಯಲ್ಲಿ ಅನ್ವೇಷಕರಾಗಿ ಕರ್ತವ್ಯ ನಿರ್ವಹಿಸಿರುತ್ತಾರೆ. ಅನಾವರಣ, ಕಳೆದುಹೋಗಿದ್ದಾನೆ, ಅನಾಮಿಕ ಹಕ್ಕಿಯ ಸ್ವಗತ, ನಕ್ಕಾವು ಚುಕ್ಕಿ ಕವನ ಸಂಕಲನಗಳು; ಅಕ್ಕಮಹಾದೇವಿ, ಧಗಧಗಿಸುವ ಆತ್ಮಗಳು, ಕನಸಿನಾಳದ ಕಣ್ಣು, ಮಹಿಳೆಯರ ಸ್ಥಾನಮಾನ ಮತ್ತು ಸಂಘಟನೆ ಇವರ ಲೇಖನ ಸಂಕಲನಗಳು, ಅಕ್ಕಮಹಾದೇವಿ, ಹೀಗೊಂದು ಪ್ರೇಮದ ಕಥೆ, ಕಥಾಸಂಕಲನ, ಹಲವಾರು ನವಸಾಕ್ಷರರ ಸಾಹಿತ್ಯ ಪುಸ್ತಿಕೆಗಳು ಪ್ರಕಟವಾಗಿವೆ. ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ರಾಕ್ ಲೈನ್ ಪ್ರಶಸ್ತಿ, ರೋಟರಿ ಪ್ರಶಸ್ತಿ, ಗೀತಾ ದೇಸಾಯಿ ದತ್ತಿ ಬಹುಮಾನ, ಗೊರೂರು ಸಾಹಿತ್ಯ ಪ್ರಶಸ್ತಿ ಮುಂತಾದ ಪ್ರಶಸ್ತಿಗಳು ಇವರಿಗೆ ಸಂದಿವೆ.

**ಶೈಲಾ ನಾಗರಾಜ್**: ಜಿಲ್ಲಾ ಲೇಖಕಿಯರ ಸಂಘದ ಅಧ್ಯಕ್ಷೆಯಾಗಿದ್ದರು. ಕನಸುಗಳ ದಾಟಿದವರು, ಮಾನವಿ, ಬಯಲು ಮತ್ತು ಏಕಾಂತ ಕವನ ಸಂಕಲನಗಳನ್ನೂ, ಗ್ರಾಮೀಣ ಮಹಿಳಾ ಲೋಕ, ಡಾ.ನಿರುಪಮಾ, ಮಾರ್ಟಿನ್ ಲೂಥರ್ ಕಿಂಗ್, ಅಲ್ಲಮ, ಸಿದ್ಧರಾಮನ ಕಾಯಕತತ್ವ, ಅಕ್ಕಮಹಾದೇವಿ ಮತ್ತು ಸ್ತ್ರೀವಾದ ಎಂಬ ಕಿರು ಕೃತಿಗಳನ್ನು ರಚಿಸಿದ್ದಾರೆ. ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ಅಮ್ಮ ಪ್ರಶಸ್ತಿ ಮುಂತಾದವು ಲಭಿಸಿವೆ. ಮಹಿಳಾ ಅಧ್ಯಯನ ಕೇಂದ್ರ ಹಾಗೂ ಶೈನಾ ಪತ್ರಿಕೆಯ ರೂವಾರಿ ಇವರು.

**ಜಲಜಾ ಜೈನ್:** ಶಿಕ್ಷಕಿಯಾಗಿರುವ ಇವರು ಶ್ರಾವಕರ ಶತ್ತ್ರಿಯಗಾಥ ಸಂಕ್ಷಿಪ್ತ ಪರಿಚಯ ಎನ್ನುವ ಕೃತಿ ಪ್ರಕಟಿಸಿದ್ದಾರೆ. ಧವಳ ಷಟ್ಖಂಡಾಗಮ, ಜಯಧವಳ, ಮಹಾಧವಳ ಮುಂತಾದವುಗಳನ್ನು ಅನುವಾದಿಸಿದ್ದಾರೆ. ಅನೇಕ ಪ್ರಶಸ್ತಿ ಸನ್ಮಾನಗಳೂ ಸಂದಿವೆ.

**ಲಲಿತ ಸಿದ್ದಬಸವಯ್ಯ:** ಕೊರಟಗೆರೆಯ ಇವರು ಸಾಹಿತ್ಯವನ್ನು ಪ್ರವೃತ್ತಿಯನ್ನಾಗಿಸಿಕೊಂಡು ಜಿಲ್ಲೆಯ ಮಹತ್ವದ ಕವಯತ್ರಿ ಎಂಬ ಹೆಸರು ಪಡೆದಿರುವರು. ದೇಸೀ ನೆಲೆಯ ಇವರ ರಚನೆಗಳು ಜನಪ್ರಿಯತೆ ತಂದುಕೊಟ್ಟಿವೆ. ಮೊದಲ ಸಿರಿ, ಇಹದ ಸ್ವರ, ಕೆಬ್ಬೆನೆಲ, ದಾರಿನೆಂಟ, ಬಿಡಿಹರಳು ಮುಂತಾದ ಕವನ ಸಂಕಲನ, ಛತ್ರಪತಿ ಹಾಸ್ಯ ಲೇಖನ ಕೃತಿ, ಸಭಾಪರ್ವ ನಾಟಕ ಪ್ರಕಟವಾಗಿವೆ. ಬಿ.ಎಂ.ಶ್ರೀ ಕಾವ್ಯಪ್ರಶಸ್ತಿ, ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪ್ರೊ.ಜಿ.ಎಸ್.ಶಿವರುದ್ರಪ್ಪ ಪ್ರಶಸ್ತಿ, ಕಾವ್ಯಾನಂದ ಪ್ರಶಸ್ತಿ ಗಳಿಸಿದ್ದು, ಕೆಬ್ಬೆನೆಲ ಕವನ ಸಂಕಲನ ಕರ್ನಾಟಕ ವಿಶ್ವವಿದ್ಯಾನಿಲಯದ ಕನ್ನಡ ಎಂ.ಎ. ತರಗತಿಗೆ ಪಠ್ಯಪುಸ್ತಕವಾಗಿದೆ.

**ಪ್ರೇಮಲೀಲ ಕೆ.ಆರ್:** ಕುಣಿಗಲ್ಲಿನ ಇವರು ಮೈಸೂರಿನಲ್ಲಿ ಪ್ರಾಧ್ಯಾಪಕರು. ಭಾವಯಾನ, ಕಾವ್ಯಾಂಬರ, ಕಾವ್ಯ ವಿನೋದ, ಪ್ರೇಮಾಂಜಲಿ, ಮಿಂಚುಗಳು ಕವನ ಸಂಕಲನ, ಪ್ರಬಂಧ ಬಂಧುರ, ಮುಂತಾದ ಕೃತಿಗಳು ಪ್ರಕಟವಾಗಿವೆ. ರತ್ನಮ್ಮ ದತ್ತಿ ಪ್ರಶಸ್ತಿ, ಸಂಕ್ರಮಣ ಸಾಹಿತ್ಯ ಪ್ರಶಸ್ತಿ ಮುಂತಾದ ಪ್ರಶಸ್ತಿಗಳು ಬಂದಿವೆ.

**ಎಂ.ಆರ್.ಭಗವತಿ:** ಇವರು 'ಏಕಾಂತದ ಮಳೆ', ಚಂಚಲ ನಕ್ಷತ್ರಗಳು ಎಂಬ ಕವನ ಸಂಕಲನಗಳನ್ನು ಹೊರತಂದಿದ್ದು, ಏಕಾಂತದ ಮಳೆಗೆ ಬಿ.ಎಂ.ಶ್ರೀ ಪ್ರಶಸ್ತಿ ಹಾಗೂ ಹರಿಹರಶ್ರೀ ಪ್ರಶಸ್ತಿ ದೊರಕಿದೆ.

**ನಾಗರತ್ನ ಚಂದ್ರಪ್ಪ:** ಕಥೆ, ಕವನ ಲೇಖನಗಳನ್ನು ಬರೆದಿರುವ ಇವರು ಜಂಗಮಜೋಳಿಗೆ, ಧೃತಿ ಎಂಬ ಕವನ ಸಂಕಲನ ಹಾಗೂ ದೀಪಾರತಿ, ಪರುಷ, ನಿರ್ವಯಲು, ಮರುಜವಣೆ ಎನ್ನುವ ಸಂಕಲನಗಳನ್ನು ಸಂಪಾದಿಸಿದ್ದಾರೆ.

**ಎಂ.ಸಿ.ಲಲಿತ:** ಕವಿಬಳಗದ ಅಧ್ಯಕ್ಷರಾದ ಇವರು ಮೊದಲ ಹೆಜ್ಜೆಗಳು (ಕಥಾ), 'ಗೋಗ್ರಹಣ'(ಕವನ) ಎನ್ನುವ ಕೃತಿಗಳನ್ನು ಸಂಪಾದಿಸಿದ್ದಾರೆ. ಲೇಖಕಿಯರ ಸಂಘದ ಮಾಜಿ ಅಧ್ಯಕ್ಷರು, ತುಮಕೂರು ನಗರ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು.

**ಪದ್ಮಾ ಕೃಷ್ಣಮೂರ್ತಿ:** ಮೂಲತಃ ಶಿವಮೊಗ್ಗ ಜಿಲ್ಲೆಯ ಇವರು ಅಂಚೆ ತಂತಿ ಇಲಾಖೆಯಲ್ಲಿ ಉದ್ಯೋಗಿಯಾಗಿದ್ದು ತುಮಕೂರಿನಲ್ಲಿ ನೆಲೆಸಿದ್ದಾರೆ. ಸಾಮಾಜಿಕ ಆಗುಹೋಗುಗಳಿಗೆ ಪತ್ರಗಳ ಮೂಲಕ ತೀಕ್ಷ್ಣ ಪ್ರತಿಕ್ರಿಯೆ ತೋರುವ ಇವರು ಹೂದೋಟ, (ಹನಿಗವನ ಸಂಕಲನ) ಪುಟ್ಟ ಪುಟ್ಟ ಹೆಜ್ಜೆಗಳು, (ಮಿನಿ ಕಥಾ ಸಂಕಲನ), ಮಕ್ಕಳ ಮನೆ, ಉಂಡಾಡಿ-ಗುಂಡ, (ಮಕ್ಕಳ ಸಾಹಿತ್ಯ), ಶಬ್ದ, ಅಂಚೆ ಒಂದು ಇಣುಕುನೋಟ, ನೂತನ ನುಡಿಗಟ್ಟುಗಳು, ಪೌಳಿ ಶಂಕರಾನಂದಪ್ಪ ಮುಂತಾದ ಕೃತಿಗಳನ್ನು ಪ್ರಕಟಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ ದತ್ತಿ ಬಹುಮಾನ, ಕರಾವಳಿ ಪ್ರಶಸ್ತಿ, ಹೆಜ್ಜೆಸ್ಕೆ ಕಾವ್ಯ ಪ್ರಶಸ್ತಿ, ತಾಲೂಕು ರಾಜ್ಯೋತ್ಸವ ಪ್ರಶಸ್ತಿ, ಚುಟುಕು ಕವಿಶ್ರೀ, ಸಾಹಿತ್ಯ ರತ್ನ ಮುಂತಾದ ಅನೇಕ ಗೌರವಗಳು ಸಂದಿವೆ.

**ಕಮಲ ನರಸಿಂಹ:** ಮಧುಗಿರಿಯ ಟಿ.ವಿ.ವಿ ಶಿಕ್ಷಣ ವಿದ್ಯಾಲಯದಲ್ಲಿ ಪ್ರೊಫೆಸರ್ ಆಗಿರುವ ಇವರು ಬೋಧಿಸುವುದು ವಿಜ್ಞಾನವಾದರೂ ಕನ್ನಡ ಸಾಹಿತ್ಯದಲ್ಲಿ ಆಸಕ್ತಿ ಮೂಡಿಸಿಕೊಂಡು ಅನೇಕ ಕೃತಿಗಳನ್ನು ಪ್ರಕಟಿಸಿದ್ದಾರೆ. 'ಪು.ತಿ.ನ ನೂರರ ನೆನಪು, ಹೇಮಾವತಿಯ ಚೇತನ, ಇವರ ಸಂಪಾದಿತ ಕೃತಿಗಳು. ಬೆಲ್ಲದಮಡು, ಈ ನೆಲದ ಗಂಧ, ಕವನ ಸಂಕಲನಗಳು, ಹದ್ದು, ಭೂಗರ್ಭ, ಆಪೋಶನ, ಕಾದಂಬರಿಗಳು, ಷಡ್ಯಂತ್ರ ಕಥಾಸಂಕಲನ ಪ್ರಕಟವಾಗಿವೆ. ಕರ್ನಾಟಕ ಲೇಖಕಿಯರ ಸಂಘದ ತ್ರಿವೇಣಿ ಸಾಹಿತ್ಯ ಪುರಸ್ಕಾರ, ಕಾಸರಗೋಡು ಸಾಂಸ್ಕೃತಿಕ ವೇದಿಕೆ ಪುರಸ್ಕಾರ, ತ್ರಿವೇಣಿ ಸಾಹಿತ್ಯ ಪುರಸ್ಕಾರ, ಮುಂಬಯಿಯ ದಿ.ಸುಶೀಲಾ ಶೆಟ್ಟಿ ಕಾವ್ಯ ಪ್ರಶಸ್ತಿ ಮತ್ತು ಕಥಾಪ್ರಶಸ್ತಿ ದೊರಕಿದೆ. ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪಡೆದಿದ್ದಾರೆ.

**ವಿಜಯಾ ಮೋಹನ್**; ಮಧುಗಿರಿ ತಾಲೂಕಿನ ಸುದ್ದಗುಂಟೆಯವರು. ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ೨೦೦೯ರಲ್ಲಿ 'ತಬ್ಬಲಿ ಸಾರು ಮೊದಲ ಕಥಾ ಸಂಕಲನ ಪ್ರಕಟಿಸಿದ್ದು ಅನೇಕ ಕಥೆ, ಕವನ, ಲೇಖನ ಬರೆದಿದ್ದಾರೆ. ತ್ರಿವೇಣಿ ದತ್ತಿ ಬಹುಮಾನ, ಹಾಗೂ ತರಂಗ ಕಿರುಕಾದಂಬರಿ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದಿದ್ದಾರೆ (ನೀರು-೨೦೧೩).

**ಕೊಪ್ಪರಂ ಅನ್ನಪೂರ್ಣ ಸುಬ್ರಹ್ಮಣ್ಯಂ**: ಹಾಲಿ ಬೆಂಗಳೂರಿನಲ್ಲಿ ನೆಲೆಸಿದ್ದು ಅಂತರಂಗದ ತರಂಗ, ಭಕ್ತಿಸ್ತುತಿ, ಹೇಳು ಪುಟಾಣಿ ಕೇಳು ಪುಟಾಣಿ, ಜನಪ್ರಿಯ ಅಣಕುಹಾಡುಗಳು, ಶುಭಹಾರೈಕೆ ಮುಂತಾದ ಕೃತಿ ಪ್ರಕಟಿಸಿದ್ದಾರೆ. ಸೇವಾಶ್ರೇಷ್ಠ, ಸಾಹಿತ್ಯಪ್ರೇಮ, ವೈಶ್ಯಜ್ಯೋತಿ, ಗಂಧರ್ವ ಮುಂತಾದ ಪ್ರಶಸ್ತಿಗಳನ್ನು ಪಡೆದಿದ್ದಾರೆ.

**ಅನ್ನಪೂರ್ಣ ವೆಂಕಟನಂಜಪ್ಪ**; ಮೊದಲ ಹೆಜ್ಜೆ, ಸಮಾನತೆ, ನೆನೆವುದೆನ್ನ ಮನ, ಸಾವಿರ ಮಕ್ಕಳ ತಾಯಿ(ಸಂ) ಡಾ.ಬಿ.ವಿ.ಸುಬ್ಬರಾಯಪ್ಪ ಬದುಕು–ಬರಹ ಮುಂತಾದ ಕೃತಿಗಳು ಪ್ರಕಟವಾಗಿವೆ. ಲೇಖಕಿಯರ ಸಂಘದ ಮಾಜಿ ಅಧ್ಯಕ್ಷರು, ಅನೇಕ ಸಂಘ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ ಇವರಿಗೆ ಸರ್ಕಾರದಿಂದ ಕಿತ್ತೂರು ಚನ್ನಮ್ಮ ಪ್ರಶಸ್ತಿ, ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ಸಹಕಾರಿ ಪ್ರಶಸ್ತಿ ಮುಂತಾದವು ಲಭಿಸಿದೆ. ಸಹಕಾರಿ ಕ್ಷೇತ್ರದಲ್ಲಿಯೂ ಅಪಾರ ಪರಿಶ್ರಮ ಉಳ್ಳವರಾಗಿದ್ದಾರೆ.

**ಡಾ.ಗೀತಾ ವಸಂತ:** ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರು, ಹೊಸಿಲಾಚೆ ಹೊಸಹೆಜ್ಜೆ, ಕಾವ್ಯ, ಚೌಕಟ್ಟಿನಾಚೆಯವರು, (ಸಣ್ಣಕಥೆ) ಬೆಳಕಿನ ಬೀಜ, ಬೇಂದ್ರೆ ಕಾವ್ಯ–ಅವಧೂತ ಪ್ರಜ್ಞೆ, ಹೊಸದಿಗಂತ ಹೊಸದಾರಿ, (ವಿಮರ್ಶಾ ಕೃತಿಗಳು) ಇವರ 'ಸ್ವಾತಂತ್ರ್ಯೋತ್ತರ ಕಥನ ಸಾಹಿತ್ಯದಲ್ಲಿ ಸ್ತ್ರೀವಾದಿ ಚಿಂತನೆಗಳು' ಪಿಹೆಚ್.ಡಿ., ಪ್ರಬಂಧ ಪ್ರಕಟವಾಗಿವೆ. ಪಾಟೀಲ ಪುಟ್ಟಪ್ಪ ಕಥಾಪ್ರಶಸ್ತಿ, ರತ್ನಮ್ಮ ಹೆಗ್ಗಡೆ ಪ್ರಶಸ್ತಿ ಮುಂತಾದವು ಬಂದಿವೆ. ೨೦೧೩ರಲ್ಲಿ ತುಮಕೂರು ವಿಶ್ವವಿದ್ಯಾನಿಲಯ ಡಿ.ಲಿಟ್., ಪದವಿ ನೀಡಿದೆ.

**ವಿದ್ಯಾ ಅರಮನೆ**: ಶಿಕ್ಷಕಿಯಾಗಿರುವ ಇವರ ಮುಸ್ಸಂಜೆ ಪ್ರೇಮ ಪ್ರಸಂಗ ಮತ್ತು ಇತರೆ ಕಥೆಗಳು ಕಥಾಸಂಕಲನ ಪ್ರಕಟವಾಗಿವೆ.

**ಕಮಲಾ ಬಡ್ಡಿಹಳ್ಳಿ ಹೆಚ್**: ಶಿಕ್ಷಕಿಯಾಗಿರುವ ಇವರು ಸಾಹಿತ್ಯ ಸಂಘಟನೆ, ಮಕ್ಕಳ ಪ್ರತಿಭಾನ್ವೇಷಣೆ ಮುಂತಾದ ಕ್ಷೇತ್ರಗಳಲ್ಲಿ ಕ್ರಿಯಾಶೀಲರಾಗಿದ್ದಾರೆ. ನಾಡಕ್ಕ ಸಾಲುಮರದ ತಿಮ್ಮಕ್ಕ (ಜೀವನ ಕಥೆ), ಬೆಳಕು ಬಿತ್ತಿದ ಶರಣರು (ಪ್ರಬಂಧ), ಭೂಮಿಬಾನು, ನಾನುನೀನು (ಭಾವಗೀತೆಗಳು), ಐದು ಮಕ್ಕಳ ನಾಟಕಗಳು, ಕರುವಿನ ಕಿರುಗೆಜ್ಜೆ, ಹೂಬನದ ಚಿಟ್ಟೆಗಳೇ (ಮಕ್ಕಳ ಕವಿತೆಗಳು) ಹಾಗೂ ಸಂಪಿಗೆ ತಾಯವ್ವ ಮತ್ತು ಇತರ ಕತೆಗಳು ಎಂಬ ಕಥಾಸಂಕಲನ ಪ್ರಕಟಿಸಿದ್ದಾರೆ. ಹಲವಾರು ಬಹುಮಾನಗಳನ್ನು ಪಡೆದಿದ್ದಾರೆ.

**ರೇಖಾ ಹಿಮಾನಂದ್:** ಗುಬ್ಬಿ ತಾಲೂಕಿನ ಹರದಗೆರೆ ಗ್ರಾಮದ ಇವರು, ಮೈಸೂರು ವಿಶ್ವವಿದ್ಯಾಲಯದಲ್ಲಿ "ಗುಬ್ಬಿ ತಾಲೂಕಿನ ಸಾಂಸ್ಕೃತಿಕ ಅಧ್ಯಯನ" ಎಂಬ ವಿಷಯದಲ್ಲಿ ಸಂಶೋಧನೆ ಮಾಡುತ್ತಿದ್ದಾರೆ. ನಾಡಿನ ಅನೇಕ ಪತ್ರಿಕೆಗಳಲ್ಲಿ ಸಂಶೋಧನಾತ್ಮಕ ಲೇಖನಗಳು ಪ್ರಕಟವಾಗಿವೆ. ಅನೇಕ ಸಾಹಿತ್ಯಕ, ಸಾಂಸ್ಕೃತಿಕ ಸಂಘಟನೆಗಳಲ್ಲಿ ಕ್ರಿಯಾಶೀಲವಾಗಿ ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ಪ್ರಬಂಧ ಮಂಡಿಸಿದ್ದಾರೆ. 'ಸ್ತ್ರೀಸಂಪಥ ಸಂಪಾದಿತ ಕೃತಿ ಹೊರತಂದಿದ್ದಾರೆ.

**ಸತ್ಯವತಿ ಹರಿಕೃಷ್ಣನ್**: ತುಮಕೂರಿನ ಇವರು ಮಂಗಳೂರಿನಲ್ಲಿ ನೆಲೆಸಿದ್ದಾರೆ. ಸುಜ್ಞಾನ, ಹೊಡೀಬೇಡ ದಮ್ಮಯ್ಯ, ಎಲ್ಲ ಎಡವಟ್ಟು, ದಡ್ಡ ಹೆಂಡತಿ ಲೇಸು, ನನ್ನ ರುಚಿಕರ ತಲೆ, ಕೈಹಿಡಿದು ನಡೆಸೆನ್ನನು ಮುಂತಾದ ಕೃತಿಗಳು ಪ್ರಕಟವಾಗಿವೆ. ಅನೇಕ ಬಹುಮಾನ, ಪ್ರಶಸ್ತಿಗಳನ್ನು ಪಡೆದಿದ್ದಾರೆ.

**ಲೀಲಾ ಎನ್.ಎಸ್:** ಮಧುಗಿರಿಯ ಇವರು ಬೆಂಗಳೂರಿನ ಎಂಇಎಸ್ ಕಾಲೇಜಿನಲ್ಲಿ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಇನ್ಸುಲಿನ್ ಆತ್ಮಕತೆ, ಜೀವಜಗತ್ತಿನ ಕೌತುಕಗಳ ಮಾಲೆ, ಚಲನೆ, ಲಾಲನೆ–ಪಾಲನೆ, ಪ್ರೀತಿ–ಪ್ರಣಯ ಹುಟ್ಟು–ಸಾವು, ಜೈವಿಕ ತಂತ್ರಜ್ಞಾನ, ನೀರು, ಪ್ರಕೃತಿ–ವಿಕೃತಿ ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಸದೋಪಿತ ಪ್ರಶಸ್ತಿ, ಬಿಎಆರ್ಸಿ ಪ್ರಶಸ್ತಿ, ಅತ್ಯುತ್ತಮ ವಿಜ್ಞಾನ ಶಿಕ್ಷಕಿ ಪ್ರಶಸ್ತಿ ಮುಂತಾದ ಪ್ರಶಸ್ತಿಗಳನ್ನು ಪಡೆದಿರುವರು..

### ಜಿಲ್ಲೆಯ ಇತರ ಲೇಖಕಿಯರು

ಸಿ.ನಾಗಲಕ್ಷ್ಮಿ(ರಶ್ಮಿ), ರಂಗಮ್ಮ ಹೊದೆಕಲ್: ಒಳದನಿ; ಸುಮಾ ಪ್ರಸನ್ನಕುಮಾರ್; ಜೀವನ್ಮುಖಿ; ಎಸ್.ಸಂಧ್ಯಾ: ಕುರುಕ್ಷೇತ್ರದ ಕಮಲ, ಚಿನ್ನಿ ಶಾಲೆಗೆ ಸೇರಿದ್ದು, ಬೆಳಕಿನೆಡೆಗೆ; ತ್ರಿವೇಣಿ ಶಿವಕುಮಾರ್; ನಿಸರ್ಗ ಪ್ರಿಯರ ನಾಡುಗಳಲ್ಲಿ, ಹವಳದ್ವೀಪಗಳಲ್ಲಿ, ದಿವ್ಯ ಮೌನದ ದೇಶಗಳಲ್ಲಿ, ಮಿಣಮಿಣ ಚೀಣಾ, ಪ್ರತಿಸ್ಪಂದನ, ರತ್ನಮ್ಮ ಹೆಗಡೆ, ಸುಲೋಚನಾ ದೇವಿ

ಆರಾಧ್ಯ; ಸಿ.ಎ.ಶಾರದ; ಬಾನಚಂದಿರ ಕವನಸಂಕಲನ, ಕೆ.ಎಲ್.ಭಾರತಿ; ಚಿಗುರೆಲೆ (ಹನಿಗವನ); ಡಾ.ಲೀಲಾ ಸಂಪಿಗೆ; ಮೌನ ಸಹಗಮನ, ವೇಶ್ಯೆಯರು ಒಂದು ಆಧುನಿಕ ಬುಡಕಟ್ಟೇ; ಶಶಿಕಲಾ ಚಂದ್ರಶೇಖರ್ (ಅಮೆರಿಕಾ); ದೀಪವೂ ನಿನ್ನದೆ ಗಾಳಿಯೂ ನಿನ್ನದೆ (ಕಥಾ); ಹೆಚ್.ಎಂ.ಭಾನು; ಬೆಟ್ಟದಡಿಯಲ್ಲಿ; ಪ್ರಕೃತಿ (ಟಿ.ಎಸ್.ರುದ್ರಾಣಿ); ಹೂವರಾಶಿಯ ಹಾಸಿ, ಭಾವಸ್ಪಂದನ, ಕಡಲು ನಿನ್ನದು–ಹಡಗು ನಿನ್ನದು; ಕಮಲಾ ಮೂರ್ತಿ: ನಿರಾಜಿ, ಕಾದಂಬಿನಿ ತುಂಬೆಹೂ, ಕಿರುಗೆಜ್ಜೆ; ಐ.ಎಸ್.ಶಕುಂತಲಾ ಭಟ್; ಸಂಕ್ರಾಂತಿ. ಪವಿತ್ರ ಪ್ರಿಯಭಾಷಿಣಿ; ನಕ್ಷತ್ರಕ್ಕೆ ಪಾತಿ; ಪ್ರೇಮಲೀಲಾ ಕಲ್ಕೆರೆ; ಜೋಡಿದೀಪದ ನೆನಪು; ಪ್ರೇಮ ಮಲ್ಲಣ್ಣ; ಶರಣರ ಪ್ರತಿಮಾ ರೂಪಕಗಳು; ರೇಖಾ ಕುಂದಾರು: ಹಕ್ಕಿಹೆಜ್ಜೆ; ಸಿ.ಎನ್.ಸುಗುಣಾದೇವಿ: ಹೃದಯ ಸಂವಾದ; ತುಮಕೂರು ಭಾರ್ಗವಿ, ಮೊದಲಹೆಜ್ಜೆ; ಪಾರ್ವತಿ ರಾಜ್: ಒಲವೇ ಬದುಕು, ನೀತಿಕಥೆಗಳು, ಹಸಿರ ಸಿರಿ; ಆರ್.ಶಾಂತಾ ಕಂಪಾರಹಳ್ಳಿ; ಮೌನಕಡಲು; ಕು.ಕೃಪಾ; ವೀರಯೋಧ ಪೃಥ್ವಿರಾಜ್ ಚೌಹಾಣ್; ಸುಶೀಲಾ ಸದಾಶಿವಯ್ಯ: ಸಾಕಾರ, ಆರೋಗ್ಯಕ್ಕಾಗಿ ತೆಂಗು; ಡಾ॥ ಶಾಂತಲಕ್ಷ್ಮಿ ಕುಣಿಗಲ್: ಸಂಕೇತ, ಅಗ್ನಿಕುಂಡ; ಎಸ್.ಉಮಾದೇವಿ: ಮಣ್ಣು ಮರಬಳ್ಳಿ; ಶೈಲಜಾ ನಾಗರಘಟ್ಟ: ಕಿಚ್ಚಿಲ್ಲದ ಬೇಗೆ; ತುಮಕೂರು ಸರೋಜ: ರೂಪು ನಕ್ಕಿತು, ಬೇಕಾದ್ರೆ ನಗ್ರಿ, ಗಂಟುಮುಖಕ್ಕೆಂಟು ನಗೆ; ತುಮಕೂರು ಸುನಂದ: ವಿಜಯ ಹಾಲಪ್ಪನ್, ಮಾಯಸಂದ್ರ ಉಮಾಶರ್ಮ ತುಮಕೂರು, ಎಂ.ಎಸ್.ಸುಶೀಲಾ ಮುಂತಾದ ಮಹಿಳಾ ಲೇಖಕಿಯರು ಜಿಲ್ಲೆಯಲ್ಲಿದ್ದಾರೆ.

**ವಿಜ್ಞಾನ ಸಾಹಿತ್ಯ:** ಇತ್ತೀಚಿನ ದಿನಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನಗಳು ತಮ್ಮದೇ ಆದ ವಿಭಿನ್ನ ರೂಪಗಳಲ್ಲಿ ಬೆಳೆಯುತ್ತಿವೆ. ಜನರಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವ ದಿಕ್ಕಿನಲ್ಲಿ ಸಾಕಷ್ಟು ಸಾಹಿತ್ಯ ಸೃಷ್ಟಿಯಾಗುತ್ತಿದೆ. ಕರ್ನಾಟಕದಲ್ಲಿ ವಿಜ್ಞಾನದ ವಿಷಯಗಳನ್ನು ಕನ್ನಡ ಭಾಷೆಯಲ್ಲಿ ತಿಳಿಸಲು ೧೯೧೭ರಲ್ಲಿಯೇ ಬೆಳ್ಳಾವೆ ವೆಂಕಟನಾರಣಪ್ಪನವರು "ವಿಜ್ಞಾನ ಪ್ರಚಾರ ಸಮಿತಿಯನ್ನು ಪ್ರಾರಂಭಿಸಿದ್ದರು. ಇವರು ಸೆಂಟ್ರಲ್ ಕಾಲೇಜಿನಲ್ಲಿ ಭೌತಶಾಸ್ತ್ರ ಹಾಗೂ ಜೀವಶಾಸ್ತ್ರದ ಅಧ್ಯಾಪಕರಾಗಿದ್ದು 'ವಿಜ್ಞಾನ ಎಂಬ ಮಾಸಪತ್ರಿಕೆ ಹೊರತಂದರು. ೧೯೨೮ರಲ್ಲಿ ಅವರೇ 'ಜೀವವಿಜ್ಞಾನ'ವೆಂಬ ಪುಸ್ತಕ ಬರೆದು ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ ಬರೆಯಲು ಮೈಲಿಗಲ್ಲು ಹಾಕಿದರು. ಮೈಸೂರು ವಿಶ್ವವಿದ್ಯಾಲಯವು 'ವಿಜ್ಞಾನ ಕರ್ನಾಟಕ' ಪ್ರಕಟಿಸತೊಡಗಿದಾಗ, ಮಾನಸಗಂಗೋತ್ರಿಯಲ್ಲಿ ಭೌತಶಾಸ್ತ್ರ ಅಧ್ಯಾಪಕರಾಗಿದ್ದ ಕೊರಟಗೆರೆಯ ಡಾ.ಸಂಜೀವಯ್ಯ, ಹೊಳವನಹಳ್ಳಿಯವರಾದ ರಸಾಯನಶಾಸ್ತ್ರ ಅಧ್ಯಾಪಕರಾಗಿದ್ದ ಡಾ.ಹೆಚ್.ಎಸ್.ಶೇಷಾದ್ರಿಯವರು ವಿಜ್ಞಾನ ಸಂಬಂಧಿ ಲೇಖನಗಳನ್ನು ಬರೆದರು. ಗುಬ್ಬಿ ತಾಲೂಕು ಬಿದರೆ ಗ್ರಾಮದ ಡಾ.ಬಿ.ಬಿ. ಸುಬ್ಬರಾಯಪ್ಪನವರು ವಿಜ್ಞಾನ ಇತಿಹಾಸಕ್ಕೆ ದೊಡ್ಡ ಕಾಣಿಕೆ ನೀಡಿದ್ದಾರೆ. ೧೯೫೫ರಲ್ಲಿ ಆಹಾರ ವಿಜ್ಞಾನ ಎಂಬ ಕನ್ನಡ ಪತ್ರಿಕೆ ಪ್ರಾರಂಭಿಸಿದರು. ಶಿರಾ ತಾಲೂಕು ತಾಳಗುಂದದ ಟಿ.ಆರ್.ಅನಂತರಾಮು ಅವರು ಕೇಂದ್ರ ಸರ್ಕಾರದ ಭೂಸರ್ವೇಕ್ಷಣಾ ಇಲಾಖೆಯಲ್ಲಿ ಹಿರಿಯ ವಿಜ್ಞಾನಿಯಾಗಿದ್ದು, ಸುಮಾರು ೩೦ಕ್ಕೂ ಹೆಚ್ಚು ವಿಜ್ಞಾನದ ಪುಸ್ತಕ ರಚಿಸಿ, ಎರಡು ಬಾರಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದಿದ್ದಾರೆ. ಅನೇಕ ಪತ್ರಿಕೆ, ನಿಯತಕಾಲಿಕ, ವಿಜ್ಞಾನ ಪತ್ರಿಕೆಗಳಲ್ಲಿ ನೂರಾರು ಲೇಖನ ಬರೆದಿದ್ದಾರೆ. ನವಕರ್ನಾಟಕದಿಂದ ಹೊರಬರುವ ವಿಜ್ಞಾನ ಪದಕೋಶ, ಜ್ಞಾನವಿಜ್ಞಾನ ಕೋಶ, ಕನ್ನಡ ವಿಶ್ವವಿದ್ಯಾಲಯ 'ವಿಜ್ಞಾನ ಸಂಗಾತಿ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಬಾಲವಿಜ್ಞಾನ ಪತ್ರಿಕೆಗೆ ಸಂಪಾದಕರು, ಉಪಸಂಪಾದಕರು, ಸಂಪಾದಕ ಮಂಡಲಿ ಸದಸ್ಯರಾಗಿದ್ದಾರೆ.

ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ರಸಾಯನಶಾಸ್ತ್ರ ಬೋಧಿಸುತ್ತಿದ್ದ ಜಿ.ಅನಂತ ನಾರಾಯಣಸ್ವಾಮಿ, ಪರಿಸರ, ಅರಣ್ಯ, ಗಿಡಮೂಲಿಕೆ, ಮರಗಿಡಗಳ ಔಷಧಿ ಉಪಯೋಗ ಮುಂತಾದವುಗಳ ಬಗ್ಗೆ ಬರೆಯುವ ತುಮಕೂರಿನ ಬಿ.ಎಸ್.ಸೋಮಶೇಖರ್, ಕೃಷಿ ವಿಜ್ಞಾನ ಕೇಂದ್ರದ ಅರಣ್ಯ ಇಲಾಖೆಯ ಮುಖ್ಯಸ್ಥರಾಗಿರುವ ಶಿರಾದ ದಾಸಪ್ಪನವರು, ಸಸ್ಯಶಾಸ್ತ್ರಜ್ಞರಾದ ಡಾ.ಡಿ.ಜೆ.ಮೋಹನ್, ಪರಿಸರ, ರೋಗ, ಆರೋಗ್ಯ ಮುಂತಾದವುಗಳ ಬಗ್ಗೆ ನೂರಾರು ಲೇಖನ ಹಾಗೂ ಪುಸ್ತಕಗಳನ್ನು ಬರೆದಿದ್ದಾರೆ. ವೈದ್ಯಕೀಯ ಸಾಹಿತ್ಯ ರಚಿಸುತ್ತಿರುವ ಶಿರಾ ತಾಲೂಕಿನ ಡಾ॥ ಟಿ.ಎಸ್.ಶಶಿಧರ್ ಅವರು ರೋಗ, ರೋಗ ನಿವಾರಣೆ ಬಗ್ಗೆ ಅನೇಕ ಲೇಖನ ಬರೆದಿರುವುದಲ್ಲದೇ 'ಆರೋಗ್ಯ ಕೈಪಿಡಿ' ಕೃತಿಯನ್ನು ಹೊರತಂದಿದ್ದಾರೆ. ಆರೋಗ್ಯ ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಜಿ.ಕೆ.ಕುಲಕರ್ಣಿ ಅನೇಕ ಸಾಮಾನ್ಯ ರೋಗಗಳ ಬಗ್ಗೆ, ಲೇಖನ ಬರೆಯುತ್ತಿದ್ದಾರೆ. ಕನ್ನಡ ಪ್ರಾಧ್ಯಾಪಕರಾಗಿ ಎಂ.ಪ್ರಸನ್ನಕುಮಾರ್ ಪ್ರಾಣಿಲೋಕದ ಅದ್ಭುತಗಳನ್ನು, ಕುತೂಹಲಕಾರಿ ಜೀವಿಗಳನ್ನು ಕುರಿತು ಅನೇಕ ಲೇಖನ ಬರೆದಿದ್ದಾರೆ. ಲೇಖಕರಾದ ಕೆ.ಭೈರಪ್ಪನವರು ಪರಿಸರ ವಿಜ್ಞಾನದ ಬಗ್ಗೆ ಕಿರುಹೊತ್ತಿಗೆಗಳನ್ನು ಬರೆದಿರುವರು. ಗುಬ್ಬಿ ತಾಲೂಕು ಹೊಸಹಳ್ಳಿಯ ಎಸ್.ಷಡಕ್ಷರಯ್ಯನವರು ರೇಷ್ಮೆ ಇಲಾಖೆಯಿಂದ ಹೊರಬರುತ್ತಿರುವ 'ರೇಷ್ಮೆಕೃಷಿ' ಎಂಬ ಮಾಸಿಕ ಪತ್ರಿಕೆಗೆ ಸಹ ಸಂಪಾದಕರಾಗಿದ್ದಾಗ ನೂರಾರು ಲೇಖನ ಬರೆದಿದ್ದಾರೆ.

ಕಲ್ಪತರು ಕಾಲೇಜಿನ ಪ್ರಾಧ್ಯಾಪಕರಾಗಿ ಎನ್.ಸೋಮಶೇಖರ್ ರವರು ಬೆಂಗಳೂರು ವಿಶ್ವವಿದ್ಯಾಲಯದ ಜನಪ್ರಿಯ ವಿಜ್ಞಾನದಲ್ಲಿ ಲೇಖನಗಳನ್ನು ಬರೆದಿದ್ದಾರೆ. ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಲಿಯಲ್ಲಿ ವಿಜ್ಞಾನಿಯಾಗಿ ಕೆಲಸ ಮಾಡುತ್ತಿರುವ ಡಾ.ಎಸ್.ಜಿ.ಶ್ರೀಕಂಠೇಶ್ವರ ಸ್ವಾಮಿ ಅವರು ಶಕ್ತಿ ಮತ್ತು ಪರಿಸರ, ಭೂವಿಜ್ಞಾನ, ಅನೌಪಚಾರಿಕ ಶಕ್ತಿ ಸಂಪನ್ಮೂಲಗಳ ಬಗ್ಗೆ ಲೇಖನಗಳನ್ನು ಬರೆದಿದ್ದು, ನಮ್ಮ ಪರಿಸರ, ಬಾಲವಿಜ್ಞಾನ ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

**ಡಾ.ಹೆಚ್.ಎಸ್.ನಿರಂಜನಾರಾಧ್ಯ:** ಇವರು ವಿಜ್ಞಾನ ಕಲಾ ಜಾಥ, ಭಾರತ ವಿಜ್ಞಾನ ಜಾಥ ಮುಂತಾದ ಸಂಪಾದಿತ ಕೃತಿ, ಹಾವುಗಳು, ಜೀವಿ ಸಂರಕ್ಷಣೆ, ಡಾರ್ವಿನ್ ನಮ್ಮ ಪರಿಸರ, ಪರಮಾಣು ಶಸ್ತ್ರಾಸ್ತ್ರಗಳು ಮುಂತಾದ ಪುಸ್ತಕಗಳನ್ನು ರಚಿಸಿದ್ದಾರೆ. ಬಾವಲಿಗಳು, ಮುಪ್ಪು ಪ್ರಾಥಮಿಕ ಶಿಕ್ಷಣದಲ್ಲಿ ವಿಜ್ಞಾನ ಕೃತಿಗಳನ್ನು ಅನುವಾದಿಸಿದ್ದಾರೆ.

**ಡಾ.ತುಮಕೂರು** ನಾಗಭೂಷಣ ಅವರು ಅನೇಕ ಲೇಖನಗಳಲ್ಲದೆ, ನೀನು ಹುಟ್ಟಿದ್ದು ಹೇಗೆ? ವಿಜ್ಞಾನಾಟಿಕೆಗಳ ಕೈಪಿಡಿ ಅನುವಾದಗಳು, ಲೂಯಿಪಾಶ್ಚರ್ ಜೀವನಚರಿತ್ರೆ ಕೃತಿಗಳನ್ನು ರಚಿಸಿದ್ದಾರೆ.

ಸಿ. **ಯತಿರಾಜು**: ಇವರು ಜ್ಞಾನ–ವಿಜ್ಞಾನ ಚಳವಳಿಯ ನೇತಾರ. ಜನಸಾಮಾನ್ಯರಲ್ಲಿ, ವಿದ್ಯಾರ್ಥಿಗಳಲ್ಲಿ ವಿಜ್ಞಾನ ತಂತ್ರಜ್ಞಾನದ ಅರಿವು ಮೂಡಿಸಲು, ಪರಿಸರ ಸಂರಕ್ಷಣೆ ಸುಸ್ಥಿರ ಅಭಿವೃದ್ಧಿ ಬಲಪಡಿಸುವಲ್ಲಿ ಕಾರ್ಯೋನ್ಮುಖರಾಗಿದ್ದು ಅನೇಕ ಲೇಖನ, ಪುಸ್ತಕ, ಕಾರ್ಯಕ್ರಮ, ಪ್ರಾತ್ಯಕ್ಷಿಕೆ ಮುಂತಾದವುಗಳನ್ನು ನಡೆಸುತ್ತಿದ್ದಾರೆ. ನೀರು ನೀರು, ಸಹಾಯಕ, ಪಿ.ಸಿ.ರೇ, ಬರ್ನಾಲ್ ಮುಂತಾದ ಪುಸ್ತಕಗಳನ್ನು ರಚಿಸಿದ್ದು, 'ನಿಸರ್ಗ ಸಮಾಜ ಮತ್ತು ವಿಜ್ಞಾನ' ಎಂಬ ಕೃತಿಯನ್ನು ಅನುವಾದ ಮಾಡಿದ್ದಾರೆ.

**ಹಾಲೊಡ್ಡೇರಿ ಸುಧೀಂದ್ರ:** ಕಂಪ್ಯೂಟರ್ ವಿಜ್ಞಾನ ಕುರಿತು ಅನೇಕ ಪುಸ್ತಕ, ಲೇಖನಗಳನ್ನು ಬರೆದಿದ್ದಾರೆ. ತುಮಕೂರಿನ ಸಿದ್ಧಗಂಗಾ ಇಂಜಿನಿಯರಿಂಗ್ ಕಾಲೇಜಿನಲ್ಲಿ ಭೌತಶಾಸ್ತ್ರದ ಪ್ರಾಧ್ಯಾಪಕರಾದ ಡಾ.ಬಿ.ಸಿದ್ಧಲಿಂಗಪ್ಪನವರು ಭಾತವಿಜ್ಞಾನಿಗಳ ಜೀವನ ಚರಿತ್ರೆಗಳನ್ನು ಬರೆದಿದ್ದು ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಪುಸ್ತಕ ಪ್ರಾಧಿಕಾರ ಮುಂತಾದ ಸಂಸ್ಥೆಗಳು ಪ್ರಕಟಿಸಿವೆ.

**ಪ್ರೊ.ತೋಂಟದಾರ್ಯ**: ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಭೌತಶಾಸ್ತ್ರ ಪ್ರಾಧ್ಯಾಪಕರಾಗಿದ್ದ ಇವರು ಸಂಪಿಗೆಯವರು. ವಿಜ್ಞಾನ ತಂತ್ರಜ್ಞಾನ ವಿಷಯಗಳ ಬಗ್ಗೆ ಆಕಾಶವಾಣಿಯಲ್ಲಿ ನಾಟಕ, ಭಾಷಣ ಬರೆದು ಪ್ರಸ್ತುತಪಡಿಸಿದ್ದಾರೆ. ನೋಬಲ್ ಪ್ರಶಸ್ತಿ ವಿಜೇತ ಚಂದ್ರಶೇಖರ್ ಅವರ ಜೀವನ ಚರಿತ್ರೆ 'ಚಂದ್ರ' ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಸಾಮಾಜಿಕ ಕಾಳಜಿಗೆ ಅನ್ವಯಿಸುವ ಕುರಿತಾಗಿ ಆರಂಭವಾದ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ತನ್ನ ಕಾರ್ಯಕ್ರಮಗಳ ಮೂಲಕ ತುಮಕೂರಿನಲ್ಲಿ ಒಂದು ವಿಜ್ಞಾನ ಚಳವಳಿಯನ್ನೇ ರೂಪಿಸಿತು. ಶಿಕ್ಷಕರು, ಉಪನ್ಯಾಸಕರು ಇದರಲ್ಲಿ ತೊಡಗಿಕೊಂಡ ಪರಿಣಾಮವಾಗಿ ಅನೇಕರು ವಿಜ್ಞಾನ ಸಾಹಿತ್ಯ ಬರಹಗಾರರಾಗಿ ರೂಪುಗೊಂಡರು. ಅವರಲ್ಲಿ ಚಿಕ್ಕನಾಯ್ಕನಹಳ್ಳಿ ತಾಲೂಕಿನ ರಾಮಕೃಷ್ಣಪ್ಪ (ಪರಿಸರ ಪಯಣ ಕೃತಿ) ಪ್ರಾಚಾರ್ಯರಾಗಿರುವ ಎನ್.ಇಂದಿರಮ್ಮ, ಮಧುಸೂದನರಾವ್, ಬಿಳಿಗೆರೆ ಕೃಷ್ಣಮೂರ್ತಿ, ಕೊಡಿಗೇಹಳ್ಳಿಯ ಸತೀಶ್, ಪಾವಗಡದ ಗಂಗಾಧರಪ್ಪ, ತುಮಕೂರಿನ ರವಿಶಂಕರ್, ತುರುವೇಕೆರೆ ತಾಲೂಕು ಮಾಯಸಂದ್ರದ ಆನಂದರಾಜು ಮುಂತಾದವರನ್ನು ಪ್ರಮುಖವಾಗಿ ಹೆಸರಿಸಬಹುದು. ತಿಪಟೂರಿನ ಬೈಫ್ ಸಂಸ್ಥೆಯು ಹೊರತರುತ್ತಿರುವ 'ಸಿರಿಸಮೃದ್ಧಿಮಾಸಿಕ ಪತ್ರಿಕೆಯಲ್ಲಿ ಸಹಜಕೃಷಿ, ಅರಣ್ಯ, ಜಲಾನಯನ ಅಭಿವೃದ್ಧಿ, ಪರಿಸರ ಮುಂತಾದ ಲೇಖನಗಳು ಪ್ರಕಟವಾಗುತ್ತಿವೆ. ಅನೇಕ ಹಾಡು, ನಾಟಕಗಳ ಮೂಲಕವೂ ಜನಜಾಗೃತಿ ಮಾಡಲಾಗುತ್ತಿದ್ದು, ಕನ್ನಡದಲ್ಲಿ ಬರುತ್ತಿರುವ ವಿಜ್ಞಾನ ಸಾಹಿತ್ಯಕ್ಕೆ ತುಮಕೂರು ಜಿಲ್ಲೆಯ ಲೇಖಕರ ಕೊಡುಗೆ ಗಮನಾರ್ಹ.

## ಉರ್ದು ಸಾಹಿತ್ಯ

ಉರ್ದು ಒಂದು ಸರಳ, ಸುಂದರ ಮತ್ತು ಆಕರ್ಷಕವಾದ ಭಾಷೆ. ತುಮಕೂರು ಜಿಲ್ಲೆಯಲ್ಲಿ ಸುಮಾರು ೨,೧೦,೫೨೩ (೨೦೦೧ರ ಜನಗಣತಿ) ಸಾವಿರಕ್ಕೂ ಹೆಚ್ಚು ಉರ್ದು ಭಾಷಿಕರಿದ್ದಾರೆ. ಅಲ್ಲದೆ ಈ ಭಾಷೆಯಲ್ಲಿ ಸಾಹಿತ್ಯವೂ ಕೂಡ ಸಾಕಷ್ಟು ನಿರ್ಮಾಣವಾಗಿದೆ. ಆದಿಲ್ ಶಾ ಖಾದ್ರಿ ಅವರು ಉರ್ದು ಕವಿಯಾಗಿದ್ದು, ಶಿರಾ ಮೊಗಲರ ವಶವಾದಾಗ, ಅಲ್ಲಿ ಬಂದು ನೆಲೆಸಿ, ಮಸ್ನವಿ ಮುತ್ಲುಬಲ್ ಏರಿದೀನ್, ಅಖಾಯದ್ ನಾಮ, ಏಫದ್ ನಾಮ ಒಕೊವುಲ್ ಮುಸ್ಲಿಮಿನ್ ಎಂಬ ಕೃತಿಗಳನ್ನು ರಚಿಸಿದ್ದಾಗಿ ತಿಳಿದುಬರುತ್ತದೆ.

ಕುಣಿಗಲ್ಲಿನ ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರಾಗಿದ್ದ ಜಿಯಾಮಿರ್ ತಮ್ಮ ಭಾಷಾ ಪ್ರಬುದ್ಧತೆ ಮತ್ತು ಸಾಹಿತ್ಯ ಜ್ಞಾನದಿಂದಾಗಿ ಖ್ಯಾತರಾಗಿದ್ದಾರೆ. ಉರ್ದು ಭಾಷೆಯಲ್ಲಿನ ಸಾಧನೆಗಾಗಿ ಅವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ದೊರೆತಿದೆ. ಮುಜಾಮೀರ್ ಎಂಬ ಅವರ ಪುಸ್ತಕ ಉರ್ದು ಜಗತ್ತಿನಲ್ಲಿ ಪ್ರಸಿದ್ಧಿ ಪಡೆಯಿತು. ಇನ್ನೊಬ್ಬ ಸಾಹಿತಿ ಸಾಲೇಹಮುನೀರ್ ಅವರೂ ಸಹ ಕುಣಿಗಲ್ ಪಟ್ಟಣದವರು. 'ಲೀಡರ್' ಎಂಬ ಪತ್ರಿಕೆ ಸಂಪಾದಕರಾಗಿ ಉರ್ದು ಮತ್ತು ಇಂಗ್ಲಿಷ್ ಭಾಷೆಯಲ್ಲಿ ಹಲವಾರು ಪುಸ್ತಕಗಳನ್ನು ಬರೆದಿದ್ದಾರೆ. ಕುಣಿಗಲ್ಲಿನ ಪ್ರೊ.ಮೊಹಮದ್ ಹನೀಫ್ ಖಲೀಮ್ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರೊಫೆಸರ್ ಆಗಿದ್ದು ಜಖ್ಮೆಸಫರ್ ಎಂಬ ಗ್ರಂಥ ರಚಿಸಿದ್ದಾರೆ. ಶಿರಾ ನಗರದ ಡಾ.ಶೌಕತ್ ಜಿಲ್ಲೆಯ ಪ್ರಸಿದ್ಧ ಉರ್ದು ಕವಿ. ಅವರು ಕವನ ಸಂಗ್ರಹಗಳನ್ನು ಬಿಡುಗಡೆ ಮಾಡಿದ್ದಾರೆ. ಸೋಚ್ ಕಾ ಸಮಂದರ್ ಎಂಬ ಅವರ ಕೃತಿ ಅತ್ಯಂತ ಜನಪ್ರಿಯವಾಗಿದೆ.

ತುಮಕೂರಿನಲ್ಲಿ ಕಳೆದ ಸುಮಾರು ೫೦ ವರ್ಷಗಳಿಂದ ಉರ್ದು, ಹಿಂದಿ ಮತ್ತು ಆಂಗ್ಲ ಭಾಷೆಗಳಲ್ಲಿ ಲೇಖನಗಳನ್ನು ಬರೆಯುತ್ತಾ ಇರುವ ಪತ್ರಕರ್ತ ಮುನೀರ್ ಅಹಮದ್, ಉರ್ದು ಸಾಹಿತ್ಯದಲ್ಲಿ ಪ್ರಬುದ್ಧ ಲೇಖಕರೆಂದು ಗುರುತಿಸಿಕೊಂಡಿದ್ದಾರೆ. ಇವರ ಲೇಖನಗಳು ರಾಷ್ಟ್ರೀಯ, ಅಂತಾರಾಷ್ಟ್ರೀಯ ಪತ್ರಿಕೆಗಳಲ್ಲಿ ಮುದ್ರಣಗೊಂಡಿವೆ. ಇವರು ಈವರೆಗೆ ಯೆ ಶಾದಿಯಾನ್ ಯೆ ಬರ್ಬಾದಿಯಾನ್, ಮಕ್ಕಾ ಔರ್ ಮದಿನಾಕಿ ಗುಂಸಾಕ್ ತಾರಿಕ್, ಮಕ್ಕಾ ಅಂಡ್ ಮದಿನಾ, ಇಸ್ಲಾಮ್ ಇನ್ ಗ್ಲೋಬಲ್ ಹಿಸ್ಟರಿ, ಇಸ್ಲಾಮ್ ಕೆ ದುಷ್ಮನ್ ಮುಂತಾದ ಕೃತಿಗಳನ್ನು ಬರೆದಿದ್ದಾರೆ. ಅದೇ ರೀತಿ ರಾಕಿಂಖುರೇಶಿ, ಎಸ್.ಎಫ್.ಕಾಮಿಲ್, ಫಾತಿಮಾರಿದಾ, ಪ್ರೊ.ಅಖೀಲ್, ಆರಿಫ್ ಮತಿನ್, ಅಬ್ದುಲ್ ಖಾಲಿಖ್ ಫಿದಾ, ಅಮರ್ ಹಫೀಜ್, ಅಜ್ಮತ್, ಮಾಹೆರ್ ಮನ್ಸೂರ್, ಪಾಖಿ ತಪ್ಪುರಿ, ಮತ್ತಿತರರು ಉರ್ದು ಭಾಷೆಯಲ್ಲಿ ಕವಿತೆಗಳನ್ನು ಬರೆಯುತ್ತಾ ಜಿಲ್ಲೆಯಲ್ಲಿ ಪ್ರಸಿದ್ಧರಾಗಿದ್ದಾರೆ. ಇನ್ನೊಬ್ಬ ಪ್ರಸಿದ್ಧ ಕವಿ ಅಬ್ದುಲ್ ಸತ್ತಾರ್ ಮಾಯಲ್ ಅವರು ಖಂದಿಲ್, ಆಕ್ಸಸೆಗುರೇಜ ಎಂಬ ಕಾವ್ಯಗಳನ್ನು ಪ್ರಕಟಿಸಿದ್ದಾರೆ. ಇವರು ೨೦೧೧ರಲ್ಲಿ ನಿಧನರಾದರು.

ಪಕ್ಷಿತಜ್ಞ ಡಾ.ಸಲೀಂ ಅಲಿ ಅವರ ಶಿಷ್ಯನಾಗಿ ಪರಿಸರ ಮತ್ತು ಪಕ್ಷಿಗಳನ್ನು ಕುರಿತಂತೆ ಅಪಾರ ಅನುಭವ ಪಡೆದುಕೊಂಡಿರುವ ಅಮೀನ್ ಅಹಮದ್ ಸಹ ಪುಸ್ತಕ ಬರೆದಿದ್ದಾರೆ. 'ಹೌ ಟು ರೈಟ್ ಸ್ಟೋರಿಸ್–ಎ ಮ್ಯಾನುಯೆಲ್ ಫಾರ್ ಸೌತ್ ಏಷಿಯಾಸ್' ಎಂಬ ಕೃತಿ ಬಿಡುಗಡೆಯಾಗಿದೆ. ಜೊತೆಗೆ ಡೆಕ್ಕನ್ ಹೆರಾಲ್ಡ್, ಇಂಡಿಯನ್ ಎಕ್ಸ್‌ಪ್ರೆಸ್, ಹಿಂದೂ, ಹಿಂದೂಸ್ತಾನ್ ಟೈಮ್ಸ್ ಪತ್ರಿಕೆಗಳಲ್ಲಿ ಆಗಾಗ್ಗೆ ಪರಿಸರ ಮತ್ತು ಪಕ್ಷಿಗಳನ್ನು ಕುರಿತು ಲೇಖನಗಳನ್ನು ಬರೆಯುತ್ತಿದ್ದಾರೆ. ಇತ್ತೀಚೆಗೆ 'ನ್ಯೂಸ್ ಲೆಟರ್ ಫಾರ್ ಬರ್ಡ್ ವಾಚರ್ಸ್' ಎಂಬ ಕೃತಿಯನ್ನು ಬರೆದಿದ್ದಾರೆ. ಹೀಗೆ ತುಮಕೂರು ಜಿಲ್ಲೆಯ ಉರ್ದು ಸಾಹಿತಿಗಳು ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ.

## ಸಂಗೀತ ಮತ್ತು ನೃತ್ಯ

ತುಮಕೂರಿನ ಶಾಸನಗಳಲ್ಲಿ ನೃತ್ಯ, ಸಂಗೀತಗಳ ಉಲ್ಲೇಖ ಕೂಡಬರುತ್ತವೆ. ದೇವಾಲಯದ ರಂಗಭೋಗದ ಸಂದರ್ಭದಲ್ಲಿ ಸೇವೆ ಸಲ್ಲಿಸುತ್ತಿದ್ದ ದೇವದಾಸಿಯರು ನೃತ್ಯ–ಸಂಗೀತ ಕಲೆಗಳಲ್ಲಿ ಪರಿಣಿತರಿದ್ದರು. ಹೊಯ್ಸಳರ ಕಾಲದ ನಾಗಲಾಪುರ, ಅರಳಗುಪ್ಪೆ ಮುಂತಾದೆಡೆಗಳಲ್ಲಿರುವ ವಾಸ್ತುಶಿಲ್ಪದಲ್ಲಿ ವಿವಿಧ ಬಗೆಯ ಸಂಗೀತ ವಾದ್ಯಗಳನ್ನು, ನೃತ್ಯಗಾರ್ತಿಯರ ಶಿಲ್ಪಗಳನ್ನು ಕಾಣಬಹುದು. ಜಿಲ್ಲೆಯಲ್ಲಿ ಕರ್ನಾಟಕ ಸಂಗೀತ ಮತ್ತು ಭರತನಾಟ್ಯ ಹೆಚ್ಚಿನ ಪ್ರಮಾಣದಲ್ಲಿದ್ದು ಇತ್ತೀಚೆಗೆ ಹಿಂದೂಸ್ತಾನಿ ಸಂಗೀತ, ಕಥಕ್ಕಳಿ, ಕೂಚಿಪುಡಿ ನೃತ್ಯ ಮುಂತಾದವು ಕಂಡುಬರುತ್ತಿವೆ. ಜಿಲ್ಲೆಯ ಈಚಿನ ಸಂಗೀತ ಕಲಾವಿದರ ಬಗ್ಗೆ ಇಲ್ಲಿ ಪರಿಶೀಲಿಸಿದೆ. ಗುಬ್ಬಿಯಲ್ಲಿ ದೇವೀರಮ್ಮ ಎಂಬ ಪ್ರಖ್ಯಾತ ಸಂಗೀತ ವಿದುಷಿ ಇದ್ದುದು ಕಂಡುಬರುತ್ತದೆ. ೧೯೧೭ರಲ್ಲಿ ವೀರಶೈವ ಮಹಿಳೆಯರ ಸಮ್ಮೇಳನ ನಡೆದಿತ್ತು.

**ವಿದ್ವಾನ್ ಟಿ.ಜಿ.ಹೊನ್ನಂಜಾಚಾರ್ಯ:** ಶಿರಾದಲ್ಲಿ ಜನಿಸಿ, ದೊಡ್ಡಬಳ್ಳಾಪುರದಲ್ಲಿ ವಿದ್ಯಾಭ್ಯಾಸ ಮುಗಿಸಿದ ಇವರು ಆಯ್ಕೆ ಮಾಡಿಕೊಂಡಿದ್ದು ತುಮಕೂರನ್ನು. ತಂದೆ ಗುರುಮೂರ್ತಾಚಾರ್ಯರಿಂದ ಸಂಗೀತ ಪ್ರಾರಂಭಿಸಿ ನಂತರ ಸೋದರ ಮಾವಂದಿರಾದ ಲಯಬ್ರಹ್ಮ ಹೆಚ್.ಪುಟ್ಟಾಚಾರ್ ಹಾಗೂ ಎಲ್.ಎಸ್. ಶ್ರೀನಾರಾಯಣಸ್ವಾಮಿ ಭಾಗವತರ ಮಾರ್ಗದರ್ಶನದಲ್ಲಿ ಶಿಕ್ಷಣ ಪಡೆದರು. ತಮ್ಮ ಗುರುಗಳಿಂದ ಕಲಿತ ವಿದ್ಯೆಯನ್ನು ಶಿಷ್ಯವರ್ಗಕ್ಕೆ ಕಲಿಸಲು ತುಮಕೂರಿನಲ್ಲಿ ಶ್ರೀ ತ್ಯಾಗರಾಜ ಸಂಗೀತ ಶಿಕ್ಷಣ ಶಾಲೆಯನ್ನು ಸ್ಥಾಪಿಸಿದರು. ಆಸಕ್ತ ವಿದ್ಯಾರ್ಥಿಗಳಿಗೆ ಮನೆಮನೆಗಳಿಗೆ ಹೋಗಿ ೧೯೨೫ರಿಂದಲೂ ಸಂಗೀತ ಪಾಠ ನೀಡುವ ಕೈಂಕರ್ಯವನ್ನು ಅವಿಶ್ರಾಂತವಾಗಿ ಮಾಡಿದರು. ತತ್ಪರಿಣಾಮವಾಗಿ ಶಿಷ್ಯ

ಸಂಕುಲ ಸಾವಿರಕ್ಕೂ ಮೀರಿತು. ಪ್ರಾರಂಭದಲ್ಲಿ ವಿಶ್ವಕರ್ಮ ಸಮಾಜದ ಆಶ್ರಯದಲ್ಲಿ ಕಾರ್ಯಕ್ರಮ ನೀಡುತ್ತಿದ್ದು, ಶ್ರೀ ರಾಮಸೇವಾ ಮಂಡಳಿ, ಆಕಾಶವಾಣಿ, ಗಾಯನ ಸಮಾಜ, ನಾದಶ್ರೀ ಗಾನಸಭೆ ಮುಂತಾದ ಸಂಸ್ಥೆಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ. ಇವರಿಗೆ ಗಾನಕಲಾ ಭೀಷ್ಮ, ಗಾಯನಗಂಧರ್ವ ಮೊದಲಾದ ಬಿರುದುಗಳಲ್ಲದೇ ಅನೇಕ ಗೌರವ ಸಮ್ಮಾನಗಳು ಸಂದಿವೆ. ಅವರ ಮಕ್ಕಳಾದ ಟಿ.ಹೆಚ್.ಆನಂದರಾಮು, ಮೃದಂಗ ವಿದ್ವಾಂಸರಾಗುವುದರೊಂದಿಗೆ ಆನಂದ ಕಲಾವೃಂದದ ಸ್ಥಾಪಕ ನಿರ್ದೇಶಕರಾದರು. ಟಿ.ಎಚ್.ತ್ಯಾಗರಾಜು ವೈಣಿಕ ವಿದ್ವಾಂಸರಾದರು. ಶಿಷ್ಯ ಪರಂಪರೆಯನ್ನು ಬೆಳೆಸಿದರು. ಜನಾರ್ದನ ಬಾಬು ಮೃದಂಗ ವಿದ್ವಾನ್ ಹಾಗೂ ಗಾಯಕರಾದ ಶಕುಂತಲಾ ವಿದ್ವತ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಸಂಗೀತ ಅಧ್ಯಾಪಕಿಯಾಗಿ ಕಿಶೋರರಿಗೆ ಸಂಗೀತ ಕಲೆ ಧಾರೆಯೆರೆದರು.

ಟಿ.ಹೆಚ್.ಹೊನ್ನಂಜಾಚಾರ್ಯರ ಶಿಷ್ಯವರ್ಗದಲ್ಲಿ ಪ್ರಸಿದ್ಧ ವಿದ್ವಾಂಸರಾದ ವಿದ್ವಾನ್ ಟಿ.ಕೆ.ರಾಮಮೂರ್ತಿ, ಟಿ.ವಿ.ಮುತ್ತಾಚಾರ್, ರಂಗನಾಯಕಿ, ಸುಂದರರಾಜನ್, ಪಿ.ರಾಮಯ್ಯ ಮುಂತಾದವರಿದ್ದಾರೆ. ಅವರು ಸ್ಥಾಪಿಸಿದ 'ತುಮಕೂರು ಗಾಯನಸಭಾ'. ರಾಜ್ಯಮಟ್ಟದ ಶ್ರೇಷ್ಠಸಂಗೀತ ವಿದ್ವಾಂಸರನ್ನು ಆಹ್ವಾನಿಸಿ ಅವರಿಂದ ಶಾಸ್ತ್ರೀಯ ಸಂಗೀತ ಕಛೇರಿಗಳನ್ನು ನಡೆಸಿ, ತ್ಯಾಗರಾಜರ ಹಾಗೂ ಪುರಂದರದಾಸರ ಜಯಂತ್ಯೋತ್ಸವ ನಡೆಸಿ ಕಿರಿಯ ಕಲಾವಿದರಿಗೆ ಪ್ರೋತ್ಸಾಹ ನೀಡಿದರು. ಹಾರ್ಮೋನಿಯಂ ನುಡಿಸುವುದರಲ್ಲಿ ಅನುಪಮ ಪಾಂಡಿತ್ಯ ಪಡೆದಿದ್ದರು. ಬೆಂಗಳೂರು ಆಕಾಶವಾಣಿಯವರು ಅವರ ಹಾರ್ಮೋನಿಯಂ 'ಸೋಲೋ' ವಾದನವನ್ನು ಪ್ರಸಾರ ಮಾಡಿದರು. ಅವರಿಗೆ ಬೆಂಗಳೂರಿನ ಗಾನಕಲಾ ಪರಿಷತ್ ನಿಂದ ಸನ್ಮಾನ, ಡಾ॥ ಬಿ.ದೇವೇಂದ್ರಪ್ಪನವರು ವ್ಯವಸ್ಥೆ ಮಾಡಿದ ಹನುಮ ಜಯಂತಿಯಲ್ಲಿ ಸನ್ಮಾನ, ತುಮಕೂರಿನ ಭಾರತ ಸೇವಾದಳದ ವತಿಯಿಂದ ಸನ್ಮಾನ, ಪ್ರಸನ್ನ ಗಣಪತಿ ಮಹೋತ್ಸವದವರಿಂದ ಚಿನ್ನದ ಪದಕದ ಸನ್ಮಾನ, ಸಾಹಿತ್ಯ ಪರಿಷತ್ತಿನಿಂದ ಸನ್ಮಾನ ಮುಂತಾದವು ಸಂದಿವೆ.

**ವಿದ್ವಾನ್ ಟಿ.ಕೆ.ರಾಮಮೂರ್ತಿ**: ಇವರು ಕ್ರಿ.ಶ.೧೯೨೬ ಡಿಸೆಂಬರ್ ೧೪ರಂದು ಜನಿಸಿದರು. ಕರಣೀಕ ನಲ್ಲಪ್ಪನವರ ವಂಶಸ್ಥರು. ತಂದೆ ಕರಣಿಕ ಕೃಷ್ಣಮೂರ್ತಿ, ತಾಯಿ ಗಂಗಮ್ಮ. ತುಮಕೂರಿನಲ್ಲಿ ವಿದ್ಯಾಭ್ಯಾಸ ನಡೆಸಿ ೧೯೪೪ರಲ್ಲಿ ಸುಬ್ಬುಲಕ್ಷ್ಮಿಯವರನ್ನು ಮದುವೆಯಾದ ನಂತರ ಮೈಸೂರಿನಲ್ಲಿ ಬಿ.ಎ.,ಆನರ್ಸ್‌ನಲ್ಲಿ ಪದವಿ ಪಡೆದರು. ಪದವಿಯಲ್ಲಿ ಸಂಸ್ಕೃತಭಾಷೆಯನ್ನು ಒಂದು ವಿಷಯವಾಗಿ ಆಯ್ಕೆ ಮಾಡಿಕೊಂಡಿದ್ದರು. ಬಾಲ್ಯದಲ್ಲೇ ರಾಮಮೂರ್ತಿ ಪುರಂದರದಾಸರ ಕೀರ್ತನೆ ಹಾಡಿ ಸಾವಿರಾರು ಜನರನ್ನು ರಂಜಿಸುತ್ತಿದ್ದರು. ೧೯೪೮ರಲ್ಲಿ ಪ್ರೌಢಶಾಲೆಯಲ್ಲಿದ್ದಾಗ ಸರ್ಕಾರಿ ಆಸ್ಪತ್ರೆ ಪ್ರಾರಂಭೋತ್ಸವದ ಸಮಾರಂಭದಲ್ಲಿ ಮೈಸೂರಿನ ಶ್ರೀ ಮನ್ಮಹಾರಾಜ ಜಯಚಾಮರಾಜೇಂದ್ರ ಒಡೆಯರ್ ಸಮ್ಮುಖದಲ್ಲಿ "ಶ್ರೀ ಚಾಮುಂಡೇಶ್ವರಿ" ಕೀರ್ತನೆ ಹಾಡಿ ಅವರಿಂದ ಪುಷ್ಪಮಾಲೆ, ಮೆಚ್ಚುಗೆ, ಪಡೆದಿದ್ದರು. ಸಂಗೀತ ಕ್ಷೇತ್ರದಲ್ಲಿ ಪರಿಣತಿ ಸಾಧಿಸಲು ಬೆಳ್ಳಾವೆ ನರಹರಿಶಾಸ್ತ್ರಿ, ಟಿ.ಎಸ್.ಮೂರ್ತಿ, ಕೊಳಲು ವಿದ್ವಾಂಸರಾದ ರಾಧಾಕೃಷ್ಣನ್, ತುಮಕೂರಿನ ಸಂಗೀತ ಕ್ಷೇತ್ರದ ಭೀಷ್ಮ ವಿದ್ವಾನ್ ಟಿ.ಜಿ.ಹೊನ್ನಂಜಾಚಾರ್ಯ ಮೊದಲಾದವರು ನೀಡಿದ ಪ್ರೇರಕ ಶಕ್ತಿ ಕಾರಣ. ೧೯೮೭ರಲ್ಲಿ ಸಂಗೀತ ಕ್ಷೇತ್ರದಲ್ಲಿ ಅವರ ಪ್ರತಿಭೆ, ಪರಿಣತಿಯನ್ನು ಗುರುತಿಸಿ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಅವರನ್ನು ಸನ್ಮಾನಿಸಿತು. ಬೆಂಗಳೂರು ಆಕಾಶವಾಣಿಯ ಖಾಯಂ ಗಾಯಕರಾಗಿ ನೇಮಕವಾಗಿದ್ದರು. ಶೃಂಗೇರಿ ಸಂಸ್ಥಾನ ರಂಭಾಪುರ ಗುರುಗಳು; ಡಾ॥ ವಿ.ದೊರೆಸ್ವಾಮಿ ಅಯ್ಯಂಗಾರ್ ಮುಂತಾದವರು ಮೆಚ್ಚಿಗೆ ಪಡೆದಿದ್ದರು. ಸುಮಾರು ನಾಲ್ಕು ದಶಕಗಳ ಕಾಲ ಸಂಗೀತ ಶಿಕ್ಷಣವನ್ನು ನೀಡಿದ್ದು, ಸಿ.ರಾಮಯ್ಯ, ಡಾ.ಕೆ.ಎಸ್.ವಾಸುದೇವಮೂರ್ತಿ, ಆರ್.ಚಂದ್ರಿಕಾ, ವಿ.ಸ್ವರ್ಣಲತಾ ಜ್ಯೋತಿಪ್ರಕಾಶ್ ಮುಂತಾದ ಕೆಲವು ಮುಖ್ಯ ಗಣ್ಯಕಲಾವಿದರು ಶಿಷ್ಯವೃಂದದಲ್ಲಿದ್ದರು.

**ಬೆಳ್ಳಾವೆ ನರಹರಿಶಾಸ್ತ್ರಿ**: ಸರ್ವೋದಯ ಪ್ರೌಢಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿದ್ದ, ಕರಣಿಕ ವಂಶದ ಬೆಳ್ಳಾವೆ ನರಹರಿಶಾಸ್ತ್ರಿಗಳು ಶ್ರೀ ನರಸಿಂಹ ದೇವಾಲಯದ ಧರ್ಮದರ್ಶಿಗಳಾಗಿ ಬಸವೇಶ್ವರ ವಚನಗಳಿಗೆ, ದಾಸರ ಪದಗಳಿಗೆ ಸ್ವರಸಂಯೋಜಕರಾಗಿ ಮಾಡಿದ ಕಾರ್ಯ ಗಮನಾರ್ಹ. ರಂಗಭೂಮಿ ಕಲಾವಿದರಾಗಿಯೂ ಕಾರ್ಯನಿರ್ವಹಿಸುವ ಅವಕಾಶ ಇವರಿಗೆ ಒದಗಿ ಬಂದಿತ್ತು. ಕರ್ನಾಟಕ ರಾಜ್ಯದ ಒಳಗೂ, ಹೊರಗೂ ಸಂಗೀತ ಕಾರ್ಯಕ್ರಮಗಳನ್ನು ನೀಡಿ ಸಂಗೀತಜ್ಞರ ಮೆಚ್ಚುಗೆಗೆ ಪಾತ್ರರಾಗಿದ್ದ ಮಹಾತಪಸ್ವಿ ಬೆಂಗಳೂರು ಆಕಾಶವಾಣಿಯಲ್ಲಿ ಹಾಡಿದ ದೇವರನಾಮ "ದಾರಿ ಯಾವುದಯ್ಯ? ವೈಕುಂಠಕ್ಕೆ ಹಾದಿ ತೋರಿಸಯ್ಯ!", ದಾಶರಥೇ ನೀ ಋಣಮು ದೀರ್ಪ ನಾತರಮಾ" (ರಾಮ ನಿನ್ನ ಋಣ ತೀರಿಸಲು ಸಾಧ್ಯವೇ) ಅವರ ಕಡೆಯ ಗಾಯನವಾಯ್ತು. ಇವರು ೧೧.೭.೮೮ರಂದು ಕಾಲವಶವಾದರು.

**ಎಸ್.ರೇವಣಾರಾಧ್ಯ:** ತುಮಕೂರು ತಾಲೂಕು ಚಿನಿವಾರನಹಳ್ಳಿಯಲ್ಲಿ ೧೯೨೯ರಲ್ಲಿ ಜನಿಸಿದ ಇವರು ಚೆಲುವಯ್ಯ, ಬಿ.ದೊರೆಸ್ವಾಮಿ, ಹನುಮಂತಮ್ಮ, ಎಲ್.ಎಸ್.ನಾರಾಯಣಸ್ವಾಮಿ ಭಾಗವತರಲ್ಲಿ ಶಿಕ್ಷಣ ಪಡೆದು, ಹಾಡುಗಾರಿಕೆಯಲ್ಲಿ ವಿದ್ವತ್ ಪದವಿಯನ್ನು ಪಡೆದಿದ್ದರು. ಶ್ರೀರಾಮ ಸೇವಾಮಂಡಳಿ, ಕಾರಂಜಿ ಆಂಜನೇಯ ಸ್ವಾಮಿ ದೇವಾಲಯ, ಗಾಯನ ಸಮಾಜ, ಗಣಪತಿ ಸೇವಾ ಮಂಡಳಿ, ಮೈಸೂರು, ಚನ್ನೈ, ಬೆಂಗಳೂರು ಮುಂತಾದ ಕಡೆ, ಜಿಲ್ಲಾ ಉತ್ಸವಗಳಲ್ಲಿ, ಆಕಾಶವಾಣಿಯಲ್ಲಿ ಸಂಗೀತ ಕಾರ್ಯಕ್ರಮ ನೀಡಿದ್ದಾರೆ. ಬೆಂಗಳೂರಿನಲ್ಲಿ ಸಂಗೀತಭಾರತಿ ಕಲಾಶಾಲೆ ನಡೆಸುತ್ತಿದ್ದಾರೆ.

**ಹೈಮಾವತಮ್ಮ:** ತಿಪಟೂರಿನಲ್ಲಿ ೧೯೩೫ರಲ್ಲಿ ಜನಿಸಿದ ಇವರು ಲೇಖಕಿ ಹಾಗೂ ಗಮಕಿಯೂ ಆಗಿದ್ದಾರೆ. ಕೆ.ಎಸ್.ಭಾಸ್ಕರಾಚಾರ್ಯ, ಆರ್.ಕೃಷ್ಣನ್ ಮೊದಲಾದವರಲ್ಲಿ ಕಲಿತು, ಸಂಗೀತ ವಿದ್ವತ್ ಪದವಿ ಪಡೆದು, ಶಿಕ್ಷಣ ಇಲಾಖೆಯಲ್ಲಿ ವಿವಿಧ ಹುದ್ದೆ ನಿರ್ವಹಿಸಿ ನಿವೃತ್ತರಾಗಿದ್ದಾರೆ. ಶ್ರೀ ಪುರಂದರಕೃಷ್ಣ, ನಾದಯೋಗ, ರಾಗಾರ್ಥರಂಜನಿ, ಶ್ರೀ ತ್ಯಾಗರಾಜರ ಆಧ್ಯಾತ್ಮಿಕ ಪರಂಪರೆ (ಅನುವಾದ) ಬನ್ನಿ ಕೂಡಿಹಾಡೋಣ (ಸಮುದಾಯ ಗೀತೆಗಳು) ಪುಸ್ತಕಗಳು ಪ್ರಕಟಗೊಂಡಿವೆ. ಇವರಿಗೆ ನೃತ್ಯ ಅಕಾಡೆಮಿ ಪ್ರಶಸ್ತಿ ಸಂದಿದೆ.

**ಎಂ.ಎ.ಮೈಥಿಲಿ ಮತ್ತು ಎಂ.ಎ.ಮೀರಾ:** ಎಂ.ವಿ.ನರಸಿಂಹಾಚಾರ್ ರಲ್ಲಿ ಸಂಗೀತ ವಿದ್ವತ್ ಪರೀಕ್ಷೆ ಪಾಸುಮಾಡಿದ್ದು, ಇಬ್ಬರೂ ದ್ವಂದ್ವ ಗಾಯನ ಕಛೇರಿ ನಡೆಸುತ್ತಾರೆ. ಮೈಸೂರಿನ ನಾದಬ್ರಹ್ಮ ಸಂಗೀತಸಭಾ, ಗುರುವಾಯೂರಿನ ಚಂಬೈ ಸಂಗೀತ ಮಹೋತ್ಸವ, ಬೆಂಗಳೂರು ಗಾಯನ ಸಮಾಜ, ಚನ್ನೈನ ಮ್ಯೂಸಿಕ್ ಅಕಾಡೆಮಿ, ದೂರದರ್ಶನ, ಆಕಾಶವಾಣಿ ಮುಂತಾದ ಕಡೆ ಕಾರ್ಯಕ್ರಮ ನೀಡಿದ್ದಾರೆ. ಮೈಥಿಲಿಯವರು ಮಲ್ಲೇಶ್ವರದ ಮಹಿಳಾ ಶಾಲೆಯಲ್ಲಿ ಸಂಗೀತ ಶಿಕ್ಷಕಿಯಾಗಿಯೂ, ಮೀರಾ ಅವರು ಗಾನಕಲಾ ಮಂದಿರದಲ್ಲಿ ಸಂಗೀತ ಶಿಕ್ಷಕಿಯಾಗಿಯೂ ಸೇವೆ ಸಲ್ಲಿಸಿರುವರು.

**ಸಿ.ಎಂ.ಮಧುರಾನಾಥ್:** ತುಮಕೂರಿನಲ್ಲಿ ೧೯೩೪ರಲ್ಲಿ ಜನಿಸಿದ ಇವರು ಬಿ.ಆರ್.ಶಾಮಾಚಾರ್ ಮತ್ತು ಟಿ.ಆರ್. ಮಹಾಲಿಂಗಂ ಅವರಲ್ಲಿ ಕೊಳಲು ವಾದನದಲ್ಲಿ ಪ್ರೌಢ ಶಿಕ್ಷಣ ಪಡೆದು, ಮೈಸೂರಿನ ರಾಮಮಂದಿರ, ಮಲ್ಲೇಶ್ವರಂ ಸಂಗೀತ ಸಭಾ, ಗಾಯನ ಸಮಾಜ, ಚನ್ನೈನ ಮ್ಯೂಸಿಕ್ ಅಕಾಡೆಮಿ, ಮೈಸೂರಿನ ದಸರಾ, ಬಿಲಾಯಿ, ನೈವೇಲಿ, ಕೇರಳ, ತಮಿಳುನಾಡು, ಉತ್ತರ ಭಾರತದ ಅನೇಕ ಕಡೆ ಕಾರ್ಯಕ್ರಮ ನೀಡಿದ್ದಾರೆ. ಲಂಡನ್, ಪ್ಯಾರಿಸ್, ಜರ್ಮನಿ, ಫ್ರಾನ್ಸ್ ಮುಂತಾದ ರಾಷ್ಟ್ರಗಳಲ್ಲಿಯೂ ಕಾರ್ಯಕ್ರಮ ನೀಡಿದ್ದಾರೆ. ಬೆಂಗಳೂರಿನ ರಾಜಾಜಿನಗರದಲ್ಲಿ ಇನ್ಸ್ಟಿಟ್ಯೂಟ್ ಆಫ್ ಮ್ಯೂಸಿಕ್ ಎಂಬ ಸಂಗೀತ ಶಾಲೆಯನ್ನು ನಡೆಸುತ್ತಿದ್ದಾರೆ. ಇವರ ಅನನ್ಯ ಸೇವೆಗಾಗಿ ವೇಣುಗಾನ ಕಲಾಧರ, ಕಲಾಭೂಷಣ, ಮುಂತಾದ ಬಿರುದು ನೀಡಿ ಅನೇಕ ಗೌರವ ಸನ್ಮಾನಗಳನ್ನು ಸಲ್ಲಿಸಲಾಗಿದೆ.

**ಎ.ಕೆ.ಪ್ರಾಣೇಶ್:** ಎಂ.ಆರ್ ದೊರೆಸ್ವಾಮಿಯವರಲ್ಲಿ ಶಿಕ್ಷಣ ಪಡೆದು ಬೆಂಗಳೂರು ಗಾಯನ ಸಮಾಜ, ಚಾಮರಾಜಪೇಟೆಯ ಶ್ರೀ ರಾಮಸೇವಾ ಮಂಡಳಿ, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯಲ್ಲಿ, ಗಣರಾಜ್ಯೋತ್ಸವ ಸಮಾರಂಭದಲ್ಲಿ ಕಾರ್ಯಕ್ರಮ ನೀಡಿದ್ದಾರೆ. ಕೇಂದ್ರ ಸರ್ಕಾರದ ಸಾಂಸ್ಕೃತಿಕ ನಿಯೋಗದ ಸದಸ್ಯರಾಗಿ ನೇಪಾಳ, ರಷ್ಯ, ಇಂಗ್ಲೆಂಡ್, ಯೂರೋಪ್ ಹಾಗೂ ಆಸ್ಟ್ರೇಲಿಯಾ ಮೊದಲಾದ ರಾಷ್ಟ್ರಗಳಿಗೆ ಭೇಟಿ ನೀಡಿ ಕಾರ್ಯಕ್ರಮಗಳನ್ನು ಸಾದರಪಡಿಸಿದ್ದಾರೆ.

**ಟಿ.ಎಸ್.ತಾತಾಚಾರ್:** ೧೯೧೭ರಲ್ಲಿ ಪಾವಗಡದಲ್ಲಿ ಜನಿಸಿದ ಇವರು ಪಿಟೀಲು ವಿದ್ವಾಂಸರಾದ ತಮ್ಮ ತಂದೆ ಟಿ.ಶ್ರೀನಿವಾಸಾಚಾರ್ಯ, ಹಾಗೂ ಚಿಕ್ಕಪ್ಪ ಟಿ.ಶೇಷಾಚಾರ್ಯ ಅವರಲ್ಲಿ ಸಂಗೀತ ಕಲಿತು ಮುಂದೆ ವೀಣೆ ಕೃಷ್ಣಮಾಚಾರ್ ಮತ್ತು ರಾಳ್ಳಪಲ್ಲಿ ಅನಂತ ಕೃಷ್ಣಶರ್ಮ ಅವರಲ್ಲಿ ಪ್ರೌಢಶಿಕ್ಷಣ ಪಡೆದರು. ರಾಮಮಂದಿರ, ಬೆಂಗಳೂರಿನ ಗಾಯನ ಸಮಾಜ, ಮಲ್ಲೇಶ್ವರಂ ಸಂಗೀತ ಸಭಾ, ಮುಂಬಯಿ, ಪಾವಗಡ, ಮೈಸೂರು, ಬೆಂಗಳೂರು, ಆಕಾಶವಾಣಿ ಮೊದಲಾದ ಕಡೆ ಕಾರ್ಯಕ್ರಮ ನೀಡಿದ್ದಾರೆ. ಇವರ ಕಲಾಸೇವೆಗಾಗಿ ಕರ್ನಾಟಕ ಕಲಾತಿಲಕ, ಗಾನಕಲಾಭೂಷಣ, ವಯೋಲಿನ್ ವಾದನನಿಪುಣ, ಕಲಾಭೂಷಣ ಮುಂತಾದ ಬಿರುದು ನೀಡಿ ಗೌರವಿಸಲಾಗಿದೆ.

**ವಿ.ನಳಿನಾ:** ಚನ್ನಪಟ್ಟಣದಲ್ಲಿ ಜನಿಸಿದ ಇವರು ತುಮಕೂರಿನಲ್ಲಿ ನೆಲೆಸಿದ್ದಾರೆ. ಸಂಗೀತದಲ್ಲಿ ಎಂ.ಎ ಪದವಿ ಪಡೆದು, ಬೆಂಗಳೂರು ಸೇರಿದಂತೆ ಅನೇಕ ಕಡೆ ಕಾರ್ಯಕ್ರಮ ನೀಡಿ ಪಿಟೀಲು ಪ್ರವೀಣೆ ಎಂಬ ಬಿರುದು ಗಳಿಸಿರುವರು.

**ಟಿ.ವಿ.ಭದ್ರಾಚಾರ್:** ತುಮಕೂರಿನಲ್ಲಿ ಜನಿಸಿದ ಇವರು ಮೃದಂಗ ವಿದ್ವಾಂಸರು. ಮೋರ್ಚಿಂಗ್ ವಿದ್ವಾಂಸರಾಗಿದ್ದ ತಮ್ಮ ತಂದೆ ಹೆಚ್.ಟಿ.ವೀರಭದ್ರಾಚಾರ್ಯರಿಂದ ಹಾಗೂ ಕೊಯಮತ್ತೂರಿನ ಸಿ.ಎಸ್. ಮುತ್ತಯ್ಯ ಪಿಳ್ಳೈ ಪಾಲ್ಘಾಟ್, ಮಣೀಅಯ್ಯರ್ ಅವರಲ್ಲಿ ಕಲಿತು ಮೃದಂಗ, ಖಂಜೀರ, ಡೋಲಕ್ ಮುಂತಾದ ವಾದ್ಯಗಳಲ್ಲಿ ಪರಿಣತಿ ಪಡೆದಿದ್ದಾರೆ. ಆಂಧ್ರಪ್ರದೇಶ, ಕೇರಳ, ತಮಿಳುನಾಡು, ಮಹಾರಾಷ್ಟ್ರ ಮುಂತಾದ ಹೊರ ರಾಜ್ಯಗಳ ಆಕಾಶವಾಣಿ, ದೂರದರ್ಶನಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ. ತುಮಕೂರಿನ ಕಲಾಮಂದಿರದಿಂದ ನಾದತಪಸ್ವಿ, ವಿಶ್ವಕರ್ಮ ಮಂದಿರದಿಂದ ಕಲಾ ತಪಸ್ವಿ ಎಂಬ ಬಿರುದುಗಳು, ಮೃದಂಗ ಕಲಾ ಪ್ರಪೂರ್ಣ, ಲಯವಾದ್ಯ ಬ್ರಹ್ಮ ಮುಂತಾದ ಬಿರುದು ಗೌರವಗಳು ಸಂದಿವೆ.

**ಡಿ.ಸುಬ್ಬರಾಮಯ್ಯ:** ಕೊರಟಗೆರೆ ತಾಲೂಕು ಪಾತುಗೋನಹಳ್ಳಿಯಲ್ಲಿ ೧೯೦೩ರಲ್ಲಿ ಜನಿಸಿದ ಇವರು ಪ್ರಸಿದ್ಧ ಪಿಟೀಲು ವಿದ್ವಾಂಸರಾದ ದಾನಪ್ಪನವರ ಪುತ್ರ. ಇವರ ಚಿಕ್ಕಪ್ಪನವರಾದ ಪುಟ್ಟಣ್ಣನವರು ಸಹ ಪಿಟೀಲು ವಿದ್ವಾಂಸರು. ಚಿಕ್ಕಪ್ಪನವರಲ್ಲಿ ಸಂಗೀತಾಭ್ಯಾಸ ಮಾಡಿ ೧೩ನೇ ವಯಸ್ಸಿಗೇ ಶಿವಗಂಗೆಯ ಮಠಾಧಿಪತಿಗಳ ಸಮ್ಮುಖದಲ್ಲಿ ಸಂಗೀತ ಕಛೇರಿ ನೀಡಿದ್ದರು. ಕರ್ನಾಟಕದ ವಿವಿಧೆಡೆ, ಕೊಲ್ಕೊತ್ತಾ, ಆಂಧ್ರ ಮುಂತಾದ ರಾಜ್ಯಗಳಲ್ಲಿ ಕಾರ್ಯಕ್ರಮಗಳನ್ನು ನೀಡಿದ್ದು, ಗಾನಕಲಾಸಿಂಧು, ಗಾನಕಲಾಕುಶಲ, ನಾದಸುಧಾನಿಧಿ ಬಿರುದುಗಳಲ್ಲದೇ ಸಂಗೀತನಾಟಕ ಅಕಾಡೆಮಿ ಕನ್ನಡ ಸಾಹಿತ್ಯ ಪರಿಷತ್ ಮುಂತಾದ ಸಂಸ್ಥೆಗಳಿಂದ ಗೌರವಿಸಲ್ಪಟ್ಟಿದ್ದಾರೆ.

**ಟಿ.ವೆಂಕಟರಾವ್:** ಇವರು ತುಮಕೂರಿನಲ್ಲಿ ೧೯೦೬ರಲ್ಲಿ ಜನಿಸಿದರು. ಆಸ್ಥಾನ ವಿದ್ವಾಂಸರಾಗಿದ್ದ ತಾತ ಟಿ.ಕರಿಗಿರಿರಾಯರು ಇವರ ವಿದ್ಯಾಗುರುಗಳು, ಮೈಸೂರು ಮಹಾರಾಜರ ಸಮ್ಮುಖದಲ್ಲಿ ನಂಜನಗೂಡಿನಲ್ಲಿ ಜರುಗಿದ ಸಮಾರಂಭವೊಂದರಲ್ಲಿ ಇವರು ಪ್ರಥಮ ವೀಣಾವಾದನ ಕಛೇರಿ ನೀಡಿದ್ದು, ಬಳ್ಳಾರಿ, ಪೆನುಗೊಂಡ, ಅನಂತಪುರ ಮುಂತಾದ ಕಡೆಗಳಲ್ಲಿ ಕಾರ್ಯಕ್ರಮ ನೀಡಿದ್ದರು. ಬೆಂಗಳೂರು ಮಹಾರಾಣಿ ಕಾಲೇಜಿನಲ್ಲಿ ಕೆಲವರ್ಷ ಅಧ್ಯಾಪಕರಾಗಿದ್ದರು. ವರ್ಣಗಳು, ಲಕ್ಷಣ ಗೀತೆಗಳು, ಕೀರ್ತನೆಗಳು, ತಿಲ್ಲಾನಗಳನ್ನು ರಚಿಸಿದ್ದರು. ಗದ್ವಾಲ್ ಮಹಾರಾಜರಿಂದ ಬಂಗಾರದ ಕಂಠೀಹಾರ ಪಡೆದಿದ್ದರು. ಮೈಸೂರಿನಲ್ಲಿ ವೈಣಿಕ ಪ್ರವೀಣ ಎಂಬ ಬಿರುದು ನೀಡಿ ಗೌರವಿಸಲಾಗಿದೆ.

**ರತ್ನಗಿರಿ ಸುಬ್ಬಾಶಾಸ್ತ್ರಿ:** ೧೯೦೯ರಲ್ಲಿ ಮಧುಗಿರಿ ತಾಲೂಕು ರತ್ನಗಿರಿಯಲ್ಲಿ ಜನಿಸಿದ ಇವರು ಸಂಗೀತ ವಿದ್ವಾಂಸರಾಗಿದ್ದ ತಮ್ಮ ತಂದೆ ನಾಗೇಶ ಶಾಸ್ತ್ರಿಯವರಲ್ಲಿ ಹಾಗೂ ವೀಣೆ ರಾಜಾರಾಯರಲ್ಲಿ ಸಂಗೀತ ಶಿಕ್ಷಣ ಪಡೆದು, ಬೆಂಗಳೂರು ಗಾಯನ ಸಮಾಜ, ಗಾನಕಲಾ ಪರಿಷತ್, ಆಕಾಶವಾಣಿ ಹಾಗೂ ಅನೇಕ ಉತ್ಸವಗಳಲ್ಲಿ ಕಾರ್ಯಕ್ರಮ ನೀಡಿರುವರು. ಏಳು ತಂತಿಗಳ ಪಿಟೀಲು ವಾದನದಲ್ಲಿ ಪರಿಣಿತರು. ಕಲ್ಲೂರಿನ ರಾಮೋತ್ಸವದಲ್ಲಿ ಸನ್ಮಾನಿತಗೊಂಡಿದ್ದರು.

**ಜಿ.ಚನ್ನಮ್ಮ:** ೧೯೧೩ರಲ್ಲಿ ತುಮಕೂರಿನಲ್ಲಿ ಜನಿಸಿದ ಇವರು ವೀಣೆ ಕೃಷ್ಣಮಾಚಾರ್ಯ ಹಾಗೂ ತಂಜಾವೂರು ಪೊನ್ನಯ್ಯ ಪಿಳ್ಳೈ ರವರಲ್ಲಿ ಶಿಷ್ಯವೃತ್ತಿ ಮಾಡಿ ಗಾಯನ ಹಾಗೂ ವೀಣಾವಾದ್ಯಗಳಲ್ಲಿ ಮದರಾಸು ಸರ್ಕಾರದ ಸಂಗೀತ ಪರೀಕ್ಷೆಯನ್ನು ಪಾಸು ಮಾಡಿದರು. ೧೯೩೩ರಲ್ಲಿ ಮಂಗಳೂರಿನಲ್ಲಿ ನಡೆದ ಶಿಕ್ಷಕರ ಸಪ್ತಾಹದಲ್ಲಿ ಹಾಡಿದರು. ಮದರಾಸಿನ ಕಲಾಕ್ಷೇತ್ರ, ಚಿದಂಬರಂ, ಮುಂಬಯಿ ಕರ್ನಾಟಕ ಸಂಘ, ಬೆಂಗಳೂರು ಗಾಯನ ಸಮಾಜಗಳಲ್ಲದೇ, ಚೆನ್ನೈ, ಮೈಸೂರು ಆಕಾಶವಾಣಿ ಮೊದಲಾದ ಕಡೆ ಕಾರ್ಯಕ್ರಮ ನೀಡಿರುವರು. ಕೆಲಕಾಲ ಮುಂಬಯಿಯ ಸೌತ್ ಇಂಡಿಯನ್ ಮ್ಯೂಸಿಕ್ ಅಕಾಡೆಮಿಯಲ್ಲಿ ಬೋಧಕರಾಗಿದ್ದರು. ೧೯೪೨ರಲ್ಲಿ ಬೆಂಗಳೂರಿನಲ್ಲಿ ಗಾನಮಂದಿರ ಎಂಬ ಸಂಗೀತ ಶಾಲೆ ಸ್ಥಾಪಿಸಿದರು. ೧೯೪೬ರಲ್ಲಿ ಬೆಂಗಳೂರಿನ ಮಹಾರಾಣಿ ಕಾಲೇಜಿನ ಸಂಗೀತವಿಭಾಗದಲ್ಲಿ ಸೇವೆ ಸಲ್ಲಿಸಿ ೧೯೭೯ರಲ್ಲಿ ಮುಖ್ಯಸ್ಥರಾಗಿ ನಿವೃತ್ತಿ ಹೊಂದಿದರು. ವೀಣಗಾನ ವಿದ್ಯಾವಾರಿಧಿ, ಸಂಗೀತ ಕಲಾರತ್ನ ಎಂಬ ಬಿರುದುಗಳೂ, ರಾಜ್ಯೋತ್ಸವ ಪ್ರಶಸ್ತಿ ಲಭ್ಯವಾಗಿದೆ. ಕೇಂದ್ರ ಸಂಗೀತ ನಾಟಕ ಅಕಾಡೆಮಿ, ಕರ್ನಾಟಕ ಗಾನಕಲಾ ಪರಿಷತ್ ಮುಂತಾದ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿರುವರು. ಸಂಗೀತಶಾಸ್ತ್ರ ಬೋಧಿನಿ, ನಾದಶಾಸ್ತ್ರ ಚಂದ್ರಿಕೆ ಗ್ರಂಥಗಳು ಕರ್ನಾಟಕ ಗಾನ ವಿದ್ಯಾ ಪ್ರದೀಪಿಕೆಯ ಸಂಪಾದಕರೂ ಆಗಿದ್ದರು.

**ಪಿ.ಶಿವಕುಮಾರ್:** ತುಮಕೂರು ತಾಲೂಕು ಪಾಲಸಂದ್ರದಲ್ಲಿ ೧೯೪೧ರಲ್ಲಿ ಜನಿಸಿದ ಇವರು ಅಂಧತ್ವದಿಂದ ಬಳಲಿದರೂ ಮೈಸೂರಿನ ಅಂಧರಶಾಲೆಯಲ್ಲಿ ಶಿಕ್ಷಣ ಪಡೆದು ೧೯೬೦ರಲ್ಲಿ ಸಂಗೀತ ಶಿಕ್ಷಕರಾಗಿ ಸೇವೆಗೆ ಸೇರಿದರು. ಆಸ್ಥಾನ ವಿದ್ವಾನ್ ಬಿ.ಎಂ.ಶಿವಪ್ಪ ಹಾಗೂ ವಿದ್ವಾನ್ ವೆಂಕಟಪ್ಪನವರಲ್ಲಿ ಸಂಗೀತಾಭ್ಯಾಸ ಮಾಡಿ ಪಿಟೀಲು ವಾದನದಲ್ಲಿ

ಪರಿಣತಿ ಪಡೆದರು. ೧೯೯೪ರಲ್ಲಿ ತುಮಕೂರಿನಲ್ಲಿ 'ಸರಸ್ವತಿ ಗಾನ ಕಲಾ ಕೇಂದ್ರ' ಸ್ಥಾಪಿಸಿ ಸಂಗೀತ ಶಿಕ್ಷಣ ನೀಡುತ್ತಿದ್ದಾರೆ. ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ರಾಘವೇಂದ್ರ ಸಂಗೀತ ಸಭಾ ಪ್ರಶಸ್ತಿ ನೀಡಲಾಗಿದೆ. ತುಮಕೂರು ಗಾಯನ ಸಭಾದಿಂದ ಪಿಟೀಲುವಾದ್ಯ ಪ್ರವೀಣ ಎಂಬ ಬಿರುದು ನೀಡಿ ಗೌರವಿಸಿದೆ. ಸಾವಿರಾರು ಶಿಷ್ಯವೃಂದವನ್ನು ಇವರು ಹೊಂದಿದ್ದಾರೆ. ಇವರ ಪುತ್ರ ಪಿ.ಎಸ್.ಪ್ರಸನ್ನಕುಮಾರ್ ಕೂಡ ಸಂಗೀತ ಕ್ಷೇತ್ರದಲ್ಲಿದ್ದಾರೆ.

**ಪಂಚಾಕ್ಷರಿ ಹಿರೇಮಠ:** ಮೂಲತಃ ಗದಗ ಜಿಲ್ಲೆ, ರೋಣ ತಾಲೂಕ್, ಚಿಕ್ಕಮಣ್ಣೂರಿನ ಇವರು ತುಮಕೂರಿನಲ್ಲಿ ನೆಲೆಸಿದ್ದಾರೆ. ತಂದೆ ಬಾಲಚಂದ್ರಶಾಸ್ತ್ರಿ ಕೂಡ ಸಂಗೀತ ವಿದ್ವಾಂಸರು. ತಂದೆಯಿಂದ ಪ್ರಾಥಮಿಕ ಸಂಗೀತ ಶಿಕ್ಷಣವನ್ನು ನಂತರ ಡಾ.ಪುಟ್ಟರಾಜ ಗವಾಯಿ, ಗದುಗಿನ ವೀರೇಶ್ವರ ಪುಣ್ಯಾಶ್ರಮಗಳಲ್ಲಿ ಶಿಕ್ಷಣ ಪಡೆದರು. ಗಾಯನ, ಹಾರ್ಮೋನಿಯಂ, ತಬಲಾ ಮೂರರಲ್ಲೂ ಕಲೆಗಳಲ್ಲಿ ಸಿದ್ಧಹಸ್ತರು. ಕರ್ನಾಟಕ ವಿಶ್ವವಿದ್ಯಾಲಯದಿಂದ ಸಂಗೀತದಲ್ಲಿ ಬಿ.ಎ ಮಾಡಿದರು. ಸಂಗೀತ ಸಾಧನೆಯೊಂದಿಗೇ ಮುಂಬಯಿ ಗಂಧರ್ವ ಮಹಾವಿದ್ಯಾಲಯಕ್ಕೆ ಸಂಬಂಧಿಸಿದ ಪರೀಕ್ಷೆಗಳಲ್ಲಿ ಪ್ರಥಮ ಶ್ರೇಣಿ, ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಪರೀಕ್ಷೆಯಲ್ಲಿ ಮೊದಲ ಸ್ಥಾನ ಪಡೆದು ಅನೇಕ ಪಾರಿತೋಷಕ ಪಡೆದುಕೊಂಡರಲ್ಲದೇ ಸಂಗೀತ ಪರಂಪರೆಗೆ ಪುಟ್ಟರಾಜ ಗವಾಯಿಗಳ ಕೊಡುಗೆ ಕುರಿತು ಮಹಾಪ್ರಬಂಧ ರಚಿಸಿ ಡಾಕ್ಟರೇಟ್ ಪಡೆದರು. ಹಿಂದೂಸ್ತಾನಿ ಗಾಯನವನ್ನು ಜಿಲ್ಲೆಯಲ್ಲಿ ಜನಪ್ರಿಯಗೊಳಿಸಿದ ಇವರು ಪಂಡಿತ ಅರ್ಜುನ ಸಾ ನಾಕೋಡ, ಪಂಡಿತ ವೆಂಕಟೇಶ್ ಕುಮಾರ್ ಮುಂತಾದವರಲ್ಲಿ ವಿವಿಧ ಪ್ರಾಕಾರಗಳನ್ನು ಅಭ್ಯಾಸ ಮಾಡಿದ್ದಾರೆ. ಆಕಾಶವಾಣಿಯಲ್ಲಿ ಬಿ ಹೈಗ್ರೇಡ್ ಕಲಾವಿದರಾಗಿ ಅನೇಕ ಕಾರ್ಯಕ್ರಮ ನೀಡಿದ್ದಾರೆ. ಸಮ್ಮೇಳನ ಜಿಲ್ಲಾ ಉತ್ಸವ, ದೂರದರ್ಶನ, ಉದಯರಾಗ, ಸೌರಭ, ಸಂಧ್ಯಾರಾಗ, ಕಾವ್ಯ ಕಾವೇರಿ, ಸಂಗೀತ ನೃತ್ಯ ಅಕಾಡೆಮಿಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ. ಸುಪ್ರಸಿದ್ಧ ಸಂಗೀತಗಾರರಾದ ಗಂಗೂಬಾಯಿ ಹಾನಗಲ್, ಸಿ.ಆರ್.ವ್ಯಾಸ್, ಲಕ್ಷ್ಮಣರಾವ್ ಪಂಡಿತ, ಚಟರ್ಜಿ, ಗಣಪತಿ ಭಟ್ ಮುಂತಾದವರಿಗೆ ಸಾಥ್ ನೀಡಿದ ಹೆಗ್ಗಳಿಕೆ ಇವರದು.

**ಎನ್.ಬಿ.ಸವಣೂರು:** ಹಾವೇರಿ ಜಿಲ್ಲೆ ಹಾನಗಲ್ಲಿನ ಇವರ ಪೂರ್ಣ ಹೆಸರು ನಜೀರ್ ಅಹಮದ್ ಖಾನ್ ಸವಣೂರು. ತುಮಕೂರಿನಲ್ಲಿ ಸಬ್ ರಿಜಿಸ್ಟ್ರಾರ್ ಆಗಿ ಸೇವೆ ಸಲ್ಲಿಸಿ ನಿವೃತ್ತರಾಗಿ ಇಲ್ಲಿಯೇ ನೆಲೆಸಿದ್ದಾರೆ. ಹಿಂದೂಸ್ತಾನಿ ಸಂಗೀತ ಗಾಯಕರು. ನಿವೃತ್ತಿ ನಂತರ ಪ್ರಖ್ಯಾತ ಸಂಗೀತಗಾರರಾದ ವಿದ್ವಾನ್ ಚಂದ್ರಶೇಖರ ಪುರಾಣಿಕರಲ್ಲಿ ಶಿಷ್ಯ ವೃತ್ತಿ ಕೈಗೊಂಡು ಸಂಗೀತ ಸೇವೆ ಮಾಡುತ್ತಿದ್ದಾರೆ.

**ಪಿ.ಎಸ್. ಪ್ರಸನ್ನಕುಮಾರ್**: ಸಂಗೀತ ವಿದ್ವಾನ್ ಶಿವಕುಮಾರ್ ಅವರ ಪುತ್ರ. ಇವರು ಸಂಗೀತ ಹಾಗೂ ಪಿಟೀಲು ವಿಭಾಗದಲ್ಲಿ ವಿದ್ವತ್, ಹಾಗೂ ಬಿ.ಎಸ್ಸಿ., ಪದವಿ ಪಡೆದು ತುಮಕೂರು ಜಿಲ್ಲೆ ಬೆಳ್ಳಾವಿ ಸರ್ಕಾರಿ ಪ್ರೌಢಶಾಲೆಯಲ್ಲಿ ಸಂಗೀತ ಶಿಕ್ಷಕರಾಗಿದ್ದಾರೆ. ಪಿಟೀಲು ವಿಭಾಗದ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಬಂದಿರುವ ಇವರು ಹೆಸರಾಂತ ಸಂಗೀತಗಾರರಿಗೆ ಪಕ್ಕವಾದ್ಯ ನುಡಿಸಿದ್ದಾರೆ. ಅನೇಕ ಸಂಘ–ಸಂಸ್ಥೆಗಳಿಂದ ಗೌರವ ಸನ್ಮಾನ ಪಡೆದಿದ್ದಾರೆ.

**ಹೆಚ್.ಟಿ.ಚಂದ್ರಶೇಖರ್:** ತಿಪಟೂರು ತಾಲೂಕು ಈಚನೂರಿನ ತಬಲ ಚಂದ್ರಣ್ಣ ಎಂದೇ ಪ್ರಸಿದ್ಧರಾದ ಇವರು ಶಾಸ್ತ್ರೀಯ ಸಂಗೀತ, ಮೃದಂಗ ಮುಂತಾದವನ್ನು ಕಲಿತು ಆಕಾಶವಾಣಿಯಲ್ಲಿ ಉದ್ಯೋಗ ದೊರಕಿದರೂ ಗ್ರಾಮೀಣ ಭಾಗದಲ್ಲಿ ಕಲಾಸೇವೆಗಾಗಿ ನಿಂತವರು. ಸುತ್ತಮುತ್ತಲ ಊರುಗಳಲ್ಲಿ ಪೌರಾಣಿಕ ನಾಟಕ, ಹರಿಕಥೆ, ಸಂಗೀತ ಮುಂತಾದ ಕಾರ್ಯಕ್ರಮ ನೀಡುವುದು, ಕಲಿಸುವುದು ನಡೆದೇ ಇದೆ. ಬೇರೆ ಬೇರೆ ಜಿಲ್ಲೆಗಳಲ್ಲಿ ಕಾರ್ಯಕ್ರಮ ನೀಡಿರುವುದಲ್ಲದೇ ತಿಪಟೂರಿನಲ್ಲಿ 'ನಂದಿ ತಾಳವಾದ್ಯ ಪಾಠಶಾಲೆ ತೆರೆದು ತರಬೇತಿ ನೀಡುತ್ತಿದ್ದಾರೆ. ೧೯೬೫ರಿಂದ ಕರ್ನಾಟಕ ರಾಜ್ಯ ಪ್ರೌಢಶಿಕ್ಷಣ ಮಂಡಳಿಯ ಸಂಗೀತ ಶಿಕ್ಷಣದ ತಾಳವಾದ್ಯ ವಿಭಾಗದ ಮೌಲ್ಯಮಾಪಕರಾಗಿ ಸೇವೆ ಸಲ್ಲಿಸಿದ್ದು ಈಗ ತಂಡದ ಮುಖ್ಯಸ್ಥರಾಗಿದ್ದಾರೆ. ಇವರಿಗೆ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿ ಗೌರವಗಳು ದೊರಕಿವೆ.

**ಕೆ.ಎನ್.ವೆಂಕಟರಾಯ ಭಾಗವತರು**: ಕೊರಟಗೆರೆಯಲ್ಲಿ ೧೯೨೭ರಲ್ಲಿ ಜನಿಸಿದ ಇವರು ವಿದ್ವಾನ್ ತಿಪ್ಪಾ ಜೋಯಿಸ್ ಹಾಗೂ ಹೊನ್ನಂಜಾಚಾರ್ಯರಿಂದ ಸಂಗೀತ ಶಿಕ್ಷಣ ಪಡೆದು ಸೀನಿಯರ್ ಪರೀಕ್ಷೆಯಲ್ಲಿ ಕರ್ನಾಟಕಕ್ಕೇ ಮೊದಲ ಸ್ಥಾನ ಪಡೆದರು. ವಿದ್ವತ್ ಪರೀಕ್ಷೆಯಲ್ಲಿ ದ್ವಿತಿಯ ಸ್ಥಾನ. ಕೆಲವು ನಾಟಕ ಕಂಪನಿಗಳಲ್ಲಿ ನಿರ್ದೇಶಕರಾಗಿ, ನಟರಾಗಿ ಸೇವೆ. ಅಷ್ಟವಾದ್ಯ ಪ್ರವೀಣರೆನಿಸಿದ್ಧ ಗಿರಿಮಾಜಿಯವರಿಂದ ಪಿಟೀಲು, ವೀಣೆ, ಹಾರ್ಮೋನಿಯಂ ವಾದ್ಯಗಳಲ್ಲಿ

ಪರಿಣಿತಿ ಪಡೆದು ಮುಂಬಯಿ, ಬೆಂಗಳೂರು, ಮೈಸೂರುಗಳಲ್ಲಿ ಕಾರ್ಯಕ್ರಮ ನೀಡಿದರು. ದೇವರಾಯನದುರ್ಗದಲ್ಲಿ ಶ್ರೀ ಯೋಗಾನರಸಿಂಹಸ್ವಾಮಿ ಸನ್ನಿಧಿಯಲ್ಲಿ ಸಂಗೀತ ಸೇವೆ ನಡೆಸಿದರು. ನಂತರ ನೃಸಿಂಹ ವಿದ್ಯಾಚಂದ್ರ ಭಾರತೀ ಭಾಗವತರಿಂದ ಸಂಗೀತಾನುಗ್ರಹ ಪಡೆದರು. ಶ್ರೀ **ಸಿದ್ಧ** ಗಂಗಾ ಶ್ರೀಗಳು ಕ್ಷೇತ್ರದಲ್ಲಿ ಜಗಜ್ಯೋತಿ ಬಸವೇಶ್ವರ ನಾಟಕ ಮಾಡಿಸಲು ಹಾಗೂ ಮಠದ ಪ್ರೌಢಶಾಲೆಯಲ್ಲಿ ಸಂಗೀತ ಶಿಕ್ಷಕರಾಗಿರುವಂತೆ ತಿಳಿಸಿದರು. ಅದೇ ರೀತಿ ೧೯೬೫ರಲ್ಲಿ ಪ್ರಥಮ ಪ್ರಯೋಗ ನಡೆಯಿತು. ನಾನಾಕಡೆ ಪ್ರದರ್ಶನಗೊಂಡಿತು. ಸಂಸ್ಕಾರ ಭಾರತಿಯಿಂದ ಗೌರವ ಸನ್ಮಾನ, ಗಾನರಕ್ಷ, ಗಾನಚತುರ,ಅನುಗ್ರಹಶ್ರೀ ಮುಂತಾದ ಬಿರುದು, ೨೦೧೦ರಲ್ಲಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಸಂದಿದೆ.

**ಎನ್.ಲಲಿತಾಚಲಂ:** ತುಮಕೂರಿನ ಗಾನಕಲಾ ಸರಸ್ವತಿ ಎಂದೇ ಜನಪ್ರಿಯವಾಗಿರುವ ಇವರು ಶಾಸ್ತ್ರೀಯ ಸಂಗೀತದಲ್ಲಿ ವಿದ್ವತ್ ಪರೀಕ್ಷೆ ಪಾಸು ಮಾಡಿದ್ದಾರೆ. ವಿದ್ವಾನ್ ನಂಜುಂಡಶಾಸ್ತ್ರಿ ಮತ್ತು ಆರ್.ಕೆ.ಶ್ರೀಕಂಠನ್ ಬಳಿ ಕಲಿತು ೧೯೭೮ರಿಂದ ತುಮಕೂರಿನ ಬಾಪೂಜಿ ವಿದ್ಯಾಸಂಸ್ಥೆಯಲ್ಲಿ ಸಂಗೀತ ಶಿಕ್ಷಕಿಯಾಗಿದ್ದಾರೆ. ತಿರುಮಲ ತಿರುಪತಿ ದೇವಾಲಯದ ಆಸ್ಥಾನ ಮಂಟಪದಲ್ಲಿ, ವಾಗ್ಗೇಯ ವೈಭವದಲ್ಲಿ, ಆಕಾಶವಾಣಿಯಲ್ಲಿ. ಉದಯ ಹಾಗೂ ಚಂದನ ವಾಹಿನಿಯಲ್ಲಿ, ರಾಮಸೇವಾ ಮಂಡಳಿ, ಗಣಪತಿ ಸೇವಾ ಮಂಡಳಿ ಮುಂತಾದ ಕಡೆ ಅನೇಕ ಕಾರ್ಯಕ್ರಮ ನೀಡಿದ್ದಾರೆ. ರೂಪಾ ನಾಗೇಂದ್ರ ಅವರೊಂದಿಗೆ ಭಕ್ತಿ ರಂಜಿನಿ ಮತ್ತು ನಿತ್ಯ ರಂಜಿನಿ ಎಂಬ ದೇವರನಾಮ ವಚನಗಾಯನದ ಧ್ವನಿಮುದ್ರಿಕೆಗಳನ್ನು ಹೊರತಂದಿರುವರು. ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ಸಂಗೀತ ಕಲಾಸರಸ್ವತಿ, ಗಾನವಿಶಾರದೆ, ನಾದಕಲಾಜ್ಯೋತಿ, ತುಮಕೂರು ರತ್ನ, ಅನುಗ್ರಹಶ್ರೀ ಮುಂತಾದ ಬಿರುದುಗಳನ್ನಿತ್ತು ಅನೇಕ ಸಂಘ ಸಂಸ್ಥೆಗಳು ಗೌರವಿಸಿವೆ. ತಮ್ಮ ಸಪ್ತಸ್ವರ ಕಲಾಕೇಂದ್ರದ ಮೂಲಕ ಅನೇಕ ವಿದ್ಯಾರ್ಥಿಗಳಿಗೆ ಸಂಗೀತ ತರಬೇತಿ ನೀಡುತ್ತಿದ್ದಾರೆ.

**ಬಿ.ಪರಶುರಾಮನ್**: ಬಿ.ಪರಶುರಾಮನ್ ಜೀವನವಿಡೀ ಸಂಗೀತ ಸಾಹಿತ್ಯ ಕ್ಷೇತ್ರಗಳೆರಡರಲ್ಲೂ ಉದ್ದಾಮ ಪಂಡಿತರಾಗಿದ್ದು ಗೌರವಕ್ಕೆ ಪಾತ್ರರಾಗಿದ್ದಾರೆ. ವಿದ್ವಾನ್ ಬಿ.ಎಸ್.ರಾಮಯ್ಯನವರ ಪುತ್ರರಾಗಿದ್ದ ವಿದ್ವಾಂಸರಾದ ತಂದೆಯೇ ಪರಶುರಾಮನ್ನರಿಗೆ ಗುರುವೂ ಆದರು. ನಂತರ ತಮ್ಮ ಅಣ್ಣಂದಿರಾದ ಆಸ್ಥಾನ ವಿದ್ವಾನ್ ಗಾನಕಲಾ ವಿಶಾರದ ಡಾ.ಬಿ.ದೇವೇಂದ್ರಪ್ಪನವರಲ್ಲೂ ಆಸ್ಥಾನ ಗಾನಕಲಾ ವಿಶಾರದ ಶ್ರೀ ಬಿಡಾರಂ ಕೃಷ್ಣಪ್ಪನವರಲ್ಲೂ ಹೆಚ್ಚಿನ ಸಂಗೀತ ವಿದ್ಯಾಭ್ಯಾಸ ನಡೆಸಿದರು. ೧೯೨೩ ಮತ್ತು ೧೯೨೫ರಲ್ಲಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಶ್ರೀ ಜಯಚಾಮರಾಜ ಒಡೆಯರ ಸಮ್ಮುಖದಲ್ಲಿ ಹಾಡಿ ಮೆಚ್ಚುಗೆ ಪಡೆದರು. ಮೈಸೂರು ಆಕಾಶವಾಣಿಯ ಕಲಾವಿದರಾಗಿ ಹಾಡಿದ ಹೆಗ್ಗಳಿಕೆಯೂ ಅವರದಾಗಿತ್ತು. ಅವರ ಅಮೋಘ ಸಂಗೀತ ಕೀರ್ತನೆಗಳು ಆ ಕಾಲದಲ್ಲಿಯೇ ಪ್ರಖ್ಯಾತವಾಗಿ ಗ್ರಾಮಾಫೋನ್ ರಿಕಾರ್ಡುಗಳಾಗಿದ್ದವು. ೧೯೩೫ರಲ್ಲಿ ಚಿಕ್ಕಮಗಳೂರಿನಲ್ಲಿ ನಡೆದ ಅಖಿಲ ಮೈಸೂರು ಕಾಂಗ್ರೆಸ್ ಸಮ್ಮೇಳನದಲ್ಲೂ, ೧೯೩೫ರಲ್ಲಿ ನಡೆದ ಮೈಸೂರು ಮಹಿಳಾ ಸಮ್ಮೇಳನದಲ್ಲಿಯೂ ಸಂಗೀತ ಕಾರ್ಯಕ್ರಮ ನೀಡಿದ್ದರು. ಐವತ್ತು ವರ್ಷಗಳಿಗೂ ಹೆಚ್ಚು ಕಾಲ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ಸಂಗೀತ ಅಧ್ಯಾಪಕರಾಗಿ ಸಾವಿರಾರು ಮಕ್ಕಳಿಗೆ ಸಂಗೀತ ಕಲೆಯ ಅಭ್ಯಾಸ ಮಾಡಿಸಿದ್ದಾರೆ. ಬಿ.ಪರಶುರಾಮನ್ ಗಾಯಕರತ್ನರಾಗಿ ಕೀರ್ತಿವಂತರಾದವರು.

**ಟಿ.ಎಸ್.ಗಂಗಾಧರ್**: ವಿ॥ ಟಿ.ಎಸ್.ಗಂಗಾಧರ್ ತಮ್ಮ ಕೌಶಲಪೂರ್ಣ ತಬಲ ವಿದ್ವತ್ ನಿಂದ ಸನ್ಮಾನಿತರಾಗಿದ್ದಾರೆ. ಭಾರತೀಯ ಸಂಗೀತ ಕ್ಷೇತ್ರದಲ್ಲಿ ಮಾತ್ರವಲ್ಲದೆ ನಮ್ಮ ಪೌರಾಣಿಕ ಕಥಾನಕಗಳಲ್ಲಿ ವಿಶಿಷ್ಟವಾದ ಸ್ಥಾನವನ್ನು ಪಡೆದುಕೊಂಡಿದೆ ತಬಲ ಹಾಗೂ ಮೃದಂಗ ವಾದ್ಯಗಳು. ಮರ್ಧನ ವಾದ್ಯಗಳು ಶಿವತಾಂಡವ ನೃತ್ಯದ ಅನನ್ಯ ಅಂಗಗಳಾಗಿರುವುದು ಸರ್ವವಿದಿತ, ಅಂತಹ ಮರ್ಧನ ವಾದ್ಯ ತಬಲ ವಿದ್ವಾಂಸರಾದ ಟಿ.ಎಸ್.ಗಂಗಾಧರ್ ತಬಲ ವಿದ್ವಾಂಸರಾದ ಸಂತೋಜಿರಾವ್ರವರ ಹಾಗೂ ಶ್ರೀಮತಿ ಪುಟ್ಟಲಿಂಗಮ್ಮನವರ ಮಗನಾಗಿ ಬೆಳ್ಳಾವಿಯಲ್ಲಿ ಜನಿಸಿದರು. ತಂದೆಯ ವಿದ್ವತ್‌ನಿಂದ ಆಕರ್ಷಿತರಾಗಿ ತಂದೆಯಬಳಿ ಶಿಷ್ಯವೃತ್ತಿ ಸ್ವೀಕಾರ ಮಾಡಿದರು. ತುಮಕೂರಿನ ಸುಪ್ರಸಿದ್ಧ ಮೃದಂಗ ವಿದ್ವಾಂಸರಾದ ಬಿ.ಭದ್ರಾಚಾರ್ ಮತ್ತು ತಬಲ ವಿದ್ವಾಂಸರಾದ ಮುನಿಸ್ವಾಮಪ್ಪನವರಂತಹ ಗುರುಗಳಲ್ಲಿ ಶಿಷ್ಯವೃತ್ತಿ ಮಾಡುವ ಸೌಭಾಗ್ಯ ಪ್ರಾಪ್ತವಾಯಿತು. ಕರ್ನಾಟಕದ ವಿದ್ವನ್ಮಣಿಗಳ ಸಂಗೀತ ಕಾರ್ಯಕ್ರಮದಲ್ಲಿ ತಬಲ ವಿದ್ವಾಂಸರಾಗಿ, ಪಕ್ಕವಾದ್ಯಗಳ ನುಡಿಕಾರರಾಗಿ ಭಾಗಿಯಾಗಿ ಕನ್ನಡ ರಂಗಭೂಮಿಗೆ ಸುಮಾರು ಐವತ್ತು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ವಿ॥ ಗಂಗಾಧರ್ ಗುಬ್ಬಿಕಂಪನಿ, ಚಾಮುಂಡೇಶ್ವರಿ ಕಂಪನಿ, ಸ್ತ್ರೀ ನಾಟಕ ಮಂಡಲಿ, ಹಿರಣ್ಣಯ್ಯ ಮಿತ್ರಮಂಡಲಿ, ಕನ್ನಡ ಥಿಯೇಟರ್ ಮುಂತಾದ ಅನೇಕ ಇತರೆ ಕಲಾವಿದರು ಸಂಗೀತ ಕಂಪನಿಯಲ್ಲಿ ಅವಿಶ್ರಾಂತ ಸೇವೆ ಸಲ್ಲಿಸಿದ್ದಾರೆ.

**ವಿದ್ವಾನ್ ಟಿ.ಎಸ್.ತ್ಯಾಗರಾಜ್** ದಿವಂಗತ ಹೊನ್ನಂಜಾಚಾರ್ಯರ ಸುಪುತ್ರ, ಇವರು ವೀಣಾವಾದನದಲ್ಲಿ ನುರಿತಕೈ. ಅಲ್ಲದೆ ಹಾಡುಗಾರಿಕೆ, ಕೊಳಲು ಮತ್ತು ಪಿಟೀಲಿನಲ್ಲಿ ಪ್ರಾವೀಣ್ಯತೆ ಪಡೆದಿದ್ದಾರೆ. ಇವರ ಗುರುಗಳು ಅಂತಾರಾಷ್ಟ್ರೀಯ ಖ್ಯಾತಿ ಪಡೆದ ವಿದ್ವಾನ್ ಆರ್.ಕೆ.ಸೂರ್ಯನಾರಾಯಣ್ ಮತ್ತು ವಿದೂಷಿ ರಂಗನಾಯಕಿ ಸುಂದರರಾಜ್, ವೈಣಿಕ ಚಕ್ರವರ್ತಿ ತ್ಯಾಗರಾಜರು ತುಮಕೂರು ಗಾಯನ ಸಭಾ ಸಂಸ್ಥಾಪಕ ಕಾರ್ಯದರ್ಶಿಯಾಗಿ ಕಲಾಸೇವೆ ನಡೆಸುತ್ತಿದ್ದಾರೆ. ಅನೇಕ ಶಿಷ್ಯರನ್ನು ತಯಾರು ಮಾಡಿದ್ದಾರೆ. ಇವರು ಸಂಗೀತ ಕಲಾನಿಧಿ ಮತ್ತು ವಿಶ್ವಜ್ಯೋತಿ ಪ್ರಶಸ್ತಿಗಳನ್ನು ಪಡೆದು ತುಮಕೂರಿನ ಕೀರ್ತಿಗಳನ್ನು ಬೆಳಗಿಸಿದ್ದಾರೆ. ಇವರ ಸಹೋದರ ಟಿ.ಹೆಚ್.ಆನಂದರಾಮು ಹಿರಿಯ ಮೃದಂಗ ವಿದ್ವಾನ್ ತುಮಕೂರು ನಗರದ ಶ್ರೀ ಸಿದ್ಧಿವಿನಾಯಕ ಸೇವಾ ಮಂಡಲಿಯ ಸಾಂಸ್ಕೃತಿಕ ಕಾರ್ಯಕ್ರಮಗಳ ಸಂಚಾಲಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಮೃದಂಗವಾದ್ಯದಲ್ಲಿ ಇವರ ಶಿಷ್ಯ ವೃಂದ ಅಪಾರ. ಅನೇಕ ಹಿರಿಯ, ಕಿರಿಯ ವಿದ್ವನ್ಮಣಿಗಳಿಗೆ ಮೃದಂಗ ಪಕ್ಕವಾದ್ಯ ನಡೆಸಿಕೊಟ್ಟು ಮನ್ನಣೆ ಪಡೆದಿದ್ದಾರೆ. ಲೋಕೇಶ್ವರರವರು ವೀಣಾ ವಾದನದಲ್ಲಿ ಪ್ರಖ್ಯಾತ ಕಲಾವಿದರಾಗಿದ್ದಾರೆ.

**ವತ್ಸಲಾ ರಂಗರಾಜನ್** ತುಮಕೂರಿನ ಪ್ರಸಿದ್ಧ ಶ್ರೀರಾಘವೇಂದ್ರ ಸಭಾದ ಹುಟ್ಟಿಗೆ ಕಾರಣಕರ್ತರು ಪಿ.ರಾಮಯ್ಯನವರಲ್ಲಿ ಸಂಗೀತಾಭ್ಯಾಸ ಮಾಡಿದ್ದು ಹಲವಾರು ಕಡೆ ಕಾರ್ಯಕ್ರಮ ನೀಡಿದ್ದಾರೆ. ಸ್ವರ್ಣಲತಾ ಜ್ಯೋತಿ ಪ್ರಕಾಶ್ ಶ್ರೀ ರಾಘವೇಂದ್ರ ಸಂಗೀತ ಸಭಾದಲ್ಲಿ ಗೌರವ ಕಾರ್ಯದರ್ಶಿಯಾಗಿದ್ದವರು ಅನೇಕ ವಿದ್ಯಾರ್ಥಿಗಳಿಗೆ ಸಂಗೀತಪಾಠ ಕಲಿಸುತ್ತಿದ್ದಾರೆ. ‘ಆದರ್ಶ ಸ್ಕೂಲ್ ಆಫ್ ಮೃದಂಗ” ಮೂಲಕ ಎಳೆವಯಸ್ಸಿನಲ್ಲೇ ಮಕ್ಕಳನ್ನು ತಾಳವಾದ್ಯದಲ್ಲಿ ನಿಪುಣರಾಗುವಂತೆ ತಯಾರು ಮಾಡುವುದು ಇದರ ಅಧ್ಯಕ್ಷ ಸುರೇಶ್ ಅವರ ಉದ್ದೇಶವಾಗಿದೆ.

## ಜಿಲ್ಲೆಯ ಇತರ ಸಂಗೀತ ಕಲಾವಿದರು

ಕೊರಟಗೆರೆ ತಾಲೂಕು ಬೈಚಾಪುರದ ದೊಡ್ಡನಂಜಪ್ಪ, ಗುಬ್ಬಿಕಂಪನಿಯಲ್ಲಿದ್ದ ವೆಂಗಿಪುರಂಮೂರ್ತಿ, ಮಲ್ಲೇಶಯ್ಯ, ನಂಜಪ್ಪ, ಪಿಟೀಲು ಶೀನಪ್ಪ, ಪಾವಗಡದ ಎಸ್.ಸುಬ್ರಹ್ಮಣ್ಯಂ, ಪಾವಗಡ ಶ್ರೀನಿವಾಸಾಚಾರ್ಯ, ಲೋಕೇಶ್, ಟಿ.ರಂಗಸ್ವಾಮಯ್ಯ, ಟಿ.ಬಸವರಾಜು, ಕೆ.ಎನ್.ವೆಂಕಟರಾಮರಾವ್, ತಾತಾಚಾರ್ಯ, ಟಿ.ವಿ.ಮುತ್ತಾಚಾರ್ಯ, ವಿದ್ವಾನ್ ಅಂಜನಪ್ಪ, ತಬಲಾ ಸಂಜೀವಣ್ಣ, ಮುನಿಸ್ವಾಮಪ್ಪ, ಟಿ.ರಾಮಯ್ಯ, ಪರಶುರಾಮಯ್ಯ, ಟಿ.ಬಿ.ಶಿವರುದ್ರಪ್ಪ, ಮಧುಗಿರಿಯ ಶಾಮಣ್ಣ, ರಾಮಾಶಾಸ್ತ್ರಿ, ಕೊರಟಗೆರೆಯ ಕೃಷ್ಣಮೂರ್ತಿ, ದಾನಪ್ಪಯ್ಯ, ಸುಬ್ಬರಾಮಯ್ಯ, ಜಿ.ಕೃಷ್ಣಶಾಸ್ತ್ರಿ, ನಾರವಂಗಲದ ವಾಸುದೇವಮೂರ್ತಿ, ಕೋರ್ಟಿನಲ್ಲಿ ಗುಮಾಸ್ತರಾಗಿದ್ದ ಭೀಮಸಂದ್ರದ ಮೃದಂಗದ ಸೀನಪ್ಪ, ನಾದಸ್ವರದ ಟಿ.ಬಿ.ನರಸಿಂಹಮೂರ್ತಿ, ವಿದ್ವಾನ್ ಮೈಲಾರಯ್ಯ, ಡೋಲುವಾದನದ ಬಸವಲಿಂಗಪ್ಪ, ಬಿ.ರಾಜಮ್ಮ, ಪಿ.ವಿ.ರಾಧಮ್ಮ, ಉಮಾನಾಗಭೂಷಣ್, ವಿಶಾಲಾಕ್ಷಮ್ಮ, ಹನುಮಂತಪ್ಪ, ಲಕ್ಷ್ಮಣ್, ಪಿಟೀಲು ಮುನಿವೆಂಕಟಪ್ಪ, ರಾಮಸ್ವಾಮಿ, ಹಾರ್ಮೊನಿಯಂ ರಘುನಾಥ್ ಎನ್.ಸಿ.ಪ್ರಾಣೇಶ್, ಎಂ.ಪುಟ್ಟಬಸಪ್ಪ, ಬಿ.ಸಿ.ನಾಗರಾಜ ಮಿಡಿಗೇಶಿಯ ವಿದ್ವಾನ್ ಎಂ.ಹೆಚ್. ಆಂಜನಪ್ಪ, ಟಿ.ಎಸ್.ದಯಾನಂದ್ ಮುಂತಾದವರು ಪ್ರಮುಖರು.

ಸಂಗೀತ ಕಲೆಯಲ್ಲಿ ಹೆಸರು ಮಾಡಿದ ಟಿ.ಕೆ.ರಾಮಮೂರ್ತಿ, ವೆಂಕಟರಾಮ ಭಾಗವತರ್ ಮತ್ತು ಪಿ.ರಾಮಯ್ಯ ಇವರೆಲ್ಲರೂ ಹೊನ್ನಂಜಾಚಾರ್ಯರ ಶಿಷ್ಯರು. ಸುಮಾರು ೫೦ ವರ್ಷಗಳ ಕಾಲ ತಪ್ಪದೆ ತ್ಯಾಗರಾಜರ ವಾರ್ಷಿಕ ಆರಾಧನೆಯನ್ನು ನಡೆಸಿದರು. ಆರಾಧನೆಯ ದಿನ ನಾದಸ್ವರದಿಂದ ಆರಂಭಿಸಿ, ತ್ಯಾಗರಾಜರು ಸ್ವರ್ಗಸ್ಥರಾದ ವರ್ಷಗಳಷ್ಟೇ ಕೃತಿಗಳನ್ನು ಹಾಡಿಸಿದ ಹೆಗ್ಗಳಿಕೆ ಇವರದು. ಇವರು ತ್ಯಾಗರಾಜರ ಸಂಗೀತ ಮತ್ತು ಶಿಕ್ಷಣ ಶಾಲೆಯನ್ನು ಸ್ಥಾಪಿಸಿದರು. ಸುಮಾರು ನೂರಿನ್ನೂರು ಶಿಷ್ಯರು ತರಬೇತಿಯನ್ನು ಪಡೆದರು. ತುಮಕೂರು ಗಾಯನ ಸಮಾಜವನ್ನು ಸ್ಥಾಪಿಸಿ ೧೩ ವರ್ಷ ಅದರ ಏಳಿಗೆಗಾಗಿ ದುಡಿದರು. ಇವರ ಪುತ್ರ ವಿದ್ವಾನ್ ಟಿ.ಎಸ್.ತ್ಯಾಗರಾಜ್ ಮತ್ತು ವಿದ್ವಾನ್ ಟಿ.ಎಸ್.ಅನಂತರಾಮು ಈ ಸಂಗೀತ ಪರಂಪರೆಯನ್ನು ಮುಂದುವರಿಸುತ್ತಿದ್ದಾರೆ. ವೀಣೆಯಲ್ಲಿ ಸಿದ್ಧಹಸ್ತರಾದವರ ಪೈಕಿ ಬಸವರಾಜು ಆಕಾಶವಾಣಿ ಕಲಾವಿದರಾಗಿಯೂ ಪ್ರಸಿದ್ಧಿ ಪಡೆದರು.

ಇನ್ನು ಹಾಡುಗಾರಿಕೆಯಲ್ಲಿ ಬಿ.ಪರಶುರಾಮಯ್ಯ, ಟಿ.ಬಿ.ಶಿವರುದ್ರಪ್ಪ, ಬಿ.ರಾಜಮ್ಮ, ಪಿ.ವಿ.ರಾಧಮ್ಮ, ಲಕ್ಷ್ಮಣ್, ಮತ್ತು ರಾಮಸ್ವಾಮಿ ಅಯ್ಯಂಗಾರ್ ಹೆಸರಾಂತ ಕಲಾವಿದರಾಗಿದ್ದರು. ತಬಲ ಮತ್ತು ಮೃದಂಗವಾದನದಲ್ಲಿ ಭದ್ರಾಚಾರ್, ಟಿ.ವಿ.ಭದ್ರಾಚಾರ್, ಟಿ.ಎಸ್.ಗಂಗಾಧರ್, ಟಿ.ಎಚ್.ಸಂಪತ್‌ಕುಮಾರ್, ಸಂಜೀವಣ್ಣ, ಮುನಿಸ್ವಾಮಪ್ಪ ಮತ್ತು ಟಿ.ಎಸ್.ಪ್ರಭಾಕರ್ ಅಗ್ರಗಣ್ಯರು.

ಹಾರ್ಮೋನಿಯಂ ಪೀಳಿಗೆಯ ಸಂಗೀತ ಕಲಾವಿದರಲ್ಲಿ ಕಸ್ತೂರಿನ ಕೆ.ಸೂರಪ್ಪಾಚಾರ್, ತುಮಕೂರಿನ ರಾಮನಾಥನ್ ಪ್ರಸಿದ್ಧ ಹಾರ್ಮೋನಿಯಂ ಕಲಾವಿದರು ಗ್ರಾಮೀಣ ಭಾಗದಲ್ಲಿ ಅಸಂಖ್ಯಾತ ಶಿಷ್ಯರನ್ನು ಬೆಳಸಿದ ಹೆಗ್ಗಳಿಕೆ ಇವರದು. ಗಾನ ಸುಧಾಕರ ಸಂಗೀತ ವಿದ್ವಾನ್ ಪಿ.ರಾಮಯ್ಯನವರು ೧೯೫೦ರ ದಶಕದಿಂದ ಸಂಗೀತಾಭ್ಯಾಸದಲ್ಲಿ ತೊಡಗಿ ಹೆಸರು ಮಾಡಿದ್ದಾರೆ. ಇವರು ದಿವಂಗತ ಹೊನ್ನಂಜಾಚಾರ್ಯರ ಶಿಷ್ಯರು. ತುಮಕೂರಿನಲ್ಲಿ ಜೂನಿಯರ್, ಸೀನಿಯರ್ ಮತ್ತು ವಿದ್ವತ್ ಹಂತದ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ತಯಾರು ಮಾಡುತ್ತಿದ್ದಾರೆ. ತುಮಕೂರು ಗಾಯನ ಸಭೆಯ ಕಾರಣಕರ್ತರಾದ ಇವರು ಸಿದ್ಧಗಂಗಾ ಮಠದ ಸ್ವಾಮಿಗಳ ಕೃಪಾಶ್ರಯದಲ್ಲಿ ಅನೇಕ ಕಾರ್ಯಕ್ರಮಗಳನ್ನು ಮಠದಲ್ಲಿ ನೀಡಿದ್ದಾರೆ. ತುಮಕೂರು ಗಾಯನ ಸಭಾ ಮತ್ತು ರಾಘವೇಂದ್ರ ಸಂಗೀತ ಸಭಾ ಎಂಬ ಎರಡು ಪ್ರತಿಷ್ಠಿತ ಸಂಗೀತ ಸಭೆಗಳಿವೆ. ಈ ಸಭೆಗಳ ಮುಖ್ಯ ಉದ್ದೇಶ ದಕ್ಷಿಣಾದಿ ಸಂಗೀತಕ್ಕೆ ಪ್ರಾಶಸ್ತ್ಯ ನೀಡುವ ಮತ್ತು ಸಂಗೀತಗಾರರಿಗೆ ಅವಕಾಶಗಳನ್ನು ಒದಗಿಸಿ ಪ್ರೋತ್ಸಾಹ ಕೊಡುವುದಾಗಿದೆ. ತುಮಕೂರು ಗಾಯನಸಭೆಯು ಸಂಸ್ಥಾಪಕ ಕಾರ್ಯದರ್ಶಿ ಶ್ರೀ ತ್ಯಾಗರಾಜು, ದಿ.ಟಿ.ಎಸ್.ಎಲ್. ಎನ್.ಮೂರ್ತಿಯವರ ಅಧ್ಯಕ್ಷತೆಯಲ್ಲಿ ಸಂಗೀತಕ್ಕೆ ಹೆಚ್ಚು ಪ್ರೋತ್ಸಾಹ ನೀಡುತ್ತಿತ್ತು. ಶ್ರೀ ರಾಘವೇಂದ್ರ ಸಂಗೀತ ಸಭಾದ ದಕ್ಷತೆಗೆ ಕಾರಣರಾದವರು ಸಂಸ್ಥಾಪಕರಾದ ಶ್ರೀ ವಾಸುದೇವ ಮೂರ್ತಿಗಳು ಮತ್ತು ಶ್ರೀಮತಿ ವತ್ಸಲಾ ರಂಗರಾಜ್. ಅಧ್ಯಕ್ಷರಾಗಿ ಶ್ರೀಮತಿ ಸ್ವರ್ಣಲತಾ ಜ್ಯೋತಿಪ್ರಕಾಶ್ ಸೇವೆ ಸಲ್ಲಿಸುತ್ತಿದ್ದಾರೆ. ಕಾರ್ಯದರ್ಶಿ ಶ್ರೀಮತಿ ಸುಧಾಪ್ರಸಾದ್, ಇಲ್ಲಿ ಪ್ರತೀ ತಿಂಗಳು ಬಾಲಪ್ರತಿಭೆಗೆ ಅವಕಾಶ ನೀಡುತ್ತಾರೆ ಮತ್ತು ಕಾರ್ಯಾಗಾರಗಳು ನಡೆಯುತ್ತವೆ. ವರ್ಷಕ್ಕೊಮ್ಮೆ ಹಿರಿಯ, ಕಿರಿಯ ಸಂಗೀತ ವಿದ್ವಾಂಸರ ಕಛೇರಿ ಏರ್ಪಡಿಸಲಾಗುತ್ತದೆ. ಹೆಚ್ಚು ಸಂಖ್ಯೆಯಲ್ಲಿರುವ ಮಹಿಳಾ ಸದಸ್ಯರು ಇದನ್ನು ಆದರ್ಶಪ್ರಾಯವಾಗಿ ನಡೆಸುತ್ತಿದ್ದಾರೆ.

## ನೃತ್ಯ

ಈ ದೇಶದಲ್ಲಿರುವ ಪ್ರಾಚೀನ ಕಲೆಗಳಲ್ಲಿ ನೃತ್ಯ ಒಂದು. ಭಾಷೆ ಬರುವುದಕ್ಕೆ ಮುನ್ನ ಮಾನವ ತನ್ನ ಎಲ್ಲಾ ಆಸೆ ಆಕಾಂಕ್ಷೆಗಳನ್ನು, ಭಾವನೆಗಳನ್ನು ತನ್ನ ಅಂಗಾಂಗಗಳ ಚಲನೆಯ ಮೂಲಕ ವ್ಯಕ್ತಪಡಿಸುತ್ತಿದ್ದ. ತನಗಾದ ಸಂತೋಷವನ್ನು ನರ್ತನದ ಮೂಲಕ ತಿಳಿಸುತ್ತಿದ್ದನು. ಈಗಲೂ ನಾವು ಸಂತೋಷಕ್ಕೆ "ಕುಣಿದು ಕುಪ್ಪಳಿಸುತ್ತೇವೆ" ಎಂದಾಗ ಸಹಜವಾಗಿ ನರ್ತಿಸುವ ಹುಟ್ಟುಗುಣವನ್ನು ವ್ಯಕ್ತಪಡಿಸುತ್ತೇವೆ. ಅಂತಃಕರಣವನ್ನು ಪ್ರಚೋದಿಸುವ ನೃತ್ಯ, ಧಾರ್ಮಿಕ ನೆಲೆಯನ್ನು ಹೊಂದಿದೆ. ಇಲ್ಲಿರುವ ಹಲವಾರು ನೃತ್ಯ ಸಂಪ್ರದಾಯಗಳಲ್ಲಿ ಭರತನಾಟ್ಯ ಪ್ರಮುಖವಾದುದು. ಇಡೀ ಭರತಖಂಡದಲ್ಲಿ ಮಾತ್ರವಲ್ಲ ಪ್ರಪಂಚದಲ್ಲೇ ಒಂದು ಶ್ರೇಷ್ಠವಾದ ಲಲಿತಕಲೆ. ಈ ಕಲೆಗೆ ಪ್ರಾಚೀನ ಕಾಲದಲ್ಲಿ ಅತಿಶಯ ಪ್ರೋತ್ಸಾಹ ಇತ್ತು ಎಂಬುದನ್ನು ನಾವು ಅಮೂಲ್ಯ ಗ್ರಂಥಗಳಿಂದ ತಿಳಿಯುತ್ತೇವೆ. ನಮ್ಮ ದೇಶದ ಅನೇಕಾನೇಕ ದೇವಾಲಯಗಳು ಅಂದರೆ ಬೇಲೂರು, ಹಳೇಬೀಡು ಮುಂತಾದ ಕಡೆಯ ಶಿಲ್ಪಭಂಗಿಗಳಲ್ಲಿ (ಮುಖ್ಯವಾಗಿ ನಟರಾಜ) ನೃತ್ಯಕಲೆಯ ರೂಪವನ್ನು ನೋಡಬಹುದು. ಬ್ರಿಟಿಷರ ಕಾಲದಲ್ಲಿ ಸ್ವಲ್ಪಮಟ್ಟಿಗೆ ತನ್ನ ಪ್ರಾಮುಖ್ಯ ಕಳೆದುಕೊಂಡಿದ್ದರೂ ರುಕ್ಮಿಣಿದೇವಿ ಅರುಂಡೇಲ್ ಅವರ ಪರಿಶ್ರಮದಿಂದ ೨೦ನೇ ಶತಮಾನದಲ್ಲಿ ಪುನರ್ಜನ್ಮ ಪಡೆಯಿತು. ಮೊದಲಿಗೆ ಸುಮಾರು ೪೫ ವರ್ಷಗಳ ಹಿಂದೆ **ಭೋಜರಾಜ ಬೋಳಾರ್** ಅವರು ನೃತ್ಯಶಾಲೆಯನ್ನು ತೆರೆದು ಸುಮಾರು ೧೫ ವಿದ್ಯಾರ್ಥಿಗಳಿಗೆ ತರಬೇತಿ ನೀಡಿದ್ದರು. ೧೯೬೦ರ ಮೇಲೆ ಈ ಕಲೆಗೆ ಜಿಲ್ಲೆಯಲ್ಲಿ ಪ್ರಾಶಸ್ತ್ಯ ದೊರಕಿತು.

**ಕೆ.ಎಂ.ರಾಮನ್:** ತುಮಕೂರು ನಗರದಲ್ಲಿ ಭರತನಾಟ್ಯಕ್ಕೆ ಹೆಸರಾದ ಕೆ.ಎಂ.ರಾಮನ್. ಕೇರಳ ರಾಜ್ಯದ ನೀಲೇಶ್ವರಂನಲ್ಲಿ ೧೯೩೨ರಲ್ಲಿ ಜನಿಸಿ ತಮ್ಮ ಒಂಬತ್ತನೇ ವಯಸ್ಸಿನಲ್ಲೇ ಭರತನಾಟ್ಯ ಕಲೆಗಾಗಿ ಕರ್ನಾಟಕ ಸೇರಿ, ಮೈಸೂರಿನ ಹೆಸರಾಂತ ನೃತ್ಯಪಟು ರಾಜಗೋಪಾಲ್ ಬಳಿ ಕಥಕ್ಕಳಿ ನೃತ್ಯ ಅಭ್ಯಾಸ ಮಾಡಿದ ಮೇಲೆ ಬೆಂಗಳೂರಿನ ವಿಶ್ವಮಾನ್ಯ ನೃತ್ಯಪಟು ಯು. ಎಸ್.ಕೃಷ್ಣರಾವ್ ಮತ್ತು ಚಂದ್ರಭಾಗಾದೇವಿ ದಂಪತಿ ಬಳಿ ಪಂದನಲ್ಲೂರ್ ಶೈಲಿಯ ಭರತನಾಟ್ಯ ಅಭ್ಯಾಸ ಮಾಡಿದರು. ಮೊದಲಿಗೆ ಗುಬ್ಬಿ ಕಂಪನಿಯಲ್ಲಿ ನೃತ್ಯ ಕಲಾವಿದರಾಗಿ, ನೃತ್ಯ ಸಂಯೋಜಕರಾಗಿದ್ದು, ಜೊತೆ ಜೊತೆಗೆ ನಾಟಕಗಳಲ್ಲಿ ನೃತ್ಯ ಪ್ರದರ್ಶನ ನೀಡುತ್ತಿದ್ದರು. ೧೯೬೨ರಲ್ಲಿ 'ಶ್ರೀ ರಾಜ ರಾಜೇಶ್ವರಿ ಕಲಾಮಂದಿರ'ವನ್ನು ತುಮಕೂರಿನಲ್ಲಿ ಸ್ಥಾಪಿಸಿದರು. ಕಲಾತಪಸ್ವಿ ರಾಮನ್ ಸುಮಾರು ೪೯ ವರ್ಷಗಳ ಸತತ ಪರಿಶ್ರಮದಿಂದ ಸಾವಿರಾರು ಶಿಷ್ಯರನ್ನು ತಯಾರು ಮಾಡಿ ದೇಶ ವಿದೇಶಗಳಲ್ಲಿ ಕಾರ್ಯಕ್ರಮಗಳನ್ನು ನೀಡಿದವರು. ಸಿನಿಮಾ ತಾರೆಯರಾದ ಮಂಜುಳಾ, ರೂಪ ಚಕ್ರವರ್ತಿ, ನಳಿನ ಮೂರ್ತಿ, ತಾರ,

ವೈಜಯಂತಿ ಕಾಶಿ ಮುಂತಾದವರು ಇವರ ಶಿಷ್ಯವರ್ಗದಲ್ಲಿದ್ದರು. 'ನಾಟ್ಯಾಚಾರ್ಯ ಕೆ.ಎಂ.ರಾಮನ್ ಕಲಾಕ್ಷೇತ್ರ' ವನ್ನು ಪ್ರಾರಂಭಿಸಿ, ಚಿಗುರು ಮಾಸಿಕ ಕಾಯಕ್ರಮವನ್ನು ಪ್ರಾರಂಭಿಸಿದೆ, ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಉಚಿತವಾಗಿ ನೃತ್ಯ ಕಲಿಸಲಾಗುತ್ತಿದೆ. ಇವರಲ್ಲಿ ಉತ್ತಮ ಶಿಕ್ಷಣ ಪಡೆದು ದೇಶದಾದ್ಯಂತ ನೃತ್ಯ ಪ್ರದರ್ಶನ ಪ್ರಶಂಸೆ ಗಳಿಸಿದವರಿದ್ದಾರೆ. ನ್ಯೂಯಾರ್ಕ್, ಅಮೆರಿಕಾ, ಕೆನಡಾ, ಆಸ್ಟ್ರೇಲಿಯಾ, ಲಂಡನ್, ವಾಷಿಂಗ್ಟನ್, ಚಿಕಾಗೋ, ನ್ಯೂಜೆರ್ಸಿಗಳಲ್ಲಿ ಇವರ ಅನೇಕ ಶಿಷ್ಯರು ನೃತ್ಯ ಪ್ರದರ್ಶನ ನೀಡಿ ಖ್ಯಾತಿ ಪಡೆದಿದ್ದಾರೆ. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯಿಂದ "ನೃತ್ಯ ಮತ್ತು ನಟುವಾಂಗ ಅಭ್ಯಾಸಕ್ಕಾಗಿ ಶಿಷ್ಯವೇತನ ಹಾಗೂ ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಸಂಸ್ಕೃತಿ ಕೇಂದ್ರದಿಂದ "ಯಂಗ್ ಡ್ಯಾನ್ಸರ್ ಫೆಲೋಶಿಪ್ ಮತ್ತು "ಅವಾರ್ಡ್ ಫೆಲೋಶಿಪ್" ಗಳನ್ನು ವಿದ್ಯಾರ್ಥಿಗಳು ಪಡೆಯುತ್ತಿದ್ದಾರೆ. ಈ ಕಲಾಮಂದಿರ ಇತ್ತೀಚಿಗೆ ಚಿನ್ನದ ಹಬ್ಬ ಆಚರಿಸಿದೆ. ಶಾಸ್ತ್ರೀಯ ಭರತನಾಟ್ಯದೊಂದಿಗೆ, ಜಾನಪದ ನೃತ್ಯಗಳೂ ದೂರದರ್ಶನದಲ್ಲಿ ಮೂಡಿಬಂದಿವೆ. ಸುಮಾರು ೩೦ ಸಹಸ್ರಕ್ಕೂ ಹೆಚ್ಚು ನೃತ್ಯ ಕಾರ್ಯಕ್ರಮಗಳನ್ನು ಭಾರತದಾದ್ಯಂತ ನೀಡಿ ಜನಮನ್ನಣೆ ಗಳಿಸಿ, ಅಪಾರ ಯುವ ಕಲಾಭಿಮಾನಿ ಬಳಗವನ್ನು ಸಂಪಾದಿಸಿದ್ದಾರೆ. ಹೊರ ರಾಜ್ಯಗಳಾದ ದೆಹಲಿ, ಗುಜರಾತ್, ಆಂಧ್ರಪ್ರದೇಶ, ಕೇರಳ ಮತ್ತು ತಮಿಳುನಾಡಿನಲ್ಲಿ ಉನ್ನತಮಟ್ಟದ ಕಾರ್ಯಕ್ರಮ ನೀಡಿರುತ್ತಾರೆ. ಶ್ರೀ ಸಿದ್ಧಗಂಗಾ ಮಠದಿಂದ ಪ್ರಶಸ್ತಿ (೧೯೬೩), ವೀರಸಿಂಹಾಸನ ಮಹಾಸಂಸ್ಥಾನ ಮಠದಿಂದ "ನಾಟ್ಯ ಕಲಾಪ್ರವೀಣ" ಎಂಬ (೧೯೬೭) ಬಿರುದು, ತುಮಕೂರು ಕನ್ನಡ ರಾಜ್ಯೋತ್ಸವ ಸಮಿತಿ  ಸನ್ಮಾನ (೧೯೭೧), ರಾಜಕುಮಾರ್ ಕನ್ನಡಾಭಿಮಾನಿಗಳ ಸಂಘ, ಜಿಲ್ಲಾ ಪರಿಷತ್ ತುಮಕೂರು ಇವರಿಂದ 'ಉತ್ತಮ ನಾಟ್ಯಾಚಾರ್ಯ ೧೯೮೫ ಬಿರುದು, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಪುರಸ್ಕಾರ ಹಾಗೂ ಸನ್ಮಾನ ೧೯೮೬ ಶಿವಮೊಗ್ಗದಲ್ಲಿ ೧೯೯೩-೯೪ನೇ ಸಾಲಿನಲ್ಲಿ ಸಂಗೀತ ನೃತ್ಯ ಅಕಾಡೆಮಿಯಿಂದ "ಕರ್ನಾಟಕ ಕಲಾ ತಿಲಕ" ಬಿರುದು, ಪ್ರಶಸ್ತಿಪತ್ರ, ೧೯೯೮ನೇ ಸಾಲಿನಲ್ಲಿ ಕರ್ನಾಟಕ ಸರ್ಕಾರದಿಂದ "ರಾಜ್ಯೋತ್ಸವ ಪ್ರಶಸ್ತಿ ಮುಂತಾದವು ದೊರೆತಿವೆ. ಇವರ ಹುಟ್ಟೂರಾದ ಕೇರಳದ ನೀಲೇಶ್ವರಂನಲ್ಲಿ ಸಿಟಿಜನ್ ಗ್ರೂಪಿನವರು ಇವರನ್ನು ಆಹ್ವಾನಿಸಿ ಕೆಂಪು ಮೊಟ್ಟು ಹೊದಿಸಿ ಚಿನ್ನದ ಬಳೆ ತೊಡಿಸಿ 'ನಾಟ್ಯ ಶ್ರೀ ಎಂಬ ಬಿರುದು ನೀಡಿ ಸನ್ಮಾನಿಸಿದ್ದಾರೆ.

ಇವರ ಪುತ್ರಿಯರಾದ **ಸತ್ಯವತಿ ಮತ್ತು ಗುಣವತಿ,** ತುಮಕೂರು ಸಹೋದರಿಯರೆಂದೇ ಹೆಸರುವಾಸಿಯಾಗಿ ಭರತನಾಟ್ಯ ಕಲೆಯ ಅಭಿವೃದ್ಧಿಗಾಗಿ ಪರಿಶ್ರಮಿಸುತ್ತಿದ್ದಾರೆ. ೨೦೦೨ರಲ್ಲಿ, 'ಸಿಂಗಪುರ್ ಕನ್ನಡ ಸಂಘ ಏರ್ಪಡಿಸಿದ್ದ ಏಳನೇ ವಿಶ್ವ ಕನ್ನಡ ಸಮ್ಮೇಳನದಲ್ಲಿ ಇವರಿಗೆ ವಿಶ್ವಕನ್ನಡ ರಾಜ್ಯೋತ್ಸವ ಪ್ರಶಸ್ತಿ ಸಂದಿದೆ. ಗುಣವತಿ ಪ್ರಭಾಕರ್ ಅವರು ಭರತನಾಟ್ಯದಲ್ಲಿ ವಿದ್ವತ್ ಪದವಿ ಗಳಿಸಿ ೩೦ ವರ್ಷದಿಂದ ಕಾರ್ಯಕ್ರಮ ನೀಡುತ್ತಿದ್ದಾರೆ. ಸತ್ಯವತಿ ಸುರೇಶ್ ಕೂಡ ತಂದೆಯವರಲ್ಲಿ ನೃತ್ಯಾಭ್ಯಾಸ ಮಾಡಿ ಸಾವಿರಾರು ಕಾರ್ಯಕ್ರಮ ನೀಡಿದ್ದಾರೆ. ಕನ್ನಡ ಸಂಸ್ಕೃತಿ ಇಲಾಖೆ, ಸಂಗೀತ ನೃತ್ಯ ಅಕಾಡೆಮಿ, ಕರ್ನಾಟಕ ನೃತ್ಯಕಲಾ ಪರಿಷತ್, ಮೈಸೂರು ದಸರಾ, ದೂರದರ್ಶನ, ಕೇರಳ, ಆಂಧ್ರ, ತಮಿಳುನಾಡು, ದೆಹಲಿ ಮುಂತಾದೆಡೆ ಕಾರ್ಯಕ್ರಮ ನೀಡಿದ್ದಾರೆ. ಅನೇಕ ಪ್ರಶಸ್ತಿ, ಗೌರವ ಸನ್ಮಾನಗಳೂ ದೊರೆಕಿವೆ. ಇವರ ಇಬ್ಬರು ಪುತ್ರರಾದ ವಿದ್ವಾನ್ ಹರೀಶ್ ಮತ್ತು ವಿದ್ವಾನ್ ಗಿರೀಶ್ ರಾಮನ್, ತುಮಕೂರು ಸೋದರರರೆಂದೇ ಪ್ರಸಿದ್ಧರಾಗಿ ದೇಶದಾದ್ಯಂತ ಉತ್ತಮ ಕಾರ್ಯಕ್ರಮಗಳನ್ನು ನೀಡುತ್ತಾ ಕಲಾಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ.

**ಬಾಲಾ ವಿಶ್ವನಾಥ್ ಕೇದಾರ್**: ವೃತ್ತಿಯಲ್ಲಿ ಆಂಗ್ಲಭಾಷಾ ಪ್ರಾಧ್ಯಾಪಕರಾಗಿದ್ದರೂ ಹವ್ಯಾಸಿ ನೃತ್ಯಪಟು ಹಾಗೂ ನೃತ್ಯ ತರಬೇತುದಾರರು. ಇವರು 'ಶೃತಿ-ಲಯ ಕೇಂದ್ರ ನಟರಾಜಾಲಯದ ನಿರ್ದೇಶಕಿ. ರಾಜೇಶ್ವರಿ, ಸಾಯಿನಾಥ್ ಹಾಗೂ ಮೃದಂಗ ವಿದ್ವಾನ್ ಕಾರೈಕುಡಿ ಆರ್.ಮಣಿ ಯವರ ಶಿಷ್ಯತ್ವ ಹೊಂದಿ ೨೦ ವರ್ಷಗಳ ಪರಿಶ್ರಮ ಪಡೆದಿದ್ದಾರೆ. ಇವರು ಮದ್ರಾಸ್ ಮ್ಯೂಸಿಕ್ ಅಕಾಡೆಮಿ, ಮೈಲಾಪುರ್ ಫೈನ್ ಆರ್ಟ್ಸ್, ಚೆನ್ನೈ, ಮುಂಬಯಿ, ತ್ಯಾಗರಾಜ ಗಾನಸಭಾ, ಕಲಾಸಾಗರಂ, ಹೈದ್ರಾಬಾದ್, ಆಂಧ್ರಭವನ್, ನವದೆಹಲಿ, ನಾಗಪುರ, ಒರಿಸ್ಸಾ, ಮೈಸೂರಿನ ನಾದಮಂಟಪಂ, ತುಮಕೂರು ಜಿಲ್ಲಾ ಉತ್ಸವ, ಜಾನಪದ ಜಾತ್ರೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ನಡೆದ ಸಾಂಸ್ಕೃತಿಕ ಸೌರಭ, ಇಂಟರ್ನ್ಯಾಷನಲ್ ಟೂರಿಸಂ ಫೆಸ್ಟಿವಲ್, ಜೇಂಕಾರ್ ಉತ್ಸವ, ದಾವಣಗೆರೆ ಉತ್ಸವ ಮುಂತಾದೆಡೆ ಹಲವಾರು ಕಾರ್ಯಕ್ರಮಗಳನ್ನು ನೀಡಿದ್ದಾರೆ. ೧೯೯೨ರಲ್ಲಿ ಬ್ರೆಜಿಲ್ ನಲ್ಲಿ ನಡೆದ 'ಇಂಡಿಯಾ ಎಕ್ಸ್‌ಪೋದಲ್ಲಿ ಕಾರ್ಯಕ್ರಮ ನೀಡಿದ ಹೆಗ್ಗಳಿಕೆ ಇವರದು.

'ನೀಲಾಲಯ ಎಂಬ ನೃತ್ಯಕೇಂದ್ರವನ್ನು ನಡೆಸುತ್ತಿದ್ದು, ನೂರಾರು ಮಕ್ಕಳು, ನೃತ್ಯ ಶಿಕ್ಷಣ ಪಡೆದು ನಾನಾ ಕಡೆ ಕಾರ್ಯಕ್ರಮ ನೀಡಿದ್ದಾರೆ. ಕನಕದಾಸ ಹಾಗೂ ವಾದಿರಾಜರ ರಚನೆಗಳನ್ನು ಬಳಸಿಕೊಂದು 'ದಶಾವತಾರ' ನೃತ್ಯ ರೂಪಕ

ನಿರ್ದೇಶಿಸಿದ್ದು, 'ಭಜರೇ ಗೋಪಾಲಂ' ನೃತ್ಯರೂಪಕ, ಮೇಘನಾಟ್ಯ, ನವದುರ್ಗ ವೈಭವ, ಮುಂತಾದವು ಇವರ ಗಮನಾರ್ಹ ಪ್ರದರ್ಶನಗಳಾಗಿವೆ. 'ಶಂಕರ' ದೂರದರ್ಶನ ಚಾನಲ್‌ನಲ್ಲಿ ನೀಲಾಲಯದ ಮಕ್ಕಳು ಹಲವಾರು ಬಾರಿ ಬಹುಮಾನ ಗಳಿಸಿರುವರು.

**ನವೀನ್ ಹೆಚ್.ಆರ್:** 'ತ್ರಿನೇತ್ರ ಸ್ಕೂಲ್ ಆಫ್ ಡ್ಯಾನ್ಸ್' ನೃತ್ಯಶಾಲೆ ನಡೆಸುತ್ತಿರುವ ಇವರು ನೃತ್ಯ ಸಂಯೋಜಕರು. ಈಗಾಗಲೇ ಹಲವಾರು ಪ್ರತಿಷ್ಠಿತ ಪ್ರಶಸ್ತಿಗಳನ್ನು ಪಡೆದುಕೊಂಡಿರುವ ಇವರು ಸಂಘ ಸಂಸ್ಥೆಗಳಲ್ಲಿ ಕ್ರಿಯಾಶೀಲವಾಗಿದ್ದು, ಇವರಲ್ಲಿ ನೂರಾರು ವಿದ್ಯಾರ್ಥಿಗಳು ತರಬೇತಿ ಪಡೆದು ಖ್ಯಾತ ನೃತ್ಯ ಪಟುಗಳಾಗಿದ್ದಾರೆ.

**ಸ್ಕಂಧಕುಮಾರ್:** ಇವರು ಹಾಗೂ ಇವರ ಪತ್ನಿ, 'ಶ್ರೀ ಅಯ್ಯಪ್ಪ ಫೌಂಡೇಶನ್' ಸ್ಥಾಪಿಸಿ ನಡೆಸುತ್ತಿರುವ 'ದಿ ಸ್ಕೂಲ್ ಆಫ್ ಡ್ಯಾನ್ಸ್' ಮೂಲಕ ೧೯೯೪ರಿಂದ ಅನೇಕ ನೃತ್ಯಪಟುಗಳನ್ನು ಸಿದ್ಧಗೊಳಿಸಿರುವುದಲ್ಲದೇ ರಾಜ್ಯಮಟ್ಟದ ನೃತ್ಯ ಅಕಾಡೆಮಿಯಿಂದ ಸ್ಪರ್ಧೆ, ಪ್ರದರ್ಶನ ಮತ್ತು 'ಫ್ಯಾಶನ್ ಫೋಟೋಶೂಟ್ ಮುಂತಾದ ಚಟುವಟಿಕೆ ನಡೆಸುತ್ತಿದ್ದಾರೆ.

**ಲಲಿತಾರಾಜ್ ಆರ್**: ತಿಪಟೂರಿನ ಇವರು ಕೊಯಮತ್ತೂರು, ಚನ್ನೈಗಳಲ್ಲಿ ಶಿಕ್ಷಣ ಪಡೆದು ೧೯೮೦ರಲ್ಲಿ ತಿಪಟೂರಿನಲ್ಲಿ 'ಲಲಿತ ಕಲಾ ವೃಂದ ಎಂಬ ಭರತನಾಟ್ಯ ಶಾಲೆಯನ್ನು ಪ್ರಾರಂಭಿಸಿ, ನೃತ್ಯ, ಸಂಗೀತ ಕಲಿಸುತ್ತಿದ್ದಾರೆ. ಅನೇಕ ನಾಟಕಗಳಿಗೆ ಹಿನ್ನೆಲೆ ಗಾಯನ ಒದಗಿಸಿದ್ದಾರೆ.

**ಲತಾ ಮುರಳಿ ಮೋಹನ್**: ಇವರು ಗುಬ್ಬಿ ವೀರಣ್ಣನವರ ಪುತ್ರಿ. ಭರತನಾಟ್ಯ ಹಾಗೂ ಕೂಚಿಪುಡಿ ನೃತ್ಯದಲ್ಲಿ ಪರಿಣಿತರು. ವಿದೇಶಿ ಗಣ್ಯರ ಗೌರವಾರ್ಥದ ಸಮಾರಂಭಗಳಲ್ಲಿ, ಮೈಸೂರು ದಸರಾ, ಚಲನಚಿತ್ರಗಳಲ್ಲಿ ಭಾಗವಹಿಸಿದ್ದಾರೆ. 'ನಾಟ್ಯಮಯೂ ಬಿರುದಾಂಕಿತರು.

## ಗಮಕ ಕಲೆ

ಮಾನವನ ಮನಸ್ಸಿಗೆ ಸಾಂತ್ವನ ನೀಡಿ ಆನಂದದ ಸೀಮೆಗೊಯ್ಯುವಂತಹ ಅರವತ್ತನಾಲ್ಕು ವಿದ್ಯೆಗಳಲ್ಲಿ ಗಮಕವೂ ಒಂದು ಅತ್ಯಂತ ಪ್ರಾಚೀನ ಕಲೆ. ಆದಿಕವಿ ವಾಲ್ಮೀಕಿಯ ಮನೋಭೂಮಿಕೆಯಿಂದ ಹೊರಬಂದ ರಾಮಾಯಣ ಕಾವ್ಯವನ್ನು ವಾಣಿಯೇ ಮೈವೆತ್ತು ಬಂದಂತೆ ರಾಗರಸದಲ್ಲಿ ಹೊರಹೊಮ್ಮಿಸಿದ ಲವಕುಶರೇ ಆದಿಗಮಕಿಗಳು, ಕವಿಯ ಹೃದಯಾಂತರಾಳದಿಂದ ಗರಿಗೆದರಿ ಬಂದ ಭಾವನೆಗಳನ್ನು ಶ್ರೋತೃಗಳಿಗೆ ಮುಟ್ಟಿಸುವ ಗಾರುಡಿಗ ಗಮಕಿ. ಕುವೆಂಪುರವರ ಅಭಿಪ್ರಾಯದಂತೆ ಕವಿ ಹಾಗೂ ಗಮಕಿ ಇಬ್ಬರು ಶಾರದೆಯ ಎರಡು ಮುಖಗಳು, ಕಾವ್ಯ ಪ್ರಸಾರಕ್ಕೆ ಸಮರ್ಥ ಮಾಧ್ಯಮ ಗಮಕ ಮತ್ತು ಗಮಕಿ. ಮಹಾಕಾವ್ಯಗಳು ಸಾಮಾನ್ಯರೊಂದಿಗೆ ಅನಕ್ಷರಸ್ಥರಿಗೂ ತಲುಪುವುದು ಗಮಕಿಯ ಮೂಲಕ. ಗಮಕಕಲೆ ತನ್ನ ಕಾಂತಿಯನ್ನು ಕಳೆದುಕೊಳ್ಳದೆ ನಿಧಾನಗತಿಯಲ್ಲಿ ಚಲಿಸುತ್ತಿದ್ದು, ಕವಿಗಳನೇಕರು ಗಮಕಿಗಳೂ ಆಗಿದ್ದರು. ಹೀಗೆ ಕರ್ನಾಟಕದಲ್ಲಿ ಗಮಕ ಕಲೆ ತನ್ನ ವೈಶಿಷ್ಟ್ಯತೆಯನ್ನು ಉಳಿಸಿಕೊಂಡು ಬಂದಿದ್ದು, ತುಮಕೂರು ಜಿಲ್ಲೆಯಲ್ಲಿ ಸಾಧನೆಯ ಹಾದಿಯಲ್ಲಿರುವ ಗಮಕ ಕಲೆಯು ತನ್ನ ಮಹತ್ವವನ್ನು ಉಳಿಸಿಕೊಂಡು ಕರ್ನಾಟಕ ಗಮಕ ಕಲಾಲೋಕಕ್ಕೆ ಅಪೂರ್ವ ಕೊಡುಗೆಯನ್ನು ನೀಡುತ್ತಿದೆ. ಕನ್ನಡ ಸಾಹಿತ್ಯದ ಪದ್ಯಗಳನ್ನು ರಾಗಗಳಲ್ಲಿ ಅಳವಡಿಸಿ ರಸಭಾವನೆಯನ್ನು ವ್ಯಕ್ತಪಡಿಸುವುದು ಗಮಕ. ಸಂಗೀತದ ಅವಿಭಾಜ್ಯ ಅಂಗವಾದ ಗಮಕ ಕಲೆಯ ಬೀಜವನ್ನು ತುಮಕೂರಿನಲ್ಲಿ ಬಿತ್ತಿದ್ದು ಎಲ್.ಸಿದ್ಧಗಂಗದೇವರು. ಮೂರೂವರೆ ದಶಕಗಳ ಹಿಂದೆ ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ (೧೯೭೩) ಪ್ರಪ್ರಥಮವಾಗಿ ಎಂಪ್ರೆಸ್ ಬಾಲಿಕಾ ಪ್ರೌಢಶಾಲೆಯಲ್ಲಿ ಗಮಕಿ ಎಲ್.ಸಿದ್ಧಗಂಗದೇವರು ಗಮಕ ಪ್ರಥಮ ಮತ್ತು ಗಮಕ ಪ್ರೌಢತರಗತಿಗಳನ್ನು ಆರಂಭಿಸಿದರು. ಅವರಿಂದ ತರಬೇತಿ ಪಡೆದ ಶಿಷ್ಯರು ಜಿಲ್ಲೆಯ ತುಮಕೂರು ತಿಪಟೂರು, ಕುಣಿಗಲ್, ಗುಬ್ಬಿ, ಅಳಲುಘಟ್ಟ ಮುಂತಾದ ಕಡೆ ಹಲವು ವರ್ಷ ಗಮಕ ತರಗತಿಗಳನ್ನು ನಡೆಸಿದ್ದಾರೆ.

ಈ ಕಲೆಗೆ ಪ್ರಾಶಸ್ತ್ಯ ನೀಡಿರುವ ಇತರರರಲ್ಲಿ ಶ್ರೀಮತಿ ಕುಸುಮಾಮೂರ್ತಿ, ಬಿ.ಜಿ.ಸರೋಜ, ಪರಮೇಶ್ವರರಾವ್, ಪಿ.ಕೆ.ದ್ವಾರಕಾನಾಥ್ ಮುಖ್ಯರಾದವರು. ಎಲ್.ಸಿದ್ಧಗಂಗದೇವರು ಸ್ಥಾಪಿಸಿದ 'ಗಮಕ ಕಲಾ ಪರಿಷತ್ತು' ಇಂದು ಈ ಕಲೆಯ ಬೆಳವಣಿಗೆಗೆ ಕಾರಣವಾಗಿದೆ. ತುಮಕೂರು ಸುನಂದರವರು ಕಳೆದ ಮೂವತ್ತು ವರ್ಷಗಳಿಂದ ಗಮಕ ಕಲೆಯ ಜೊತೆಗೆ ಸಂಗೀತಾಭ್ಯಾಸವನ್ನು ಮಾಡಿ ಎರಡೂ ಕ್ಷೇತ್ರಗಳ ಏಳಿಗೆಗೆ ಅವಿರತವಾಗಿ ದುಡಿದಿದ್ದಾರೆ. ಸಂಗೀತ ಅಧ್ಯಯನ ನಡೆಸಿದ ಅನೇಕ ಕಾರ್ಯಾಗಾರಗಳಲ್ಲಿ ಭಾಗವಹಿಸಿ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಪ್ರಸ್ತುತ ಗಮಕ ಕಲೆಯ ಮುನ್ನಡೆಗೆ ಇಲ್ಲಿನ ಗಮಕಿಗಳು, ಅಭಿಮಾನಿಗಳು ಆಸಕ್ತಿ ತೋರುತ್ತಿದ್ದು, ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ೧೯೮೨ರವರೆಗೂ ಗಮಕ ಕಲಾ ತರಗತಿಗಳನ್ನು ನಡೆಸಿ ಗಮಕಿಗಳನ್ನು ಸಿದ್ಧಪಡಿಸಲಾಯ್ತು. ಅದೇ ವರ್ಷದಲ್ಲಿ ಕರ್ನಾಟಕದ ಗಮಕಿಗಳು, ಗಮಕ ಕಲಾಭಿಮಾನಿಗಳು ಗೊರೂರು ರಾಮಸ್ವಾಮಿ ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಅಕ್ಟೋಬರ್ ಎರಡರ ಗಾಂಧಿಜಯಂತಿಯಂದು ಜಿ.ನಾರಾಯಣ ಅವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿ ಎಂ.ರಾಘವೇಂದ್ರರಾಯರ ನೇತೃತ್ವದಲ್ಲಿ ಅಖಿಲ ಕರ್ನಾಟಕ ಗಮಕ ಕಲಾ ಪರಿಷತ್ತು ಪ್ರಾರಂಭಿಸಿದರು. ತುಮಕೂರಿನಲ್ಲಿ ೧೯೮೩ರಲ್ಲಿ ಜಿಲ್ಲಾ ಗಮಕ ಸಮಿತಿ ರಚನೆಯಾಗಿ ಎಚ್.ಶೇಷಾದ್ರಿ, ಎಲ್.ಸಿದ್ಧಲಿಂಗದೇವರು ಅದರ ನೇತೃತ್ವವನ್ನು ವಹಿಸಿಕೊಂಡರು. ಅಲ್ಲಿಂದ ಸತತವಾಗಿ ಗಮಕ ಕಲಾ ಪ್ರಚಾರದಲ್ಲಿ ಹಲವಾರು ಯೋಜನೆಗಳ ಅಡಿಯಲ್ಲಿ ಇಲ್ಲಿನ ಗಮಕ ಸಮಿತಿ ಶ್ರದ್ಧೆಯಿಂದ ಕಾರ್ಯನಿರ್ವಹಿಸುತ್ತಿದೆ.

**ಗಮಕ ಕಲಾ ಪ್ರಚಾರ:** ೧೯೮೪ರಲ್ಲಿ ಇಲ್ಲಿನ ಸಾವಿತ್ರಮ್ಮ ಕಲ್ಯಾಣ ಮಂಟಪದಲ್ಲಿ ಅನಂತರಾಮಶೇಷ್ಟಿಯವರ ಅಧ್ಯಕ್ಷತೆಯಲ್ಲಿ ಮೊಟ್ಟಮೊದಲ ಅಖಿಲ ಕರ್ನಾಟಕ ಗಮಕ ಶಿಕ್ಷಣ ಶಿಬಿರ ನಡೆಸಿ ಸಾಫಲ್ಯ ಪಡೆದು ತೃಪ್ತರಾಗಿ ಹಿಂತಿರುಗಿದ ಶಿಕ್ಷಣಾರ್ಥಿಗಳು ಇಂದಿಗೂ ಅದನ್ನು ನೆನಪಿಸಿಕೊಳ್ಳುತ್ತಿದ್ದಾರೆ. ಎಚ್.ಶೇಷಾದ್ರಿ, ಆರ್.ಎಸ್. ಆರಾಧ್ಯ, ಎಚ್.ಆರ್. ಗುಂಡೂರಾವ್ ಕವಿತಾಕೃಷ್ಣ ಮುಂತಾದವರು ಇದರಲ್ಲಿ ಕೈಜೋಡಿಸಿದ್ದರು. ನಂತರ ನಗರದ ನಾನಾ ಬಡಾವಣೆಗಳಲ್ಲಿ ಹಾಗೂ ಸಿದ್ಧಗಂಗ ಹಿರಿಯ ಪ್ರಾಥಮಿಕ ಶಾಲೆ, ಬಸವೇಶ್ವರ ಪ್ರೌಢಶಾಲೆಯಲ್ಲಿ ಕೆಲವಾರು ವರ್ಷಗಳು ಗಮಕ ತರಗತಿಗಳು ನಡೆದವು. ಇದೀಗ ಚೇತನಾ ವಿದ್ಯಾಸಂಸ್ಥೆ ಮತ್ತು ಎಂ.ಸಿ.ಕಾಲೋನಿಯ ಕುಮಾರವ್ಯಾಸ ಗಮಕ ಪಾಠಶಾಲೆಯಲ್ಲಿ ಗಮಕ ಪ್ರವೇಶ ಮತ್ತು ಗಮಕ ಕಾಜಾಣ, ಗಮಕ ಧಾರೀಣ, ದೇವರನಾಮ ತರಗತಿಗಳು ಮತ್ತು ಆರ್ಯನ್ ಪ್ರೌಢಶಾಲೆಯಲ್ಲೊಂದು ಗಮಕ ತರಗತಿ ನಡೆಯುತ್ತಿದೆ.

ಜಿಲ್ಲೆಯಲ್ಲಿ ೧೯೭೮ರಲ್ಲಿ ಮನೆಮನೆಯಲ್ಲೂ ಮಾಸಿಕ ಗಮಕ ಕಾರ್ಯಕ್ರಮ ಆರಂಭಿಸಿದ್ದು ಉಲ್ಲೇಖಾರ್ಹ, ಇದು ತಪ್ಪದೆ ಸುಮಾರು ೨೨ ವರ್ಷಗಳಿಂದ ನಡೆಯುತ್ತಾ ಬರುತ್ತಿರುವುದೊಂದು ಅದ್ಭುತ ಸಾಧನೆ. ೧೯೭೪ರಲ್ಲಿ ಶೇಷಾದ್ರಿಯವರ ನಾಯಕತ್ವದಲ್ಲಿ 'ಸರ್ವಜ್ಞ ಪದಗಳ ಕಂಠಪಾಠ' ಸ್ಪರ್ಧೆ ನಡೆಸಿದುದು ಒಂದು ವಿಶೇಷ. ಇದರೊಂದಿಗೆ ಕೆಲವು ವರ್ಷಗಳ ಹಿಂದೆ ಸಿದ್ಧಗಂಗಾ ವಿದ್ಯಾಸಂಸ್ಥೆಯ ಕನ್ನಡ ಅಧ್ಯಾಪಕರು ಮತ್ತು ಸರ್ಕಾರಿ ಪ್ರಾಥಮಿಕ ಕನ್ನಡ ಅಧ್ಯಾಪಕರಿಗೆ ಒಂದು ದಿನದ ಮತ್ತು ಮೂರು ದಿನಗಳ ಗಮಕ ಶಿಕ್ಷಣ ಶಿಬಿರ ಎಲ್.ಸಿದ್ಧಗಂಗದೇವರು ಅವರ ನೇತೃತ್ವದಲ್ಲಿ ನಡೆಸಲಾಯಿತು. ಗಮಕ ಸ್ಪರ್ಧೆಗಳನ್ನು ನಡೆಸುವುದು, ಗಮಕ ರೂಪಕಗಳನ್ನು ಪ್ರಸ್ತುತಪಡಿಸಿ ಈ ಕಲೆಯ ವೈವಿಧ್ಯತೆಯನ್ನು ಪ್ರದರ್ಶಿಸುವುದರಲ್ಲೂ ಇಲ್ಲಿನ ಗಮಕಿಗಳು ಯಶಸ್ವಿಯಾಗಿದ್ದಾರೆ. ಶಿಕ್ಷಣ ಪಡೆದ ಅನೇಕ ಶಿಷ್ಯರಲ್ಲಿ ಇಂದಿಗೂ ಗಮಕ ಪ್ರಚಾರದಲ್ಲಿ ತೊಡಗಿದ್ದಾರೆ. ದತ್ತಿನಿಧಿ ಗಮಕ ಕಾರ್ಯಕ್ರಮಗಳಲ್ಲದೇ, ಧಾರ್ಮಿಕ ಉತ್ಸವ ಕಾರ್ಯಗಳಲ್ಲಿ ಗಮಕ ಕಾರ್ಯಕ್ರಮಗಳು ನಡೆಯುತ್ತಿರುವುದು ತುಮಕೂರು ಜಿಲ್ಲಾ ಗಮಕ ಪರಿಷತ್ತು ಗಮಕಕಲೆಯ ನವೀಕರಣದಲ್ಲಿ ತೊಡಗಿರುವುದಕ್ಕೆ ಸಾಕ್ಷಿ. ಇತ್ತೀಚೆಗೆ ಅವರ 'ಗಮಕವಾಚನ–ವ್ಯಾಖ್ಯಾನ–ಚಿತ್ರರಚನೆ' ಕಾರ್ಯಕ್ರಮ ಈಗಾಗಲೇ ಜನಪ್ರಿಯತೆ ಪಡೆದಿರುವುದು ಶ್ಲಾಘನೀಯ. ಇದರ ಮುಖ್ಯ ರೂವಾರಿ ತುಮಕೂರು ಸುನಂದ. ಅಖಿಲ ಕರ್ನಾಟಕ ಗಮಕ ಕಲಾ ಪರಿಷತ್ತಿನ ಆದೇಶದ ಮೇರೆಗೆ ಜಿಲ್ಲಾ ಗಮಕ ಕಲಾ ಪರಿಷತ್ತು', 'ತುಮಕೂರು ಗಮಕ ಕಾವೇರಿ' ಎಂಬ ಯೋಜನೆಯಡಿಯಲ್ಲಿ ೧೯೯೮ರಲ್ಲಿ ತುಮಕೂರು ಜಿಲ್ಲೆಯ ಹತ್ತು ತಾಲೂಕು ಹಾಗೂ ಗ್ರಾಮಗಳಲ್ಲಿ ನೂರೆಂಟು ಗಮಕ ಕಾರ್ಯಕ್ರಮಗಳನ್ನು ನಡೆಸಿರುವುದಲ್ಲದೆ ೧೯೯೮–೯೯ರಲ್ಲಿ ಗ್ರಾಮಾಂತರ ಗಮಕ ಪ್ರಚಾರ ಕಾರ್ಯಕ್ರಮ ನಡೆಸಿ ಯಶಸ್ವಿಯಾಗಿದೆ.

## ಜಿಲ್ಲೆಯ ಗಮಕ ಕಲಾವಿದರು

**ಅರ್ಚಕ ರಂಗಧಾಮಯ್ಯ:** ಹೆಬ್ಬೂರು ಹೋಬಳಿಯ ಲಕ್ಕೇನಹಳ್ಳಿಯ ಇವರು ಶ್ರೀ ಸಿದ್ಧಗಂಗದೇವರು ಮತ್ತು ತುಮಕೂರು ಸುನಂದ ಅವರಲ್ಲಿ ಗಮಕ ವಿದ್ಯೆಯನ್ನು ಕಲಿತು ಅದರಲ್ಲಿ ಪದವಿಯನ್ನು ಪಡೆದಿದ್ದು, ಸಂಗೀತಾಭ್ಯಾಸವನ್ನು ಮಾಡಿ ಅನೇಕರಿಗೆ ಗಮಕವನ್ನು ಕಲಿಸಿದ್ದಾರೆ. ಇವರು ಸಂಗೀತ ವಿದ್ವಾಂಸರು ಕೂಡ. ಜ್ಯೋತಿಷ್ಯವನ್ನೂ ಬಲ್ಲವರು. ಪಿಟೀಲು ವಾದಕರೂ, ಹರಿಕಥಾ ವಿದ್ವಾನ್, ಹಾರ್ಮೋನಿಯಂ ವಾದಕರು, ಆಕಾಶವಾಣಿ, ದೂರದರ್ಶನಗಳಲ್ಲಿ ಭಾಗವಹಿಸಿದ್ದರು. ಹಲವಾರು ನಾಟಕಗಳಲ್ಲಿ ರಾಮ ಹಾಗೂ ದಶರಥನ ಪಾತ್ರವಹಿಸುತ್ತಿದ್ದರು

**ಕೆ.ವಿ.ಸಂಪತ್ಕುಮಾರ್ ಆಚಾರ್**: ಮಾಯಸಂದ್ರದಲ್ಲಿ ಜನಿಸಿದ್ದ ಇವರು ಕಳಲೆ ಸಂಪತ್‌ಕುಮಾರಾಚಾರ್ಯರಲ್ಲಿ ಗಮಕ ಕಲಿತು ಆಕಾಶವಾಣಿಯೂ ಸೇರಿದಂತೆ ಅನೇಕ ಕಡೆಗಳಲ್ಲಿ ಕಾರ್ಯಕ್ರಮಗಳನ್ನು ನೀಡಿದ್ದರು. ಷಟ್ಪದಿ ಕಾವ್ಯವಲ್ಲದೆ ಚಂಪುಕಾವ್ಯಗಳನ್ನು ವಾಚನ ಮಾಡುತ್ತಿದ್ದುದು ವಿಶೇಷ.

**ವಿದ್ವಾನ್ ಎಲ್.ಸಿದ್ಧಗಂಗದೇವರು**: ಅವರು ಕಳಲೆ ಸಂಪತ್ ಕುಮಾರಾಚಾರ್ಯ ಮತ್ತು ಎಂ.ರಾಘವೇಂದ್ರ ರಾವ್ ಅವರಲ್ಲಿ ಗಮಕ ಕಲಾ ಅಭ್ಯಾಸವನ್ನು ಮಾಡಿದ್ದರು. ತುಮಕೂರಿನಲ್ಲಿ ಗಮಕ ಕಲಾ ಪಾಠಶಾಲೆಯೊಂದನ್ನು ಆರಂಭಿಸಿ ಸಾಕಷ್ಟು ಜನರಿಗೆ ಗಮಕ ರೂಪಕಗಳ ತರಬೇತಿಯನ್ನು ನೀಡಿದ್ದರು. ಬೆಂಗಳೂರಿನ ಗಮಕ ಪರಿಷತ್ತು, ರಾಜ್ಯ ಶಿಕ್ಷಣ ಇಲಾಖೆ ಹಾಗೂ ಮಠಮಾನ್ಯಗಳು ಇವರನ್ನು ಸನ್ಮಾನಿಸಿವೆ. ಜಿಲ್ಲೆಯಲ್ಲಿ ಗಮಕಕಲೆ ಬೇರೂರಲು ಪರಿಶ್ರಮಪಟ್ಟವರಲ್ಲಿ ಪ್ರಮುಖರು.

**ಅನಂತರಾಮಯ್ಯ ಎನ್.ವಿ.**: ತುಮಕೂರಿನ ನಾರವಂಗಲದಲ್ಲಿ ಜನಿಸಿದ ಇವರು ಅಲಂಕಾರ ಶಾಸ್ತ್ರದಲ್ಲಿ ಪದವಿಯನ್ನು ಪಡೆದು ಸಂಸ್ಕೃತ ಪ್ರಾಧ್ಯಾಪಕರಾಗಿದ್ದು, ಹಲವಾರು ವರ್ಷಗಳಿಂದ ಭಾರತ ಭಾಗವತಗಳ ವ್ಯಾಖ್ಯಾನ ಮಾಡಿದ್ದಾರೆ. ಲೇಖನ, ಪದ್ಯ ರಚನೆಗಳಲ್ಲಿ ಪರಿಶ್ರಮವಿರುವ ಇವರಿಗೆ ಸರ್ಕಾರದಿಂದ ರಾಜ್ಯಪ್ರಶಸ್ತಿ, ಪ್ರವಚನ ಚತುರ, ವೇದ ವಿದ್ವಾನ್ ಮುಂತಾದ ಪ್ರಶಸ್ತಿಗಳು ದೊರೆತಿವೆ.

**ಕೃಷ್ಣಶರ್ಮ, ಬಿ.ಎಲ್**: ಮಡಕಶಿರಾದಲ್ಲಿ ಜನಿಸಿ ತುಮಕೂರಿನಲ್ಲಿ ನೆಲೆಸಿರುವ ಇವರು ಸ್ವಂತ ಪರಿಶ್ರಮದಿಂದ ಗಮಕ ಕಲೆ ಕಲಿತು ಜಿಲ್ಲೆ ಹಾಗೂ ಹೊರಜಿಲ್ಲೆಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ. ತುಮಕೂರು ಜಿಲ್ಲಾ ಗಮಕ ಸಮ್ಮೇಳನದ ಸಮ್ಮೇಳನಾಧ್ಯಕ್ಷರಾಗಿದ್ದರು.

**ಜಯ ರಾಜಶೇಖರ್ ಜಿ.ವಿ**: ತಿಪಟೂರಿನ ಇವರು ಕನ್ನಡ ಮತ್ತು ಹಿಂದಿಯಲ್ಲಿ ಉನ್ನತ ಪದವಿ ಪಡೆದು ಲೇಖನ ಮತ್ತು ಪುಸ್ತಕಗಳನ್ನು ರಚಿಸಿದ್ದಾರೆ. ಸಂಗೀತ–ವೀಣೆಗಳಲ್ಲೂ ಪರಿಶ್ರಮವಿರುವ ಇವರ ಕಾರ್ಯಕ್ರಮಗಳು ಆಕಾಶವಾಣಿ ಮತ್ತು ದೂರದರ್ಶನಗಳಲ್ಲಿ ಮೂಡಿಬಂದಿವೆ. ಅಮೆರಿಕ ಸೇರಿದಂತೆ ಕರ್ನಾಟಕದ ಅನೇಕ ಮಠ, ಮಾನ್ಯಗಳು ಸನ್ಮಾನಿಸಿವೆ.

**ತುಮಕೂರು ಸುನಂದ**: ತುಮಕೂರಿನ ಇವರು ಇತಿಹಾಸ ಬೋಧಕರಾಗಿ ನಿವೃತ್ತರಾಗಿದ್ದು ವೈಚಾರಿಕ ಲೇಖನ ಹಾಗೂ ಕಥಾ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಹಲವಾರು ವರ್ಷಗಳಿಂದ ಗಮಕ ಕಲಾ ಸೇವೆ ಮಾಡುತ್ತಿದ್ದು, ಗಮಕ ರೂಪಕ ವಚನ ಗಾಯನ, ಭಾವಗೀತ, ಶಾಸ್ತ್ರೀಯ ಸಂಗೀತ, ಭಕ್ತಿಗೀತ ಹಾಡುವುದರಲ್ಲಿ ಪರಿಣತಿಯುಳ್ಳವರು. ತುಮಕೂರಿನ ಶಿಕ್ಷಕ ರಾಜೇಶ್ವರಯ್ಯನವರ ಸಿದ್ಧಗಂಗಾ ಭಕ್ತಿಗೀತೆ, ಸಿದ್ಧಗಂಗಾ ಕ್ಷೇತ್ರ ಗೀತೆ ಧ್ವನಿಸುರುಳಿಗಳಿಗೆ ರಾಗಸಂಯೋಜನೆ ಮಾಡಿದ್ದಾರೆ. ತುಮಕೂರು ಜಿಲ್ಲಾ ಗಮಕ ಸಮಿತಿಯ ಅಧ್ಯಕ್ಷರಾಗಿ, ಗಮಕ ಶಿಕ್ಷಕಿಯಾಗಿ ಸಂಸ್ಕಾರ ಭಾರತಿ ನಗರ ಶಾಖೆ ಗೌರವಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಸುನಂದ ಅವರಿಗೆ 'ಗಮಕ ರತ್ನ' ಬಿರುದು ಸಂದಿದೆ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಸಿದ್ಧಗಂಗಾಮಠ, ಜಿಲ್ಲಾ ರಾಜ್ಯೋತ್ಸವ ಸಮಿತಿ, ರಾಜರಾಜೇಶ್ವರಿ ನೃತ್ಯಸಂಸ್ಥೆ ಮುಂತಾದವು ಇವರನ್ನು ಸನ್ಮಾನಿಸಿವೆ. ಸಂಗೀತ ನೃತ್ಯ ಅಕಾಡೆಮಿ ೨೦೧೨ರಲ್ಲಿ ರಾಜ್ಯಪ್ರಶಸ್ತಿ ನೀಡಿ ಗೌರವಿಸಿದೆ.

**ನಾಗರತ್ನ ಬಿ.ಎಚ್.**: ಕುಣಿಗಲ್ ಪಟ್ಟಣದ ಇವರು ಹಲವಾರು ವರ್ಷಗಳಿಂದ ಗಮಕ ವಾಚನ, ವ್ಯಾಖ್ಯಾನಗಳ ತರಗತಿಗಳನ್ನು ನಡೆಸುತ್ತಿದ್ದರು. ಗಮಕ ಪರೀಕ್ಷಕಿಯಾಗಿಯೂ ಸೇವೆ ಸಲ್ಲಿಸಿದ್ದಾರೆ. ಗಮಕ ಕಲಾ ಕೋಗಿಲೆ, ಗಮಕ ವಿದೂಷಿ ಅಲ್ಲದೆ ರಾಜ್ಯ ಸಂಗೀತ ನೃತ್ಯ ಅಕಾಡೆಮಿಯಿಂದ ಕರ್ನಾಟಕ ಕಲಾಶ್ರೀ ಪ್ರಶಸ್ತಿಯನ್ನೂ ಪಡೆದಿದ್ದಾರೆ.

**ಪ್ರಭಾವತಿ ತೇಜಸ್**: ತುಮಕೂರಿನಲ್ಲಿ ನೆಲೆಸಿರುವ ಇವರು ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕಿಯಾಗಿ, ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದ್ದಾರೆ. ಹಿಂದಿ ಮತ್ತು ಸಂಸ್ಕೃತಗಳಲ್ಲಿ ಅಧ್ಯಯನ ಮಾಡಿದ್ದು ಗಮಕ ಶಿಕ್ಷಣ ಪಡೆದು ಗಮಕಕಲಾ ಪರಿಷತ್ತಿನ ತುಮಕೂರು ಜಿಲ್ಲಾ ಸಮಿತಿಯ ಸಂಚಾಲಕಿಯಾಗಿ ನಾದ ಬ್ರಹ್ಮ ಭಜನ ಮಂಡಲಿಯ ಅಧ್ಯಕ್ಷೆಯಾಗಿ, ತುಮಕೂರು ಮಾಧ್ವ ಮಹಾಮಂಡಲಿಯ ಅಧ್ಯಕ್ಷೆಯಾಗಿ ಸೇವೆ ಸಲ್ಲಿಸಿದ್ದಾರೆ.

**ರಾಮಸ್ವಾಮಿ ಹೆಚ್.ಕೆ:** ತಿಪಟೂರು ತಾಲೂಕಿನ ಹೀಚನೂರಿನಲ್ಲಿ ನೆಲೆಸಿದ್ದು ಇವರು ಮೊದಲಿಗೆ ತಂದೆ-ತಾಯಿ ನಂತರ ಎಂ.ಎಸ್. ಚಂದ್ರಶೇಖರಯ್ಯ ಮತ್ತು ಹೆಚ್.ಕೃಷ್ಣಶಾಸ್ತ್ರೀ ಅವರಿಂದ ಗಮಕವನ್ನು ಶಾಸ್ತ್ರೀಯವಾಗಿ ಅಭ್ಯಾಸ ಮಾಡಿದ್ದಾರೆ. ಹಲವಾರು ಆಕಾಶವಾಣಿ ಕೇಂದ್ರಗಳಿಂದ ಇವರ ಗಮಕ ವಾಚನ ಮೂಡಿಬಂದಿದೆ. ಮಂಡ್ಯ ಜಿಲ್ಲಾ ಗಮಕ ಸಮ್ಮೇಳನಕ್ಕೆ ಅಧ್ಯಕ್ಷರಾಗಿದ್ದರು. ಗಮಕ ಕಲಾಭೂಷಣ, ಗಮಕ ಪಾರವಾರ, ಗಮಕ ಭಾಸ್ಕರ, ಗಮಕ ಕಲಾವಿದ ಇತ್ಯಾದಿ ಬಿರುದುಗಳು ಸಂದಾಯವಾಗಿದೆ. ರಾಜ್ಯೋತ್ಸವ ಪ್ರಶಸ್ತಿ ಪಡೆದಿರುವ ಶ್ರೀಯುತರ ಗಮಕ ವಾಚನಗಳು ಧ್ವನಿ ಮುದ್ರಿತವಾಗಿದೆ.

**ಶಿವಯ್ಯ.ಎ:** ತುಮಕೂರಿನ ಅರೆಯೂರಿನಲ್ಲಿ ಜನಿಸಿ ಗುಬ್ಬಿ ತಾಲೂಕಿನ ಪ್ರಭುವನಹಳ್ಳಿಯಲ್ಲಿ ನೆಲೆಸಿರುವ ಇವರು ಸಿದ್ಧಗಂಗದೇವರಲ್ಲಿ ಅಭ್ಯಸಿಸಿ ಹರಿಕಥೆ ಮತ್ತು ಶಿವಕಥಗಳೆರಡರಲ್ಲೂ ಪರಿಣಿತರಾಗಿದ್ದಾರೆ. ಇವರಿಗೆ ಹರಿಕಥಾ ವಿದ್ವಾನ್, ಶಿವಕಥಾ ಕೇಸರಿ ಎಂಬ ಬಿರುದುಗಳು ಬಂದಿವೆ.

**ಶ್ರೀನಿವಾಸಮೂರ್ತಿ ಕೆ.ಎಸ್:** ಗುಬ್ಬಿ ತಾಲೂಕಿನ ಕಡಬದಲ್ಲಿ ಜನಿಸಿದ ಇವರು ರಾಘವೇಂದ್ರರಾಯರು, ಮಹಾಭಾರತ ಗಮತಿ ಖ್ಯಾತಿಯ ಬಿಂದುರಾಯರು ಹಾಗೂ ಕೃಷ್ಣರಾಯರಲ್ಲಿ ಗಮಕ ಕಲಾ ಅಭ್ಯಾಸ ಮಾಡಿ ಗಮಕಕ್ಕೆ ಸಂಬಂಧಿಸಿದ ಹಲವಾರು ಸಂಸ್ಥೆಗಳಲ್ಲಿ ವಿವಿಧ ಹುದ್ದೆಗಳಲ್ಲಿದ್ದು ಗಮಕ ಪ್ರಚಾರ ಮಂಡಳಿಯನ್ನು ಸ್ಥಾಪಿಸಿ ನಿರಂತರವಾಗಿ ಗಮಕ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಇವರಿಗೆ ಕಾವ್ಯವಾಚನರತ್ನ, 'ಗಮಕ ಕಲಾಪುನರ್ವಸು' ಮುಂತಾದ ಬಿರುದುಗಳಲ್ಲದೆ ರಾಜ್ಯ ಸಂಗೀತ ನೃತ್ಯ ಅಕಾಡೆಮಿಯಿಂದ ಕರ್ನಾಟಕ ಕಲಾಶ್ರೀ ಪ್ರಶಸ್ತಿಯೂ ದೊರೆತಿದೆ.

**ವಿಜಯಮಾಲ ರಂಗನಾಥ್:** ಶಿರಾದಲ್ಲಿ ಜನಿಸಿದ ಇವರ ತಂದೆ ಎನ್.ಶಂಕರಪ್ಪ ಮತ್ತು ತಾಯಿ ಜಿ.ವೆಂಕಟಲಕ್ಷ್ಮಿ ಅವರೂ ಗಮಕಿಗಳಾಗಿದ್ದು ಅವರಿಂದ ಪ್ರಥಮ ಪಾಠಗಳನ್ನು ಕಲಿತು ಗಮಕಿ ಎಂ. ರಾಘವೇಂದ್ರರಾಯರಲ್ಲಿ ಹೆಚ್ಚಿನ ಅಭ್ಯಾಸವನ್ನು ಪಡೆದಿದ್ದಾರೆ. ಎಂ.ಎ., ಪದವಿಯನ್ನು ಸಹ ಪಡೆದಿರುವ ವಿಜಯಮಾಲ ಅವರು ಮೈಸೂರು ವಿಶ್ವವಿದ್ಯಾನಿಲಯಕ್ಕೆ "ಕನ್ನಡದಲ್ಲಿ ಗಮಕ ಕಲೆ ಮತ್ತು ಸಾಹಿತ್ಯ ಕುರಿತು ಮಹಾಪ್ರಬಂಧವನ್ನು ನೀಡಿ ಪಿಎಚ್.ಡಿ, ಪದವಿಯನ್ನು ಪಡೆದಿದ್ದಾರೆ. ಆಕಾಶವಾಣಿಯ ಹಲವಾರು ಶಿಬಿರಗಳಲ್ಲಿ ಕಲಾವಿದರಾದ ಇವರು ಭಾಗವಹಿಸಿದ್ದು ಪ್ರಶಸ್ತಿಗಳನ್ನೂ ಪಡೆದಿದ್ದಾರೆ.

**ವೆಂಕಟಾದ್ರಿಶರ್ಮ.ಕಂ.ಸು:** ಮಧುಗಿರಿಯ ಕಮ್ಮೆಸಾಲಿಪಲ್ಲಿಯಲ್ಲಿ ಜನಿಸಿದ ಇವರು ಸತ್ಯಪ್ರಿಯ ಕಾವ್ಯನಾಮದಿಂದ ಕವನ, ವೈಚಾರಿಕ ಲೇಖನ, ವೇದಾಂತ, ಭಾಷಾಂತರ ಮುಂತಾದ ಪ್ರಕಾರಗಳಲ್ಲಿ ಲೇಖನಗಳನ್ನು ಬರೆದಿದ್ದಾರೆ. ರಾಘವೇಂದ್ರ ರಾಯರಲ್ಲಿ ಗಮಕ ಅಭ್ಯಾಸ ಮಾಡಿ ರಾಜ್ಯದಾದ್ಯಂತ ಗಮಕ ಕಲೆಯ ಪ್ರಚಾರಕ್ಕಾಗಿ ಸುತ್ತಾಡಿದ್ದಾರೆ. ಗಮಕ ವಿದ್ವಾನ್, ವ್ಯಾಖ್ಯಾನ ವಾಚಸ್ಪತಿ ಇತ್ಯಾದಿ ಬಿರುದುಗಳು ಬಂದಿವೆ.

**ಶ್ರೀಮತಿ** ಸಿ.ವಿ: ಚಿಕ್ಕನಾಯಕನಹಳ್ಳಿಯಲ್ಲಿ ಜನಿಸಿದ್ದು, ಇವರ ತಂದೆ ಚಿ.ನ.ವಿಶ್ವನಾಥ ಶಾಸ್ತ್ರಿಗಳು ಖ್ಯಾತ ವಿದ್ವಾಂಸರಾಗಿದ್ದರು. ಶ್ರೀಮತಿಯವರು ರಾಘವೇಂದ್ರರಾಯರಲ್ಲಿ ಕಲಿತು ಗಮಕ ಪರೀಕ್ಷೆ ಪಾಸು ಮಾಡಿ ಪರಿಷತ್ತಿನ ಗಮಕ ಶಿಕ್ಷಕರ ಶಿಕ್ಷಣ ಶಿಬಿರದಲ್ಲಿ ತರಬೇತಿ ಪಡೆದು ಗಮಕ ತರಗತಿಗಳನ್ನು ನಡೆಸುತ್ತಿದ್ದು, ಪರೀಕ್ಷಕಿಯಾಗಿಯೂ ಸೇವೆ ಸಲ್ಲಿಸಿದ್ದಾರೆ. ಭದ್ರಾವತಿಯ ಗಮಕ ಕಲಾ ಪರಿಷತ್ತಿನ ಸಹಕಾರ್ಯದರ್ಶಿಯಾಗಿ ಕುಮಾರವ್ಯಾಸ ಜಯಂತಿ, ಗಮಕ ಸ್ಪರ್ಧೆ, ವಿಚಾರಗೋಷ್ಠಿ, ಸಮಗ್ರ ಜೈಮಿನಿ ಭಾರತ ಮತ್ತು ಕುಮಾರವ್ಯಾಸ ಭಾರತ ವಾಚನ, ವ್ಯಾಖ್ಯಾನಗಳನ್ನು ಮಾಡಿದ್ದಾರೆ. ಆಕಾಶವಾಣಿಯ ಚಿಣ್ಣರ ಬಳಗದಲ್ಲಿ, ಮಕ್ಕಳಿಂದ ಗಮಕ ರೂಪಕ ಪ್ರದರ್ಶನ, ಸಮಗ್ರ ಕಾವ್ಯ ವಾಚನ ವ್ಯಾಖ್ಯಾನ ತರಬೇತಿ ತರಗತಿ, ಶಾಲಾ ಶಿಕ್ಷಕಿಯರಿಗೆ ಗಮಕ ಶಿಕ್ಷಣ ಶಿಬಿರಗಳನ್ನು ನಡೆಸಿಕೊಟ್ಟಿದ್ದಾರೆ. ಶಿವಮೊಗ್ಗ ಜಿಲ್ಲೆಯ ಗಮಕ ಕಲಾಪರಿಷತ್ತಿನ ಸಹ ಕಾರ್ಯದರ್ಶಿಯಾಗಿದ್ದಾರೆ. ಶ್ರೀಮತಿ ಅವರಿಗೆ ಹಲವಾರು ಸನ್ಮಾನ ಗೌರವಗಳು ಸಂದಿವೆ.

**ಸತ್ಯನಾರಾಯಣ ಶಾಸ್ತ್ರಿ** ಸಿ.ವಿ: ಗುಬ್ಬಿಯ ಇವರು ವಿದ್ಯಾಧಿಕಾರಿಗಳಾಗಿದ್ದರು. ಸ್ವತಃ ಸಂಗೀತಗಾರರಾಗಿದ್ದ ಇವರ ತಂದೆ ಸಿ.ವೆಂಕಟಸುಬ್ಬಯ್ಯ ಅವರಿಂದ ಸಂಗೀತ ಕಲಿತು ಮುಂದೆ ಗಮಕಿ ಹೆಚ್.ಕೆ.ರಾಮಸ್ವಾಮಿ ಅವರಲ್ಲಿ ಗಮಕ ಕಲೆಯನ್ನು ಕಲಿತು ಕಾವ್ಯವಾಚನ ಕಾರ್ಯಕ್ರಮಗಳನ್ನು ನೀಡಿದ್ದಾರೆ.

**ಸರಸ್ವತಿ ನಾರಾಯಣಮೂರ್ತಿ**: ತುಮಕೂರಿನಲ್ಲಿ ನೆಲೆಸಿರುವ ಇವರು ಲಕ್ಷ್ಮೀನಾರಾಯಣಶಾಸ್ತ್ರಿ ಮತ್ತು ಸರೋಜ ಅನಂತ ರಾಮಯ್ಯ ಅವರಲ್ಲಿ ಗಮಕ ಕಲಿತು, ಉನ್ನತ ದರ್ಜೆಯಲ್ಲಿ ಗಮಕ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದ್ದಾರೆ. ಷಟ್ಪದಿ ಕಾವ್ಯಗಳಲ್ಲದೆ ರನ್ನನ ಗಧಾಯುದ್ದ, ಮಂಕುತಿಮ್ಮನ ಕಾವ್ಯ ಮುಂತಾದವುಗಳನ್ನು ವಾಚಿಸಿ ವ್ಯಾಖ್ಯಾನಿಸುವುದರಲ್ಲಿ ಪರಿಣಿತರು. ನಾಡಿನ ಅನೇಕ ಕಡೆ ಗಮಕ ಕಾರ್ಯಕ್ರಮಗಳನ್ನು ನೀಡಿ ಹಲವಾರು ಸನ್ಮಾನಗಳನ್ನು ಪಡೆದಿದ್ದಾರೆ.

**ಸರೋಜಮ್ಮ ಅಂತಯ್ಯ**: ತುಮಕೂರಿನವರೇ ಆಗಿದ್ದ ಇವರು ಸಂಗೀತ ಕಲಿತಿದ್ದರೂ ಗಮಕ ತರಗತಿಗಳನ್ನು ನಡೆಸುತ್ತಿದ್ದರು. ಆಕಾಶವಾಣಿಯಲ್ಲದೇ ಅನೇಕ ಸಂಘ–ಸಂಸ್ಥೆಗಳಲ್ಲಿ ಕಾರ್ಯಕ್ರಮಗಳನ್ನು ನೀಡಿದ್ದಾರೆ. ತಿರುಪತಿ ಸಮಿತಿಯವರು ಇವರ ಗಮಕ ಕಲಾ ಸೇವೆಯನ್ನು ಮೆಚ್ಚಿ ಗಮಕ ವಿಶಾರದೆ ಎಂಬ ಬಿರುದನ್ನು ನೀಡಿದ್ದಾರೆ.

**ಸುಮಾ ಪ್ರಸಾದ್**: ತುಮಕೂರಿನ ಇವರು ಮೊದಲಿಗೆ ಸಂಗೀತ ಕಲಿತು ನಂತರ ಮಂಜುಳರಾಜು ಅವರಲ್ಲಿ ಗಮಕ ಅಭ್ಯಾಸ ಮಾಡಿ ಅಕಾಶವಾಣಿ ಮತ್ತು ದೂರದರ್ಶನ ಕೇಂದ್ರಗಳೂ ಸೇರಿದಂತೆ ಅನೇಕ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಗಮಕ ವಾಚನ ನೀಡಿದ್ದಾರೆ. ಗಮಕ ಪರೀಕ್ಷೆಗಳಲ್ಲಿ ಪರೀಕ್ಷಕರಾಗಿ ಸೇವೆ ಸಲ್ಲಿಸಿದ್ದಾರೆ. ಷಟ್ಪದಿಗಳಲ್ಲದೆ, ರಗಳೆ, ಸಾಂಗತ್ಯ, ಭಾವಗೀತೆ, ದೇವರನಾಮಗಳನ್ನೂ ಹಾಡುತ್ತಾರೆ.

**ಹುಲಿಕಲ್ ನಾಗರಾಜ್**: ತುರುವೇಕೆರೆ ತಾಲೂಕಿನ ಹುಲಿಕಲ್ಲಿನವರು. ಇವರ ಅಜ್ಜ ಪಟೇಲ್ ನಂಜೇಗೌಡರು ಗಮಕ ಕಲಾ ಪರಿಣಿತರಾಗಿದ್ದು ಅವರ ಪರಂಪರೆಯನ್ನು ನಾಗರಾಜ್ ಮುಂದುವರಿಸುತ್ತಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ತಿರುಮಲ ತಿರುಪತಿ ಧರ್ಮಪ್ರಚಾರ ಸಂಸ್ಥೆ. ಗಮಕ ಕಲಾ ಪರಿಷತ್ತು ಮುಂತಾದವರು ಆಯೋಜಿಸಿದ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದಾರೆ. ಇವರಿಗೆ ಗಮಕ ಕಿರಣ, ಗಮಕ ಚಿಂತಕ ಮುಂತಾದ ಬಿರುದುಗಳು ಸಂದಾಯವಾಗಿದೆ. ಇವರು ಕೀರ್ತನ ಕಲಾವಿದರೂ ಹೌದು.

**ಹೈಮವತಮ್ಮ ಕೆ.ಬಿ**: ಇವರು ತುಮಕೂರು ಜಿಲ್ಲೆಯ ತಿಪಟೂರು ತಾಲೂಕಿನ ವಾಸುದೇವರಹಳ್ಳಿಯಲ್ಲಿ ಜನಿಸಿದರು. ಇವರ ತಂದೆ ಕೆ.ಹೆಚ್. ಭಾಸ್ಕರಾಚಾರ್ಯರು ಪಿಟೀಲು ವಿದ್ವಾಂಸರು, ಶಿಲ್ಪಿ, ಚಿತ್ರಕಾರ, ನಾಟಕಕಾರ ಮತ್ತು ಗಮಕಿ. ತಾಯಿ ಎಸ್.ಬಿ.ಗೌರಮ್ಮ ಸಾಂಪ್ರದಾಯಕ ಹಾಡುಗಾರ್ತಿ ಮತ್ತು ಗಮಕಿ. ಹೈಮವತಮ್ಮನ ತಾತ ಯಕ್ಷಗಾನ ಕಲಾವಿದರರಾಗಿದ್ದರು. ಗಮಕಿ ಹು.ಮ.ರಾಮಾರಾಧ್ಯರು ಇವರ ಗಮಕ ಗುರುಗಳು. ಗದುಗಿನ ಭಾರತ, ಜೈಮಿನಿ ಭಾರತ, ಹರಿಶ್ಚಂದ್ರ ಕಾವ್ಯ, ಆದಿಪುರಾಣ, ಗದಾಯುದ್ಧ ಇವು ವಿಶೇಷ ಆಸಕ್ತಿಯ ಕಾವ್ಯಗಳು. ಬೆಂಗಳೂರಿನ ಬಳೇಪೇಟೆಯ ಜೈನ ದೇವಾಲಯಗಳಲ್ಲಿ ವೆಂಕೋಬರಾಯರ ವ್ಯಾಖ್ಯಾನದೊಂದಿಗೆ ಆದಿಪುರಾಣ ವಾಚನ ಮಾಡಿ ಖ್ಯಾತಿ ಪಡೆದಿದ್ದಾರೆ. ಪುರಂದರ ಕೃಷ್ಣ, ರಾಗಾರ್ಥ ರಂಜನಿ, ವಾಸವಾಂಬಾ ವೈಭವ, ಸರಸ ವಿಲಾಸ, ರಾಮಧ್ಯಾನ ಚರಿತ್ರೆ ಇತ್ಯಾದಿ ರೂಪಕಗಳನ್ನು ರಚಿಸಿ ಪ್ರದರ್ಶಿಸಿರುತ್ತಾರೆ. ಸ್ವತಃ ಸಂಗೀತ ವಿದೂಷಿಯಾಗಿ ನಾನಾ ಕಡೆ ಸಂಗೀತ ಕಚೇರಿ ಮತ್ತು ಗಮಕ ಕಾರ್ಯಕ್ರಮಗಳನ್ನು ನಡೆಸಿ ಕೊಟ್ಟಿದ್ದಾರೆ. ಬೆಂಗಳೂರು ಆಕಾಶವಾಣಿಯಲ್ಲಿ ಇವರ ಕಾವ್ಯವಾಚನ ಪ್ರಸಾರಗೊಂಡಿವೆ. ಗಮಕ ಕಲಾಪರಿಷತ್ತಿನ ಪರವಾಗಿ ಕಾವ್ಯವಾಚನ ವ್ಯಾಖ್ಯಾನದ ತರಬೇತಿ ನೀಡುತ್ತಿದ್ದಾರೆ. ಇವರ ತಂದೆಯಿಂದ ಸ್ಥಾಪಿತವಾದ ಶ್ರೀ ಸಂಗೀತ ಸಾಹಿತ್ಯ ಸದನವನ್ನು ಮುಂದುವರಿಸುತ್ತಿದ್ದು, ಗಮಕ ಕಾವೇರಿ ಯೋಜನೆಯಲ್ಲಿ ಅತಿ ಹೆಚ್ಚಿನ ಕಾರ್ಯಕ್ರಮಗಳನ್ನು ಬೆಂಗಳೂರಿನ ಬೇರೆ ಬೇರೆ ಬಡಾವಣೆಗಳಲ್ಲಿ ಮತ್ತು ಸುತ್ತಲಿನ ಗ್ರಾಮಾಂತರ ಪ್ರದೇಶಗಳಲ್ಲಿ ನಡೆಸಿಕೊಟ್ಟಿದ್ದಾರೆ. ಕರ್ನಾಟಕ ರತ್ನ ಮತ್ತು ವಿಶ್ವಕರ್ಮ ಜ್ಯೋತಿ ಎಂಬ ಬಿರುದನ್ನು ಇವರು ಪಡೆದಿದ್ದಾರೆ. ಈಚೆಗೆ ಇವರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ 'ಕರ್ನಾಟಕ ಕಲಾಶ್ರೀ' ಪ್ರಶಸ್ತಿ ಸಂದಾಯವಾಗಿದೆ.

**ಕಡಬ ಸುಬ್ರಹ್ಮಣ್ಯ**: ಇವರು ಜಿಲ್ಲೆಯ ಕಡಬದವರಾಗಿದ್ದು ಮೊದಲಿಗೆ ಹು.ಮ.ರಾಮಾರಾಧ್ಯ ಅವರಲ್ಲಿ ಗಮಕ ಕಲಿತು ಗಮಕ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿ ಹಲವಾರು ವರ್ಷಗಳಿಂದ ಸಾರ್ವಜನಿಕ ಕಾರ್ಯಕ್ರಮಗಳನ್ನು ನೀಡುತ್ತಿದ್ದಾರೆ. ಗಮಕ ರೂಪಕ ಸಂಗೀತ ರೂಪಕಗಳನ್ನು ರಚಿಸಿ ಪ್ರಸ್ತುತಪಡಿಸುವುದರಲ್ಲಿ ಆಸಕ್ತಿ ವಹಿಸಿದ್ದಾರೆ. ಕರ್ನಾಟಕ ಗಮಕ ಕಲಾ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ.

**ಚಿಕ್ಕಣ್ಣ ಹೆಚ್.ಡಿ**: ತಿಪಟೂರು ತಾಲೂಕು ಹೊನ್ನವಳ್ಳಿಯ ಇವರು ರೇವಣ ಸಿದ್ದೇಶ್ವರ ಸ್ವಾಮಿ ಮಠದ ಭಜನ ಮಂಡಳಿಯಲ್ಲಿ ದೇವರನಾಮಗಳನ್ನು, ಯಕ್ಷಗಾನ ವಾಚನವನ್ನು ಕಲಿತರು. ನಂತರ ತುಮಕೂರಿನ ಸಿದ್ಧಗಂಗ ದೇವರು

ಮತ್ತು ತುಮಕೂರು ಸುನಂದ ಅವರು ನಡೆಸುತ್ತಿದ್ದ ಗಮಕ ತರಗತಿಗಳಲ್ಲಿ ಅಭ್ಯಾಸ ಮಾಡಿ ಹಲವಾರು ಪರೀಕ್ಷೆಗಳಲ್ಲಿ ಉನ್ನತ ಶ್ರೇಣಿಗಳಲ್ಲಿ ಉತ್ತೀರ್ಣರಾದರು. ತುಮಕೂರು ಜಿಲ್ಲಾದ್ಯಂತ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ದೇವರನಾಮ, ಕಾವ್ಯವಾಚನ, ಜನಪದಗೀತೆ, ಭಾವಗೀತೆ, ಲಾವಣಿಗಳನ್ನು ಹಾಡುತ್ತಿದ್ದರು. ಟಿ.ಜಿ.ಸರೋಜ ಮತ್ತು ಕುಸುಮಮೂರ್ತಿ ಅವರು ಸಿದ್ಧಗಂಗದೇವರ ಬಳಿ ಗಮಕ ಕಲಿತು ಅನೇಕ ಕಡೆಗಳಲ್ಲಿ ಕಾರ್ಯಕ್ರಮಗಳನ್ನು ನೀಡಿದ್ದಾರೆ.

## ಜಿಲ್ಲೆಯ ಇತರ ಗಮಕ ಕಲಾವಿದರು

ತುಮಕೂರು ತಾಲೂಕಿನ ಹೊನಸಿಗೆರೆಯ **ದಿ.ಛಾಯಾದೇವಿ ನಂಜಪ್ಪ,**ಮುಳಕುಂಟೆ ಅಗ್ರಹಾರದ **ಎಂ.ಆರ್. ಅನಂತರಾಮಯ್ಯ,** ತಿಪಟೂರಿನ **ಅನಸೂಯ ವೆಂಕಟನಾರಾಯಣ, ಕಡಬ ಲಕ್ಷ್ಮೀಕಾಂತ,** ಮಧುಗಿರಿಯ ಗುಂಡಗಲ್ ಗ್ರಾಮದ **ಕೆ.ಬಿ. ಗೀತಾ,** ತುಮಕೂರಿನ **ಪಿ.ಕೆ. ದ್ವಾರಕಾನಾಥ್,** ತುಮಕೂರಿನ **ರಾಮಶೇಷನ್,** ತುಮಕೂರಿನ **ಜಿ. ಪರಮೇಶ್ವರ ರಾವ್,** ತುಮಕೂರಿನ **ಪುಟ್ಟಬಸಪ್ಪ,** ತುಮಕೂರು **ಮಾಲತಿ ಮಾಧವಾಚಾರ್,** ಕುಣಿಗಲ್ಲಿನ **ಕೆ.ವಿ.ರಾಮಚಂದ್ರ,** ಕೊರಟಗೆರೆಯ **ವಿ. ಲಕ್ಷ್ಮಿ ವಾಸು,** ತುಮಕೂರಿನ **ಶಕುಂತಲಾ ಟಿ.ಕೆ.,** ತುಮಕೂರಿನ **ಎಸ್.ಶಿವಣ್ಣ.** ತುಮಕೂರು ತಾಲೂಕಿನ ಗಳಿಗೇನಹಳ್ಳಿಯ **ಜಿ.ಎಸ್. ಶ್ರೀನಿವಾಸಮೂರ್ತಿ,** ತಿಪಟೂರು ತಾಲೂಕಿನ **ಹೆಚ್.ಕೆ.ಶ್ರೀನಿವಾಸಮೂರ್ತಿ,** ಕುಣಿಗಲ್ ತಾಲೂಕು ಹೇರೂರಿನ **ಶ್ರೀನಿವಾಸದಾಸ್ ಕೆ.ಟಿ,** ಶೃಂಗೇರಿಯ **ಸೀತಾರಾಮ್ ಭಟ್ಟರು,** ತುಮಕೂರಿನ **ಲಕ್ಷ್ಮೀಜಯಪ್ರಕಾಶ್,** ತಿಪಟೂರಿನ **ಸಾವಿತ್ರಿ ರಾಮಸ್ವಾಮಿ,** ತುಮಕೂರಿನ ಬೆಣಚನಹಳ್ಳಿಯ **ಜಿ.ಎಸ್.ಸುನಂದಮ್ಮ**

ತುಮಕೂರಿನ ಜಿಲ್ಲಾ ಗಮಕ ಕಲಾ ಪರಿಷತ್ ಹೆಚ್ಚು ಕ್ರಿಯಾಶೀಲವಾಗಿದ್ದು ನಿರಂತರವಾಗಿ ಪ್ರತಿ ವರ್ಷ ಗಮಕ ಹಬ್ಬದಲ್ಲಿ ಗಮಕ ಸಪ್ತಾಹ ಆಚರಿಸುತ್ತಾ ಬರುತ್ತಿದೆ. ತುಮಕೂರಿನಲ್ಲಿ ಜಿಲ್ಲಾ ಗಮಕ ಸಮ್ಮೇಳನಗಳು ಹಾಗೂ ೨೦೧೧ರಲ್ಲಿ ರಾಜ್ಯಮಟ್ಟದ ಗಮಕ ಸಮ್ಮೇಳನಗಳನ್ನು ನಡೆಸಿದೆ.

# ಸುಗಮ ಸಂಗೀತ

ಸುಗಮ ಸಂಗೀತ ಕ್ಷೇತ್ರಕ್ಕೆ ಜಿಲ್ಲೆಯ ಕೊಡುಗೆ ಗಣನೀಯವಾಗಿದ್ದು, ಇದಕ್ಕೆ ಪೂರಕವಾಗಿ ಜಿಲ್ಲೆಯ ಸುಗಮ ಸಂಗೀತ ಸಾಧಕರ ಸೇವೆ, ಸಾಧನೆ ಹಾಗೂ ಸನ್ಮಾನಗಳ ಬಗ್ಗೆ ವಿವರವನ್ನು ನೀಡಲಾಗಿದೆ.

**ಟಿ.ವಿ.ರಾಜು:** ತುಮಕೂರಿನಲ್ಲಿ ೧೯೩೦ರಲ್ಲಿ ಜನಿಸಿದ ಇವರ ತಂದೆ ವಾಣಿಮಲ್ಲಪ್ಪ, ತಾಯಿ ಜಿ.ಎಸ್.ವೀರಮ್ಮ. ಕರ್ನಾಟಕ ಹಾಗೂ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಪರಂಪರೆ ಮನೆತನದವರು. ಇವರು ತಂದೆಯಿಂದಲೇ ಸಂಗೀತ ಅಭ್ಯಾಸ ಮಾಡಿ ನಂತರ ಭೋಜರಾಜ್ ಬೋಳಾರ್ ಅವರಲ್ಲಿ ಹಿಂದೂಸ್ತಾನಿ ಶಿಕ್ಷಣ ಪಡೆದು. ಸುಮಾರು ೩೫ ವರ್ಷಗಳ ಕಾಲ ಸಾಧನೆ ಮಾಡಿ, ಹಲವಾರು ಧ್ವನಿಸುರುಳಿಗಳಿಗೆ ಸಾಹಿತ್ಯ ರಚಿಸಿ, ಸ್ವರಸಂಯೋಜನೆ ಮಾಡಿ ಹಾಡಿದ್ದಾರೆ. ರಾಜು ಮೆಲೋಡಿ ಮೇಕರ್ಸ್ ಸಂಸ್ಥೆಯನ್ನು ಸ್ಥಾಪಿಸಿ ಸಂಗೀತವನ್ನು ಹೇಳಿಕೊಡುತ್ತಿದ್ದರು. ಅನೇಕ ಶ್ರೇಷ್ಠ ಸಾಹಿತ್ಯಕ್ಕೆ ಸ್ವರ ಸಂಯೋಜನೆ ಮಾಡಿರುತ್ತಾರೆ. ರಾಜ್ಯ ಮಟ್ಟದ ಸುಗಮ ಸಂಗೀತೋತ್ಸವವನ್ನು ನಡೆಸಿ, ವರ್ಣ ಪ್ರೊಡಕ್ಷನ್ನಲ್ಲಿ ಸಹನಿರ್ದೇಶಕರಾಗಿ ಕೆಲಸ ನಿರ್ವಹಿಸಿರುತ್ತಾರೆ. ಸಾರ್ವಜನಿಕ ಹಾಗೂ ಕರ್ನಾಟಕ ಸರ್ಕಾರ ಇಲಾಖಾ ವತಿಯಿಂದ ಸುಗಮ ಸಂಗೀತ ಕಾರ್ಯಕ್ರಮ ಸಾದರಪಡಿಸುತ್ತಿದ್ದರು. ಹೆಚ್.ಎಂ.ವಿ.ಧ್ವನಿ ಮುದ್ರಣ ಸಂಸ್ಥೆಯಿಂದ ಧ್ವನಿ ಮುದ್ರಿತ ಕಾರ್ಯ ನಿರ್ವಹಿಸುತ್ತಿದ್ದರು. ಇದಲ್ಲದೆ ತುಮಕೂರು ಜಿಲ್ಲಾ ಉತ್ಸವ, ಮಂಗಳೂರಿನ ಕನ್ನಡ ಸಂಗೀತ ಸಮ್ಮೇಳನ ಆಕಾಶವಾಣಿ ಹಾಗೂ ದೂರದರ್ಶನಗಳು ಕಾರ್ಯಕ್ರಮಗಳು ನಡೆದಿವೆ. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯಿಂದ ಕರ್ನಾಟಕ ಕಲಾಶ್ರೀ ಪ್ರಶಸ್ತಿ ಮತ್ತು ಮುಂಬೈ ಸಂಸ್ಥೆಯೊಂದರಿಂದ ಪ್ರಶಸ್ತಿ ಬಂದಿವೆ.

**ತು.ಮ.ಬಸವರಾಜು:** ತುಮಕೂರಿನಲ್ಲಿ ಜನಿಸಿದ್ದು, ಇವರ ತಂದೆ ಎನ್.ಮರಿವೀರಪ್ಪ ತಾಯಿ ನೀಲಮ್ಮನವರು. ಇವರು ಸುಮಾರು ೨೦ ವರ್ಷಗಳ ಕಾಲ ಅಪ್ರತಿಮ ಸಾಧನೆಯನ್ನು ಮಾಡಿದ್ದಾರೆ. ಕನ್ನಡ ಸಾಹಿತ್ಯ ಕ್ಷೇತ್ರ, ಸುಗಮ ಸಂಗೀತ ಹಾಡುಗಾರಿಕೆ ಹಾಗೂ ರಾಗ ಸಂಯೋಜನೆ ಇವೆಲ್ಲದರಲ್ಲೂ ಪರಿಶ್ರಮವಹಿಸಿ ಸಾಧನೆಯನ್ನು ಮಾಡಿದ್ದಾರೆ. ಮಕ್ಕಳಿಗೆ ದೇಶಭಕ್ತಿ ಗೀತೆಗಳನ್ನು ಕಲಿಸುವುದಲ್ಲದೆ ಗೀತಗಂಗೋತ್ರಿ ಸಂಗೀತ ಸಂಸ್ಥೆಯ ಅಧ್ಯಕ್ಷರಾಗಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖಾ ವತಿಯಿಂದ ಕಾರ್ಯಕ್ರಮಗಳು, ಜಿಲ್ಲಾ ಉತ್ಸವಗಳು, ಸುಗಮ ಸಂಗೀತ ಕಾರ್ಯಾಗಾರ ಮತ್ತು ಕರ್ನಾಟಕದ ವಿವಿಧ ಸ್ಥಳಗಗಳಲ್ಲಿ ಸುಗಮ ಸಂಗೀತ ಕಚೇರಿಗಳನ್ನು ನಡೆಸಿಕೊಟ್ಟಿದ್ದಾರೆ.

**ಡಾ.ಬಿ.ಹೆಚ್.ಗೋವಿಂದರಾಜು**: ತುಮಕೂರು ಜಿಲ್ಲೆಯ ಶಿರಾ ತಾಲೂಕಿನ ಬೋರಸಂದ್ರದಲ್ಲಿ ಜನಿಸಿದ ಇವರು ಕಲಾವಿದ ಕುಟುಂಬದವರು. ಈ ಮನೆತನದ ಹಿರಿಯರು ತತ್ವಪದ ಗಾಯಕರು. ತಂದೆ ಸ್ವಾಮಿ ಹೊನ್ನಪ್ಪಾಜಿ, ತಾಯಿ ಚಿಕ್ಕೆಂಚಮ್ಮ. ಇವರು ಜಾನಪದ ಹಾಡುಗಳ ಗಾಯಕಿ. ಬಿ.ಹೆಚ್.ಗೋವಿಂದರಾಜು ಅವರು ಎಂ.ಎ., ಹಾಗೂ ವೈದ್ಯಕೀಯ ಪದವಿಯನ್ನು ಪಡೆದಿದ್ದಾರೆ. ತಂದೆಯಿಂದಲೇ ತತ್ವಪದ ಹಾಗೂ ಭಜನೆಗಳಲ್ಲಿ ಶಿಕ್ಷಣ ಪಡೆದಿರುತ್ತಾರೆ. ತಾಯಿಯವರಿಂದ ಜಾನಪದ ಹಾಡುಗಳನ್ನು ಕಲಿತು ಭಜನೆ ಮೇಷ್ಟ್ರು ಪಾಪಣ್ಣ ಮತ್ತು ಮಾವ ತಿಮ್ಮಯ್ಯನವರಲ್ಲಿ ಸಂಗೀತ ಶಿಕ್ಷಣ ಪ್ರಾರಂಭಿಸಿ ನಂತರ ತುಮಕೂರು ಪಿ.ರಾಮಯ್ಯನವರಲ್ಲೂ ಕೆಲವು ಕಾಲ ಶಿಕ್ಷಣ ಪಡೆದಿರುತ್ತಾರೆ. ನಂತರ ಹೆಚ್.ಎಂ.ಟಿ ಉದ್ಯೋಗಿಯಾದ ಮೇಲೂ ಸಹ ಗೋವಿಂದರಾಜು ಭಾಗವತರ್ ಅವರಲ್ಲಿ ಶಿಕ್ಷಣವನ್ನು ಮುಂದುವರಿಸಿದರು. ಕಲಾಜ್ಯೋತಿ ಗೆಳೆಯರ ಬಳಗ, ಯುವ ಲಲಿತ ಕಲಾಸಂಘ ಮುಂತಾದವನ್ನು ಸ್ಥಾಪಿಸಿ ಭಾವಗೀತೆ ಹಾಗೂ ಜನಪದ ಗೀತೆ ಕಾರ್ಯಕ್ರಮಗಳನ್ನು ನೀಡುತ್ತಿದ್ದಾರೆ. ಇವರಿಗೆ **"ಹಾಡುವ ಕೋಗಿಲೆ"** ಎಂಬ ಬಿರುದು ಬಂದಿದೆ.

**ಜಿ.ಉಮೇಶ ಹುಲಿಕುಂಟೆ**: ಶಿರಾದ ಚಿಕ್ಕಹುಲಿಕುಂಟೆಯ ಇವರು ಗಾಯನ ಮನೆತನಕ್ಕೆ ಸೇರಿದವರು. ಶಿರಾ, ಪಾವಗಡ, ಮಧುಗಿರಿ ಮುಂತಾದ ಗಡಿನಾಡುಗಳಲ್ಲಿ ಸುಗಮ ಸಂಗೀತ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಸಾಹಿತ್ಯ ರಚಿಸಿ ರಾಗ ಸಂಯೋಜಿಸಿದ್ದಾರೆ. ಅನೇಕ ಧ್ವನಿಸುರುಳಿಗಳಲ್ಲಿ ಹಾಡಿದ್ದಾರೆ.

**ಐ.ಎಸ್.ಶಕುಂತಲಾ ಭಟ್**: ಉಡುಪಿಯಲ್ಲಿ ಜನಿಸಿ ತುಮಕೂರಿನಲ್ಲಿ ಬಂದು ನೆಲೆಸಿರುವ ಇವರ ತಂದೆ ಬಿ.ಶ್ರೀನಿವಾಸ ಸೋಮಯಾಜಿ, ತಾಯಿ ಶೃಂಗಾರಮ್ಮ. ಇವರು ಸಂಗೀತ ಪರಂಪರೆಯ ಮನೆತನದವರು. ಇವರು ದೇವರನಾಮ ಹಾಗೂ ಕನ್ನಡ, ಮರಾಠಿ, ಹಿಂದಿ ಹಾಡುಗಳನ್ನು ಹಾಡುತ್ತಿದ್ದರು. ಉಡುಪಿಯ ಮುಕುಂದ ಕೃಪಾದಲ್ಲಿ ಸುಗಮ ಸಂಗೀತ ಶಿಕ್ಷಣವನ್ನು ಪಡೆದಿದ್ದು, ನಾಗಮಂಗಲ, ಶಿರಾ ಕೇಂದ್ರ ಸಂಗೀತ ನಾಟಕ ವಿಭಾಗದ ಆಶ್ರಯದಲ್ಲಿ ಹಾಗೂ ಬೆಂಗಳೂರಿನಲ್ಲಿಯೂ ಕಾರ್ಯಕ್ರಮಗಳನ್ನು ನೀಡಿದ್ದಾರೆ. ತುಮಕೂರು ತಾಲೂಕು ಹಾಗೂ ಜಿಲ್ಲಾ ಸಾಹಿತ್ಯ ಸಮ್ಮೇಳನಗಳಲ್ಲಿ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಇದಲ್ಲದೆ ಹಿಂದೂಸ್ತಾನಿ ಸಂಗೀತದಲ್ಲಿ ಪ್ರಥಮ ಪರೀಕ್ಷೆ ತೇರ್ಗಡೆ ಹಾಗೂ ಬಿ.ಮ್ಯೂಜಿಕ್., ಪದವಿ ಪಡೆದಿರುವರು. ಅನೇಕ ಗೀತ ರೂಪಕಗಳಿಗೆ ಸಂಗೀತ ನಿರ್ದೇಶನ ಮಾಡಿದ್ದು, ಕಾರ್ಮೆಲ್ ಶಾಲೆಯಲ್ಲಿ ಸಂಗೀತ ಶಿಕ್ಷಕಿಯಾಗಿ ಸೇವೆ ಸಲ್ಲಿಸಿದ್ದಾರೆ. ರಾಗತರಂಗ ಎಂಬ ಸುಗಮ ಸಂಗೀತ ಸಂಸ್ಥೆ ನಡೆಸುತ್ತಿದ್ದಾರೆ. ಶ್ರೀ ರಾಮದಾಸ ವೇದ ಪಾಠಶಾಲಾ, ಸಿದ್ಧಗಂಗಾ ತಾಂತ್ರಿಕ ಮಹಾವಿದ್ಯಾಲಯ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ತುಮಕೂರು ವತಿಯಿಂದ ಪ್ರಶಸ್ತಿ ಪತ್ರಗಳನ್ನು ಪಡೆದಿರುತ್ತಾರೆ.

**ಉಷಾಗಣೇಶ್**: ತುಮಕೂರಿನಲ್ಲಿ ಜನಿಸಿದ ಇವರು ಪ್ರಸಿದ್ಧ ಸಂಗೀತ ವಿದ್ವಾಂಸರೂ ವಾಗ್ಗೇಯಕಾರರೂ ಆಗಿದ್ದ ಟಿ.ವಿ.ಮುತ್ತಾಚಾರ್ಯರ ಪುತ್ರಿ. ಅಜ್ಜ ಯಕ್ಷಗಾನ ಹಾಗೂ ನಾಟಕದಲ್ಲಿ ಪರಿಣಿತರು. ತಂದೆಯಿಂದ ವಿದ್ವತ್ ಪದವಿವರೆಗೂ ಶಿಕ್ಷಣ ಪಡೆದು, ವಿದ್ವತ್ ಪರೀಕ್ಷೆಯಲ್ಲಿ ದ್ವಿತೀಯ ಸ್ಥಾನ ಪಡೆದರು. ಆದರ್ಶ ಫಿಲಂ ಸಂಸ್ಥೆಯ ಮೂಲಕ ಹಿನ್ನೆಲೆಗಾಯನದಲ್ಲಿ ಪ್ರಥಮ ಸ್ಥಾನವನ್ನು ಗಳಿಸಿ, ಅನೇಕ ಸಂಘ ಸಂಸ್ಥೆಗಳ ಆಶ್ರಯದಲ್ಲಿ ಶಾಸ್ತ್ರೀಯ ಹಾಗೂ ಲಘುಸಂಗೀತ ಕಾರ್ಯಕ್ರಮಗಳನ್ನು ನೀಡುತ್ತಾ ಬಂದಿದ್ದಾರೆ. ಹಿನ್ನೆಲೆಗಾಯನದಲ್ಲಿ ಡಿಪ್ಲೊಮಾ ಗಳಿಸಿರುವರು. ಇವರ ಕಾರ್ಯಕ್ರಮಗಳು ಆಕಾಶವಾಣಿ, ದೂರದರ್ಶನಗಳ ಮೂಲಕ ಪ್ರಸಾರವಾಗುತ್ತಿವೆ. ರಾಜ್ಯ ಸರ್ಕಾರದ ವಾರ್ತಾ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಪ್ರಸಾರಂಗ, ಅಕಾಡೆಮಿಗಳು, ಸಂಘ ಸಂಸ್ಥೆಗಳ ಮೂಲಕ ನಾಡಿನಾದ್ಯಂತ ಕಾರ್ಯಕ್ರಮ ನೀಡಿದ್ದಾರೆ. ಸುಮಾರು ೨೫ಕ್ಕೂ ಹೆಚ್ಚು ಧ್ವನಿಸುರುಳಿಗಳನ್ನು ಹೊರತಂದಿದ್ದಾರೆ. ವಿವಾಹದ ನಂತರ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.

**ಚಂದ್ರಿಕಾ ಗುರುರಾಜ್**: ತುಮಕೂರಿನಲ್ಲಿ ಜನಿಸಿ ಬೆಂಗಳೂರಿನಲ್ಲಿ ವಾಸವಿರುವ ಇವರದು ಕಲಾವಿದರ ಮನೆತನ. ಇವರು ತುಮಕೂರಿನ ಶಕುಂತಲಮ್ಮ ಅವರಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತ ಅಭ್ಯಸಿಸಿದರು. ಬೆಂಗಳೂರಿಗೆ ಬಂದ ನಂತರ ಉಭಯಗಾನ ವಿಶಾರದೆ ಶ್ಯಾಮಲಾ ಜಿ.ಭಾವೆಯವರಲ್ಲಿ ಮತ್ತು ಪಂಡಿತ್ ಸುರೇಂದ್ರಸಾ.ನಾಕೋಡ್ ಅವರ ಬಳಿ ಹಿಂದೂಸ್ತಾನಿ ಸಂಗೀತ ಕಲಿತು ವಿವಿಧ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿದ್ದಾರೆ. ಸ್ವಂತ ಅನುಭವದಿಂದ ಸುಗಮ ಸಂಗೀತವನ್ನು ಸಹ ರೂಢಿಸಿಕೊಂಡಿದ್ದಾರೆ. ರಾಜ್ಯಾದ್ಯಂತ ಅನೇಕ ಸಾಂಸ್ಕೃತಿಕ ಉತ್ಸವಗಳಲ್ಲಿ ೫೦೦ಕ್ಕೂ ಹೆಚ್ಚು ಸುಗಮ ಸಂಗೀತ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಖ್ಯಾತ ಗಾಯಕ ಕೆ.ಜೆ.ಏಸುದಾಸ್ ಅವರ ಜೊತೆ ಅನೇಕ ಗೀತೆಗಳನ್ನು

ಹಾಡಿ ಯಶಸ್ವಿಯಾಗಿದ್ದಾರೆ. ೧೯೯೦ರಿಂದ ಕನ್ನಡ ಚಲನಚಿತ್ರಗಳಲ್ಲಿ ಹಿನ್ನೆಲೆ ಗಾಯಕಿಯಾಗಿ ಸುಮಾರು ೫೪ ಚಿತ್ರಗಳಲ್ಲಿ ಹಾಡಿದ್ದಾರೆ. ೪೦೦ಕ್ಕೂ ಹೆಚ್ಚು ಭಕ್ತಿಗೀತೆ ಮತ್ತು ಭಾವಗೀತೆಗಳನ್ನು ಹಾಡಿದ್ದು ಧ್ವನಿಸುರುಳಿಗಳು ಬಿಡುಗಡೆಯಾಗಿವೆ. ಊರ್ವಶಿ ಚಲನಚಿತ್ರದ ಹಿನ್ನೆಲೆ ಗಾಯನಕ್ಕಾಗಿ ಕರ್ನಾಟಕ ಸರ್ಕಾರದಿಂದ ಅತ್ಯುತ್ತಮ ಗಾಯಕಿ ಪ್ರಶಸ್ತಿ ಲಭಿಸಿದೆ. ಅಲ್ಲದೆ, ಆರ್ಯಭಟ ಪ್ರಶಸ್ತಿ, ಚಿತ್ರಪ್ರೇಮಿಗಳ ಸಂಘದ ವತಿಯಿಂದ ಪ್ರಶಸ್ತಿಗಳನ್ನು ದಕ್ಕಿಸಿಕೊಂಡಿದ್ದಾರೆ.

**ಸುಧಾರತ್ನ:** ತಂದೆ ಎನ್.ಶಾಮಣ್ಣ. ಈಕೆ ಸಂಗೀತದ ಹಿನ್ನೆಲೆಯುಳ್ಳ ಮನೆತನದವರು. ವಿದ್ಯೆಯಲ್ಲಿ ಎಸ್.ಎಸ್.ಎಲ್.ಸಿ ಆದರೂ ಇವರು ಸ್ವಯಂ ಪ್ರತಿಭೆಯಿಂದ ಗಾಯನ ಅಭ್ಯಸಿಸಿ ತುಮಕೂರಿನಲ್ಲಿ ನಡೆದ ಸುಗಮ ಸಂಗೀತ ಕಾರ್ಯಾಗಾರದ ಮೂಲಕ ಹೆಚ್ಚಿನ ಪ್ರಗತಿ ಗಳಿಸಿದ್ದಾರೆ. ಶಾಸ್ತ್ರೀಯ ಸಂಗೀತದಲ್ಲಿ ಜೂನಿಯರ್ ಪರೀಕ್ಷೆ ತೇರ್ಗಡೆ ಹೊಂದಿದ್ದಾರೆ. ತುಮಕೂರು ಸುತ್ತಮುತ್ತಲ ಪ್ರದೇಶಗಳಲ್ಲಿ ಕಾರ್ಯಕ್ರಮಗಳನ್ನು ನೀಡಿ ಜನಪ್ರಿಯರಾಗಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಾರ್ತಾ ಮತ್ತು ಪ್ರಚಾರ ಇಲಾಖೆಗಳ ಮೂಲಕ ಹಲವು ಕಾರ್ಯಕ್ರಮಗಳನ್ನು ನೀಡಿದ್ದಾರೆ.ಗಮಕ ಸುಗಮಸಂಗೀತಗಳಲ್ಲಿ ಬಹುಮಾನ ಗಳಿಸಿದ್ದಾರೆ. ವಚನ ಗಾಯನ ಸ್ಪರ್ದೆಯಲ್ಲೂ ಬಹುಮಾನ ಪ್ರಶಸ್ತಿ ಗಳಿಸಿದ್ದಾರೆ.

**ಆರತಿ:** ಸಂಗೀತಾಸಕ್ತ ಮನೆತನದ ಇವರ. ತಂದೆ ಪಿ. ಶ್ರೀಪತಿ ಭಟ್. ಇವರು ಭಜನೆಗಳಲ್ಲಿ ಹಾಡುತ್ತಿದ್ದರು. ತಾಯಿ ಐ.ಎಸ್.ಶಕುಂತಲಾ ಹಿಂದೂಸ್ತಾನಿ ಹಾಗೂ ಕರ್ನಾಟಕ ಸಂಗೀತಗಳೆರಡರಲ್ಲೂ ಪರಿಶ್ರಮವಿದ್ದವರು. ಅಲ್ಲದೆ ರಾಗತರಂಗ ಎಂಬ ಸುಗಮ ಸಂಗೀತ ವೃಂದದ ನಿರ್ದೇಶಕಿ. ಇವರು ತಂದೆ–ತಾಯಿಯ ಮಾರ್ಗದರ್ಶನ ಪಡೆದು ನಾಗಮಂಗಲದ ಗ್ರಾಮಸೇವಕಿ ಸೀತಮ್ಮ ಅವರಿಂದ ಒಂದು ವರ್ಷ ಸಂಗೀತವನ್ನು ಅಭ್ಯಸಿಸಿ ರಾಗತರಂಗದ ಮೂಲಕ ಶಿಕ್ಷಣ ಕಾರ್ಯಕ್ರಮ ಹಾಗೂ ಕಮ್ಮಟಗಳಲ್ಲಿ ಭಾಗವಹಿಸಿ ಹೆಚ್ಚಿನ ಅನುಭವ ಪಡೆದಿದ್ದಾರೆ. ಇದಲ್ಲದೇ ಹಾರ್ಮೋನಿಯಂ ನುಡಿಸುತ್ತಾರೆ. ಮೈಸೂರು, ಉಡುಪಿ, ತುಮಕೂರು, ಗುಬ್ಬಿ ಮುಂತಾದೆಡೆ ಸಾಂಸ್ಕೃತಿಕ ಉತ್ಸವಗಳಲ್ಲಿ ಕಾರ್ಯಕ್ರಮಗಳನ್ನು ನೀಡಿರುವುದಲ್ಲದೆ ಕೆಲವೊಂದು ಗೀತರೂಪಕಗಳಲ್ಲಿ ಪಾಲ್ಗೊಂಡು ಹಾಡಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಾರ್ತಾ ಮತ್ತು ಪ್ರಚಾರ ಇಲಾಖೆಗಳ ನಿಯೋಜಿತ ಕಲಾವಿದರಾಗಿ ಅನೇಕ ಕಡೆ ಕಾರ್ಯಕ್ರಮ ನೀಡಿದ್ದಾರೆ.

**ಕುಮಾರಿ ಶೃತಿ:** ತುಮಕೂರಿನ 'ಸ್ವೀಟ್ ವಾಯ್ಸ್ ಎಂದು ಹೆಗ್ಗಳಿಕೆ ಪಡೆದ ಈಕೆ ಬಾಲಪ್ರತಿಭೆ. ಸುವರ್ಣ ಚಾನಲ್‌ನ ಸ್ಟಾರ್ ಸಿಂಗರ್, ರಿಯಾಲಿಟಿ ಶೋನಲ್ಲಿ ಭಾಗವಹಿಸಿದ ಗಾಯಕಿ ಬಿ.ಎಸ್ಸಿ., ಪದವೀಧರೆ. ಹಲವಾರು ಟಿ.ವಿ.ಚಾನಲ್‌ಗಳಲ್ಲಿ, ವಿವಿಧ ಸಂಗೀತ ಕಾರ್ಯಕ್ರಮ, ಸಮ್ಮೇಳನಗಳಲ್ಲಿ, ಸಿದ್ಧಗಂಗಾ ಮಠದ ಕಾರ್ಯಕ್ರಮಗಳಲ್ಲಿ, ಜಿಲ್ಲಾ ಉತ್ಸವಗಳಲ್ಲಿ ಹಾಡಿದ್ದಾರೆ. ವಿದ್ವಾನ್ ಶಿವಕುಮಾರ್ ಬಳಿ ಶಾಸ್ತ್ರೀಯ ಸಂಗೀತ ಕಲಿತು ಮಂದಾಕಿನಿಯವರಲ್ಲಿ ಮುಂದುವರಿಸಿದ್ದಾರೆ. ಗಂಗಾ ಕಾವೇರಿ, ಚಿಕ್ಕಮಗಳೂರು ಚಿಕ್ಕಮಲ್ಲಿಗೆ, ಮೆರವಣಿಗೆ, ಅತೀತ ಮುಂತಾದ ಚಲನಚಿತ್ರಗಳಲ್ಲಿ ಹಾಡಿದ್ದಾರೆ. ಅನೇಕ ಭಕ್ತಿಗೀತೆ, ಭಾವಗೀತೆಗಳ ಧ್ವನಿಮುದ್ರಿಕೆಗಳಲ್ಲಿಯೂ ಹಾಡಿದ್ದು, ಅನೇಕ ಪ್ರಶಸ್ತಿ ಬಹುಮಾನ, ಗೌರವ ಸಮ್ಮಾನಗಳೂ ಸಂದಿವೆ.

**ಕುಮಾರಿ ವಿದ್ಯಾ ವಿ.ರಾವ್:** ಬಾಲಪ್ರತಿಭೆಯಾದ ಇವರು ಉದಯ ಟಿ.ವಿ.ಚಾನಲ್ಲಿನಲ್ಲಿ ಹಾಡಿದ್ದಾರೆ. ಅನೇಕ ಸ್ಪರ್ಧೆಗಳಲ್ಲಿ, ಕಾರ್ಯಕ್ರಮಗಳಲ್ಲಿ ಹಾಡಿ ಜನಮನ ಸೂರೆಗೊಂಡಿದ್ದಾರೆ. ಸ್ವರ ಸಿಂಚನ ಸಂಗೀತ ಸಂಸ್ಥೆ, ಕೀರ್ತನ ರಂಗ ಬಳಗ, ಸಿರಿ ಗಾನಮಂದಿರ, ರಾಗತರಂಗ, ಸ್ನೇಹಸಂಗಮ ಮುಂತಾದ ಸಂಗೀತ ಸಂಸ್ಥೆಗಳು ನಡೆಸುವ ಸಂಗೀತ ಸ್ಪರ್ಧೆಗಳಲ್ಲಿ ಭಾಗವಹಿಸಿ ಅನೇಕ ಬಹುಮಾನ ಗಳಿಸಿದ್ದಾರೆ.

**ಪೂಜ್ಯಾ ಮೋಹನ್:** ಸಂಗೀತಗಾರರ ಕುಟುಂಬದಿಂದ ಬಂದ ಇವರು 'ಎದೆ ತುಂಬಿ ಹಾಡುವೆನು', ಈ ಟಿ.ವಿ ಕಾರ್ಯಕ್ರಮದಿಂದ ಹೊರಮೂಡಿದ ಬಾಲಪ್ರತಿಭೆ. ಬಿ.ಎ ಪದವಿ ಜೊತೆಗೆ ಮಂದಾಕಿನಿ ಸತ್ಯನಾರಾಯಣ ಹಾಗೂ ನಾಗವಲ್ಲಿ ನಾಗರಾಜ್ ರವರಲ್ಲಿ ಸಂಗೀತ ಶಿಕ್ಷಣ ಪಡೆದಿದ್ದು ೧೯೯೯ರಲ್ಲಿ ಶಾಸ್ತ್ರೀಯ ಸಂಗೀತಕ್ಕೆ, ೨೦೦೧ರಲ್ಲಿ ಸುಗಮ ಸಂಗೀತಕ್ಕೆ, ಶಿಷ್ಯ ವೇತನ ದೊರಕಿದೆ. ಎಂ.ಎಸ್.ಐ.ಎಲ್, ವನಿತೋತ್ಸವದಲ್ಲಿ ಎರಡು ಬಾರಿ ಹಾಡಿದ್ದು, ಝೀ ಟಿವಿಯ ಗುಣಗಾನದಲ್ಲಿ ಎಸ್.ಜಾನಕಿ ಯವರಿಂದ ಪ್ರತಿಭಾ ಪ್ರಶಸ್ತಿ ಪಡೆದಿದ್ದಾರೆ. ಜಿಲ್ಲಾ ಉತ್ಸವ, ಹಂಪಿ ಉತ್ಸವ, ಗಣೇಶೊತ್ಸವ ಮುಂತಾದೆಡೆ ಕಾರ್ಯಕ್ರಮ ನೀಡಿದ್ದಾರೆ.

**ಕುಸುಮ:** ಅಂಧತ್ವದ ಹೊರತಾಗಿಯೂ ಪದವಿ ಶಿಕ್ಷಣ, ಸಂಗೀತ, ಕಂಪ್ಯೂಟರ್ ಮುಂತಾದ ಶಿಕ್ಷಣ ಪಡೆದಿರುವ ಇವರು ಅನೇಕ ಕಾರ್ಯಕ್ರಮ ನೀಡಿದ್ದಾರೆ. ಹಿನ್ನೆಲೆಗಾಯನ ಹಾಗೂ ಮಧುರ ಮಧುರವೀ ಮಂಜುಳ ಗಾನ, ಉತ್ಸವಗಳಲ್ಲಿ ಹಾಡಿದ್ದಾರೆ. (ಉದಯರವಿ ಚಾಂಪಿಯನ್ ಪ್ರಶಸ್ತಿ ಗಳಿಸಿದ್ದಾರೆ). ಇತರ ಗಾಯಕಿಯರೊಂದಿಗೆ ಹಾಡಿ ಸಿ.ಡಿ. ಹೊರತಂದಿದ್ದಾರೆ.

**ಮಲ್ಲಿಕಾರ್ಜುನ ಕೆಂಕೆರೆ:** ಚಿಕ್ಕನಾಯ್ಕನಹಳ್ಳಿ ತಾಲೂಕು ಕೆಂಕೆರೆಯ ಇವರು ಜಾಗೃತಿ ಗೀತೆ, ಬೀದಿ ನಾಟಕಗಳ ಮೂಲಕ ಗಾಯಕರಾಗಿ, 'ಸ್ವರ ಸಿಂಚನ ಸುಗಮ ಸಂಗೀತ ತರಬೇತಿ ಶಾಲೆ ನಡೆಸುತ್ತಿರುವರು ಜಿಲ್ಲಾ ಉತ್ಸವ ಹಾಗೂ ರಾಜ್ಯಾದ್ಯಂತ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಇವರಿಗೆ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿ ಸನ್ಮಾನಗಳು ದೊರಕಿವೆ.

**ಅಕ್ಕಮ್ಮ:** ಇವರು ಉಪನ್ಯಾಸಕರಾಗಿ ಕೆಲಸ ಮಾಡುತ್ತಿರುವ ಹವ್ಯಾಸಿ ಕಲಾವಿದೆ. ರಂಗಗೀತೆ, ಜನಪದ ಗೀತೆ, ಅರಿವಿನ ಹಾಗೂ ಹೋರಾಟದ ಹಾಡುಗಳ ಮೂಲಕ ಕಂಚಿನ ಕಂಠದ ಸಿರಿಯನ್ನು ಮೆರೆದಿರುವರು. ಶಾಲಾ ಮಕ್ಕಳಿಗೆ ಪರಿಸರ ಗೀತೆಗಳು, ಜಾಗೃತಿ ಗೀತೆಗಳನ್ನು ಕಲಿಸುವಲ್ಲಿಯೂ ಆಸಕ್ತಿ ಉಳ್ಳವರು. ವಸುಂಧರ, ಅರುಂಧತಿ, ಆರ್. ಹೆಚ್.ಸುಕನ್ಯಾ, ಗಂಗಲಕ್ಷ್ಮಿ, ಅಂಬುಜ ಮುಂತಾದವರು ಕೂಡ ವಿವಿಧ ಸಂಘಟನೆಗಳ ಮೂಲಕ ಜನಜಾಗೃತಿ, ಮಹಿಳಾ ಜಾಗೃತಿ ಹಾಡುಗಳ ಮೂಲಕ ಅರಿವು ಮೂಡಿಸುವ ಕೆಲಸ ಮಾಡುತ್ತಿದ್ದಾರೆ. ಇಷ್ಟಲ್ಲದೆ ಅನೇಕ ಆರ್ಕೆಸ್ಟ್ರಾ ತಂಡಗಳು ಜಿಲ್ಲೆಯಾದ್ಯಂತ ಸಂಗೀತಸುಧೆ ಹರಿಸುತ್ತಿವೆ.

**ಮಂಜುಳಾ.ಎನ್:** ಮಧುಗಿರಿ ತಾಲೂಕಿನ ಸಿಂಗ್ರಾವತನಹಳ್ಳಿಯ ಇವರು ಸುಗಮ ಸಂಗೀತ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕುಂದಣದಲ್ಲಿ ಗೀತ ಸಂಸ್ಥೆಯನ್ನೂ, ತುಮಕೂರಿನಲ್ಲಿ ಸ್ನೇಹ ಸುಗಮ ಸಂಗೀತ ಸಂಸ್ಥೆಯನ್ನು ಸ್ಥಾಪಿಸಿದರು. ತಮ್ಮ ಒಂಬತ್ತನೇ ವಯಸ್ಸಿನಲ್ಲಿ ಬೆಂಗಳೂರು ಆಕಾಶವಾಣಿಯ ಬಾಲಜಗತ್ತು ಕಾರ್ಯಕ್ರಮದಲ್ಲಿ ಹಾಡುವ ಮೂಲಕ ರಂಗ ಪ್ರವೇಶಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖಾವತಿಯಿಂದ ತುಮಕೂರು, ಚಿತ್ರದುರ್ಗ, ಮೈಸೂರು, ಮಡಿಕೇರಿ, ಮಂಡ್ಯ, ಶಿವಮೊಗ್ಗ, ಧಾರವಾಡ, ಮತ್ತಿತರೆ ಜಿಲ್ಲೆಗಳಲ್ಲಿ ಸುಗಮ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟಿದ್ದಾರೆ. ತರಳಬಾಳು ಹುಣ್ಣಿಮೆ ಮಹೋತ್ಸವದಲ್ಲಿ ವಚನ ಸಂಗೀತ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ. ಚಂದನ ದೂರದರ್ಶನದಲ್ಲಿ "ಹಾಡೊಂದ ನಾ ಹಾಡುವೆನು ಸಂಗೀತ ಸಪ್ತಾಹದಲ್ಲಿ ಭಾಗವಹಿಸಿದ್ದಾರೆ. ತುಮಕೂರಿನ ಜಿಲ್ಲಾ ಕನ್ನಡ ರಾಜ್ಯೋತ್ಸವ ೬ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸಂಗೀತ ಕಾರ್ಯಕ್ರಮದ ನಿರ್ದೇಶನ ಮಾಡಿರುತ್ತಾರೆ. ೨೦೦೭ರಲ್ಲಿ ಜಿಲ್ಲಾ ಕನ್ನಡ ರಾಜ್ಯೋತ್ಸವದಲ್ಲಿ ಪ್ರಶಸ್ತಿ ಗಳಿಸಿದ್ದಾರೆ. ರಾಜ್ಯ ಮಟ್ಟದ ಸುಗಮ ಸಂಗೀತೋತ್ಸವದಲ್ಲಿ 'ಸಂಗೀತ ರತ್ನ' ಪ್ರಶಸ್ತಿ ಪಡೆದಿದ್ದಾರೆ.

**ರಘುನಂದನ್:** ಖ್ಯಾತ ಹಾರ್ಮೋನಿಯಂ ವಾದಕರಾಗಿದ್ದ ರಾಮನಾಥ್‌ರವರ ಪುತ್ರರವರು ಬಿ.ಕಾಂ ಪದವೀಧರರು. ಸುಗಮ ಸಂಗೀತ ನಿರ್ದೇಶಕರಾಗಿದ್ದಾರೆ. ಅನಂತರ ಸುಗಮ ಸಂಗೀತ ಸಂಸ್ಥೆಯ ಸ್ಥಾಪಕರಾಗಿದ್ದಾರೆ. ಚಿ॥ ರವಿಕಿರಣ್ ,ವಿ.ಹೆಚ್.ಸಂಪತ್‌ಕುಮಾರ್, ಹೆಚ್.ರಾಘವೇಂದ್ರರವರು ತಬಲಾ ವಾದನದಲ್ಲಿ ಪ್ರಸಿದ್ಧರು.

## ಕೀರ್ತನ ಕಲೆ

ಕನ್ನಡ ಸಾಹಿತ್ಯಕ್ಕೆ ಸಲ್ಲಿಸಿರುವ ಕೊಡುಗೆಯಂತೆಯೇ ಕಥಾ ಕೀರ್ತನಕ್ಕೂ ತುಮಕೂರು ಜಿಲ್ಲೆ ನೀಡಿರುವ ಕೊಡುಗೆ ಅನನ್ಯ. ಚಂಪು, ರಗಳೆ, ಷಟ್ಪದಿ, ಕೀರ್ತನೆ, ವಚನ, ಪ್ರಾಚೀನ ಸಾಹಿತ್ಯ ಕೃತಿಗಳಂತೆಯೇ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿಯೇ ಗಣ್ಯವಾದ ಸ್ಥಾನದಲ್ಲಿರುವ ಅನೇಕ ಕವಿಗಳು ತಮ್ಮ ಕಥಾಕೀರ್ತನ ಕೃತಿಗಳ ರಚನೆಯ ಮೂಲಕ ಉತ್ತಮ ಸಾಹಿತ್ಯ ನೀಡಿ ತುಮಕೂರು ಜಿಲ್ಲೆಗೆ ಕೀರ್ತಿ ಕಳಸವಾಗಿದ್ದಾರೆ. ಕೀರ್ತನ ಕೇಸರಿ ಎಂದೇ ಪ್ರಖ್ಯಾತರಾಗಿದ್ದ ಬಿ.ಶಿವಮೂರ್ತಿಶಾಸ್ತ್ರಿ ಈ ಜಿಲ್ಲೆಯವರು. ಅಂತಹ ಮಹನೀಯರ ಸಾಧನೆಯನ್ನಿಲ್ಲಿ ನೀಡಲಾಗಿದೆ.

**ವಾಸುದೇವಾರ್ಯ** (ವಾಸುದೇವ–೧೭೫೦) ಈ ಯತಿಗಳಿಂದ ಜಿಲ್ಲೆಯ ಕೀರ್ತನ ಕಲಾ ಸಾಹಿತ್ಯ ಪ್ರಾರಂಭವಾಗಿದೆ. 'ಕನ್ನಡ ಸಾಹಿತ್ಯ ಚರಿತ್ರೆ' ಯಲ್ಲಿ ಇವರನ್ನು 'ವಾಸುದೇವ ಮನನ ಕೃತಿಯ ಕವಿಯಾಗಿ ಗುರುತಿಸಲಾಗಿದೆ. ಅದ್ವೈತ ತತ್ವ ಪ್ರತಿಪಾದನೆಯ ಪ್ರಮಾಣಪುರುಷರಾಗಿ ಆ ಕಾಲದಲ್ಲಿ ಜನಜನಿತರಾಗಿದ್ದುದರ ಜೊತೆಗೇ ಇವರು ಕೀರ್ತನಕಾರರೂ ಆಗಿದ್ದಿರಬೇಕು.

ಅದ್ವೈತ ವೇದಾಂತದ ಇನ್ನೊಬ್ಬ ಪ್ರತಿಪಾದಕರಾಗಿದ್ದ 'ಜ್ಞಾನ ಸಿಂಧು ವಿನ 'ಚಿದಾನಂದಾವಧೂತ' ಈ ವಾಸುದೇವಾರ್ಯರ ಸಮಕಾಲೀನರಾಗಿದ್ದು, ಇವರು 'ಕಾಮ ವಿಡಂಬನ ಹೆಸರಿನಲ್ಲಿ ನೂರಾರು ಕೀರ್ತನೆಗಳನ್ನೂ 'ಚಿದಾನಂದ ವಚನ ಹೆಸರಿನಲ್ಲಿ ಗುರು ಚಿದಾನಂದನನ್ನು ಕುರಿತ ಹಾಡುಗಳನ್ನೂ ರಚಿಸಿದ್ದಾರೆ. ಇವರು ಚಿಕ್ಕನಾಯಕನಹಳ್ಳಿಯಲ್ಲಿ ವಾಸುದೇವಯತಿಗಳನ್ನು ಭೇಟಿ ಮಾಡಿದ್ದಿರಬೇಕು ಎಂಬ ಊಹೆಯೊಂದಿಗೆ ವಾಸುದೇವ ಯತಿಗಳು 'ತಮ್ಮ ಜ್ಞಾನ, ಭಕ್ತಿ, ವೈರಾಗ್ಯಗಳಿಂದ ಭಕ್ತರನ್ನೂ ಜಿಜ್ಞಾಸುಗಳನ್ನೂ ಮುಮುಕ್ಷುಗಳನ್ನೂ ಆಕರ್ಷಿಸಿಕೊಂಡಿದ್ದರು. ಅವರ ಕಾಲದಲ್ಲಿ ಚಿಕ್ಕನಾಯಕನಹಳ್ಳಿ ಚಿಕ್ಕದಾದರೂ ಸುತ್ತಮುತ್ತ ಪ್ರಸಿದ್ಧವಾದ ಆಧ್ಯಾತ್ಮಿಕ ಕೇಂದ್ರವಾಗಿ ಭಗವದ್ದಾಸರು ಕಲೆಯುವ ಸ್ಥಳವಾಗಿ ಪರಿಣಮಿಸಿದ್ದಂತೆ ಕಾಣುತ್ತದೆ' ಎಂದು ಹೇಳಿರುವ ಮಾತುಗಳು ವಾಸುದೇವಾರ್ಯರು ಕೃತಿ ರಚನೆ ಮಾಡಿದ್ದಾರೆಂಬುದನ್ನು ಬಲಪಡಿಸುತ್ತವೆ. 'ವಾಸುದೇವಾರ್ಯರು ಚಿದಾನಂದಾವಧೂತರು ಈ ಪರಂಪರೆಯ ಯೋಗಿಗಳಾಗಿದ್ದು, ಪರಸ್ಪರ ಭೇಟಿಯಾಗಿದ್ದುದು ಅದ್ವೈತ ಕೀರ್ತನ ಪರಂಪರೆಯ ಜಿಜ್ಞಾಸೆಗಾಗಿ ಎಂದಿಟ್ಟುಕೊಂಡರೆ ಇಬ್ಬರೂ ಪ್ರಯೋಗಶೀಲರೇ ಆಗಿದ್ದಿರಬೇಕೆಂಬ ಅಂಶವನ್ನು ಇವರ ಕೀರ್ತನೆಗಳು ಪುಷ್ಟೀಕರಿಸುತ್ತದೆ. ಇವೆಲ್ಲಕ್ಕಿಂತ ಪ್ರಬಲವಾದ ಪ್ರಮಾಣವೆಂದರೆ ಕೀರ್ತನಕಾರರ ಶಿಷ್ಯ ಪರಂಪರೆಯೇ ಈ ಯತಿಗಳ ಆಶ್ರಯದಲ್ಲಿದ್ದುದು ಮತ್ತು ತಿಮ್ಮಪ್ಪದಾಸ, ವೆಂಕಟದಾಸಾರ್ಯ ಮೊದಲಾದವರು ಯತಿಗಳ ವಂಶಸ್ಥರೇ ಆಗಿರುವುದು. ದಾಸ ಪರಂಪರೆಯೊಂದನ್ನು ಹುಟ್ಟು ಹಾಕಿರುವ ವಾಸುದೇವಾರ್ಯರು ಸ್ವತಃ ಕೃತಿ ರಚನೆ ಮಾಡದಿರಲು ಸಾಧ್ಯವೇ ಇಲ್ಲ. ಆದರೂ ಅವರ ಕೀರ್ತನೆಗಳು ಲಭ್ಯವಿಲ್ಲ.

**ಗೋಪಾಲಾರ್ಯ, ಕೃಷ್ಣ ಯೋಗೀಂದ್ರ ಮತ್ತು ನಾರಾಯಣಾರ್ಯ**: ಈ ಮೂವರನ್ನೂ ತಿಮ್ಮಪ್ಪದಾಸರು ತಮ್ಮ ಕೃತಿಗಳಲ್ಲಿ ಗುರುಪರಂಪರೆಯಲ್ಲಿ ಹೆಸರಿಸಿದ್ದಾರೆ.ವೆಂಕಟದಾಸಾರ್ಯರು ತಿಮ್ಮದಾಸರ ಮಾತುಲ (ಸೋದರಮಾವ). ನಾರಾಯಣಾರ್ಯರು ತಂದೆ. ಗೋಪಾಲಾರ್ಯರೂ ಈ ವಂಶಸ್ಥರೇ ಆಗಿದ್ದಿರಬೇಕೆನಿಸುತ್ತದೆ. ತಿಮ್ಮದಾಸರು ಹೇಳುವ ಗುರುಪರಂಪರೆಯಲ್ಲಿ ಇವರೇ ಮೊದಲಿಗರಾಗಿರುವುದಲ್ಲದೆ ವೆಂಕಟದಾಸಾರ್ಯರು ಇವರನ್ನು 'ಶ್ರೀ ವೇಣುಗೋಪಾಲವರ ಬಾಲಕವಿ' ಎಂದು ಸ್ಮರಿಸಿದ್ದಾರೆಂದೂ, ಆದರೆ ಇವರ ಕವಿತ್ವ ಯಾವುದೂ ಸದ್ಯಕ್ಕೆ ಉಪಲಬ್ದವಿಲ್ಲದ್ದರಿಂದ ಯಾವ ಭಾಷೆಯಲ್ಲಿ ಕವಿತ್ವ ಮಾಡುತ್ತಿದ್ದರೆಂದು ಹೇಳಲು ಶಕ್ಯವಿಲ್ಲವೆಂದೂ ಪ್ರೊ.ಎಂ.ವಿ.ಸೀತಾರಾಮಯ್ಯನವರು ಹೇಳಿದ್ದಾರೆ. ವೆಂಕಟದಾಸಾರ್ಯರು ಇವರನ್ನು 'ಬಾಲಕವಿ' ಎಂದು ಕರೆದಿರಬೇಕಾದರೆ ಇವರ ವಂಶಸ್ಥರೇ ಆಗಿದ್ದು ಅವರ ಕಣ್ಮುಂದೆಯೇ ಕವಿಯಾಗಿ ಬೆಳೆಯುತ್ತಿದ್ದಿರಬೇಕೆಂದೇ ಹೇಳಬೇಕಾಗುತ್ತದೆ. ತಿಮ್ಮದಾಸರ ಕಾಲಕ್ಕೆ ಇವರೂ ಪ್ರಮುಖ, ಪ್ರಭಾವೀ ಗುರುವಾಗಿ ಕಾಣಿಸಿಕೊಂಡಿರಲು ಸಾಧ್ಯವಿದೆ. ಆದರೂ ಇವರ ಕೃತಿಗಳು ದೊರೆತ ನಂತರವಷ್ಟೇ ಸ್ಪಷ್ಟವಾಗುತ್ತದೆ. ಗೋಪಾಲಾರ್ಯರು ಶಿಷ್ಯರನ್ನು ಹೊಂದಿದ್ದರ ಬಗ್ಗೆ ಸುಳುಹುಗಳು ಸಿಗುತ್ತವೆ. 'ಗೋಪಾಲಾರ್ಯ ಯತಿಯ ಶಿಷ್ಯ ಎಂದು 'ಸುಮತಿ ಎಂಬ ಗ್ರಂಥಕರ್ತನನ್ನು (ಕವಿಚರಿತೆ ಸಂ.೩, ೧೯೨೯, ಪು.೯೦) ಎಂ.ವಿ.ಸೀತಾರಾಮಯ್ಯ 'ಕೃಷ್ಣ ಯೋಗೀಂದ್ರ' ಇರಬಹುದೆಂದು ಗುರುತಿಸಿದ್ದು ಈತ ಬರೆದಿರುವ 'ತತ್ವದ ಸೊಬಗಿನ ಸೋನೆ 'ಜೀವೇಶ್ವರ ಸಾಂಗತ್ಯ, ತತ್ವಪದಗಳಲ್ಲಿ ಗುರುಗೋಪಾಲಾರ್ಯರ ಪ್ರಭಾವವಿರುವುದನ್ನು ದೃಢಪಡಿಸುತ್ತಾರೆ. ಭಾಗವತ ಹರಿದಾಸ ಪರಂಪರೆಯ ಬೆಳವಣಿಗೆಗೆ ಪ್ರಮುಖ ಕಾರಣವಾಗಿರುವ ಈ ಇಬ್ಬರ ಕೃತಿಗಳೂ ಲಭ್ಯವಿಲ್ಲದಿರುವುದು ವಿಪರ್ಯಾಸವೇ ಸರಿ.

**ವೆಂಕಟದಾಸಾರ್ಯ:** ವೆಂಕಟದಾಸಾರ್ಯರು ಕೀರ್ತನಕಾರರಾಗಿ ಅಖಂಡಾನಂದ ಸ್ವರೂಪ ಕವಿಯಾಗಿ ಕಂಡುಬಂದಿದ್ದಾರೆ. ಕರ್ನಾಟಕ ಕವಿ ಚರಿತೆಯ (೧೯೭೪ರ ಮುದ್ರಣ) ಮೂರನೇ ಸಂಪುಟದಲ್ಲಿ ವೆಂಕಟದಾಸರ ಉಲ್ಲೇಖ ಎರಡು ಕಡೆ ಬಂದಿದೆ. ಪು.೧೧೭ರಲ್ಲಿ 'ಅಖಂಡಾನಂದ ಸ್ವರೂಪದ ಕವಿಯಾಗಿ ಮತ್ತು ಪು.೧೩೮ರಲ್ಲಿ ವೆಂಕಟದಾಸ (ಕ್ರಿ.ಶ.೧೭೮೦) ಈತನು ಕೀರ್ತನೆಗಳನ್ನು ಬರೆದಿದ್ದಾನೆ. ಇವನು ಮಾಧ್ವ ಕವಿ ಎಂದು ಉಲ್ಲೇಖವಿದೆ. ಇವೆರಡೂ ಒಬ್ಬನನ್ನೇ ಕುರಿತದ್ದಾಗಿದೆ ಎಂಬುದು ಒಂದು ಅಭಿಪ್ರಾಯ. ಮಾಧ್ವ ಸಂಪ್ರದಾಯದಲ್ಲಿ ಈ ಹೆಸರಿನ ದಾಸರ ಉಲ್ಲೇಖ ಕಂಡುಬರುವುದಿಲ್ಲ. ಆದ್ದರಿಂದ ಎರಡನೇ ಉಲ್ಲೇಖ ಮೊದಲನೇ ಉಲ್ಲೇಖಕ್ಕೇ ಸಂಬಂಧಿಸಿದ್ದೆಂದೂ ಈತ ಮಾಧ್ವ ಕವಿಯಲ್ಲವೆಂದೂ ಅದ್ವೈತ ಸಂಪ್ರದಾಯದ ಕವಿ, ಹರಿದಾಸನೆಂದೂ ಬದಲಿಸಬಹುದು. ಈ ಎಲ್ಲ ದಾಸರುಗಳ ಕಾಲ ವಾಸುದೇವಾರ್ಯರ ನಂತರ (೧೭೫೦) ತಿಮ್ಮದಾಸರಿಗೆ ಮೊದಲು (೧೭೭೦) ಈ ನಡುವಿನ ಆಸುಪಾಸಿನಲ್ಲಿ ಬರುತ್ತದೆ. ತಿಮ್ಮಪ್ಪದಾಸರ ಕಾಲವೇ ಇನ್ನೂ ಸ್ವಲ್ಪ ಮುಂದಕ್ಕೋಗುವ ಸಾಧ್ಯತೆಯಿದೆ. ತಿಮ್ಮದಾಸರನ್ನು ಪ್ರತ್ಯೇಕವಾದ ಅಧ್ಯಯನದಲ್ಲಿ ವಿವರವಾಗಿ ಚರ್ಚಿಸಿರುವುದರಿಂದ ಕಾಲದ ವಿಚಾರವನ್ನು ಇಲ್ಲಿ ಪ್ರಸ್ತಾಪಿಸಿಲ್ಲ. ಇವರೂ ಇವರ ತಂದೆ ನಾರಾಯಣಾರ್ಯರೂ ಕೀರ್ತನೆಗಳನ್ನು ರಚಿಸಿದ್ದಾರೆಂಬುದು ವೇದ್ಯವಾಗಿದ್ದರೂ ಅವು ಉಪಲಬ್ದವಿಲ್ಲ.

**ಚಿದಾನಂದ ಅವಧೂತ:** ಅವಧೂತರಾಗಿ ೧೮ನೇ ಶತಮಾನದಲ್ಲಿ ಬಾಳಿ ಬದುಕಿ ಅದ್ವೈತ ತತ್ವವನ್ನು ಕೀರ್ತನೆಗಳ ಮೂಲಕ ಪ್ರಚುರಪಡಿಸುವ ಮೂಲಕ ತಿಮ್ಮಪ್ಪದಾಸರಂತೆ ಕನ್ನಡ ಸಾಹಿತ್ಯದಲ್ಲಿ ಅದ್ವೈತ ಸಾಹಿತ್ಯವನ್ನು ಸೃಷ್ಟಿಸಿದ ಪ್ರಮುಖ ಕವಿ. ಇವರ 'ಜ್ಞಾನಸಿಂಧು', 'ಕಾಮ ವಿಡಂಬನ, ಹಾಗೂ 'ಚಿದಾನಂದ ವಚನ, ಹಾಡುಗಳ ಸಂಗ್ರಹವಾಗಿದ್ದು ಕೀರ್ತನಾ ಸಾಹಿತ್ಯಕ್ಕೆ ಮುಖ್ಯ ಕೊಡುಗೆಯಾಗಿವೆ.

**ತಿಮ್ಮಪ್ಪದಾಸರು(೧೭೭೦-೧೮೬೦):** ವಾಸುದೇವಾರ್ಯ (ಚಿಕ್ಕನಾಯ್ಕನಹಳ್ಳಿ) ಯತಿಗಳ ಶಿಷ್ಯರಾಗಿ ಕಾಣಿಸಿಕೊಳ್ಳುವ ಇವರು ಕನ್ನಡ ಸಾಹಿತ್ಯದ ಕೀರ್ತನ ಪರಂಪರೆಯಲ್ಲಿಯೇ ಅದ್ವೈತ ಹರಿದಾಸ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಪ್ರಮುಖರು. ೫೦೦ಕ್ಕೂ ಅಧಿಕ ಕೀರ್ತನೆಗಳನ್ನು ರಚಿಸಿರುವುದಲ್ಲದೆ 'ಶ್ರೀ ಕೃಷ್ಣ ಬಾಲಲೀಲೆ ಎಂಬ ಬೃಹತ್ ಕೀರ್ತನ ಕಾವ್ಯವನ್ನೂ ರಚಿಸಿದ್ದಾರೆ. 'ಅರ್ಚನ' ಎಂಬ ಹೆಸರಿನಲ್ಲಿ ಒಂದು ನೂರು ಕೀರ್ತನೆಗಳು ಬೆಂಗಳೂರು ವಿಶ್ವವಿದ್ಯಾನಿಲಯದಿಂದ ಪ್ರಕಟವಾಗಿದ್ದು ೧೫೦ ಕೀರ್ತನೆಗಳ ಇನ್ನೊಂದು ಸಂಪುಟ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದಿಂದ ಪ್ರಕಟಣೆಯಾಗಿದೆ. ತುಮಕೂರು ಜಿಲ್ಲೆಯ ಸ್ವಕ್ಷೇತ್ರ ಚಿಕ್ಕನಾಯ್ಕನಹಳ್ಳಿಗೆ ಮಾನ್ಯತೆಯನ್ನು ತಂದುಕೊಡುವ 'ಚಿಕ್ಕನಾಗಪುರವಾಸ' ಅಂಕಿತದೊಂದಿಗೆ ಗುರು ವಾಸುದೇವಾರ್ಯರನ್ನು ಸ್ಮರಿಸುವ ಹಾಗೂ 'ತಿರುಪತಿ ವೆಂಕಟ ಅಂಕಿತದ ಹಲವು ಕೀರ್ತನಗಳು ದೊರೆಯುತ್ತವೆ. (ಆದರೆ 'ಚಿಕ್ಕನಾಗಪುರವಾಸ' ಈ ಪರಂಪರೆಯಲ್ಲೇ ಬರುವ ವೆಂಕಟದಾಸರದ್ದಾಗಿರುವ ಸಾಧ್ಯತೆಯಿದ್ದು ಹೆಚ್ಚಿನ ಪರಿಶೀಲನೆಯ ಅಗತ್ಯವಿದೆ). ಇವುಗಳನ್ನಲ್ಲದೆ 'ಸದ್ಗುರು ಬೋಧಾನುವಾದ ಸುಧೆ ಮತ್ತು 'ಕಾಯಾಜೀವ ಸಂವಾದ ಎಂಬ ಇನ್ನೆರಡು ಪುಟ್ಟ ಕೀರ್ತನ ಕಾವ್ಯಗಳನ್ನೂ ಇವರು ರಚಿಸಿರುವರಲ್ಲದೆ 'ಧ್ರುವಚರಿತೆ' ಎಂಬ ಸಾಂಗತ್ಯ ಕೃತಿಯೂ ಇದ್ದು ಪ್ರತಿಷ್ಠಾನದಿಂದ ಪ್ರಕಟವಾಗಿದೆ.

**ಗುಬ್ಬಿ ಕಿಡಿಗಣ್ಣಪ್ಪ(ಸು.೧೮೦೮-೧೮೭೯):** ನೊಣವಿನಕೆರೆ ಕರಿಬಸವಸ್ವಾಮಿಗಳ ಶಿಷ್ಯನಾದ ಈತ ಕೆಲವು ಹಾಡುಗಳನ್ನು ರಚಿಸಿದ್ದಾನೆ ಎಂಬ ಉಲ್ಲೇಖ ಮಾತ್ರವಿದ್ದು ಈತನ ಬಗ್ಗೆ ಬೇರೇನೂ ಹೆಚ್ಚಿನ ವಿವರಗಳು ಲಭ್ಯವಿಲ್ಲ.

**ಗುಬ್ಬಿ ವಿ.ಪಾ.ಗುರುಸಿದ್ದಪ್ಪ** ಎಂಬ ಇನ್ನೊಬ್ಬ ಕವಿ ೧೯ನೇ ಶತಮಾನದ ಕೃತಿಕಾರನಾಗಿದ್ದಾನೆ. 'ನಂಜುಂಡೇಶ್ವರ ಕೀರ್ತನೆ', 'ಅಡವಿಸ್ವಾಮಿಗಳ ಕೀರ್ತನೆ' ಮುಂತಾದವನ್ನು ರಚಿಸಿದ್ದಾಗಿ ಮೇಲಿನ ಉಲ್ಲೇಖದಿಂದ ಸ್ಪಷ್ಟವಾಗುತ್ತಿದ್ದು, ಈತನ ಕೃತಿಗಳೆಲ್ಲಾ ೧೮೯೩ರಿಂದ ೧೯೦೫ರೊಳಗೆ ಪ್ರಕಟವಾಗಿವೆಯಾದರೂ ಲಭ್ಯವಿಲ್ಲ.

**ನಾರಾಯಣದಾಸರು (೧೮೨೩-೧೯೦೨):** ತಿಮ್ಮಪ್ಪದಾಸರ ಮಕ್ಕಳಾಗಿರುವ ನಾರಾಯಣದಾಸರು ತಂದೆಯ ಕಾಲದಲ್ಲೇ ಮೈಸೂರು ಅರಮನೆಯ ಆಶ್ರಯಕ್ಕೆ ಬಂದುದರಿಂದ ಮೈಸೂರಿನಲ್ಲಿಯೇ ಇದ್ದುಕೊಂಡು ಕೀರ್ತನೆಗಳನ್ನು ರಚಿಸಿ ಅದ್ವೈತ ಕೀರ್ತನ ಪರಂಪರೆಯನ್ನು ಮುಂದುವರಿಸಿದರಾದರೂ ಸ್ವಕ್ಷೇತ್ರ ಚಿಕ್ಕನಾಯ್ಕನಹಳ್ಳಿಯ ಗುರುಪೀಠವನ್ನು ಬಿಡಲಾಗದೆ ತಮ್ಮ ಕೃತಿಗಳಲ್ಲಿ ಅನನ್ಯವಾಗಿ ಸ್ತುತಿಸಿದ್ದಾರೆ. 'ಕೀರ್ತನ ಕುಸುಮಾಂಜಲಿ' ಎಂಬ ಹೆಸರಿನಲ್ಲಿ ಬಿಎಂಶ್ರೀ ಸ್ಮಾರಕ ಪ್ರತಿಷ್ಠಾನ, ಇವರ ಕೀರ್ತನೆಗಳನ್ನು ಪ್ರಕಟಿಸಿದೆ.

**ರಂಗದಾಸರು** (೧೮೩೦-೧೯೧೦): ತುಮಕೂರು ಸಮೀಪದ ಮಾದಗೊಂಡನಹಳ್ಳಿಯ ರಂಗದಾಸರು ಜಿಲ್ಲೆಯ ಪ್ರಮುಖ ಶ್ರೀವೈಷ್ಣವ ಹರಿದಾಸರಾಗಿದ್ದಾರೆ. ಕೇವಲ ೧೬ ಕೀರ್ತನೆಗಳನ್ನಷ್ಟೇ 'ಮಹದೇವಪುರರಂಗ ಅಂಕಿತದಲ್ಲಿ ಇವರು ಬರೆದಿದ್ದು ಕೆಲವು ಧಾರ್ಮಿಕ ಗ್ರಂಥಗಳನ್ನು ರಚಿಸಿದ್ದಾರೆ. ಇವು ಸಮಾಜೋ ಸಾಂಸ್ಕೃತಿಕ ಅಧ್ಯಯನಕ್ಕೆ ಮುಖ್ಯ ಆಕರವಾಗುವಷ್ಟು ಪ್ರಾಮುಖ್ಯತೆ ಮತ್ತು ವೈಶಿಷ್ಟ್ಯತೆಯನ್ನು ಪಡೆದಿವೆ. ವಿಶಿಷ್ಟಾದ್ವೈತ ತತ್ವಗಳನ್ನು ಕೀರ್ತನೆಗಳ ಮೂಲಕ ಕನ್ನಡಿಗರಿಗೆ ಪರಿಚಯಿಸುವ ಮತ್ತು ಅದನ್ನೂ ಸಾಹಿತ್ಯವಾಗಿಸುವ ಮೂಲಕ ಕನ್ನಡ ಸಾಹಿತ್ಯದ ಅಧ್ಯಯನಕ್ಕೆ ಬೇರೆ ಆಯಾಮವನ್ನು ಇವರು ಸೂಚಿಸಿದ್ದಾರೆ.

**ಬೇಟೆರಾಯ ದೀಕ್ಷಿತರು(೧೮೬೬-೧೯೩೭):** ಜಿಲ್ಲೆಯ ತುರುವೇಕೆರೆಯನ್ನು ತಮ್ಮ ಕೀರ್ತನೆಗಳಲ್ಲಿ 'ದೇನುಪುರೀಶ' ಅಂಕಿತದ ಮೂಲಕ ಶಾಶ್ವತಗೊಳಿಸಿರುವ ಬೇಟೆರಾಯ ದೀಕ್ಷಿತರು ಕಳೆದ ಶತಮಾನದಲ್ಲಿ ರಾಮಾಯಣದ ಪ್ರಸಿದ್ಧ ಪ್ರವಚನಕಾರರಾಗಿದ್ದರು. ಕರ್ನಾಟಕದಾದ್ಯಂತ ಇವರ ಪ್ರವಚನಗಳಿಗೆ ಬೇಡಿಕೆಯಿತ್ತು. ಇವರು ನೂರಕ್ಕೂ ಅಧಿಕ ಕೀರ್ತನೆಗಳನ್ನು, ಸಂಪ್ರದಾಯದ ಹಾಡುಗಳನ್ನು ಬರೆದಿದ್ದು ಅವನ್ನು ಇವರ ಮಗ ಪ್ರಸಿದ್ಧ ಕನ್ನಡ ವಿದ್ವಾಂಸ ಹೈದರಾಬಾದಿನ

ಪ್ರೊ.ಬಿ.ರಾಮಸ್ವಾಮಿ ಬಿ.ಎಂ.ಶ್ರೀ ಪ್ರತಿಷ್ಠಾನದ ಮೂಲಕ ಪ್ರಕಟಿಸಿದ್ದಾರೆ. 'ಹನುಮದ್ವಿಲಾಸ 'ಕಿರಾತಾರ್ಜುನೀಯ' 'ಅನುಸೂಯಾ ಚರಿತ್ರೆ', 'ಶಂಕರವಿಜಯ ಮುಂತಾದ ಪ್ರವಚನಗಳಿಂದಲೂ ಪ್ರಖ್ಯಾತರಾಗಿದ್ದು, ನಾಡಿನ ಜನತೆಯಿಂದ ಚಿನ್ನದ ಕಡಗವನ್ನಲ್ಲದೆ 'ರಾಮಕಥಾ ಭೂಷಣ' ನಿರುಪಮವಾಣಿ ಮುಂತಾದ ಬಿರುದುಗಳನ್ನೂ ಪಡೆದು ಸನ್ಮಾನಿತರಾಗಿದ್ದಾರೆ. ಶಾಕುಂತಲ ನಾಟಕವನ್ನು ಅನುವಾದ ಮಾಡುವುದರ ಜೊತೆಗೆ 'ವಾಸವಾಂಬಪುರಾಣ ಎಂಬ ಕನ್ನಿಕಾಪರಮೇಶ್ವರಿಯ ಕಥೆಯನ್ನು ಸಂಸ್ಕೃತದಲ್ಲಿ ರಚಿಸುವಷ್ಟರ ಮಟ್ಟಿಗೆ ಪಾಂಡಿತ್ಯವನ್ನು ಗಳಿಸಿದ್ದ ದೀಕ್ಷಿತರು ಕನ್ನಡ ಸಾಹಿತ್ಯಕ್ಕೆ ತಮ್ಮ ಕೃತಿ ಮತ್ತು ಕೀರ್ತನೆಗಳ ಮೂಲಕ ಉತ್ತಮ ಕೊಡುಗೆಯನ್ನು ಸಲ್ಲಿಸಿದ್ದಾರೆ. ಅದ್ವೈತ ಹರಿದಾಸ ಪರಂಪರೆಯಲ್ಲಿ ಇವರಿಗೂ ಮುಖ್ಯ ಸ್ಥಾನವನ್ನು ಕಲ್ಪಿಸಬೇಕಾಗಿದೆ.

**ಹೊಸಕೆರೆ ಚಿದಂಬರಯ್ಯ (೧೮೭೦-೧೯೭೮):** ಗುಬ್ಬಿ ತಾ॥ ಹೊಸಕೆರೆಯ ಇವರು ೧೯ನೇ ಶತಮಾನದ ಪ್ರಮುಖ ಕವಿ. ಇವರು "ಭಕ್ತಬಂಧು ಪತ್ರಿಕೆ ಪ್ರಕಟಿಸುತ್ತ, ಹರಿದಾಸ ಸಾಹಿತ್ಯಕ್ಕೆ ನೀಡಿರುವ ಕೊಡುಗೆ ಅಪಾರ. ತಾವೂ ಹಾಡುಗಳನ್ನು ರಚಿಸಿರುವುದಲ್ಲದೆ ಆ ಕಾಲದ ಅನೇಕ ಹರಿದಾಸರ ಹಾಡುಗಳನ್ನೂ ಪ್ರಕಟಿಸಿ ಪ್ರೋತ್ಸಾಹಿಸಿದ್ದಾರೆ, ೧೫೦ಕ್ಕೂ ಹೆಚ್ಚಿನ ಕೃತಿ ಕೀರ್ತನಗಳನ್ನು ರಚಿಸಿದ್ದಾರೆ. 'ಕೀರ್ತನ ಕಂಠಾಭರಣ' ಇವರ ಪ್ರಸಿದ್ಧ ಕೃತಿ. ಹರಿಕಥಾ ಪರಂಪರೆಗೆ ಇವರೊಂದು ಉತ್ತೇಜಕ ಸಂಸ್ಥೆಯಾಗಿ ಕೆಲಸ ಮಾಡಿದ್ದಾರೆ.

**ವೇದಬ್ರಹ್ಮ ಟಿ.ಕೆ.ವೇಣುಗೋಪಾಲದಾಸರು** ೧೯೦೧ರಲ್ಲಿ ತುಮಕೂರಿನಲ್ಲಿ ಜನಿಸಿದ್ದು, ಸೋದರ ಮಾವಂದಿರಾದ ರಾಮದಾಸರು, ರಾಘವೇಂದ್ರ ದಾಸರು, ವೆಂಕಟರಾಯ ದಾಸರು ಮುಂತಾದವರು ಮಾಡುತ್ತಿದ್ದ ಹರಿಕಥೆಗಳಿಂದ ಪ್ರೇರಿತರಾಗಿ ಹರಿಕಥೆಯನ್ನು ಅಭ್ಯಸಿಸಿ ತುಮಕೂರು ರಾಘವೇಂದ್ರಚಾರ್ಯರಲ್ಲಿ ಶಾಸ್ತ್ರಾಧ್ಯಯನವನ್ನು ಮಾಡಿದರು. ಸುಮಾರು ೫೦ ವರ್ಷಗಳ ಕಾಲ ಆಕಾಶವಾಣಿಯಲ್ಲಿ ಕಾರ್ಯಕ್ರಮಗಳನ್ನು ನೀಡಿದ್ದರು. ಕರ್ನಾಟಕದಲ್ಲಲ್ಲದೇ ಮುಂಬಯಿ, ಆಂಧ್ರಪ್ರದೇಶ, ತಮಿಳು ನಾಡುಗಳಲ್ಲಿಯೂ ಹರಿದಾಸ ಪರಂಪರೆಯನ್ನು ಬೆಳಗಿಸಿದ್ದರು. ಇವರಿಗೆ 'ಹರಿಕಥಾಂಬುಧಿ ಚಂದ್ರ' ಹರಿದಾಸ ಭೂಷಣ, ಹರಿದಾಸ ರತ್ನ, ಕೀರ್ತನಾಲಂಕಾರ, ಕೀರ್ತನ ಕೇಸರಿ, ಕೀರ್ತನ ಕಂಠೀರವ, ಮುಂತಾದ ಬಿರುದುಗಳು ಬಂದಿವೆಯಲ್ಲದೇ ಕನ್ನಡ ಸಾಹಿತ್ಯ ಪರಿಷತ್ತು, ಕೀರ್ತನ ಕಲಾ ಪರಿಷತ್ತು, ರಾಜ್ಯ ಸಂಗೀತ ನೃತ್ಯ ಅಕಾಡೆಮಿ ಇತ್ಯಾದಿಗಳಿಂದ ಪುರಸ್ಕೃತರಾಗಿದ್ದರು. ಕೀರ್ತನ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಅನೇಕ ಶಿಷ್ಯ ವೃಂದವನ್ನು ಹೊಂದಿದ್ದ ಇವರು ರಚಿಸಿದ 'ಶ್ರೀ ವ್ಯಾಸರಾಜ ಗುರು ಸಾರ್ವಭೌಮ' ಕೃತಿ ಪ್ರಕಟವಾಗಿದೆ.

**ಬಿ.ಶಿವಮೂರ್ತಿಶಾಸ್ತ್ರಿ(೨೩.೨.೧೯೦೩-೧೫.೧.೧೯೭೬):** ತುಮಕೂರಿನ ಇವರು ಸಾಹಿತ್ಯ ಸಂಗೀತಗಳ ಸಂಸರ್ಗದಲ್ಲಿ ಬೆಳೆದವರು. ತಂದೆ ಪುರಾಣಿಕ ಬಸವಯ್ಯಸ್ವಾಮಿ, ತಾಯಿ ನೀಲಮ್ಮ. ಶಾಸ್ತ್ರಿಯವರು ಗುಬ್ಬಿಯಲ್ಲಿ ಉಪಾಧ್ಯಾಯ ವೃತ್ತಿ ಪ್ರಾರಂಭಿಸಿದರು. ಮುಂದೆ ಅದನ್ನು ತ್ಯಜಿಸಿ ಮೈಸೂರು ಆಸ್ಥಾನ ವಿದ್ವಾಂಸರಾದ ಪಿ.ಆರ್.ಕರಿಬಸವಶಾಸ್ತ್ರಿಗಳ ಬಳಿ ಅಧ್ಯಯನ ಮಾಡಿದರು. ೧೯೨೭ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರು ಬಂದಾಗ ಒಂದು ಪುಟ್ಟ ಚಂಪು ಕಾವ್ಯ ರಚಿಸಿ ಅರಸರ ಕೃಪೆಗೆ ಪಾತ್ರರಾಗಿ ಆಸ್ಥಾನ ವಿದ್ವಾಂಸರೂ ಆದರು. ಹಿಂದಿ, ಇಂಗ್ಲೀಷ್, ತೆಲುಗು, ತಮಿಳು ಭಾಷೆಗಳ ಜ್ಞಾನವಿದ್ದು ಸಂಸ್ಕೃತದಲ್ಲಿ ವಿದ್ವಾಂಸರೆನಿಸಿದ್ದರು. ೧೯೪೮ರಲ್ಲಿ ಪಂಡಿತ ರತ್ನಂ ಎಂಬ ಪ್ರಶಸ್ತಿ ಪಡೆದರು. ಭಾರತ ಸ್ವಾತಂತ್ರ್ಯ ಹಾಗೂ ಏಕೀಕರಣ ಚಳವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದು ಕೀರ್ತನೆಗಳ ಮೂಲಕ ಜನಜಾಗೃತಿ ಮೂಡಿಸಿದರು. ಇವರು ೧೯೩೭ರಲ್ಲಿ ಪತ್ರಿಕೆಯೊಂದನ್ನು ಪ್ರಾರಂಭ ಮಾಡಿದ್ದು ೧೯೭೩ರವರೆಗೂ ಪ್ರಕಟವಾಗುತ್ತಿತ್ತು. ಸ್ವತಂತ್ರ ಕರ್ನಾಟಕ ಎಂಬ ವಾರಪತ್ರಿಕೆಯನ್ನು (೧೯೩೯-೪೨) ಸಹ ಹೊರತಂದಿದ್ದರು. ೧೯೫೬-೧೯೬೪ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಧಾರೇಶ ಚರಿತೆ, ಪುರಾತತ್ವ ತ್ರಿವಿಧಿ, ಷಡಕ್ಷರ ಮಂತ್ರ ಮಹಿಮೆ, ಮಾದೇಶ್ವರ ಸಾಂಗತ್ಯ, ವೀರಶೈವ ಸಾಹಿತ್ಯ, ಇತಿಹಾಸ, ಕರ್ನಾಟಕ ಸಂದರ್ಶನ ಮುಂತಾದವು ಇವರ ಕೃತಿಗಳು. ಖ್ಯಾತ ಕವಿ ಹೆಚ್.ಎಸ್. ಶಿವಪ್ರಕಾಶ್ ಇವರ ಪುತ್ರ.

**ಎಲ್.ಲಕ್ಷ್ಮೀಪತಿ:** ಇವರು ಕೊರಟಗೆರೆಯಲ್ಲಿ ಜನಿಸಿದ್ದು ಅವರ ತಂದೆ ಎಂ.ಲಕ್ಷ್ಮೀನಾರಾಯಣ ಭಾಗವತರು ಕೀರ್ತನಕಾರರು. ಸಹೋದರರಾದ ಎಲ್.ನರಸಿಂಹಮೂರ್ತಿ ಹಾಗೂ ಎಲ್.ಸತ್ಯನಾರಾಯಣಮೂರ್ತಿ ಹರಿಕಥಾ ವಿದ್ವಾಂಸರು. ತಂದೆಯಿಂದ ಮೂಲ ಪಾಠವನ್ನು ಅಭ್ಯಸಿಸಿ ಸಂಸ್ಕೃತ ಮತ್ತು ವೇದಾಗಮ ಶಾಸ್ತ್ರಗಳಲ್ಲಿ ಪಾಂಡಿತ್ಯವನ್ನು ಪಡೆದರು. ಚಿಕ್ಕ ವಯಸ್ಸಿನಲ್ಲಿಯೇ ಹರಿಕಥಾ ಕಾರ್ಯಕ್ರಮಗಳನ್ನು ನೀಡಿ ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರ್

ಅವರಿಂದ ಸನ್ಮಾನಿತರಾಗಿದ್ದರು. ಕನ್ನಡ ಮತ್ತು ತೆಲಗು ಭಾಷೆಗಳಲ್ಲಿ ಹರಿಕಥೆಯನ್ನು ಮಾಡುತ್ತಿದ್ದರು. ಅಭಿನವ ಕುಮಾರವ್ಯಾಸ, ಕೀರ್ತನರತ್ನ ಇತ್ಯಾದಿ ಬಿರುದುಗಳನ್ನು ಪಡೆದಿದ್ದರು. ಮುಳಬಾಗಿಲಿನಲ್ಲಿ ನಡೆದ ಮೂರನೇ ಅಖಿಲ ಕರ್ನಾಟಕ ಕೀರ್ತನಕಾರರ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಶ್ರೀಕಾಂತ ಎಂಬ ಹೆಸರಿನಲ್ಲಿ ಅನೇಕ ಕೀರ್ತನೆಗಳನ್ನು ರಚಿಸಿದ್ದರು.

**ತಿಪ್ಪೇರುದ್ರಾರಾಧ್ಯ:** ಪಾವಗಡದ ಕನ್ನಮೇಡಿಯಲ್ಲಿ ಜನಿಸಿದ ಶರಣ. ಇವರು ಯಕ್ಷಗಾನ ಭಾಗವತರಾದ ತಂದೆ ಲಿಂಗಪ್ಪನವರ ಮಾರ್ಗದರ್ಶನದಲ್ಲಿ ಯಕ್ಷಗಾನ ಕಲಿತು ಭದ್ರಗಿರಿ ಅಚ್ಯುತದಾಸರಲ್ಲಿ ಕಥಾಕೀರ್ತನೆಯನ್ನೂ ತುಮಕೂರಿನ ಕೃಷ್ಣಮೂರ್ತಿ ಅವರಲ್ಲಿ ಸಂಗೀತವನ್ನೂ ಅಭ್ಯಯಿಸಿದರು. ಹರಿಕಥೆ ಮತ್ತು ಶಿವಕಥೆಗಳನ್ನು ಮಾಡುವುದರಲ್ಲಿ ಪಾಂಡಿತ್ಯ ಗಳಿಸಿ ನಾಡಿನಾದ್ಯಂತ ಅನೇಕ ಕಥಾಕೀರ್ತನೆಗಳನ್ನು ನಡೆಸಿಕೊಟ್ಟಿದ್ದಾರೆ. ಚಿತ್ರಕಲೆಯಲ್ಲೂ ನಿಪುಣರಾಗಿದ್ದ ಅವರಿಗೆ ಲಲಿತ ಕಲಾ ಅಕಾಡೆಮಿಯಿಂದ ಪ್ರಶಸ್ತಿ ಬಂದಿದೆ. ಮಠ ಮಾನ್ಯಗಳಿಂದ ಸನ್ಮಾನಿತರಾಗಿದ್ದು ಸಾಹಿತ್ಯ ಕೇಸರಿ, ಸಮಾಜ ಸೇವಕ ಮುಂತಾದ ಬಿರುದುಗಳನ್ನು ಗಳಿಸಿದ್ದಾರೆ.

**ಕೆ.ಎಸ್.ವಾಸುದೇವ ಮೂರ್ತಿ:** ತುಮಕೂರಿನಲ್ಲಿ ನೆಲೆಸಿದ್ದು ಇವರ ಪೂರ್ವಜರು ದಿವಾನ್ ಪುರ್ಣಯ್ಯನವರಿಂದ ಸನ್ಮಾನಿಸಲ್ಪಟ್ಟಿದ್ದರಂತೆ. ಸಂಸ್ಕೃತ, ಹಿಂದಿಗಳಲ್ಲಿ ಎಂ.ಎ., ಪಿಹೆಚ್.ಡಿ ಪದವಿಗಳನ್ನು ಪಡೆದಿದ್ದಾರೆ. ಹರಿದಾಸ ರತ್ನಂ ಗೋಪಾಲದಾಸರಿಂದ ಪ್ರಭಾವಿತರಾಗಿ ತುಮಕೂರಿನ ಟಿ.ಕೆ.ರಾಮಮೂರ್ತಿ ಅವರಲ್ಲಿ ಸಂಗೀತ ಅಭ್ಯಾಸ ಮಾಡಿ ಉನ್ನತ ಶಿಕ್ಷಣವನ್ನು ಪಡೆದು ಕಥಾ ಕೀರ್ತನೆ, ಪುರಾಣ ಪ್ರವಚನಗಳನ್ನು ನಡೆಸಿಕೊಟ್ಟಿದ್ದಾರೆ. ರಾಜ್ಯ, ನೆರೆರಾಜ್ಯಗಳಲ್ಲಿ ಹರಿಕಥಾ ಕಾರ್ಯಕ್ರಮಗಳನ್ನು ನೀಡಿದ್ದಾರೆ. ರಾಘವೇಂದ್ರ ಸಂಗೀತ ಸಭಾ ಸಂಸ್ಥೆಯನ್ನು ಸ್ಥಾಪಿಸಿ ಉಚಿತವಾಗಿ ಸಂಗೀತ ಶಿಕ್ಷಣ ನೀಡುತ್ತಿದ್ದಾರೆ. ಕರ್ನಾಟಕ ಕಲಾಶ್ರೀ, ಆಧ್ಯಾತ್ಮ ವಿದ್ಯಾ ಪ್ರವಚನ ಚದುರ, ಹರಿದಾಸ ಸಾಹಿತ್ಯ ಗಾಯನ ಪ್ರವೀಣ ಮುಂತಾದ ಬಿರುದುಗಳು ಬಂದಿವೆ. 'ಸಂಗೀತ ವಿದ್ವಾನ್ ಟಿ.ಕೆ.ರಾಮಮೂರ್ತಿ–ಒಂದು ಜೀವನ ಚರಿತ್ರೆ' 'ಶ್ರೀ ರಾಮ ಚಾರಿತ್ರ ಮಂಜರಿ 'ಶ್ರೀ ಮನ್ಮಹಾಭಾರತ ತಾತ್ಪರ್ಯ ನಿರ್ಣಯ ಮೊದಲಾದ ಗ್ರಂಥ ರಚನಕಾರರು, ಇವರು ಸಂಸ್ಕೃತದಲ್ಲಿ 'ಶ್ರೀಮದ್ಭಾಗವತ ಪುರಾಣದ ಸ್ತೋತ್ರಗಳು' ಮಹಾ ಪ್ರಬಂಧವನ್ನು ರಚಿಸಿ ಡಾಕ್ಟರೇಟ್ ಪದವಿ ಗಳಿಸಿದ್ದಾರೆ.

**ಸುಬ್ರಹ್ಮಣ್ಯ ಜೋಯಿಸ್:** ಕುಣಿಗಲ್ಲಿನಲ್ಲಿ ನೆಲೆಸಿರುವ ಇವರು ಕೀರ್ತನ ಕಲಾವಿದರಾಗಿದ್ದು ಅನೇಕ ಕಡೆಗಳಲ್ಲಿ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಕೀರ್ತನ ಕಲಾರತ್ನ ಇತ್ಯಾದಿ ಬಿರುದುಗಳನ್ನು ಪಡೆದಿದ್ದು ಆಕಾಶವಾಣಿಯಲ್ಲೂ ಇವರ ಕಾರ್ಯಕ್ರಮಗಳು ಬಂದಿವೆ.

**ಹೆಚ್.ಎನ್.ನಾಗರಾಜ:** ತುರುವೇಕೆರೆ ತಾಲೂಕು ಹುಲಿಕಲ್ಲಿನ ಇವರು ತಮ್ಮ ತಾತ ಗಮಕಿ ಪಟೇಲ್ ನಂಜೇಗೌಡರು ಮತ್ತು ಬಿ.ಎಂ.ನಾರಾಯಣದಾಸ್ ಮುಂತಾದವರಲ್ಲಿ ಕಥಾ ಕೀರ್ತನೆಯನ್ನು ಕಲಿತು ಕಾರ್ಯಕ್ರಮಗಳನ್ನು ನೀಡುತ್ತಿದ್ದಾರೆ. ಕೀರ್ತನ ಕಲಾರತ್ನ, ಹರಿಕಥಾ ಚದುರ ಇತ್ಯಾದಿ ಬಿರುದುಗಳು ಬಂದಿವೆ.

**ಎನ್.ಕೆ.ಮೋಹನ್ ಕುಮಾರ್:** ಗುಬ್ಬಿ ತಾಲೂಕಿನ ನಿಟ್ಟೂರಿನಲ್ಲಿ ಜನಿಸಿ ತುರುವೇಕೆರೆಯಲ್ಲಿ ನೆಲೆಸಿರುವ ಇವರು ತಿಪಟೂರಿನ ಹರಿಕಥಾ ವಿದ್ವಾನ್ ಎಸ್.ಕೆ.ರಾಮಶಾಸ್ತ್ರಿ ಅವರಲ್ಲಿ ಕೀರ್ತನ ಕಲೆಯನ್ನು ಅಭ್ಯಸಿಸಿ ರಾಜ್ಯಾದ್ಯಂತ ಕಥಾಕೀರ್ತನ ಕಾರ್ಯಕ್ರಮಗಳನ್ನು ನೀಡಿದ್ದಾರೆ.

**ಟಿ.ಕೆ.ಲಕ್ಷ್ಮೀನರಸಯ್ಯ ದಾಸ್:** ಕೊರಟಗೆರೆ ತಾಲೂಕಿನ ಕೋಳಾಲದ ಇವರು ರಾಘವೇಂದ್ರ ಆಚಾರ್ಯರಲ್ಲಿ ಕೀರ್ತನ ಕಲೆಯನ್ನು ಕಲಿತು ಹಲವಾರು ಜಿಲ್ಲೆಗಳಲ್ಲಿ ಸಂಚರಿಸಿ ನೂರಾರು ಕಾರ್ಯಕ್ರಮಗಳನ್ನು ನೀಡಿದ್ದಾರೆ.

**ಜಿ.ಸೋಮಶೇಖರದಾಸ್:** ಜಿಲ್ಲೆಯ ಕುರುಬರಹಳ್ಳಿಯಲ್ಲಿ ಜನಿಸಿದ ಇವರು ಎಂ.ನಾರಾಯಣದಾಸ್ ಅವರಲ್ಲಿ ಹರಿಕಥಾ ಶಿಕ್ಷಣವನ್ನು ಪಡೆದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ರಾಜ್ಯ ಸಂಗೀತ ನೃತ್ಯ ಅಕಾಡೆಮಿ ಮುಂತಾದ ಸಂಸ್ಥೆಗಳ ಆಶ್ರಯದಲ್ಲಿ ರಾಜ್ಯಾದ್ಯಂತ ಹಲವಾರು ಕಾರ್ಯಕ್ರಮಗಳನ್ನು ನೀಡಿದ್ದಾರೆ. ಕೀರ್ತನ ಚದುರ, ಕೀರ್ತನ ವಿಶಾರದ ಮುಂತಾದ ಬಿರುದುಗಳು ಇವರಿಗೆ ಲಭಿಸಿದೆ.

**ಚಿಟ್ನಹಳ್ಳಿಯ ಶ್ರೀಕಂಠಯ್ಯ:** ಗುಬ್ಬಿ ತಾಲೂಕು ಚಿಟ್ನಹಳ್ಳಿಯ ಶ್ರೀಕಂಠಯ್ಯ ಎನ್ನುವವರು ಹೆಬ್ಬೂರು ಕಾಮಾಕ್ಷಿ ಕುರಿತ ಹಲವು ಹಾಡುಗಳನ್ನು ರಚಿಸಿರುವುದಲ್ಲದೆ ಇವರಂತಹ ಇನ್ನೂ ಅನೇಕರಿದ್ದು ಇವೆಲ್ಲ ಕೀರ್ತನ ಸಾಹಿತ್ಯ ಪರಂಪರೆಗೆ ಬರುತ್ತವೆಯೇ ಎಂಬುದನ್ನು ಪರಿಶೀಲಿಸಬೇಕಾಗಿದ್ದು, ಇಂತಹ ಹಾಡುಗಳನ್ನೂ ಸಮಗ್ರವಾಗಿ ಸಂಗ್ರಹಿಸಬೇಕಾದ ಅಗತ್ಯವೂ ಇದೆ.

### ಜಿಲ್ಲೆಯ ಇತರ ಕೀರ್ತನಕಾರರು

ತುಮಕೂರಿನಲ್ಲಿ ನೆಲೆಸಿದ್ದ **ಹೆಚ್.ಎಸ್.ಸುಬ್ಬರಾಮಯ್ಯ** ತಮ್ಮ ತಂದೆ ಸುಬ್ರಹ್ಮಣ್ಯದಾಸ್ ಅವರಲ್ಲಿ ಹರಿಕಥಾ ಶಿಕ್ಷಣವನ್ನು ಪಡೆದು ಆಕಾಶವಾಣಿಯ ಕಲಾವಿದರಾಗಿದ್ದರು.

ತುಮಕೂರಿನಲ್ಲಿ ಜನಿಸಿದ **ಟಿ.ವಿ.ಗುರುರಾಜದಾಸರು,** ತಂದೆ ಟಿ.ಕೆ ವೇಣುಗೋಪಾಲದಾಸರಿಂದ ಹರಿಕಥಾ ವಾಚನವನ್ನು ಕಲಿತು ಅನೇಕ ಕಾರ್ಯಕ್ರಮಗಳನ್ನು ನೀಡಿದ್ದರು. ಮೈಸೂರು ಮಹಾರಾಣಿಯ ಸತ್ಯಪ್ರೇಮಕುಮಾರಿ ಸಮ್ಮುಖದಲ್ಲಿ ಹರಿಕಥಾ ಕಾರ್ಯಕ್ರಮವನ್ನು ನೀಡಿ ಸ್ವರ್ಣಹಾರವನ್ನು ಪಡೆದಿದ್ದಲ್ಲದೆ ಹರಿಕಥಾ ರತ್ನಾಕರ ಬಿರುದನ್ನೂ, ಪೇಜಾವರ ಮಠದಿಂದ ಹರಿದಾಸ ರತ್ನ ಬಿರುದನ್ನೂ ಪಡೆದಿದ್ದರು.

ತುಮಕೂರಿನ **ಹೆಚ್.ಎನ್.ಲಕ್ಷ್ಮೀನರಸಿಂಹಯ್ಯ** ಅವರ ಚಿಕ್ಕಪ್ಪ ಶೇಷಪ್ಪನವರು ಹರಿಕಥಾ ವಿದ್ವಾಂಸರಾಗಿದ್ದು, ಅವರಿಂದ ಕೀರ್ತನೆ ಕಲೆ ಕಲಿತು ಮೊದಲಿಗೆ ನಾಟಕಗಳಲ್ಲಿ ಕೀರ್ತನೆಗಳನ್ನು ಹಾಡುತ್ತ ನಂತರ ಕೀರ್ತನ ಕಲೆಯನ್ನೇ ವೃತ್ತಿಯಾಗಿ ಇವರು ಮಾಡಿಕೊಂಡರು.

ತುಮಕೂರಿನ ದೇವರಾಯನಪಟ್ಟಣದಲ್ಲಿ ಜನಿಸಿದ **ಮೂರ್ತಿದಾಸ್** ಅವರು ಮೊದಲಿಗೆ ನಾಟಕಗಳಲ್ಲಿ ಅಭಿನಯಿಸುವ ವೇಳೆಯಲ್ಲಿ ಕೀರ್ತನೆ, ಪ್ರವಚನಗಳನ್ನು ಮಾಡುತ್ತಿದ್ದು ಅದನ್ನೇ ಮುಂದುವರೆಸುತ್ತಿದ್ದಾರೆ. ಹಲವಾರು ಪುಸ್ತಕಗಳನ್ನು ಬರೆದಿರುವ ಶ್ರೀಯುತರು ತುಮಕೂರಿನಲ್ಲಿ ಮಂಜುನಾಥ ಕಲಾವೃಂದ ಎಂಬ ಸಂಸ್ಥೆ ನಡೆಸುತ್ತಿದ್ದು ಸಂಗೀತ, ನಟನೆ, ಕೀರ್ತನೆಗಳ ಬಗ್ಗೆ ಶಿಕ್ಷಣ ನೀಡುತ್ತಿದ್ದಾರೆ.

ಮಲ್ಲಸಂದ್ರದಲ್ಲಿ ಜನಿಸಿದ **ತುಮಕೂರು ಲಕ್ಷ್ಮಣದಾಸ್** ಅವರು ಗುರುರಾಜಲು ನಾಯ್ಡು ಅವರಲ್ಲಿ ಕೀರ್ತನೆಯನ್ನು ಕಲಿತು ಹಲವಾರು ಕಡೆ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಹರಿಕಥಾ ಚದುರ, ಕೀರ್ತನ ಚಾಣಕ್ಯ ಮುಂತಾದ ಬಿರುದುಗಳು ಬಂದಿವೆ. ಶಿಕ್ಷಣ ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಇವರು ಬಾಲ್ಯದಿಂದಲೂ ಅಪ್ರತಿಮ ಪ್ರತಿಭಾವಂತರು. ೧೯೬೮ರಲ್ಲಿ ಡಾ.ರಾಜಕುಮಾರ್ ತಂಡ ತುಮಕೂರಿಗೆ ಬಂದು ಮಾಡಿದ ಎಚ್ಚಮನಾಯಕ ನಾಟಕ ಪ್ರದರ್ಶನದಿಂದ ಸ್ಫೂರ್ತಿಗೊಂಡು ತಮ್ಮ ಊರಿನಲ್ಲಿ 'ನವೋದಯ ಕಲಾಸಂಘ' ಸ್ಥಾಪಿಸಿ ನಾಟಕಗಳನ್ನು ಅಭಿನಯಿಸಿದ್ದರು. ಅನೇಕ ನಾಟಕ ಕಂಪನಿಗಳಲ್ಲಿ ವಿವಿಧ ಪಾತ್ರಗಳನ್ನು ಮಾಡಿದ್ದಾರೆ. ಮುಸುರಿ ಕೃಷ್ಣಮೂರ್ತಿ, ಹೊನ್ನಪ್ಪ ಭಾಗವತರ್, ಅರುಣ್ ಕುಮಾರ್, ಎಂ.ಎಸ್.ಉಮೇಶ್, ಭಟ್ಟಿ ಮಹಾದೇವಪ್ಪ, ಉದಯಕುಮಾರ್, ನಟಿಯರಾದ ಸರ್ವಮಂಗಳ, ಪದ್ಮ, ಶಾರದಮ್ಮ ಮುಂತಾದವರೊಂದಿಗೆ ನಟಿಸಿದ್ದಾರೆ. ಇವರು ಮೊದಲು ಹರಿಕಥೆ ಮಾಡಿದ್ದು ಲವಕುಶರ ಕಥೆ. ದೇಶಾದ್ಯಂತ ಸುಮಾರು ೧೫೦೦ ಕ್ಕೂ ಹೆಚ್ಚು ಕಥೆ ಮಾಡಿದ್ದಾರೆ. ೧೨ಕ್ಕೂ ಹೆಚ್ಚು ಧ್ವನಿ ಸುರುಳಿ ಬಂದಿವೆ. ಅಂಬೇಡ್ಕರ್, ಬುದ್ಧ, ಬಸವರ ಬಗ್ಗೆ ಹರಿಕಥೆ ಮಾಡಿದ್ದಲ್ಲದೇ ಏಡ್ಸ್, ಲಸಿಕೆ, ಎದೆಹಾಲು ಮುಂತಾದವುಗಳ ಬಗ್ಗೆ ಜಾಗೃತಿ ಮೂಡಿಸುವ ಕಥೆಗಳನ್ನೂ ಮಾಡಿದ್ದಾರೆ. ತುಮಕೂರು ಜಿಲ್ಲಾ ಕೀರ್ತನ ಕಲಾ ಪರಿಷತ್ತಿನ ಅಧ್ಯಕ್ಷರಾಗಿ, ದೂರದರ್ಶನ, ಆಕಾಶವಾಣಿ ಕಲಾವಿದರಾಗಿ ದೇಶವಿದೇಶಗಳಲ್ಲಿ ಕಲಾಪ್ರತಿಭೆ ತೋರಿದ ಇವರಿಗೆ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ರಾಜ್ಯ ಹಾಗೂ ಕೇಂದ್ರ ಪ್ರಶಸ್ತಿ, ಬಾಬಾ ಸಾಹೇಬ್ ಅಂಬೇಡ್ಕರ್ ಪ್ರಶಸ್ತಿ, ನಾಡಚೇತನ, ಕೆಂಪೇಗೌಡ ಪ್ರಶಸ್ತಿ, ಕಲಾಶ್ರೀ ಮುಂತಾದ ಅನೇಕ ಪ್ರಶಸ್ತಿ ಬಂದಿವೆ. ತುಮಕೂರು ವಿಶ್ವವಿದ್ಯಾಲಯ ಇವರಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ. ಅನೇಕ ಸಂಘ ಸಂಸ್ಥೆಗಳು ಇವರನ್ನು ಸನ್ಮಾನಿಸಿವೆ.

ತುಮಕೂರಿನ ಅಂತರಸನಹಳ್ಳಿಯಲ್ಲಿ ಜನಿಸಿದ **ಎ.ಟಿ.ಕೃಷ್ಣಮೂರ್ತಿ** ಅವರು ಹರಿಕಥೆಯನ್ನು ಕಲಿತು ಕಾರ್ಯಕ್ರಮಗಳನ್ನು ನೀಡಿದ್ದಾರೆ. ಕರ್ನಾಟಕ ಕೀರ್ತನಕಾರರ ಸಮ್ಮೇಳನದಲ್ಲಿ ಪ್ರಶಸ್ತಿ ದೊರೆತಿದೆ. ಹಲವಾರು ನಾಟಕಗಳನ್ನು ಸಹ ರಚಿಸಿದ್ದಾರೆ.

ತುಮಕೂರಿನ ಬೆಳಚನಹಳ್ಳಿಯಲ್ಲಿ ಜನಿಸಿದ **ಜಿ.ಎಸ್.ಸುಂದರಮ್ಮ** ಅವರದು ಕೀರ್ತನಕಾರರ ವಂಶ. ಸಂಗೀತ ಹಾಗೂ ಗಮಕ ಕಲೆಯಲ್ಲೂ ಹೆಚ್ಚಿನ ಪರಿಶ್ರಮ ಹೊಂದಿದ್ದಾರೆ. ದಾಸಾಶ್ರಮ, ಕೀರ್ತನ ಕಲಾ ಪರಿಷತ್ತು, ಮೊದಲಾದ ಕಡೆಗಳಲ್ಲಿ ಪುರಸ್ಕೃತರಾಗಿದ್ದಾರೆ. ಸಂಕ್ಷಿಪ್ತ ರಾಮಾಯಣ ಎಂಬ ಪುಸ್ತಕವನ್ನು ಪ್ರಕಟಿಸಿದ್ದಾರೆ.

ತುಮಕೂರಿನಲ್ಲಿ ಜನಿಸಿದ **ಸಿದ್ಧಗಂಗಮ್ಮ** ಅವರು ಹೊನ್ನಪ್ಪ ಭಾಗವತರ್ ಮುಂತಾದವರ ಬಳಿಯಲ್ಲಿ ಕೀರ್ತನೆ ಕಲೆಯನ್ನು ಕಲಿತು ಕರ್ನಾಟಕದ ಹಾಗೂ ಆಂಧ್ರ, ತಮಿಳುನಾಡುಗಳಲ್ಲಿಯೂ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಇವರಿಗೆ ಧರ್ಮಸ್ಥಳದ ವೀರೇಂದ್ರ ಹೆಗ್ಗಡೆಯವರು ಬೆಳ್ಳಿ ಪದಕ ನೀಡಿ ಗೌರವಿಸಿದ್ದಾರೆ. ಹರಿಕಥಾ ವಿದುಷಿ, ಕೀರ್ತನ ಚಕ್ರೇಶ್ವರಿ, ಕೀರ್ತನ ವಿಶಾರದೆ, ಕೀರ್ತನ ಸರಸ್ವತಿ, ಶಿವಕಥಾ ಪ್ರವೀಣೆ, ಪ್ರವಚನ ವಿದುಷಿ ಮೊದಲಾದ ಬಿರುದುಗಳನ್ನು ಅನೇಕ ಸಂಘ ಸಂಸ್ಥೆಗಳು ನೀಡಿ ಗೌರವಿಸಿವೆ.

ಗುಬ್ಬಿ ತಾಲೂಕು ಅಡಗೂರಿನಲ್ಲಿ **ಗಂಗಮ್ಮ** ಎಂಬ ಕೀರ್ತನಕಾರರಿದ್ದುದು ಕಂಡುಬರುತ್ತದೆ. ತಿಪಟೂರಿನಲ್ಲಿ ವಾಸಿಸುತ್ತಿರುವ **ಹೆಚ್. ವಾದೀಶಾಚಾರ್** ಅವರು ಕೀರ್ತನ ಕಲೆಯಲ್ಲಿ ಪ್ರೌಢಶಿಕ್ಷಣ ಪಡೆದು ಕರ್ನಾಟಕವಲ್ಲದೆ ಆಂಧ್ರ, ತಮಿಳುನಾಡುಗಳಲ್ಲಿಯೂ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಹೊನ್ನೇನಹಳ್ಳಿಯಲ್ಲಿ ಜನಿಸಿದ **ಕೆ.ನಂಜುಂಡಾಚಾರ್ಯ** ಅವರು ಭಾಗವತ ಸಂಪ್ರದಾಯದ ಮನೆತನದವರು. ದಾಸಾಶ್ರಮದ ಕೀರ್ತನ ಮಹಾವಿದ್ಯಾಲಯದಲ್ಲಿ ಹರಿಕಥಾ ಶಿಕ್ಷಣವನ್ನು ಪಡೆದು ಆಕಾಶವಾಣಿಯೂ ಸೇರಿದಂತೆ ಅನೇಕ ಕಡೆಗಳಲ್ಲಿ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಕೀರ್ತನಾ ಚದುರ ಪ್ರಶಸ್ತಿ ದೊರೆತಿದೆ. ತಿಪಟೂರಿನಲ್ಲಿ ನೆಲೆಸಿರುವ **ಗದ್ದಣ್ಣಚಾರ್ಯರು** ಹರಿಕಥಾ ವಂಶಸ್ಥರು ಅಲ್ಲದೆ ತೊಗಲು ಬೊಂಬೆ, ಪುತ್ತಳಿ ಬೊಂಬೆ, ಯಕ್ಷಗಾನಗಳಲ್ಲೂ ಪರಿಶ್ರಮವುಳ್ಳವರು. ಶಿವರಾಮಯ್ಯ ಅವರಿಂದ ಸಂಗೀತವನ್ನೂ ರಾಮಕೃಷ್ಣಶಾಸ್ತ್ರಿಗಳಲ್ಲಿ ಗಮಕವನ್ನೂ ತಂದೆಯವರಿಂದ ಕೀರ್ತನೆಯನ್ನೂ ಕಲಿತು ಜಿಲ್ಲೆಯ ಅನೇಕ ಗ್ರಾಮೀಣ ಪ್ರದೇಶಗಳಲ್ಲಿ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಕೀರ್ತನ ಕಂಠಾಭರಣ, ಕೀರ್ತನ ಚದುರ, ಕೀರ್ತನ ವಿದ್ವಾನ್ ಬಿರುದುಗಳು ಬಂದಿವೆ. ತಿಪಟೂರಿನ ರಾಮಚಂದ್ರಪುರದಲ್ಲಿ ಜನಿಸಿದ **ಸಿ.ಕೃಷ್ಣಪ್ಪನವರು** ಸ್ವಪ್ರಯತ್ನದಿಂದ ಹರಿಕಥೆಯನ್ನು ಕಲಿತು ಅನೇಕ ಕಾರ್ಯಕ್ರಮಗಳನ್ನು ನೀಡಿದ್ದರು. ಕೀರ್ತನಚದುರ, ಕೀರ್ತನಭೂಷಣ, ಧರ್ಮಪ್ರಚಾರಕ ಮುಂತಾದ ಬಿರುದುಗಳು ಇವರಿಗೆ ಸಂದಿವೆ.

ತ್ಯಾಮಗೊಂಡ್ಲುವಿನಲ್ಲಿ ಜನಿಸಿ ತಿಪಟೂರಿನಲ್ಲಿ ನೆಲೆಸಿದ್ದ **ಎಸ್.ಕೆ.ರಾಮಾಶಾಸ್ತ್ರಿ** ಅವರ ತಂದೆ ಎಸ್.ಕೃಷ್ಣಶಾಸ್ತ್ರಿ ಅವರು ಪ್ರವಚನಕಾರರಾಗಿದ್ದು, ಮೈಸೂರು ಆಸ್ಥಾನದಲ್ಲಿ ವಿದ್ವಾಂಸರಾಗಿದ್ದರು. ಉಪಾಧ್ಯಾಯ ವೃತ್ತಿಯಲ್ಲಿದ್ದರೂ ಹಳೆಯ ಮೈಸೂರು ಭಾಗದಲ್ಲಿ ನೂರಾರು ಕಾರ್ಯಕ್ರಮಗಳನ್ನು ನೀಡಿದ್ದರು.

ತುರುವೇಕೆರೆ ತಾಲೂಕು **ಹುಲಿಕಲ್ ನಾಗರಾಜ್** ಬಹುಮುಖ ಪ್ರತಿಭೆ. ಕೀರ್ತನೆಗಳ ಕಣಜ ಎಂದೇ ಹೆಸರುವಾಸಿಯಾದ ಇವರು ಕೀರ್ತನಕಾರರು, ನಟರು, ಜನಪದ ಕಲಾವಿದರು, ಪೌರಾಣಿಕ ಪಾತ್ರಧಾರಿ, ರಂಗಗೀತೆಗಳನ್ನೂ ಹಾಡುತ್ತಾರೆ. ಕೀರ್ತನ ಕಲಾರತ್ನ, ಕೀರ್ತನ ಚತುರ, ಕೆಂಪೇಗೌಡ ಪ್ರಶಸ್ತಿ, ಸಮಾಜ ಸೇತು ಪ್ರಶಸ್ತಿ ಮುಂತಾದ ಪ್ರಶಸ್ತಿ ದೊರಕಿವೆ. ಅಖಿಲ ಕರ್ನಾಟಕ ಕೀರ್ತನ ಕಲಾ ಪರಿಷತ್ತಿನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ.

ಕೊರಟಗೆರೆಯ ಸೋಂಪುರದಲ್ಲಿ ಜನಿಸಿದ **ಬಿ.ಎನ್.ಭೀಮರಾವ್ (ಭೀಮೇಶದಾಸ)** ಮತ್ತು ಅವರ ಅಣ್ಣ ನರಸಿಂಹದಾಸರು ಹರಿಕಥಾ ವಿದ್ವಾಂಸರು. ಇವರು ಮೊದಲು ಅಣ್ಣನ ಬಳಿ, ನಂತರ ಹಲವಾರು ಶಿಕ್ಷಕರಲ್ಲಿ ಹರಿಕಥೆ ಮತ್ತು ಗಮಕಗಳನ್ನು ಅಭ್ಯಸಿಸಿ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಕೀರ್ತನ ಚದುರ, ಹರಿಕಥಾ ವಿದ್ವಾನ್ ಇತ್ಯಾದಿ ಬಿರುದುಗಳು, ಸನ್ಮಾನಗಳು ಶ್ರೀಯುತರಿಗೆ ಸಂದಾಯವಾಗಿದೆ. ದಾಸ ಭೀಮೇಶ ಅಂಕಿತದಲ್ಲಿ ದೇವರ ನಾಮಗಳನ್ನು ರಚಿಸಿದ್ದಾರೆ.

ಮಿಡಿಗೇಶಿಯಲ್ಲಿ ಜನಿಸಿದ **ಎಂ.ಹೆಚ್.ವೆಂಕಟಾಚಲಯ್ಯ** ಅವರ ತಾತ ರುದ್ರಪ್ಪನವರು ಪಿಟೀಲು ವಾದಕರಾಗಿದ್ದರು. ಸಂಜೀವದಾಸರಲ್ಲಿ ಹರಿಕಥೆಯನ್ನು ಅಭ್ಯಸಿಸಿ ಹಳೆಯ ಮೈಸೂರು ಪ್ರದೇಶದಲ್ಲಿ ಅನೇಕ ಕಾರ್ಯಕ್ರಮಗಳನ್ನು ನೀಡಿದ್ದಾರೆ.

ಸೋಂಪುರದಲ್ಲಿ ಜನಿಸಿದ **ಎನ್.ಆಚಾರಪ್ಪ** ಅವರು ತಂದೆಯಿಂದ ಸಂಗೀತವನ್ನು ತಾಯಿಯಿಂದ ಹರಿದಾಸ ಕೀರ್ತನೆಗಳನ್ನು ಕಲಿತಿದ್ದಲ್ಲದೆ ಹೊನ್ನಂಜಾಚಾರ್ಯರಲ್ಲಿ ಪ್ರೌಢಶಿಕ್ಷಣ ಪಡೆದು ಭದ್ರಗಿರಿಯ ಅಚ್ಯುತದಾಸರಿಂದ ಹರಿಕಥೆಯಲ್ಲಿ ಹೆಚ್ಚಿನ ಶಿಕ್ಷಣ ಪಡೆದರು. ಹಲವಾರು ಕಡೆಗಳಲ್ಲಿ ಕಾರ್ಯಕ್ರಮ ನೀಡಿ ಸನ್ಮಾನಗಳನ್ನು ಪಡೆದಿದ್ದಾರೆ.

ಮಧುಗಿರಿ ತಾಲೂಕಿನ ಶಿವನಗೆರೆಯಲ್ಲಿ ನೆಲೆಸಿರುವ **ಮಲ್ಲೇಶಪ್ಪ** ಅವರು ಲಕ್ಷ್ಮಣದಾಸ ವೇಲಣಕರ್ ಅವರಲ್ಲಿ ಹರಿಕಥೆಯನ್ನು ಅಭ್ಯಸಿಸಿ ಹಲವಾರು ಕಾರ್ಯಕ್ರಮಗಳನ್ನು ನೀಡಿದ್ದಾರೆ. ಕೀರ್ತನ ಕಲಾ ಪರಿಷತ್ತಿನಿಂದ ಪ್ರಶಸ್ತಿ ಗಳಿಸಿದ್ದಾರೆ.

ಕುಣಿಗಲ್ಲಿನಲ್ಲಿ ನೆಲೆಸಿರುವ **ಸುಬ್ರಹ್ಮಣ್ಯ ಹರಿದಾಸ್** ಅವರು ಸಂಗೀತ ಹಾಗೂ ಕೀರ್ತನೆಗಳಲ್ಲಿ ಶಿಕ್ಷಣ ಪಡೆದು ಹಲವಾರು ಕಾರ್ಯಕ್ರಮಗಳನ್ನು ನೀಡಿದ್ದಾರೆ. ಅಮೃತೂರಿನಲ್ಲಿ ನೆಲೆಸಿರುವ ಎ.ಲಕ್ಷ್ಮೀನಾರಾಯಣಭಟ್ಟ ಅವರದು ದಾಸ ಸಂಪ್ರದಾಯದ ಮನೆತನ. ದಾಸಾಶ್ರಮದಲ್ಲಿ ಕೀರ್ತನ ಶಿಕ್ಷಣ ಪಡೆದು ಕಾರ್ಯಕ್ರಮಗಳನ್ನು ನೀಡಿದ್ದಾರೆ. ಶಿರಾ ತಾಲೂಕು ತಡಕಲೂರು ಗ್ರಾಮದ ಕದುರಯ್ಯನವರು ಹರಿಕಥೆ ಮಾತ್ರವಲ್ಲದೇ ಗಮಕ, ಭಕ್ತಿಗೀತೆ, ಭಾವಗೀತೆ, ಭಜನೆ, ಸುಗಮ ಸಂಗೀತದಲ್ಲಿಯೂ ಪರಿಶ್ರಮ ಉಳ್ಳವರಾಗಿದ್ದಾರೆ. ಈ ಭಾಗದಲ್ಲಿ ಶನಿಮಹಾತ್ಮನಕಥೆ ಮಾಡುವುದರಲ್ಲಿ ಪ್ರಸಿದ್ಧರು. ನಳಚರಿತ್ರೆ, ಸಾನಂದ ಚರಿತ್ರೆ, ಹರಿಭಕ್ತಸಾರ, ಐರಾವತ, ಮಹಾಭಾರತ ಕಥೆ, ಮುಂತಾದ ಕಥಾ ಕೀರ್ತನೆ ಇವರ ಬತ್ತಳಿಕೆಯಲ್ಲಿವೆ. ಹಲವಾರು ಶಾಲೆಗಳಿಗೆ ಹೋಗಿ ನಾಟಕ, ವಚನ ಮುಂತಾದವುಗಳನ್ನು ಕಲಿಸಿಕೊಡುತ್ತಾರೆ. ಅನೇಕ ಏಕಾಂಕ ನಾಟಕಗಳನ್ನು ರಚಿಸಿರುವ ಇವರು ಕವಿಯೂ ಹೌದು. ತಡಕಲೂರು ಕವನಪ್ರಿಯ ಎಂಬ ಕಾವ್ಯನಾಮದಲ್ಲಿ ಇವರ ಕವಿತೆಗಳು ಪ್ರಕಟವಾಗಿವೆ.

## ಜಾನಪದ

'ಜನಪದ ಕಲೆ' ಎಲ್ಲಾ ಸಾಂಸ್ಕೃತಿಕ ಕಲೆಗಳ ಮೂಲ ಬೇರು. ವೈವಿಧ್ಯ ಪ್ರಕಾರಗಳನ್ನು ಹೊಂದಿರುವ ವಿಶಿಷ್ಟ ಕ್ಷೇತ್ರ. ಜನಪದ ಕಲೆಯನ್ನು ಮುಖ್ಯವಾಗಿ ಮನರಂಜನೆ ಕಲೆ, ದೇವ ಆರಾಧನೆ ಕಲೆ, ಪ್ರದರ್ಶನ ಕಲೆ, ಜನಪದವಾದ್ಯ ಎಂಬುದಾಗಿ ವರ್ಗೀಕರಿಸಬಹುದು. ಜನಪದ ಕಲೆಯು ಜನಪದ ಗೀತೆ, ಸೋಬಾನೆ, ರಂಗಕುಣಿತ, ಯಕ್ಷಗಾನ, ನಾಟಕ, ಬಯಲಾಟ, ಕೋಲಾಟ, ಸುಗ್ಗಿ ಕುಣಿತ, ಸೋಮನ ಕುಣಿತ, ನಂದಿಧ್ವಜ, ಕರಪಾಲ ಮೇಳ, ಚೌಡಿಕೆ, ಸೂತ್ರದಗೊಂಬೆ–ತೊಗಲುಗೊಂಬೆಯಾಟ, ಲಿಂಗದ ವೀರರು, ವೀರಗಾಸೆ, ಚಿಟ್ಟಿಮೇಳ, ಲಂಬಾಣಿ ನೃತ್ಯ, ಗಾರುಡಿ ಗೊಂಬೆ, ಮೋಡಿ, ಏಕತಾರಿ, ಕರಡಿವಾದ್ಯ, ತಂಬೂರಿ, ಭಜನೆ, ಲಾವಣಿ, ಬುಡುಬುಡುಕೆ, ಹಲಗೆಕುಣಿತ, ಡಿಕಾಂಬರಿ, ಕರಡಿ ಮಜಲು–ಹುಲಿವೇಷ, ಕೋಡಂಗಿ ವೇಷ, ಪಾಳೆಗಾರರ ವೇಷ, ಕೊಂಡಮಾಮ, ಭೂತಸೇವೆ, ಮುಖವೀಣೆ, ಡೋಲು, ಕಗ್ಗ, ಕರಗ, ಕಿನ್ನರಿ, ಕೀಲು ಕುದುರೆ, ಕೊಂಬು ಕಹಳೆ, ಗಣೆ, ಗೊರವರ ಕುಣಿತ, ಬೆಳದಿಂಗಳ ಪೂಜೆ(ಮಳೆದೇವರು), ಹರೆವಾದ್ಯ, ಹರಿಗೆ, ಹೆಳವರು, ದೊಂಬರಾಟ, ಕೋಲೆಬಸವ, ಕೊರವಂಜಿ, ಕೋಳಿ ಪಂದ್ಯ, ಟಗರು ಪಂದ್ಯ, ಕಾವಾಡಿ ಕುಣಿತ, ಮಾಯಕ್ಕನ ಕುಣಿತ ಪಂಢರಿಭಜನೆ, ಜಾಗಟೆ, ತಂಬೂರಿ ಭಜನೆ, ಜುಂಜಪ್ಪನಗಣೆ ಮುಂತಾದ ಕಲೆಗಳಿಂದ ಕೂಡಿದೆ.

**ಕರಪಾಲ ಮೇಳ**: ಕರಪಾಲ ಮೇಳದ ತಂಡದಲ್ಲಿ ಸಾಮಾನ್ಯವಾಗಿ ಐದು ಮಂದಿ ಇದ್ದು, ತಲೆಗೆ ಉದ್ದ ಕುಲಾವಿ, ಕತ್ತಿಗೆ ರುದ್ರಾಕ್ಷಿ ಸರ, ಕರ್ಣಕುಂಡಲ, ಕಾಲಿಗೆ ಗೆಜ್ಜೆ ಧರಿಸಿರುವವನು ಮುಖ್ಯಕಥೆಗಾರನಾದರೆ, ಇಬ್ಬರು ಸಹನೃತ್ಯದವರಾಗಿದ್ದು, ಉಳಿದಿಬ್ಬರಲ್ಲಿ ಒಬ್ಬ ದಮ್ಮಡಿಯವನಾದರೆ, ಇನ್ನೊಬ್ಬ ತಾಳ ಹಾಕಿ ಹಿಮ್ಮೇಳ ನೀಡುತ್ತಾರೆ. ಹಾಡು, ಸಂಭಾಷಣೆಗಳಿಂದ ಕೂಡಿದ ಕತೆಯನ್ನು ರಂಜನೀಯವಾಗಿ ಹೇಳುತ್ತಾರೆ. ಇದಕ್ಕೆ ತಿಪಟೂರು ತಾಲೂಕು ಕೊನೆಹಳ್ಳಿ ಸಿದ್ದಯ್ಯ ಹಟ್ನದ ಕೆಂಪಯ್ಯ ಮತ್ತು ತಂಡ ಪ್ರಸಿದ್ಧವಾದುದು.

**ಗಣೆವಾದನ:** ಇದನ್ನು ಗಣೆ ಊದುವುದು ಎನ್ನುತ್ತಾರೆ. ಇದು ಕಾಡುಗೊಲ್ಲರ ಸಂಸ್ಕೃತಿಗೆ ಸೇರಿದ್ದು ಧಾರ್ಮಿಕತೆ ಹಾಗೂ ಕಲಾವಂತಿಕೆಗಳೆರಡರಲ್ಲೂ ಬಳಸುತ್ತಾರೆ. ಜುಂಜಪ್ಪನ ಚರಿತ್ರೆ ಅಥವಾ ಮಹಿಮೆಯನ್ನು ಹಾಡುವಾಗ ಜುಂಜಪ್ಪನ ಆರಾಧಕರು ಬಳಸುವ ಇದನ್ನು ಸಾಂಸ್ಕೃತಿಕ ನಾಯಕನಾದ ಜುಂಜಪ್ಪ ದನಗಳನ್ನು ಕಾಯುವಾಗ ಗಣೆ ಊದುತ್ತಿದ್ದ ಎಂದು ಜನರ ನಂಬಿಕೆ. ಆದ್ದರಿಂದ ಇದಕ್ಕೆ ಜುಂಜಪ್ಪನ ಗಣೆ ಎಂದೂ ಕರೆಯುತ್ತಾರೆ. ಕಾಡುಗೊಲ್ಲರು ಕುರಿಮೇಯಿಸುವ ತಮ್ಮ ವೃತ್ತಿಯಲ್ಲಿ ಊರೂರು ವಲಸೆ ಹೋಗುವಾಗ ರಾತ್ರಿ ಕುರಿಮಂದೆ ತಡೆಯುವುದು, ಕುರಿಗಳ ರಕ್ಷಣೆಯಲ್ಲಿ ರಾತ್ರಿಯೆಲ್ಲಾ ಎಚ್ಚರವಿರಬೇಕಾದ ಸಂದರ್ಭದಲ್ಲಿ ಯಾವುದಾದರೂ ಸಾಂಸ್ಕೃತಿಕ ಚಟುವಟಿಕೆಯನ್ನು ಅವಲಂಬಿಸಿರಬೇಕಾದ ಹಿನ್ನೆಲೆಯಲ್ಲಿ ಇವರು ಗಣೆವಾದನವನ್ನು ಕಲಿತು ಅದನ್ನು ಜನಪದ ಹಾಗೂ ಧಾರ್ಮಿಕ ಕಲೆಯನ್ನಾಗಿ ಮಾಡಿಕೊಂಡರು. ಅನೇಕ ಉತ್ಸವ, ಕಾರ್ಯಕ್ರಮ, ಸಮಾರಂಭಗಳಲ್ಲಿ ಪ್ರದರ್ಶಿಸಿದ್ದಾರೆ. ಇದರೊಂದಿಗೆ ಕೋಲಾಟ, ಯಕ್ಷಗಾನ, ಭಾಗವಂತಿಕೆ, ವೇಷದಾರಿಕೆ ಮುಂತಾದ ಕಲೆಯನ್ನೂ ರೂಢಿಸಿಕೊಂಡಿದ್ದಾರೆ. ಮೂರು ಅಡಿ ಉದ್ದವಿರುವ ಮೂರು ಗೆಣ್ಣಿರುವ ಬಿದಿರಿನ

ಕೋಲು. ಇದಕ್ಕೆ ಮಧ್ಯದ ಗೆಣ್ಣನ್ನು ತೆಗೆದು ಮೇಲ್ಭಾಗವನ್ನು ಮೇಣದಿಂದ ಮುಚ್ಚುತ್ತಾರೆ. ಈ ಮೂಲಕ ಗಾಳಿಯಾಡುತ್ತದೆ. ಉಳಿದ ಎರಡೂ ತುದಿಗಳ ಗೆಣ್ಣು ಹಾಗೇ ಇದ್ದು, ಐದು ರಂಧ್ರಗಳನ್ನು ಹೊಂದಿರುತ್ತದೆ. ಕೊಳಲಿನಂತೆ ಬೆರಳು ಬಳಸಿ ಉಸಿರಿನಿಂದ ಲಯಬದ್ಧವಾಗಿ ನುಡಿಸುವರು. ತಮಗೆ ಬೇಕಾದಂತೆ ಗಣೆ ಅಲಂಕರಿಸುವರು. ಜಿಲ್ಲೆಯಲ್ಲಿ ಶಿರಾ, ಗುಬ್ಬಿ, ಚಿಕ್ಕನಾಯಕನಹಳ್ಳಿ ತಾಲೂಕುಗಳಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ.

ಶಿರಾ ತಾಲೂಕು ಬಂಗಾರಿ ಈರದೊಡ್ಡಯ್ಯ, ಗಣೆವಾದ್ಯವನ್ನು ತಮ್ಮ ೧೦ನೇ ವಯಸ್ಸಿನಲ್ಲಿಯೇ ಅಭ್ಯಾಸ ಮಾಡಿದ್ದಾರೆ. ಇದನ್ನು ಬೇವಿನಹಳ್ಳಿ ದೇವರಹಟ್ಟಿಯ ನಾಗಣ್ಣನವರಿಂದ ಕಲಿತು ಕೋಲಾಟ, ಯಕ್ಷಗಾನ ಹಾಗೂ ಜನಪದ ಹಾಡುಗಾರಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ.

**ಸೋಮನ ಕುಣಿತ:** ತುಮಕೂರು, ಮಂಡ್ಯ, ಚಿತ್ರದುರ್ಗ ಮುಂತಾದ ಜಿಲ್ಲೆಗಳಲ್ಲಿ ವ್ಯಾಪಕವಾಗಿರುವ ಸೋಮನ ಕುಣಿತ ಒಂದು ಪ್ರದರ್ಶನ ಕಲಾ ಪ್ರಕಾರ. ಗ್ರಾಮದೇವತೆಯೊಂದಿಗೆ ಅವಿಭಾಜ್ಯವಾಗಿ ಉತ್ಸವದಲ್ಲಿ ಪ್ರಧಾನ ಪಾತ್ರ ಪಡೆದಿದೆ. ಮುಖವಾಡ ಧರಿಸಿ ಪ್ರದರ್ಶನ, ಕುಣಿತ ಮಾಡುವ ಸೋಮನ ಕುಣಿತಕ್ಕೆ ದೈವೀ ಆರಾಧನೆ ಸ್ವರೂಪವಿದ್ದು ಹಳದಿ ಮತ್ತು ಕೆಂಪು ಎಂದು ಎರಡು ಸೋಮಗಳಿರುತ್ತವೆ. ಇದನ್ನು ರಕ್ತ ಬೂತಾಳೆ ಎಂಬ ಮರದಿಂದ ತಯಾರಿಸುವರು. ಸೋಮನನ್ನು ಕುಣಿಸುವ ಕಲೆ ಪರಂಪರಾಗತವಾಗಿ ಬಂದಿದ್ದು, ದೇವತೆಗಳ ಜಾತ್ರೆ ಉತ್ಸವಗಳಲ್ಲಿ ಹೆಚ್ಚು ಕಂಡು ಬರುತ್ತದೆ. ಕಮಾನಿನಾಕಾರದ ದಟ್ಟವಾದ ವಿವಿಧ ಬಣ್ಣದಿಂದ ಕೂಡಿದ ಮುಖವಾಡ, ದಪ್ಪ ಮೀಸೆ, ಅಗಲವಾದ ಹಲ್ಲು, ಕೋರೆಹಲ್ಲು, ದಪ್ಪ ಮೂಗು, ನಿಂಬೆಹಣ್ಣಿನ ಗಾತ್ರದ ಕಣ್ಣು, ದೊಡ್ಡ ಕಿವಿ, ಬಣ್ಣದ ಪಂಚೆ ಅಥವಾ ಸೀರೆ ಇಳಿಬಿಟ್ಟಿದ್ದು, ಸೊಂಟಕ್ಕೆ ಬಿಗಿದ ಬಣ್ಣದ ವಸ್ತ್ರ, ಕಾಲಿಗೆ ಗೆಜ್ಜೆ, ಎದೆಹಾರ, ದೇವರ ತಾಳಿ, ಕೈಕಡಗ, ಬೆರಳಿಗೆ ಮುದ್ರೆಯುಂಗುರ, ಇವಿಷ್ಟು ಸೋಮನ ವೇಷ. ಪೂಜಾರಿಯು ಚಾಟಿಯನ್ನು ಹಿಡಿದು ಸೋಮನ, ದೇವರ ಗುಣವರ್ಣನೆ ಮಾಡಿ, ಅನೇಕ ಕಥಾನಕಗಳನ್ನು ಹೇಳುತ್ತಾನೆ. ತಮಟೆ, ಹರೆ, ಹಲಗೆ ಮುಂತಾದ ಹಿನ್ನೆಲೆ ವಾದ್ಯ ಸಂಗೀತ, ಹಾಡುಗಳಿಂದ ಕೂಡಿರುತ್ತವೆ.

ಕೆಂಚರಾಯ, ಕರಿರಾಯ ಎಂಬ ಎರಡು ಸೋಮಗಳಿದ್ದು, ಚಾಮುಂಡಿಯಿಂದ ಶಾಪಗ್ರಸ್ಥರಾದ ಪುರುಷರು (ಕೆಂಚರಾಯನಿಗೆ ಕೆಂಪು, ಕರಿರಾಯನಿಗೆ ಕಪ್ಪು ಬಣ್ಣ ಹಾಕಿರುತ್ತಾರೆ) ಅರೆಯ ಗತ್ತಿಗೆ ತಕ್ಕಂತೆ ಹೆಜ್ಜೆ ಹಾಕುತ್ತಾ ಕುಣಿದರೆ ಎಂತಹವರಿಗೂ ತಾವೂ ಹೆಜ್ಜೆ ಹಾಕಬೇಕೆನಿಸುತ್ತದೆ. ಜಿಲ್ಲೆಯ ಬಡವನ ಪಾಳ್ಯ, ಮತ್ತು ದಂಡಿನಶಿವರದ ಸೋಮಗಳು ಪ್ರಸಿದ್ಧವಾದವು. ೧೯೮೨ರಲ್ಲಿ ದೆಹಲಿಯಲ್ಲಿ ನಡೆದ ಏಷ್ಯಾಡ್ ಕಾರ್ಯಕ್ರಮದಲ್ಲಿ ಬಡವನಪಾಳ್ಯದ 'ಕೆಂಪಾಂಬ ಜಾನಪದ ಕಲಾ ತಂಡ' ೧೨೦ ಜೊತೆ ಸೋಮಗಳ ಪ್ರದರ್ಶನ ನೀಡಿತ್ತು. ಮಕ್ಕಳ ಪ್ರೀತಿಯ ಸೋಮಗಳಿಗೆ ಹಲಸಿನಹಣ್ಣು-ಬಾಳೆಹಣ್ಣು ಸೇರಿಸಿದ ರಸಾಯನವನ್ನು 'ಮಣೇವು' ಹಾಕುವುದುಂಟು. ಬಡವನಪಾಳ್ಯದ ನರಸೇಗೌಡ, ಶಿವಸಂದ್ರದ ಪೂಜಾರಯ್ಯ, ಕಂಚಿಗಾನಹಳ್ಳಿ ಕೃಷ್ಣಪ್ಪ, ನಂಜುಂಡಯ್ಯ, ನೇರಲೇಕೆರೆಯ ನರಸಪ್ಪ, ದಂಡಿನಶಿವರದ ಡಿ.ಎಸ್.ಗಂಗಾಧರಗೌಡ ಪ್ರಮುಖ ಸೋಮನ ಕುಣಿತ ಕಲಾವಿದರು. ಇವರಲ್ಲದೇ ತುರುವೇಕೆರೆ ತಾಲೂಕಿನ ದೊಡ್ಡೇನಹಳ್ಳಿ ಗ್ರಾಮದ ಪಟೇಲ್ ಕೆಂಪೇಗೌಡ, ಕೆ.ಕೆಂಪರಾಜ್ (ವಾಲ್ಮೀಕಿ ಸೋಮನಕುಣಿತ ಕಲಾಸಂಘ) ಹರೆಗೊಂಡನಹಳ್ಳಿಯ ಲಕ್ಕಣ್ಣ, ಹೆಗ್ಗೆರೆಯ ಹೆಚ್.ಸಿ.ಚಿಕ್ಕಣ್ಣ, ಹುಲಿಕಲ್ಲಿನ ನಂಜಾಮರಿಗೌಡ, ಶಿರಾ ತಾಲೂಕು ಶ್ಯಾಗದಡು ಗ್ರಾಮದ ಲಿಂಗೇಗೌಡ ಮುಂತಾದ ಕಲಾವಿದರಿದ್ದಾರೆ. ಇವರಲ್ಲಿ ಹಲವಾರು ಕಲಾವಿದರು ರಾಜ್ಯೋತ್ಸವ ಪ್ರಶಸ್ತಿ, ಜಾನಪದ ಅಕಾಡೆಮಿ ಪ್ರಶಸ್ತಿ ಪಡೆದಿದ್ದು ವಿವಿಧ ರಾಜ್ಯ, ದೆಹಲಿ ಹಾಗೂ ಹೊರದೇಶಗಳಲ್ಲಿಯೂ ಪ್ರದರ್ಶಿಸಿದ್ದಾರೆ. ದಂಡಿನಶಿವರ, ಕಿಬ್ಬನಹಳ್ಳಿ ಸೋಮಗಳು ದೆಹಲಿ, ಲಕ್ನೋ, ಸಾರ್ಕ್ ಸಮ್ಮೇಳನಗಳ ಮೂಲಕ ಹೆಸರು ಮಾಡಿವೆ.

**ಕೋಲಾಟ:** ಕೋಲಾಟದಲ್ಲಿ ಪ್ರಾದೇಶಿಕ ವೈವಿಧ್ಯವಿದ್ದು ರಾಜ್ಯಾದ್ಯಂತ ಸುಮಾರು ೬೦ ವಿಧದ ಕೋಲಾಟವನ್ನು ಗುರುತಿಸಲಾಗಿದೆ. ಕೋಲಿನ ಸಪ್ಪಳಕ್ಕನುಗುಣವಾಗಿ ಹೆಜ್ಜೆ ಹಾಕುವ ಲಯಬದ್ಧ ಕುಣಿತ ಮನತಣಿಸುವಂತಹುದಾಗಿದೆ. ಕೋಲಾಟದ ಮಲ್ಲಯ್ಯನವರು ತಮ್ಮ ೧೦ ನೆಯ ವಯಸ್ಸಿನಿಂದಲೇ ಕೋಲಾಟ ಕಲಿತು, ಜಡೆಕೋಲು, ಕೊರವಂಜಿ ಕೋಲು, ಜೋಡುಗೋಲು, ಹೊರಗೋಲು, ಒಳಗೋಲು, ಸುತ್ತು ಕೋಲಾಟ ಮುಂತಾಗಿ ವೈವಿಧ್ಯ ಕಲಾ ಪ್ರದರ್ಶನ ಮಾಡುವರು. ಬೆಂಗಳೂರು ಆಕಾಶವಾಣಿ, ಗಣೇಶ ಉತ್ಸವ, ರಾಜ್ಯೋತ್ಸವ, ದೆಹಲಿಯಲ್ಲಿ ನಡೆದ ಜನಪದ ಕಲಾ ಮಹೋತ್ಸವದಲ್ಲಿ ಪಿ.ಕೋಡಯ್ಯ, ಮುನಿಮಲ್ಲಯ್ಯ, ಶಿವಣ್ಣ, ಚಿಕ್ಕಮಲ್ಲಯ್ಯ, ದೊಡ್ಡಯ್ಯ ಮುಂತಾದವರ ತಂಡದೊಂದಿಗೆ

ಭಾಗವಹಿಸಿದ್ದರು. ಜನಪದ ಹಾಡುಗಾರರೂ ಆಗಿರುವ ಇವರು ಉತ್ತರಾದೇವಿ, ಕರಿಭಂಟ, ನಿಡಗಲ್ಲು ದುರ್ಗ, ಮದುಗದ ಕೆಂಚಮ್ಮ, ಮೊದಲಾದ ಕಥನ ಗೀತೆಗಳನ್ನು ಹಾಡುತ್ತಾರೆ. ಜಿಲ್ಲೆಯಲ್ಲಿ ಕಳ್ಳಂಬೆಳ್ಳದ ಫಾಲಾಕ್ಷಯ್ಯ, ಕರಿಮಾರನಹಳ್ಳಿಯ ವಿಜಯಕುಮಾರ್, ಕೋಸಕುಂಟೆ ಗೊಲ್ಲರಹಟ್ಟಿಯ ರಂಗದಾಸಪ್ಪ, ಕರಿದಾಸರಹಳ್ಳಿಯ ನರಸಿಂಹಣ್ಣ, ಕಲಿಗಾನಹಳ್ಳಿಯ ಭೀಮಣ್ಣ ಮುಂತಾದವರ ತಂಡ ಪ್ರಮುಖವಾದವು.

**ವೀರಮಕ್ಕಳ ಕುಣಿತ:** ಇದೊಂದು ವಿಶಿಷ್ಟ ಹಾಗೂ ಅಪರೂಪದ ಕಲೆ. ಕುಣಾಕುರುಬರು ಎಂದು ಕರೆಯಲಾಗುವ ಕುರುಬರ ಒಂದು ಪಂಗಡದವರು ವಿಶೇಷವಾಗಿ ಇದನ್ನು ಮಾಡುತ್ತಾರೆ. ತಲೆಗೆ ರುಮಾಲು, ಕೆಂಪುಬಣ್ಣದ ವಸ್ತ್ರ, ಜುಬ್ಬ, ನಡುಪಟ್ಟಿ (ವಸ್ತ್ರ) ಕಾಲಿಗೆ ಗೆಜ್ಜೆ, ಕೈಯ್ಯಲ್ಲಿ ಚರ್ಮದಿಂದ ತಯಾರಿಸಿದ ಚಿಕ್ಕ ಹಲಗೆ ಬಡಿಯುತ್ತಾರೆ. ಈ ಹಲಗೆಯನ್ನು ಚಕ್ರಾದಿ ಬಳೆ ಎಂದು ಕರೆಯುವರು. ಮಣ್ಣಿನ ಮಡಕೆಯ ಬಾಯಿಗೆ ಆಡಿನ ಚರ್ಮವನ್ನು ಬಿಗಿದು ಕಟ್ಟಿ ಕೈಯಿಂದಲೇ ನುಡಿಸುವುದನ್ನು ಚಕ್ರಾದಿ ಎನ್ನುವರು. ಇಂತಹ ಕಲೆಯನ್ನು ತುಮಕೂರು ತಾಲೂಕು ಅಣ್ಣೇನಹಳ್ಳಿಯ ಲಕ್ಕಣ್ಣ, ದೊಡ್ಡಯ್ಯ, ಬಸವಯ್ಯ ಮುಂತಾದವರು ಪ್ರದರ್ಶಿಸುವರು. ಗ್ರಾಮದೇವತೆಗಳ ಜಾತ್ರೆ, ಉತ್ಸವ, ಮೈಲಾರದೇವರ ಉತ್ಸವಗಳಲ್ಲಿ ದೇವರ ಮಹಿಮಾವಳಿಯನ್ನು ಹಾಡುತ್ತಾ ದೇವರ ಮುಂದೆ ಹೋಗುತ್ತಾರೆ. ಇವರ ಹಿಂದೆ ಕಳಸ ಹಾಗೂ ದೇವರು ಹೊತ್ತವರು ಸಾಗುತ್ತಾರೆ. 'ಆದಿಶಕ್ತಿಯೆ ಪರಾಕ್' ಎಂದು ಪಾರ್ವತಿಯ ಕಥಾನಕವನ್ನು ಹೇಳುತ್ತಾ, ವಾದ್ಯ ಬಡಿಯುತ್ತಾ, ಕುಣಿಯುತ್ತಾ, ನಡುನಡುವೆ ನಿಂತು ಕಂದಪದ್ಯ, ದೇವರ ಚರಿತ್ರೆ ಹೇಳುವರು. ವೀರಮಕ್ಕಳು ತಲೆ ಮೇಲೆ ತೆಂಗಿನಕಾಯಿ ಒಡೆದುಕೊಳ್ಳುವುದೂ ಉಂಟು. ಈ ಕಲಾವಿದರು 'ಬಂಗಾರದ ಪಂಜರ' ಚಲನಚಿತ್ರದಲ್ಲಿ ಕಲಾವಿದರಾಗಿ ಕಾಣಿಸಿಕೊಂಡಿದ್ದಾರೆ.

**ಲಿಂಗದ ವೀರರು**: ವೀರಾವೇಶದ ಕುಣಿತದ ಇದನ್ನು ಗಂಡು ಕಲೆ ಎನ್ನುತ್ತಾರೆ. ವೀರಗಾಸೆ, ವೀರಭದ್ರ ಕುಣಿತ ಎಂದೂ ಕರೆಯುತ್ತಾರೆ. ಧಾರ್ಮಿಕ ಸಮಾರಂಭ ಹಾಗೂ ಕಲಾಪ್ರದರ್ಶನ ಎರಡಕ್ಕೂ ಮಾನ್ಯತೆ ಇದ್ದು, ಜನಪ್ರಿಯತೆ ಗಳಿಸಿದೆ. ವೀರಶೈವ ಸಮುದಾಯದ ಧಾರ್ಮಿಕ ಆಚರಣೆಗಳಲ್ಲಿ ಹೆಚ್ಚಾಗಿ ಜಾತ್ರೆ, ಉತ್ಸವಗಳಲ್ಲಿ ಪ್ರದರ್ಶಿತವಾಗುತ್ತದೆ. ವಂಶಪಾರಂಪರ್ಯವಾಗಿಯೂ ಕಂಡುಬರುತ್ತದೆ. ತಲೆಯಲ್ಲಿ ಶಿವಲಿಂಗ, ಕಿರೀಟ, ವೀರಲಾಂಛನದ ನಾಗಾಭರಣ, ಕಿವಿಯಲ್ಲಿ ರುದ್ರಾಕ್ಷಿ ನಾಗಮಂಡಲ, ಕೊರಳಲ್ಲಿ ಕರಡಿಗೆ, ಶಿವದಾರ ರುದ್ರಾಕ್ಷಿಮಾಲೆ, ಸೊಂಟದಲ್ಲಿ ರಾಕ್ಷಸರ ರುಂಡಮಾಲೆ, ಕೀರ್ತಿ, ಮುಖದರ್ಪಣ, ಕಾಲಿಗೆ ಗಗ್ಗರಿ, ಕಿರುಗೆಜ್ಜೆ ಕಾವಿನಿಲುವಂಗಿ, ನಡುಪಟ್ಟಿ, ಹೊಳೆಯುವ ಖಡ್ಗ ಇವು ವೀರಭದ್ರನ ವೇಷಭೂಷಣ. ತುಮಕೂರಿನ ಹೆಚ್.ಎಸ್.ನೀಲಕಂಠಯ್ಯ, ವೀರಭದ್ರ ನೃತ್ಯ ಅಥವಾ ಲಿಂಗದ ವೀರನ ಕುಣಿತ ಎನ್ನುವ ಕಲೆಯ ಆರಾಧಕರು ಹಾಗೂ ಶಿರಾದ ಸಿ.ವೀರಣ್ಣ ಸಂಗಡಿಗರು ಜಾಗತಿಕ ಮಟ್ಟದಲ್ಲಿ ಕಲಾಪ್ರದರ್ಶನ ನೀಡಿರುವವರು. ಇವರ ಕಲಾಪ್ರತಿಭೆಗೆ, ಬಿ.ಶಿವಮೂರ್ತಿಶಾಸ್ತ್ರಿ, ಗುಬ್ಬಿ ವೀರಣ್ಣ, ಸಿದ್ಧಗಂಗಾಮಠದ ಸ್ವಾಮೀಜಿ ಮುಂತಾದವರು ಪ್ರೋತ್ಸಾಹಿಸಿದ್ದಾರೆ. ತಮಿಳುನಾಡು, ಕೇರಳ, ಆಂಧ್ರಪ್ರದೇಶ, ಮಹಾರಾಷ್ಟ್ರ, ಪಾಂಡಿಚೇರಿ, ಗೋವಾ, ಒರಿಸ್ಸಾ, ಅಂಡಮಾನ್, ನಿಕೋಬಾರ್, ದೆಹಲಿ, ವಾರಣಾಸಿ ಮುಂತಾದೆಡೆ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಉತ್ಸವಗಳಲ್ಲಿ ಭಾಗವಹಿಸಿದ್ದು, ಹಗಲುವೇಷ, ಹಾಗೂ ಇನ್ನಿತರೆ ಚಲನಚಿತ್ರಗಳಲ್ಲಿ, ಸಾಕ್ಷ್ಯಚಿತ್ರಗಳಲ್ಲಿ ಪ್ರದರ್ಶನ ನೀಡಿದ್ದಾರೆ. ಇವರು ಕಲಾತಂಡವನ್ನೂ ರಚಿಸಿದ್ದು, ಕಲಾವಿದರು, ಮೇಳದವರು ಕೂಡ ಇದ್ದು, ಕರಡೆ, ನಗಾರಿ, ಚಮ್ಮೇಳ, ದಿಮ್ಮ, ತಾಳವೆನಾರಿ, ಶೃತಿ, ಕಹಳೆ ಮುಂತಾದ ಹಿನ್ನೆಲೆ ವಾದ್ಯಗಳನ್ನು ಬಳಸಿ, ವೀರಭದ್ರ ಕುಣಿತದೊಂದಿಗೆ ವೀರಭದ್ರ ಅವತಾರ ಕುರಿತ ಸಮಗ್ರ ಕಥೆಯನ್ನು ಹಾಡುವರು. ಇವರು ಸಿದ್ಧಗಂಗಾ ಸಂಸ್ಥೆಯ ಶಿಕ್ಷಕರ ತರಬೇತಿ ಸಂಸ್ಥೆಯಲ್ಲಿ ಚಿತ್ರಕಲಾ ಶಿಕ್ಷಕರಾಗಿ ನಿವೃತ್ತರಾಗಿದ್ದಾರೆ. ಇವರಿಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಮುಂತಾದ ಗೌರವ ಸಂದಿವೆ.

ಕುಣಿಗಲ್ ತಾಲೂಕು ಎಡೆಯೂರಿನ ಕೆ.ಆರ್.ಹೊಸಳ್ಳಯ್ಯನವರಿಗೆ ಲಿಂಗದವೀರ ಅಥವಾ ವೀರಭದ್ರನ ಕಲೆಯ ಅನನ್ಯ ಪರಿಶ್ರಮವಿದೆ. ಇವರು ದೆಹಲಿ, ಕೇರಳ, ಆಂಧ್ರ, ತಂಜಾವೂರು, ಚೆನ್ನೈ, ಪಾಂಡಿಚೇರಿ, ಪಂಜಾಬ್, ಅಸ್ಸಾಂ, ಹರಿಯಾಣ, ರಾಜಸ್ಥಾನ, ಒರಿಸ್ಸಾ ರಾಜ್ಯಗಳಲ್ಲಿ ಸಾಂಸ್ಕೃತಿಕ ವಿನಿಮಯದ ಯೋಜನೆಯಡಿ ಕಲಾಪ್ರದರ್ಶನ ನೀಡಿದ್ದಾರೆ. ಅಮೆರಿಕ, ಕೆನಡಾಗಳಲ್ಲಿ ಒಂದು ತಿಂಗಳ ಕಾಲ ಪ್ರದರ್ಶನ ನೀಡಿದ್ದಾರೆ. ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಹಾಗೂ ಜಾನಪದ ಪರಿಷತ್ತಿನ ಪ್ರಶಸ್ತಿಗಳು ದೊರಕಿವೆ.

ಶಿರಾ ತಾಲೂಕು ಚಿಕ್ಕನಹಳ್ಳಿಯ ವೀರಣ್ಣನವರು ತೂರಿಬಿಟ್ಟ ತೆಂಗಿನಕಾಯಿ, ನಿಂಬೆಹಣ್ಣುಗಳನ್ನು ಖಡ್ಗದಿಂದ ಕತ್ತರಿಸುವುದೇ ಮುಂತಾದ ಚಮತ್ಕಾರ ಪ್ರದರ್ಶನವನ್ನು ನೀಡುತ್ತಾರೆ. ವೀರಭದ್ರನ ಒಡಪು ಹೇಳುವುದು ಇವರ ವಿಶೇಷ. ಜಗಜ್ಯೋತಿ ವೀರಭದ್ರೇಶ್ವರ ನೃತ್ಯ, ಲಿಂಗದ ಬೀರರ ಕಲಾ ಸಂಘ ಸ್ಥಾಪಿಸಿ ಈ ಕಲೆಯನ್ನು ಬೆಳೆಸುತ್ತಿದ್ದಾರೆ. ಇವರ ಇಬ್ಬರು ಮಕ್ಕಳೂ ಈಗಾಗಲೇ ಇದರಲ್ಲಿ ತೊಡಗಿಕೊಂಡಿದ್ದಾರೆ. ಆಧ್ಯಾತ್ಮ ಹಾಗೂ ಲೌಕಿಕ ಪರಂಪರೆಗಳೆರಡರಲ್ಲೂ ಪ್ರದರ್ಶನ ನೀಡುವರು. ಲೌಕಿಕ ಪರಂಪರೆಯಲ್ಲಿ ರುದ್ರನ ಲಾಂಛನ ತೆಗೆದು ಪ್ರದರ್ಶನ ನೀಡುತ್ತಾರೆ. ಅನೇಕ ಜಿಲ್ಲೆಗಳಲ್ಲಿ ಪ್ರದರ್ಶನ ನೀಡಿರುವ ಇವರಿಗೆ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ಕಲಾಪ್ರಶಸ್ತಿ ಮುಂತಾದವು ಬಂದಿವೆ.

ಕೊರಟಗೆರೆ ತಾಲೂಕು ಲಿಂಗದ ಬೀರನಹಳ್ಳಿ ಗ್ರಾಮದ ಚಂದ್ರಣ್ಣ ವಂಶಪಾರಂಪರ್ಯವಾಗಿ ಈ ಕಲೆಯನ್ನು ಅವಲಂಬಿಸಿ, ಪ್ರದರ್ಶಿಸುತ್ತಾ ಬಂದಿದ್ದಾರೆ. ತಮ್ಮ ತಂದೆಯಿಂದ ದೀಕ್ಷಾರೂಪದಲ್ಲಿ ಈ ಕಲೆಯನ್ನು ಕಲಿತು ತಮ್ಮ ಮಕ್ಕಳು ಹಾಗೂ ಅದೇ ಗ್ರಾಮದ ನಂದೀಶಪ್ಪ ದೊಡ್ಡಬಸಪ್ಪ ಮೊದಲಾದವರೊಂದಿಗೆ ಕಲಾತಂಡವನ್ನು ರೂಪಿಸಿ ವೀರಭದ್ರ ಕುಣಿತ ಅಥವಾ ವೀರಗಾಸೆ ನೃತ್ಯ ಪ್ರದರ್ಶನ ಮಾಡುತ್ತಾ ಬಂದಿದ್ದಾರೆ. ಇಂತಹ ಕಲಾವಿದರೇ ವಾಸಿಸುತ್ತಿದ್ದ ಈ ಊರಿಗೆ ಅದೇ ಹೆಸರು ಬಂದಿದೆ ಎನ್ನುತ್ತಾರೆ. ಕರ್ನಾಟಕ ಜಾನಪದ ಅಕಾಡೆಮಿ, ಯುವಜನ ಮೇಳ ಮತ್ತು ಅನೇಕ ಉತ್ಸವಗಳಲ್ಲಿ ಇದನ್ನು ಪ್ರದರ್ಶಿಸಿದ್ದಾರೆ. ಇವರು ಅದನ್ನು ಸ್ವಯಂಶಿವನ ವೀರಭದ್ರನ ಅವತಾರದ ರೂಪ ಎಂದು ಭಾವಿಸಿದ್ದು, ಸೊಂಟಕ್ಕೆ ಕಟ್ಟುವ ರುಂಡಮಾಲೆ, ನಾಗಾಭರಣ, ತಲೆಯಲ್ಲಿ ಉದ್ದನೆಯ ಬಿಳಿಯ ಟೋಪನ್, ಸೊಂಟಕ್ಕೆ ಇಳಿಬಿಟ್ಟ ಬಿಳಿಯ ಕೂದಲಿನ ಉಡುಗೆ, ಕೈಯ್ಯಲ್ಲಿ ಕತ್ತಿ, ಕಿರೀಟ ಇದು ಇವರ ವಿಶೇಷ ವೇಷಭೂಷಣ. ವೀರಭದ್ರನ ವಿವಿಧ ಲೀಲೆಗಳ ಕಾವ್ಯ, ಖಡ್ಗದ ಪದ ಅಥವಾ ವೀರಭದ್ರನ ಒಡಪುಗಳನ್ನು ಹಾಡುತ್ತಾರೆ.

**ಸೋಬಾನೆ**: ಚಿಕ್ಕನಾಯಕನಹಳ್ಳಿ ತಾಲೂಕು ಹಂದನಕೆರೆ ಸೋಬಾನೆ ಲಕ್ಷ್ಮಜ್ಜಿ(೯೪), ಹಾಗೂ ಹುಳಿಯಾರು ಕೆಂಚಮ್ಮ ಉತ್ತರಾದೇವಿ, ಬಾಲನಾಗಮ್ಮ ಕಾಡಸಿದ್ಧಮ್ಮ, ಗುಣಸಾಗರಿ, ರೇವಣಸಿದ್ದೇಶ್ವರ, ಮೈಲಾರಲಿಂಗ, ಬೀರೇದೇವರ ಕಾವ್ಯ ಮುಂತಾದವುಗಳನ್ನು ಐದಾರು ರಾತ್ರಿ ನಿರಂತರವಾಗಿ ಹಾಡಬಲ್ಲರು. ರೇವಣಸಿದ್ದೇಶ್ವರ ಕಾವ್ಯವನ್ನು ಪ್ರೊ. ಎಸ್.ಜಿ.ಸಿದ್ದರಾಮಯ್ಯನವರೂ, ಮೈಲಾರಲಿಂಗನ ಕಾವ್ಯ ಹಾಗೂ ಬೀರೇದೇವರ ಕಾವ್ಯವನ್ನು ಚಿಕ್ಕಣ್ಣ ಯಣ್ಣೆಕಟ್ಟೆ ಅವರೂ ಸಂಗ್ರಹಿಸಿದ್ದಾರೆ. ಸಿರಿಗಂಧ ದೂರದರ್ಶನ ಕಾರ್ಯಕ್ರಮದಲ್ಲಿ ಇವರ ವ್ಯಕ್ತಿಚಿತ್ರ ಹಾಗೂ ಹಾಡುಗಳು ಪ್ರಸಾರವಾಗಿವೆ. ಹೆರಿಗೆ ತಜ್ಞೆ ಮತ್ತು ಮನೆಮದ್ದು ಮಾಡುವುದೂ ಕೂಡ ಇವರ ಹವ್ಯಾಸ.

ಚಿಕ್ಕನಾಯಕನಹಳ್ಳಿ ತಾಲೂಕು ಹೊಸೂರು ಗ್ರಾಮದ ಹನುಮಕ್ಕ ಇವರು ಹುಳಿಯಾರು ಕೆಂಚಮ್ಮ, ಗುಣಸಾಗರಿ, ಚಿತ್ರದೇವರು, ಎತ್ತಪ್ಪ, ಕಾಟಮಲಿಂಗ, ಮೈಲಾರಿ ದೇವರು, ಬೀರೇದೇವರ ಕತೆ, ಬಸವಣ್ಣನ ಪುರಾಣ, ಹರಳಯ್ಯನ ಕತೆ, ಕುಮಾರ ರಾಮನ ಕತೆ, ಸೋಬಾನೆ ಪದಗಳು, ಬೀಗರ ಹಾಡು, ಲಾಲಿಪದ ಬೇಟೆ, ಕೃಷಿ, ಮುಂತಾದವನ್ನು ಹಾಡುವರು. ೧೯೭೧ರಲ್ಲಿ ಜಾನಪದ ಅಕಾಡೆಮಿ ಪ್ರಶಸ್ತಿ ಬಂದಿದೆ.

ಚಿಕ್ಕನಾಯ್ಕನಹಳ್ಳಿಯ ರಂಗಯ್ಯನವರು ಲಾವಣಿ, ಜನಪದ ಗೀತೆ ಹಾಗೂ ತತ್ವಪದಗಳನ್ನು ಅದ್ಭುತವಾದ ಕಂಠಸಿರಿಯಲ್ಲಿ ಹಾಡುತ್ತಾರೆ. ಶ್ರೀ ರಾಮ ಕಲಾ ಸಂಘ ಕಟ್ಟಿ ನಾನಾ ಕಡೆ ಕಾರ್ಯಕ್ರಮ ನೀಡುತ್ತಾ ಬಂದಿದ್ದಾರೆ. ಕಳೆದ ೧೦ ವರ್ಷಗಳಿಂದ ಪ್ರತಿ ತಿಂಗಳೂ ತಾತಯ್ಯನ ಗೋರಿ ಹಾಗೂ ಪರಪ್ಪಸ್ವಾಮಿ ಮಠದಲ್ಲಿ ತತ್ವಪದ, ಭಜನೆ ಹಾಗೂ ಭಕ್ತಿ ಗೀತೆಗಳ ಗಾಯನ ನಡೆಸುತ್ತಾರೆ. ಯಕ್ಷಗಾನ ಬಯಲಾಟ ಹಾಗೂ ನಾಟಕಗಳಲ್ಲಿ ಹಿನ್ನೆಲೆ ಗಾಯಕರಾಗಿ, ೧೯೭೭ರಿಂದಲೂ ಆಕಾಶವಾಣಿ ಕಲಾವಿದರಾಗಿ ಕಾರ್ಯಕ್ರಮ ನೀಡುತ್ತಿದ್ದಾರೆ. ಮೈಸೂರು ಪೇಟ, ಬಿಳಿಕೋಟು, ಹೆಗಲಿಗೆ ಶಲ್ಯ, ಸೊಂಟಕ್ಕೆ ಶಾಲು ಸುತ್ತಿಕೊಂಡು ಕೈಯಲ್ಲಿ ಕಂಜರ ಹಿಡಿರು ಹಾಡುವ ಇವರಿಗೆ ರಾಜ್ಯ ಜಾನಪದ ಅಕಾಡೆಮಿ ಪ್ರಶಸ್ತಿ, ಯುವಜನ ಮೇಳ ಪ್ರಶಸ್ತಿ ಮುಂತಾದ ಗೌರವ ಸಂದಿವೆ. ಲಾವಣಿ ಮೂಲಕ ದೇಸೀ ಸಂಸ್ಕೃತಿ, ಆಚಾರ ವಿಚಾರಗಳತ್ತ ಸಾರ್ವಜನಿಕರ ಅದರಲ್ಲೂ ವಿದ್ಯಾರ್ಥಿಗಳ ಗಮನ ಸೆಳೆಯುತ್ತಾರೆ.

ಕುಣಿಗಲ್ ತಾಲೂಕಿನ ಸೋಬಾನೆ ಚಿಕ್ಕಮ್ಮ ವಿಶ್ವಪ್ರಸಿದ್ಧರು. ಇವರಲ್ಲಿ ಸಾವಿರಾರು ಹಾಡುಗಳು ಸಂಗ್ರಹವಾಗಿದೆ. ಉಜ್ಜನಿ ಚೌಡಮ್ಮ(ಇದನ್ನು ಡಾ.ಹಿ.ಚಿ.ಬೋರಲಿಂಗಯ್ಯ ಸಂಪಾದಿಸಿದ್ದಾರೆ) ಇದೊಂದು ವಿಶಿಷ್ಟ ಆಚರಣೆ. ಉಜ್ಜನಿ ಚೌಡಮ್ಮನ ಜಾತ್ರೆ ಸಂದರ್ಭದಲ್ಲಿ ಹರಿಜನರಿಗೆ ಕೆಲವು ದಿನಮಟ್ಟಿಗೆ ಜನಿವಾರ ಹಾಕುವ ಪದ್ಧತಿ ನಡೆದುಕೊಂಡು

ಬಂದಿದ್ದು, ಉಜ್ಜನಿ ಹಾಲಮ್ಮ ಈ ಕಥಾನಕವನ್ನು ಅದ್ಭುತವಾಗಿ ಹಾಡುತ್ತಾರೆ. ಈಕೆಗೆ ಜಾನಪದ ಅಕಾಡೆಮಿ ೧೯೮೭ರಲ್ಲಿ ಗೌರವ ಪ್ರಶಸ್ತಿ ನೀಡಿದೆ. ಬಯಲುಸೀಮೆಯ ಗ್ರಾಮದೇವತೆಗಳ ಬಗ್ಗೆ ಅನೇಕ ಮಾಹಿತಿ ಇವರಲ್ಲಿದೆ. ತುರುವೇಕೆರೆ ತಾಲೂಕು ಮುದಿಗೆರೆಯ ಸೋಬಾನೆ ಹೊನ್ನಾದೇವಿ, ಶಿವಗಂಗೆ ಕಥೆ, ಉಡುಸಲಮ್ಮ, ಹಟ್ಟಿಲಕ್ಕಮ್ಮ, ಚಿಕ್ಕಮ್ಮ–ದೊಡ್ಡಮ್ಮ, ಬಾಲನಾಗಮ್ಮ, ಗುಣಸಾಗರಿ ಹಾಗೂ ಎಲ್ಲಮ್ಮದೇವಿ ಕಥೆ, ಆದಿಚುಂಚನಗಿರಿಯ ಭೈರವನ ಮೇಲೆ ಪದಕಟ್ಟಿ ಹಾಡುವುದು, ಕಾಡುಗೊಲ್ಲರ ಆರಾಧ್ಯದೈವವಾದ ಚಿತ್ರದೇವರನ್ನು ಕುರಿತು ಹಾಡುವ ಜನಪದರು ಲಕ್ಕವ್ವನಹಳ್ಳಿ ಗೊಲ್ಲರಹಟ್ಟಿ ನಿಂಗಜ್ಜ–ಗಣೆ ಊದುವುದು (ಶಿರಾ ತಾಲೂಕು) ಬುಡಕಟ್ಟು ಸಂಸ್ಕೃತಿಯ ಕಂಠಸ್ಥ ಪರಂಪರೆಯ ಈ ಗೇಯ ಕಾವ್ಯ 'ನಿಂಗಜ್ಜ ಹಾಡಿದ ಚಿತ್ರದೇವರ ಕಾವ್ಯ' ಎಂಬ ಹೆಸರಿನಲ್ಲಿ ಡಾ.ಚಿಕ್ಕಣ್ಣ ಯಣ್ಣೆಕಟ್ಟೆ ೧೯೮೮ರಲ್ಲಿ ಸಂಗ್ರಹಿಸಿ ಪ್ರಕಟಿಸಿದ್ದಾರೆ. ಈ ಕಲಾವಿದನಿಗೆ ೨೦೦೪ರಲ್ಲಿ ಸಾಧನಾ ಗೌರವ ಪ್ರಶಸ್ತಿ ನೀಡಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಗೌರವಿಸಿದೆ.

ವಿಠಲಾಪುರದ ಸೋಬಾನೆ ಚಿಕ್ಕಮ್ಮ ಸೋಬಾನೆ ಪದಗಳ ಕಣಜ ಎಂದೇ ಹೆಸರು ಪಡೆದಿದ್ದು ಇವರಿಗೆ ೧೯೯೫ರ ಜಾನಪದ ಅಕಾಡೆಮಿ ಪ್ರಶಸ್ತಿ ದೊರೆತಿದೆ. ತುರುವೇಕೆರೆ ಸುತ್ತಮುತ್ತಲ ತಾಲೂಕುಗಳಲ್ಲಿ ಇವರ ಸೋಬಾನೆ ಹಾಡಿಲ್ಲದೇ ಮದುವೆ ನಡೆಯುವುದಿಲ್ಲ ಎಂಬ ಪ್ರತೀತಿ ಇತ್ತು. ಪ್ರತಿವರ್ಷ ಚುಂಚನಗಿರಿಯಲ್ಲಿ ನಡೆವ ಜಾನಪದ ಕಲಾ ಮಹೋತ್ಸವದಲ್ಲಿ ತಪ್ಪದೇ ಭಾಗವಹಿಸುತ್ತಿದ್ದರು. ನೂರಾರು ಮಹಿಳೆಯರಿಗೆ ಸೋಬಾನೆಪದ ಕಲಿಸಿದ್ದಾರೆ. ಹೆರಿಗೆ ಮತ್ತು ನಾಟಿವೈದ್ಯ ಮಾಡುವುದೂ ಉಂಟು. ಶಿರಾ ತಾಲೂಕು ಹೇರೂರು ಗ್ರಾಮದ ರುದ್ರಮ್ಮ ಜನಪದ ಹಾಡುಗಾರರು. ಸುತ್ತಮುತ್ತಲ ಪ್ರದೇಶದಲ್ಲಿನ ಕಾಡುಗೊಲ್ಲರು, ಮ್ಯಾಸಬೇಡರು, ಕುರುಬರು ಮುಂತಾದವರ ಸಂಪರ್ಕದಿಂದ ಎಲ್ಲ ವಿಧವಾದ ಸೋಬಾನೆ ಪದಗಳನ್ನು ಕಲಿತು ಹಾಡುವುದನ್ನು ರೂಢಿಸಿಕೊಂಡಿದ್ದಾರೆ. ಮದುವೆ, ಒಸಗೆ, ದೇವರಕಾರ್ಯ, ಧಾರ್ಮಿಕ, ಸಾಂಸ್ಕೃತಿಕ ಸಮಾರಂಭಗಳಲ್ಲಿ ಹಾಡುವರು. ಶಿರಾ ತಾಲೂಕು ಬರಗೂರು ಲಕ್ಷ್ಮಮ್ಮ ಪಾವಗಡ ತಾಲೂಕು ಮದ್ದೆಗ್ರಾಮದವರು. ಕೂಲಿಯಿಂದ ಜೀವನ ಮಾಡುವ ಇವರು ಸೋಬಾನೆ ಹಾಡುಗಾರಿಕೆಯಲ್ಲಿ ಶ್ರೀಮಂತಿಕೆ ಮೆರೆದವರು. ಮೈಲಾರಲಿಂಗ, ಮದ್ದೆಯ ದೇವಿ, ಸ್ವಾರಮ್ಮ, ಬರಗೂರು ವೀರನಾಗಮ್ಮ ಪದ, ಚಿತ್ರದೇವರ ಪದ, ದೇವರುಕರೆಯುವ ಪದಗಳನ್ನು ಹಾಡುವುದರಲ್ಲಿ ಎತ್ತಿದ ಕೈ. ರಾಮನಗರದ ಜಾನಪದ ಲೋಕದಲ್ಲಿ ಇವರ ಹಾಡಿನ ಧ್ವನಿಮುದ್ರಿಕೆ ಇದೆ. ೨೦೦೨ರಲ್ಲಿ ಜಾನಪದ ಲೋಕ ಪ್ರಶಸ್ತಿ ನೀಡಿದೆ. ಶಿರಾ ತಾಲೂಕು ಹೇರೂರು ಗ್ರಾಮದ ರುದ್ರಮ್ಮ. ಒಸಗೆ, ಮದುವೆ,ದೇವರ ಕಾರ್ಯಗಳಲ್ಲಿ ಹಾಡುತ್ತಿದ್ದ ಇವರು ಬೇಲೂರಿನಲ್ಲಿ ಜನಪದ ಕಲಾವಿದರ ತಂಡ ಕಟ್ಟಿದ್ದಾರೆ. ರಾಜ್ಯೋತ್ಸವ, ಕಲಾಮೇಳ, ಸಾಂಸ್ಕೃತಿಕ ಉತ್ಸವಗಳಲ್ಲಿ ಕಲಾಪ್ರದರ್ಶನ ನೀಡಿದ್ದಾರೆ.

ಮಧುಗಿರಿ ತಾಲೂಕು ರಂಗಾಪುರದ ಸಣ್ಣಮ್ಮ ಕೂಡ ಹುಟ್ಟಿದ್ದು ಶಿರಾ ತಾಲೂಕು ಲಕ್ಷ್ಮೀಸಾಗರದಲ್ಲಿ. ಇವರು ಗೊಲ್ಲರಹಟ್ಟಿ. ಕಾಡುಗೊಲ್ಲರ ಸಾಂಸ್ಕೃತಿಕ ನಾಯಕರ ಬಗ್ಗೆ ಹಾಡುಕಟ್ಟಿ ಹಾಡುತ್ತಾರೆ. ಒಡಪು, ಕೃಷಿ ಕೆಲಸ ಮಾಡುವಾಗ, ಶಾಸ್ತ್ರ ಸಂಬಂಧಗಳಿಗೆ ಹಾಡುಗಳ ಸಂಬಂಧಿಸಿದ ಮೊದಲಾದವನ್ನು ಸಲೀಸಾಗಿ ಹಾಡಬಲ್ಲರು. ಇವರ ಹಾಡಿಗೆ ಗಣೆಯ ಶೃತಿ ನೀಡುವುದುಂಟು. ಗುಬ್ಬಿ ತಾಲೂಕು ಎಣ್ಣೆಕಟ್ಟೆಯ ಹನುಮಕ್ಕ ಎಳ್ಳಟ್ಟಿ ಮಾರಮ್ಮನ ಸಮಗ್ರ ಕಥೆಯನ್ನು ಹಾಡಿನ ಮೂಲಕ ಅದ್ಭುತವಾಗಿ ಹಾಡಬಲ್ಲರು. ಕೋಲುಪದ, ಜಾತ್ರೆ, ಆರತಿ, ಉತ್ಸವ, ಮದುವೆ ಮುಂತಾದವುಗಳಲ್ಲಿ ನಿರಂತರವಾಗಿ ಹಾಡಬಲ್ಲರು. ಕೂಲಿ, ಕುರಿಸಾಕಣೆ, ಕಸುಬಾಗುಳ್ಳ ಇಂತಹವರು ಮೌಖಿಕ ಪರಂಪರೆಯ ವಕ್ತಾರರು ಎನ್ನಬಹುದು. ಇವರು ಹಾಡಿರುವ ಗಾದೆ, ಒಗಟು, ಹಾಡುಗಳನ್ನು ಚಿಕ್ಕಣ್ಣ ಯಣ್ಣೆಕಟ್ಟೆ ಸಂಪಾದಿಸಿದ್ದಾರೆ. ಕೊರಟಗೆರೆ ತಾಲೂಕು ಮಲ್ಲೇಶಪುರದ ತತ್ವಪದದ ನರಸಮ್ಮರವರು ಹಾಡುವುದನ್ನೇ ಬದುಕಾಗಿಸಿಕೊಂಡು ಭಜನೆ, ತತ್ವಪದಗಳನ್ನು ದಿನವಿಡೀ ಬೇಕಾದರೂ ಹಾಡಬಲ್ಲರು. ಅಕಾಡೆಮಿಗಳು ಇವರ ಹಾಡುಗಳನ್ನು ಸಂಗ್ರಹಿಸಿವೆ. ತತ್ವಪದಗಳನ್ನು ಏಕತಾರಿ, ದಮ್ಮಡಿ, ಕೆಲವೊಮ್ಮೆ ತಾಳ ವಾದ್ಯಗಳನ್ನು ಹಿನ್ನೆಲೆಯಾಗಿ ಬಳಸಿ ಭೈರಾಗಿಗಳು, ದೀಕ್ಷೆ ಪಡೆದವರು ಮಠಮಾನ್ಯಗಳಲ್ಲಿ, ಆಶ್ರಮಗಳಲ್ಲಿ ಭಜನೆ ರೂಪದಲ್ಲಿ ಹಾಡುತ್ತಾರೆ.

**ಗುಡ್ಡರ ಮೇಳ:** ಕುಣಿಗಲ್ ತಾಲೂಕು ಕುರುಬರ ಹೊಸೂರಿನ ಗುಡ್ಡರ ಮೇಳದ ಅಂದಾನಿಗೌಡ ಚಕ್ರಾಕಾರದ ಮಣ್ಣಿನ ಬಳೆ ಹೊತ್ತು, ಆಡಿನ ಚರ್ಮದಿಂದ ತಯಾರಿಸಿದ ದಮಡಿ ಆಕೃತಿಯ ತಾಳ ಹಿಡಿದು ಕಾಸೆ, ಪೇಟ, ಅಡ್ಡವಸ್ತ್ರ, ನಿಲುವಂಗಿ ಪೈಜಾಮ ತೊಟ್ಟು ಕಾಲಿಗೆ ಗೆಜ್ಜೆ ಕಟ್ಟಿ ಸೊಂಟ ಪಟ್ಟಿ ಸುತ್ತಿಕೊಂಡು ಎಂಟು ಜನ ಹಾಡುತ್ತಾ ಕುಣಿಯುವುದನ್ನು ಗುಡ್ಡದ ಮೇಳ ಎಂದು ಗುರುತಿಸುತ್ತಾರೆ. ಕೆಲವು ಕಡೆ ಕುರುಬರು ಆಚರಿಸುವ ಗೊರವದೀಕ್ಷೆ, ಗೊರವ ಸಂಸ್ಕಾರ,

ದೋಣೆಸೇವೆ, ಮೈಲಾರಲಿಂಗ ಪೂಜೆ ಮುಂತಾದ ಸಂದರ್ಭದಲ್ಲಿ ಬಳಕೆಯಲ್ಲಿದೆ. ಅಂದಾನಿಗೌಡರು ಇದನ್ನೂ ದೇವರ ಸೇವೆಯಾಗಿ ಮಾಡುತ್ತಾ ಬಂದಿದ್ದು, ಇತರೆ ಅನೇಕ ದೇವರ ಉತ್ಸವದಲ್ಲಿಯೂ ಈ ಕಲಾಸೇವೆ ಸಲ್ಲಿಸುತ್ತಾರೆ. ೧೯೯೫ರಲ್ಲಿ ಜಾನಪದ ಅಕಾಡೆಮಿಯು ವಿಶೇಷ ಕಲಾ ಪ್ರಶಸ್ತಿಯನ್ನು ಇವರಿಗೆ ನೀಡಿದೆ. ಗೊರವಗುಡ್ಡರು ಒಂದು ಕೈಯಲ್ಲಿ ಢಮರುಗ, ಇನ್ನೊಂದರಲ್ಲಿ ಕೊಳಲು, ಉದ್ದನೆಯ ಕರಿ ಕಂಬಳಿ ನಿಲುವಂಗಿ, ಮೇಲೆ ಕವಡೆಯ ಸಾಲುಗಳು ಕೊರಳಿಗೆ ಕವಡೆಸರ, ತಲೆಮೇಲೆ ಕರಡಿಯ ಟೋಪಿ, ಹೆಗಲಲ್ಲಿ ಜೋಳಿಗೆ ಎದೆಯ ಮೇಲೆ ಉದ್ದವಾಗಿ ಇಳಿ ಬಿಟ್ಟ ಕಂಚನದೋಣಿ, ಮಗ್ಗಲು ಜೋಳಿಗೆ, ಮಲ್ಲ ಭಂಡಾರದ ಚೀಲ, ಹಣೆಯಲ್ಲಿ ವಿಭೂತಿ, ಭಂಡಾರದ ಬೊಟ್ಟು, ಕಣ್ಣಿಗೆ ಕುಂಕುಮ ಬಣ್ಣದ ಭಸ್ಮ ಧರಿಸಿರುತ್ತಾರೆ. ಮೈಲಾರ ದೇವರ ಭಕ್ತರಾದ ಇವರನ್ನು ಗೊರವಯ್ಯ ಎಂದು ಕರೆಯುತ್ತಾರೆ.

ಗುಬ್ಬಿ ತಾಲೂಕು ಇರಕಸಂದ್ರದ ಗೊರವರ ಬೆಟ್ಟಲಿಂಗಯ್ಯ ಮತ್ತು ಮುದ್ದನಹಳ್ಳಿಯ ಗೊರವರ ಚಿಕ್ಕಮಲ್ಲಯ್ಯ ಇವರು ೧೧ನೇ ವಯಸ್ಸಿಗೆ ತಮ್ಮ ತಂದೆಯಿಂದ ಗೊರವ ದೀಕ್ಷೆ ಪಡೆದು ಗೊರವರ ಕುಣಿತದ ಕಲಾವಿದರಾಗಿದ್ದಾರೆ. ಈತನ ಮಗ ಚಿಕ್ಕಲಿಂಗಯ್ಯ ಕೂಡ ಇದೇ ಹಾದಿಯಲ್ಲಿ ನಡೆದು ತುರುವೇಕೆರೆ ತಾಲೂಕಿನ ಸಂಪಿಗೆಯಲ್ಲಿ ನೆಲೆಸಿ ಕಲಾ ಪ್ರಸಾರ ಮಾಡುತ್ತಿದ್ದಾರೆ. ಶಿರಾ ತಾಲೂಕು ರಂಗನಾಥನಗರದ ಸೋಬಾನೆ ಈರಣ್ಣ, ನಾಗವೇಣಿ, ಪುಟ್ಟಮ್ಮ, ಕದುರಮ್ಮ, ರಂಗಮ್ಮ, ಕೋಟೆಯ ಭೀಮಕ್ಕ, ಕೆಂಪಮ್ಮ, ದೇವೀರಮ್ಮ, ಸಣ್ಣಲಿಂಗಮ್ಮ, ಕ್ಯಾತಮ್ಮ, ಗಂಗಮ್ಮ, ದ್ವಾರನಕುಂಟೆಯ ಸೌಭಾಗ್ಯ, ಚಿಕ್ಕದಾಸರಹಳ್ಳಿಯ ಗಂಗಮ್ಮ ಮತ್ತು ಸಂಗಡಿಗರು. ಹೊನ್ನಗೊಂಡನಹಳ್ಳಿ ಗೊಲ್ಲರಹಟ್ಟಿಯ ಈರಮ್ಮ, ಮಾರಕ್ಕ, ಕಾಡಮ್ಮ, ದೊಡ್ಡ ಅಗ್ರಹಾರದ ಬೆಟ್ಟಚೆನ್ನಪ್ಪ, ಸೋಮಯ್ಯ ಮುಂತಾದ ಅನೇಕ ಕಲಾವಿದರಿದ್ದಾರೆ.

**ಮುಖವೀಣೆ:** ಓಲಗದ ನಾಗಸ್ವರದ ಸ್ವರೂಪ ಹೊಂದಿರುವ ಈ ವಾದ್ಯ ಮೂಡಲಪಾಯ ಯಕ್ಷಗಾನದಲ್ಲಿ ಪ್ರಮುಖವಾಗಿ ಬಳಸಲ್ಪಡುತ್ತಿದೆ. ಇದೊಂದು ಜನಪದ ವಾದ್ಯವಾಗಿದ್ದು ಯಕ್ಷಗಾನದುದ್ದಕ್ಕೂ ಮುಖವೀಣೆ ನುಡಿಸಬೇಕು. ತುಮಕೂರು ಜಿಲ್ಲೆಯಲ್ಲಿ ಅನೇಕ ಮುಖವೀಣೆ ಕಲಾವಿದರು ಪ್ರಸಿದ್ಧರಾಗಿದ್ದಾರೆ. ತುರುವೇಕೆರೆ ತಾಲೂಕು ದೊಡ್ಡಶೆಟ್ಟಿ ಕೆರೆಯ ಶ್ರೀರಂಗಯ್ಯನವರು ಅಪೂರ್ವ ಮುಖವೀಣೆ ಕಲಾವಿದರಾಗಿದ್ದು ಮೈಸೂರು, ಮಂಡ್ಯ, ಚಿತ್ರದುರ್ಗ, ಹಾಸನ ಜಿಲ್ಲೆಗಳಲ್ಲಿಯೂ ಪ್ರಸಿದ್ಧಿ ಪಡೆದಿದ್ದರು. ಅನೇಕ ಮುಖವೀಣೆ ಕಲಾವಿದರನ್ನು ತಯಾರು ಮಾಡಿದ ಇವರು ಅನೇಕ ಕಾರ್ಯಾಗಾರ, ಪ್ರಾತ್ಯಕ್ಷಿಕೆ ಕಾರ್ಯಕ್ರಮಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿದ್ದರು. ಆಕಾಶವಾಣಿ, ಮೈಸೂರು ದಸರಾ, ಮುಂಬಯಿ, ಮದ್ರಾಸ್, ದೆಹಲಿ, ತಂಜಾವೂರುಗಳಲ್ಲಿ ಪ್ರದರ್ಶನ ನೀಡಿದ್ದರು. ೧೯೮೮ರಲ್ಲಿ ಜಾನಪದ ಅಕಾಡೆಮಿ ಪ್ರಶಸ್ತಿ ಪಡೆದಿದ್ದ ಇವರು ೧೯೯೫ರಲ್ಲಿ ನಿಧನರಾದರು. ಕ್ಲಾರಿಯೋನೆಟ್, ಹಾರ್ಮೋನಿಯಂ, ಕೊಳಲು ಮುಂತಾದ ಕಲೆಗಳನ್ನು ಕರಗತಗೊಳಿಸಿಕೊಂಡಿರುವ ಚಿಕ್ಕನಾಯ್ಕನಹಳ್ಳಿ ತಾಲೂಕು ಗಾಣಧಾಳು ಗ್ರಾಮದ ಜಿ.ಜಿ.ಮಲ್ಲಾಚಾರ್ ನಾಟಕ, ಹರಿಕಥೆ, ಕರಪಾಲಮೇಳ ಮುಂತಾದವುಗಳಿಗೆ ಹಾರ್ಮೋನಿಯಂ ನುಡಿಸುತ್ತಾರೆ. ಶಾಲಾಮಕ್ಕಳಿಗೂ ಇವುಗಳನ್ನು ಕಲಿಸುವ ಅನೇಕ ಜಿಲ್ಲಾ ಉತ್ಸವ, ಜನಪದ ಕಲಾಮೇಳಗಳಲ್ಲಿ, ಯುವಜನಮೇಳಗಳಲ್ಲಿ ಕಲಾಪ್ರದರ್ಶನ ನೀಡಿದ್ದು ಹಲವಾರು ಪ್ರಶಸ್ತಿ ಗೌರವ ಸನ್ಮಾನಗಳನ್ನು ಪಡೆದಿದ್ದಾರೆ.

ತಿಪಟೂರು ತಾಲೂಕು ಲಕ್ಷ್ಮೀಪುರದ ಭೈರಪ್ಪ ಯಕ್ಷಗಾನ ಕಲಾವಿದರು. ಮುಖವೀಣೆ ಕಲಾವಿದರೂ, ಭಾಗವತರೂ ಆಗಿ ಅನೇಕ ಪ್ರಸಂಗಕರ್ತರಾಗಿದ್ದಾರೆ. ಕೊನೆಹಳ್ಳಿಯ ಬಿದರೆಯಮ್ಮ ಯಕ್ಷಗಾನ ಮಂಡಳಿ ಹಾಗೂ ಮೂಡಲಪಾಯ, ಯಕ್ಷಗಾನ ಟ್ರಸ್ಟ್ ಜೊತೆ ಸೇರಿ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯನಿರ್ವಹಿಸುತ್ತಿದ್ದರಲ್ಲದೇ, ದೆಹಲಿ, ಉಡುಪಿ, ಮೈಸೂರು, ಬೆಂಗಳೂರು ಮುಂತಾದ ಕಡೆ ಕಲಾ ಪ್ರದರ್ಶನ ನೀಡಿದ್ದರು. ೧೯೮೭ರಲ್ಲಿ ಜಾನಪದ ಅಕಾಡೆಮಿ ಇವರಿಗೆ ಪ್ರಶಸ್ತಿ ನೀಡಿದೆ. ಶಿರಾ ತಾಲೂಕು ಕಡವಿಗೆರೆಯ ಮೂಡಲ ಗಿರಿಯಪ್ಪನವರು ವಂಶಪಾರಂಪರ್ಯದಿಂದಲೂ ಮುಖವೀಣೆ, ಚೆಟ್ಟಿಮೇಳ, ಅರೆವಾದ್ಯ, ಕಹಳೆ, ನಾಗಸ್ವರ ವಾದ್ಯಗಳ ಕಲಾವಿದರಾಗಿದ್ದಾರೆ. ಆಕಾಶವಾಣಿ ಕಲಾವಿದರಾಗಿ, ಕರ್ನಾಟಕದ ವಿವಿಧ ಭಾಗಗಳಲ್ಲಿ ನೆರೆರಾಜ್ಯಗಳ ಪ್ರದೇಶಗಳಾದ ಆಂಧ್ರ, ಮಡಕಶಿರಾ, ವಿಜಯವಾಡ, ರಾಯಲಸೀಮೆ ಮುಂತಾದ ಕಡೆ ನಾಗಸ್ವರ ಪ್ರದರ್ಶನ ನೀಡಿದ್ದಾರೆ. ಜಿಲ್ಲೆಯ ಎಲ್ಲ ಭಾಗಗಳಲ್ಲಿ ಯಕ್ಷಗಾನ ಭಾಗವಂತಿಕೆಗೆ ಇವರ ಮುಖವೀಣೆ ಇದ್ದೇ ಇರಬೇಕು ಎನ್ನುವಷ್ಟು ಪ್ರಸಿದ್ಧರು. ಕಡವಿಗೆರೆಯಲ್ಲಿ ಪ್ರತೀವರ್ಷವೂ ತಪ್ಪದೇ ಐರಾವತ ನಾಟಕ ಪ್ರದರ್ಶಿಸುವ ಇವರು ಯಕ್ಷಗಾನದ ಉಳಿವಿಗಾಗಿ ಶ್ರಮಿಸುತ್ತಿದ್ದಾರೆ.

ಇದೇ ತಾಲೂಕಿನ ನಾದೂರು ಗ್ರಾಮದ ದಾಸಪ್ಪನವರೂ ಮುಖವೀಣೆಯೊಂದಿಗೆ ಚಿಟ್ಟಿಮೇಳವನ್ನು ಸಹ ಕಲಿತು ಚಿಟ್ಟಿಮೇಳ ಸಂಘ ಮಾಡಿಕೊಂಡು ಅದರೊಂದಿಗೆ ಓಲಗ, ಅರೆವಾದ್ಯವನ್ನೂ ನುಡಿಸುತ್ತಿದ್ದರು. ಪಟ್ನಾಯಕನಹಳ್ಳಿಯ ಶ್ರೀ ನಂಜಾವಧೂತ ಮಠದ ಓಂಕಾರೇಶ್ವರ ಸ್ವಾಮಿ ಜಾತ್ರೆಯ ೧೦ ದಿನದ ಉತ್ಸವದಲ್ಲಿ ಇವರ ಕುಟುಂಬ ಎರಡು ತಲೆಮಾರುಗಳಿಂದ ನಿರಂತರ ಕಲಾಸೇವೆ ನಡೆಸಿಕೊಂಡು ಬಂದಿದೆ. ತಮ್ಮ ಪೂರ್ವಿಕರನ್ನು ನೊಳಂಬ ಪರಂಪರೆ ಯೊಂದಿಗೆ ಸಮೀಕರಿಸುವ ಇವರು ತಮ್ಮ ಪೂರ್ವಿಕರು ಹೇಮಾವತಿ ಸಂಸ್ಥಾನದ ಆಸ್ಥಾನ ವಾದ್ಯಗಾರರಾಗಿದ್ದರು ಎನ್ನುತ್ತಾರೆ. ತಾಲೂಕಿನ ಅನೇಕ ಪ್ರದೇಶಗಳ ದೇವಾಲಯಗಳ ಪೂಜಾ ಸಮಯದಲ್ಲಿ ವಾದ್ಯ ನುಡಿಸುವ ಕಾಯಕ ಹೊಂದಿದ್ದಾರೆ. ಲಾವಣಿ ಹಾಡುವ ಇವರು ಕಹಳೆವಾದಕರೂ ಹೌದು. ಡಾ.ರಾಜಕುಮಾರ್ ಅವರ ಸಂಪರ್ಕವನ್ನು ಹೊಂದಿದ್ದು, ಅವರ 'ಸನಾದಿ ಅಪ್ಪಣ್ಣ' ಚಿತ್ರದಲ್ಲಿ ಮುಖವೀಣೆ ಕಲಾವಿದರಾಗಿ ಕೆಲಸ ಮಾಡಿದ ಹೆಗ್ಗಳಿಕೆ ಇವರದು. ಇವರ ಮಗ ಗೋಪಾಲ್ ಕೂಡ ಮುಖವೀಣೆ ಕಲಾವಿದರು. ಇದೇ ತಾಲೂಕಿನ ಶಾಗದಡು ಗ್ರಾಮದ ಕೃಷ್ಣಪ್ಪ ಕೂಡ ಮುಖವೀಣೆಯಲ್ಲದೇ ಶಹನಾಯಿ, ಅರೆವಾದ್ಯ, ಚಿಟ್ಟಿಮೇಳ, ದೋಣು ಮುಂತಾದ ಕಲೆಗಳಲ್ಲಿ ಪರಿಣಿತಿ ಹೊಂದಿ ಸಂಪನ್ಮೂಲ ವ್ಯಕ್ತಿಯಾಗಿ, ರಾಜ್ಯದ ನಾನಾ ಕಡೆ ಪ್ರದರ್ಶನ ನೀಡಿದ್ದಾರೆ.

**ಚಿಟ್ ಮೇಳ:** ಇದನ್ನು ಡೆಂಕವಾದ್ಯವೆಂದೂ ಕರೆಯುತ್ತಾರೆ. ಸಾಮಾನ್ಯವಾಗಿ ಎಂಟು ಜನರ ಗುಂಪು ನಾಗಸ್ವರ, ಶೃತಿ, ತಾಳ, ಕರಡಿವಾದ್ಯ, ಚಮ್ಮಾಳ, ದಿಮ್ಮಿ ವಾದ್ಯಗಳನ್ನು ನುಡಿಸುವರು. ಗುಬ್ಬಿ ತಾಲೂಕು ಚೇಳೂರು ಹೋಬಳಿ, ಮಾದೇನಹಳ್ಳಿಯ ಮಹಾಲಿಂಗಪ್ಪ ಹಾಗೂ ಶಿರಾ ತಾಲೂಕು ಮುದಿಮಡಗು ಗ್ರಾಮದ ಸುರೇಶ್ ತಂಡಗಳು ಚಿಟ್ ಮೇಳದ ಪ್ರಮುಖ ತಂಡಗಳಾಗಿವೆ. ದೆಹಲಿ, ನಾಗಪುರ, ಮಧ್ಯಪ್ರದೇಶ, ಅಂಡಮಾನ್ ನಿಕೋಬಾರ್ ದ್ವೀಪಗಳಲ್ಲಿ ಈ ಕಲಾಪ್ರೌಢಿಮೆಯನ್ನು ಪ್ರದರ್ಶಿಸಿದ್ದಾರೆ.

**ತಮಟೆ:** ಕಳ್ಳಂಬೆಳ್ಳದ ನಿವಾಸಿ ತಮಟೆ ಲಕ್ಷ್ಮಯ್ಯ ತಮಟೆ ತಯಾರಿಕೆ ಹಾಗೂ ತಮಟೆ ಬಡಿಯುವ ಕಲೆಯಲ್ಲಿ ಪ್ರಸಿದ್ಧರು. ಇವರ ತಂದೆ ಜೋಗಣ್ಣ ಚಿಟ್ ಮೇಳದ ಲಾವಣಿಕಾರ, ತತ್ವಪದಕಾರರು. ಇವರು ಅರೆ, ತಮಟೆ, ಬ್ಯಾಂಡ್ ವಾದನದಲ್ಲಿಯೂ ಪರಿಣಿತರು. ಬೆಂಗಳೂರಿಗೆ ರಾಜೀವ್ ಗಾಂಧಿ ಬಂದಿದ್ದ ಸಂದರ್ಭದಲ್ಲಿ ವಿಧಾನಸೌಧದ ಮುಂಭಾಗ ಹಾಗೂ ವಿಮಾನ ನಿಲ್ದಾಣದಲ್ಲಿ ತಮಟೆ ವಾದ್ಯ ನುಡಿಸಿದ್ದರು. ಇವರು ಒಂಬತ್ತು ಜನರ ತಂಡವನ್ನು ಹೊಂದಿದ್ದು, ಶಾಸ್ತ್ರೀಯ ರೀತಿಯಲ್ಲಿ ನೃತ್ಯದೊಂದಿಗೆ ಕಲಾಪ್ರದರ್ಶನ ಮಾಡುತ್ತಾರೆ.

**ಭಜನೆ:** ಗುಬ್ಬಿ ತಾಲೂಕು ಚೇಳೂರು ಹೋಬಳಿ, ಮಾರನಹಳ್ಳಿಯ ಪಾಪಣ್ಣ ಎಂದೇ ಪ್ರಸಿದ್ಧರಾದ ಸಿದ್ದೇಗೌಡ ೧೦೦ ವಸಂತ ದಾಟಿದವರು. ಯಕ್ಷಗಾನದಲ್ಲಿ ರಾಮಾಯಣ, ಕುಮಾರರಾಮನ ಕತೆ, ಮೂರೂವರೆ ವಜ್ರ, ವಿರಾಟಪರ್ವ, ಅಭಿಮನ್ಯು ಕಾಳಗ, ದುಶ್ಯಾಸನ ಮುಂತಾದವುಗಳಿಗೆ ಹಿಮ್ಮೇಳ, ಹಿನ್ನಲೆ ಸಂಗೀತ, ಕೋಲುಮೇಳ, ತಂಡಕಟ್ಟಿ ಕೋಲಾಟ ಪ್ರದರ್ಶನ, ಸಾಮಗಾನ ನಾಟಕ ಸಂಘಟಿಸಿದ್ದಲ್ಲದೇ ಭಜನಾ ತಂಡ ರೂಪಿಸಿದ್ದಾರೆ.

**ನಗಾರಿ:** ಇದೊಂದು ಚರ್ಮವಾದ್ಯ. ಇದಕ್ಕೆ ಭೇರಿ, ದುಂದುಭಿ ಎಂದೆಲ್ಲಾ ಹೆಸರಿದೆ. ಕೆಲವು ದೇವಾಲಯಗಳಲ್ಲಿ ಬಸವನ ಮೇಲಿಟ್ಟು ಬಾರಿಸುತ್ತಾರೆ. ಲಯಬದ್ಧವಾಗಿ ಬಡಿಯುವುದೊಂದು ಕಲೆ. ಕೆಲ ಮಠಗಳಲ್ಲಿ ಜನಪದ ಮೇಳ, ಕಲಾಪ್ರದರ್ಶನ ಹಾಗೂ ಮೆರವಣಿಗೆಗಳಲ್ಲಿ ನಗಾರಿಯನ್ನು ಬಳಸುತ್ತಾರೆ. ಚೇಳೂರಿನ ಸಿ.ಎಸ್.ಬಸವರಾಜು ಅವರು ನಗಾರಿ ಕಲೆಯನ್ನು ಸುಮಾರು ೬೦ ವರ್ಷಗಳಿಂದಲೂ ರೂಢಿಸಿಕೊಂಡು ಬಂದಿದ್ದಾರೆ. ಧಾರ್ಮಿಕಕಾರ್ಯದಲ್ಲಿ ಹೆಚ್ಚಾಗಿ ಬಳಸುವ ಈ ಕಲೆಯನ್ನು ದೇವರ ಉತ್ಸವ ಜಾತ್ರೆ ರಥೋತ್ಸವಗಳಲ್ಲಿ ಬಸವನೊಂದಿಗೆ ನಗಾರಿ ಬಾರಿಸುವರು, ಚೇಳೂರಿನ ಶ್ರೀ ವೃಷ್ಣೇಶ್ವರ ಕಲಾಸಂಘದ ಅಧ್ಯಕ್ಷರಾಗಿದ್ದು, ನಂದಿಧ್ವಜ ಕುಣಿತ, ಯಕ್ಷಗಾನ ಪಾತ್ರಧಾರರಾಗಿ, ವೇಷಭೂಷಣ ತಯಾರಿಕೆ, ಮೃದಂಗ ಕಲಾವಿದರಾಗಿ, ಹಿಮ್ಮೇಳದ ಭಾಗವತರಾಗಿ ಬಹುರೂಪಿ ಕಲಾವಿದರಾಗಿ ಬಹುಮುಖ ಸೇವೆ ಸಲ್ಲಿಸುತ್ತಿದ್ದಾರೆ.

ಬಯಲಾಟದ ಭೀಮಯ್ಯ ಎಂದೇ ಖ್ಯಾತಿ ಪಡೆದ ಭೀಮಯ್ಯ ಜೀವನೋಪಾಯಕ್ಕೆ ಕಂಬಳಿ ನೇಯುವವರಾದರೂ, ಸೋಮನ ಕುಣಿತ, ದೇವರ ಪದ ಹಾಡುವುದು, ತತ್ವಪದ, ಯಕ್ಷಗಾನ ಪ್ರಸಂಗ ನಡೆಸುವುದು ಮುಂತಾದ ಎಲ್ಲ ಕ್ಷೇತ್ರದಲ್ಲಿಯೂ ಪರಿಣಿತರು. ತಾಲೂಕು ಜಾನಪದ ಮತ್ತು ಯಕ್ಷಗಾನ ಕಲಾವಿದರ ಸಂಘದ ಸಹಕಾರ್ಯದರ್ಶಿಯಾಗಿ, ಶ್ರೀ ಕೆಂಪಮ್ಮದೇವಿ ಬಯಲು ನಾಟಕ ಸಂಘದ ಖಜಾಂಚಿಯಾಗಿ ಕಾರ್ಯನಿರ್ವಹಿಸುತ್ತಿರುವರು.

**ಭಾಗವತ/ಭಾಗವಂತಿಕೆ:** ತಿಪಟೂರು ತಾಲೂಕು ಕೊನೆಹಳ್ಳಿಯ ಭಾಗವತ ಪಟೇಲ್ ಎನ್.ನಾರಸಪ್ಪನವರು ಮೂಡಲಪಾಯ ಯಕ್ಷಗಾನದ ಪ್ರವರ್ತಕರಾಗಿದ್ದರು. ಬಾಲ್ಯದಿಂದಲೇ ಸಾಮಗಾನ ಕಲಾವಿದರಾಗಿ, ಯಕ್ಷಗಾನದಲ್ಲಿ ಭಾಗವಹಿಸುತ್ತಿದ್ದು, ಸಂಪೂರ್ಣರಾಮಾಯಣ ನಾಟಕದ ಆಂಜನೇಯ ಪಾತ್ರ ಇವರಿಗೆ ಪ್ರಸಿದ್ಧಿ ತಂದುಕೊಟ್ಟಿತು.

ಖ್ಯಾತ ಜಾನಪದ ವಿದ್ವಾಂಸರಾಗಿದ್ದ ಜೀ.ಶಂ.ಪರಮಶಿವಯ್ಯ ಅವರ ಸಂಪರ್ಕದಿಂದಾಗಿ ಮೂಡಲಪಾಯ ಕಲೆಗೆ ಮಹತ್ವ ದೊರಕುತ್ತ ಬಂದು ಇದಕ್ಕೊಂದು ಸ್ಥಾನಮಾನ ದೊರಕಿತೆಂದರೆ ತಪ್ಪಾಗಲಾರದು. ಮೈಸೂರು ವಿಶ್ವವಿದ್ಯಾನಿಲಯದ ಸಂದರ್ಶಕ ಪ್ರಾಧ್ಯಾಪಕರಾಗಿದ್ದಲ್ಲದೇ, ಉಡುಪಿ, ದೆಹಲಿ, ನಾಗಪುರ, ಮುಂಬಯಿ, ತಂಜಾವೂರು ಮೊದಲಾದ ಕಡೆ ವಿಚಾರಸಂಕಿರಣ, ಪ್ರದರ್ಶನ, ಸಂವಾದಗಳಲ್ಲಿ ಭಾಗವಹಿಸಿದ್ದರು. ಕರಿಬಂಟನ ಕಾಳಗ, ಕೀಚಕ ವಧೆ, ಐರಾವತ, ಲಂಕಾ ದಹನ, ದುಶ್ಯಾಸನ ಕಾಳಗ, ಲವ–ಕುಶ, ವೀರ ಅಭಿಮನ್ಯು, ಮೊದಲಾದ ಹತ್ತಾರು ಪ್ರಸಂಗಗಳಿಗೆ ಭಾಗವಂತಿಕೆ ನೀಡಿದ್ದಾರೆ. ಮೂಡಲಪಾಯ ಯಕ್ಷಗಾನ ಕೋಗಿಲೆ ಬಿರುದು, ಜಾನಪದ ಅಕಾಡೆಮಿ ಪ್ರಶಸ್ತಿ, ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಮುಂತಾದ ಗೌರವ ಸಂದಿದೆ.

ತಿಪಟೂರು ತಾಲೂಕು ಅರಳಗುಪ್ಪೆಯ ಭಾಗವತ ಸಿದ್ಧಲಿಂಗಪ್ಪನವರೂ ಕೂಡ ಅದೇ ಹಾದಿಯಲ್ಲಿ ನಡೆದು ಮೂಡಲಪಾಯವನ್ನು ಉಳಿಸುವ ದಿಸೆಯಲ್ಲಿ ಶ್ರಮಿಸಿದ ಶಾಲಾ ಶಿಕ್ಷಕರು. ಇವರ ತಂದೆ, ತಾತ, ಎಲ್ಲರೂ ಕಲಾವಿದರು. ಪ್ರಾರಂಭದಲ್ಲಿ ಇವರು ಕಥಾನಕದಲ್ಲಿ ಬರುವ ಗಣಪ, ಶಾರದೆ, ನಂತರ ಲವ–ಕುಶ ಮುಂತಾದ ಪಾತ್ರಗಳ ಮೂಲಕ ಪ್ರವೇಶಿಸಿ ಭಾಗವತರಾಗಿ, ಮೃದಂಗವಾದಕರಾಗಿ ವೇಷಭೂಷಣ ತಯಾರಕರಾಗಿ ಬೆಳೆದರು. ಕಂಸ, ರಾವಣ, ಸುಯೋಧನ ಮೊದಲಾದ ಪಾತ್ರಗಳಿಗೆ ಹೆಸರುವಾಸಿಯಾದರು. ಸ್ವತಃ ಭಾಗವತರಾಗಿ ಲವ–ಕುಶ, ಚಿತ್ರಕೇತು, ದಕ್ಷಯಜ್ಞ, ಬಾಣಾಸುರ, ಭಸ್ಮಾಸುರ, ಗಯಚರಿತ್ರೆ, ಗಿರಿಜಾ ಕಲ್ಯಾಣ, ಕರ್ಣಪರ್ವ, ದೇವಿ ಮಹಾತ್ಮೆ ಅಭಿಮನ್ಯು ಕಾಳಗ ಮುಂತಾದ ಯಕ್ಷಗಾನ ಪ್ರಸಂಗಗಳನ್ನು ಜಿಲ್ಲೆಯಾದ್ಯಂತ ಕಲಿಸಿದ್ದಾರೆ. ಅನೇಕ ಕಲಾವಿದರುಗಳನ್ನು ರೂಪಿಸಿ ಮೂಡಲಪಾಯದಲ್ಲಿ ಯಕ್ಷಗಾನ ಕೇಂದ್ರ ಸ್ಥಾಪಿಸುವಲ್ಲಿ ಶ್ರಮಿಸಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯ ಜಾನಪದ ವಿದ್ಯಾರ್ಥಿಗಳಿಗೆ ಸಂದರ್ಶಕ ಕಲಾವಿದರಾಗಿಯೂ ಕೆಲಸ ನಿರ್ವಹಿಸಿದ್ದರು. ಜಾನಪದ ಅಕಾಡೆಮಿ ೧೯೮೨ರಲ್ಲಿ ಪ್ರಶಸ್ತಿ ನೀಡಿ ಗೌರವಿಸಿದೆ. ಇದೇ ಊರಿನ ಕಲ್ಮನೆ ನಂಜಪ್ಪನವರೂ ಕೂಡ ಬಾಲನಟರಾಗಿ, ಸ್ತ್ರೀ ಪಾತ್ರ ಸೇರಿದಂತೆ ವಿವಿಧ ಪಾತ್ರ ನಿರ್ವಹಿಸಿ, ಯಕ್ಷಗಾನ, ಸಾಮಗಾನ, ಯಕ್ಷಗಾನ ಪರಿಕರ ತಯಾರಿಕೆ, ಎತ್ತಿನ ಬಂಡಿ ತಯಾರಿಕೆ ಮುಂತಾದ ಚಟುವಟಿಕೆಗಳನ್ನು ಹೊಂದಿದ್ದು ಇವರಿಗೆ ೨೦೦೩ನೇ ಸಾಲಿನಲ್ಲಿ ಜಾನಪದ ಅಕಾಡೆಮಿ ಪ್ರಶಸ್ತಿ ಸಂದಿದೆ. ಆಕಾಶವಾಣಿ, ದೂರದರ್ಶನಗಳಲ್ಲಿ ಪ್ರದರ್ಶನ ನೀಡುವುದರ ಜೊತೆಗೆ, ಗುರು ಶಿಷ್ಯ ಪರಂಪರೆಯಲ್ಲಿ ಯಕ್ಷಗಾನ ಕಲಿಸುತ್ತಾರೆ. ಶ್ರೀ ಕಲ್ಲೇಶ್ವರ ಸ್ವಾಮಿ ಯಕ್ಷಗಾನ ಮಂಡಳಿ ಸ್ಥಾಪಿಸಿ ರಾಜ್ಯಾದ್ಯಂತ ಪ್ರದರ್ಶನ ನೀಡುತ್ತಾ ಬಂದಿದ್ದಾರೆ.

ಭಾಗವತ ಎ.ಎನ್.ಚನ್ನಬಸವಯ್ಯನವರು ತಂದೆ ನಂಜಪ್ಪನವರಿಂದ ಸಂಗೀತ ರಂಗಗೀತೆ, ಕಲಿತಿದ್ದಲ್ಲದೇ ಚನ್ನಬಸವ ಪುರಾಣ, ಶರಣಲೀಲಾಮೃತ, ಅಮರಕೋಶ, ಸಿದ್ಧಾಂತ ಶಿಖಾಮಣಿ ಮುಂತಾದವುಗಳನ್ನು ಶಾಸ್ತ್ರೀಯವಾಗಿ ಅಭ್ಯಾಸ ಮಾಡಿದರು. ಹೊನ್ನಂಜಾಚಾರ್, ವೀರಭದ್ರಾಚಾರ್, ಶ್ರೀಕಂಠಾಚಾರ್ ಮುಂತಾದವರಲ್ಲಿ ಶಿಷ್ಯವೃತ್ತಿ ಮಾಡಿದ ಇವರಿಗೆ ಜೀ.ಶಂ.ಪ, ಪಿ.ಆರ್.ತಿಪ್ಪೇಸ್ವಾಮಿ, ಹೆಚ್.ಎಲ್.ನಾಗೇಗೌಡ, ಎಸ್.ಕೆ.ಕರೀಂಖಾನ್ ಮುಂತಾದವರ ಸಂಪರ್ಕದಿಂದ ಮೂಡಲಪಾಯ ಯಕ್ಷಗಾನವನ್ನು ಅಭಿವೃದ್ಧಿ ಪಡಿಸಲು ಸಾಧ್ಯವಾಯಿತು. ಯಕ್ಷಗಾನ, ವೀರಗಾಸೆ, ಕರಪಾಲ ಮೇಳ, ಶಿವಕಥಾ ಪ್ರವಚನ, ಪೌರಾಣಿಕ, ಸಾಮಾಜಿಕ, ಐತಿಹಾಸಿಕ ಪ್ರಸಂಗಗಳನ್ನು ರಚಿಸಿ, ಪ್ರದರ್ಶಿಸುವಲ್ಲಿ ಗಣನೀಯ ಪರಿಶ್ರಮವಿದೆ. ಮೈಸೂರಿನಲ್ಲಿ ನಡೆದ ವಿಶ್ವಕನ್ನಡ ಸಮ್ಮೇಳನ ಬೆಂಗಳೂರು, ಮೈಸೂರು ಆಕಾಶವಾಣಿ, ಅನೇಕ ಅಖಿಲಭಾರತ ಸಾಹಿತ್ಯ ಸಮ್ಮೇಳನ ಮುಂತಾದ ಕಡೆ ಪ್ರದರ್ಶನ ನೀಡಿದ್ದಾರೆ. ಆದಿಚುಂಚನಗಿರಿ ಸಂಸ್ಥಾನಮಠದ ಆಶ್ರಯದಲ್ಲಿ ಅಂಧಮಕ್ಕಳಿಗೆ 'ಚಂದ್ರಹಾಸ' ಯಕ್ಷಗಾನ ಪ್ರಸಂಗವನ್ನು, ಜಾನಪದ ಲೋಕದಲ್ಲಿ ಮಹಿಳೆಯರಿಗೆ 'ಚಿತ್ರಕೇತು ಮಹಾರಾಜನ ಕತೆ'ಯನ್ನು ಕಲಿಸುವುದರ ಜೊತೆಗೆ ಭಾಗವಂತಿಕೆ ನೀಡಿರುವರು. ಇವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಜಾನಪದ ಲೋಕದ ಲಿಂಗೇಗೌಡ ಪ್ರಶಸ್ತಿ, ಚುಂಚಶ್ರೀ ಪ್ರಶಸ್ತಿ ಮುಂತಾದ ಪ್ರಶಸ್ತಿಗಳು ಸಂದಿವೆ. ಅನೇಕ ಕಾರ್ಯಾಗಾರಗಳಲ್ಲಿ, ಮುಖವೀಣೆ ಪ್ರಾತ್ಯಕ್ಷಿಕೆಯಲ್ಲಿ ಸಂಪನ್ಮೂಲ ವ್ಯಕ್ತಿಯಾಗಿದ್ದ ಹೆಗ್ಗಳಿಕೆ ಇವರದು.

ಇದೇ ಗ್ರಾಮದ ಭಾಗವತ ಕೆ.ಗುಡ್ಡಯ್ಯನವರು ಪ್ರಾಥಮಿಕ ಶಾಲಾಮಾಸ್ತರಾಗಿದ್ದರೂ ಯಕ್ಷಗಾನ ಕಲಾಕ್ಷೇತ್ರದಲ್ಲಿ ಸಾಕಷ್ಟು ಸಾಧನೆ ಮಾಡಿರುವರು. ಸಿದ್ಧಲಿಂಗಪ್ಪ ಅವರ ಬಳಿ ಶಿಷ್ಯವೃತ್ತಿ ಮಾಡಿ ಯಕ್ಷಗಾನ, ಕಂದಮಟ್ಟು, ಪಾತ್ರ ಸಂಭಾಷಣೆ, ಕುಣಿತ, ಮೃದಂಗ, ತಾಳ ಮುಂತಾಗಿ ಕಲಿತು ಶಿವಜಲಂಧರ, ಲವ-ಕುಶ, ದುಶ್ಯಾಸನನ ಕಥೆ ಮುಂತಾದ ಪ್ರಸಂಗಗಳನ್ನು ನಡೆಸಿಕೊಡುತ್ತಿದ್ದ ಇವರು, ಅದರೊಂದಿಗೆ ಶಶಿರೇಖಾ ಪರಿಣಯ, ಕಲಾವತಿ ಕಲ್ಯಾಣ, ಮನ್ಮಥವಿಜಯ, ದೇವಿಮಹಾತ್ಮೆ, ಸತ್ಯಚಿತ್ರಕೇತು, ಸೀತಾ ಪರಿತ್ಯಾಗ ಮುಂತಾದ ೧೫೦ಕ್ಕೂ ಹೆಚ್ಚು ಪ್ರಯೋಗಗಳನ್ನು ಮಾಡಿದ್ದಾರೆ. ಇವರೂ ಕೂಡ ರಾಜ್ಯಮಟ್ಟದ ಸಮ್ಮೇಳನ, ರಂಗೋತ್ಸವ, ಜಿಲ್ಲಾ ಉತ್ಸವ, ಕಾರ್ಯಾಗಾರಗಳಲ್ಲಿ ಪ್ರದರ್ಶನ ನೀಡಿದ್ದಾರೆ. ಲಕ್ಷ್ಮಣಯ್ಯನವರೂ ಕೂಡ ಇದೇ ಊರಿನವರಾಗಿದ್ದು, ಅಮರಕೋಶದ ಪಂಡಿತರಾಗಿದ್ದವರು. ಆಗಿನ ಕಾಲಕ್ಕೆ ಕೂಲಿಮಠ ನಡೆಸುತ್ತಲೇ ಯಕ್ಷಗಾನ ಭಾಗವಂತಿಕೆ ಮಾಡುತ್ತಿದ್ದುದು ಇವರ ಮೇಲೆ ಪ್ರಭಾವ ಬೀರಿತು. ಪ್ರಾರಂಭದಲ್ಲಿ ಬಾಲನಟ, ಸ್ತ್ರೀಪಾತ್ರ ಮಾಡುತ್ತಿದ್ದು, ನಂತರ ಪ್ರಧಾನಪಾತ್ರ ನಿರ್ವಹಿಸಿದರು. ಬೆಂಗಳೂರು ಆಕಾಶವಾಣಿ, ದೂರದರ್ಶನದಲ್ಲಿ ಯಕ್ಷಗಾನ ಕಲಾಪ್ರದರ್ಶನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಗುರುಶಿಷ್ಯ ಪರಂಪರೆ ಯೋಜನೆಯಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದಲ್ಲದೇ ಅನೇಕ ಪ್ರಮುಖ ಸಂಸ್ಥೆಗಳಲ್ಲಿ ಪ್ರದರ್ಶನ ನೀಡಿದ್ದಾರೆ.

ತಿಪಟೂರು ತಾಲೂಕಿನ ಮಡೇನೂರು ಬಳಿಯ ಅಂಬಿಕಾನಗರ ನಿವಾಸಿಯಾದ ಬೋರಪ್ಪನವರು ಬೆಂಗಳೂರು ಆಕಾಶವಾಣಿ, ದೂರದರ್ಶನಗಳಲ್ಲಿ ಕಲಾಪ್ರದರ್ಶನ ನೀಡಿದ್ದು ತಮ್ಮ ೧೧ನೇ ವಯಸ್ಸಿನಲ್ಲೇ ರಂಗ ಪ್ರವೇಶಿಸಿದರು. ವಿಭಿನ್ನವಾದ ಅಭಿನಯ ಚಾತುರ್ಯ, ನವರಸ ಭಾವಗಳನ್ನು ಸಹಜಾಭಿವ್ಯಕ್ತಗೊಳಿಸುವಲ್ಲಿ ಸಿದ್ಧಹಸ್ತರು. ದೇಶದುದ್ದಗಲಕ್ಕೂ ಗಣ್ಯಾತೀಗಣ್ಯರ ಸಮ್ಮುಖದಲ್ಲಿ ಇವರು ಯಕ್ಷಗಾನ ಪ್ರದರ್ಶಿಸಿದ್ದಾರೆ. ಡಾ.ಹೆಚ್.ಎಲ್.ನಾಗೇಗೌಡ, ಡಾ.ಜೀ.ಶಂ.ಪ, ಡಾ.ಶಿವರಾಮ ಕಾರಂತ, ಡಾ.ಪಿ.ಆರ್.ತಿಪ್ಪೇಸ್ವಾಮಿ ಮೊದಲಾದವರ ಸಂಪರ್ಕದಲ್ಲಿದ್ದವರು. ಅನೇಕ ಪ್ರಶಸ್ತಿ ಗೌರವಗಳಿಗೆ ಸತ್ಪಾತ್ರರು.

ಗುಬ್ಬಿ ತಾಲೂಕು ಚೇಳೂರು ಗ್ರಾಮದ ಸಿ.ಎನ್.ಮೇಳೇಗೌಡ, ಪಟೇಲಿಕೆ ಜೊತೆಗೆ ಕಲಾಪರಂಪರೆಯೂ ಸೇರಿ, ಪಾತ್ರಗಳಿಗೆ, ಮರೆಯಲಾಗದಂತಹ ಜೀವ ತುಂಬುವ ಇವರು ಸಮಾಜಸೇವೆ, ಧಾರ್ಮಿಕ, ರಾಜಕೀಯ ಎಲ್ಲದರಲ್ಲೂ ಸಕ್ರಿಯ. ೧೯೬೫ರಿಂದ ೨೦೦೫ರವರೆಗೆ ಸತತವಾಗಿ ಗ್ರಾಮ ಪಂಚಾಯಿತಿ ಸದಸ್ಯರಾಗಿ, ೧೭ ವರ್ಷಕಾಲ ಅಧ್ಯಕ್ಷರಾಗಿ, ಗುಬ್ಬಿ ತಾಲೂಕು ಬೋರ್ಡ್ ಸದಸ್ಯರಾಗಿ, ಉಪಾಧ್ಯಕ್ಷರಾಗಿ, ಜಿಲ್ಲಾ ಕೈಗಾರಿಕಾ ಅಭಿವೃದ್ಧಿ ಸಂಸ್ಥೆಯ ಅಧ್ಯಕ್ಷರಾಗಿ, ಗುಬ್ಬಿಯ ಪಿ.ಎಲ್.ಡಿ ಬ್ಯಾಂಕ್ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದಲ್ಲದೇ, ಚೇಳೂರಿನ ದೃಷ್ಣೇಶ್ವರ ಕಲಾಸಂಘ ನಾಟಕ ಸಭಾ ಹಾಗೂ ನೇತಾಜಿ ಯುವಕ ಸಂಘ, ವಿನಾಯಕ ಮಂಡಳಿ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿರುವರು. ಇವರ ಕುಟುಂಬದವರು ಸ್ವಾತಂತ್ರ್ಯ ಚಳವಳಿ, ಕರ್ನಾಟಕ ಏಕೀಕರಣ, ಗೋಕಾಕ ಚಳವಳಿಗಳಲ್ಲಿ ಭಾಗವಹಿಸಿದ್ದರು. ಕಲಾಭೀಷ್ಮ ಮುಂತಾದ ಬಿರುದು ಸಹಿತ ಅನೇಕ ಗೌರವ ಪ್ರಶಸ್ತಿ ಇವರಿಗೆ ಲಭಿಸಿವೆ. ಇದೇ ತಾಲೂಕು ಚೇಳೂರು ಹೋಬಳಿ ನಲ್ಲೂರು ಗ್ರಾಮದ ನಲ್ಲೂರು ಬೆಟ್ಟಪ್ಪ, ಮೂರು ತಲೆಮಾರಿನಿಂದ ಈ ಕಲೆಯನ್ನು ಬೆಳೆಸಿಕೊಂಡು ಬರುತ್ತಿದ್ದು, ಅನೇಕ ಶಿಷ್ಯರನ್ನು ಹೊಂದಿದ್ದಾರೆ. ೨೦೦೬ರಲ್ಲಿ ಜಾನಪದ ಅಕಾಡೆಮಿಯು ಇವರಿಗೆ ಪ್ರಶಸ್ತಿ ನೀಡಿದೆ. ಯಕ್ಷಗಾನದೊಂದಿಗೆ ರತಿಕಲ್ಯಾಣ, ಪಾಂಡುವಿಜಯ, ಅಂಬಿಕಾವಿಜಯ, ಇಂದ್ರಜಿತ್ ಕಾಳಗ, ದ್ರೌಪದಿ ಸ್ವಯಂವರ ಮುಂತಾದವು ಇವರ ಬತ್ತಳಿಕೆಯಲ್ಲಿವೆ.

**ಜಿಲ್ಲೆಯ ಇತರ ಭಾಗವಂತಿಕೆ ಕಲಾವಿದರು:** ಶಿರಾ ನಿವಾಸಿಯಾದ ಭಾಗವತ ತಿಪ್ಪೇಸ್ವಾಮಿ, ಮಧುಗಿರಿ ತಾಲೂಕು ಹಳೆ ಇಟಕಲೋಟಿ ಗ್ರಾಮದ ಭಾಗವತ ಧೂಳೇಗೌಡ, ಭಾಗವತ ದೊಡ್ಡಯ್ಯ, ಗುಬ್ಬಿ ತಾಲೂಕು ಎಣ್ಣೆಕಟ್ಟೆಯ ಭಾಗವತ ಎಣ್ಣೆಕಟ್ಟೆ ನಿಂಗಯ್ಯ, ಸಾತೇನಹಳ್ಳಿಯ ಶ್ರೀರಂಗಯ್ಯ, ಚಿಕ್ಕನಾಯಕನಹಳ್ಳಿ ತಾಲೂಕು ಹಂದನಕೆರೆಯ ಭಾಗವತ ಬಸಪ್ಪ, ಶಿರಾ ತಾಲೂಕು ಕಡವಿಗೆರೆಯ ಪಿ.ತಿಮ್ಮಯ್ಯ, ಮುಷ್ಟರಹಳ್ಳಿಯ ರಂಗಪ್ಪ, ಮಧುಗಿರಿ ತಾಲೂಕು ಬೇಡತ್ತೂರಿನ ಟಿ.ವೆಂಕಟಾಚಲಪತಿ, ಎಮ್ಮೆತಮ್ಮನಹಳ್ಳಿಯ ದೊಡ್ಡಪಾಲಯ್ಯ, ಬೆನಕನಹಳ್ಳಿ ಲಕ್ಷ್ಮೀನರಸಯ್ಯ, ಕೊರಟಗೆರೆ ತಾಲೂಕು ದಾಸಾಲುಕುಂಟೆ ಶಿವರುದ್ರಯ್ಯ, ತಿಪಟೂರು ತಾಲೂಕು ಹಾಲ್ಕುರಿಕೆಯ ಭಾಗವತ ರಾಘವೇಂದ್ರರಾವ್, ಪಾವಗಡ ತಾಲೂಕು ಕನ್ನಮೇಡಿಯ ಕೆ.ಎಲ್.ನಂಜುಂಡಪ್ಪ, ಶಿರಾ ತಾಲೂಕು ಕರಿರಾಮನಹಳ್ಳಿಯ ಭಾಗವತ ಕಣುಮಣ್ಣ, ಗುಬ್ಬಿ ತಾಲೂಕು ಇರಕಸಂದ್ರ ತೋಟದಮನೆ ಭಾಗವತ ಚಂದಪ್ಪ, ಶಾಗದಡು ಗ್ರಾಮದ ಲಕ್ಷ್ಮೀರಾಮೇಗೌಡ ಯಕ್ಷಗಾನ ಭಾಗವಂತಿಕೆಯನ್ನು, ಕಾಲುವೆ ರಂಗಪ್ಪ ಎಂಬ ವೈಷ್ಣವ ಆಚಾರ್ಯರಿಂದ ಶಾಸ್ತ್ರೀಯವಾಗಿ ಕಲಿತು ಪಟೇಲಿಕೆ ಜೊತೆಗೆ

ರಾಮದೇವರ ದೇವಸ್ಥಾನದ ಅರ್ಚಕ ಸೇವೆಯೊಂದಿಗೆ ಕಲಾಸೇವೆ ಮಾಡುವುದು ಇವರ ಕಾಯಕ. ಸುತ್ತಮುತ್ತಲ ಪ್ರದೇಶಗಳಿಗೆ ತಿರುಗಾಟದ ಯಕ್ಷಗಾನ ಭಾಗವತರಾದ ಇವರು ಮೃದಂಗ, ಹಾರ್ಮೋನಿಯಂ, ಕರಪಾಲ ಹಾಡುಗಾರಿಕೆ, ಕೋಲಾಟ, ಜನಪದ ಸಂಗೀತದಲ್ಲಿಯೂ ಪರಿಶ್ರಮಿಸಿದ್ದಾರೆ. ಲವಕುಶ ಕಾಳಗ, ಭಕ್ತ ಸುಧನ್ವನ ಕಾಳಗ, ದುಶ್ಯಾಸನ, ವಿರಾಟಪರ್ವ, ರುಕ್ಮಿಣಿ ಸ್ವಯಂವರ, ಭಕ್ತ ಮಾರ್ಕಂಡೇಯ, ಶಿವ ಜಲಂಧರ, ಐರಾವತ, ಲಂಕಾದಹನ, ದಕ್ಷಯಾಗ ಮುಂತಾದ ಪ್ರಸಂಗಗಳಿಗೆ ಭಾಗವಂತಿಕೆ ಪರಿಣಿತರು. ಜಾನಪದ ಅಕಾಡೆಮಿಯ ಯಕ್ಷಗಾನ ತಜ್ಞರಾಗಿ ಅನೇಕ ಕಡೆ ಭಾಗವಹಿಸಿದ್ದಾರೆ. ಅನೇಕ ಸಾಹಿತ್ಯ ಸಮ್ಮೇಳನ, ಉತ್ಸವಗಳಲ್ಲಿ ಭಾಗವಹಿಸಿರುವ ಇವರಿಗೆ ರಾಜ್ಯೋತ್ಸವ ಪ್ರಶಸ್ತಿ, ಸುವರ್ಣ ಕರ್ನಾಟಕ ಪ್ರಶಸ್ತಿ ಮುಂತಾದ ಗೌರವಗಳು ಸಂದಿವೆ.

ಶಿರಾ ತಾಲೂಕಿನ ಬಂದಕುಂಟೆ ಗೋಪಾಲಯ್ಯ ಯಕ್ಷಗಾನ ಭಾಗವಂತಿಕೆ ಮಾತ್ರವಲ್ಲದೇ ಜನಪದ ಸಂಗೀತ, ಸಾಮಗಾನ, ಕೋಲುಮೇಳಗಳಲ್ಲಿ ಖ್ಯಾತರು. ಜುಂಜರಾಮನಹಳ್ಳಿಯ ಭಾಗವತ ರಾಮಾಂಜನಯ್ಯನವರು ಅಷ್ಟೇ ಖ್ಯಾತರು. ಮಧುಗಿರಿ ತಾಲೂಕು ಗೋಪಗೊಂಡನಹಳ್ಳಿಯ ಜಿ.ಆರ್.ಚಿಕ್ಕಮುದ್ದಯ್ಯ ಗಡಿಪ್ರದೇಶಗಳಲ್ಲಿ ಕಲಾಪ್ರದರ್ಶನ ನೀಡಿದ್ದು,ಇವರಿಗೆ ೧೯೯೧ರಲ್ಲಿ ಜಾನಪದ ಅಕಾಡೆಮಿ ಪ್ರಶಸ್ತಿ ಬಂದಿದೆ. ಚಿಕ್ಕನಾಯಕನಹಳ್ಳಿಯ ಶೆಟ್ಟಿಕೆರೆಯ ಕೊಕ್ಕಟ್ಟೆ ಮರುಳ ಸಿದ್ಧಪ್ಪ, ಅಭಿನಯ ಭಾಗವಂತಿಕೆ ಹಿಮ್ಮೇಳ ಕಲಾವಿದರು. ಶನಿಮಹಾತ್ಮೆಯಲ್ಲಿ ಶನಿಯ ಪಾತ್ರ, ದೇವಿ ಮಹಾತ್ಮೆಯಲ್ಲಿ ರಕ್ತಬೀಜಾಸುರನ ಪಾತ್ರ ಮುಂತಾಗಿ ಪ್ರತಿನಾಯಕನ ಪಾತ್ರದಲ್ಲಿ ಮಾಡುತ್ತಲೇ ಸುಮಾರು ೨೫ ಯಕ್ಷಗಾನ ಪ್ರಸಂಗಗಳನ್ನು ಕಲಿಸುತ್ತಾ, ಪ್ರದರ್ಶಿಸುತ್ತಾ ಬಂದಿದ್ದಾರೆ.

ಪಾವಗಡ ತಾಲೂಕು ದವಡೆಬೆಟ್ಟದ ನಾಗಪ್ಪ ಯಕ್ಷಗಾನ, ಬಯಲು ನಾಟಕ ಭಾಗವತರು. ಸಮಾರು ೧೫೦ಕ್ಕೂ ಹೆಚ್ಚು ನಾಟಕಗಳನ್ನು ನಿರ್ದೇಶಿಸಿದ್ದಾರೆ. ನೀನಾಸಂ, ಸಾಣೆಹಳ್ಳಿ ಶಿವಸಂಚಾರ ನಾಟಕ ತಂಡ ಏರ್ಪಡಿಸಿದ್ದ ಕಮ್ಮಟದಲ್ಲಿ ಭಾಗವಹಿಸಿ ಆಧುನಿಕ ರಂಗಪ್ರಜ್ಞೆ ಬೆಳೆಸಿಕೊಂಡರೂ ಗ್ರಾಮೀಣ ಭಾಗಗಳಲ್ಲಿ ಆರ್ಥಿಕ ಹೊರೆಯಾಗದಂತೆ ಯುವಕರಿಗೆ ಕಲಿಸುವ ಇಚ್ಚೆಯುಳ್ಳವರಾಗಿದ್ದಾರೆ. ಶಿವರಾತ್ರಿ ಹಾಗೂ ಶ್ರಾವಣ ಮಾಸಗಳಲ್ಲಿ ಹಳ್ಳಿಗಳಲ್ಲಿ ರಂಗಸುಗ್ಗಿ ಉಕ್ಕಿ ಬಂದಂತಾಗುವುದರಿಂದ ಇಂತಹ ಕಲಾವಿದರಿಗೆ ಕೊಂಚ ಉಮೇದು ಜಾಸ್ತಿ ಇರುತ್ತದೆ.

ಚಿಕ್ಕನಾಯ್ಕನಹಳ್ಳಿಯ ಸಿ.ಎ.ಕುಮಾರಸ್ವಾಮಿ ವೃತ್ತಿಯಲ್ಲಿ ಶಿಕ್ಷಕರು. ಎಲ್ಲಾ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಜನಪದ ಕಲೆಗಳಾದ ಕೋಲಾಟ, ಸೋಮನಕುಣಿತ, ತತ್ವಪದ, ಕರಡಿವಾದ್ಯ, ಚಿಟ್ಟಿಮೇಳ, ತಮಟೆ, ಜನಪದ ನೃತ್ಯ ಮುಂತಾದವನ್ನು ಕಲಿಸುತ್ತಾರೆ. ಸೋಮನ ಕುಣಿತದ ತರಬೇತಿ ಕೇಂದ್ರ ಸ್ಥಾಪಿಸಿ ತರಬೇತಿ ನೀಡುತ್ತಿದ್ದಾರೆ. ಸ್ವತಃ ಶನಿಪ್ರಭಾವ ಅಥವಾ ರಾಜಾವಿಕ್ರಮ ಬಯಲಾಟದಲ್ಲಿ ಸತತ ೩೦ ವರ್ಷಗಳಿಂದ ಶನಿದೇವರ ಪಾತ್ರ ಮಾಡಿ ದಾಖಲೆ ನಿರ್ಮಿಸಿರುತ್ತಾರೆ. ೧೯೨೩ರಲ್ಲಿ ಕಾಡಶೆಟ್ಟಯ್ಯ ಹಾಗೂ ಕೆ.ಎಲ್.ಲಕ್ಕಶೆಟ್ಟಯ್ಯ ಸ್ಥಾಪಿಸಿದ ಆದಿತ್ಯಾದಿ ನವಗ್ರಹ ಕೃಪಾಪೋಷಕ ಯಕ್ಷಗಾನ ಬಯಲುನಾಟಕ ಸಭಾ ಆರಂಭಿಸಿದ್ದು, ಪ್ರತೀ ವರ್ಷ ಶಿವರಾತ್ರಿಯಲ್ಲಿ ಈ ನಾಟಕ ನಡೆಯುತ್ತಾ ಬಂದಿದ್ದು, ವಜ್ರಮಹೋತ್ಸವ ಆಚರಿಸಿದೆ.

### ಜಾನಪದ ರಂಗಭೂಮಿ

ತುಮಕೂರು ಜಿಲ್ಲೆಯಲ್ಲಿ ಜಾನಪದ ರಂಗಭೂಮಿಯನ್ನು ಮುಖ್ಯವಾಗಿ ಬಯಲಾಟ, ಗೊಂಬೆಯಾಟ ಎಂದು ಎರಡು ಭಾಗಗಳಾಗಿ ವಿಭಜಿಸಬಹುದಾಗಿದೆ. ಬೆಂಗಳೂರು, ಕೋಲಾರ, ಮಂಡ್ಯ, ಮೈಸೂರು, ಹಾಸನ, ಚಿತ್ರದುರ್ಗ ಜಿಲ್ಲೆಗಳಲ್ಲಿ ಕಂಡು ಬರುವ ಮೂಡಲಪಾಯ ಯಕ್ಷಗಾನದ ದಕ್ಷಿಣ ಸಂಪ್ರದಾಯವನ್ನು ಕಾಣಬಹುದಾಗಿದೆ. ಯಾವುದೇ ಹೊರಗಿನ ಪ್ರಭಾವಕ್ಕೂ ಒಳಗಾಗದ ಈ ಕಲೆಯು ಹಳ್ಳಿಗಾಡಿನ ಜನಸಾಮಾನ್ಯರ ಕೈಯಲ್ಲಿ ಮೂಲ ರೂಪದಲ್ಲೇ ಉಳಿದುಕೊಂಡಿದೆ. ಖುಷಿಯಾದಾಗಲೋ ಅಥವ ವರ್ಷಕ್ಕೊಂದು ಬಾರಿ ಯಾವುದೋ ನಿರ್ದಿಷ್ಟ ಸಂದರ್ಭದಲ್ಲಿ ಬಯಲಾಟವನ್ನು ಆಡುವ ರೂಢಿ ಈ ಭಾಗದಲ್ಲಿದೆ. ಹಾಗಾಗಿ ಆಧುನಿಕ ಜಗತ್ತಿನಲ್ಲಿ ತನ್ನ ಮೂಲಸ್ವರೂಪದಲ್ಲೇ ಪ್ರದರ್ಶನಗೊಳ್ಳುತ್ತಾ ತನ್ನ ಉಳಿವಿಗಾಗಿ ಹೋರಾಡುತ್ತಿರುವ ಈ ಕಲೆಯನ್ನು ಉಳಿಸಿ ಬೆಳೆಸುವ ಕೆಲಸ ಆಗಬೇಕಾಗಿದೆ. ಈ ನಿಟ್ಟಿನಲ್ಲಿ ನಿರತರಾಗಿರುವ ಕೆಲವು ಭಾಗವತರುಗಳ ಹೆಸರು ಕೆಳಕಂಡಂತಿವೆ. ಡಿ.ಅಡವೀಶಯ್ಯ-ಮೆಳೆಹಳ್ಳಿ, ಟಿ.ವೆಂಕಟರಾಮಯ್ಯ-ತುಮಕೂರು, ತಿಮ್ಮಪ್ಪಶೆಟ್ಟಿ-

ಸೀತಕಲ್ಲು, ಹನುಮಂತರಾಯಪ್ಪ–ಕೆಸ್ತೂರು, ಟಿ.ಎನ್.ಶ್ರೀನಿವಾಸ–ತುಮಕೂರು, ಕೆ.ಎನ್.ದಾಸಾಚಾರ್–ಮುನಿಯೂರು ಹಾಗೂ ಜನಪದ ಯಕ್ಷಗಾನ ಅಕಾಡೆಮಿ ಪ್ರಶಸ್ತಿ ವಿಜೇತ ತುಮಕೂರಿನ ಧೂತಯ್ಯ ಮುಂತಾದವರು. ಇಂದಿಗೂ ಈ ತಾಲೂಕಿನ ಗ್ರಾಮಾಂತರ ಪ್ರದೇಶಗಳಲ್ಲಿ ತಮ್ಮ ಭಾಗವತಿಕೆ ಮೂಲಕ ಬಯಲಾಟವನ್ನು ಜೀವಂತವಾಗಿರಿಸುವ ಪ್ರಯತ್ನ ಮಾಡುತ್ತಿದ್ದಾರೆ.

**ಯಕ್ಷಗಾನ/ಬಯಲಾಟ:** ಗ್ರಾಮೀಣ ಪ್ರದೇಶದ ಪ್ರಮುಖ ಪ್ರದರ್ಶನ ಕಲೆ. ಮನರಂಜನೆಯನ್ನು ಮುಖ್ಯ ಉದ್ದೇಶವಾಗಿಟ್ಟುಕೊಂಡಂತೆ, ಹೆಚ್ಚಾಗಿ ಪೌರಾಣಿಕ ಕಥಾವಸ್ತುವನ್ನಾಧರಿಸಿ ಮಾಡುವ ಬಯಲಾಟ ಅಥವಾ ದೊಡ್ಡಾಟ ಎನ್ನುವರು. ಇದರಲ್ಲಿ ಬಯಲುಸೀಮೆ ಕಡೆ ಪ್ರಚಲಿತವಿರುವ ಯಕ್ಷಗಾನವನ್ನು ಮೂಡಲಪಾಯ ಯಕ್ಷಗಾನ ಎನ್ನುವರು. ಈ ಜಿಲ್ಲೆಯಲ್ಲಿ ತಿಪಟೂರು, ತುರುವೇಕೆರೆ, ತುಮಕೂರು ಶಿರಾ ಮೊದಲಾದ ತಾಲೂಕುಗಳಲ್ಲಿ ಯಕ್ಷಗಾನ ತಂಡಗಳಿವೆ. ಸಾಹಿತ್ಯ, ಸಂಗೀತ, ನೃತ್ಯ, ವೇಷಭೂಷಣಗಳಿದ್ದು ಭಾಗವತರು ನಡೆಸಿಕೊಡುವರು. ತೆರೆಮರೆಗೆ ಸರಿದಿದ್ದ ಮೂಡಲಪಾಯ ಯಕ್ಷಗಾನವನ್ನು ಮರಳಿ ತರಲು ಅನೇಕ ಪ್ರಯತ್ನಗಳಾಗಿ, ತಿಪಟೂರು ತಾಲೂಕು ಕೊನೆಹಳ್ಳಿಯಲ್ಲಿ ಪಟೇಲ್ ನಾರಸಪ್ಪನವರ ನೇತೃತ್ವದಲ್ಲಿ ಮೂಡಲಪಾಯ ಯಕ್ಷಗಾನ ಮಂಡಲಿ, ಪ್ರಮುಖವಾದುದು. ಸಾಮಾನ್ಯವಾಗಿ ಭಾಗವಂತಿಕೆ ನಡೆಸುವವರೇ ಪ್ರದರ್ಶನಕ್ಕೆ ಬೇಕಾದ ಪರಿಕರಗಳನ್ನು ತಯಾರು ಮಾಡಿಕೊಳ್ಳುತ್ತಾರೆ. ಕಿರೀಟ, ಭುಜಕೀರ್ತಿ, ಮಣಿಹಾರ, ಎದೆಹಾರ, ನಡುಪಟ್ಟಿ, ಕೈಕಟ್ಟು, ಕಾಲಿನಗೆಜ್ಜೆ, ವಿವಿಧ ವರ್ಣಗಳ ಬಟ್ಟೆಗಳು, ಉಡುಗೆ ತೊಡುಗೆಗಳು ಅಲಂಕಾರಿಕ ಒಡವೆಗಳು, ತಾಳ, ಮುಖವೀಣೆ, ಮೃದಂಗ, ಹಾರ್ಮೋನಿಯಂ ಮುಂತಾದ ವಾದ್ಯಗಳನ್ನು ಬಳಸುವರು. ಕರಿಭಂಟನ ಕಾಳಗ ಮೂಡಲಪಾಯ ಯಕ್ಷಗಾನದ ಪ್ರಸಿದ್ಧ ಪ್ರಸಂಗವಾಗಿದೆ.

ಮುನಿಯೂರಿನ ಕ.ನ.ದಾಸಾಚಾರ್ 'ಶ್ರೀ.ರಂಗನಾಥ ಯಕ್ಷಗಾನ ಮಂಡಲಿ' ಸ್ಥಾಪಿಸಿ ಆ ಮೂಲಕ ಯಕ್ಷಗಾನ ಕಲೆಯನ್ನು ಉಳಿಸುವ ಪ್ರಯತ್ನದಲ್ಲಿದ್ದಾರೆ. 'ಕೃಷ್ಣಾರ್ಜುನ ಕಾಳಗ' ಈ ತಂಡದ ಪ್ರಸಿದ್ಧ ದೊಡ್ಡಾಟ, ಆಧುನಿಕ ರಂಗಸಜ್ಜಿಕೆ ಹಾಗೂ ವೇಷಭೂಷಣಗಳ ಆಕರ್ಷಣೆಗೆ ಒಳಗಾಗದೇ ಯಥಾರೀತಿಯಲ್ಲಿ ಉಳಿಯಬೇಕೆಂಬುದು ಇವರ ಮಹದಾಸೆ. ಕನ್ನಡ ವಿಶ್ವವಿದ್ಯಾನಿಲಯ ಒಳಗೊಂಡಂತೆ ಮಧುರೈ ಮುಂತಾದ ವಿಶ್ವವಿದ್ಯಾನಿಲಯಗಳಲ್ಲಿ ತಮ್ಮ ಕಲೆಯನ್ನು ಪ್ರದರ್ಶಿಸಿ, ಸಂವಾದ ನಡೆಸಿದ್ದಾರೆ. ಜಾನಪದಲೋಕ ಪ್ರಶಸ್ತಿ, ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಹಾಗೂ ೨೦೦೮ನೇ ಸಾಲಿನಲ್ಲಿ ಯಕ್ಷಗಾನ ಅಕಾಡೆಮಿ ಗೌರವ ಪ್ರಶಸ್ತಿ ಮುಂತಾದ ಅನೇಕ ಪ್ರಶಸ್ತಿ ಗೌರವ ಪಡೆದಿದ್ದಾರೆ.

**ಗೊಂಬೆಯಾಟ:** ಗೊಂಬೆಯಾಟವು ಪ್ರಪಂಚದಾದ್ಯಂತ ಪ್ರಚಲಿತವಾಗಿರುವ ಒಂದು ಪ್ರಾಚೀನ ಕಲೆ. ಭಾರತದಲ್ಲೂ ವಿಕ್ರಮಾದಿತ್ಯನ ಕಾಲದಲ್ಲೇ ಸೂತ್ರದ ಗೊಂಬೆಯ ಆಟಗಾರರು ಮೊದಲ ಬಾರಿಗೆ 'ಸಿಂಹಾಸನ ಬಂತೇರಿ› ಎಂಬ ನಾಟಕವನ್ನು ರಚಿಸಿ ಪ್ರದರ್ಶಿಸಿದರು. ಸೂತ್ರದ ಬೊಂಬೆಯಾಟದ ಒಂದೆರಡು ತಂಡಗಳನ್ನು ಕಾಣಬಹುದಾಗಿದೆ. ವೀರನಾಯ್ಕನ ಹಳ್ಳಿಯ ಸಿದ್ಧೇಗೌಡ ಎಂಬುವರು ಜನಪದ ಯಕ್ಷಗಾನ ಅಕಾಡೆಮಿ ಪ್ರಶಸ್ತಿ ಪಡೆದ ಕಲಾವಿದರಾಗಿದ್ದಾರೆ.

## ಚಿತ್ರಕಲೆ

ಜಿಲ್ಲೆಯ ಚಿತ್ರಕಲಾ ಪರಂಪರೆ ಬಹಳ ಶ್ರೀಮಂತವಾಗಿದ್ದು, ಅದರಲ್ಲೂ ಭಿತ್ತಿಚಿತ್ರಗಳ ದೃಷ್ಟಿಯಿಂದ ಜಿಲ್ಲೆಗೆ ವಿಶೇಷ ಸ್ಥಾನವಿದ್ದು, ಚಿತ್ರಕಲಾರಂಗದಲ್ಲೂ ಗಣನೀಯ ಕೊಡುಗೆಯನ್ನು ನೀಡಿರುವುದು ಉಲ್ಲೇಖನಾರ್ಹವಾಗಿದ್ದು ವಿವರವನ್ನಿಲ್ಲಿ ನೀಡಲಾಗಿದೆ.

### ಭಿತ್ತಿಚಿತ್ರಗಳು

ತುಮಕೂರು ಜಿಲ್ಲೆಯಲ್ಲಿ ಭಿತ್ತಿಚಿತ್ರಗಳಿಗೆ ವಿಶಿಷ್ಟ ಸ್ಥಾನ ದೊರಕಿದೆ. ಇದು ತನ್ನ ಮಡಿಲಲ್ಲಿ ಅಗಾಧ ಪ್ರಮಾಣದಲ್ಲಿ ಭಿತ್ತಿಚಿತ್ರಗಳನ್ನು ತುಂಬಿಕೊಂಡಿದೆ. ಸೀಬಿಯ ನರಸಿಂಹಸ್ವಾಮಿ, ಶಿರಾದ ರೇವಣಸಿದ್ಧೇಶ್ವರ, ಕೆರೆಗೋಡು ಶಂಕರೇಶ್ವರ, ಗೊಲ್ಲಹಳ್ಳಿಯ ಆಂಜನೇಯಸ್ವಾಮಿ, ಅಮೃತೂರಿನ ಪಟ್ಟಲದಮ್ಮನ ದೇವಾಲಯಗಳಲ್ಲಿ ಸುಮಾರು ೧೯ನೇ ಶತಮಾನದ ಅಂತ್ಯಭಾಗಕ್ಕೆ ಸೇರಿದವೆನ್ನಲಾದ ಶಿವಲೀಲಾ, ದಶಾವತಾರ ಪ್ರಸಂಗ ಮುಂತಾದ ಭಿತ್ತಿಚಿತ್ರಗಳಿವೆ. ಬೆನಕನಕೆರೆಯಲ್ಲಿ ಸುಮಾರು ೧೯೩೦ರಲ್ಲಿ ರಚಿಸಿರಬಹುದೆಂದು ಅಂದಾಜಿಸಲಾದ ಗುಡ್ಡವೊಂದರ ಮೇಲಿರುವ ಚನ್ನಕೇಶವ ದೇವಾಲಯದಲ್ಲಿ

ಅನೇಕ (ಪೌರಾಣಿಕ ದೃಶ್ಯಗಳು) ದಶಾವತಾರ, ರಾಮಾಯಣದ ಭಿತ್ತಿಚಿತ್ರಗಳಿವೆ. ತುಮಕೂರಿನ ಲಕ್ಷ್ಮೀನರಸಿಂಹಸ್ವಾಮಿ ದೇವಾಲಯದ ಚಿತ್ರಿತ ಗೃಹಗಳಲ್ಲಿ ಇಂದಿಗೂ ಒಂದೆರಡು ಶತಮಾನಗಳಷ್ಟು ಹಿಂದಿನ ಚಿತ್ರಕಲೆಯನ್ನು ಕಾಣಬಹುದು. ಅಂತೆಯೇ ಎಡೆಯೂರು ಸಿದ್ಧಲಿಂಗೇಶ್ವರಸ್ವಾಮಿ, ಯಳನಾಡಿನ ಸಿದ್ಧರಾಮೇಶ್ವರ, ಹಾಗೂ ಗುಬ್ಬಿ ಬಳಿಯ ತುಳಸಿಕಟ್ಟೆಗಳಲ್ಲಿ ಹಾಗೂ ಈಗ ಮರೆಯಾಗಿರುವ ಚನ್ನಬಸವೇಶ್ವರ ದೇವಾಲಯದ ಮೇಲ್ಛಾವಣಿಗಳಲ್ಲಿ ಸುಮಾರು ೧೮ನೇ ಶತಮಾನಕ್ಕೆ ಸೇರಿದ ಚಿತ್ರಗಳಿದ್ದವು. ಓಹಿಲೇಶ್ವರ ದೇವಾಲಯದಲ್ಲಿ ಶಿವನ ೨೫ ಲೀಲೆಗಳನ್ನು ಚಿತ್ರಿಸಲಾಗಿತ್ತೆಂದು ಹೇಳಲಾಗುತ್ತದೆ. ಹಿಂದೊಮ್ಮೆ ಭಿತ್ತಿಚಿತ್ರಗಳು ಇತ್ತೆಂದು ಹೇಳಿದರೂ ಕುರುಹುಗಳು ಕಂಡುಬರುವುದಿಲ್ಲ. ಎಡೆಯೂರಿನಲ್ಲಿ ಇತ್ತೀಚೆಗೆ ಆಧುನಿಕ ರೀತಿಯಲ್ಲಿ ಭಿತ್ತಿಚಿತ್ರಗಳನ್ನು ಬರೆಯಿಸಿದ್ದಾರೆ. ಇಡೀ ಕರ್ನಾಟಕದಲ್ಲಿ ಇಷ್ಟೊಂದು ಪ್ರಮಾಣದಲ್ಲಿ ಭಿತ್ತಿಚಿತ್ರಗಳು ಯಾವೊಂದು ಜಿಲ್ಲೆಯಲ್ಲಿಯೂ ಇಲ್ಲ. ಇವುಗಳಲ್ಲಿ ಸೀಬಿಯ ಚಿತ್ರಕಲೆ ಸಾಕಷ್ಟು ಪ್ರಸಿದ್ಧವಾಗಿದ್ದು ಈಗಾಗಲೇ ಪುರಾತತ್ವ ಇಲಾಖೆಯ ಗಮನ ಸೆಳೆದಿದೆ.

ತುಮಕೂರು–ಮಧುಗಿರಿ ರಸ್ತೆಯಲ್ಲಿರುವ ಮಿಂಚುಕಲ್ಲು ಗೊಲ್ಲಹಳ್ಳಿಯಲ್ಲಿ ಶ್ರೀರಾಮಪಟ್ಟಾಭಿಷೇಕ, ದಶಾವತಾರ ಇತ್ಯಾದಿ ಚಿತ್ರಗಳಿವೆ. ಶಿವ ಹಾಗೂ ಆತನ ವಾಹನ ನಂದಿ ಮುಂತಾದವುಗಳಲ್ಲಿರುವ ರೇಖೆಗಳು ಪ್ರಬುದ್ಧವಾಗಿದ್ದು ಮೈಸೂರಿನ ಶಿಷ್ಟ ಸಂಪ್ರದಾಯಕ್ಕೆ ಸೇರುವಂತಹದು. ಅಂತೆಯೇ ಶಿರಾದ ರೇವಣಸಿದ್ಧೇಶ್ವರ ದೇವಾಲಯದಲ್ಲಿ ೧೮೫೦ರಲ್ಲಿ ನಿರ್ಮಿಸಲಾದ ಭಿತ್ತಿಚಿತ್ರಗಳು ಇರುವ ಸಂಗತಿ ಈಗ ಎರಡು ವರ್ಷ ಹಿಂದೆಯಷ್ಟೇ ತಿಳಿದಿದ್ದು. ಈ ಚಿತ್ರಗಳನ್ನು ಲಲಿತ ಕಲಾ ಅಕಾಡೆಮಿ ನಕಲು ಮಾಡಿರಿಸಿಕೊಂಡಿದೆ. ಇದು ರಾಮಾಯಣ ಹಾಗೂ ಮಹಾಭಾರತದ ಚಿತ್ರಗಳಾಗಿವೆ. ಇಲ್ಲಿಯ ಶೈಲಿಯಾಗಲೀ, ಬಣ್ಣವಾಗಲೀ ವಿಜಯನಗರ ಶೈಲಿಗೆ ಸೇರಿದ ಹಿರಿಯೂರಿನ ಚಿತ್ರವನ್ನು ಬಹಳವಾಗಿ ಹೋಲುವುದರಿಂದ ಇದನ್ನು ವಿಜಯನಗರೋತ್ತರ ಕಾಲಕ್ಕೆ ಸೇರಿಸಬಹುದು. ಇಲ್ಲಿ ಗೋಪಿಕಾ ವಸ್ತ್ರಾಪಹರಣ ಹಾಗೂ ಇನ್ನೂ ಕೆಲವು ಚಿತ್ರಗಳಿದ್ದು ಅವುಗಳ ಮೇಲೆ ಸುಣ್ಣ ಹೊಡೆಯಲಾಗಿದೆ. ಇಲ್ಲಿಯ ಐದಾರು ಇಂಚಿನ ಚಿಕ್ಕ ಚಿಕ್ಕ ಆಕೃತಿಗಳ ರಚನೆಯಲ್ಲಿ ಕಾಣುವ ಹಲವಾರು ಬಣ್ಣಗಳ ಬಳಕೆ, ದೇಹ ಹಾಗೂ ವಸ್ತ್ರಾಭರಣಗಳ ಮೇಲೆ ನೆರಳು ಬೆಳಕು ತರಲು ಮಾಡಿರುವ ಪ್ರಯತ್ನ ಅಭ್ಯಾಸ ಯೋಗ್ಯವಾಗಿದೆ.

ಇವುಗಳಿಗಿಂತ ಅ.ಲ.ನರಸಿಂಹನ್ ಅವರು ಅಧ್ಯಯನದ ಪರಿವೀಕ್ಷಣೆಯಲ್ಲಿ ದಪ್ಪ ಸುಣ್ಣ ಬಳಿದು ವಿಕೃತಿಗೊಂಡಿದ್ದನ್ನು ಕೆರೆದು ತೆಗೆದು ಚಿತ್ರಗಳನ್ನು ಗುರುತಿಸಿದಾಗ ಕಂಡು ಬಂದ ಎರಡು ಭಿತ್ತಿಚಿತ್ರಗಳು ಹಲವಾರು ದೃಷ್ಟಿಯಿಂದ ಮೌಲ್ಯವುಳ್ಳದ್ದಾಗಿದೆ. ತುಮಕೂರಿನ ಬಳಪದ ಕಾರ್ಖಾನೆ ಬಳಿ ಜೀರ್ಣವಾದ ಹಳೆಯ ಕಟ್ಟಡವೊಂದರಲ್ಲಿ ಈ ಚಿತ್ರಗಳಿವೆ. ಈ ರೀತಿ ಮನೆಯಲ್ಲಿ ಚಿತ್ರ ಇರುವುದು ದಕ್ಷಿಣ ಭಾರತದಲ್ಲಿ ತೀರಾ ಅಪರೂಪ. ಹಳೆಯ ಮೈಸೂರು ಪ್ರದೇಶದಲ್ಲಿ ಇಲ್ಲವೇ ಇಲ್ಲವೆನ್ನಬಹುದು.

ತುಮಕೂರಿನ ಕೆರೆಯ ಬಳಿಯ ನಲ್ಲಪ್ಪನ ತೋಟದಲ್ಲಿರುವ ಹೊಯ್ಸಳರ ಕಾಲದ ೧೨೬೯ರ ವೀರಗಲ್ಲು ಶಾಸನ ಚೋಳರೊಂದಿಗೆ ನಡೆದ ಯುದ್ಧಕ್ಕೆ ಸಾಕ್ಷಿಯಾಗಿದೆ. ಇದಕ್ಕೆ ಹೊಂದಿಕೊಂಡಂತೆಯೇ ಅಪೂರ್ವವಾದ "ಚಿತ್ರಿತ ಗೃಹ"ವಿದ್ದು ಇದು ಕರಣಿಕ ನಲ್ಲಪ್ಪನ ತಂದೆ ೧೭೮೪ರಲ್ಲಿ ತೀರಿಕೊಂಡಾಗ ತಾಯಿ(೧೮ನೇ ಶತಮಾನದ ಅಂತ್ಯ)ಇಲ್ಲೇ ಸಹಗಮನ ಮಾಡಿದಳೆಂದೂ ತಿಳಿದುಬರುತ್ತದೆ. (ಈ ಸಹಗಮನಕ್ಕೆ ಸಂಬಂಧಿಸಿದಂತೆ ಚಿತ್ರಮಾಲಿಕೆಯೊಂದನ್ನು ಶೀಬಿ ದೇವಾಲಯದಲ್ಲಿ ಚಿತ್ರಿಸಲಾಗಿದೆ. ಮೇಲ್ನೋಟಕ್ಕೆ ಅದೊಂದು ಸಾಧಾರಣ ರಚನೆ. ಈಗ ಮುಂಬಾಗಿಲಿನಿಂದ ಪ್ರವೇಶಿಸಲು ಸಾಧ್ಯವೇ ಇಲ್ಲ. ಒಡೆದು ಹೋದ ಪಕ್ಕದ ಬಾಗಿಲಿನಿಂದ ಬರಬೇಕು. ಇಡೀ ಮನೆಯಲ್ಲಿ ಮುಂದಿನ ಕೈಸಾಲೆ ಒಳಗೆ ಮೂರು ಕೋಣೆಗಳು. ಇದು ದೇವಾಲಯಕ್ಕಿಂತ ಪೂಜಾಗೃಹ ಆಗಿರುವ ಸಾಧ್ಯತೆಯೇ ಹೆಚ್ಚು. ದೇವಾಲಯದ ದ್ವಾರಪಾಲಕರು ಹಾಗೂ ಮತ್ತಿತರ ವಿಗ್ರಹಗಳು, ಕಂಬಗಳು ಅಲ್ಲಲ್ಲಿ ಚದುರಿ ಬಿದ್ದಿವೆ. ಹಳೆಯ ಲಕ್ಷ್ಮೀನರಸಿಂಹ ವಿಗ್ರಹದೊಂದಿಗೆ ಹೊಸದಾಗಿ ಇನ್ನೊಂದು ಮಾಡಿಸಿ ತಾತ್ಕಾಲಿಕವಾಗಿ ಗುಡಿಯೊಂದನ್ನು ಕಟ್ಟಲಾಗಿದೆ. ಚಿತ್ರಿತ ಗೃಹದಿಂದ ಎಡಗಡೆಗೆ ಸುಮಾರು ೨೦ ಅಡಿಗಳ ಅಂತರದಲ್ಲಿ ಈ ದೇವಾಲಯವಿದೆ. ಇದನ್ನು ಛತ್ರದ ಲಕ್ಷ್ಮೀನರಸಿಂಹ ದೇವಾಲಯ ಎಂದು ಕರೆಯುವರು. ನಂತರ ಸುಮಾರಾದ ಬಯಲು. ಅದರಾಚೆಗೆ ಇಂದು ವಾಸಿಸುತ್ತಿರುವ ನಲ್ಲಪ್ಪನ ವಂಶಜ ಶ್ರೀಗಣಪತಯ್ಯ ಅವರ ವಾಸದ ಗೃಹ. ಚಿತ್ರಿತ ಗೃಹದ ಬಲಬದಿಗೆ ಒಂದು ಸಣ್ಣಕೊಳ ಹಾಗೂ ಮಂಟಪಗಳಿವೆ. ದೇವಾಲಯದಿಂದ ಪ್ರತ್ಯೇಕವಾಗಿಯೇ

ಚಿತ್ರಿತ ಗೃಹ ಇದ್ದರೂ, ಅದರದೇ ಆದ ಒಂದು ಅಂಗವೆಂದು ಹೇಳಬಹುದು. ಈ ಇಡೀ ಆವರಣ ತುಮಕೂರು ಕೆರೆಗೆ ಹತ್ತಿರದಲ್ಲಿಯೇ ಇರುವ ಮುಖ್ಯ ರಸ್ತೆಯಿಂದ ಸಾಕಷ್ಟು ಒಳಗಿದ್ದು, ಪಕ್ಕನೆ ಗಮನಕ್ಕೆ ಬಾರದಂತಿದೆ.

ನಾನಾ ಭಾವ ಭಂಗಿಗಳಲ್ಲಿ ತಪಸ್ಸು ಮಾಡುತ್ತಿರುವ ಋಷಿಗಳು, ಕೊಳಗಳು, ಶೃಂಗೇರಿಯ ಶಾರದಾಂಬೆ ಮುಂತಾದ ದೇವತೆಗಳು. ರಥ, ಮೆರವಣಿಗೆ, ಸ್ತ್ರೀ–ಪುರುಷರು, ನದಿ, ಅದರಲ್ಲಿ ಮೀನು, ಆಮೆ ಮೊದಲಾದ ಜಲಚರಗಳು, ಕಾಮಧೇನು ಮುಂತಾದ ಚಿತ್ರಿತ ವಸ್ತುಗಳನ್ನು ಇಲ್ಲಿ ಗುರುತಿಸಬಹುದು. ದೂಲಗಳಲ್ಲಿ ಮುಸ್ಲಿಂ ಶೈಲಿಯ ಹೂ–ಬಳ್ಳಿ ಅಲಂಕರಣಗಳು ಇವೆ. 'ಇ' ಕೋಣೆಗೆ ಬರಲು ಯಾವುದೇ ಬಾಗಿಲುಗಳು ಇಲ್ಲ. "ಇ" ಕೋಣೆಯಲ್ಲಿ ಸುಮಾರು ಎರಡಡಿ ಎತ್ತರದ ಒಂದೂವರೆ ಅಡಿ ಅಗಲದ ಸಣ್ಣ ಕಿಂಡಿಯಿದೆ. ಇದರ ಮೂಲಕವಷ್ಟೇ 'ಎಫ್' ಕೋಣೆಗೆ ಬರಬೇಕು. ಋಷಿಗಳ ಯೋಗಾಭ್ಯಾಸದ ದೃಶ್ಯಗಳು ದೇವತೆಗಳು ಇರುವುದರಿಂದ ಈ ಕೋಣೆಯನ್ನು 'ಯೋಗದ ಕೋಣೆ'ಯೆಂದು ಸ್ಥಳೀಯರು ಕರೆಯುತ್ತಾರೆ. ಅದೇ ಕಾರಣದಿಂದ ಮೇಲ್ಭಾವಣಿಯ ಚಿತ್ರಗಳಿಗೆ ಸುಣ್ಣ ಹೊಡೆಯದೆ ಉಳಿಸಿದ್ದಾರೆ. 'ಡಿ' ಕೋಣೆಯ ಎಡಗೋಡೆ ಪೂರ್ತಿ ಬಿದ್ದು ಹೋಗಿದ್ದು, ಈಗ ಈ ಗೃಹಕ್ಕೆ ಇದೇ ಅಧಿಕೃತ ಬಾಗಿಲಾಗಿದೆಯಲ್ಲದೆ 'ಎಫ್'ಕೋಣೆಯ ಮೂಲೆಯ ಗೋಡೆ ಬಿದ್ದು ಹೋಗಿದ್ದು ಅಲ್ಲಿಗೆ ಇದರ ಮೂಲಕವೇ ಪ್ರವೇಶಿಸಬಹುದು. 'ಬಿ' ಕೋಣೆಯಲ್ಲಿಯೂ ಪೂರ್ತಿ ಸುಣ್ಣ ಹೊಡೆದಿದ್ದರೂ ಕೆಲವು ಭಾಗಗಳನ್ನು ನೀರಿನಿಂದ ತೊಳೆದಾಗ ಒಳಗೆ ಶೃಂಗಾರ ಪರವಾದ ಮಿಥುನ ಚಿತ್ರಗಳು ಕಂಡುಬಂದವು. ಮೊಳೆ ಹೊಡೆದು, ಕೆರೆದು ಇಡೀ ಚಿತ್ರಗಳನ್ನು ವಿರೂಪಗೊಳಿಸಿದ್ದಾರೆ. ಮತ್ತು ಅದೇ ಕಾರಣಕ್ಕಾಗಿ ಸುಣ್ಣ ಹೊಡೆಯಲಾಗಿದೆ. ಪ್ರಿಯಕರನ ವಸ್ತ್ರಭರಣಗಳನ್ನು ಮುಂದಿರಿಸಿ ಚಿಂತಾಕ್ರಾಂತವಾಗಿ ಕುಳಿತಿರುವ ಸ್ತ್ರೀ, ವೀಣೆಯಂತಹ ವಾದ್ಯ ನುಡಿಸುತ್ತಿರುವ ಸಂಗೀತಗಾರ್ತಿ ಇತ್ಯಾದಿಗಳಲ್ಲಿರುವ ರೂಪಸಾದೃಶ್ಯ, ರೇಖಾ ವೈಖರಿ ಸುಂದರವಾಗಿದೆ. ಮಿಥುನಗಳು ಶೀಬಿಯಲ್ಲಿ ಇರುವಂತೆ ಅಸಡ್ಡಾಳವಾಗಿರದೆ ಪ್ರಮಾಣಬದ್ಧವಾಗಿ, ಮಿನಿಯೇಚರ್ ಚಿತ್ರಗಳನ್ನೂ ನೆನಪಿಸುವಂತಿದೆ. ಉಳಿದಂತೆ 'ಡಿ' ಕೋಣೆಯ ಮೇಲ್ಭಾವಣಿಯಲ್ಲಿ ಋಷಿಗಳು, ದೇವತೆಗಳು, ರಥ, ಗಿಡ–ಮರಗಳು ಇತ್ಯಾದಿಗಳನ್ನು ಮಸಕುಮಸಕಾಗಿ ಕಾಣಬಹುದು. ಬಣ್ಣಗಳನ್ನು ಕಳೆದುಕೊಂಡಿದ್ದರೂ ಹೊರ ರೇಖೆಗಳು ಸ್ಫುಟವಾಗಿ ಕಾಣುತ್ತದೆ. ಉಳಿದ ಎಲ್ಲಾ ಕೋಣೆಗಳಲ್ಲೂ ನೆಲಮಟ್ಟದಿಂದ ಹಿಡಿದು ಗೋಡೆಯ ಮೇಲೆಲ್ಲಾ ಒಳಛಾವಣಿಯೂ ಸೇರಿದಂತೆ ಚಿತ್ರಗಳಿವೆ. ಆದರೆ ಸುಣ್ಣವನ್ನು ದಪ್ಪನಾಗಿ ಹೊಡೆದಿರುವುದರಿಂದ ಒಳಗೆ ಏನಿದೆಯೆಂದು ತಿಳಿಯುವುದಿಲ್ಲ. ಅಲ್ಲದೆ ಕೈಗೆ ಸಿಗುವಷ್ಟು ಭಾಗಗಳಲ್ಲಿ ಗಾರೆಯನ್ನು ಮಕ್ಕಳು ಆಟಕ್ಕಾಗಿ ಕಿತ್ತು ಹಾಕಿದ್ದು ಒಳಗೆ ಯಾವ ಅಪೂರ್ವ ಚಿತ್ರಗಳಿದ್ದವೆಂಬುದು ತಿಳಿಯದಂತಾಗಿದೆ.

ಶೈಲಿಯಲ್ಲಿ ಸುಮಾರು ೧೯ನೇ ಶತಮಾನದ ಆದಿಭಾಗದ ಚಿತ್ರಗಳನ್ನು ಹೋಲುತ್ತಿದ್ದು ಒಂದಕ್ಕಿಂತ ಹೆಚ್ಚಿನ ಕಲಾವಿದರು ಕೆಲಸ ಮಾಡಿದಂತಿದೆ. ಹತ್ತಿರದ ಶೀಬಿ ದೇವಾಲಯದ ಚಿತ್ರಕಲೆಯೂ ಇದೇ ಕಾಲದ ಸಂಪ್ರದಾಯದ್ದಾದರೂ ಇದಕ್ಕಿಂತ ತುಂಬಾ ಭಿನ್ನವಾಗಿದೆ. ವ್ಯಕ್ತಿಗಳ ರೂಪ ಆಕಾರಗಳಲ್ಲಿ ಸ್ಪಷ್ಟವಾದ ವ್ಯತ್ಯಾಸ ಕಂಡುಬರುತ್ತದೆ. ರೇಖೆಗಳು ಸ್ಥಳೀಯವಾಗಿದ್ದು, ಹೆಚ್ಚು ಕಷ್ಟಪಡದೆ ಸುಲಭವಾಗಿ ರಚಿಸಿರುವುದು ಗೊತ್ತಾಗುತ್ತದೆ. ಕೆಲವು ಕಡೆ ಸ್ವಲ್ಪ ಅಲಕ್ಷ್ಯದಿಂದಲೇ ರಚಿಸಿದಂತೆ ಕಂಡು ಬರುತ್ತದೆ. ಆದರೆ ಶೃಂಗಾರ ಪರ ಚಿತ್ರಗಳಲ್ಲಿ ಪ್ರಬುದ್ಧತೆಯನ್ನು ಕಾಣಬಹುದು. ಕೈ–ಕಾಲುಗಳ ಬೆರಳುಗಳಲ್ಲಿ ಕೈ–ತೋಳುಗಳ ರೇಖೆಯ ಬಾಗುವಿಕೆಯಲ್ಲಿ ಕಣ್ಣು–ತುಟಿಗಳ ರಚನೆಯಲ್ಲಿ ಈ ವ್ಯತ್ಯಾಸವನ್ನು ಗುರುತಿಸಬಹುದು. ಅಲ್ಲದೆ ಈ ಚಿತ್ರಗಳನ್ನು ಕೆಂಪು ಹಿನ್ನೆಲೆಯಲ್ಲಿ ಒಂದೊಂದು ಅಡಿಯ ಚೌಕಗಳಲ್ಲಿ ರಚಿಸಲಾಗಿದೆ. ಯೋಗದ ಕೋಣೆಯಲ್ಲಿ ತೆಳುನೀಲಿಯ ಹಿನ್ನೆಲೆಯಲ್ಲಿ ಚಿತ್ರ ರಚಿತವಾಗಿದೆ. ಕೆಂಪು, ನೀಲಿ, ಹಳದಿ, ಕಡುನೀಲಿ ಬಣ್ಣಗಳನ್ನು ಬಳಸಿರುವರಾದರೂ ಬಹುತೇಕ ಎಲ್ಲ ಬಣ್ಣಗಳೂ ಮಾಸಿಹೋಗಿವೆ. ಹೂ–ಬಳ್ಳಿಗಳಲ್ಲಿ ಹಸಿರುವರ್ಣ ಬಳಸಿರುವುದು ಕಂಡುಬರುತ್ತದೆ. ಚಿನ್ನದ ಲೇಪನ ಇದ್ದಂತೆ ತೋರುವುದಿಲ್ಲ. ನೀರಿನಿಂದ ತೊಯ್ದರೂ ಚಿತ್ರಕಲೆ ಅಳಿಸಿಹೋಗದ ಕಾರಣ, (ಮೂಲತಃ ಜಲವರ್ಣದ ಚಿತ್ರಗಳೇ ಆದರೂ) ರಚಿಸಿದ ನಂತರ, ಮೇಣ ಅಥವಾ ಅಂತಹದೇ ಬೇರೆ ಯಾವುದೋ ಲೇಪನ ಮಾಡಿರಬೇಕು. ಇಂತಹ ಅತ್ಯಪೂರ್ವವಾದ ಚಿತ್ರಿತ ಗೃಹಕ್ಕೆ ಮಳೆಯ ನೀರು ಸೋರಿ ಅರ್ಧ ನಾಶವಾಗಿದ್ದರೆ ಸ್ವತಃ ಲೇಪಿತಗಾರೆಯೇ ಈ ನೂರ ಐವತ್ತು ವರ್ಷಗಳಲ್ಲಿ ತನ್ನ ಬಲ ಕಳೆದುಕೊಂಡು ಬೀಳತೊಡಗಿದೆ. (ಲೇಖಕರು ಈ ಲೇಖನ ಬರೆದಾಗ ಆ ಚಿತ್ರಗಳಿದ್ದುವು. ಈಗ ಎಲ್ಲಾ ನಾಶವಾಗಿ ಲಕ್ಷ್ಮೀನರಸಿಂಹಸ್ವಾಮಿಯ ಸಣ್ಣ ದೇವಸ್ಥಾನ ಮಾತ್ರವಿದ್ದು, ಹಾಳಾದ ಕಲ್ಲು ಕಂಬದ ಅವಶೇಷಗಳಿವೆ).

ಇಷ್ಟೇ ಕುತೂಹಲಕರವಾದ ಇನ್ನೊಂದು ಪ್ರದೇಶವೆಂದರೆ ತಿಪಟೂರಿನ ಬಳಿಯ ಕೆರೆಗೋಡು. ಇಲ್ಲಿ ವಾಸ್ತುಶಿಲ್ಪ, ಕಲೆಗಳಿಗೆ ಪ್ರೋತ್ಸಾಹ ದೊರೆತಂತೆ, ಚಿತ್ರಕಲೆಗೂ ದೊರೆತಿದೆ. ಊರಿಗೆ ಅಭಿಮುಖವಾಗಿ ಕೆರೆಯ ದಂಡೆಗೇ ಹತ್ತಿದಂತೆ ಇರುವ ಶಂಕರೇಶ್ವರ ದೇವಾಲಯ ಸಾಕಷ್ಟು ಹಳೆಯದು. ದೇವಾಲಯದ ದೀಪಮಾಲೆಯ ಸ್ತಂಭದಲ್ಲಿ ಕ್ರಿ.ಶ.೧೬೦೮ರ ಶಾಸನವಿರುವುದರಿಂದ ದೇವಾಲಯ ಅದಕ್ಕಿಂತ ಹಿಂದಿನದಾಗುತ್ತದೆ. ಚಿಕ್ಕದಾದ ಗರ್ಭಗುಡಿಗೆ ನವರಂಗವಿದೆ. ಅದಕ್ಕಿಂತ ಮುಂದಿರುವ ಮುಖಮಂಟಪದಲ್ಲಿ ಚಿತ್ರಕಲೆಯಿದೆ. ಮುಖಮಂಟಪವನ್ನು ಮೂರು ಭಾಗಗಳಾಗಿ ವಿಭಜಿಸಿದ್ದು ಸುಮಾರು ಆರು ಚದರಡಿಯ ಮೂರು ಅಂಕಣಗಳಿವೆ. ಮೇಲ್ಚಾವಣಿಯ ಒಳಗಡೆಯಲ್ಲಿರುವ ಚಿತ್ರಕಲೆಯ ಅಂಕಣಗಳನ್ನು ಕಂಬಗಳ ಮೇಲಿರುವ ದೂಲ ಮರದ ತೊಲೆಗಳು ಬೇರ್ಪಡಿಸುತ್ತದೆಯಲ್ಲದೆ ಅವುಗಳ ಮೇಲೂ ಚಿತ್ರಗಳನ್ನು ಬಿಡಿಸಲಾಗಿದೆ. ಇದೇ ಮುಖಮಂಟಪದ ಮೇಲಿರುವ ಇನ್ನೊಂದು ಶಾಸನದಲ್ಲಿ ಕ್ರಿ.ಶ.೧೭೭೦ರಲ್ಲಿ ರಂಗಾಪುರದ ರಂಗಸ್ವಾಮಿಯ ದೇವಸ್ಥಾನದ ಪರದೇಶಿ ಅಯ್ಯನವರು, ಮೂವತ್ತೈದು ವರುಷ ಫಲಾಹಾರದ ವ್ರತ ಆಚರಿಸಿ, ಭಿಕ್ಷಾವೃತ್ತಿ ಮಾಡಿ ಬಂದ ಹಣದಿಂದ ಈ ದೇವಾಲಯದ ಉಪ್ಪರಿಗೆ ಬಾಗಿಲು, ಮಹಾನವಮಿ ಮಂಟಪಗಳನ್ನು ಮಾಡಿಸಿದಂತೆ ತಿಳಿದುಬರುತ್ತದೆ. ಪ್ರಾಯಶಃ ಇಲ್ಲಿರುವ ಚಿತ್ರಕಲೆಯೂ ಅದೇ ಕಾಲಕ್ಕೇ ಸೇರಿದ್ದಿರಬೇಕು. ಈ ದೇವಾಲಯ ಕಟ್ಟುವಾಗ ಊಳಿಗ ಮಾಡಿದ ಅರಳೀಕೆರೆಯ ಮುದ್ದನನ್ನು ಆ ಜನ ಮರೆತಿಲ್ಲ. ಕಂಬವೊಂದರ ಮೇಲೆ ಕೈಮುಗಿದು ನಿಂತ ಮುದ್ದನ ಪ್ರತಿಮೆಯನ್ನು ಕೆತ್ತಿ ಸ್ಮರಿಸಿದ್ದಾರೆ. ಅಂತೆಯೇ ತಿಪಟೂರು ತಾಲೂಕಿನ ಕೆರೆಗೋಡು ಶಂಕರೇಶ್ವರ ದೇವಾಲಯದಲ್ಲಿನ ಕೈಸಾಲೆ, ಮೇಲ್ಚಾವಣಿ, ಭಿತ್ತಿಗಳಲ್ಲಿ ತ್ರಿಪುರ ಸಂಹಾರ, ರಾಮಾಯಣ ಹಾಗೂ ಶಿವನ ಪಂಚವಿಂಶತಿ ಲೀಲೆಗಳ ಭಿತ್ತಿಚಿತ್ರಗಳೊಂದಿಗೆ ಅದನ್ನು ರಚಿಸಿದವನ ಹೆಸರು, ಕೊಟ್ಟ ಮಜೂರಿ, ಕಲಾವಿದನ ಭಾವಚಿತ್ರ, ಚಿತ್ರ ಬರೆಯಿಸಿದ ದಾನಿಯ ಹೆಸರು, ವಿವರ ಮೊದಲ ಬಾರಿಗೆ ದೊರೆತಿರುವುದು ಚಿತ್ರಕಲಾ ಇತಿಹಾಸದಲ್ಲಿ ಮಹತ್ವದ್ದೆನಿಸಿದೆ.

ಶಿವನ ದೇವಾಲಯವಾದುದರಿಂದ ಶಿವನಿಗೇ ಇಲ್ಲಿ ಪ್ರಾಧಾನ್ಯತೆ ಕೊಡಲಾಗಿದೆ. ಮೂರು ಅಂಕಣಗಳಲ್ಲಿ ಒಂದನ್ನು ಪೂರ್ತಿಯಾಗಿ ತ್ರಿಪುರ ಸಂಹಾರದ ಕಥೆಗೆ ಮೀಸಲಿರಿಸಲಾಗಿದೆ. ದೂಲದಲ್ಲಿ ತ್ರಿಪುರಾಧಿಪತಿಗಳಾದ ತಾರಕಾಕ್ಷ, ವಿದ್ಯುನ್ಮಾಲಿ, ಕಮಲಾಕ್ಷರ, ತಪಸ್ಸು, ಊರು, ಮನೆಗಳು, ಕೊಳಗಳು, ರಥ, ತ್ರಿಮೂರ್ತಿಗಳು, ಅವರ ವಾಸಸ್ಥಾನ, ಅರಳಿಯ ಕಟ್ಟೆ ಇತ್ಯಾದಿಗಳಲ್ಲದೆ ನಗ್ನ ಜೈನಮುನಿಯನ್ನು ಜನ ಪೂಜಿಸುತ್ತಿರುವುದು. ಅದರಿಂದ ತ್ರಿಪುರದಲ್ಲಿ ಶಿವನಿಂದನೆಯಾಗಿ ಅಧರ್ಮ ನೆಲೆಸುವುದು. ಇತ್ಯಾದಿಗಳನ್ನು ಕಲಾವಿದ ಬಿಡಿಸಿದ್ದಾನೆ. ಮಧ್ಯದಲ್ಲಿರುವ ತ್ರಿಪುರ ಸಂಹಾರ ದೃಶ್ಯದಲ್ಲಿ ಜಗತ್ತಿನಲ್ಲಿರುವ ಚರಾಚರ ವಸ್ತುಗಳನ್ನು ಕಲೆಹಾಕಿ ವಿಶ್ವಕರ್ಮ ರಚಿಸಿದ ರಥದಲ್ಲಿ ಶಿವ ಕುಳಿತು ಯುದ್ಧ ಮಾಡುತ್ತಿದ್ದಾನೆ. ಆಕಾಶ, ಭೂಮಿ, ಪಾತಾಳ, ಮೇಘ–ಮಂದಾರ ಇತ್ಯಾದಿ ಪರ್ವತಗಳು, ವಾಸುಕಿ, ಆದಿಶೇಷ ಮುಂತಾದ ವ್ಯಕ್ತಿ–ವಸ್ತುಗಳೊಂದಿಗೆ ಪುರಾಣ, ನ್ಯಾಯ, ವೇದ ಮೀಮಾಂಸೆಗಳೂ ರಥದ ಒಂದೊಂದು ಅಂಗಗಳು. ಸೂರ್ಯ, ಚಂದ್ರ ಜೊತೆಗೆ ನಿಮಿಷ, ಕ್ಷಣ, ಮಂತ್ರ ಮುಂತಾದ ಅಮೂರ್ತವಸ್ತುಗಳೂ ಇಲ್ಲಿ ಮೂರ್ತಗೊಂಡಿವೆ. ಕಲಾಕಾರನಿಗೆ ಒಟ್ಟು ಕಥೆಯನ್ನು (ಘಟನೆಯನ್ನು) ಒಂದೇ ದೃಶ್ಯದಲ್ಲಿ ತೋರಿಸಬೇಕಾಗಿದೆ. ಅದಕ್ಕಾಗಿ ಆತ ನಿರೂಪಣಾ ಕ್ರಮವನ್ನು ಅನುಸರಿಸುತ್ತಾನೆ. ಸಾಂಕೇತಿಕತೆಯನ್ನು ತರುತ್ತಾನೆ. ಒಂದು ಕಡೆ ರಾಕ್ಷಸರು ತುಂಡುತುಂಡಾಗಿ ಬಿದ್ದಂತೆ ಚಿತ್ರಿಸುತ್ತಾನೆ. ಅಂತೆಯೇ ಇಡೀ ರಥವನ್ನು ವಿಷ್ಣು, ಬಸವನ ರೂಪದಲ್ಲಿ ಎತ್ತಿದ್ದನ್ನು ತೋರಿಸಲು ರಥದ ಕೆಳಗೆ ಸಣ್ಣದಾಗಿ ಬಸವನ ಚಿತ್ರ ರಚಿಸಿದ್ದಾನೆ. ಹೀಗೆ ಇಡೀ ಪುರಾಣದ ಹಲವಾರು ಪುಟಗಳ ಕಥೆಯನ್ನು ಒಂದೇ ಚಿತ್ರ ಸಮೂಹದಲ್ಲಿ ಚಿತ್ರಕಾರ ತೋರಿಸಿದ್ದಾನೆ. ಒಂದರೊಡನೊಂದನ್ನು ಹೋಲಿಸಿಕೊಂಡು ನೋಡಿದಾಗ ಮನಸ್ಸಿನ ಭಿತ್ತಿಯಲ್ಲಿ ಕಥಾಚಿತ್ರ ಹಾಗೂ ಅದರ ತತ್ವ ಗಟ್ಟಿಯಾಗಿ ಉಳಿಯುತ್ತದೆ.

ಉಳಿದ ಎರಡು ಅಂಕಣಗಳಲ್ಲಿ, ಶಿವನ ೨೫ ಲೀಲೆಗಳು ಹಾಗೂ ವಿಷ್ಣುವಿನ ದಶಾವತಾರಗಳು ಚಿತ್ರಿತವಾಗಿದ್ದು, ಇವೆರಡು ಅಂಕಣಗಳ ದೂಲಗಳಲ್ಲಿ ರಾಮಾಯಣದ ದೃಶ್ಯಗಳಿವೆ. ಇವು ಸೀಬಿಯ ಭಿತ್ತಿಚಿತ್ರಗಳಿಗಿಂತ ಮುಂಚಿನ ಅಂದರೆ ೧೭೮೦ರ ರಚನೆಯಾಗಿರಬೇಕೆಂದು ಹೇಳಲಾಗಿದೆ. ಎಡೆಯೂರು, ಸುಪ್ರಸಿದ್ಧ ಯಾತ್ರಾಕ್ಷೇತ್ರವಾಗಿದ್ದು, ಸಿದ್ಧಲಿಂಗೇಶ್ವರ ದೇವಾಲಯದಲ್ಲಿ ಸಾಕಷ್ಟು ಭಿತ್ತಿಚಿತ್ರಗಳಿದ್ದವೆಂದು ತಿಳಿದುಬರುತ್ತದೆ. ಹಿಂದಿನ ಜಿಲ್ಲಾ ಗ್ಯಾಸೆಟಿಯರ್ಗಳಲ್ಲಿ ಈ ಬಗ್ಗೆ ಉಲ್ಲೇಖ ಇದೆ. ರಂಗಮಂಟಪದಲ್ಲಿದ್ದ ಚಿತ್ರಗಳ ಬಗ್ಗೆ ತಿಳಿಸಿದ್ದರೂ ಈಗ ಅಷ್ಟಾಗಿ ಕಂಡುಬರುವುದಿಲ್ಲ. ಆದರೆ ರೇಖಾಚಿತ್ರ ದೋಪಾದಿಯಲ್ಲಿರುವುದನ್ನು ಬಿಟ್ಟರೆ ವೈಭವದ ಚಿತ್ರಕಲೆ ಕಂಡು ಬರುವುದಿಲ್ಲ. ಹೊಳೆಯ ಪಕ್ಕದಲ್ಲಿರುವುದರಿಂದ ಪ್ರವಾಹವೊಂದರಲ್ಲಿ ನಾಶವಾಗಿರಬಹುದೆಂದು ಹೇಳಲಾಗುತ್ತದೆ. ಕುಣಿಗಲ್ ತಾಲೂಕಿನ ಹೋಬಳಿ ಕೇಂದ್ರ ಅಮೃತೂರಿನ ಗ್ರಾಮದೇವತೆ ಲಕ್ಷ್ಮೀ ಪಟ್ಟಲದಮ್ಮನ ದೇವಾಲಯದಲ್ಲಿ ಸುಮಾರು ೧೯ನೇ ಶತಮಾನದ ಅಂತ್ಯಕ್ಕೆ ಸೇರಿದ ಶಿವಲೀಲಾ ಪ್ರಸಂಗ, ದಶಾವತಾರಗಳು, ಸ್ತ್ರೀಯರ ಮೆರವಣಿಗೆ, ನೃತ್ಯಗಾರ್ತಿಯರ ಕೆಲವೇ ಭಿತ್ತಿಚಿತ್ರಗಳು ಶಿಥಿಲಗೊಂಡಿವೆ.

ನೊಣವಿನಕೆರೆಯ ಚಿತ್ರಗಾರ ಸುಬ್ಬಣ್ಣನು ಮಾಡಿದ ಚಿತ್ರಗೆಲಸ, ಮಾಡಿದ್ದರ ಮಜೂರಿ ಅರವತ್ತು ರೂಪಾಯಿ, ಆ ನಾಗವಳ್ಳಿಯ ಶಂಕರೇಗೌಡರು ಮಾಡಿಸಿದ ಭಕ್ತಿ" ಎಂಬ ಬರಹವು ತ್ರಿಪುರ ಸಂಹಾರದ ದೃಶ್ಯವಿರುವ ಚಿತ್ರದ ಬಳಿಯಿದೆ. ಇನ್ನೊಂದು ಕಡೆ ಪತಿ–ಪತ್ನಿಯರು ಕೈಮುಗಿದು ನಿಂತಿದ್ದು ಅವರನ್ನು ಶಂಕರಲಿಂಗೇಗೌಡ ಹಾಗೂ ಅವನ ಧರ್ಮಪತ್ನಿ ತಿಮ್ಮಾಜಮ್ಮ ಎಂದು ತಿಳಿಸಿದೆಯಲ್ಲದೆ ಆ ದೇವಾಲಯಕ್ಕೆ ಅರ್ಪಿಸಿದ ಭಕ್ತಿ ಎಂದಿದೆ. ರಾಮಾಯಣದ ಚಿತ್ರಸಮೂಹದಲ್ಲಿ ಅದನ್ನು ಬರೆಸಿದಾತನ ಹೆಸರಿದ್ದು ದುರದೃಷ್ಟದಿಂದ ಪೂರ್ತಿ ಸುಣ್ಣ ಹೊಡೆದಿರುವುದರಿಂದ ಮುಚ್ಚಿಹೋಗಿದೆ. ಇದರಿಂದ ಈ ಮೂರು ಅಂಕಣಗಳನ್ನು ಬರೆಸಿದವರೂ ಬೇರೆ ಬೇರೆ ಎಂದಾಗುತ್ತದೆ. ಹಾಗೆಯೇ ತ್ರಿಪುರ ಸಂಹಾರ ಉಳಿದ ಎರಡು ಅಂಕಣಗಳಿಗಿಂತ ಶೈಲಿಯಲ್ಲಿ ಭಿನ್ನವಾಗಿರುವುದರಿಂದ ಬರೆದವರೂ ಬೇರೆಯೇ ಇರಬೇಕು.

ಚಿತ್ರಗಳ ಶೈಲಿ ಮತ್ತು ಬಣ್ಣಗಳ ಬಗ್ಗೆ ಕೆಲವು ಮಾತುಗಳನ್ನು ಹೇಳಬಹುದು. ಇಡೀ ತುಮಕೂರು ಜಿಲ್ಲೆಗೆ ಸೀಬಿ ಕೇಂದ್ರಸ್ಥಾನ ಎನ್ನಬಹುದು. ಚಿತ್ರದುರ್ಗ ಜಿಲ್ಲೆಯ ಹಿರಿಯೂರಿನ ತೇರುಮಲ್ಲೇಶ್ವರ ದೇವಾಲಯದ ಭಿತ್ತಿಚಿತ್ರಗಳು, ಹಂಪೆಯ ಚಿತ್ರಗಳನ್ನು ಹೋಲುವುದರಿಂದ ವಿಜಯನಗರ ಕಾಲದ ಅಂತ್ಯದ ವೇಳೆಗೆ ಬರುತ್ತದೆ. ಇದೇ ಸಾಲಿಗೆ ಶಿರಾದ ಚಿತ್ರಗಳೂ ಸೇರುತ್ತವೆ. ಆದರೆ ಸೀಬಿ ಇದಕ್ಕೂ ಮುಂದುವರಿದು ಮೈಸೂರು ಅರಸರ ಕಾಲದ ಸಂಪ್ರದಾಯಕ್ಕೆ ಹತ್ತಿರವಾಗುವುದಲ್ಲದೆ ಹೈದರಾಲಿಖಾನ್ ಮಾಡಿಸಿದ್ದರಿಂದ ಮೊಘಲ್ ಶೈಲಿಯೂ ಸೇರಿಕೊಳ್ಳುತ್ತದೆ. ಕೆರೆಗೋಡಿಯ ಚಿತ್ರಗಳಲ್ಲಿಯೂ ಇದೇ ಶೈಲಿ ಕಾಣಬಹುದು. ಶಾಸನಗಳಲ್ಲಿರುವಂತೆ ಮಂಟಪ ಕಟ್ಟಿದ ಕಾಲಕ್ಕೆ ಅಂದರೆ ಕ್ರಿ.ಶ.೧೭೭೦ಕ್ಕೆ ಅಥವಾ ೧೭೮೫ರ ವೇಳೆಗೆ ಚಿತ್ರಗಳನ್ನು ರಚಿಸಿದ್ದಿರಬೇಕು. ಎಂದರೆ ಸೀಬಿಯ ಕಾಲಕ್ಕೂ ಸುಮಾರು ೨೦–೨೫ ವರ್ಷ ಹಿಂದಕ್ಕಾಗುತ್ತದೆ. ಮಾನವಾಕೃತಿಗಳು ಸ್ಥಬ್ದವಾಗಿ ನಿಂತಂತಿದೆ. ಮುಖ ಮುಂದಕ್ಕೆ ತಿರುಗಿದ್ದರೂ ३/४ ಭಾಗವಾಗಲಿ, ಅಥವಾ ಒಂದು ಪಕ್ಕಕ್ಕೆ ತಿರುಗಿರಲಿ, ಕೆಳಗಿನ ದೇಹದ ಭಾಗ ಪೂರ್ತಿಯಾಗಿ ಪಕ್ಕಕ್ಕೇ ತಿರುಗಿದೆ. ರೇಖಾಪ್ರಧಾನವಾದ ಆಕೃತಿಗಳು, ಹಿತಮಿತವಾದ ಆಭರಣಗಳ ಅಲಂಕರಣ, ವೇಷಭೂಷಣಗಳಲ್ಲೂ ಅಷ್ಟೇ ಸರಳತೆ ಕಾಣಬಹುದು. ಸ್ತ್ರೀಯರೆಲ್ಲ ಚೋಲಿ ಧರಿಸಿ ಸೀರೆ ಉಟ್ಟಿದ್ದಾರೆ. ಪುರುಷರು ಅವರ ವರ್ಣಕ್ಕೆ (ಜಾತಿ) ತಕ್ಕಂತೆ ಉಡುಪು ಧರಿಸಿದ್ದಾರೆ. ಪಂಚೆಯುಟ್ಟ, ಜುಟ್ಟು ಜನಿವಾರವುಳ್ಳ ಬ್ರಾಹ್ಮಣ, ಯುದ್ಧದ ಪೋಷಾಕು ಧರಿಸಿರುವ ಕ್ಷತ್ರಿಯರನ್ನು ರಚಿಸುವಾಗ ಕಲಾವಿದ ಬಣ್ಣದಲ್ಲೂ ವ್ಯತ್ಯಾಸ ತೋರಿಸಿದ್ದಾನೆ. ದೇವಾದಿದೇವತೆಗಳು ಆಗಮಶಾಸ್ತ್ರದಲ್ಲಿರುವಂತೆ ಆಯುಧ ಮತ್ತು ವಾಹನಾರೂಢರಾಗಿದ್ದಾರೆ. ಕೆಲವೇ ಹೊರರೇಖೆಗಳಿಂದ ರಚಿಸಿರುವ ಪ್ರಾಣಿಗಳಲ್ಲಿ ಇರುವ ಸೂಕ್ಷ್ಮ ವ್ಯತ್ಯಾಸವನ್ನು ಗುರುತಿಸಿದ್ದಾನೆ. ದೂರದ ಕೆಳಭಾಗದಲ್ಲಿ ಮುಸ್ಲಿಂ ಶೈಲಿಯಲ್ಲಿ ಹೂ–ಬಳ್ಳಿಗಳನ್ನು ಬಿಡಿಸಿದ್ದಾನೆ.

ಬೇರೆ ಕಡೆಗಳಲ್ಲಿ ಇರುವಂತೆಯೇ ಭಿತ್ತಿಯ ತಯಾರಿಕೆ ಇಲ್ಲಿಯೂ ಆಗಿದೆ. ಕಲ್ಲು ಚಪ್ಪಡಿಯ ಮೇಲೆ ಸುಮಾರು ೧/೨ ಅಂಗುಲ ಗಾರೆಯನ್ನು ಬಳಿದು ಅದರ ಮೇಲೆ ಸುಣ್ಣದಿಂದ ಕರಣಿ ಮಾಡಿ ನುಣುಪಾದ ಕಲ್ಲಿನಿಂದ ಸಮತಳವಾಗಿ ಉಜ್ಜಿ ಸ್ವಲ್ಪ ಹಸಿಯಿರುವಾಗಲೇ ಪೂರ್ತಿಯಾಗಿ ಕೆಂಪುಬಣ್ಣ ಬಳಿದು ಅದರ ಮೇಲೆ ಕಪ್ಪುಬಣ್ಣದಲ್ಲಿ ರೇಖಾಚಿತ್ರವನ್ನು ರಚಿಸಿದ್ದಾರೆ. ಉಳಿದ ಪ್ರದೇಶಗಳಿಗೆ ನೀಲಿ, ಹಸಿರು, ಬಿಳಿ, ಹಳದಿ ಬಣ್ಣಗಳನ್ನು ತುಂಬಿಸಿದ್ದಾರೆ. ಕೆಂಪುಬಣ್ಣ ಬೆರೆಸುವಲ್ಲಿ ಹಿನ್ನೆಲೆಗೆ ಬಳಿದಿರುವ ಕೆಂಪನ್ನೇ ಉಳಿಸಿಕೊಂಡಿದ್ದಾನೆ. ಒಟ್ಟು ಈ ಆರು ಬಣ್ಣಗಳನ್ನೇ ಮಿಶ್ರ ಮಾಡಿಯೂ ಬಳಸಿರುವುದನ್ನು ಕಾಣಬಹುದು. ಮೇಲಿನ ಕಲ್ಲು ಚಪ್ಪಡಿಯ ಮಧ್ಯದಲ್ಲಿ ಬಿರುಕು ಬಿಡದಂತೆ ಮೇಲ್ಗಡೆಗೆ ಗಾರೆಯ ಲೇಪನ ಮಾಡಿರುವುದರಿಂದ ಮಳೆಗೆ ಸೋರುವುದಿಲ್ಲವಾಗಿ ಸ್ಪುಟವಾಗಿ ಉಳಿದಿದೆ. ಚಿತ್ರಗಳೆಲ್ಲಾ ಮೇಲ್ಛಾವಣಿಯ ಒಳಭಾಗದಲ್ಲಿ ಇರುವುದರಿಂದ ಚಿತ್ರಗಾರ ಮಲಗಿಕೊಂಡೇ ರಚಿಸಿರಬೇಕು. ಹೀಗಿರುವುದರಿಂದ ಇಡೀ ಚಿತ್ರಿತ ಆವರಣದಲ್ಲಿ ಸಣ್ಣಪುಟ್ಟ ತುಣುಕುಗಳು ಬಿದ್ದಿರುವುದು ಬಿಟ್ಟರೆ, ಮನುಷ್ಯರ ಕೈಗೆ ಎಟುಕದಂತೆ ಏಳೆಂಟು ಅಡಿ ಎತ್ತರದಲ್ಲಿ ಇರುವುದರಿಂದ ಸುರಕ್ಷಿತವಾಗಿ ಉಳಿದಿದೆ.

### ಚಿತ್ರಕಲಾವಿದರು

ಜಿಲ್ಲೆಯಲ್ಲಿ ಅನೇಕ ಕಡೆ ಇತಿಹಾಸಪೂರ್ವ ಕಾಲದ ನೆಲೆಗಳು ಇವೆಯಾದರೂ ಗುಹೆ ಅಥವಾ ಶಿಲಾಶ್ರಯಗಳಲ್ಲಾಗಲೀ ಚಿತ್ರಕಲೆ ಕಂಡುಬರುವುದಿಲ್ಲ. ಆದರೆ ಕೆಲವು ಪಾತ್ರೆ(ಮಣ್ಣಿನ) ಅವಶೇಷಗಳ ಮೇಲೆ ಕಂಡುಬರುತ್ತದೆ. ಜಿಲ್ಲೆಯಲ್ಲಿ ಚಿತ್ರಕಲಾ ಪ್ರತಿಭೆಗಳು ಅಪಾರವಾಗಿದ್ದು, ಪ್ರಾಚೀನ ವರ್ಣ ಚಿತ್ರಕಾರ, ಶಿಲ್ಪಿ ಎನಿಸಿದ್ದ ನಂಜುಂಡ ಶಿವಯೋಗಿಯು ಹಿಂದೆ ಮತಕಪುರ ಅಥವಾ ಮತಕೂರು ಎಂಬ ಹೆಸರನ್ನು ಹೊಂದಿದ್ದ ಮೈದಾಳದಲ್ಲಿ ಉಪಾಧ್ಯಾಯ ವೃತ್ತಿಯಲ್ಲಿದ್ದರೂ ಚಿತ್ರಕಲೆ

ಮತ್ತು ಸಾಹಿತ್ಯದಲ್ಲಿ ನಿಷ್ಣಾತರಾಗಿದ್ದರು. ಭಾವಕ್ಕೆ ಜೀವ ತುಂಬುವಂತೆ ಚಿತ್ರರಚನೆ ಮಾಡುತ್ತಿದ್ದರು. ಇವರು ರಚಿಸಿದ ಅನೇಕ ವರ್ಣಚಿತ್ರಗಳು ಹಲವಾರು ಶ್ರೀಮಂತರ ಮನೆಗಳಲ್ಲಿ ರಾರಾಜಿಸುತ್ತಿದ್ದವೆಂದು ಹೇಳುತ್ತಾರೆ. ಪಾವಗಡ ತಾಲೂಕಿನ ಸೂಲನಾಯಕನಹಳ್ಳಿಯ ಎಸ್.ಸುಬ್ಬರಾವ್ ಚಿತ್ರರಚನೆ ಹಾಗೂ ನಾಟಕಗಳಿಗೆ ರಂಗಮಂಟಪ ಪರದೆಗಳಿಗೆ ಅಗತ್ಯವಿರುವ ದೃಶ್ಯ-ಚಿತ್ರಾವಳಿ ಬರೆಯುವಲ್ಲಿ ಪ್ರಸಿದ್ಧರಾಗಿದ್ದರು.

ಅಂತಾರಾಷ್ಟ್ರೀಯ ಖ್ಯಾತಿ ಗಳಿಸಿ ಜಗತ್ಪ್ರಸಿದ್ಧರೆನಿಸಿದ ಮಧುಗಿರಿ ರಾಮು (೧೯೧೯) ಮಧುಗಿರಿಯವರು. ಶ್ರೀ ಚಾಮರಾಜೇಂದ್ರ ಕಲಾಶಾಲೆಯಲ್ಲಿ ಗುರುಗಳಾದ ರಾಮದಾಸಪ್ಪ ಮತ್ತು ಪಾವಂಜೆ ಟಂಕಸಾಲೆ ಸುಬ್ರಹ್ಮಣ್ಯರಾಜು ಅವರಲ್ಲಿ ಚಿತ್ರಕಲೆಯನ್ನು ಅಭ್ಯಾಸಮಾಡಿ ಸಾವಿರಾರು ಚಿತ್ರಗಳನ್ನು ರಚಿಸಿದ ಖ್ಯಾತಿ ಇವರದು. ದೇಶವಿದೇಶಗಳಲ್ಲಿ, ರಾಷ್ಟ್ರಪತಿ ಭವನದಲ್ಲಿ ಇವರ ಚಿತ್ರಗಳು ವಿರಾಜಮಾನವಾಗಿವೆ. ಶ್ರೀ ಗುರುರಾಘವೇಂದ್ರ ಸ್ವಾಮಿಯವರ ಬೃಹತ್ ವರ್ಣಚಿತ್ರ ಮಂತ್ರಾಲಯ ಸೇರಿ ಮನೆಮಾತಾಗಿದೆ. ಶ್ರೀ ಸಿದ್ಧಗಂಗಾ ಕ್ಷೇತ್ರದಲ್ಲಿರುವ ಶ್ರೀ.ಶ್ರೀ.ಶ್ರೀ. ಶಿವಕುಮಾರ ಸ್ವಾಮಿಗಳ ಚಿತ್ರ, ಮೈಸೂರು ಅರಮನೆಯ ಮುಖ್ಯದ್ವಾರದಲ್ಲಿ ಬಿಡಿಸಿರುವ ಭಿತ್ತಿಚಿತ್ರಗಳೇ ಮುಂತಾದವು ಇವರ ಕುಂಚದಲ್ಲಿ ಅರಳಿದ ಕಲಾಕುಸುಮಗಳಾಗಿವೆ. ರಾಜ್ಯ ಲಲಿತಕಲಾ ಅಕಾಡೆಮಿ ಪ್ರಶಸ್ತಿ ಹಾಗೂ ೧೯೮೧ರಲ್ಲಿ ಕರ್ನಾಟಕ ರಾಜ್ಯದ ರಾಜ್ಯೋತ್ಸವ ಪ್ರಶಸ್ತಿ ನೀಡಿ ಇವರನ್ನು ಗೌರವಿಸಲಾಗಿದೆ.

ಶಿರಾ ತಾಲೂಕು ಚಿಕ್ಕನಹಳ್ಳಿಯ ಮೂಲಶಿಕ್ಷಣ ತರಬೇತಿ ಕೇಂದ್ರಕ್ಕೆ ಚಿತ್ರಕಲಾಗುರುಗಳಾಗಿ ಬಂದ ಪಿ.ಎಸ್. ಗ್ರಾಮಪುರೋಹಿತ್ ಜಿಲ್ಲೆಯ ಚಿತ್ರಕಲಾ ಕ್ಷೇತ್ರದಲ್ಲಿ ಹೊಸ ಅಲೆಯನ್ನು ಎಬ್ಬಿಸಿದರು. ಏಕವ್ಯಕ್ತಿ ಕಲಾಪ್ರದರ್ಶನ ಏರ್ಪಡಿಸುವ ಮೂಲಕ ಸಾರ್ವಜನಿಕರು ಚಿತ್ರಕಲೆಯೆಡೆಗೆ ಆಕರ್ಷಿತವಾಗುವಂತೆ ಮಾಡಿದರು. ವಿಶ್ವೇಶ್ವರಯ್ಯನವರ ತೈಲಚಿತ್ರ, ಗುರುರಾಘವೇಂದ್ರರ ಜೀವನ ಚರಿತ್ರೆ ಆಧರಿಸಿ ರಚಿಸಿದ ೨೧ ಚಿತ್ರಗಳು, ಮಂತ್ರಾಲಯ ದರ್ಶನವೆಂಬ ಬೃಹತ್ ತೈಲಚಿತ್ರ, ಶಿರಾದ ದುರ್ಗಾ ದೇವಸ್ಥಾನದಲ್ಲಿ ಮಾಡಿರುವ ವರ್ಣಚಿತ್ರಾಲಂಕಾರ ಮುಂತಾದವು ಪ್ರಮುಖ ಚಿತ್ರಗಳಾಗಿದ್ದು, ಇವರ ಅನೇಕ ಚಿತ್ರಗಳು ಬಹುಮಾನ ಗಳಿಸಿವೆ. ೨೦೦೫ರಲ್ಲಿ ಕರ್ನಾಟಕ ಲಲಿತ ಕಲಾ ಅಕಾಡೆಮಿಯ ಗೌರವ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ಶಿಕ್ಷಣ ಇಲಾಖೆಯಿಂದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪಡೆದಿರುವರು.

ಜನಪದ ಕಲಾವಿದರಾಗಿ ವೀರಭದ್ರ ನೃತ್ಯ, ನಂದಿಕುಣಿತ, ಕರಗ ನೃತ್ಯಗಳಲ್ಲಿ ನಿಪುಣರಾದ ಕೀರ್ತನಕಾರರು ಎಂದೇ ಗುರುತಿಸಲ್ಪಟ್ಟ ಹೆಚ್.ಎಸ್.ನೀಲಕಂಠಯ್ಯನವರು ಮೂಲತಃ ವರ್ಣ ಹಾಗೂ ತೈಲಚಿತ್ರ ರಚನಕಾರರಾಗಿದ್ದು, ತುಮಕೂರಿನ ಸಿದ್ಧಗಂಗಾ ಚಿತ್ರಕಲಾ ಶಾಲೆಯಲ್ಲಿ ಮುಖ್ಯಸ್ಥರಾಗಿದ್ದವರು. ಮಧುಗಿರಿ ತಾಲೂಕಿನ ಹೊಸಕೆರೆಯ ಹೆಚ್. ಎನ್.ರಾಜಕುಮಾರ್, ಬಾಲ್ಯದಿಂದಲೂ ಚಿತ್ರಕಲೆಯತ್ತ ಆಕರ್ಷಿತರಾಗಿ ಅದನ್ನೇ ತಮ್ಮ ಕಾರ್ಯಕ್ಷೇತ್ರವಾಗಿಸಿಕೊಂಡು ರೇಖಾಚಿತ್ರ, ಪ್ರಕೃತಿ ಚಿತ್ರಗಳನ್ನು ಭಾವಪೂರ್ಣವಾಗಿ ರಚಿಸಿರುವ ಕಲಾವಿದರು. ಪದವಿ ವಿದ್ಯಾರ್ಥಿಯಾಗಿದ್ದಾಗಲೇ ತಾವು ರಚಿಸಿದ ನೂರಾರು ಚಿತ್ರಗಳ ಪ್ರದರ್ಶನ ಏರ್ಪಡಿಸಿ ಮೆಚ್ಚುಗೆ ಪಡೆದಿದ್ದರು.

ಶಿಲ್ಪ, ಚಿತ್ರಕಲೆಗಳೆರಡರಲ್ಲೂ ಪ್ರಾವೀಣ್ಯತೆ ಪಡೆದಿದ್ದ ಗೂಳೂರಿನ ಭಾಸ್ಕರಾಚಾರ್ ವರ್ಣಶಿಲ್ಪಿ ಎಂದೇ ಹೆಸರು ಗಳಿಸಿದ್ದರು. ೧೯೫೪ರಿಂದ ೨೦ ವರ್ಷಗಳವರೆಗೂ ಅಖಂಡವಾಗಿ ಗೂಳೂರು ಗಣಪತಿಯ ಬೃಹತ್ ಮೂರ್ತಿಯನ್ನು ಶಿಲ್ಪಿಸುತ್ತಿದ್ದರು. ೧೯೭೬ರಲ್ಲಿ ಶಿಡ್ಲಘಟ್ಟದಲ್ಲಿ ವೀಣಾಗಣಪತಿಯನ್ನು ನಿರ್ಮಿಸಿದರು. ೧೯೭೮ರಲ್ಲಿ ಗೌರಿ-ಗಣಪತಿ ಹಬ್ಬದ ಪ್ರಯುಕ್ತ, ಇವರ ವೀಣೆ ನುಡಿಸುತ್ತಿರುವ ಗಣಪತಿಯ ವರ್ಣಚಿತ್ರ ಪ್ರಜಾಮತ ಪತ್ರಿಕೆಯ ಮುಖಪುಟವಾಗಿ ಪ್ರಕಟಿಸಲ್ಪಟ್ಟಿದ್ದು ರಾಜ್ಯಾದ್ಯಂತ ಮೆಚ್ಚುಗೆ ಪಡೆದಿತ್ತು.

ಖಾದಿಭಂಡಾರದ ಜಗದೀಶ್ ಎಂದೇ ಪ್ರಖ್ಯಾತರಾದ ತುಮಕೂರಿನ ಟಿ.ಎನ್.ಜಗದೀಶ್ ಸಿದ್ದಿವಿನಾಯಕ ಮೂರ್ತಿ ನಿರ್ಮಾಣದಲ್ಲಿ ಸಿದ್ಧಹಸ್ತರು. ತುಮಕೂರಿನಲ್ಲಿ ಪ್ರತೀವರ್ಷ ಅದ್ದೂರಿಯಾಗಿ ಕೂರಿಸುವ ಗಣಪತಿ ಉತ್ಸವದಲ್ಲಿ ಕಥಾನಕ ಚಿತ್ರ ಮೂಡಿಸುವ ಕಲಾತ್ಮಕತೆ ಇವರದಾಗಿತ್ತು. ವರ್ಣಶಿಲ್ಪಿ ಎಂದೇ ಹೆಸರು ಮಾಡಿದ ವಿ.ಎಸ್.ರಾವ್, ತುಮಕೂರು ಜಿಲ್ಲೆಯ ಆಂಧ್ರ ಗಡಿ ಪ್ರದೇಶವಾದ ವಿರುಪಸಂದ್ರದಲ್ಲಿ ೧೯೩೩ರಲ್ಲಿ ಜನಿಸಿದರು. ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎಸ್ಸಿ., ಪದವಿ ಶಿಕ್ಷಣ ಮುಗಿಸಿ, ಶಾಂತಿನಿಕೇತನದಲ್ಲಿ ಕಲಾಶಿಕ್ಷಣ ಪಡೆದು ಚೀನಾದಲ್ಲಿ ಎರಡು ವರ್ಷ ಕಲಾಭ್ಯಾಸ ಮಾಡಿದರು. ಸಿಮ್ಲಾ ಆಕಾಶವಾಣಿಯಲ್ಲಿ ಉದ್ಯೋಗಿಯಾದ ಕಾರಣ ಸಿಮ್ಲಾದಲ್ಲಿ ಪ್ರಥಮ ಕಲಾಪ್ರದರ್ಶನ ಏರ್ಪಾಡಾಯಿತು. ಇವರು

ರಚಿಸಿದ ಚಿತ್ರಗಳು ರಾಜಭವನ ಮುಂತಾದೆಡೆ ಇವೆ. ತೈಲ ಹಾಗೂ ಜಲವರ್ಣಗಳೆರಡರಲ್ಲಿಯೂ ಪರಿಣತಿ ಹೊಂದಿದ್ದು, ೮ ಥ ೯ ಅಡಿ ಪ್ರಮಾಣದ ಬೃಹದಾಕಾರದ ದೀಪಾಲಂಕೃತ ವಿಧಾನಸೌಧದ ಕೃತಿ ಇವರಿಗೆ ತುಂಬ ಹೆಸರು ತಂದು ಕೊಟ್ಟಿತು. ಹಲವಾರು ಪ್ರಯೋಗಗಳನ್ನು ನಡೆಸಿರುವ ಇವರು, ಚಿತ್ರವು ಸುಲಭವಾಗಿ ನಾಶವಾಗದೆ ಹೆಚ್ಚು ಕಾಲ ಬಾಳಿಕೆ ಬರುವ ರೀತಿಯನ್ನು ಕಂಡುಕೊಳ್ಳುವ ದಿಸೆಯಲ್ಲಿ ಬಣ್ಣಗಳು ಕ್ಷಯಿಸದಿರುವಂತಹ ತಂತ್ರದ ಪ್ರಯೋಗ ನಡೆಸಿದ್ದಾರೆ.

೧೯೧೪ರಲ್ಲಿ ತುಮಕೂರು ಜಿಲ್ಲೆ ನಾಗೇನಹಳ್ಳಿಯಲ್ಲಿ ಜನಿಸಿದ ರಘೋತ್ತಮ್ ಪುಟ್ಟಿ ಅವರು ಮೈಸೂರಿನಲ್ಲಿ ಎ.ಎನ್.ಸುಬ್ಬರಾವ್, ಮೈ. ಸುಬ್ರಹ್ಮಣ್ಯ ರಾಜು ಅವರಿಂದ ತರಬೇತಿ ಪಡೆದು ಪ್ರಕೃತಿ ಆಧಾರಿತ ಚಿತ್ರಕೃತಿ ರಚಿಸಿದ್ದಾರೆ. ೨೧ ಏಕವ್ಯಕ್ತಿ ಪ್ರದರ್ಶನ, ೨೪ ಸಾಮೂಹಿಕ ಪ್ರದರ್ಶನ ನೀಡಿದ್ದಾರೆ. ರಾಜ್ಯ ಲಲಿತಕಲಾ ಅಕಾಡೆಮಿಯ ವಾರ್ಷಿಕ ಪ್ರಶಸ್ತಿ, ಮೈಸೂರು ದಸರಾ ಪ್ರಶಸ್ತಿ, ಐಫಾಕ್ಸ್ ಪ್ರಶಸ್ತಿ ಮೊದಲಾದ ಪ್ರಶಸ್ತಿಗಳಲ್ಲದೇ ಚಿತ್ರಕಲಾ ಭೂಷಣ ಎಂಬ ಬಿರುದು ಕೂಡ ಗಳಿಸಿದ್ದರು. ಇವರೇ ರಚಿಸಿರುವ ಬಂಡೀಪುರ, ಕೊಡಗಿನ ರಸ್ತೆ ನೋಟ, ಊಟಿ, ಹಾರ್ನಹಳ್ಳಿ ಸೋಮನಾಥೇಶ್ವರ ದೇವಸ್ಥಾನ, ಜೋಗ್ ಜಲಪಾತ, ಶಿಂಷಾನದಿ, ಹಂಪಿಯ ಕಲ್ಲಿನ ರಥ ಮುಂತಾದ ಕಲಾಚಿತ್ರಗಳು ಪ್ರಖ್ಯಾತವಾಗಿವೆ.

೧೯೧೫ರಲ್ಲಿ ಕುಣಿಗಲ್ ತಾಲೂಕಿನಲ್ಲಿ ಜನಿಸಿದ ಹೆಚ್.ಎಂ.ಗಂಗಾಧರಯ್ಯ ಅವರು ರಾಜ್ಯದಲ್ಲಿ ಸಿದ್ದಾರ್ಥ ವಿದ್ಯಾ ಸಂಸ್ಥೆ ಸ್ಥಾಪಿಸಿ ಶಿಕ್ಷಣ ಭೀಷ್ಮ ಎಂಬ ಹೆಸರು ಪಡೆದಿದ್ದರೂ ಇವರೊಬ್ಬ ಚಿತ್ರಕಲಾವಿದರಾಗಿದ್ದರೆಂಬುದು ಅನೇಕರಿಗೆ ತಿಳಿದಿಲ್ಲ. ಮೈಸೂರಿನಲ್ಲಿ ಕಲಾಶಿಕ್ಷಣ ಪಡೆದು ಅನೇಕ ಸರ್ಕಾರಿ ಶಾಲೆಗಳಲ್ಲಿ ಚಿತ್ರಕಲಾ ಶಿಕ್ಷಕರಾಗಿ ಸೇವೆ ಸಲ್ಲಿಸಿ ಸ್ವಯಂ ನಿವೃತ್ತಿ ಪಡೆದು ಸ್ವತಂತ್ರ ಕಲಾವಿದರಾಗಿ ಅನೇಕ ಕಲಾಕೃತಿ ರಚಿಸಿದವರಾಗಿದ್ದಾರೆ.

೧೯೩೨ರಲ್ಲಿ ಮಧುಗಿರಿ ತಾಲೂಕು ಸುದ್ದುಕುಂಟೆಯಲ್ಲಿ ಜನಿಸಿದ **ಎಂ.ಎಸ್.ನಂಜುಂಡರಾವ್,** ಅಂತಾರಾಷ್ಟ್ರೀಯ ಖ್ಯಾತಿ ಹೊಂದಿ, ಚಿತ್ರಕಲಾ ಪರಿಷತ್ತನ್ನು ಬೆಳೆಸಿ ಚಿತ್ರಕಲಾ ಕ್ಷೇತ್ರದಲ್ಲಿ ಶಾಶ್ವತ ಹೆಸರು ಮಾಡಿದವರಾಗಿದ್ದಾರೆ. ಲಲಿತಕಲಾ ಅಕಾಡೆಮಿಗೆ ಸದಸ್ಯರೂ ಆಗಿದ್ದ ಇವರ ಕಲಾಕೃತಿಗಳು ದೇಶವಿದೇಶಗಳಲ್ಲೂ ಇವೆ. ಮೈಸೂರಿನಲ್ಲಿ ಕಲಾಶಿಕ್ಷಣ ಪಡೆದು, ಕರ್ನಾಟಕ ಲಲಿತ ಕಲಾ ಅಕಾಡೆಮಿಯ ಸದಸ್ಯರಾಗಿ, ತೊಗಲುಬೊಂಬೆ, ಶ್ರವಣ ಬೆಳಗೊಳ ಮುಂತಾದ ಭಿತ್ತಿ ಚಿತ್ರಗಳನ್ನು ನಕಲು ಮಾಡಿ ದಾಖಲಿಸುವಲ್ಲಿ ಅನನ್ಯವಾಗಿ ಶ್ರಮಿಸಿದ್ದಾರೆ. ಅಮೆರಿಕಾದಲ್ಲಿ ನಡೆದ ವಿಶ್ವ ತೊಗಲು ಬೊಂಬೆ ಉತ್ಸವದಲ್ಲಿ, ಮಾಸ್ಕೋದ ರೋರಿಚ್ ಶತಮಾನೋತ್ಸವ ಸಂದರ್ಭದಲ್ಲಿ, ಭಾರತದ ಪ್ರತಿನಿಧಿಯಾಗಿ ಭಾಗವಹಿಸಿದ್ದಲ್ಲದೇ ಕರ್ನಾಟಕದ ಕಲಾಕೀರ್ತಿಯನ್ನು ಅನೇಕ ರಾಷ್ಟ್ರಗಳಲ್ಲಿ ಬೆಳಗುವಂತೆ ಮಾಡಿರುವರು. ಇವರಿಗೆ ೧೯೮೦ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ ಗೌರವ ಪ್ರಶಸ್ತಿ, ೧೯೮೪ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಮುಂತಾದ ಅನೇಕ ಪ್ರಶಸ್ತಿಗಳು ಸಂದಿವೆ. ಇವರು ಚಿತ್ರಸಂತೆಯ ರೂವಾರಿಯೂ ಆಗಿದ್ದರು.

ತುಮಕೂರು ತಾಲೂಕು ಹೊನ್ನುಡಿಕೆಯಲ್ಲಿ ರೈತಾಪಿ ಕುಟುಂಬದಲ್ಲಿ ಜನಿಸಿ, ಮುಂಬಯಿಯ ಜೆ.ಜೆ.ಸ್ಕೂಲ್ ಆಫ್ ಆರ್ಟ್ಸ್‌ನಲ್ಲಿ ಕಲಾಶಿಕ್ಷಣ ಪಡೆದು ಮುಂಬಯಿ ಚಲನಚಿತ್ರ ಕ್ಷೇತ್ರದಲ್ಲಿ ಅಪೂರ್ವ ಸಾಧನೆಗೈದ **ಹೆಚ್.ವಿ.ಮಹಾರುದ್ರಶೆಟ್ಟಿ** ಫಿಲಂಫೇರ್, ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ಹಾಗೂ ದಾದಾ ಸಾಹೇಬ್ ಫಾಲ್ಕೆ ಅಕಾಡೆಮಿಯ ಪ್ರಶಸ್ತಿ ಪಡೆದ ಹೆಗ್ಗಳಿಕೆಗೆ ಪಾತ್ರರು. ಮಣ್ಣಿನಿಂದ ಮೂರ್ತಿ ತಯಾರಿಸಿ, ಚಲನಚಿತ್ರಗಳಿಗೆ ಸೆಟ್ಟಿಂಗ್, ಮಾಡ್ಲಿಂಗ್ ಮಾಡಿ ಹಿಂದಿ ಚಿತ್ರರಂಗದಲ್ಲಿ ಕಲಾನಿರ್ದೇಶಕರಾಗಿ ಖ್ಯಾತಿ ಪಡೆದರು. ಹುಟ್ಟೂರಿನಲ್ಲಿಯೇ ಪ್ರಾಥಮಿಕ ಶಿಕ್ಷಣ ಪಡೆದಿದ್ದು, ಗುರುಗಳು ಪಾಠ ಮಾಡುವಾಗಲೂ ಇವರು ಚಿತ್ರ ಬಿಡಿಸುತ್ತಾ ಕೂರುತ್ತಿದ್ದರಂತೆ. ಕೆಲವು ಶಿಕ್ಷಕರು ಇವರನ್ನು ಶಿಕ್ಷಿಸಿ ಇತರೆ ವಿದ್ಯಾರ್ಥಿಗಳಿಂದ ದೂರ ಕೂರಿಸಿದರೆ ಇನ್ನು ಕೆಲವರು ಚಿತ್ರ ಬರೆಯುವುದಕ್ಕೆ ಪ್ರೋತ್ಸಾಹಿಸುತ್ತಿದ್ದರು. ಗೊಂಬೆಗಳನ್ನು ತಯಾರಿಸಿ ಅವುಗಳಿಗೆ ಅತ್ಯಂತ ಸುಂದರ ವರ್ಣಗಳನ್ನು ಲೇಪಿಸಿ ಜನರ ಮನಸ್ಸನ್ನು ಸೂರೆಗೊಳ್ಳುವಂತೆ ಮಾಡಿ ಮಾರಾಟ ಮಾಡುತ್ತಿದ್ದರು. ಗೌರಿ-ಗಣೇಶ ಹಬ್ಬಗಳ ಸಂದರ್ಭದಲ್ಲಿ ಗಣಪತಿ ಹಾಗೂ ಗೌರಿಯ ಚಿಕ್ಕ ಚಿಕ್ಕ ಗೊಂಬೆಗಳನ್ನು ತಯಾರಿಸಿ ಅದರಿಂದಲೂ ಹಣ ಗಳಿಸುತ್ತಿದ್ದರು. ಗ್ರಾಮೀಣ ಪ್ರದೇಶದಲ್ಲಿ ದೊರೆಯುವಂತಹ ಧಾತು ಮತ್ತು ಗಿಡಮೂಲಿಕೆಗಳಿಂದ ಬಣ್ಣವನ್ನು ತಯಾರಿಸಿಕೊಳ್ಳುತ್ತಿದ್ದರು. ಬಳಪದ ಕಲ್ಲನ್ನು ಕುಟ್ಟಿ ಪುಡಿ ಮಾಡಿ, ಬಿಳಿ ವರ್ಣ ತಯಾರಿಸಿ ಅದನ್ನೇ ಗೊಂಬೆಗಳಿಗೆ ಮೂಲ ವರ್ಣವಾಗಿ ಬಳಸುತ್ತಿದ್ದರು. ತೆಂಗಿನಚಿಪ್ಪನ್ನು ಸುಟ್ಟು ಇದ್ದಿಲು ಮಾಡಿ ಕಪ್ಪು ಬಣ್ಣವನ್ನು, ಕೆಮ್ಮಣ್ಣು ಅರಿಸಿನ ಮುಂತಾದ ಗಿಡಮೂಲಿಕಾ ಬಣ್ಣಗಳನ್ನು ಜಾಲಿ ಮರದ ಅಂಟಿನೊಂದಿಗೆ ಮಿಶ್ರಣ ಮಾಡಿ ತಾವೇ ವರ್ಣಗಳನ್ನು ಹಾಗೂ ಕುದುರೆ ಬಾಲದ ಕೂದಲಿನಿಂದ ಬ್ರಷ್ಷುಗಳನ್ನು ತಯಾರಿಸಿಕೊಳ್ಳುತ್ತಿದ್ದರು. ಕಾಲೇಜು ವಿದ್ಯಾಭ್ಯಾಸದ ವೇಳೆ ಚಿತ್ರಕಲೆಯನ್ನು

ತೆಗೆದುಕೊಂದು ಗ್ರಾಮೀಣ ಕಲೆಗೆ ಮೆರಗು ಕೊಟ್ಟು ಶಾಸ್ತ್ರೀಯ ರೀತಿಯಲ್ಲಿ ಚಿತ್ರಕಲಾ ಶಿಕ್ಷಣ ಅಧ್ಯಯನ ಮಾಡಿದರು. ತಿಪ್ಪೇಸ್ವಾಮಿಯವರ ಮಾರ್ಗದರ್ಶನದಂತೆ ಮೈಸೂರಿಗೆ ಬಂದು ಹೆಚ್.ಆರ್.ಹನುಮಂತಯ್ಯನವರ ಸಹಾಯದಿಂದ ಸಿದ್ಧಲಿಂಗಸ್ವಾಮಿಯವರ ಗುರುಕುಲದಲ್ಲಿ ಆಶ್ರಯ ಪಡೆದರು.

ಮೈಸೂರಿನ ಜಯಚಾಮರಾಜೇಂದ್ರ ಟೆಕ್ನಿಕಲ್ ಇನ್ಸ್ಟಿಟ್ಯೂಟ್‌ನಲ್ಲಿ ಡ್ರಾಯಿಂಗ್ ಮತ್ತು ಪೇಯಿಂಟಿಂಗ್ ತರಬೇತಿಗೆ ಸೇರಿಕೊಂಡು ಶಿಕ್ಷಕರಾದ ಎಸ್.ಎನ್.ಸ್ವಾಮಿ, ಸೂಫಿ, ವೈ.ಸುಬ್ರಹ್ಮಣ್ಯರಾಜು ಹಾಗೂ ಎಂ.ವೀರಪ್ಪನವರಲ್ಲಿ ಶಿಷ್ಯರಾಗಿ ವ್ಯಾಸಂಗ ಮಾಡಿದ್ದರು. ಇಲ್ಲಿ ವ್ಯಾಸಂಗ ಮಾಡುತ್ತಿರುವಾಗಲೇ ಮದ್ರಾಸ್ ರಾಜ್ಯ ಸರ್ಕಾರದಿಂದ ನಡೆಸುತ್ತಿದ್ದ ಡ್ರಾಯಿಂಗ್ ಮತ್ತು ಪೇಯಿಂಟಿಂಗ್ ಪರೀಕ್ಷೆಯನ್ನು ಕಟ್ಟಿ ಪಾಸ್ ಮಾಡಿದ್ದರು. ಮಹಾರುದ್ರಯ್ಯನವರ ಕಲಾಕೃತಿಗಳನ್ನು ಹಾಗೂ ಕಲಾ ನೈಪುಣ್ಯತೆಯನ್ನು ಮೆಚ್ಚಿ ಕಲಾಸಂಸ್ಥೆಯು ಇವರಿಗೆ ಐದು ವರ್ಷದ ಡಿಪ್ಲೋಮಾ ಪದವಿಯನ್ನು ಮೂರು ವರ್ಷಗಳಲ್ಲಿ ಮುಗಿಸಿಕೊಳ್ಳುವ ಅವಕಾಶವನ್ನು ಕೊಟ್ಟಿತು. ೧೯೫೬ರಲ್ಲಿ ಸಿ.ಟಿ.ಐ ಸಂಸ್ಥೆಯು ಇವರಿಗೆ ಸ್ಕಾಲರ್ಶಿಪ್ ನೀಡಿ ಮುಂದಿನ ವ್ಯಾಸಂಗಕ್ಕಾಗಿ ಮುಂಬೈನ ಜೆ.ಜೆ.ಸ್ಕೂಲ್ ಆಫ್ ಆರ್ಟ್ಸ್‌ಗೆ ಕಳುಹಿಸಿಕೊಟ್ಟಿತು.

೧೯೫೯ರಲ್ಲಿ **ಮಹಾರುದ್ರಶೆಟ್ಟಿ,** ಗೆಳೆಯ ಪಾಟೀಲ್ ಜೊತೆಯಲ್ಲಿ ಮೊದಲ ಬಾರಿಗೆ ಫಿಲ್ಮಾಲಯ ಸ್ಟುಡಿಯೋಗೆ ಹೋಗಿದ್ದಾಗ ಅಲ್ಲಿ 'ಹಮ್ ಹಿಂದೂಸ್ತಾನಿ ಚಿತ್ರದ ಶೂಟಿಂಗ್ ನಡೆದಿತ್ತು. ಆ ಚಿತ್ರಕ್ಕೆ ೪೬ ಅಡಿ ಎತ್ತರದ ನೆಹರೂ ಮತ್ತು ಗಾಂಧಿಯವರ ಭಾವಚಿತ್ರಗಳು ಬೇಕಾಗಿತ್ತು. ಅವುಗಳನ್ನು ಮಾಡಿಕೊಡುವ ವ್ಯವಸ್ಥೆಯನ್ನು ಶ್ರೀಯುತರು ವಹಿಸಿಕೊಂಡರು. ಅಲ್ಲಿಂದ ಅವರ ಹಿಂದಿ ಚಿತ್ರಗಳೊಂದಿಗಿನ ನಂಟು ಶುರುವಾಯಿತು. ಖ್ಯಾತ ಕಲಾನಿರ್ದೇಶಕರಾದ ಸುರೇನ್ ಷಾ ಅವರ ಬಳಿ ಎರಡು ವರ್ಷಗಳ ಕಾಲ ಚಲನಚಿತ್ರ ನಿರ್ಮಾಣಕ್ಕೆ ಪೂರಕ ಕಲಾನಿರ್ದೇಶಕರಾಗಿ ಸೂಕ್ಷ್ಮಾತಿಸೂಕ್ಷ್ಮ ಅಂಶಗಳ ಅಧ್ಯಯನವನ್ನು ಚೆನ್ನಾಗಿ ಅಭ್ಯಾಸ ಮಾಡಿದರು. ಹೀಗೆ ವೃತ್ತಿಜೀವನ ಪ್ರಾರಂಭಿಸಿದ ಇವರು ಬಹಳಷ್ಟು ಯಶಸ್ವೀ ಚಿತ್ರಗಳಿಗೆ ಸೆಟ್ಟುಗಳನ್ನು ನಿರ್ಮಿಸಿ ಅನೇಕ ದಾಖಲೆಗಳನ್ನು ಸ್ಥಾಪಿಸಿದ್ದಾರೆ. ೫೫ ವರ್ಷಗಳ ಕಾಲ ಮುಂಬಯಿಯಲ್ಲಿ ಕಾರ್ಯನಿರ್ವಹಿಸಿದ ಇವರು ಮಗ ನವೀನ್ ಶೆಟ್ಟಿಗೆ ತಮ್ಮ ಕೆಲಸವನ್ನು ಒಪ್ಪಿಸಿ ನಿವೃತ್ತರಾಗಿ ತವರೂರಾದ ತುಮಕೂರಿಗೆ ಬಂದು ನೆಲೆಯೂರಿದ್ದ ಇವರು ೨೮-೦೬-೨೦೦೬ರಂದು ಅನಾರೋಗ್ಯದ ನಿಮಿತ್ತ ನಿಧನರಾದರು. ಇವರ ಅಮೋಘ ಸಾಧನೆಯನ್ನು ಗಮನಿಸಿ ಮುಂಬೈನ ಸಿನಿಮಾ ಕ್ಷೇತ್ರವು ಇವರಿಗೆ ದಾದಾ ಸಾಹೇಬ್ ಫಾಲ್ಕೆ ಅಕಾಡೆಮಿಕ್ ಪ್ರಶಸ್ತಿ ನೀಡಿ ಗೌರವಿಸಿದೆ. ೨೦೦೩ರಲ್ಲಿ ಇವರ ಸೇವೆಯನ್ನು ಗುರುತಿಸಿ ತುಮಕೂರು ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ನೀಡಿ ಪುರಸ್ಕರಿಸಿದೆ. ಅಲ್ಲದೇ ನೂರಾರು ಸಂಘ ಸಂಸ್ಥೆಗಳು ಇವರನ್ನು ಸನ್ಮಾನಿಸಿವೆ.

**ಸುಶೀಲ ಪರ್ವತಯ್ಯ** ಅವರು ಹಿರಿಯ ಚಿತ್ರಕಲಾವಿದೆ. ತುಮಕೂರಿನಲ್ಲಿ ಖ್ಯಾತ ವೈದ್ಯರಾಗಿದ್ದ ಪರ್ವತಯ್ಯನವರ ಪತ್ನಿ. ಇವರು ಸಾಂಪ್ರದಾಯಿಕ ಶೈಲಿಯ ಕಲಾಕೃತಿ ರಚಿಸಿ ನಾಡಿನ ಗಮನ ಸೆಳೆದಿರುವರು. ಕಲಾಸೇವೆಗಾಗಿ ಇವರಿಗೆ ಕಲಾರತ್ನ, ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಹಾಗೂ ೨೦೦೫ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ ಗೌರವ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಸಮಕಾಲೀನ ಚಿತ್ರಕಲೆಯಲ್ಲಿ ಜಿಲ್ಲೆಯು ಮುಂಚೂಣಿಯಲ್ಲಿದ್ದು, ಅಪಾರ ಸಂಖ್ಯೆಯಲ್ಲಿರುವ ಚಿತ್ರಕಲಾ ಸಾಧಕರೆಲ್ಲರ ಚಿತ್ರಣವನ್ನು ಇಲ್ಲಿ ನೀಡಲು ಸಾಧ್ಯವಾಗದೇ ಅವರ ಹೆಸರನ್ನಷ್ಟೇ ಉಲ್ಲೇಖಿಸಲಾಗಿದೆ. ದೇಶವಿದೇಶಗಳಲ್ಲಿ, ರಾಜ್ಯದ ಹಲವು ಭಾಗಗಳಲ್ಲಿ ಏಕವ್ಯಕ್ತಿ ಕಲಾ ಪ್ರದರ್ಶನ ನೀಡಿರುವ, ಮೈಸೂರು ದಸರಾ ಪ್ರಶಸ್ತಿ ಪಡೆದಿರುವ ದಸರಾ ವಸ್ತುಪ್ರದರ್ಶನದಲ್ಲಿ ತಮ್ಮ ಚಿತ್ರಗಳನ್ನು ಪ್ರದರ್ಶಿಸಿರುವ ಕಲಾವಿದರು ಇವರಾಗಿದ್ದು ರಾಜ್ಯ ಹಾಗೂ ರಾಷ್ಟ್ರಮಟ್ಟದ ಕಲಾಶಿಬಿರಗಳಲ್ಲಿ ಪಾಲ್ಗೊಂಡಿದ್ದಾರೆ. ಚಿತ್ರಕಲೆ ಅಭಿವೃದ್ಧಿಪಡಿಸುವ ದಿಸೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಸ್ಥಳೀಯ ಚಿತ್ರಕಲಾಸಂಸ್ಥೆಗಳು ಕೈಜೋಡಿಸಿ ನಡೆಸಿದ ಕಾರ್ಯಾಗಾರಗಳು ಅಪಾರ ಜನಮನ್ನಣೆ ಗಳಿಸಿದವು.

ಹಿರಿಯ ಕಲಾವಿದರಾದ ಆರ್.ಎಂ.ಹಡಪದ್, ಹಿರೇಗೌಡರ್, ಮುಂತಾದವರಿಂದ ನಡೆಸಿದ ರಾಜ್ಯ, ರಾಷ್ಟ್ರಮಟ್ಟದ ಪ್ರಾತ್ಯಕ್ಷಿಕತೆ, ಕಲಾವಿದರ ಕೈಚಳಕ ದಂಗುಬಡಿಸಿತು. ಸುವರ್ಣ ಕರ್ನಾಟಕ ಸಾಂಸ್ಕೃತಿಕ ದಿಬ್ಬಣ, ಕಲಾಶಿಬಿರ, ಜಿಲ್ಲಾ ಉತ್ಸವದಲ್ಲಿ ನಡೆಸಿದ ಕಲಾಶಿಬಿರ, ಕಲಾಪ್ರದರ್ಶನ, ಜಿಲ್ಲೆಯಲ್ಲಿ ೨೦೦೨ರಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಏರ್ಪಡಿಸಿದ್ದ ಬೃಹತ್ ಚಿತ್ರಕಲಾ ಪ್ರದರ್ಶನ, ಕಾರ್ಯಾಗಾರ, ಶಿಬಿರ, ಪ್ರಾತ್ಯಕ್ಷಿಕೆಗಳು ಮೈಲಿಗಲ್ಲೆನಿಸಿವೆ.

ಗಾಂಧೀವಾದಿಗಳೂ ಶಿಕ್ಷಣ ತಜ್ಞರೂ ಆದ, ಸರ್ಕಾರಿ ಚಿತ್ರಕಲಾ ಸಂಸ್ಥೆಯ **ಎಂ.ಬಸವಯ್ಯ** ತುಮಕೂರಿನಲ್ಲಿ ಸ್ಥಾಪಿಸಿದ ರವೀಂದ್ರ ಕಲಾನಿಕೇತನ ಚಿತ್ರಕಲಾ ಮಹಾವಿದ್ಯಾಲಯವು ಆಸಕ್ತರು ಚಿತ್ರಕಲಾ ಶಿಕ್ಷಣ ಪಡೆದು ಬೆಳೆಯಲು ಸಹಕಾರಿಯಾಯಿತು. ನಂತರ ಪ್ರಾರಂಭವಾದ ರವಿವರ್ಮ ಚಿತ್ರಕಲಾ ಶಾಲೆ, ಚಿಕ್ಕನಾಯಕನಹಳ್ಳಿಯ ವಾಣಿ ಚಿತ್ರಕಲಾ ಮಹಾವಿದ್ಯಾಲಯ, ತುಮಕೂರು ವಿಶ್ವವಿದ್ಯಾನಿಲಯದ ಚಿತ್ರಕಲಾ ಮಹಾವಿದ್ಯಾಲಯ, ಹಾಗೂ ಶಾಂತಲಾ ಲಲಿತಕಲಾ ಶಾಲೆ ಇತರ ಪ್ರಮುಖ ಚಿತ್ರಕಲಾ ಶಾಲೆಗಳಾಗಿವೆ. ಜಿಲ್ಲೆಯ ಸುಮಾರು ೧೫೦ ಕ್ಕೂ ಹೆಚ್ಚು ಶಾಲೆಗಳಲ್ಲಿ ಚಿತ್ರಕಲಾ ಶಿಕ್ಷಕರಿದ್ದು, ಶೈಕ್ಷಣಿಕ ಸ್ಪಂದನ ಹಾಗೂ ಅಭಿವೃದ್ಧಿಗಾಗಿ **ಪಿ.ಎಸ್. ಗ್ರಾಮಪುರೋಹಿತ್** ಹಾಗೂ **ಎಂ.ಕೊಟ್ರಪ್ಪರ** ನೇತೃತ್ವದಲ್ಲಿ ೧೯೯೦ರಲ್ಲಿ ಜಿಲ್ಲಾ ಚಿತ್ರಕಲಾ ಶಿಕ್ಷಕರ ಸಂಘ ಪ್ರಾರಂಭಿಸಿ ಚಿತ್ರಕಲಾ ತರಬೇತಿಗೆ ಸಹಕಾರ ನೀಡುತ್ತಿದ್ದರು.

'ಶಿಲ್ಪ ಕಲ್ಚರಲ್ ಅಂಡ್ ಫೈನ್ ಆರ್ಟ್ ಅಕಾಡೆಮಿ' ಕಲಾವಿದರಾದ **ಚಿನ್ನಾರಿ ಡೇವಿಡ್** ಅವರು ಕಲೆ, ಚಿತ್ರಕಲೆ, ದೃಶ್ಯಕಲೆ ಮುಂತಾದ ವಿಭಿನ್ನ ಸಾಧ್ಯತೆಗಳನ್ನು ಗಮನದಲ್ಲಿಟ್ಟುಕೊಂಡು ತಮ್ಮ ಮನೆಯ ಆವರಣದಲ್ಲಿಯೇ ಚಿತ್ರ ಕುಟೀರ ನಿರ್ಮಿಸಿ ಶಿಲ್ಪಕಲೆ ಅಂಡ್ ಫೈನ್ ಆರ್ಟ್ಸ್‌ನ್ನು ಸ್ಥಾಪಿಸಿ ಚಿತ್ರಕಲಾಸಕ್ತರಿಗೆ, ವಿದ್ಯಾರ್ಥಿಗಳಿಗೆ ಕಲಿಸುತ್ತಿದ್ದಾರೆ. ಮಕ್ಕಳಿಗಾಗಿ ಜೆ.ಡಿ.ಸ್ಕೂಲ್ ಆಫ್ ಆರ್ಟ್ ಶಾಲೆ ನಡೆಸುತ್ತಿದ್ದಾರೆ. ಖ್ಯಾತ ಕಲಾವಿದ ಹಾಗೂ ಮೈಸೂರಿನ ಜಾನಪದ ಕ್ಯೂರೇಟರ್ ಆಗಿದ್ದ **ಪಿ.ಆರ್.ತಿಪ್ಪೇಸ್ವಾಮಿ** ಅವರ ನೆನಪಿಗಾಗಿ 'ಕುಂಚಬ್ರಹ್ಮ ಆರ್.ತಿಪ್ಪೇಸ್ವಾಮಿ ಸಾಂಪ್ರದಾಯಿಕ ಆರ್ಟ್ ಗ್ಯಾಲರಿ'ಯನ್ನು **ಆರ್.ಸುರೇಂದ್ರ** ಅವರ ನೇತೃತ್ವದಲ್ಲಿ ಸ್ಥಾಪಿಸಿ ವಾರ್ಷಿಕ ಕಲಾಪ್ರದರ್ಶನ, ಕಾರ್ಯಾಗಾರ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. **ಕೋಟಿಕುಮಾರ್** ನೇತೃತ್ವದ 'ಕಲರ್ಸ್ ಗ್ರೂಪ್' ಸಂಸ್ಥೆಯು ಅನೇಕ ಕಲಾಶಿಬಿರ, ಕಾರ್ಯಾಗಾರ, ಹಿರಿಯ ಕಲಾವಿದರ ಕಲಾ ಪ್ರದರ್ಶನ, ಸಂವಾದ ಚರ್ಚಾಗೋಷ್ಠಿ, ಸಾಂಸ್ಕೃತಿಕ ಚಟುವಟಿಕೆ, ಮಕ್ಕಳಿಗಾಗಿ ಚಿತ್ರಕಲಾಸ್ಪರ್ಧೆ ನಡೆಸುತ್ತಾ ಬಂದಿದೆ. ಎಸ್.ಬಿ.ಎಂ. ಬ್ಯಾಂಕ್ ನೆರವಿನೊಂದಿಗೆ ಸತತವಾಗಿ ಪ್ರತೀ ವರ್ಷ ರಾಜ್ಯಮಟ್ಟದ ಮಕ್ಕಳ ಚಿತ್ರಕಲಾ ಸ್ಪರ್ಧೆ ನಡೆಸುತ್ತಾ ಬಂದಿದ್ದು, ಇದುವರೆವಿಗೆ ಸುಮಾರು ಒಂದು ಲಕ್ಷ ಮಕ್ಕಳನ್ನು ಚಿತ್ರಕಲಾ ಕ್ಷೇತ್ರಕ್ಕೆ ಪರಿಚಯಿಸಿರುತ್ತಾರೆ. ರಾಜ್ಯಮಟ್ಟದ ಮಕ್ಕಳ ಚಿತ್ರಕಲಾ ಸ್ಪರ್ಧೆ, ಮನೆಗೊಂದು ಕಲಾಕೃತಿ ಎಂಬ ಯೋಜನೆ, 'ನಿಮ್ಮೊಂದಿಗೆ ನಾವು' ಕಾರ್ಯಕ್ರಮದ ಮೂಲಕ ಹಿರಿಯ ಕಲಾವಿದರೊಂದಿಗೆ ಸಂವಾದ ನಡೆಸುತ್ತಾ ಬಂದಿರುವ ಜಿ.ಎಸ್.ಸೋಮಶೇಖರ್ ಸ್ಥಾಪಿಸಿರುವ 'ಭೂಮಿ ಬಳಗ' ಸಾಂಸ್ಕೃತಿಕ ಸಂಸ್ಥೆ, ತುಮಕೂರು ವಾರ್ತೆ ಬಳಗದ 'ನಗೆಮುಗುಳು' ಹಾಸ್ಯ ಪತ್ರಿಕೆ ವತಿಯಿಂದ ವ್ಯಂಗ್ಯ ಚಿತ್ರ ಸ್ಪರ್ಧೆ, ವ್ಯಂಗ್ಯಚಿತ್ರ ಪ್ರದರ್ಶನ ನಡೆಸುತ್ತಿದೆ. ಗೌಡನಕಟ್ಟೆ ತಿಮ್ಮಯ್ಯ ಅವರ 'ನಗೆಮಲ್ಲಿಗೆ' ಹಾಸ್ಯಬಳಗದಿಂದ ವ್ಯಂಗ್ಯಚಿತ್ರ ಪ್ರದರ್ಶನ, ಟುಡೇಸ್ ಫೈನ್ ಆರ್ಟ್ಸ್ ಸ್ಟುಡಿಯೋ, ದರ್ಪಣ ಗ್ರೂಫ್ ಆಫ್ ಆರ್ಟ್ಸ್ ಮುಂತಾದ ಸಂಸ್ಥೆಗಳು ಈ ನಿಟ್ಟಿನಲ್ಲಿ ಕೆಲಸಮಾಡುತ್ತಿವೆ.

ತುಮಕೂರಿನಲ್ಲಿ ರವೀಂದ್ರ ಕಲಾನಿಕೇತನ ಕಲಾ ಮಹಾ ವಿದ್ಯಾಲಯವು ಕೆಲಕಾಲ ನಡೆದು ಸ್ಥಗಿತಗೊಳ್ಳುವ ಸ್ಥಿತಿಯಲ್ಲಿತ್ತು. ಅಂತಹ ಸಂದರ್ಭದಲ್ಲಿ ಚಿತ್ರಕಲೆಯಲ್ಲಿ ಪದವಿಯನ್ನು ಪಡೆದಿದ್ದ **ಕಲಬುರಗಿಯ ಬಾಬುರಾವ್** ಅವರು ಶಾಲೆಗೆ ಮುಖ್ಯಸ್ಥರಾಗಿ ಬಂದು ಅದನ್ನು ಮಹಾವಿದ್ಯಾಲಯವಾಗಿ ಬೆಳೆಸಿದವರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ರಾಜ್ಯ ಲಲಿತ ಕಲಾ ಅಕಾಡೆಮಿಯ ಗ್ರಾಫಿಕ್ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ತುಮಕೂರು ಜಿಲ್ಲೆಯ ಕೆಲವು ಭಿತ್ತಿ ಚಿತ್ರಗಳನ್ನು ನಕಲು ಮಾಡಿದ್ದಾರೆ. ಬೆಂಗಳೂರು, ಹೈದರಾಬಾದ್, ಮೈಸೂರು, ನಾಗಪುರ, ನವದೆಹಲಿ ಮುಂಬಯಿಗಳಲ್ಲಿ ನಡೆದ ಕಲಾಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ಹೈದರಾಬಾದ್ ಇಂಡಸ್ಟ್ರೀಯಲ್ ಆರ್ಟ್ ಕಂಬೈನ್ಸ್, ಅಖಿಲ ಭಾರತ ಚಿತ್ರಕಲಾ ಪ್ರದರ್ಶನ, ಅಂಬಾಲ ಕ್ಯಾಂಟ್ ಪ್ರಶಸ್ತಿ, ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ. ಟಿ.ಪಿ ಅಕ್ಕಿ ಸ್ಮಾರಕ ಪ್ರಶಸ್ತಿಯನ್ನು ಚಿನ್ನದ ಪದಕದೊಂದಿಗೆ ಪಡೆದಿದ್ದಾರೆ. ಹಲವಾರು ಸಂಘ ಸಂಸ್ಥೆಗಳಲ್ಲಿ ವಿವಿಧ ಹುದ್ದೆಗಳನ್ನು ನಿರ್ವಹಿಸಿದ್ದಾರೆ. ಅವರೊಂದಿಗೆ ಇನ್ನೂ ಕೆಲವು ಚಿತ್ರಕಲಾವಿದರು ಕಲಬುರಗಿಯಿಂದ ಬಂದು ತುಮಕೂರಿನಲ್ಲಿ ನೆಲೆನಿಂತರು. ಹಾಗೆ ಬಂದವರಲ್ಲಿ ಕಿಶೋರ್ ಕುಮಾರ್ ಸಹ ಒಬ್ಬರು. ಕಲಬುರಗಿಯಲ್ಲಿ ಚಿತ್ರಕಲಾ ಡಿಪ್ಲೋಮಾ ಪೂರೈಸಿ ನಂತರ ಹಂಪೆಯ ಕನ್ನಡ ವಿಶ್ವವಿದ್ಯಾನಿಲಯದಿಂದ ಚಿತ್ರಕಲೆಯಲ್ಲಿ ಎಂ.ಎಫ್.ಎ.. ಪದವಿಯನ್ನು ಪಡೆದರು. ಬೆಂಗಳೂರು, ಮಂಗಳೂರು, ತುಮಕೂರು ಸೇರಿದಂತೆ ದೆಹಲಿ, ಅಹಮದಾಬಾದ್, ಕಲ್ಕತ್ತಾ, ನಾಗಪುರ ಮುಂತಾದೆಡೆಗಳಲ್ಲಿ ನಡೆದ ಪ್ರಮುಖ ಕಲಾ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ದಸರಾ ವಸ್ತುಪ್ರದರ್ಶನಗಳಲ್ಲಿ ಲಲಿತ ಕಲಾ ಅಕಾಡೆಮಿ ಪ್ರದರ್ಶನಗಳಲ್ಲಿ, ದಕ್ಷಿಣ ಮಧ್ಯವಲಯ ಸಾಂಸ್ಕೃತಿಕ ಕೇಂದ್ರ ನಾಗಪುರ ಪ್ರಶಸ್ತಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಗಳಿಸಿದ್ದಾರೆ. ರಾಜ್ಯ ಮಟ್ಟದ ಹಲವಾರು ಕಲಾ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ.

ತುಮಕೂರಿನ ಎಂ.ಎನ್.ಕೋಟೆಯಲ್ಲಿ ಜನಿಸಿದ **ಕುಮಾರಸ್ವಾಮಿ ಎಂ.ಎಸ್,** ಚಿತ್ರಕಲೆಯಲ್ಲಿ ಡಿಪ್ಲೊಮಾ ಪಡೆದು ಹಲವಾರು ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ಕಲಾಕೋವಿದ, ಕಲಾಕುಸುಮ್ ಇತ್ಯಾದಿ ಬಿರುದುಗಳು ಬಂದಿವೆ. ಕರ್ನಾಟಕ ಲಲಿತ ಕಲಾ ಅಕಾಡೆಮಿಗೆ ಸದಸ್ಯರಾಗಿದ್ದರು. ಕೋಟೆಕುಮಾರ್ ಎಂದೇ ಪ್ರಸಿದ್ಧರಾದ ಇವರಿಗೆ ಕ್ಯಾಮ್ಲಿನ್ ಪ್ರಶಸ್ತಿ, ಹಿಂದೂಸ್ತಾನ್ ಟೂಲ್ಸ್‌ಲ್ಸ್ ಪ್ರಶಸ್ತಿಗಳು ಬಂದಿವೆ. ತುಮಕೂರಿನಲ್ಲಿಯೇ ಜನಿಸಿದ **ಗುರುದತ್ ಎಂ.ಎಸ್.** ಅವರು ಚಿತ್ರಕಲಾ ಡಿಪ್ಲೊಮಾ ಪಡೆದಿದ್ದು, ವ್ಯಂಗ್ಯಚಿತ್ರ ಕಲೆಯನ್ನು ಅಭಿವ್ಯಕ್ತಿಸುತ್ತಿದ್ದಾರೆ. ರಾಜ್ಯ ವ್ಯಂಗ್ಯಚಿತ್ರ ಸಂಘದಿಂದ ಬಹುಮಾನ ಗಳಿಸಿದ್ದಾರೆ. ಕಥೆ ನಾಟಕಗಳಲ್ಲದೆ ಕಲಾ ವಿಮರ್ಶೆಯಲ್ಲಿಯೂ ತೊಡಗಿಸಿಕೊಂಡಿದ್ದಾರೆ. ತುಮಕೂರಿನ ಸಿ.ಟಿ.ಹಳ್ಳಿಯಲ್ಲಿ ಜನಿಸಿ, ಇಂದು ಮೈಸೂರಿನಲ್ಲಿರುವ **ಸಿ.ಚಿಕ್ಕಣ್ಣ** ಅವರು ರಾಜ್ಯದಲ್ಲಲ್ಲದೆ ಕೋಲ್ಕತ್ತಾ, ದೆಹಲಿ ಮುಂತಾದ ಕಡೆಗಳಲ್ಲಿಯೂ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ಕಲಾ ಶಿಬಿರಗಳೂ ಸೇರಿದಂತೆ ಮೈಸೂರು ದಸರಾ ಪ್ರದರ್ಶನಗಳಲ್ಲಿ ಪಾಲ್ಗೊಂಡಿದ್ದು, ಹಲವಾರು ಪ್ರಶಸ್ತಿಗಳು ಬಂದಿವೆ.

ತಿಪಟೂರು ತಾಲೂಕು ಬಳುವನೇರಳುವಿನಲ್ಲಿ ಜನಿಸಿರುವ **ಜಯರಾಂ.ಬಿ.** ಅವರು ಬೆಂಗಳೂರಿನ ಕೆನ್ ಕಲಾಶಾಲೆಯಿಂದ ಲಲಿತಕಲೆಯಲ್ಲಿ ಡಿಪ್ಲೋಮೊ ಪಡೆದಿದ್ದಾರೆ. ಕರ್ನಾಟಕ ಕಲಾವಿದರ ಸಮ್ಮೇಳನ, ಸಂಯೋಜನೆ, ಕರ್ನಾಟಕ ಲಲಿತಕಲಾ ಅಕಾಡೆಮಿ, ಕಲಾಮಹೋತ್ಸವ, ಕಲಾಮೇಳ, ಜಹಂಗೀರ್ ಕಲಾ ಗ್ಯಾಲರಿ ಮುಂಬಯಿ, ರಾಷ್ಟ್ರೀಯ ಕಲಾಮೇಳ ದೆಹಲಿ, ಐಫಾಕ್ಸ್ ಬೆಂಗಳೂರು, ಇತ್ಯಾದಿ ಕಲಾ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ಕಾವ, ಮೈಸೂರು ರಾಜ್ಯದ ಲಲಿತ ಕಲಾ ಅಕಾಡೆಮಿಯ ಸಿಮ್ಲಾ ಕಲಾಶಿಬಿರ, ಚಿಕಣಿ ಕಲಾ ಶಿಬಿರ ಬೆಂಗಳೂರು, ಹೆಬ್ಬಾರ್ ಸ್ಮಾರಕ ಕಲಾ ಶಿಬಿರ ಬೆಂಗಳೂರು, ಇತ್ಯಾದಿಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದಾರೆ. ಲಲಿತ ಕಲಾ ಅಕಾಡೆಮಿಯ ವಾರ್ಷಿಕ ಪ್ರದರ್ಶನ, ಮೈಸೂರು ದಸರಾ ಪ್ರದರ್ಶನಗಳಲ್ಲಿ ಪ್ರಶಸ್ತಿ ವಿಜೇತರರು. ಕ್ಯಾಮಲಿನ್ ಕಂಪನಿ ದಕ್ಷಿಣ ಭಾರತದ ಕಲಾ ಶಿಕ್ಷಕರಿಗಾಗಿ ಏರ್ಪಡಿಸಿದ ಚಿತ್ರಕಲಾ ಸ್ಪರ್ಧೆಯಲ್ಲಿ ಇವರ ಕಲಾಕೃತಿಗೆ ಬಹುಮಾನ ಬಂದಿದ್ದಲ್ಲದೆ ಕಂಪನಿಯಿಂದ ವಿದೇಶದಲ್ಲಿ ಪ್ರವಾಸ ಮಾಡಿ ಅಲ್ಲಿಯ ಕಲಾಗ್ಯಾಲರಿಗಳನ್ನು ವೀಕ್ಷಿಸುವ ಸೌಲಭ್ಯವು ದೊರೆತಿತ್ತು.

ತುಮಕೂರಿನ ಕೊಡಗೇನಹಳ್ಳಿಯ **ಎಸ್.ಹೆಚ್.ನಾಗರಾಜು** ಚಿತ್ರಕಲೆಯಲ್ಲಿ ಡಿಪ್ಲೊಮಾ ಪಡೆದು ಮೈಸೂರು ಸಾಂಪ್ರದಾಯಿಕ ಶೈಲಿಯಲ್ಲಿ ಪರಿಣಿತರಾಗಿದ್ದಾರೆ. ಮೈಸೂರು ದಸರಾ, ರಾಷ್ಟ್ರೀಯ ಕಲಾಮೇಳ ನವದೆಹಲಿ ಇತ್ಯಾದಿಗಳಲ್ಲಿ ಪ್ರದರ್ಶನ ಮಾಡಿದ್ದಾರೆ. ಭೂಪಾಲ್, ನಾಗಪುರ ಸೇರಿದಂತೆ ಅನೇಕ ಕಡೆಗಳಲ್ಲಿ ನಡೆದ ಕಲಾಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಹಿಮಾಚಲ ಪ್ರದೇಶ ಲಲಿತ ಕಲಾ ಅಕಾಡೆಮಿಯೂ ಸೇರಿದಂತೆ ದೇಶ ವಿದೇಶಗಳಲ್ಲಿ ಇವರ ಕಲಾಕೃತಿಗಳು ಸಂಗ್ರಹವಾಗಿದೆ. ಕರ್ನಾಟಕ ಲಲಿತ ಕಲಾ ಅಕಾಡೆಮಿ ಸದಸ್ಯರಾಗಿದ್ದರು.

ತುಮಕೂರಿನ **ನಿರ್ಮಲಕುಮಾರಿ ಸಿ.ಎಸ್.** ಅವರು ರವೀಂದ್ರ ಕಲಾನಿಕೇತನದಲ್ಲಿ ಡಿಪ್ಲೋಮಾ ಪಡೆದಿದ್ದಾರೆ. ಮೈಸೂರು ದಸರಾ, ನಾಗಪುರ, ಚಿತ್ರಕಲಾ ಪರಿಷತ್, ರಾಜ್ಯ ಲಲಿತ ಕಲಾ ಅಕಾಡೆಮಿ, ದೆಹಲಿ, ವಿಜಯಪುರ ಇತ್ಯಾದಿ ಕಲಾ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ಹಲವಾರು ಕಲಾ ಶಿಬಿರಗಳಲ್ಲಿ ಚಿತ್ರ ರಚನೆ ಮಾಡಿದಲ್ಲದೆ ಕೆಲವು ಭಿತ್ತಿ ಚಿತ್ರಗಳನ್ನು ನಕಲು ಮಾಡಿದ್ದಾರೆ. ಮೈಸೂರು ದಸರಾ, ರಾಷ್ಟ್ರಮಟ್ಟದ ಕ್ಯಾಮ್ಲಿನ್ ಪ್ರಶಸ್ತಿ ಸೇರಿದಂತೆ ಕೆಲವು ಪ್ರಶಸ್ತಿಗಳನ್ನು ಪಡೆದಿದ್ದಾರೆ.

**ಕೆ.ಹೆಚ್. ಪ್ರೇಮಕುಮಾರ್:** ಇವರು ರವೀಂದ್ರ ಕಲಾನಿಕೇತನ ಫೈನ್ ಆರ್ಟ್ಸ್‌ನಲ್ಲಿ ಚಿತ್ರಕಲಾ ಪದವಿ ಪಡೆದು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ ಎಂ.ಎಫ್.ಎ ಮಾಡಿ, ರವಿವರ್ಮ ಲಲಿತ ಕಲಾ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದು, ರಾಜ್ಯಮಟ್ಟದಲ್ಲಿ, ರಾಷ್ಟ್ರಮಟ್ಟದಲ್ಲಿ. ಮೈಸೂರು ದಸರ ಮತ್ತು ಅಕಾಡೆಮಿಗಳ ಕಲಾಮೇಳಗಳಲ್ಲಿ ಭಾಗವಹಿಸಿದ್ದಾರೆ. ಹಲವಾರು ಕಲಾ ಶಿಬಿರಗಳಲ್ಲಿ ಭಾಗವಹಿಸಿದ್ದು ಬಹುಮಾನಗಳನ್ನು ಗಳಿಸಿದ್ದಾರೆ. ನಾಗಪುರ, ಹೈದರಾಬಾದ್, ಬೆಂಗಳೂರಿನ ಚಿತ್ರಕಲಾ ಪರಿಷತ್‌ಗಳಲ್ಲಿ ಬನವಾಸಿಯ ಕದಂಬೋತ್ಸವದಲ್ಲಿ ಭಾಗವಹಿಸಿದ್ದಾರೆ. ಡೆಲ್ಲಿ ಲಲಿತಕಲಾ ಅಕಾಡೆಮಿಯಿಂದ ಪ್ರಶಸ್ತಿಗಳಿಸಿದ್ದಾರೆ. ೨೦೧೩ರಲ್ಲಿ ತುಮಕೂರು ಜಿಲ್ಲಾ ಕನ್ನಡರಾಜ್ಯೋತ್ಸವ ಪ್ರಶಸ್ತಿ ಗಳಿಸಿದ್ದಾರೆ.

ತುಮಕೂರಿನಲ್ಲೇ ಜನಿಸಿದ **ಪ್ರಕಾಶ್ ಎಲ್.** ಅವರು ಚಿತ್ರಕಲೆಯಲ್ಲಿ ಎಂ.ಎಫ್.ಎ., (ಮಾಸ್ಟರ್ ಆಫ್ ಫೈನ್ ಆರ್ಟ್ಸ್) ಪಡೆದಿದ್ದು ಮೈಸೂರು ದಸರಾ ಸೇರಿದಂತೆ ಕಲ್ಕತ್ತಾ, ನಾಗಪುರ, ನವದೆಹಲಿ ಮುಂತಾದ ಕಡೆಗಳಲ್ಲಿ ನಡೆದ ಕಲಾ

ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ.

ಶಿರಾದಲ್ಲಿ ಜನಿಸಿದ **ಬಾನು ಮುಸ್ತಾಫ್.ಎಸ್.ಎಂ** ಅವರು ರವೀಂದ್ರ ಕಲಾನಿಕೇತನದಿಂದ ಚಿತ್ರಕಲೆಯಲ್ಲಿ ಡಿಪ್ಲೊಮಾ ಪಡೆದಿದ್ದಾರೆ. ಸಮಕಾಲೀನ ವಿಷಯಗಳನ್ನು ಇರಿಸಿಕೊಂಡು ಮಿನಿಯೇಚರ್ ಶೈಲಿಯಲ್ಲಿ ಅಭಿವ್ಯಕ್ತಿಸುತ್ತಿದ್ದಾರೆ. ಮೈಸೂರು ದಸರಾ, ಕಲಾಮೇಳಗಳಲ್ಲಿ ಭಾಗವಹಿಸಿದ್ದಾರೆ. ಹಲವಾರು ಬಾರಿ ಮೈಸೂರು ದಸರಾ ಪ್ರದರ್ಶನಗಳಲ್ಲಿ ಪ್ರಶಸ್ತಿಯನ್ನು ಪಡೆದಿದ್ದಾರೆ. ರಾಜ್ಯ ಲಲಿತ ಅಕಾಡೆಮಿಯ ಸದಸ್ಯರಾಗಿದ್ದರು. ಲಲಿತ ಕಲಾ ಅಕಾಡೆಮಿಯ ವಾರ್ಷಿಕ ಪ್ರಶಸ್ತಿ, ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿಗಳು ಇವರಿಗೆ ಸಂದಿವೆ.

ಜಿಲ್ಲೆಯ ಬುಗುಡನಹಳ್ಳಿಯ **ರಾಮಸಿಂಗ್ ಟಿ.ಕೆ.** ಅವರು ಲಲಿತ ಕಲೆಯಲ್ಲಿ ಡಿಪ್ಲೊಮಾ ಪಡೆದಿದ್ದು, ನಾಗಪುರ ಮೈಸೂರು ಮುಂತಾದೆಡೆ ಹಲವಾರು ಕಲಾ ಪ್ರದರ್ಶನಗಳಲ್ಲಿ ಮತ್ತು ಕಲಾ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಮುಂಬಯಿಯ ಹಲವು ಸಂಸ್ಥೆಗಳಿಂದ ಪ್ರಶಸ್ತಿಯನ್ನು ಪಡೆದಿದ್ದಾರೆ. ಕರ್ನಾಟಕ ಲಲಿತ ಕಲಾ ಅಕಾಡೆಮಿಯ ವಾರ್ಷಿಕ ಪ್ರಶಸ್ತಿ, ಹಾಗೂ ರಾಷ್ಟ್ರಮಟ್ಟದ ನಾಗಪುರ ಪ್ರಶಸ್ತಿ ದೊರಕಿವೆ.

ತುಮಕೂರಿನಲ್ಲಿ ಜನಿಸಿದ **ರೇಣುಕಾ ಕೆಸರಮಡು** ಅವರು ರವೀಂದ್ರ ಕಲಾ ನಿಕೇತನದಿಂದ ಡಿಪ್ಲೊಮಾ ಹಾಗೂ ಹೆಚ್ಚಿನ ಶಿಕ್ಷಣ ಹೊಂದಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದಿದ್ದಾರೆ. ನಾಗಪುರದ ಸಾಂಸ್ಕೃತಿಕ ಕೇಂದ್ರದಲ್ಲಿ ಹಲವಾರು ಬಾರಿ ಮತ್ತು ಮೈಸೂರು ದಸರಾ ಪ್ರದರ್ಶನದಲ್ಲಿ ಅನೇಕ ಬಾರಿ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ನಾಗಪುರ ಸೇರಿದಂತೆ ಹದಿನೈದಕ್ಕೂ ಹೆಚ್ಚು ಕಲಾಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ರಾಜ್ಯ ಲಲಿತ ಕಲಾ ಅಕಾಡೆಮಿಯ ಸದಸ್ಯರಾಗಿದ್ದರು.

ವಿಜಯಪುರದಲ್ಲಿ ಜನಿಸಿ ತುಮಕೂರಿನಲ್ಲಿ ನೆಲೆಸಿರುವ **ಸಂಜೀವ ಕುಲಕರ್ಣಿ** ಲಲಿತಕಲೆಯಲ್ಲಿ ಡಿಪ್ಲೊಮಾ ಪಡೆದಿದ್ದಾರೆ. ಮೈಸೂರು ದಸರಾ ಮತ್ತು ಕಲಾಮೇಳಗಳ ಪ್ರದರ್ಶನದಲ್ಲಿ ಭಾಗವಹಿಸಿದ್ದಾರೆ. ಮೈಸೂರು ದಸರಾದಿಂದ ಪ್ರಶಸ್ತಿಯನ್ನು ಪಡೆದಿದ್ದಾರೆ. ಕಲಬುರಗಿಯಲ್ಲಿ ಜನಿಸಿ ತುಮಕೂರಿನಲ್ಲಿ ನೆಲೆಸಿರುವ **ಪ್ರಭು ಹರಸೂರ್** ಅವರು ಡಿಪ್ಲೊಮಾ ಪಡೆದು ಭುವನೇಶ್ವರ, ಮುಂಬಯಿಯಲ್ಲಿ ನಡೆದ ಕಲಾ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ಮೈಸೂರು, ನಾಗಪುರ, ಅಂಬಾಲಗಳಿಂದ ಪ್ರಶಸ್ತಿಗಳನ್ನು ಹಾಗೂ ಕರ್ನಾಟಕ ಲಲಿತಕಲಾ ಅಕಾಡೆಮಿ ವಾರ್ಷಿಕ ಪ್ರಶಸ್ತಿ, ರಾಷ್ಟ್ರಮಟ್ಟದ ಕ್ಯಾಮ್ಲಿನ್ ಪ್ರಶಸ್ತಿ, ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪಡೆದಿದ್ದಾರೆ.

ತುಮಕೂರಿನ **ಡೇವಿಡ್** ಅವರು ಚಿತ್ರಕಲೆಯಲ್ಲಿ ಬಿ.ಎಫ್.ಎ.,(ಬ್ಯಾಚುಲರ್ ಆಫ್ ಫೈನ್ ಆರ್ಟ್ಸ್) ಪದವಿ ಪಡೆದಿದ್ದು, ದೆಹಲಿ, ಮೈಸೂರು ಮುಂತಾದೆಡೆ ಕಲಾ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ಹಲವಾರು ಕಲಾ ಶಿಬಿರಗಳಲ್ಲಿ ಪಾಲ್ಗೊಂಡಿರುವುದಲ್ಲದೆ ಭಿತ್ತಿಚಿತ್ರಗಳನ್ನು ನಕಲು ಮಾಡಿದ್ದಾರೆ. ಕರ್ನಾಟಕ ವಿಜ್ಞಾನ ಪರಿಷತ್, ಮೈಸೂರು ದಸರಾಗಳಲ್ಲಿ ಬಹುಮಾನಿತರಾಗಿದ್ದಾರೆ. ಕಲಾ ಪರವಾದ ಸಂಘಟನೆಗಳನ್ನು ನಡೆಸುತ್ತಿದ್ದಾರೆ. ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪಡೆದಿರುವರು.

ತುಮಕೂರಿನ **ನರಸಿಂಹಮೂರ್ತಿ** ಅವರು ಡಿಪ್ಲೊಮಾ ಪಡೆದಿದ್ದು ಮೈಸೂರು ದಸರಾ ಸಾಂಸ್ಕೃತಿಕ ಕೇಂದ್ರ ನಾಗಪುರ, ರಾಷ್ಟ್ರೀಯ ಕಲಾಮೇಳ ನವದೆಹಲಿ, ಸೇರಿದಂತೆ ಹದಿನೈದಕ್ಕೂ ಹೆಚ್ಚು ಕಲಾಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ಕ್ಯಾಮಲಿನ್ ಆರ್ಟ್ಸ್ ಫೌಂಡೇಶನ್ ಸೇರಿದಂತೆ ಹಲವಾರು ಕಡೆಗಳಲ್ಲಿ ಪ್ರಶಸ್ತಿಯನ್ನು ಗಳಿಸಿದ್ದಾರೆ.

ತುಮಕೂರಿನ **ಮನು ಚಕ್ರವರ್ತಿ ಕೆ.ಎನ್.** ಅವರು ಚಿತ್ರಕಲೆಯಲ್ಲಿ ಡಿಪ್ಲೊಮಾ ಪಡೆದಿದ್ದು ಮೈಸೂರು ದಸರಾ, ನಾಗಪುರದ ಸಾಂಸ್ಕೃತಿಕ ಕೇಂದ್ರ ಇತ್ಯಾದಿ ಕಲಾಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ಮೈಸೂರು ದಸರಾದಿಂದ ಪ್ರಶಸ್ತಿಯನ್ನು ಪಡೆದಿದ್ದಾರೆ. ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ವಾರ್ಷಿಕ ಪ್ರಶಸ್ತಿ, ಕ್ಯಾಮ್ಲಿನ್ ಪ್ರಶಸ್ತಿ ಪಡೆದಿದ್ದಾರೆ.

ವಿಜಯಪುರದಲ್ಲಿ ಜನಿಸಿ ತುಮಕೂರಿನಲ್ಲಿ ನೆಲೆಸಿರುವ **ಮಲ್ಲಪ್ಪ ಎಸ್.ಹಳ್ಳಿ** ಅವರು ಚಿತ್ರಕಲೆಯಲ್ಲಿ ಡಿಪ್ಲೊಮಾ ಪಡೆದಿದ್ದು, ಹದಿನೈದಕ್ಕೂ ಹೆಚ್ಚು ಕಲಾಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ಮೈಸೂರು ದಸರಾದಲ್ಲಿ ಹಲವಾರು ಬಾರಿ ಪ್ರಶಸ್ತಿಯನ್ನು ಗಳಿಸಿದ್ದಾರೆ.

ಶಿರಾದಲ್ಲಿ ಜನಿಸಿದ **ಡೇವಿಡ್ ಪುನೀತ್** ಅವರು ಚಿತ್ರಕಲೆಯಲ್ಲಿ ಡಿಪ್ಲೊಮಾ ಪಡೆದಿದ್ದು ಲಲಿತ ಕಲಾ ಅಕಾಡೆಮಿಯ ಪ್ರದರ್ಶನಗಳು ಸೇರಿದಂತೆ ಅನೇಕ ಕಲಾ ಪ್ರದರ್ಶನದಲ್ಲಿ ಭಾಗವಹಿಸಿದ್ದಾರೆ. ಮೈಸೂರಿನಲ್ಲಿ ಜನಿಸಿದ ಶಿವರುದ್ರಯ್ಯ ಎಂ.ಎಸ್. ಅವರು ಮೈಸೂರಿನ ಚಾಮರಾಜೇಂದ್ರ ತಾಂತ್ರಿಕ ಶಾಲೆಯಲ್ಲಿ ಡಿಪ್ಲೊಮಾ ಪಡೆದು ಮೈಸೂರು ದಸರಾ, ಗೋವಾದ ಕಲಾ ಅಕಾಡೆಮಿಗಳಲ್ಲಿ ನಡೆದ ಕಲಾ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ.

ಕಲಬುರಗಿಯ **ಅಶೋಕ್** ಅವರು ತುಮಕೂರಿನ ರವೀಂದ್ರ ಕಲಾನಿಕೇತನದಲ್ಲಿ ಉಪನ್ಯಾಸಕರಾಗಿದ್ದಾರೆ. ಚಿತ್ರಕಲೆಯಲ್ಲಿ ಪದವಿಯನ್ನು ಪಡೆದಿದ್ದು, ಕೊಲ್ಕತ್ತಾ, ದೆಹಲಿ, ಮದ್ರಾಸ್, ನಾಗಪುರ ಸೇರಿದಂತೆ ಅನೇಕ ಕಡೆಗಳಲ್ಲಿ ಚಿತ್ರಕಲಾ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ರಾಜ್ಯದ ಹಲವಾರು ಕಲಾ ಶಿಬಿರಗಳಲ್ಲಿ ಪಾಲ್ಗೊಂಡಿದ್ದರು.

ಹಿರಿಯ ವ್ಯಂಗ್ಯ ಚಿತ್ರ ಕಲಾವಿದರಾದ, 'ಕಾರ್ಟೂನ್ ಪ್ರಸನ್ನ' ಎಂದೇ ಖ್ಯಾತರಾಗಿರುವ **ಪ್ರಸನ್ನಮೂರ್ತಿ, ಗುಜ್ಜಾರ್,** ಸಿ.ಎಸ್.ಗುಬ್ಬಿ, **ಕೋಟೆಕುಮಾರ್, ಡೇವಿಡ್, ಮಲ್ಲಿಕ್, ಸುರೇಂದ್ರ, ಡಾ॥ರಮೇಶ್ ಬಾಬು, ಮಧು ಕ್ಯಾತ್ಸಂದ್ರ, ಮುಕುಂದ** ಮುಂತಾದವರು ಈ ಜಿಲ್ಲೆಯವರು. ಇದೇ ರೀತಿ ಅನೇಕ ರೀತಿಯ ಗೌರವ ಸಮ್ಮಾನಗಳಿಗೆ ಪಾತ್ರವಾಗಿ, ಚಿತ್ರಕಲಾ ಪ್ರದರ್ಶನ ಏರ್ಪಡಿಸಿ, ಬಹುಮಾನ ಪಡೆದು ಚಿತ್ರಕಲಾ ಕ್ಷೇತ್ರದಲ್ಲಿ ಹೆಮ್ಮೆಗೆ ಪಾತ್ರರಾದವರು **ಅಕ್ರಂಪಾಷ, ಅಮರನಾಥ್, ಬಸವರಾಜು, ಎಂ.ಎನ್.ನರಸಿಂಹಮೂರ್ತಿ, ಮೇರಿ ಡೇವಿಡ್, ಕೆ.ಸಿ.ಎಸ್.ಪ್ರಸನ್ನ, ಎನ್.ನರಸಿಂಹಮೂರ್ತಿ, ತ್ರಿವೇಣಿ,** ಸಿ.ಎಸ್. **ದೇವರಾಜ್,** ಸಿಲ್ಕಿ ಸಿಸಿಲಿಯಾ, **ಸಿ.ಕೆ.ನಾರಾಯಣರಾವ್, ರೂಪಾ ಮಹೇಶ್, ಹೆಚ್**.ಎಸ್.ನಾಗರಾಜು, **ಚನ್ನವೀರಸ್ವಾಮಿ, ಹಿಪ್ಪರಗಿ, ಎಂ.ಸಿ.ಶಿವಣ್ಣ ಪ್ರೇಮಕುಮಾರ್, ಕೆ.ಎಲ್.ಭಾರತೀಗುಪ್ತ** ಮುಂತಾದವರನ್ನು ಹೆಸರಿಸಬಹುದು.

## ವಾಸ್ತುಶಿಲ್ಪ

ತುಮಕೂರು ಜಿಲ್ಲೆ ಸಾಂಸ್ಕೃತಿಕವಾಗಿ ಬಹಳ ಶ್ರೀಮಂತವಾಗಿದ್ದು, ಮಹತ್ವದ ಸ್ಥಾನವನ್ನು ಪಡೆದಿದೆ. ವಾಸ್ತುಶೈಲಿಗೆ ಸಾಕ್ಷಿಯಾಗಿ ಅನೇಕ ನಿರ್ಮಾಣಗಳು, ದೇವಾಲಯಗಳು, ಬಸದಿಗಳು, ಕೋಟೆ–ಕೊತ್ತಲಗಳು, ಶಾಸನಗಳು ವಿಪುಲವಾಗಿ ದೊರೆಯುತ್ತವೆ. ಇವುಗಳನ್ನು ವಿವಿಧ ರಾಜಮನೆತನಗಳ ಹಿನ್ನೆಲೆಯಲ್ಲಿ ಗಂಗ, ಹೊಯ್ಸಳ, ವಿಜಯನಗರ ಮತ್ತು ಪಾಳೆಯಗಾರರ ಕಾಲದವೆಂದು ವಿಂಗಡಿಸಬಹುದು.

**ಗಂಗರ ಕಾಲದ ವಾಸ್ತುಶಿಲ್ಪ:** ಈ ಜಿಲ್ಲೆಯಲ್ಲಿ ದೊರಕುವ ಪ್ರಾಚೀನ ದೇವಾಲಯಗಳೆಂದರೆ ಗಂಗರ ಕಾಲದ ದೇವಾಲಯಗಳು ಅರಳುಗುಪ್ಪೆ, ನೊಣವಿನಕೆರೆ, ಕುಣಿಗಲ್, ತಂಡಗ ಮುಂತಾದ ಕಡೆ ಗಂಗರ ಕಾಲದ ದೇವಾಲಯಗಳು ಕಂಡುಬರುತ್ತವೆ.

ತುರುವೇಕೆರೆ ತಾಲೂಕಿನ ನೊಣವಿನಕೆರೆಯ ಶಾಸನಗಳಿಂದ ಇಲ್ಲಿ ನೊಣಬೇಶ್ವರ, ಗರ್ಗೇಶ್ವರ, ಶಾಂತೀಶ್ವರ, ಚೋಳೇಶ್ವರ ಮತ್ತು ಕಲ್ಲೇಶ್ವರ ಎಂಬ ಐದುಶಿವ ದೇವಾಲಯಗಳಿದ್ದ ಅಂಶ ವೇದ್ಯವಾಗುತ್ತದೆ. ಇವುಗಳಲ್ಲಿ ನೊಣಬೇಶ್ವರ ಮತ್ತು ಗರ್ಗೇಶ್ವರ ದೇವಾಲಯಗಳು ಬಹು ಪ್ರಾಚೀನ ಶೈಲಿಯಲ್ಲಿವೆ. ನೊಣಬೇಶ್ವರ ದೇವಾಲಯವು ಗರ್ಭಗೃಹ, ತೆರೆದ ಅಂತರಾಳ ಮತ್ತು ನವರಂಗವನ್ನು ಹೊಂದಿದ್ದು, ಅಂತರಾಳದ ತೊಲೆಗೆ ಆಧಾರವಾಗಿ ಎರಡು ರುದ್ರಕಾಂತ ಕಂಬಗಳನ್ನು ನಿಲ್ಲಿಸಲಾಗಿದೆ. ನವರಂಗದಲ್ಲಿಯೂ ಇದೇ ರೀತಿಯ ನಾಲ್ಕು ಕಂಬಗಳಿದ್ದು, ನವರಂಗದ ಮುಚ್ಚಿಕೆ, ಬಾಗಿಲುವಾಡ ಬಹಳ ಸುಂದರವಾಗಿವೆ. ಬಾಗಿಲುವಾಡದ ಇಕ್ಕೇಲದಲ್ಲಿ ಎಂಟುಮಾಲೆಯ ಉಬ್ಬುಕಂಬವನ್ನು ಹೊಂದಿದ್ದು, ಕಮಲದಳದ ಅಲಂಕಾರದಿಂದ ಕೂಡಿದೆ. ಗರ್ಗೇಶ್ವರ ದೇವಾಲಯವೂ ನೊಣಬೇಶ್ವರ ದೇವಾಲಯವನ್ನೇ ಹೋಲುತ್ತಿದ್ದು ಸರಳವಿದ್ದರೂ ಸುಂದರವಾಗಿದೆ. ತಂಡಗದ ಮಲ್ಲೇಶ್ವರ ದೇವಾಲಯ ಕ್ರಿ.ಶ.ಸುಮಾರು ೧೦ನೇ ಶತಮಾನಕ್ಕೆ ಸೇರಿದುದ್ದಾಗಿದ್ದು, ನೊಣವಿನಕೆರೆಯ ನೊಣಬೇಶ್ವರ ದೇವಾಲಯವನ್ನು ಹೋಲುತ್ತದೆ. ನವರಂಗವು ೧೬ ಕಂಬಗಳನ್ನು ಹೊಂದಿದ್ದು ಭುವನೇಶ್ವರಿಯಲ್ಲಿ ವಿಸ್ತಾರವಾದ ಒಂದೇ ಕಲ್ಲಿನಲ್ಲಿ ಪದ್ಮವನ್ನು ಬಿಡಿಸಲಾಗಿದೆ. ಗಣಪತಿ, ಪಾರ್ವತಿ ಹಾಗೂ ಅಂತರಾಳದಲ್ಲಿ ನಂದಿಯ ಸುಂದರವಾದ ವಿಗ್ರಹಗಳಿವೆ.

ತುರುವೇಕೆರೆ ತಾಲೂಕಿನ ಹುಲಿಕಲ್ಲು ಗ್ರಾಮದ ಹಂಸೇಶ್ವರ ದೇವಾಲಯವು ಗಂಗರ ಕಾಲದ್ದಾಗಿದ್ದು, ಕಾಲಾಂತರದಲ್ಲಿ ಬದಲಾವಣೆಯನ್ನು ಹೊಂದಿದೆ. ನವರಂಗದಲ್ಲಿ ಹದಿನಾರು ಮೂಲೆಯ ಸುಂದರ ಕಂಬಗಳಿದ್ದು, ಆಕರ್ಷಕವಾದ ನಾಗಲಿಂಗ ಮತ್ತು ಜನಾರ್ದನನ ಶಿಲ್ಪಗಳಿವೆ. ಮಧುಗಿರಿ ತಾಲೂಕು ಶ್ರಾವಂಡಹಳ್ಳಿ ಮತ್ತು ಕೋರ ಹೋಬಳಿಯ ಹಿರೇಗುಂಡಗಲ್ ಗಳಲ್ಲಿ ಗಂಗರ ಶ್ರೀಪುರುಷನ ಕಾಲದ ಹತ್ತಾರು ವೀರಗಲ್ಲುಗಳಿವೆ. ವೀರಗಲ್ಲುಗಳು ಶಿಲ್ಪದೃಷ್ಟಿಯಿಂದ ಬಹಳ ಮಹತ್ವದ್ದಾಗಿದೆ. ಅವುಗಳಲ್ಲಿನ ವೀರರ ಮುಡಿ, ಉಡುಪು, ಕತ್ತಿ ಗುರಾಣಿಗಳು ವಿಶೇಷವಾದ ವಿನ್ಯಾಸವನ್ನು ಹೊಂದಿವೆ. ತುಮಕೂರು ಬಳಿಯ ಹೆಗ್ಗೆರೆಯಲ್ಲೂ ಗಂಗರ ಕಾಲದ ಸುಂದರ ವೀರಗಲ್ಲುಗಳಿವೆ. ನೊಣವಿನಕೆರೆ ಬಳಿಯ ಆಲ್ಬೂರು ಗ್ರಾಮದಲ್ಲಿ ಸುಮಾರು ಒಂಬತ್ತನೇ ಶತಮಾನದ ಏಳು ಅಡಿ ಎತ್ತರದ ಅನೇಕ ಹಂತಗಳುಳ್ಳ ವೀರಗಲ್ಲಿನಲ್ಲಿ ಸುಂದರವಾದ ಆನೆ ಹಾಗೂ ಯುದ್ಧದ ಚಿತ್ರವರ್ಣನೆಗಳಿವೆ. ಕಿಬ್ಬನಹಳ್ಳಿ ತಿರುವು, ಹೊನ್ನುಡಿಕೆಯ ಬಳಿಯ ಜಲಗಾರ ದಿಬ್ಬದಲ್ಲಿ ಗಂಗರ ದೇವಾಲಯದ ಅವಶೇಷಗಳು ದೊರಕಿವೆ.

ತಿಪಟೂರು ತಾಲೂಕಿನ ಅರಳಗುಪ್ಪೆಯ ಕಲ್ಲೇಶ್ವರ ದೇವಾಲಯವು ಅನೇಕ ವಿಶೇಷಗಳಿಂದ ಪ್ರಖ್ಯಾತಿ ಪಡೆದಿದೆ. ಊರಿನ ಕೆರೆಯ ಬಳಿಯಿರುವ ಈ ದೇವಾಲಯದ ಕಾಲ ಕ್ರಿ.ಶ ೯೫೦. ಇದು ಗರ್ಭಗೃಹ, ತೆರೆದ ಅರ್ಧಮಂಟಪ ಮತ್ತು ನವರಂಗವನ್ನು ಹೊಂದಿದೆ. ಈ ದೇವಾಲಯದ ಉತ್ತರ ಮತ್ತು ದಕ್ಷಿಣದ ಗೋಡೆಗಳಲ್ಲಿ ಸುಂದರವಾದ ಜಾಲಂದ್ರಗಳಿವೆ. ನವರಂಗದಲ್ಲಿ ನಾಲ್ಕು ಕಂಬಗಳು ಚತುರ್ರಸ ಮತ್ತು ವೃತ್ತಾಕಾರವಾಗಿದ್ದು ಪದ್ಮಫಲಕವನ್ನು ಹೊಂದಿವೆ. ಒಳಗೋಡೆಯಲ್ಲಿ ಇದೇ ಮಾದರಿಯ ಉಬ್ಬು ಕಂಬಗಳಿವೆ. ಬಾಗಿಲುವಾಡ ಅತ್ಯಂತ ಸುಂದರವಾಗಿದ್ದು, ಪದ್ಮನಿಧಿ, ಶಂಖನಿಧಿಗಳ ಸಂಕೇತವಾಗಿ ಪದ್ಮ, ಶಂಖಗಳಲ್ಲದೇ ಬಾಗಿಲುವಾಡದ ಮೇಲೆ ಕೀರ್ತಿಮುಖವನ್ನೂ ಬಿಡಿಸಲಾಗಿದೆ. ಇದರ ಕೆಳಭಾಗದಲ್ಲಿ ಕುಬ್ಜರನ್ನು, ಬಳ್ಳಿಗಳ ಅಲಂಕಾರವನ್ನೂ ಬಿಡಿಸಲಾಗಿದೆ. ಬಾಗಿಲವಾಡದಲ್ಲಿ ಗಂಗೆ-ಯಮುನೆಯರ ಶಿಲ್ಪವನ್ನು ಬಿಡಿಸಿದ್ದು, ಮೇಲೆ ಗಜಲಕ್ಷ್ಮಿಯ ಲಲಾಟ ಬಿಂಬವಿದೆ. ಮುಂಬದಿಯ ಮಂಟಪದಲ್ಲಿ ಅತ್ಯಂತ ಸುಂದರವಾದ ಉಮಾ ಮಹೇಶ್ವರರನ್ನು ಬಿಡಿಸಲಾಗಿದ್ದು, ವಿವರವಾದ ಕೆತ್ತನೆಯಿದೆ. ನವರಂಗದ ಭುವನೇಶ್ವರಿಯಲ್ಲಿ ನಾಟ್ಯ ಶಿವ ಹಾಗೂ ಅಷ್ಟದಿಕ್ಪಾಲಕರ ಉಬ್ಬುಶಿಲ್ಪವಿದೆ. ಇದು ಬಳಪದ ಕಲ್ಲಿನದ್ದು. ಅತ್ಯಂತ ಸುಂದರ ಹಾಗೂ ಅಪರೂಪದ ಶಿಲ್ಪಗಳಲ್ಲಿ ಒಂದಾಗಿದ್ದು ಅದರಿಂದಾಗೆ ಈ ದೇವಾಲಯವು ಪ್ರಸಿದ್ಧವಾಗಿದೆ. ದೇವಾಲಯದ ಹೊರಗೆ ಗಂಗರ ಕಾಲದ ಎರಡು ವೀರಗಲ್ಲುಗಳಿವೆ. ದೇವಾಲಯದ ಎಡ-ಬಲಗಳಲ್ಲಿ ಇನ್ನೂ ಮೂರು ಚಿಕ್ಕ ಶಿವದೇವಾಲಯಗಳಿವೆ.

ಕುಣಿಗಲ್ಲಿನ ಸೋಮೇಶ್ವರ ದೇವಾಲಯ ಗಂಗರ ಕಾಲದ್ದಾಗಿದ್ದು, ಅಲ್ಲಿ ಮಹಿಷಮರ್ದಿನಿ, ಸಪ್ತಮಾತೃಕಾ ಶಿಲ್ಪಗಳಿದ್ದು, ಇತ್ತೀಚೆಗೆ ದೇವಾಲಯದ ಜೀರ್ಣೋದ್ಧಾರ ಮಾಡಲಾಗಿದ್ದು, ಮೂಲ ಸ್ವರೂಪದಲ್ಲಿ ಉಳಿದಿಲ್ಲ. ಶಿರಾ ತಾಲೂಕಿನ ಬರಗೂರು ಗ್ರಾಮದ ಈಶ್ವರ ದೇವಾಲಯವು ಹೊರಗೆ ಬದಲಾಗಿದ್ದರೂ, ಒಳಗೆ ಇನ್ನೂ ಗಂಗರ ಶೈಲಿಯಲ್ಲೇ ಉಳಿದಿದೆ. ಇದನ್ನು ನೊಳಂಬರ ಅರಸ ಮಹೇಂದ್ರ ಕಟ್ಟಿಸಿದಂತೆ ತಿಳಿದುಬರುತ್ತದೆ. ಗರ್ಭಗೃಹ, ತೆರೆದ ಅಂತರಾಳ, ನವರಂಗ ಮಂಟಪ, ಮುಖಮಂಟಪ ಮತ್ತು ನಂದಿಮಂಟಪಗಳನ್ನು ಇದು ಹೊಂದಿದೆ. ಬಾಗಿಲುವಾಡದ ಉಪಕಂಬದ ಮೇಲಿನ ಬೋದಿಗೆಗಳು ತರಂಗಗಳಿಂದ ಕೂಡಿವೆ. ನಂದಿಮಂಟಪವು ೧೬ ಕಂಬಗಳನ್ನು ಹೊಂದಿದೆ. ನವರಂಗದ ಕಂಬಗಳು ಕುಂಭ, ಮುಚ್ಚಳ, ಸರಳಬೋದಿಗೆಯನ್ನು ಹೊಂದಿವೆ. ನವರಂಗದಲ್ಲಿ ನಾಲ್ಕು ಕೈಗಳ ಮಹಿಷಮರ್ದಿನಿ ಶಿಲ್ಪವಿದೆ. ಪಾವಗಡ ತಾಲೂಕಿನ ನಿಡುಗಲ್ಲಿನಲ್ಲಿ ಕಲ್ಯಾಣದ ಚಾಲುಕ್ಯ ದೊರೆ ಇಮ್ಮಡಿ ಜಗದೇಕಮಲ್ಲನ ಕಾಲದ ನಗರೇಶ್ವರ ದೇವಾಲಯವಿದೆ. ಇದರ ನಿರ್ಮಾಣ ಕಾಲ ಕ್ರಿ.ಶ.೧೧೧೫. ಇದು ಹೊಯ್ಸಳ ಶೈಲಿಯ ದೇವಾಲಯವಾಗಿದೆ. ಸರಳ ಶೈಲಿಯಲ್ಲಿರುವ ಇದು ವಿಶಾಲವಾದ ನವರಂಗವನ್ನು ಹೊಂದಿದ್ದು, ಕಾಲಾನಂತರ ಈ ಗುಡಿಯ ಮೂಲ ಸ್ವರೂಪವನ್ನು ಬದಲಾಯಿಸಲಾಗಿದೆ. ಈಗ ಬಹಳಷ್ಟು ಶಿಥಿಲವಾಗಿದೆ.

## ಹೊಯ್ಸಳರ ಕಾಲದ ವಾಸ್ತುಶಿಲ್ಪ

ತುಮಕೂರು ಜಿಲ್ಲೆಯ ಅರಳಗುಪ್ಪೆಯಲ್ಲಿರುವ ಹೊಯ್ಸಳ ಶೈಲಿಯ ಅತ್ಯುತ್ತಮ ಮಾದರಿಯ ಏಕಕೂಟ ಕೇಶವ ದೇವಾಲಯವು, ಸುಮಾರು ೧೩ನೇ ಶತಮಾನದ ಮಧ್ಯಭಾಗದಲ್ಲಿ ನಿರ್ಮಾಣವಾಗಿದೆ. ನಾಲ್ಕು ಅಡಿ ಎತ್ತರದ ನಕ್ಷತ್ರಾಕಾರದ ಜಗಲಿಯ ಮೇಲಿರುವ ಈ ದೇವಾಲಯವನ್ನು ಆನೆಗಳು ಹೊತ್ತಿರುವಂತೆ ನಿರ್ಮಿಸಲಾಗಿದೆ. ಹೊರಗೋಡೆಯ ಮೇಲೆ ಪೌರಾಣಿಕ ಶಿಲ್ಪಗಳ ಸಾಲಿದೆ. ಪ್ರವೇಶದ್ವಾರದ ದಕ್ಷಿಣ ಭಾಗದ ಗೋಡೆಯಲ್ಲಿ ರಾಮಾಯಣದ ಕಥೆ ಆರಂಭವಾಗಿ ಸುಖನಾಸಿಯ ಭಾಗಕ್ಕೆ ಮುಗಿಯುತ್ತದೆ. ಭಾಗವತದಲ್ಲಿನ ಕೃಷ್ಣ ಲೀಲೆಗಳನ್ನು ಚಿತ್ರಿಸಲಾಗಿದೆ. ಮಕರ, ಹಂಸಗಳ

ಶಿಲ್ಪಗಳೂ ಇವೆ. ಮುಂಭಾಗದ ಶಿಖರದ ಕೆಳಗೆ ಯಕ್ಷ, ಸಿಂಹಗಳಿವೆ. ಕಟಾಂಜನ, ಜಾಲಂಧ್ರಗಳಲ್ಲಿ ಸುಂದರ ಶಿಲ್ಪಗಳನ್ನು ಮೂಡಿಸಲಾಗಿದೆ. ಕೆಲವು ನರ್ತನ ವಿಗ್ರಹಗಳ ಕೆಳಗೆ ಶಿಲ್ಪಿಗಳ ಹೆಸರಿದೆ. ಆಗ್ನೇಯ ದಿಕ್ಕಿನಿಂದ ಅಮರನಾರಾಯಣ, ಲಕ್ಷ್ಮೀ, ನೃತ್ಯಗಣೇಶ, ಮೋಹಿನಿ, ಸರಸ್ವತಿ, ಅಕ್ಷಮಾಲಾ ಹಿಡಿದಿರುವ ಹರಿಹರನನ್ನು ಹೊನ್ನೋಜ ಎಂಬ ಶಿಲ್ಪಿಯು ನಿರ್ಮಿಸಿದ್ದಾನೆ. ಇಷ್ಟೇ ಅಲ್ಲದೆ ಅಲ್ಲಿ ವಿಷ್ಣು, ವೇಣುಗೋಪಾಲ, ಕೃಷ್ಣ, ಲಕ್ಷ್ಮೀನರಸಿಂಹ, ರಾಮ, ವಿಷ್ಣು, ಯೋಗನಾರಾಯಣ, ಉಗ್ರನರಸಿಂಹ ಮುಂತಾದ ಶ್ರೀವೈಷ್ಣವ ವಿಗ್ರಹಗಳಿವೆ. ಇದರ ಶಿಖರ ನಾಲ್ಕು ಅಂತಸ್ತಿನಲ್ಲಿದೆ. ಇದರ ಮುಂಭಾಗದಲ್ಲಿ ಸಳನ ವಿಗ್ರಹವಿಲ್ಲ. ನವರಂಗದ ಪಶ್ಚಿಮ ಗೋಡೆಯ ಗೂಡುಗಳಲ್ಲಿ ದಕ್ಷಿಣಕ್ಕೆ ಗಣೇಶ, ಉತ್ತರಕ್ಕೆ ಮಹಿಷ ಮರ್ದಿನಿ ವಿಗ್ರಹವಿದೆ. ಅಷ್ಟಕೋನದ ಭುವನೇಶ್ವರಿಯಲ್ಲಿ ಜೋತಾಡುವ ಹೂವಿನ ಮೊಗ್ಗಿನ ಶಿಲ್ಪವಿದೆ. ಸುಖನಾಸಿಯ ದ್ವಾರದಲ್ಲಿರುವ ಜಾಲಂದ್ರ, ದ್ವಾರಪಾಲಕರು, ಅಮರನಾರಾಯಣ ಹಾಗೂ ಸಿಂಹ ಶಿಲ್ಪಗಳೂ ಸುಂದರವಾಗಿವೆ. ಗರ್ಭಗುಡಿಯಲ್ಲಿ ದಶಾವತಾರ ಪ್ರಭಾವಳಿಯನ್ನುಳ್ಳ ಕೇಶವನ ಚಿಕ್ಕ ವಿಗ್ರಹವಿದೆ. ಆದರೆ ಈಗ ನವರಂಗದಲ್ಲಿರುವ ಕೇಶವ ವಿಗ್ರಹವೇ ಮೂಲ ವಿಗ್ರಹವೆಂದು ತೋರುತ್ತದೆ.

ತಿಪಟೂರು ತಾಲೂಕಿನಲ್ಲಿರುವ ವಿಘ್ನಸಂತೆಯ ಪ್ರಾಚೀನ ಹೆಸರು ಇಗಣಸಂತೆ ಎಂದಿದ್ದು, ಈ ಗ್ರಾಮದ ಲಕ್ಷ್ಮೀನರಸಿಂಹ ದೇವಾಲಯ ತ್ರಿಕೂಟಾಚಲವಾಗಿದ್ದು, ಕ್ರಿ.ಶ.೧೨೮೬ರಲ್ಲಿ ನಿರ್ಮಾಣವಾಗಿದೆ. ಇದನ್ನು ಸ್ಥಳೀಯ ಅಧಿಕಾರಿಗಳಾಗಿದ್ದ ಮೂವರು ಸಹೋದರರು ನಿರ್ಮಿಸಿದರು. ನಕ್ಷತ್ರಾಕಾರದ ಜಗುಲಿಯ ಮೇಲೆ ನಿರ್ಮಾಣಗೊಂಡಿರುವ ಸುಂದರವಾದ ದೇವಾಲಯವಿದು, ನವರಂಗದಲ್ಲಿ ನಾಲ್ಕು ಕಂಬಗಳಿದ್ದು, ಮುಂದಿನ ಮುಖಮಂಟಪದಲ್ಲಿ ಕಟಾಂಜನ ಜಗತಿಗಳಿವೆ. ಹೊರಗೋಡೆಯ ತಳಭಾಗದ ಐದು ಪಟ್ಟಿಕೆಗಳಲ್ಲಿ ಶಿಲ್ಪಸಾಲುಗಳಿವೆ. ಲತೆ, ಕಂಬ, ಮಕರ, ವೃಷ್ಟಪಟ್ಟಿಕೆಗಳಿವೆ. ಶಿಖರವು ಶಿಲ್ಪ ಸಾಲುಗಳಿಂದ ಸುಂದರವಾಗಿದೆ. ದೇವಾಲಯದ ಮುಖಮಂಟಪ ಬಹಳ ಸೊಗಸಾಗಿದೆ. ಇಲ್ಲಿನ ಕಂಬಗಳು ಹೊಯ್ಸಳ ಮಾದರಿಯ ಅತ್ಯುತ್ತಮ ಕಂಬಗಳಾಗಿವೆ. ಕಂಬಗಳ ಶೀರ್ಷದಲ್ಲಿ ಸಿಂಹಮುಖವನ್ನು ಬಿಡಿಸಲಾಗಿದೆ. ಮೂಲೆಗಳಲ್ಲಿರುವ ಆನೆಗಳ ಮೇಲೆ ಸಿಂಹಗಳು ಸವಾರಿ ನಡೆಸಿವೆ. ಮೇಲ್ಛಾವಣಿಯಲ್ಲೂ ಅಷ್ಟದಿಕ್ಪಾಲಕರು, ಗಂಧರ್ವರು, ಗರುಡ ಇತ್ಯಾದಿ ಶಿಲ್ಪಗಳಿವೆ. ಕೈಪಿಡಿ ಗೋಡೆಯಲ್ಲಿ ನೃತ್ಯ ಗಣೇಶನ ವಿಗ್ರಹವಿದೆ.

ನವರಂಗದ ನಾಲ್ಕು ಕಂಬ ಹಾಗೂ ತೊಲೆಗಳು ಲತಾಪಟ್ಟಿಕೆಗಳಿಂದ ಅಲಂಕೃತವಾಗಿವೆ. ನವರಂಗದ ದಕ್ಷಿಣದ ಗೋಡೆಯಲ್ಲಿ ವಿದ್ಯಾಗಣಪತಿ, ಮಹಿಷಮರ್ದಿನಿ ವಿಗ್ರಹಗಳಿವೆ. ದಕ್ಷಿಣಗರ್ಭಗುಡಿಯ ದ್ವಾರದಲ್ಲಿ ದ್ವಾರಪಾಲಕರು, ಅವುಗಳ ಮೇಲ್ಭಾಗದಲ್ಲಿ ವೇಣುಗೋಪಾಲನ ವಿಗ್ರಹವಿದೆ. ಪ್ರಭಾವಳಿಯಲ್ಲಿ ದಶಾವತಾರಗಳಿವೆ. ವಿಗ್ರಹ ಅತ್ಯಂತ ನಾಜೂಕು ಕೆತ್ತನೆಯಿಂದ ಕೂಡಿದೆ. ಉತ್ತರ ಗರ್ಭಗುಡಿಯ ದ್ವಾರದ ಮೇಲೆ ಯೋಗನರಸಿಂಹ, ಲಕ್ಷ್ಮೀನರಸಿಂಹ, ಪ್ರಹ್ಲಾದ, ಆನೆ, ತೋರಣಗಳ ಚಿತ್ರಣವಿದೆ. ಪಶ್ಚಿಮದ ಗರ್ಭಗುಡಿಯ ಮುಂದೆ ಮಾತ್ರ ನಾಗಶಿಲ್ಪವಿದೆ. ಇಲ್ಲಿನ ದ್ವಾರದ ಮೇಲೆ ಲಕ್ಷ್ಮೀನಾರಾಯಣನ ವಿಗ್ರಹವಿದೆ. ಗರ್ಭಗುಡಿಯಲ್ಲಿ ಐದು ಅಡಿ ಎತ್ತರದ ಕೇಶವ ವಿಗ್ರಹವಿದೆ. ಇದೇ ಊರಿನ ಕಾಲುವೆ ಬಳಿಯಿರುವ ಬಾಲಲಿಂಗೇಶ್ವರ ಗುಡಿ ತ್ರಿಕೂಟಾಚಲವಾಗಿದ್ದು ಸರಳ ಶೈಲಿಯಲ್ಲಿದೆ. ಶಿಖರವು ಮೂರು ಹಂತದಲ್ಲಿದ್ದು ಸುಂದರವಾಗಿದೆ. ಶಿಖರದ ಮುಂದೆ ಸಳನ ಶಿಲ್ಪವಿದೆ. ಗರ್ಭಗುಡಿಯಲ್ಲಿ ಕಿರು ಶಿವಲಿಂಗವಿದ್ದು, ಸುಖನಾಸಿಯ ಭುವನೇಶ್ವರಿಯಲ್ಲಿ ಪದ್ಮವಿದೆ. ಉತ್ತರ ಗರ್ಭಗುಡಿಯಲ್ಲೂ ವೀರಭದ್ರ, ಗಣೇಶ, ಕೇಶವ ಹಾಗೂ ಅನೇಕ ನಾಗರಕಲ್ಲುಗಳಿವೆ. ಇದೇ ಗ್ರಾಮದ ಬನಶಂಕರಿ ದೇವಾಲಯದ ವಿಗ್ರಹ ಹೊಯ್ಸಳರದ್ದಾಗಿದ್ದು, ಬಹಳ ಸುಂದರ ಶೈಲಿಯಲ್ಲಿದ್ದು ಕಟ್ಟಡ ಇತ್ತೀಚಿನದಾಗಿದೆ.

ತಿಪಟೂರು ತಾಲೂಕಿನ ಹೆಗ್ಗೆರೆಯಲ್ಲಿ ಹೊಯ್ಸಳ ಶೈಲಿಯ ನಾಲ್ಕು ದೇವಾಲಯಗಳಿವೆ. ಕಲ್ಲೇಶ್ವರ ದೇವಾಲಯ ದೊಡ್ಡದಾಗಿದ್ದು ಗರ್ಭಗೃಹ, ಸುಖನಾಸಿ ಮತ್ತು ನವರಂಗವನ್ನು ಹೊಂದಿದೆ. ಈ ಗುಡಿಯ ಎಡಬಲಗಳಲ್ಲಿರುವ ಗುಡಿಗಳಿಗೆ ಗರ್ಭಗುಡಿ ಮತ್ತು ಸುಖನಾಸಿ ಮಾತ್ರವಿದೆ. ದೇವಾಲಯದ ಬಾಗಿಲುವಾಡದಲ್ಲಿ ಅತ್ಯಂತ ಸುಂದರವಾದ ಗಜಲಕ್ಷ್ಮಿ ಶಿಲ್ಪವಿದೆ. ನವರಂಗದ ಮಧ್ಯಭಾಗದ ಭುವನೇಶ್ವರಿಯಲ್ಲಿ ಇಳಿಬಿದ್ದ ತಾವರೆಮೊಗ್ಗಿನ ಸುಂದರ ವಿನ್ಯಾಸವಿದೆ. ಈ ದೇವಾಲಯದಲ್ಲಿ ಕ್ರಿ.ಶ ೧೨೩೨ರ ಕಾಲದ ವರ್ಣಚಿತ್ರಗಳಿದ್ದು, ದೇವಾಲಯವೂ ಇದೇ ಅವಧಿಯದಾಗಿದೆ. ನವರಂಗದ ಒಳಗೆ ಸರಸ್ವತಿ, ನಾಗ ಹಾಗೂ ವಿಷ್ಣು, ಮಹಿಷಾಸುರಮರ್ದಿನಿ ಶಿಲ್ಪಗಳಿವೆ. ಇಲ್ಲಿನ ಸರಸ್ವತಿಯ ಶಿಲ್ಪದ ಮೇಲೆ ಶಾಸನವೊಂದಿದೆ. ಇಲ್ಲಿನ ಗಳಗೇಶ್ವರ ದೇವಾಲಯದ ಸುಖನಾಸಿಯ ಬಾಗಿಲುವಾಡದ ಮೇಲೆ ಕುಸುರಿಕಲೆಯ ಕಿರುಶಿಲ್ಪಗಳಿದ್ದು, ಎಡ–ಬಲಗಳಲ್ಲಿ ರಾಮಾಯಣದ ದೃಶ್ಯಗಳನ್ನು ನಿರೂಪಿಸಲಾಗಿದೆ. ನವರಂಗದ ಭುವನೇಶ್ವರಿಗಳೂ ಕೂಡ ಬಹಳ ಸೂಕ್ಷ್ಮ ಕಲೆಯಿಂದ

ಕೂಡಿವೆ. ಮಧ್ಯದ ಭುವನೇಶ್ವರಿಯ ನಡುವೆ ತಾಂಡವೇಶ್ವರ ನೃತ್ಯ ಮಾಡುತ್ತಿದ್ದು ಅದರ ಮೇಲಿನ ಹಂತದಲ್ಲಿ ಗಣಪತಿ, ಸುಬ್ರಹ್ಮಣ್ಯರಿದ್ದಾರೆ. ಇದರ ಮೇಲಿನ ಹಂತದಲ್ಲಿ ನಂದಿ, ಬ್ರಹ್ಮ, ಮತ್ತು ವಿಷ್ಣುಮೂರ್ತಿಗಳಿವೆ. ಇಲ್ಲಿನ ವಿಶೇಷವೆಂದರೆ ಎಲ್ಲಾ ಶಿಲ್ಪಗಳೂ ನೃತ್ಯಭಂಗಿಯಲ್ಲಿವೆ. ಎಂಟು ದಿಕ್ಕಿಗೂ ಹೆಡೆಯೆತ್ತಿರುವ ಸರ್ಪಗಳನ್ನು ಬಿಡಿಸಲಾಗಿದೆ. ಈ ದೇವಾಲಯದ ಗರ್ಭಗೃಹವು ದೊಡ್ಡಗದ್ದವಳ್ಳಿಯ ದೇವಾಲಯವನ್ನು ಹೋಲುತ್ತದೆ.

ತುರುವೇಕೆರೆ ತಾಲೂಕಿನ ತಂಡಗ ಶಾಲಿವಾಹನನ ಜನ್ಮಸ್ಥಳವೆಂಬ ಐತಿಹ್ಯವಿದೆ. ಶಾಸನಗಳಲ್ಲಿ ಈ ಊರನ್ನು ಶಂಕರನಾರಾಯಣಪುರವೆಂದು ಕರೆಯಲಾಗಿದೆ. ಇಲ್ಲಿನ ಚನ್ನಕೇಶವ ದೇವಾಲಯ ಸುಮಾರು ೧೩ನೇ ಶತಮಾನದ ಹೊಯ್ಸಳ ರಚನೆಯಾಗಿದೆ. ಇದಕ್ಕೆ ನಕ್ಷತ್ರಾಕಾರದ ಜಗಲಿಯಿಲ್ಲ. ಪೀಠದಲ್ಲಿ ಐದು ಪಟ್ಟಿಕೆಗಳಿವೆ. ಗೋಡೆಯ ಮೇಲೆ ಸರಳ ಕಂಬಗಳ ರಚನೆಯ ಮಧ್ಯೆ ಕಿರುಗೋಪುರಗಳೂ ಇವೆ. ಗರ್ಭಗುಡಿಯ ಗೋಡೆಯ ಮೇಲೆ ವಿಷ್ಣು, ಉಗ್ರನರಸಿಂಹ, ಬ್ರಹ್ಮ ಮತ್ತು ಉಮಾಮಹೇಶ್ವರರ ವಿಗ್ರಹಗಳಿವೆ. ನವರಂಗದಲ್ಲಿ ಸುಂದರವಾದ ಕಂಬಗಳಿದ್ದು ಭುವನೇಶ್ವರಿಯಲ್ಲಿ ಪದ್ಮಗಳನ್ನು ಬಿಡಿಸಲಾಗಿದೆ. ಗರ್ಭಗುಡಿಯಲ್ಲಿ ಗರುಡ ಪೀಠದ ಮೇಲೆ ಐದು ಅಡಿ ಎತ್ತರದ ಸುಂದರವಾದ ಕೇಶವ ವಿಗ್ರಹವಿದೆ. ಮುಖಮಂಟಪದಲ್ಲಿ ದೇವಾಲಯದ ನಿರ್ಮಾತೃವಿನ ನಾಲ್ಕಡಿಯ ಶಿಲ್ಪವನ್ನು ಬಿಡಿಸಲಾಗಿದೆ. ತಂಡಗ ಗ್ರಾಮಕ್ಕೆ ಮೂರು ಕಿ.ಮೀ ದೂರವಿರುವ ಹುಲಿಕಲ್ಲಿನಲ್ಲಿರುವ ಸಂಗಮೇಶ್ವರ ಮತ್ತು ಮಲ್ಲೇಶ್ವರ ದೇವಾಲಯಗಳು ಹೊಯ್ಸಳರ ಕಾಲದವು. ಸಂಗಮೇಶ್ವರ ದೇವಾಲಯದ ನವರಂಗದಲ್ಲಿ ೧೬ ಕೋನದ ಸುಂದರವಾದ ನಾಲ್ಕು ಕಂಬಗಳಿವೆ. ಏಳು ಹೆಡೆಯ ನಾಗ, ಸಪ್ತಮಾತೃಕೆಯರು, ಚಪ್ಪಟೆ ಶಿರದ ಲಿಂಗ ಮತ್ತು ಪೀಠ, ಐದಡಿ ಎತ್ತರವಿರುವ ವೇಣುಗೋಪಾಲ, ಸೂರ್ಯ ಹಾಗೂ ಜನಾರ್ದನನ ವಿಗ್ರಹಗಳಿವೆ. ಈ ಗುಡಿಯ ಉತ್ತರಕ್ಕೆ ಮಲ್ಲೇಶ್ವರ ದೇವಾಲಯವಿದೆ. ಇದು ಗಾತ್ರದಲ್ಲಿ ಚಿಕ್ಕದಾದರೂ ಹೊಯ್ಸಳ ಶೈಲಿಗೆ ಉತ್ತಮ ಉದಾಹರಣೆಯಾಗಿದೆ. ಹೊಯ್ಸಳ ಶೈಲಿಯ ಅನೇಕ ಶಿಲ್ಪಗಳು ಈ ದೇವಾಲಯದಲ್ಲಿವೆ. ಇಲ್ಲಿಯ ಬೇಟೆರಾಯನ ದೇವಸ್ಥಾನ ಉಲ್ಲೇಖಾರ್ಹವಾಗಿದೆ.

ತುರುವೇಕೆರೆಯಲ್ಲಿ ಹೊಯ್ಸಳರ ಕಾಲದ ಚೆನ್ನಿಗರಾಯ ಮತ್ತು ಶಂಕರೇಶ್ವರ ದೇವಾಲಯಗಳಿವೆ. ಇಲ್ಲಿನ ಶಾಸನವೊಂದರಿಂದ ಸೋಮನಾಥಪುರದ ದೇವಾಲಯವನ್ನು ಕಟ್ಟಿಸಿದ ಸೋಮೇಶ್ವರ ದಂಡನಾಯಕನು ಕ್ರಿ.ಶ.೧೨೬೩ರಲ್ಲಿ ಈ ದೇವಾಲಯಗಳಿಗೆ ದಾನ–ದತ್ತಿ ನೀಡಿದ್ದು ತಿಳಿದುಬರುತ್ತದೆ. ಚೆನ್ನಿಗರಾಯ ದೇವಾಲಯವು ಮೂರು ಅಡಿ ಎತ್ತರದ ನಕ್ಷತ್ರಾಕಾರದ ಜಗಲಿಯನ್ನು ಹೊಂದಿದೆ. ಗೋಡೆಯ ಹೊರಭಾಗದಲ್ಲಿ ಐದು ಸಾಲು ಶಿಲ್ಪಪಟ್ಟಿಕೆಗಳಿವೆ. ಮಧ್ಯೆ ಮಧ್ಯೆ ಉಪಕಂಬಗಳ ವಿನ್ಯಾಸವಿದೆ. ಗರ್ಭಗುಡಿಯ ಮೇಲೆ ಐದು ಅಂತಸ್ತಿನ ಗೋಪುರವಿದ್ದು ಮೇಲೆ ಕಳಸವಿದೆ. ಸುಕನಾಸಿ ಮತ್ತು ನವರಂಗಗಳು ಚತುರಸ್ರವಾಗಿವೆ. ಮುಖಮಂಟಪದಲ್ಲಿ ದುಂಡಾದ ಕಂಬಗಳಿವೆ. ಪದ್ಮದ ವಿನ್ಯಾಸವುಳ್ಳ ಭುವನೇಶ್ವರಿಗಳಿವೆ. ನವರಂಗ ದ್ವಾರದಲ್ಲಿ ದ್ವಾರಪಾಲಕರಿದ್ದು, ಮೇಲ್ಭಾವಣಿಯಲ್ಲಿ ವೇಣುಗೋಪಾಲನ ವಿಗ್ರಹವಿದೆ. ನವರಂಗದ ಭುವನೇಶ್ವರಿಯು ಎಂಟು ಕಮಲಗಳ ಅಪರೂಪದ ವಿನ್ಯಾಸದಿಂದ ಕೂಡಿದೆ. ಗರ್ಭಗುಡಿಯಲ್ಲಿ ಐದೂವರೆ ಅಡಿ ಎತ್ತರದ ಚನ್ನಕೇಶವನ ಸಾಧಾರಣ ವಿಗ್ರಹವಿದೆ. ತೋರಣದಲ್ಲಿ ದಶಾವತಾರ ಕೆತ್ತನೆಯಿದೆ. ಶಂಕರೇಶ್ವರ ಅಥವಾ ಮೂಲೆ ಶಂಕರೇಶ್ವರ ಗುಡಿಯು ಜಗಲಿಯನ್ನು ಹೊಂದಿಲ್ಲ. ಶಿಖರವು ನಕ್ಷತ್ರಾಕಾರವಾಗಿ ಮೇಲೇರುತ್ತಾ ಹೋಗಿ ನಾಲ್ಕು ಅಂತಸ್ತುಗಳನ್ನು ಹೊಂದಿದೆ. ನವರಂಗದ್ವಾರದ ಕಂಬಗಳು ಹದಿನಾರು ಮೂಲೆಗಳನ್ನು ಹೊಂದಿವೆ. ನವರಂಗದ ಪೂರ್ವಭಾಗದಲ್ಲಿ ನಂದಿ, ಸಪ್ತಮಾತೃಕೆಯರು, ಗಣೇಶ, ಭೈರವ, ವೀರಭದ್ರ, ಸುಖಾಸೀನ ಭೈರವ, ಷಣ್ಮುಖ, ಹಾಗೂ ನಂದಿವಿಗ್ರಹಗಳಿವೆ. ಗರ್ಭಗುಡಿಯಲ್ಲಿ ನಾಲ್ಕಡಿ ಎತ್ತರದ ಶಿವಲಿಂಗವಿದೆ.

ತುರುವೇಕೆರೆ ತಾಲೂಕಿನ ಹೊಸಹಳ್ಳಿಯ ಕಲ್ಲೇಶ್ವರ ದೇವಾಲಯ ಚಿಕ್ಕದಾದರೂ ಚೊಕ್ಕ ರಚನೆಯಾಗಿದ್ದು ಗರ್ಭಗೃಹ, ಸುಖನಾಸಿ ಮತ್ತು ನವರಂಗವನ್ನು ಹೊಂದಿದೆ. ನವರಂಗದ ಭುವನೇಶ್ವರಿಯಲ್ಲಿ ಕಮಲದ ಮೊಗ್ಗಿನ ಅರಳುವಿಕೆಯನ್ನು ಸುಂದರವಾಗಿ ಬಿಡಿಸಲಾಗಿದೆ. ಮಿಕ್ಕೆರಡು ಸರಳವಾಗಿವೆ. ನವರಂಗದ ಬಾಗಿಲುವಾಡ ಬಹಳ ಸೂಕ್ಷ್ಮ ಕೆತ್ತನೆಯಿಂದ ಕೂಡಿದೆ. ಸುಖನಾಸಿಯ ಎರಡೂ ಕಡೆಯ ಜಾಲಂದ್ರಗಳು ಸೊಗಸಾಗಿದ್ದು ಒಳ್ಳೆಯ ಬೆಳಕು ಬರುತ್ತದೆ.

ಗೋಣಿ ತುಮಕೂರು ತುರುವೇಕೆರೆ ಬಳಿಯಿದೆ. ಇಲ್ಲಿರುವ ಚಿಕ್ಕದಾದ ಹೊಯ್ಸಳ ಶೈಲಿಯ ಈಶ್ವರ ದೇವಾಲಯವು ಗರ್ಭಗೃಹ, ತೆರೆದ ಸುಖನಾಸಿ ಮತ್ತು ನವರಂಗಗಳನ್ನು ಹೊಂದಿದೆ. ಈ ದೇವಾಲಯದಲ್ಲಿ ತಾವರೆಯ ವಿವಿಧ ಹಂತಗಳನ್ನು ತೋರಿಸುವ ನವ–ಭುವನೇಶ್ವರಿಗಳಿವೆ. ನವರಂಗದಲ್ಲಿ ಗಣಪತಿ, ಸರಸ್ವತಿ, ನಾಗಶಿಲ್ಪಗಳಿವೆ. ದೇವಾಲಯದ

ಹೊರಗೋಡೆಯು ಚೌಕಾಕಾರದ ಅರೆಕಂಬಗಳನ್ನು ಒಳಗೊಂಡಿದೆ. ಗರ್ಭಗೃಹದ ಮೇಲೆ ಸುಂದರವಾದ ಗೋಪುರವಿದೆ. ಈ ಊರಿನಲ್ಲಿ ಹೊಯ್ಸಳರ ಕಾಲದ ಮೂರು ವೀರಗಲ್ಲುಗಳಿವೆ.

ತುರುವೇಕೆರೆ ತಾಲೂಕಿನ ಸೂಳೆಕೆರೆಯಲ್ಲಿರುವ ಹೊಯ್ಸಳ ಶೈಲಿಯ ಚಿಕ್ಕದಾದ ಈಶ್ವರ ದೇವಾಲಯವು ಗರ್ಭಗೃಹ ಮತ್ತು ಸುಖನಾಸಿಗಳನ್ನು ಮಾತ್ರ ಹೊಂದಿದೆ. ಇದರ ಬಲಗಡೆ ಭುವನೇಶ್ವರಿಯಲ್ಲಿ ಕಮಲ ಕೆತ್ತನೆಯಿದೆ. ಗರ್ಭಗೃಹದ ಕಿರುಶಿಖರದ ಮೇಲೆ ಸುಂದರವಾದ ವಿನ್ಯಾಸಗಳಿವೆ. ಗುಡಿಯೊಳಗೆ ಎರಡು ಅಡಿ ಎತ್ತರದ ಭೈರವನ ಸುಂದರ ವಿಗ್ರಹವಿದೆ.

ಚಿಕ್ಕನಾಯಕನಹಳ್ಳಿ ತಾಲೂಕಿನ ಸೆಟ್ಟಿಕೆರೆಯು ಹೊಯ್ಸಳರ ಕಾಲದ ಅಗ್ರಹಾರವಾಗಿದ್ದು ಪಶ್ಚಿಮದಲ್ಲಿ ವಿಷ್ಣು ದೇವಾಲಯ ಹಾಗೂ ಈಶಾನ್ಯಕ್ಕೆ ಶಿವದೇವಾಲಯಗಳಿವೆ. ಯೋಗಮಾಧವ ದೇವಾಲಯ ತ್ರಿಕೂಟವಾಗಿದ್ದರೂ ಪಶ್ಚಿಮದ ಗರ್ಭಗುಡಿಗೆ ಮಾತ್ರ ಸುಖನಾಸಿ ಹಾಗೂ ಶಿಖರಗಳಿವೆ. ಈ ದೇವಾಲಯದ ಶಾಸನಗಳಿಂದ ಮೂರನೇ ನರಸಿಂಹನ ದಂಡನಾಯಕನಾದ ಗೋಪಾಲ ದಣ್ಣಾಯಕನು ಕ್ರಿ.ಶ ೧೨೬೧ರಲ್ಲಿ ದೇವಾಲಯ ನಿರ್ಮಿಸಿ ಅಗ್ರಹಾರ ರೂಪಿಸಿದನೆಂದು ತಿಳಿದುಬರುತ್ತದೆ. ಬಹುಕೋನಾಕಾರದ ಮೂರಡಿ ಎತ್ತರದ ಜಗತಿಯ ಮೇಲೆ ಈ ದೇವಾಲಯವಿದೆ. ಇದರಲ್ಲಿ ಐದು ಶಿಲ್ಪಪಟ್ಟಿಕೆಗಳಿವೆ. ನವರಂಗವು ಸುಂದರ ವಿನ್ಯಾಸದಿಂದ ಕೂಡಿದೆ. ಜಗಲಿಯ ಮೇಲಿನ ಗೋಡೆಯಲ್ಲಿ ಐದು ಸಾಲು ಶಿಲ್ಪಪಟ್ಟಿಕೆಗಳಿವೆ. ಆದರೆ ಯಾವುದೇ ವಿಗ್ರಹಗಳಿಲ್ಲ. ಗೋಡೆಯ ಮೇಲಿನ ಹಂತದಲ್ಲಿ ವಿವಿಧ ರೀತಿಯ ಶಿಖರಗಳ ವಿನ್ಯಾಸವಿದೆ. ನಕ್ಷತ್ರಾಕಾರದ ಗರ್ಭಗುಡಿಗೆ ಉತ್ತರ, ದಕ್ಷಿಣ ಮತ್ತು ಪಶ್ಚಿಮಗಳಲ್ಲಿ ಚತುರ್ರಸ ಭಾಗಗಳನ್ನು ಸೇರಿಸಲ್ಪಟ್ಟಿದೆ. ವಿಮಾನವು ನಾಲ್ಕು ಸ್ತರದ ಶಿಖರ ಹಾಗೂ ಕಳಶಗಳನ್ನು ಹೊಂದಿದ್ದು ಸರಳವಾಗಿದೆ.

ನವರಂಗದಲ್ಲಿ ಬೇರೆ ಬೇರೆ ಶಿಲೆಗಳನ್ನು ಬಳಸಿದ್ದಾರೆ. ಉತ್ತರದ್ವಾರವನ್ನು ಇತ್ತೀಚೆಗೆ ಮುಚ್ಚಲಾಗಿದ್ದು, ಪೂರ್ವ ದ್ವಾರವು ಸಾಮಾನ್ಯ ಶೈಲಿಯಲ್ಲಿದ್ದು, ಗಣೇಶ, ಮಹಿಷಮರ್ದಿನಿ, ಪಾರ್ವತಿ ಮುಂತಾದ ವಿಗ್ರಹಗಳಿವೆ. ದಕ್ಷಿಣ ಗರ್ಭಗುಡಿಯ ದ್ವಾರದ ದ್ವಾರಪಾಲಕರ ಶಿಲ್ಪಗಳು ಉತ್ತಮವಾಗಿದ್ದು, ಒಳಗಿರುವ ಐದಡಿ ಎತ್ತರದ ವೇಣುಗೋಪಾಲ ವಿಗ್ರಹದ ಪ್ರಭಾವಳಿಯಲ್ಲಿ ದಶಾವತಾರ ಕೆತ್ತನೆಯಿದೆ. ಪಶ್ಚಿಮ ಗರ್ಭಗುಡಿಯ ಸುಕನಾಸಿ ದ್ವಾರದಲ್ಲಿ ದ್ವಾರಪಾಲಕರಿದ್ದು, ಮೇಲೆ ಐದು ಕಿರು ಶಿಖರಗಳಿವೆ. ಗರ್ಭಗುಡಿಯಲ್ಲಿ ಒಂಬತ್ತು ಅಡಿ ಎತ್ತರದ ಯೋಗಮಾಧವನ ವಿಗ್ರಹವಿದೆ. ಮೇಲಿನ ತೋರಣದಲ್ಲಿ ದಶಾವತಾರ ಬಿಡಿಸಲಾಗಿದ್ದು ಇದು ಅಪರೂಪದ ಯೋಗಮೂರ್ತಿ ವಿಗ್ರಹವಾಗಿದೆ. ಇದರ ಕಿರೀಟ, ಉಂಗುರ, ಭುಜಕೀರ್ತಿ, ಕಾಲುಂಗುರ ಹಾಗೂ ಉತ್ತರಿಯ ವಿನ್ಯಾಸ ಬಹಳ ಸುಂದರವಾಗಿದೆ. ಮಹಾದ್ವಾರವು ಅಷ್ಟಕೋನಾಕೃತಿಯ ಕಂಬಗಳನ್ನು ಹೊಂದಿದ್ದು ಎದುರಿಗೆ ಸುಮಾರು ೩೫ ಅಡಿ ಎತ್ತರದ ಗರುಡ ಸ್ತಂಭವಿದೆ.

ಚಿಕ್ಕನಾಯಕನಹಳ್ಳಿ ತಾಲೂಕಿನ ದಬ್ಬೆಘಟ್ಟದ ಮಹಾಲಿಂಗೇಶ್ವರ ಗುಡಿಯು ಹೊಯ್ಸಳರ ಕಾಲದ ತ್ರಿಕೂಟಾಚಲ ರಚನೆಯಾಗಿದೆ. ಇಲ್ಲಿನ ಗರ್ಭಗುಡಿಯಲ್ಲಿರುವ ಲಿಂಗಗಳನ್ನು ಹೊಯ್ಸಳೇಶ್ವರ, ಬ್ರಹ್ಮೇಶ್ವರ ಮತ್ತು ಮಾಚೇಶ್ವರ ಎಂದು ಕ್ರಿ.ಶ ೧೨೯೨ರ ಶಾಸನದಲ್ಲಿ ಕರೆಯಲಾಗಿದೆ. ಇಲ್ಲಿನ ಹೊಯ್ಸಳ ಶೈಲಿಯ ಕಂಬ ಹಾಗೂ ಶಿಲ್ಪಗಳು ಸರಳವಾಗಿವೆ. ಚಿಕ್ಕನಾಯಕನಹಳ್ಳಿ ತಾಲೂಕಿನ ಹುಳಿಯಾರು ಗ್ರಾಮದ ರಂಗನಾಥ ದೇವಾಲಯ ಹೊಯ್ಸಳ ಶೈಲಿಯ ಉತ್ತಮ ದೇವಾಲಯವಾಗಿದ್ದು, ಗರ್ಭಗೃಹವನ್ನು ಹೊರತುಪಡಿಸಿ ಮಿಕ್ಕ ಭಾಗಗಳನ್ನು ನವೀಕರಿಸಲಾಗಿದೆ. ಬ್ರಹ್ಮ, ಶ್ರೀದೇವಿ, ಭೂದೇವಿಯನ್ನೊಳಗೊಂಡ ರಂಗನಾಥನ ಮೂಲವಿಗ್ರಹವು ಐದು ಅಡಿ ಎತ್ತರವಿದ್ದು ಸುಂದರವಾಗಿದೆ. ದೇವಾಲಯದ ಗಣಪತಿ ಮಂಟಪದಲ್ಲಿ ಐದು ಅಡಿ ಎತ್ತರದ ವಿನಾಯಕನ ವಿಗ್ರಹವಾಗಿದೆ.

ಕೈದಾಳವು ತುಮಕೂರು ಬಳಿಯಿದೆ. ಇದರ ಪ್ರಾಚೀನ ಹೆಸರು ಕ್ರೀಡಾಪುರ. ಇಲ್ಲಿ ಜಕಣಾಚಾರಿ ಇದ್ದನೆಂಬ ಐತಿಹ್ಯವಿದ್ದು, ಅವನ ಜನ್ಮಸ್ಥಳ ಇದೆಂಬ ಪ್ರತೀತಿ ಇದೆ. ಇಲ್ಲಿನ ಚನ್ನಕೇಶವ ದೇವಾಲಯದ ಮೂಲ ವಿಗ್ರಹ ಹೊಯ್ಸಳರ ಕಾಲದಾಗಿದ್ದು, ದೇವಾಲಯದ ಮಹಾದ್ವಾರ, ಗೋಪುರಗಳು ವಿಜಯನಗರ ಕಾಲದ್ದಾಗಿದೆ. ಇಲ್ಲಿನ ಕಂಬವೊಂದರ ಮೇಲಿನ ಶಿಲ್ಪವನ್ನು ಡಕಣಾಚಾರಿ ಎಂದು ಹೇಳುತ್ತಾರೆ. ಚೆನ್ನಿಗರಾಯ ವಿಗ್ರಹವು ಐದು ಅಡಿ ಆರು ಇಂಚು ಎತ್ತರವಿದ್ದು, ಎರಡೂವರೆ ಅಡಿ ಎತ್ತರದ ಪೀಠದ ಮೇಲೆ ನಿಂತಿದೆ. ಪ್ರಭಾವಳಿಯ ಸುತ್ತಲೂ ದಶಾವತಾರ ಕೆತ್ತನೆಯಿದ್ದು, ಇಡೀ ಶಿಲ್ಪವು ಅತ್ಯಂತ ಸುಂದರವಾಗಿದೆ. ಇದೇ ಗ್ರಾಮದ ಗಂಗೇಶ್ವರ ದೇವಾಲಯದ ಶಾಸನವೊಂದರಿಂದ ಕೇಶವ ದೇವಾಲಯವನ್ನು ಹೊಯ್ಸಳ ದೊರೆ ನರಸಿಂಹನ ಕಾಲದಲ್ಲಿ ಮಂತ್ರಿಯಾದ ಗೂಳೆಬಾಚಿ ಎಂಬುವನು ಕ್ರಿ.ಶ ೧೧೫೦ರಲ್ಲಿ ನಿರ್ಮಿಸಿದನೆಂದು ತಿಳಿದುಬರುತ್ತದೆ. ಕುಣಿಗಲ್ಲಿನ ಪದ್ಮೇಶ್ವರ ದೇವಾಲಯ ಹೊಯ್ಸಳ ಶೈಲಿಯ ಗರ್ಭಗೃಹ, ಸುಖನಾಸಿ ಮತ್ತು ನವರಂಗಗಳನ್ನು

ಹೊಂದಿದೆ. ಇದೇ ಊರಿನಲ್ಲಿರುವ ನರಸಿಂಹ ದೇವಾಲಯವು ಹೊಯ್ಸಳರ ನಿರ್ಮಾಣವಾಗಿದ್ದು ವಿಜಯನಗರದರಸರ ಕಾಲದಲ್ಲಿ ವಿಸ್ತರಿಸಿಲ್ಪಟ್ಟಿದೆ. ಗರ್ಭಗುಡಿಯಲ್ಲಿ ನರಸಿಂಹ ವಿಗ್ರಹವಿಲ್ಲ. ಬದಲಿಗೆ ಜನಾರ್ದನನ ವಿಗ್ರಹವಿದೆ.

ನಾಗಲಾಪುರದಲ್ಲಿ ಹೊಯ್ಸಳಶೈಲಿಯ ಎರಡು ದೇವಾಲಯಗಳಿವೆ. ಚನ್ನಕೇಶವ ದೇವಾಲಯವನ್ನು ಎತ್ತರವಾದ ಸ್ಥಳದಲ್ಲಿ ನಿರ್ಮಿಸಲಾಗಿದೆ. ವಿಮಾನವಿಲ್ಲದ ಗರ್ಭಗೃಹವಿದೆ. ನವರಂಗ ವಿಶಾಲವಾಗಿದೆ. ದೇವಾಲಯದ ಹೊರಗೋಡೆಯಲ್ಲಿ ಆನೆ, ಕುದುರೆ, ಮಕರ, ಹಂಸ ಮತ್ತು ಪೌರಾಣಿಕ ಕಥನ ಕೆತ್ತನೆಗಳಿಂದ ಕೂಡಿದ ಆರು ಶಿಲ್ಪಪಟ್ಟಿಕೆಗಳಿವೆ. ಇದು ಸೋಮನಾಥಪುರದ ಶಿಲ್ಪಪಟ್ಟಿಕೆಗಳನ್ನು ನೆನಪಿಗೆ ತರುತ್ತದೆ. ಗರ್ಭಗೃಹದಲ್ಲಿ ವಿಜಯನಗರ ಕಾಲದ ಐದು ಅಡಿ ಎತ್ತರದ ವೆಂಕಟೇಶ್ವರ ವಿಗ್ರಹವಿದೆ. ಕೇದಾರೇಶ್ವರ ದೇವಾಲಯದಲ್ಲಿ ಅತಿ ಹೆಚ್ಚಿನ ಶಿಲ್ಪಕಲೆಯನ್ನು ಕಾಣಬಹುದು. ಇದರ ಗರ್ಭಗೃಹ ೧೬ ಮೂಲೆಯುಳ್ಳ ನಕ್ಷತ್ರಾಕಾರವನ್ನು ಹೊಂದಿದೆ. ಹೊರಗೋಡೆಯಲ್ಲಿ ಆರು ಸಾಲುಗಳ ಶಿಲ್ಪಪಟ್ಟಿಕೆಗಳಿವೆ. ಗರ್ಭಗುಡಿಯಲ್ಲಿ ವಿಶಾಲವಾದ ಪೀಠದ ಮೇಲೆ ಚಿಕ್ಕದಾದ ಶಿವಲಿಂಗವಿದೆ. ನವರಂಗದ ಕಂಬಗಳು, ಭುವನೇಶ್ವರ ಸಾಧಾರಣ ಶೈಲಿಯಲ್ಲಿದೆ.

**ಬಸದಿಗಳು:** ಹೊಯ್ಸಳರ ಕಾಲದ ಬಸದಿಗಳು ತುಮಕೂರು ಜಿಲ್ಲೆಯಲ್ಲಿ ಹೆಚ್ಚಾಗಿ ದೊರೆಯುವುದಿಲ್ಲ. ಆದರೆ ಜೈನ ಶಾಸನಗಳ ಆಧಾರದಿಂದ ಕೆಲವು ಬಸದಿಗಳು ಇದ್ದವು ಎಂದು ತೋರುತ್ತವೆ. ತುಮಕೂರು ತಾಲೂಕು ಪಂಡಿತನಹಳ್ಳಿಯ ಮಂದರಗಿರಿ ಬೆಟ್ಟ (ಕ್ರಿ.ಶ.೧೧೬೦) ಚಿಕ್ಕನಾಯಕನಹಳ್ಳಿ ಬಳಿಯ ಹಟ್ಣ (ಕ್ರಿ.ಶ.೧೧೫೬), ಹೆಗ್ಗೆರೆ (ಕ್ರಿ.ಶ.೧೧೬೧), ಪಾವಗಡ ತಾಲೂಕಿನ ನಿಡಗಲ್ (ಕ್ರಿ.ಶ.೧೨೩೨), ಕಡಬ (ಕ್ರಿ.ಶ ೧೧೭೪) ಗಳಲ್ಲಿ ಬಸದಿಗಳಿದ್ದ ಬಗ್ಗೆ ದಾಖಲೆಗಳಿವೆ. ಆದರಿಂದು ಇವು ಬಹಳಷ್ಟು ಹಾಳಾಗಿವೆ.

ನಿಟ್ಟೂರಿನಲ್ಲಿರುವ ಶಾಂತೀಶ್ವರ ಬಸದಿಯು ಹೊಯ್ಸಳ ಶೈಲಿಗೆ ಸುಂದರ ಉದಾಹರಣೆಯಾಗಿದೆ. ಗರ್ಭಗೃಹ, ಸುಖನಾಸಿ ಮತ್ತು ನವರಂಗವನ್ನು ಹೊಂದಿದೆ. ಇದಕ್ಕೆ ನಂತರದ ಅರಸರು ಪದ್ಮಾವತಿ ಮಂಟಪ ಹಾಗೂ ಮುಖ ಮಂಟಪಗಳನ್ನು ಜೋಡಿಸಿದ್ದಾರೆ. ಮುಖಮಂಟಪವು ಅತ್ಯಂತ ನಾಜೂಕಾದ ಕೆತ್ತನೆಯಿಂದ ಕೂಡಿದೆ. ಕಂಬಗಳು ಗಂಟೆಯಾಕಾರ, ಎಂಟು ದಳ, ೧೬ ದಳ, ೧೮ ದಳ, ೩೨ ದಳ, ಆರು ಮೂಲೆಯ ನಕ್ಷತ್ರ, ೩೨ ಮೂಲೆಯ ನಕ್ಷತ್ರಗಳ ಶೈಲಿಯಲ್ಲಿದೆ. ಹೆಗ್ಗೆರೆಯಲ್ಲಿರುವ ಚನ್ನಪಾರ್ಶನಾಥಸ್ವಾಮಿ ದೇವಾಲಯ ಹೊಯ್ಸಳ ಮಾದರಿಯದಾಗಿದೆ. ಸುಂದರವಾದ ಪ್ರವೇಶದ್ವಾರ, ನವರಂಗ, ಸುಖನಾಸಿ, ಗರ್ಭಗುಡಿ ಇದೆ. ಕಂಬಗಳು ನಯಗಾರಿಕೆಯ ಕೆಲಸದಿಂದ ಕೂಡಿದ್ದು, ಕ್ರಿ.ಶ ೧೧೬೦ ರಲ್ಲಿ ನಿರ್ಮಾಣವಾಗಿದೆ.

ಹುಳಿಯಾರಿನ ಮಲ್ಲೇಶ್ವರ ದೇವಾಲಯವು ಹೊಯ್ಸಳರ ಕಾಲದ್ದೆಂದು ಅದರ ಶೈಲಿಯಿಂದ ತಿಳಿದುಬರುತ್ತದೆ. ಇದು ಚಿಕ್ಕದಾದರೂ ಅಚ್ಚುಕಟ್ಟಾದ ದೇವಾಲಯವಾಗಿದೆ. ನವರಂಗದ ಚಾವಣಿ ಬಹಳ ಸುಂದರವಾದ ಹೂವಿನ ಶಿಲ್ಪಗಳನ್ನು ಹೊಂದಿದೆ. ಈ ದೇವಾಲಯದ ಕಾಲವನ್ನು ಸುಮಾರು ೧೧ನೇ ಶತಮಾನವೆಂದು ಹೇಳಬಹುದು.

## ವಿಜಯನಗರ ಕಾಲದ ವಾಸ್ತುಶಿಲ್ಪ

ಈ ಜಿಲ್ಲೆಯಲ್ಲಿ ಅತಿ ಹೆಚ್ಚಾಗಿ ದೊರೆಯುವ ದೇವಾಲಯಗಳೆಂದರೆ ವಿಜಯನಗರದ ಕಾಲದವು. ಇವು ಬಹಳ ವಿಸ್ತಾರವಾಗಿದ್ದು, ಅನೇಕ ಉಪಗುಡಿಗಳನ್ನು ಹೊಂದಿದ್ದು, ನೋಡಲು ಆಕರ್ಷಕವಾಗಿವೆ. ತುಮಕೂರು ನಗರದ ಮಧ್ಯದಲ್ಲಿರುವ ಅತ್ಯಂತ ಹಳೆಯದಾದ ಲಕ್ಷ್ಮೀಕಾಂತ ದೇವಾಲಯವು ವಿಶಾಲವಾಗಿದೆ. ಇದು ದ್ರಾವಿಡ ಶೈಲಿಯ ಗರ್ಭಗೃಹ, ಸುಖನಾಸಿ, ನವರಂಗ ಮತ್ತು ಮುಖಮಂಟಪಗಳನ್ನು ಹೊಂದಿದೆ. ೨೦೦ ಅಡಿ ಅಗಲ ೧೫೦ ಅಡಿ ಉದ್ದವಿದ್ದು, ಗರ್ಭಗುಡಿಯಲ್ಲಿ ನಾಲ್ಕೂವರೆ ಅಡಿ ಎತ್ತರದ ಲಕ್ಷ್ಮೀನರಸಿಂಹನ ವಿಗ್ರಹವನ್ನು ಹೊಂದಿದೆ. ಇಲ್ಲಿನ ಶಾಸನದ ಆಧಾರದಿಂದ ಕ್ರಿ.ಶ ೧೫೬೦ಕ್ಕೂ ಮುಂಚೆ ಈ ದೇವಾಲಯ ನಿರ್ಮಾಣವಾಗಿದ್ದಾಗಿ ತಿಳಿದುಬರುತ್ತದೆ. ಈಗ ಸಂಪೂರ್ಣ ಹಾಳಾಗಿದೆ.

ಕುಣಿಗಲ್ ತಾಲೂಕಿನಲ್ಲಿರುವ ಎಡೆಯೂರಿನ ಸಿದ್ಧಲಿಂಗೇಶ್ವರ ದೇವಾಲಯವು ಕರ್ನಾಟಕದ ಪ್ರಮುಖ ದೇವಾಲಯಗಳಲ್ಲಿ ಒಂದಾಗಿದೆ. ಇದು ತೋಂಟದ ಸಿದ್ಧಲಿಂಗಯತಿಗಳ ಐಕ್ಯಸ್ಥಳವಾಗಿದೆ. ದ್ರಾವಿಡ ಶೈಲಿಯ ಸುಂದರವಾದ ದೇವಾಲಯವಿದಾಗಿದ್ದು, ಇತ್ತೀಚೆಗೆ ನವೀಕೃತವಾಗಿದೆ. ಮುಖಮಂಟಪ, ನವರಂಗ, ತೆರೆದ ಸುಖನಾಸಿ ಮತ್ತು

ಗರ್ಭಗೃಹಗಳನ್ನು ಹೊಂದಿದೆ. ಪ್ರಾಕಾರದ ಶಿಖರದ ಭಾಗದಲ್ಲಿ ಸುತ್ತಲೂ ಸಿದ್ಧಲಿಂಗಯತಿಗಳ ಜೀವನ ನಿರ್ವಹಣೆಯ ವಿವರಗಳ ಗಾರೆಶಿಲ್ಪಗಳನ್ನು ನಿರ್ಮಿಸಲಾಗಿತ್ತು. ಆದರೆ ಜೀರ್ಣೋದ್ಧಾರದ ಸಂದರ್ಭದಲ್ಲಿ ಸಂಪೂರ್ಣ ಬದಲಾಗಿದೆ.

ಕುಣಿಗಲ್ ತಾಲೂಕಿನ ಅಮೃತೂರಿನ ಚೆನ್ನಕೇಶವ ದೇವಾಲಯವು ದ್ರಾವಿಡ ಶೈಲಿಯಲ್ಲಿದೆ. ನವರಂಗದ ಕಂಬಗಳು ಉತ್ತಮ ಉಬ್ಬುಶಿಲ್ಪಗಳಿಂದ ಕೂಡಿದೆ. ಗರ್ಭಗುಡಿಯ ಮೂಲವಿಗ್ರಹ ಮೂರುವರೆ ಅಡಿ ಎತ್ತರವಿದ್ದು ಬಹಳ ಮನೋಹರವಾಗಿದೆ. ನವರಂಗದ ಭುವನೇಶ್ವರಿಯಲ್ಲಿ ಕಮಲದ ಮೊಗ್ಗುಗಳನ್ನು ಬಿಡಿಸಲಾಗಿದೆ. ಇದೇ ಊರಿನ ಕೆರೆಯ ಬಳಿಯಿರುವ ಸೋಮೇಶ್ವರ ದೇವಾಲಯವೂ ದ್ರಾವಿಡ ಶೈಲಿಯಲ್ಲಿದ್ದು, ದೇವಾಲಯದ ಮುಂದೆ ೩೦ ಅಡಿ ಎತ್ತರದ ಗರುಡಗಂಬ ಮತ್ತು ದೇವಾಲಯದ ಹಿಂದೆ ೨೦ ಅಡಿ ಎತ್ತರದ ಉಯ್ಯಾಲೆ ಕಂಬವಿದೆ. ಅಮೃತೂರಿನ ಚನ್ನಕೇಶವ ದೇವಾಲಯ, ಹೊರಮನೆ ಕಾವಲ್ ಕೇಶವ ದೇವಾಲಯ, ಕೈದಾಳದ ಚನ್ನಕೇಶವ ದೇವಾಲಯದ ಹೊರಭಾಗ, ಒಡೇರಹಳ್ಳಿ ಶಾಂತಮಲ್ಲಪ್ಪ ದೇವಾಲಯ, ಮಧುಗಿರಿಯ ವೆಂಕಟರಮಣ ದೇವಾಲಯ, ತುಂಗವಟಿಯ ರಂಗನಾಥ ದೇವಾಲಯ, ಮಿಡಿಗೇಶಿಯ ಮಲ್ಲೇಶ್ವರ ದೇವಾಲಯ, ಕುಡೂನೆಯಾಲ ವೇಣುಗೋಪಾಲಸ್ವಾಮಿ ದೇವಾಲಯ, ಕಡಗತ್ತೂರಿನ ಜನಾರ್ದನ ದೇವಾಲಯ, ತುಮಕೂರಿನ ಚಿಕ್ಕಪೇಟೆಯ ಶ್ರೀಕಂಠೇಶ್ವರ ದೇವಾಲಯ ಮೊದಲಾದವು ವಿಜಯನಗರ ಶೈಲಿಯ ದೇವಾಲಯಗಳಾಗಿವೆ.

ಚಿಕ್ಕನಾಯ್ಕನಹಳ್ಳಿ ತಾಲೂಕಿನ ಯಳನಾಡು ಸಿದ್ಧರಾಮೇಶ್ವರ ದೇವಾಲಯವು ದ್ರಾವಿಡ ಶೈಲಿಯ ದೊಡ್ಡ ದೇವಾಲಯವಾಗಿದೆ. ಪೂರ್ವ ಮತ್ತು ದಕ್ಷಿಣಕ್ಕೆ ಎರಡು ದ್ವಾರಗಳಿವೆ. ದಕ್ಷಿಣ ಭಾಗದ ಪ್ರವೇಶದ್ವಾರದ ಭಾವಣಿಯಲ್ಲಿ ಬಣ್ಣದ ಚಿತ್ರಗಳಿವೆ. ಚಿನ್ನದ ಪಲ್ಲಕ್ಕಿ ಇರುವ ಅಪರೂಪದ ದೇವಸ್ಥಾನ. ಚಿಕ್ಕನಾಯ್ಕನಹಳ್ಳಿಯ ವೆಂಕಟರಮಣ ದೇವಾಲಯವು ಹೊಯ್ಸಳ ಪ್ರಭಾವವಿರುವ ದೊಡ್ಡ ದೇವಾಲಯವಾಗಿದೆ. ನವರಂಗದ ಕಂಬಗಳು ಆಕರ್ಷಕವಾಗಿದ್ದು, ಗರ್ಭಗುಡಿಯಲ್ಲಿ ನಾಲ್ಕು ಅಡಿ ಎತ್ತರದ ವೆಂಕಟರಮಣನ ವಿಗ್ರಹವಿದೆ. ದೇವಾಲಯದ ಸುತ್ತಲೂ ದೊಡ್ಡ ಪ್ರಾಕಾರವಿದೆ.

ಪಂಕಜನಹಳ್ಳಿಯ ಮಲ್ಲಿಕಾರ್ಜುನ ದೇವಾಲಯ ಗರ್ಭಗೃಹ, ಸುಖನಾಸಿ, ಪ್ರದಕ್ಷಿಣಪಥ, ನವರಂಗ, ಮಂಟಪ, ಗೋಪುರವುಳ್ಳ ನಂದಿಮಂಟಪ, ಮಹಾದ್ವಾರ ಹಾಗೂ ಪ್ರಾಕಾರಗಳನ್ನು ಹೊಂದಿದೆ. ಮಹಾದ್ವಾರ ೧೨ ಅಡಿ ಎತ್ತರವಿದ್ದು, ಸುಂದರವಾದ ಕುಸುರಿ ಕೆತ್ತನೆಯಿಂದ ಕೂಡಿದ್ದು, ಮುಂದೆ ೪೦ ಅಡಿ ಎತ್ತರದ ದೀಪಸ್ತಂಭವಿದೆ.

ತಿಪಟೂರು ತಾಲೂಕು ನೊಣವಿನಕೆರೆಯ ಬೇಟೆರಾಯನ ದೇವಾಲಯವು ಸುಂದರವಾಗಿದ್ದು, ದ್ರಾವಿಡ ಶೈಲಿಯಲ್ಲಿದೆ. ಇದನ್ನು ಕ್ರಿ.ಶ ೧೫೫೦ರ ಸುಮಾರಿಗೆ ಕೊನೇರಿ ಅಯ್ಯಂಗಾರ್ ನಿರ್ಮಿಸಿದ್ದೆಂದು ದಾಖಲೆಯಿಂದ ತಿಳಿಯುತ್ತದೆ. ಅವರದ್ದೇ ಎನ್ನಲಾದ ಪ್ರತಿಮೆ ದೇವಾಲಯದ ಕಂಬದಲ್ಲಿದೆ. ಇದರ ವಿಶಾಲವಾದ ನವರಂಗದಲ್ಲಿ ೧೬ ಕಂಬಗಳ ಮೇಲಿರುವ ಶಿಲ್ಪಗಳನ್ನು ಕೃಷ್ಣದೇವರಾಯ ಮತ್ತವನ ಪರಿವಾರದವರದೆಂದು ಸ್ಥಳೀಯರು ಹೇಳುತ್ತಾರಾದರೂ ಅವು ಭಕ್ತಶಿಲ್ಪಗಳಾಗಿವೆ. ಗರ್ಭಗೃಹದಲ್ಲಿ ಅತ್ಯಂತ ಸುಂದರವಾದ ವೆಂಕಟೇಶನ ವಿಗ್ರಹವಿದೆ. ಮಧುಗಿರಿ ತಾಲೂಕಿನ ದೊಡ್ಡದಾಳವಟ್ಟದ ಲಕ್ಷ್ಮೀನರಸಿಂಹ ದೇವಾಲಯ ದ್ರಾವಿಡ ಶೈಲಿಯದ್ದಾಗಿದೆ. ದೊಡ್ಡ ಪ್ರವೇಶದ್ವಾರ, ವಿಸ್ತಾರವಾದ ಪ್ರಾಕಾರವನ್ನು ಹೊಂದಿದೆ. ಮಹಾದ್ವಾರದ ಮೇಲೆ ಸುಂದರವಾದ ಗೋಪುರವನ್ನು ನಿರ್ಮಿಸಲಾಗಿದೆ. ಗರ್ಭಗುಡಿಯ ಮೂರ್ತಿ ದುಂಡನೆಯ ಶಿಲೆಯದ್ದಾಗಿದ್ದು ಅದನ್ನು ಉದ್ಭವಮೂರ್ತಿ ಎಂದು ಕರೆಯುತ್ತಾರೆ.

ಸುಂದರವಾದ ಗೋಪುರವುಳ್ಳ ಕಡಬದ ಶ್ರೀರಾಮ ದೇವಾಲಯ ದ್ರಾವಿಡ ಶೈಲಿಯಲ್ಲಿದೆ, ಈಗ ದೇವಾಲಯದಲ್ಲಿ ರಾಮನಿಲ್ಲ. ಇರುವ ಮೂರು ಗರ್ಭಗುಡಿಯಲ್ಲಿ ಜನಾರ್ದನ, ವೇಣುಗೋಪಾಲ ಮತ್ತು ಯೋಗನರಸಿಂಹ ವಿಗ್ರಹಗಳಿವೆ. ಗುಬ್ಬಿಯ ಗದ್ದೆ ಮಲ್ಲೇಶ್ವರ ದೇವಾಲಯ ವಿಜಯನಗರ ಶೈಲಿಯಲ್ಲಿದೆ. ಇಲ್ಲಿ ಮೂರು ಗರ್ಭಗುಡಿ ಇದೆ. ದಕ್ಷಿಣಾಮೂರ್ತಿ, ಪಾರ್ವತಿ ಮತ್ತು ವೀರಭದ್ರ ಮೂರ್ತಿಗಳಿವೆ. ಗಣಪತಿ ಮತ್ತು ಸುಬ್ರಹ್ಮಣ್ಯ ಶಿಲ್ಪಗಳೂ ಇವೆ.

**ಬಸದಿಗಳು**: ವಿಜಯನಗರ ಕಾಲದ ಬಸದಿಗಳು ನಿಡುಗಲ್ಲು, ಮಧುಗಿರಿ, ಕುಚ್ಚಂಗಿ, ತೋವಿನಕೆರೆ, ಬಿದರೆ, ಮಿಡಿಗೇಶಿ, ಮಾಯಸಂದ್ರ, ರಾಂಪುರಗಳಲ್ಲಿವೆ. ಆದರೆ ಎಲ್ಲ ಬಸದಿಗಳೂ ನವೀಕೃತಗೊಂಡಿವೆ. ಕೆಲವು ಕಂಬಗಳು ಮಾತ್ರ

ಹಾಗೆಯೇ ಇವೆ. ಗರ್ಭಗುಡಿಯ ಮೂರ್ತಿಗಳೂ ಕೂಡ ಕೆಲವೆಡೆ ಬದಲಾಗಿದೆ. ಸಾಧಾರಣ ಶೈಲಿಯ ಇವು ಅಂತಹ ವಿಶೇಷತೆಯನ್ನೇನೂ ಪಡೆದಿಲ್ಲ.

## ಪಾಳೇಗಾರರ ಕಾಲದ ವಾಸ್ತುಶಿಲ್ಪ

ಜಿಲ್ಲೆಯಲ್ಲಿ ಅನೇಕ ಪಾಳೆಯಗಾರ ಮನೆತನಗಳು ಆಳ್ವಿಕೆ ನಡೆಸಿದ್ದು, ಹಲವಾರು ದೇವಾಲಯಗಳನ್ನು ನಿರ್ಮಿಸಿದ್ದಾರೆ. ಪ್ರಾಚೀನ ದೇವಾಲಯಗಳನ್ನು ನವೀಕರಿಸಿದ್ದಾರೆ. ಇವರ ಕಾಲದ ದೇವಾಲಯಗಳು ಅಂತಹ ವಿಶೇಷವನ್ನೇನ್ನೂ ಹೊಂದಿರದೆ, ಆಕಾರದಲ್ಲಿ ಮಾತ್ರ ವ್ಯತ್ಯಾಸವಿದೆ. ಅಮೃತೂರಿನ ಪಟ್ಟಾಲದಮ್ಮ, ಬೆಳಗುಂಬದ ಸಿದ್ಧರಾಮೇಶ್ವರ, ಬೆಳ್ಳಾವೆಯ ಸೋಮೇಶ್ವರ ಸ್ವಾಮಿ, ಭಸ್ಮಂಗಿಯ ಭಸ್ಮಾಂಗೇಶ್ವರ, ಬಿಜ್ಜಾವರದ ಅಮ್ಮವ್ವೆಗುಡಿ, ದೇವರಾಯನದುರ್ಗದ ಯೋಗಾನರಸಿಂಹ, ಭೋಗಾನರಸಿಂಹ, ಚಿಕ್ಕನಾಯಕನಹಳ್ಳಿಯ ವೆಂಕಟರಮಣ, ರಾಮೇಶ್ವರ, ಹಾಗೂ ಕ್ರಿ.ಶ. ೧೮೮೧ರಲ್ಲಿ ಚಾಮರಾಜೇಂದ್ರ ಒಡೆಯರ್ ನಿರ್ಮಿಸಿದ ಚನ್ನಕೇಶವ ದೇವಾಲಯ, ಹಾಗಲವಾಡಿಯ ಕೆಲವು ದೇವಾಲಯಗಳು ಹತ್ಯಾಳಿನ ಕಂಬದ ಉಗ್ರನರಸಿಂಹ ದೇವಾಲಯ, ಹೊಳವನಹಳ್ಳಿಯ ರಾಘವೇಂದ್ರ ಸ್ವಾಮಿಗಳ ಬೃಂದಾವನ, ಹೊನ್ನವಳ್ಳಿಯ ಲಕ್ಷ್ಮೀನಾರಾಯಣಸ್ವಾಮಿ ದೇವಾಲಯ, ಹುಲಿಯೂರುದುರ್ಗದ ಗೋಪಾಲಕೃಷ್ಣ ದೇವಾಲಯ, ಹುತ್ರಿದುರ್ಗದ ಆದಿನಾರಾಯಣ, ಕುಡುವತ್ತಿಯ ಗೋಪಾಲಕೃಷ್ಣ ದೇವಾಲಯ, ಮರಳೂರಿನ ರಾಮದೇವಾಲಯ, ಮಾಯಸಂದ್ರ ಬೆಟ್ಟದಲ್ಲಿರುವ ಮಹದೇಶ್ವರ ದೇವಾಲಯ, ಶಿರಾ ಬಳಿಯ ರಂಗನಹಳ್ಳಿಯ ರಂಗನಾಥ ದೇವಾಲಯ, ತಿಪಟೂರು ತಾಲೂಕಿನ ರಂಗಾಪುರದ ರಂಗನಾಥ ದೇವಾಲಯ, ಸೀಬಿಯ ನರಸಿಂಹ ದೇವಾಲಯ (ಇಲ್ಲಿ ೧೮ನೇ ಶತಮಾನದ ಚಿತ್ರಕಲೆಯ ಮಾದರಿಗಳಿವೆ) ಶೆಟ್ಟಿಹಳ್ಳಿಯ ಆಂಜನೇಯ ದೇವಾಲಯ, ಸಿದ್ಧಗಂಗೆಯ ಬೆಟ್ಟದಲ್ಲಿರುವ ಸಿದ್ಧಲಿಂಗೇಶ್ವರ ದೇವಾಲಯ ಹೀಗೆ ಇನ್ನು ಅನೇಕ ಗ್ರಾಮಗಳಲ್ಲಿ ಪ್ರಾಚೀನ ದೇವಾಲಯಗಳಿವೆ.

## ಕೋಟೆಗಳು

ಜಿಲ್ಲೆಯಲ್ಲಿ ಅತಿ ಹೆಚ್ಚು ಕೋಟೆ ಕೊತ್ತಲಗಳು ದೊರೆಯುತ್ತವೆ. ಇದಕ್ಕೆ ಕಾರಣ ಇಲ್ಲಿನ ವಿಸ್ತಾರವಾದ ಪ್ರದೇಶವನ್ನು ಹಲವಾರು ಪಾಳೆಯಗಾರರು ಆಳ್ವಿಕೆ ನಡೆಸಿದ್ದು, ತುಮಕೂರು ಜಿಲ್ಲೆಯಲ್ಲಿರುವ ಕೋಟೆಗಳನ್ನು ಪ್ರಮುಖವಾಗಿ ಗಿರಿದುರ್ಗ, ನೆಲದುರ್ಗಗಳೆಂದು ವಿಂಗಡಿಸಬಹುದು.

ಗಿರಿದುರ್ಗಗಳು: ತುಮಕೂರು ಜಿಲ್ಲೆಯ ದುರ್ಗಗಳಲ್ಲಿ ಅತಿ ಹೆಚ್ಚಿನವು ಗಿರಿದುರ್ಗಗಳು. ಅವುಗಳಲ್ಲಿ ಪ್ರಮುಖವಾದ ಕೆಲವು ಈ ಕೆಳಕಂಡಂತಿವೆ. ನಿಡಗಲ್ಲು ದುರ್ಗವು ಪಾವಗಡ ತಾಲೂಕಿನಲ್ಲಿದೆ. ಕರ್ನಾಟಕದಲ್ಲೇ ಅತ್ಯಂತ ದುರ್ಗಮವಾದ ಕೋಟೆ ಇದಾಗಿದೆ. ಶಾಸನಗಳಲ್ಲಿ ಇದನ್ನು ವಿಶೇಷವಾಗಿ ಹೊಗಳಲಾಗಿದೆ. ಕ್ರಿ.ಶ ೧೧ನೇ ಶತಮಾನದಿಂದ ೧೮ನೇ ಶತಮಾನದವರೆಗೂ ಇಲ್ಲಿ ಚೋಳರು, ವಿಜಯನಗರದ ಅರಸರು, ಮತ್ತು ನಿಡಗಲ್ಲು ಪಾಳೆಯಗಾರರು ಆಳ್ವಿಕೆ ನಡೆಸಿದ್ದಾರೆ. ಇಲ್ಲಿ ಏಳು ಸುತ್ತಿನ ಕೋಟೆಯಿದ್ದುದಕ್ಕೆ ಕುರುಹುಗಳಿವೆ. ದುರ್ಗದ ಶಿಖರದಲ್ಲಿ ಬಸವಮಂಟಪವಿದೆ. ಇದನ್ನು ಕ್ರಿ.ಶ ೧೬೫೫ರಲ್ಲಿ ಹೋಬಣ್ಣನಾಯಕ ನಿರ್ಮಿಸಿದನು. ಕಾಳಹಸ್ತೀಶ್ವರ ಫಿರಂಗಿಯಿದೆ. ಬೆಟ್ಟದ ಮಧ್ಯಭಾಗದಲ್ಲಿ ಹಾಳಾಗಿರುವ ಅನೇಕ ದೇವಾಲಯಗಳು, ಎರಡು ದೊಡ್ಡ ಆಳವಾದ ಕಣಜ, ದೊಡ್ಡ ನೀರಿನ ಕೊಳ, ಅರಮನೆಯ ಗೋಡೆ, ಫಿರಂಗಿ ಮನೆ, ದರ್ಬಾರಿನ ಜಾಗ ಮುಂತಾದ ಅವಶೇಷಗಳಿವೆ. ಕ್ರಿ.ಶ.೧೧೫೦ರಲ್ಲಿ ನಿರ್ಮಿಸಿರುವ ನಗರೇಶ್ವರ ದೇವಾಲಯ ದುರ್ಗದ ಮಧ್ಯದಲ್ಲಿದೆ. ಕೋಟೆಯ ಒಳಭಾಗ ಬಹಳ ವಿಸ್ತಾರವಾಗಿದ್ದು, ದೊಡ್ಡ ಗ್ರಾಮವಿತ್ತೆಂದು ತಿಳಿದುಬರುತ್ತದೆ. ಚಿಕ್ಕದಾದರೂ ಬಹಳ ಭದ್ರ ಹಾಗೂ ಸುಂದರವಾದ ಪಾವಗಡ ಕೋಟೆಯಲ್ಲಿ ಸುಮಾರು ೧೦ ಬಾಗಿಲುಗಳಿವೆ. ಕಮ್ಮಾರ ಮಂಟಪ, ಬೆಟ್ಟದ ಆಂಜನೇಯ, ಕೊನೇರಿ ದೊಣೆ, ಸುಲ್ತಾನ್ ಬತೇರಿ, ಸುಬ್ಬರಾಯ ಬತೇರಿ, ನಿಡುಗಲ್ಲು ಬತೇರಿ ಮುಂತಾದ ಆಕರ್ಷಕ ಸ್ಥಳಗಳಿವೆ. ಈ ಕೋಟೆಯನ್ನು ವಿಜಯನಗರದ ಒಂದನೇ ದೇವರಾಯನ ಸಾಮಂತ ಗೋಪಣ್ಣ ಕ್ರಿ.ಶ ೧೪೦೫ರಲ್ಲಿ ನಿರ್ಮಿಸಿದಂತೆ ತಿಳಿದುಬರುತ್ತದೆ.

ಮಧುಗಿರಿ ಕೋಟೆಯು ದೊಡ್ಡದಾದ ಒಂದೇ ಬಂಡೆಯ ಮೇಲೆ ರಚನೆಯಾಗಿರುವ ಕೋಟೆ. ಹತ್ತಲು ಬಹಳ ಕಡಿದಾಗಿದ್ದು, ಕೋಟೆಯ ಗೋಡೆಗಳು ಇಂದಿಗೂ ಬಹಳ ಭದ್ರವಾಗಿದೆ. ಕೋಟೆಗೆ ಅಂತರಾಳದ ಬಾಗಿಲು, ದಿಡ್ಡಿ ಬಾಗಿಲು, ಮೈಸೂರು ಬಾಗಿಲು ಮುಂತಾದ ಬಾಗಿಲುಗಳಿವೆ. ಅನೇಕ ದೊಣೆಗಳಿವೆ. ಗೋಪಾಲಕೃಷ್ಣ ದೇವಾಲಯವೂ ಇದ್ದು, ಈ

ಕೋಟೆಯನ್ನು ಇಮ್ಮಡಿ ಚಿಕ್ಕಪ್ಪಗೌಡನು ಕ್ರಿ.ಶ.೧೬೦೧ರಲ್ಲಿ ಕಟ್ಟಿಸಿ ದೇವಾಲಯ ನಿರ್ಮಿಸಿರುವುದಕ್ಕೆ ದಾಖಲೆಯಿದೆ. ಕ್ರಿ.ಶ ೧೬೯೬ರಲ್ಲಿ ಮುಮ್ಮಡಿ ಚಿಕ್ಕಪ್ಪಗೌಡರು ಕಟ್ಟಿಸಿರುವ ಬೃಹತ್ ಕಲ್ಲಿನ ಕಣಜವಿದೆ. ಇದು ಏಷ್ಯಾಖಂಡದಲ್ಲೇ ದೊಡ್ಡದಾದ ಏಕಾಗ್ರಶಿಲಾ ಬೆಟ್ಟವೆಂಬ ಬಿರುದು ಪಡೆದಿವೆ. ಇದನ್ನು ಕ್ರಿ.ಶ.೧೭೭೧ರಲ್ಲಿ ಮರಾಠರು ಹಾಳುಗೆಡವಿದರು. ಮಧುಗಿರಿಗೆ ೧೮ ಮೈಲಿ ದೂರವಿರುವ ಭಸ್ಮಾಂಗಿದುರ್ಗ ಬೆಟ್ಟದ ಮೇಲಿನ ಕೋಟೆಯಲ್ಲಿ ಬತೇರಿ, ಕೊತ್ತಲ, ಹಾಗೂ ನೀರಿನ ದೋಣೆಗಳಿವೆ. ಇದನ್ನು ಕ್ರಿ.ಶ ೧೬೫೦ರ ಸುಮಾರಿಗೆ ಬೂದಿ ಬಸಪ್ಪ ಎಂಬುವನು ನಿರ್ಮಿಸಿದನೆಂದು ಪ್ರತೀತಿ. ಬೆಟ್ಟದ ಬುಡದಲ್ಲಿ ಭಸ್ಮಾಂಗೀಶ್ವರ ದೇವಾಲಯವಿದೆ. ಬೇಡತ್ತೂರುದುರ್ಗದ ಮೇಲೆ ಒಂದು ಚಿಕ್ಕದಾದ ಕೋಟೆಯಿದೆ. ಮಿಡಿಗೇಶಿ ಕೋಟೆಯನ್ನು ಪಾಳೆಯಗಾರ ನಾಗಿರೆಡ್ಡಿ ಎಂಬುವವನು ಕಟ್ಟಿಸಿದನೆಂದು ಹೇಳುತ್ತಾರೆ. ಅನೇಕ ಬಾಗಿಲುಗಳನ್ನು ಹೊಂದಿರುವ ಈ ಕೋಟೆ ಬಲಿಷ್ಟವಾಗಿದೆ. ಇದನ್ನು ಕ್ರಿ.ಶ ೧೬೦೦ರ ಸುಮಾರಿಗೆ ನಿರ್ಮಿಸಿದಂತೆ ತಿಳಿದುಬರುತ್ತದೆ. ಕ್ರಿ.ಶ ೧೭೬೧ರಲ್ಲಿ ಹೈದರಾಲಿ ಇದನ್ನು ಆಕ್ರಮಿಸಿ ಹಾಳುಗೆಡವಿದನು.

ಕೊರಟಗೆರೆ ಕೋಟೆಯು ಎತ್ತರವಾದ, ದಪ್ಪ-ದಪ್ಪ ಗೋಡೆ ಹಾಗೂ ಅನೇಕ ದ್ವಾರಗಳಿಂದ ಕೂಡಿದ ಕೋಟೆಯಾಗಿದೆ. ಇದರಲ್ಲಿ ಗಂಗಾಧರೇಶ್ವರ ದೇವಾಲಯ, ಟಂಕಸಾಲೆ, ಬಸವಮಂಟಪ, ದಳವಾಯಿಗುಂಡು, ಗೋಕುಲದ ಆಂಜನೇಯ ದೇವಾಲಯ, ಬೈರಮ್ಮನದೋಣೆ ಮುಂತಾದವುಗಳಿವೆ. ಇದೂ ಕೂಡ ಕ್ರಿ.ಶ ೧೬೦೦ರ ಸುಮಾರಿಗೆ ರಣಭೈರೇಗೌಡ ಎಂಬ ಪಾಳೆಗಾರ ನಿರ್ಮಿಸಿದ ಕೋಟೆಯಾಗಿದೆ. ಚನ್ನರಾಯದುರ್ಗವು ಮಧುಗಿರಿ ಪಾಳೆಯಗಾರರಿಂದ ರಚಿಸವಾದ ಕೋಟೆಯೆಂದು ತಿಳಿದುಬರುತ್ತದೆ. ಇಮ್ಮಡಿ ಚಿಕ್ಕಪ್ಪಗೌಡನು ಕ್ರಿ.ಶ ೧೬೧೪ರ ಆನಂದನಾಮ ಸಂವತ್ಸರದಲ್ಲಿ ಕೋಟೆ, ಕೊತ್ತಲ, ದೇವಾಲಯಗಳನ್ನು ನಿರ್ಮಿಸಿದನೆಂದು ದಾಖಲೆಯೊಂದರಿಂದ ತಿಳಿದುಬರುತ್ತದೆ. ತುಮಕೂರು ತಾಲೂಕು ದೇವರಾಯನದುರ್ಗದ ಕೋಟೆಯು ಮೂರು ಸ್ತರದಲ್ಲಿ ರಚನೆಯಾಗಿದೆ. ಕೆಳಭಾಗದಲ್ಲಿ ಲಕ್ಷ್ಮೀ ನರಸಿಂಹನ ದೇವಾಲಯವಿದೆ.(ಭೋಗಾನರಸಿಂಹ), ಅದರ ಬಳಿ ಆನೆ ದೋಣೆಯಿದೆ. ಈ ಸ್ಥಳವನ್ನು ಮೊದಲು 'ಆನೆ ಬಿದ್ದ ಝರಿ' ಎಂದು ಕರೆಯುತ್ತಿದ್ದರು. ಮೈಸೂರಿನ ಚಿಕ್ಕದೇವರಾಜ ಒಡೆಯರು ಇದನ್ನು ಆಕ್ರಮಿಸಿ ಕೋಟೆ-ಕೊತ್ತಲ ದೇವಾಲಯಗಳನ್ನು ನಿರ್ಮಿಸಿದ್ದರಿಂದ ಈ ಸ್ಥಳಕ್ಕೆ ನಂತರ ದೇವರಾಯನ ದುರ್ಗವೆಂಬ ಹೆಸರಾಯಿತು. ಇಲ್ಲಿ ಜಯ ಮತ್ತು ಮಂಗಲಿ ಎಂಬ ನದಿಗಳು ಹುಟ್ಟುತ್ತವೆ. ಮುಂದೆ ಇದೇ ಜಯಮಂಗಲಿ ನದಿಯಾಗಿ ಇರಕಸಂದ್ರದ ಕೆರೆಯನ್ನು ಸೇರುತ್ತದೆ. ರಾಮತೀರ್ಥ, ಹನುಮತೀರ್ಥ, ರಾಮ, ಆಂಜನೇಯ, ಗರುಡನ ವಿಗ್ರಹಗಳಿವೆ. ಕೋಟೆಯ ಮೇಲಿನ ಭಾಗದಲ್ಲಿ ಮತ್ತೊಂದು ಲಕ್ಷ್ಮೀನರಸಿಂಹ ದೇವಾಲಯವಿದೆ. (ಯೋಗಾನರಸಿಂಹ). ಬೆಟ್ಟದ ತುತ್ತತುದಿಯವರೆಗೆ ಕೋಟೆಯ ಗೋಡೆ ಹಬ್ಬಿದ್ದು, ಅನೇಕ ಕೊಠಡಿ ಹಾಗೂ ಮಂಟಪಗಳಿವೆ. ಕುಣಿಗಲ್ ತಾಲೂಕಿನಲ್ಲಿರುವ ಹುಲಿಯೂರು ದುರ್ಗದ ಕೋಟೆಯನ್ನು ಮಾಗಡಿಯ ಪ್ರಭು ಕೆಂಪೇಗೌಡ ಕಟ್ಟಿಸಿದನು, ಇಡೀ ಬೆಟ್ಟ ಬೋಗಣೆಯೊಂದನ್ನು ಮಗುಚಿ ಹಾಕಿದಂತಿದೆ. ಇಲ್ಲಿ ಗೋಪಾಲಕೃಷ್ಣ ದೇವಾಲಯ, ಅನೇಕ ದೋಣೆ, ಮದ್ದಿನ ಮನೆ, ಹಾಗೂ ಬತೇರಿಗಳಿವೆ. ಕೋಟೆಯ ಗೋಡೆಗಳು ಬಹಳ ಬಲಿಷ್ಟವಾಗಿದೆ. ಹುತ್ತರಿದುರ್ಗವನ್ನೂ ಕೂಡ ಕೆಂಪೇಗೌಡ ಕಟ್ಟಿಸಿದನೆಂಬ ಅಭಿಪ್ರಾಯವಿದೆ. ಆದರೆ ನಿಖರ ದಾಖಲೆಗಳಿಲ್ಲ. ಚಿಕ್ಕದಾದ ಕೋಟೆಯಿದ್ದು, ಇದನ್ನು ಲಾರ್ಡ್ ಕಾರ್ನ್ವಾಲೀಸನು ಕ್ರಿ.ಶ. ೧೭೯೨ರಲ್ಲಿ ಆಕ್ರಮಿಸಿದನೆಂದು ದಾಖಲೆಯಿದೆ. ಕೋಟೆಯ ಮೊದಲ ಸ್ತರದಲ್ಲಿ ಹಲವಾರು ದೇವಾಲಯಗಳಿವೆ. ಆದಿನಾರಾಯಣ, ವೀರಭದ್ರ, ಆಂಜನೇಯ ಮುಂತಾದವು ದೊಡ್ಡದಾಗಿವೆ. ಅನೇಕ ದೋಣೆ, ಬತೇರಿ, ಮಂಟಪಗಳಿವೆ.

ನೆಲದುರ್ಗಗಳು: ಜಿಲ್ಲೆಯಲ್ಲಿರುವ ನೆಲದುರ್ಗಗಳು ಇಂದು ಬಹಳಷ್ಟು ಹಾಳಾಗಿವೆ. ಇದಕ್ಕೆ ಕಾರಣ ಕೋಟೆಯ ಕಲ್ಲು, ಕಂಬ ಮುಂತಾದವನ್ನು ಜನರು ಸ್ವಂತಕ್ಕೆ ಕಿತ್ತು ಸುಲಭವಾಗಿ ಒಯ್ದಿದ್ದಾರೆ. ಆದರೂ ಹಲವಾರು ಸ್ಥಳಗಳಲ್ಲಿ ಅವಶೇಷಗಳು ಉಳಿದು ಬಂದಿವೆ. ಶಿರಾದ ಕೋಟೆಯ ಬಹಳಷ್ಟು ಭಾಗ ಇಂದಿಗೂ ಗಟ್ಟಿಯಾಗಿ ಉಳಿದು ಬಂದಿದೆ. ಉತ್ತರದ ದಿಕ್ಕಿನಲ್ಲಿ ಮೊದಲ ಬಾಗಿಲಿದೆ. ಎರಡನೇ ಬಾಗಿಲು ದಿಡ್ಡಿಬಾಗಿಲು, ಈ ಎರಡೂ ಹಿಂದೂ ಶೈಲಿಯ ಬಾಗಿಲುಗಳಾಗಿವೆ. ದುಂಡಾದ ಕರಿಶಿಲೆಯ ಶಿಲ್ಪಕೆತ್ತನೆಯನ್ನು ಹೊಂದಿವೆ. ಮಿಕ್ಕ ಕೆಲವು ಭಾಗಗಳು ಹೈದರಾಲಿ ಮತ್ತು ಟಿಪ್ಪುಸುಲ್ತಾನನಿಂದ ನವೀಕರಣಗೊಂಡಿದ್ದು, ಮುಸ್ಲಿಂ ಶೈಲಿಯಲ್ಲಿವೆ. ಗೋಡೆ ಬಹಳ ದಪ್ಪನಾಗಿದ್ದು, ಎತ್ತರವಾಗಿದೆ. ಕೋಟೆಯಲ್ಲಿ ಹನುಮಂತ ದೇವಾಲಯವಿದೆ. ಬಿಜಾಪುರ ಕೋಟೆಯ ಶೈಲಿಯಲ್ಲೇ ಈ ಕೋಟೆಯನ್ನು ನವೀಕರಿಸಲಾಗಿದೆ. ಈ ಕೋಟೆಯನ್ನು ರತ್ನಗಿರಿಯ ದೊರೆ ರಂಗಪ್ಪನಾಯಕ ನಿರ್ಮಿಸಿದನೆಂಬ ಪ್ರತೀತಿ ಇದೆ.

ಸಿದ್ದಾಪುರ, ಮಧುಗಿರಿ ತಾಲೂಕಿನ ಒಂದು ಗ್ರಾಮ. ಇಲ್ಲಿ ಸುಂದರವಾಗಿ ನಿರ್ಮಾಣಗೊಂಡ ಕೋಟೆಯಿದೆ. ಕೋಟೆಯೊಳಗೆ ಗ್ರಾಮ ಮತ್ತು ಚೋಳಾರಾಧ್ಯರ ಮಠವಿದೆ. ಇಲ್ಲಿನ ದೇವಾಲಯಗಳಿಗೆ ಕರಿಕಲ್ಲನ್ನು ಬಳಸಲಾಗಿದೆ. ಈ ಕೋಟೆಯನ್ನು ಮಹಾನಾಡ ಪ್ರಭು ಇಮ್ಮಡಿ ಚಿಕ್ಕಪ್ಪಗೌಡರ ಕಾಲದಲ್ಲಿ ಕ್ರಿ.ಶ ೧೫೫೮ರಲ್ಲಿ ನಿರ್ಮಿಸಿದಕ್ಕೆ ಶಾಸನವಿದೆ. ಗುಬ್ಬಿ ತಾಲೂಕಿನ ಹಾಗಲವಾಡಿ ಹಿಂದೆ ಹಾಗಲವಾಡಿ ಪಾಳೆಯಗಾರರಿಂದಾಗಿ ಪ್ರಸಿದ್ಧವಾಗಿತ್ತು. ಈ ಊರಿನ ನಡುವೆ ಇಂದು ಬಹಳ ಶಿಥಿಲವಾದ ಮಣ್ಣಿನ ಕೋಟೆಯ ಗೋಡೆಗಳು, ಪ್ರವೇಶದ್ವಾರ, ಬತೇರಿ ಹಾಗೂ ಮಂಟಪಗಳಿವೆ.

ಕುಣಿಗಲ್ ಕೋಟೆ ಕಟ್ಟಲು ಕ್ರಿ.ಶ ೧೫೫೦ರಲ್ಲಿ ವೀರಕಂಬರಾಯ ಎಂಬುವವರು ಅಡಿಗಲ್ಲು ಹಾಕಿದ್ದಕ್ಕೆ ಶಾಸನವೊಂದರ ದಾಖಲೆಯಿದೆ. ತುಮಕೂರು, ತುರುವೇಕೆರೆ, ಚಿಕ್ಕನಾಯಕನಹಳ್ಳಿಗಳಲ್ಲಿ ಕೋಟೆ ಕೊತ್ತಲಗಳ ಅವಶೇಷಗಳಿವೆ. ಒಂದು ಕಾಲದಲ್ಲಿ ವಿಸ್ತಾರವಾದ ಮಣ್ಣಿನ ಕೋಟೆಯನ್ನು ಹೊಂದಿದ್ದವು ಎಂಬುದಕ್ಕೆ ಸಾಕ್ಷಿಯಾಗಿ ಅನೇಕ ಕಟ್ಟಡಗಳು ಇಂದಿಗೂ ಕಂಡು ಬರುತ್ತವೆ. ಪಾವಗಡ ಹಾಗೂ ಮಧುಗಿರಿಗಳಲ್ಲಿ ನೆಲದುರ್ಗಗಳೂ ಇವೆ. ದುರ್ಗದ ಮತ್ತೊಂದು ವಿಧವಾದ ಜಲದುರ್ಗ ಜಿಲ್ಲೆಯಲ್ಲಿಲ್ಲ.

### ಮುಸ್ಲಿಂ ಶೈಲಿಯ ಕಟ್ಟಡಗಳು

ತುಮಕೂರು ಜಿಲ್ಲೆಯ ಶಿರಾದಲ್ಲಿರುವ ಹಳೆಯ ವಾಸ್ತು ರಚನೆಗಳು ಗಮನ ಸೆಳೆವ ಮುಸ್ಲಿಂ ಶೈಲಿಯ ಸ್ಮಾರಕಗಳಾಗಿವೆ. ಇದಕ್ಕೆ ಕಾರಣ ಅದು ಮೊದಲಿಗೆ ಮೊಘಲರ ಅಧೀನಕ್ಕೆ ಬಂದಿತ್ತು. ನಂತರ ಬಿಜಾಪುರದ ಸುಲ್ತಾನರಿಗೆ, ನಂತರ ಹೈದರಾಲಿ, ಟಿಪ್ಪುವಿನ ಕೈಗೆ ಬಂದಿತು. ನಗರದ ಜುಮ್ಮಾ ಮಸೀದಿ, ಮಲಿಕ್ ರಿಹಾನ್ ದರ್ಗ ಸುಂದರವಾದ ಪರ್ಶಿಯನ್ ಶೈಲಿಯಲ್ಲಿದೆ. ಜುಮ್ಮಾ ಮಸೀದಿಯನ್ನು ನಿರ್ಮಿಸಿದವನು ಶೇಕ್‌ಫರೀದ್ ಸಾಹೇಬ್. ಅವನ ಕುಟುಂಬದವರು ಮುಂದೆ ಅದನ್ನು ವಿಸ್ತರಿಸಿದರು. ಇದು ಕ್ರಿ.ಶ ೧೬೯೬ರಲ್ಲಿ ನಿರ್ಮಾಣವಾದುದಕ್ಕೆ ದಾಖಲೆಯಿದೆ. ಇಲ್ಲಿಯ ಮಲ್ಲಿಕ್ ರಿಹಾನ್ ದರ್ಗವು ಚೌಕಾಕಾರದ ಕಟ್ಟಡವಾಗಿದ್ದು, ದೊಡ್ಡದಾದ ಗುಮ್ಮಟವನ್ನು ಹೊಂದಿದೆ. ಗುಮ್ಮಟದ ನಾಲ್ಕು ಬದಿಗೆ ಕಪ್ಪು ಶಿಲೆಯ ಎಂಟು ಅಡಿ ಎತ್ತರದ ಮಿನಾರುಗಳಿವೆ. ಶಿರಾದಲ್ಲಿ ಖಾನ್ ಬಾಗ್ ಎಂಬ ಸುಂದರವಾದ ಉದ್ಯಾನವನ ಇತ್ತು. ಮೊಘಲ್ ಅಧಿಕಾರಿ ದಿಲಾವರ್ ಖಾನ್ ಇದನ್ನು ಕ್ರಿ.ಶ ೧೬೮೬ರಲ್ಲಿ ನಿರ್ಮಿಸಿದನು. ಮುಂದೆ ಶಿರಾವನ್ನು ವಶಪಡಿಸಿಕೊಂಡ ಹೈದರಾಲಿಯೂ ಕೂಡ ಈ ಉದ್ಯಾನವನವನ್ನು ರಕ್ಷಿಸಿದನು. ಈ ಉದ್ಯಾನವನವೇ ಅವನಿಗೆ ಬೆಂಗಳೂರಿನಲ್ಲಿ ಲಾಲ್ ಬಾಗ್ ನಿರ್ಮಿಸಲು ಸ್ಫೂರ್ತಿಯಾಯಿತೆಂದು ತಿಳಿದು ಬರುತ್ತದೆ.

## ಪತ್ರಿಕೋದ್ಯಮ

ತುಮಕೂರು ಜಿಲ್ಲೆಯ ಪತ್ರಿಕಾರಂಗವು ಉತ್ತಮ ಹೆಸರು ಗಳಿಸಿದೆ. ಸ್ವಾತಂತ್ರ್ಯ ಹೋರಾಟದ ಬಗ್ಗೆ ಜಾಗೃತಿ ಮೂಡಿಸಲು ಹಾಗೂ ಜವಾಬ್ದಾರಿ ಸರ್ಕಾರ ಸ್ಥಾಪಿಸುವ ದಿಸೆಯಲ್ಲಿ ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಕೆ.ರಂಗಯ್ಯಂಗಾರ್, 'ಮೈಸೂರು ಕ್ರಾನಿಕಲ್' ಎಂಬ ಆಂಗ್ಲ ಪತ್ರಿಕೆಯೊಂದನ್ನು ಬಹಳ ಹಿಂದೆಯೇ ಜಿಲ್ಲೆಯಲ್ಲಿ ಪ್ರಥಮವಾಗಿ ಪ್ರಾರಂಭಿಸಿದ್ದರು. ಜಿಲ್ಲೆಯ ಪ್ರಥಮ ಮುದ್ರಣಾಲಯ ಎನಿಸಿದ್ದ ಜನರಲ್ ಏಜೆನ್ಸಿ ಮುದ್ರಣಾಲಯದ ಪುಟ್ಟುರಾಯರು 'ಲೀಗ್ ಜರ್ನಲ್' ಎಂಬ ಶೈಕ್ಷಣಿಕ ಮಾಸ ಪತ್ರಿಕೆ ಹೊರಡಿಸಿದ್ದರು. ಅನಂತರ ಸಿದ್ಧನರಸಯ್ಯ ಅವರು ತಮ್ಮ ಮಗಳ ಹೆಸರಿನಲ್ಲಿ "ಸಂಧ್ಯಾ" ಎಂಬ ವಾರಪತ್ರಿಕೆಯೊಂದನ್ನು ಪ್ರಪ್ರಥಮವಾಗಿ ಪ್ರಾರಂಭಿಸಿದ್ದರು. ತದನಂತರ ಅವರ ಮಗಳಾದ ಸುಮಿತ್ರ ಎಂಬುವರು ಆಗ ಮಹಿಳೆಯರಿಗೆ ಅನೇಕ ಕಟ್ಟುಪಾಡುಗಳಿದ್ದರೂ ಕೂಡ ಅದರಿಂದ ಹೊರಬಂದು ಪತ್ರಿಕಾರಂಗಕ್ಕೆ ಕಾಲಿಟ್ಟ ದಿಟ್ಟಮಹಿಳೆ. ಆಕೆಯ ಧೈರ್ಯ ಮಹಿಳೆಯರಿಗೆ ಸ್ಫೂರ್ತಿಯಾಗಿದೆ. ಗುಬ್ಬಿಯಿಂದ 'ಮಹಿಳಾ ಸಖಿ' ಎಂಬ ಪತ್ರಿಕೆ ಹೊರಬರುತ್ತಿದ್ದುದಾಗಿ ತಿಳಿದುಬರುತ್ತದೆ. ಅನಂತರದ ದಿನಗಳಲ್ಲಿ ಸ್ವಾತಂತ್ರ್ಯ ಹೋರಾಟಗಾರರಾದ ಗುಬ್ಬಿ ಮುರುಘಾರಾಧ್ಯ ಅವರ ಸಂಪಾದಕತ್ವದಲ್ಲಿ 'ಆರ್ಯವಾಣಿ' ಎಂಬ ಪತ್ರಿಕೆ ಪ್ರಾರಂಭವಾಯಿತು. ೧೯೫೪ರಲ್ಲಿ ಹೆಚ್.ಆರ್.ಗುಂಡೂರಾವ್ ಅವರ ಸಂಪಾದಕತ್ವದಲ್ಲಿ 'ವಿಜಯವಾಣಿ' ವಾರಪತ್ರಿಕೆ ಪ್ರಾರಂಭಗೊಂಡರೂ ಕೆಲಕಾಲದ ನಂತರ ದಿನಪತ್ರಿಕೆಯಾಗಿ ಮಾರ್ಪಾಟುಗೊಂಡು ಇಂದು ರಾಜ್ಯ ಮಟ್ಟದ ಪತ್ರಿಕೆಯಾಗಿ ಬೆಳೆದಿದೆ.

ಪತ್ರಿಕೆಗಳ ಬಗ್ಗೆ ಅವಲೋಕನ ಮಾಡಿದರೆ ತುಮಕೂರಿನ ಸರ್ಕಾರಿ ಪ್ರೌಢಶಾಲೆಯ ಶಾಲಾ ಪತ್ರಿಕೆ 'ಸ್ಕೂಲ್ಫೋಕ್' ಎಂಬ ಶೈಕ್ಷಣಿಕ ಪತ್ರಿಕೆ ಮಕ್ಕಳಿಗೆ ಉಪಯುಕ್ತವಾದರೂ ಕೂಡ ಅತ್ಯಲ್ಪ ಕಾಲದಲ್ಲಿ ನಿಂತುಹೋದರೆ, ಗೂಳೂರಿನ

ಜಿ.ವಿ.ರಾಜಗೋಪಾಲ್ ಅವರು ತುಮಕೂರಿನಿಂದ "ನ್ಯೂವ್ಯೂಸ್" ಪತ್ರಿಕೆಯನ್ನು ಹೊರತಂದರು. ಸಾಲೇಹ ಮುನೀರ್ ಸಂಪಾದಕತ್ವದಲ್ಲಿ "ಕರ್ನಾಟಕ ಲೀಡರ್" ಎಂಬ ಉರ್ದು ಪತ್ರಿಕೆ ಹಾಗೂ "ಲೋಕ್" ಎಂಬ ಪತ್ರಿಕೆ ಹೊರಬರುತ್ತಿತ್ತು. ನಂತರ ಎಲ್. ರಾಜಾಚಾರ್ ಅವರು "ಪೌರವಾಣಿ" ವಾರಪತ್ರಿಕೆಯನ್ನು ಹೊರತಂದರೂ, ಕೆಲಕಾಲದ ನಂತರ ಈ ಪತ್ರಿಕೆಗಳು ನಿಂತುಹೊದವು. ಆದರೆ ಮುಂದೆ ಪತ್ರಿಕಾ ರಂಗದಿಂದ ಪ್ರಭಾವಿತವಾಗಿ ಅನೇಕ ಪತ್ರಿಕೆಗಳ ಉಗಮವಾಯಿತು. ಅವುಗಳಲ್ಲಿ ಜನಹಿತ, ಬೃಂದಾವನ, ಗುಂಚಿಚೌಕ ವಾರಪತ್ರಿಕೆಗಳಾದರೆ "ಭಾರತಜ್ಯೋತಿ" ಸಾಕ್ಷರ, ವಿಶ್ವಕರ್ಮ ಹಾಗೂ ಸಾಹಿತಿ ವೀ.ಚಿಕ್ಕವೀರಯ್ಯ ಅವರ ಸಂಪಾದಕತ್ವದಲ್ಲಿ 'ನಿಕಷ' ಮಾಸಪತ್ರಿಕೆಗಳು ಪ್ರಾರಂಭವಾದರೂ ಅತ್ಯಲ್ಪ ಕಾಲದಲ್ಲೇ ನಿಂತುಹೋದವು. ಅಂದಿನ ದಿನಗಳಲ್ಲಿ ತುಮಕೂರಿನಲ್ಲಿ ಅಸಿಸ್ಟೆಂಟ್ ಕಮೀಷನರ್ ಆಗಿದ್ದ ಟಿ.ಎಂ.ಅಮೀರ್ ಅವರು "ವ್ಯವಸಾಯ ಅಭ್ಯುದಯ", 'ಸಹಕಾರ' ಎಂಬ ನಿಯತಕಾಲಿಕೆಗಳನ್ನು ಪ್ರಕಟಿಸಿ ಹೊರತಂದರೂ ಅತ್ಯಲ್ಪ ಕಾಲದಲ್ಲೇ ನಿಂತುಹೋದವು. ಏಕೆಂದರೆ ವಿಷಯನಿಷ್ಠ ಪತ್ರಿಕಾರಂಗವು ಮುಳ್ಳಿನ ಹಾಸಿಗೆಯಿದ್ದಂತೆ. ಅಂತೆಯೇ ಪತ್ರಿಕೆ ನಡೆಸುವುದು ಅಷ್ಟೇ ಕಷ್ಟ. ಅಂತಹ ಸಂದರ್ಭದಲ್ಲಿ ಯುವ ಉತ್ಸಾಹಿ ಸಿ.ಎನ್.ಭಾಸ್ಕರಪ್ಪ ಅವರ ಸಂಪಾದಕತ್ವದಲ್ಲಿ 'ತುಮಕೂರು ಟೈಮ್ಸ್' ವಾರಪತ್ರಿಕೆ ೧೯೬೪ರಲ್ಲಿ ಪ್ರಾರಂಭವಾಗಿ ನಂತರ ೧೯೭೫ರಲ್ಲಿ ದಿನಪತ್ರಿಕೆಯಾಗಿ ಜಿಲ್ಲೆಯ ಪ್ರಥಮ ದಿನಪತ್ರಿಕೆ ಎನಿಸಿತು. ೧೯೭೮ರಲ್ಲಿ 'ಪ್ರಜಾಪ್ರಗತಿ' ಎಂಬ ವಾರಪತ್ರಿಕೆಯನ್ನು ಹೊರತಂದರು. ಜಿಲ್ಲೆಯ ಸಾಕ್ಷರತಾ ಆಂದೋಲನದ ಅಂಗವಾಗಿ ಸಾಕ್ಷರಮಿತ್ರ ಎಂಬ ಪಾಕ್ಷಿಕ ಪತ್ರಿಕೆ 'ಅಕ್ಷರ ಹೊಂಬಾಳೆ' ನವಸಾಕ್ಷರ ಪತ್ರಿಕೆಯಾಗಿ ಗಮನ ಸೆಳೆದಿತ್ತು. ನಂತರ ನಿಂತು ಹೋಯಿತು. ಕೆಲಕಾಲ ಜಿ.ವಿ.ಆನಂದಮೂರ್ತಿ, ನಂತರ ಬಾ.ಹ.ರಮಾಕುಮಾರಿ ಇದರ ಸಂಪಾದಕರಾಗಿ ಕಾರ್ಯನಿರ್ವಹಿಸಿದ್ದರು.

**ವಿಜಯವಾಣಿ:** ೧೯೫೪ ಡಿಸೆಂಬರ್ ೨೦ರಲ್ಲಿ ವಿಜಯವಾಣಿ ಎಂಬ ವಾರಪತ್ರಿಕೆಯನ್ನು ಹೆಚ್.ಆರ್. ಗುಂಡೂರಾವ್ ಅವರ ಸಂಪಾದಕತ್ವದಲ್ಲಿ ಪ್ರಾರಂಭಿಸಿ, ನಂತರ ೧೯೭೫ ಡಿಸೆಂಬರ್ ೭ರಂದು ದಿನಪತ್ರಿಕೆಯಾಗಿ ಜನತೆ ಕೈಸೇರಿತು. ಪತ್ರಿಕಾರಂಗದ ಹಿರಿಯ ಭೀಷ್ಮರೆನಿಸಿದ ಗುಂಡೂರಾಯರ ನಂತರ ಅವರ ಪುತ್ರ ಹೆಚ್.ಜಿ.ವೆಂಕಟೇಶಮೂರ್ತಿ ನೋಡಿಕೊಳ್ಳುತ್ತಿದ್ದರು. ಈಗ ವಿಜಯ ಸಂಕೇಶ್ವರ ಅವರಿಗೆ ಮಾಲಿಕತ್ವಕ್ಕೆ ವರ್ಗಾವಣೆಯಾಗಿ ರಾಜ್ಯ ಮಟ್ಟದ ಪತ್ರಿಕೆಯಾಗಿ ಹೊರಬರುತ್ತಿದೆ.

**ತುಮಕೂರು ಟೈಮ್ಸ್:** ಸಿ.ಎನ್.ಭಾಸ್ಕರಪ್ಪ ಅವರ ಸಂಪಾದಕತ್ವದಲ್ಲಿ "ತುಮಕೂರು ಟೈಮ್ಸ್" ವಾರಪತ್ರಿಕೆಯನ್ನು ೧೯೬೪ರಲ್ಲಿ ಪ್ರಾರಂಭವಾಯಿತು. ನಂತರ ೧೯೭೫ರಲ್ಲಿ ದಿನಪತ್ರಿಕೆಯಾಗಿ ಪರಿವರ್ತಿಸಿ, ಜಿಲ್ಲೆಯಲ್ಲೇ ಪ್ರಥಮ ದಿನಪತ್ರಿಕೆಯಾಗಿ ಪ್ರಭಾವಿತಗೊಂಡಿತು. ಚಂಪಕ ಮುದ್ರಣಾಲಯ ಸ್ಥಾಪಿಸಿದರು. ಸಿ.ಎನ್.ಭಾಸ್ಕರಪ್ಪ ಅವರು ಪತ್ರಿಕಾ ಕ್ಷೇತ್ರವಲ್ಲದೆ ನಗರಸಭಾ ಅಧ್ಯಕ್ಷರಾಗಿ, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧ್ಯಕ್ಷರಾಗಿ ರಾಜಕೀಯ ಪ್ರವೇಶಿಸಿ, ೧೯೮೫ರಲ್ಲಿ ಬೆಳ್ಳಾವಿ ವಿಧಾನಸಭಾ ಸದಸ್ಯರಾಗಿ ೧೯೯೬ರಲ್ಲಿ ತುಮಕೂರು ೧೧ನೇ ಲೋಕಸಭಾ ಸದಸ್ಯರಾಗಿ ಆಯ್ಕೆಯಾಗಿ ಹೆಸರು ಗಳಿಸಿದರು. ಈ ಪತ್ರಿಕೆಯಲ್ಲಿ ವರದಿಗಾರರಾಗಿ ಸೇವೆಸಲ್ಲಿಸಿದ ಅನೇಕ ಯುವ ಉತ್ಸಾಹಿಗಳು ಸಂಪಾದಕರಾಗಿ ಖ್ಯಾತ ಬರಹಗಾರರಾಗಿದ್ದಾರೆ. ನಂತರ ೧೯೭೮ರಲ್ಲಿ ಮತ್ತೊಂದು ಪತ್ರಿಕೆಯಾದ "ಪ್ರಜಾಪ್ರಗತಿ" ಎಂಬ ವಾರಪತ್ರಿಕೆಯನ್ನು ಹೊರತಂದರು. ಇವರು ಹೊರತಂದಿರುವ "ತುಮಕೂರು ಜಿಲ್ಲಾ ದರ್ಶನ" ಗ್ರಂಥ ಇಂದಿಗೂ ಜಿಲ್ಲೆಯ ಆಕರ ಗ್ರಂಥವಾಗಿದೆ.

**ಜೀಲ್ ಪತ್ರಿಕೆ:** ಸಂಪಾದಕ ಎಂ.ಸಿ.ರುದ್ರಯ್ಯ ಕೊರಟಗೆರೆ ತಾಲೂಕಿನ ನೇಗಲಾಲ ಗ್ರಾಮದಲ್ಲಿ ಹುಟ್ಟಿ ಬೆಳೆದು ತುಮಕೂರಿನಲ್ಲಿ ವಾಸವಾಗಿರುವ ಇವರು ಪದವೀಧರರಾಗಿದ್ದು ೧೯೬೩ರಲ್ಲಿ ಫೋಟೋಗ್ರಾಫರ್ ಆಗಿ ವೃತ್ತಿ ಆರಂಭಿಸಿ ೧೯೭೭ರವರೆಗೂ ವಿಶಾಲ ಕರ್ನಾಟಕ ದಿನಪತ್ರಿಕೆ ವರದಿಗಾರರಾಗಿ ನಂತರ ತಮ್ಮ ಸ್ವಂತ ಸಂಪಾದಕತ್ವದಲ್ಲಿ "ಜೀಲ್" ವಾರಪತ್ರಿಕೆಯನ್ನು ಪ್ರಾರಂಭಿಸಿದ್ದು, ಅದು ಇತ್ತೀಚೆಗೆ ದಿನಪತ್ರಿಕೆಯಾಗಿ ರೂಪುಗೊಂಡಿದೆ.

**ಅಮರಸಂದೇಶ:** ಕನ್ನಡ ಚಳವಳಿಯ ಮುಖೇನ ಸಾಮಾಜಿಕ ಕ್ಷೇತ್ರವನ್ನು ಪ್ರವೇಶಿಸಿದ ತೊ.ಗ.ಅಡವೀಶಪ್ಪ ೧೯೭೦–೭೨ರಲ್ಲಿ "ಇಳಿದು ಬಾ ತಾಯೆ" ಕನ್ನಡ ಚಳವಳಿಯ ಮೂಲಕ ಪತ್ರಿಕಾರಂಗಕ್ಕೆ ಕಾಲಿಟ್ಟರು. ಅವರು ೧೯೬೭ರಲ್ಲಿ "ಅಮರ ಸಂದೇಶ" ವಾರಪತ್ರಿಕೆ ಪ್ರಾರಂಭಿಸಿ ೧೯೮೭ರಲ್ಲಿ ದಿನಪತ್ರಿಕೆಯಾಗಿ ಪರಿವರ್ತಿಸಿದ್ದಾರೆ. ಇವರು ಪತ್ರಿಕಾ ಸಂಪಾದಕರ ಸಂಘದ ಜಿಲ್ಲಾಧ್ಯಕ್ಷರಾಗಿ, ಭಾರತೀಯ ಸಣ್ಣ ಮತ್ತು ಮಧ್ಯಮ ಪತ್ರಿಕೆಗಳ ರಾಷ್ಟ್ರೀಯ ಒಕ್ಕೂಟ ನವದೆಹಲಿ (ದಕ್ಷಿಣ ಭಾರತ

ವಲಯ)ಯ ರಾಷ್ಟ್ರೀಯ ಜಂಟಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ. ಸಾಮಾಜಿಕ, ಸಾಂಸ್ಕೃತಿಕ ಹಾಗೂ ವಿವಿಧ ಕಾರ್ಮಿಕ ಸಂಘಗಳಲ್ಲಿ ಕ್ರಿಯಾಶೀಲನಾಗಿ ತೊಡಗಿಕೊಂಡಿದ್ದಾರೆ.

**ಸಿದ್ಧಗಂಗಾ:** ಶ್ರೀಸಿದ್ಧಗಂಗಾ ಕ್ಷೇತ್ರದಿಂದ ಮುದ್ರಣವಾಗುತ್ತಿದ್ದ ವಾರ್ಷಿಕ ವಿಶೇಷಾಂಕ ಕೆಲಕಾಲ ಕೆ.ಎಸ್.ಶಿವಕುಮಾರ್ ಅವರ ಸಂಪಾದಕತ್ವದಲ್ಲಿ ಹೊರಬರುತ್ತಿದ್ದು ನಂತರ ಮಾಸಿಕ ಪತ್ರಿಕೆಯಾಗಿ ರೂಪುಗೊಂಡಿತು. ಪ್ರಸ್ತುತ, ಜಾನಪದ ಸಾಹಿತಿ ಹೆಚ್.ವಿ. ವೀರಭದ್ರಯ್ಯ ಅವರ ಸಂಪಾದಕತ್ವದಲ್ಲಿ ಸಿದ್ಧಗಂಗಾ ಮಾಸಪತ್ರಿಕೆ ಜನತೆಯ ಕೈಸೇರುತ್ತಿದೆ.

**ಏಕೇಶ್ ಪತ್ರಿಕೆ:** ಹಿರಿಯ ಸಹೋದರ ಸಿ.ಎನ್.ಭಾಸ್ಕರಪ್ಪ ಅವರ ಸಂಪಾದಕತ್ವದಲ್ಲಿ ಹೊರಬರುತ್ತಿದ್ದ 'ತುಮಕೂರು ಟೈಮ್ಸ್' ಪತ್ರಿಕೆಯ ಮೂಲಕ ಪತ್ರಿಕಾರಂಗ ಪ್ರವೇಶಿಸಿದ ಚಿ.ನ.ಏಕೇಶ್ವರ್, ೧೯೮೧ರ ಜನವರಿ ೨೬ರಂದು ವಾರಪತ್ರಿಕೆಯಾಗಿ 'ಏಕೇಶ್ ಪತ್ರಿಕೆ' ಯನ್ನು ಹೊರತಂದರು. ನಂತರ ೧೯೮೨ರಲ್ಲಿ ಅದು ದಿನಪತ್ರಿಕೆಯಾಯಿತು. ಗೋಕಾಕ್ ಚಳವಳಿ, 'ಆಡಳಿತದಲ್ಲಿ ಕನ್ನಡ' ಚಳವಳಿ, ಡಾ॥ ರಾಜ್ ಅಭಿಮಾನಿಗಳ ಸಂಘದ ಅಧ್ಯಕ್ಷರಾಗಿ ಕನ್ನಡ ಪರ ಸಂಘಟನೆಯಲ್ಲಿ ತೊಡಗಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿಗೆ ಎರಡು ಬಾರಿ ಕಾರ್ಯದರ್ಶಿಯಾಗಿ ನಂತರ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುವ ಚಿ.ನ. ಏಕೇಶ್ವರ್ ಅವರು ಭಾರತ ಸೇವಾದಳದ ತಾಲೂಕು ಕಾರ್ಯದರ್ಶಿಯಾಗಿ, ಜಿಲ್ಲಾ ಸಂಪಾದಕರ ಸಂಘದ ಒಕ್ಕೂಟಕ್ಕೆ ಸದಸ್ಯರಾಗಿ ಜಿಲ್ಲಾಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ೧೯೯೯ರಲ್ಲಿ ಜಿಲ್ಲಾಡಳಿತದ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಮುಂತಾದ ಪ್ರಶಸ್ತಿಗಳಿಂದ ಪುರಸ್ಕೃತಗೊಂಡಿದ್ದಾರೆ. ಇವರ ಅವಧಿಯಲ್ಲಿ ಅಖಿಲ ಭಾರತ ೬೯ನೇ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಿತು. ಇವರು ಫೆಬ್ರವರಿ ೨೦೧೪ರಲ್ಲಿ ವಿಧಿವಶರಾದರು. ಈಗ ಟಿ. ಇ. ರಘುರಾಮ್ ಅದರ ಸಂಪಾದಕರಾಗಿದ್ದಾರೆ.

**ತುಮಕೂರು ವಾರ್ತೆ**: ತುಮಕೂರು ತಾಲೂಕು ಹೆಬ್ಬೂರಿನ ಹೆಚ್.ಎಸ್.ರಾಮಣ್ಣನವರು ೧೯೮೨ರಲ್ಲಿ "ತುಮಕೂರು ವಾರ್ತೆ" ದಿನಪತ್ರಿಕೆಯನ್ನು ಪ್ರಾರಂಭಿಸಿದರು. ಜಿಲ್ಲಾಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ರಾಜ್ಯ ಸಣ್ಣ ಮತ್ತು ಜಿಲ್ಲಾ ಪತ್ರಿಕಾ ಸಂಪಾದಕ ಸಂಘದ ಖಜಾಂಚಿಯಾಗಿ ಕಾರ್ಯನಿರ್ವಹಿಸಿ ಪತ್ರಿಕಾ ಅಕಾಡೆಮಿ ಸದಸ್ಯರಾಗಿದ್ದರು. ೧೯೯೫ರಲ್ಲಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಮಾಧ್ಯಮ ಅಕಾಡೆಮಿ ಪ್ರಶಸ್ತಿ ಮುಂತಾದವು ಲಭಿಸಿವೆ. ೧೯೭೫ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ಜನಮಿತ್ರ ದಿನಪತ್ರಿಕೆಯಲ್ಲಿ ಸ್ಥಾನೀಯ ಸಂಪಾದಕರಾಗಿ ಹಿರಿಯ ಪತ್ರಕರ್ತ ಕೃ.ನ.ಮೂರ್ತಿ ಹಾಗೂ ಕೋಲಾರ ಪತ್ರಿಕೆ ಸಂಪಾದಕ ಕೆ.ಪ್ರಹ್ಲಾದರಾವ್ ಅವರ ಮಾರ್ಗದರ್ಶನದಲ್ಲಿ ಜನಮಿತ್ರದಲ್ಲಿ ಸೇವೆ ಸಲ್ಲಿಸಿದ್ದಾರೆ. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತು, ಭಾರತೀಯ ಜನಸಂಘ ಹೀಗೆ ಹಲವಾರು ಸಂಘಟನೆಗಳಲ್ಲಿದ್ದವರು. ಜಿಲ್ಲಾ ಬರಹಗಾರರ ಸಂಘ ಸ್ಥಾಪಿಸಿದ್ದರು. ಹಾಲಿ ಪತ್ರಿಕೆಯ ಮಾಲೀಕತ್ವ ಬದಲಾವಣೆಯಾಗಿದೆ. ಪ್ರಸ್ತುತ, 'ನಗೆಮುಗುಳು' ಎಂಬ ಮಾಸಿಕ ಹಾಸ್ಯಪತ್ರಿಕೆ ಹೊರತರುತ್ತಿದ್ದಾರೆ.

**ಅಮೃತವಾಣಿ:** ಮಧುಗಿರಿಯ ಮಾಜಿ ಶಾಸಕರು, ತುಮಕೂರು ನಿವಾಸಿಗಳಾದ ಗಂಗಹನುಮಯ್ಯ ಪರಿಶಿಷ್ಟ ಜನಾಂಗದ ವ್ಯಕ್ತಿಯಾಗಿ ದಲಿತ ಶಕ್ತಿಗೆ ಸಕ್ರಿಯ ಚಾಲನೆ ನೀಡಿ, ತುಳಿತಕ್ಕೆ ಒಳಗಾದವರ ನೋವು ನಲಿವುಗಳಿಗೆ ಸ್ಪಂದಿಸುತ್ತಾ ಅಮೃತವಾಣಿ ಪತ್ರಿಕೆಯ ಮೂಲಕ ಪತ್ರಿಕೋದ್ಯಮದಲ್ಲಿ ನಿರತರಾಗಿದ್ದಾರೆ. ಮಧುಗಿರಿ ಕ್ಷೇತ್ರದಿಂದ ಎರಡು ಬಾರಿ ಶಾಸಕರಾಗಿ, ರೂಪ ರಂಗ ಕ್ರಿಯೇಷನ್ಸ್‌ನ ಗೌರವ ಅಧ್ಯಕ್ಷರಾಗಿ ಹಲವಾರು ನಾಟಕಗಳಲ್ಲಿ ನಟರಾಗಿ ಅಭಿನಯಿಸಿ ಸಾಕ್ಷರತೆ ಕಿರುಚಿತ್ರವನ್ನು ನಿರ್ದೇಶನ ಮಾಡಿದ್ದರು. ಆದಿಜಾಂಬವ ಸಂಘದ ಅಧ್ಯಕ್ಷರಾದ ಸಂದರ್ಭದಲ್ಲಿ ಜನಪ್ರಿಯ ಜನನಾಯಕನೆಂದು ಸನ್ಮಾನಿತರಾಗಿದ್ದಾರೆ. ಹಲವಾರು ಪ್ರಶಸ್ತಿ ಗೌರವ ಸಂದಿವೆ.

**ಗಂಗಾವಾಹಿನಿ**: ಗಂಗಾವಾಹಿನಿ ಪತ್ರಿಕೆಯ ಸಂಪಾದಕ ಆರ್.ಕಾಮರಾಜ್ ಅವರು ೧೯೮೬ರಲ್ಲಿ ತುಮಕೂರು ಟೈಮ್ಸ್ ಪ್ರಜಾಪ್ರಗತಿ ಮತ್ತು ಈ ಸಂಜೆ ಪತ್ರಿಕೆಗಳಲ್ಲಿ ವರದಿಗಾರರಾಗಿ ಸೇವೆ ಸಲ್ಲಿಸುವ ಮೂಲಕ ಪತ್ರಿಕಾರಂಗಕ್ಕೆ ಪ್ರವೇಶಿಸಿದರು. ೧–೧೧–೧೯೯೮ರಲ್ಲಿ "ಗಂಗಾವಾಹಿನಿ" ವಾರಪತ್ರಿಕೆಯನ್ನು ಪ್ರಾರಂಭಿಸಿ, ೧೪–೩–೧೯೯೪ರಿಂದ ದಿನಪತ್ರಿಕೆಯಾಗಿ ಪರಿವರ್ತಿಸಿದ್ದಾರೆ. ಆರ್.ಕಾಮರಾಜ್ ಅವರು  ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಲ್ಲಿ ಸಹಕಾರ್ಯದರ್ಶಿಯಾಗಿ ಜಿಲ್ಲಾ ಸಂಪಾದಕರ ಸಂಘದ ಕಾರ್ಯದರ್ಶಿಯಾಗಿದ್ದರು. ಜಿಲ್ಲಾ ಹಾಪ್ಕಾಮ್ಸ್ ಅಧ್ಯಕ್ಷರಾಗಿ ಮತ್ತು ರೈತ ಸಂಘಟನೆಯಲ್ಲಿ ತೊಡಗಿದ್ದಾರೆ.

**ಸೊಗಡು ದಿನಪತ್ರಿಕೆ:** ಸೊಗಡು ದಿನಪತ್ರಿಕೆ ಸಂಪಾದಕ ಎಸ್.ಶಿವಣ್ಣ ತುಮಕೂರು ಕ್ಷೇತ್ರದ ವಿಧಾನಸಭಾ ಸದಸ್ಯರಾಗಿ ಎರಡನೇ ಬಾರಿ ಸಚಿವರಾಗಿ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದರು. ಪತ್ರಿಕೆ ಪ್ರಾರಂಭಕ್ಕೆ ಮುನ್ನ ಸ್ವಂತ ಮುದ್ರಣಾಲಯವನ್ನು ತೆರೆಯುವ ಮೂಲಕ ವೃತ್ತಿ ಪ್ರಾರಂಭಿಸಿದರು. ಮುದ್ರಣಾಲಯ ಪ್ರಾರಂಭಿಸಿ ೧೦ ವರ್ಷಗಳ ನಂತರ ಪತ್ರಿಕೋದ್ಯಮಕ್ಕೆ ಕಾಲಿಟ್ಟ ಅವರು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾಗಿ ಅಖಿಲ ಭಾರತ ಮಟ್ಟದ ಅಧ್ಯಕ್ಷರಾಗಿದ್ದರು.

**ಪ್ರಜಾಪ್ರಗತಿ :** ಶಿರಾ ತಾಲೂಕು ಪಟ್ಟನಾಯ್ಕನಹಳ್ಳಿಯ ಎಸ್.ನಾಗಣ್ಣ ಅವರ ಸಂಪಾದಕತ್ವದಲ್ಲಿ "ಪ್ರಜಾಪ್ರಗತಿ" ಜನತೆ ಕೈಸೇರುತ್ತಿದೆ. ಇವರು ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆಯಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದು ನಂತರ ತುಮಕೂರು ಜಿಲ್ಲಾ ಪತ್ರಿಕೋದ್ಯಮಕ್ಕೆ ಕಾಲಿಟ್ಟರು. ೧೯೮೭ರಲ್ಲಿ ತಮ್ಮ ಸ್ವಂತ ಸಂಪಾದಕತ್ವದಲ್ಲಿ ಪ್ರಜಾಪ್ರಗತಿ ದಿನಪತ್ರಿಕೆಯನ್ನು ಪ್ರಾರಂಭಿಸಿದರು. ಇವರು ಶ್ರೀರಂಗ ಹವ್ಯಾಸಿ ಕಲಾಸಂಘದಲ್ಲಿ ಗೌರವಾಧ್ಯಕ್ಷರಾಗಿ ಜಿಲ್ಲಾಪತ್ರಕರ್ತರ ಸಂಘದ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದು, ಇವರು 'ರಾಕ್‌ಲೈನ್' ಪತ್ರಿಕಾ ಪ್ರಶಸ್ತಿ ಪುರಸ್ಕೃತರಾಗಿದ್ದಾರೆ. ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ಮಾಧ್ಯಮ ಅಕಾಡೆಮಿ ಮುಂತಾದ ಅನೇಕ ಪ್ರಶಸ್ತಿ ದೊರಕಿವೆ. ೨೦೧೩ರಲ್ಲಿ ನಡೆದ ಶಿರಾ ತಾಲೂಕು ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದರು. ಪ್ರಸ್ತುತ, ಈ ಪತ್ರಿಕೆಯು ಐದು ಜಿಲ್ಲೆಗಳಲ್ಲಿ ಪ್ರಸಾರವಾಗುತ್ತಿದೆ.

**ಟುಮಕಿ:** ಟುಮಕಿ ದಿನಪತ್ರಿಕೆಯ ಸಂಪಾದಕ ಟಿ.ಎಸ್.ಗಟ್ಟಿ ಅವರು ೧೯೭೮ರಲ್ಲಿ ಪತ್ರಿಕಾರಂಗಕ್ಕೆ ಕಾಲಿಟ್ಟರು. ೧೯೭೮-೭೯ರವರೆಗೆ ಜ್ವಾಲ್ ಕನ್ನಡ ವಾರಪತ್ರಿಕೆಯಲ್ಲಿ ೧೯೭೯ರಿಂದ ತುಮಕೂರು ಟೈಮ್ಸ್, ಅಂತ್ಯೋದಯ ಪತ್ರಿಕೆಗಳಲ್ಲಿ ವ್ಯವಸ್ಥಾಪಕ ಸಂಪಾದಕರಾಗಿ, ಕನ್ನಡಮ್ಮ ದಿನಪತ್ರಿಕೆಯಲ್ಲಿ ಪ್ರಧಾನ ವರದಿಗಾರರಾಗಿ, ಸೊಗಡು ದಿನಪತ್ರಿಕೆಯಲ್ಲಿ ಸೇವೆಸಲ್ಲಿಸಿ ೧೯೯೦ರಲ್ಲಿ ತಮ್ಮ ಸಂಪಾದಕತ್ವದಲ್ಲಿ ಟುಮಕಿ ವಾರಪತ್ರಿಕೆ ಪ್ರಾರಂಭಿಸಿ, ೧೯೯೨ರಿಂದ ದಿನಪತ್ರಿಕೆಯಾಗಿ ಹೊರತರುತ್ತಿದ್ದಾರೆ. ಜಿಲ್ಲಾಪತ್ರಿಕಾ ಸಂಪಾದಕರ ಸಂಘದ ಕಾರ್ಯದರ್ಶಿ ಹಾಗೂ ಭಾರತೀಯ ಸಣ್ಣ ಮತ್ತು ಮಧ್ಯಮ ಪತ್ರಿಕೆಗಳ ಒಕ್ಕೂಟದ ರಾಜ್ಯ ಶಾಖೆಯ ಕಾರ್ಯಕಾರಿಸಮಿತಿ ಸದಸ್ಯರಾಗಿದ್ದಾರೆ. ಇತ್ತೀಚೆಗೆ ತುಮಕೂರು ನಗರಸಭೆಗೆ ಸರ್ಕಾರದ ನಾಮಾಂಕಿತ ಸದಸ್ಯರಾಗಿದ್ದು, ೧೯೯೮ರಲ್ಲಿ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾಗಿದ್ದಾರೆ.

**ಹಾಯ್ ತುಮಕೂರು:** 'ಮುಸುಕು ಮುಂಜಾನೆ' ವಾರಪತ್ರಿಕೆಯ ವ್ಯವಸ್ಥಾಪಕ ಸಂಪಾದಕರಾಗಿ ರಂಗನಾಥ್ ಸೇವೆ ಸಲ್ಲಿಸಿದರೆ ಸುದ್ದಿ ಸಂಪಾದಕರಾಗಿ ಎಸ್.ಪಿ.ತಮ್ ಅವರು ಅನೇಕ ವರ್ಷಗಳ ಕಾಲ ಅವಿರತ ಸೇವೆ ಸಲ್ಲಿಸಿ ಇದೀಗ ಹಾಯ್ ತುಮಕೂರು ವಾರಪತ್ರಿಕೆ ಸಂಪಾದಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಎಸ್.ಪಿ.ತಮ್ ಅವರು ಏಕೇಶ್ ಪತ್ರಿಕೆ ಸೇರಿದಂತೆ ಹಲವಾರು ಪತ್ರಿಕೆಗಳಲ್ಲಿ ವರದಿಗಾರರಾಗಿ ಸೇವೆ ಸಲ್ಲಿಸಿದ್ದಾರೆ.

**ಚಿ.ಗಿ.ವಾಯ್ಸ್:** ದಿವಂಗತ ಚಿ.ಗಿ.ಸತ್ಯನಾರಾಯಣ ಅವರು ಚಿ.ಗಿ.ವಾಯ್ಸ್ ವಾರಪತ್ರಿಕೆ ಸಂಪಾದಕರಾಗಿ ಕೆಲಕಾಲ ಪತ್ರಿಕೆ ನಡೆಸಿದರು. ಇವರು ಆರೋಗ್ಯ ಇಲಾಖೆ ನೌಕರರಾಗಿದ್ದು, ಸರ್ಕಾರಿ ನೌಕರರ ಸಂಘದ ಜಿಲ್ಲಾ ಅಧ್ಯಕ್ಷರಾಗಿದ್ದರು. ಕುರುಬ ಸಮಾಜದ ಉಪಾಧ್ಯಕ್ಷರಾಗಿದ್ದರು. ಕನ್ನಡಪರ ಚಳವಳಿಗಳಲ್ಲಿ ತೊಡಗಿದ್ದರು.

**ಗ್ರಾಹಕವಾಣಿ:** ವಕೀಲರಾಗಿದ್ದ ಟಿ.ಎಸ್.ನಿರಂಜನ್ ಅವರು 'ಗ್ರಾಹಕವಾಣಿ' ಮಾಸಪತ್ರಿಕೆಯನ್ನು ಹೊರತರುತ್ತಿದ್ದಾರೆ. ಪ್ರಸ್ತುತ ಅವರು ಕೇಂದ್ರೀಯ ಗ್ರಾಹಕ ಸಂರಕ್ಷಣಾ ಮಂಡಳಿಯ ಸದಸ್ಯರಾಗಿದ್ದಾರೆ.

**ರಾಕ್ ಲೈನ್ ಪತ್ರಿಕೆ:** ಕೆ.ರವಿಕುಮಾರ್ ಸಂಪಾದಕರಾಗಿ 'ರಾಕ್ ಲೈನ್ ಪತ್ರಿಕೆ' ಪಾಕ್ಷಿಕವನ್ನು ಪ್ರಾರಂಭಿಸಿದರು. ೧೯೯೭ರಲ್ಲಿ ಪ್ರಾರಂಭವಾದ ಪತ್ರಿಕೆ ರಾಕ್ ಲೈನ್ ಪತ್ರಿಕಾ ಪುರಸ್ಕಾರ ನೀಡುವ ಹೊಸ ಪರಂಪರೆಯನ್ನು ಪ್ರಾರಂಭಿಸಿತು. ರಾಷ್ಟ್ರಮಟ್ಟದ ವೇಯ್ಟ್‌ಲಿಫ್ಟರ್ ಆಗಿದ್ದು, ವಿವಿಧ ಸಂಘ-ಸಂಸ್ಥೆಗಳಲ್ಲಿ ಕಾರ್ಯನಿರತವಾಗಿರುವ ಇವರು ಕನ್ನಡ ಕಟ್ಟುವ ಕಾರ್ಯದಲ್ಲಿಯೂ ಮುಂದಾಗಿದ್ದಾರೆ. ಈಗ ಹೋಂಗಾರ್ಡ್ಸ್‌ನ ಜಿಲ್ಲಾ ಕಮಾಂಡೆಂಟ್ ಆಗಿ ಸೇವೆ ಸಲ್ಲಿಸುತ್ತಿದ್ದು, ರಾಷ್ಟ್ರಪ್ರಶಸ್ತಿ ಪಡೆದಿದ್ದಾರೆ. ಗುರುಲಿಂಗೇಗೌಡರ ಪ್ರಜಾದೇವರು, ಮಲ್ಲಾನಾಯಕ್ ಅವರ ಕೆಚ್ಚೆದೆ ಕೆಣಕು, ತುಮಕೂರು ಮಾಧ್ಯಮ, ನಿಮ್ಮ ಪತ್ರಿಕೆ, ಹೊಸ ಅಲೆ, ಜನತಾ ಪ್ರಗತಿ, ಅರಿಂಜಯ, ಪುಣೆ ರಾಜು ಅವರ ನಗೆಮಿತ್ರ, ತುಮಕೂರು ಜ್ಯೋತಿ, ಸತ್ಯವೇದಿಕೆ, ಮುನೀರ್ ಅಹಮದ್ ಅವರ 'ಮಹಫಿಲ್', 'ನಜೀರ್ ಬೇಗ್' ಅವರ 'ಲೋಕ್‌ಅಗ್ನಿ' ವಿಜಯಲಕ್ಷ್ಮಿ ಮರಿಯಪ್ಪನವರ 'ಜಯದುರ್ಗಿ', ಆರ್ ಸ್ವಾದೀನ್ ಅವರ 'ಸ್ಪಂದನ', ಸೈಫುಲ್ಲಾ ಅವರ 'ಮುಗಿಲಂಚು' ಧನಂಜಯ ಅವರ 'ಬೆಂಕಿಯ ಬಲೆ' ಮುಂತಾದ ಅನೇಕ ಪತ್ರಿಕೆಗಳು ಜನತೆಯ ಕೈಸೇರುತ್ತಿವೆ. ಹಲವಾರು ವಾರಪತ್ರಿಕೆಗಳು ಪ್ರಚಾರಕ್ಕೆ ಬಂದರೂ ಕೂಡ

ಅತ್ಯಲ್ಪ ಕಾಲದಲ್ಲಿಯೇ ನಿಂತು ಹೋದವುಗಳಾಗಿವೆ. ಅನೇಕ ಪತ್ರಿಕೆಗಳಲ್ಲಿ ಕೆಲಸಮಾಡಿದ್ದ ಕುಚ್ಚಂಗಿ ಪ್ರಸನ್ನ ಕೆಲಕಾಲ "ಸುದ್ದಿ ಅಮೂಲ್ಯ" ಪತ್ರಿಕೆ ಹೊರತಂದಿದ್ದರು. ಕೇದಾರ್ ಮಠ ಅವರ "ಕನ್ನಡ ಗಂಗೋತ್ರಿ" ಪತ್ರಿಕೆ ಮುಂತಾದವುಗಳು ಕಂಡುಬರುತ್ತವೆ. ರಾಜ್ಯ ಮಟ್ಟದ ಪ್ರಜಾವಾಣಿ ಪತ್ರಿಕೆಗೆ ವರದಿಗಾರರಾಗಿ ಉದಯಶಂಕರ ಭಟ್, ಪಿ.ಟಿ.ಐ ವರಿದಗಾರರಾಗಿ ಎಂ.ಗಂಗಪ್ಪ, ಜನಾಧಿಕಾರ ಪತ್ರಿಕೆಯ ಕೋಟೆ ನಾಗಭೂಷಣ್, ಜನವಾಹಿನಿ ವರದಿಗಾರರಾಗಿದ್ದ ರಾಧಾಕೃಷ್ಣ, ವಿಜಯ ಕರ್ನಾಟಕ ಪತ್ರಿಕೆಗೆ ಪಾವಗಡ ಶ್ರೀನಿವಾಸ್, 'ದಿ ಹಿಂದೂಪತ್ರಿಕೆ'ಯ ವರದಿಗಾರರಾಗಿ ಶಿವರಾಜ್, ಕನ್ನಡಪ್ರಭದಲ್ಲಿ ದೀರ್ಘಕಾಲ ಸುಬ್ರಹ್ಮಣ್ಯಶರ್ಮ ಬಾಗಲೋಡಿ ವರದಿಗಾರರಾಗಿ ಸೇವೆ ಸಲ್ಲಿಸಿದ್ದರು. ಈಗ ಉಗಮ ಶ್ರೀನಿವಾಸ್, ದೇವರಾಜ್ ಇಂಡಿಯನ್ ಎಕ್ಸ್‌ಪ್ರೆಸ್ ವರದಿಗಾರರಾಗಿದ್ದಾರೆ. ಈ ಹಿಂದೆ ಗಂಗಾವಾಹಿನಿಯ ಮುಖ್ಯವರದಿಗಾರರಾಗಿ ಕೆಲಸ ಮಾಡಿ ಈಗ ಸಂಯುಕ್ತ ಕರ್ನಾಟಕ ಪತ್ರಿಕೆಯ ಜಿಲ್ಲಾ ವರದಿಗಾರ ಜಿ.ಇಂದ್ರಕುಮಾರ್ ಹಾಗೂ ಉದಯ ಟಿವಿ, ಸಂಜೆವಾಣಿ ಜಿಲ್ಲಾ ವರದಿಗಾರ ರೇಣುಕಾರಾಧ್ಯ, 'ಹೊಸ ದಿಗಂತ' ಪತ್ರಿಕೆಯ ರವೀಂದ್ರನಾಥ್ ಹೊನ್ನೂರ್ ಮುಂತಾದವರು ವರದಿಗಾರರಾಗಿದ್ದವರು. 'ಈ' ಟಿ.ವಿ. ವರದಿಗಾರರಾಗಿ ಚಂದ್ರಶೇಖರ್ ಕಾರ್ಯನಿರ್ವಹಿಸುತ್ತಿದ್ದಾರೆ. ಶಿವಾನಂದ ಶಿವಾಚಾರ್ಯ ಸ್ವಾಮಿಗಳ 'ಶಿವದುಂಧುಬಿ' ಪತ್ರಿಕೆ ಪ್ರಾರಂಭವಾಗಿದೆ. 'ಅಬ್ಕಾರಿ ಧ್ವನಿ' ಕನ್ನಡ ಮಾಸಿಕ ಪತ್ರಿಕೆ ಎಂ.ಪುನೀತ್ ಗೌತಮ್ ಅವರ ಸಂಪಾದಕತ್ವದಲ್ಲಿ ಹೊರಬರುತ್ತಿತ್ತು. ಡೈಲೀ ಸಾಲರ್ ಪತ್ರಿಕೆಯ ವರದಿಗಾರ ಆರೀಫ್ ಮತೀನ್, ಸಹರಾ ದಿನಪತ್ರಿಕೆಯ ಮುನೀರ್ ಅಹಮದ್, ಡೆಕನ್ ಕ್ರೋನಿಕಲ್ ನ ಜಿ.ಎಸ್.ಶ್ರೀನಿವಾಸ್, 'ಸಾಕ್ಷಿ' ತೆಲುಗು ಪತ್ರಿಕೆಯ ಕೆ.ಜಗನ್ನಾಥ್, ಆಂಧ್ರಜ್ಯೋತಿ ತೆಲುಗು ಪತ್ರಿಕೆಯ ಎಸ್.ಚಿನ್ನು, ಸಂಜೆ ಸಮಾಚಾರ್ ನ ಇಸ್ತಾಕ್-ಅಹಮದ್, ಈ ನಾಡು ಪತ್ರಿಕೆಯ ಗೋವಿಂದಪ್ಪ ಮುಂತಾದ ಇತರೆ ಭಾಷೆಯ ಪತ್ರಿಕಾ ವರದಿಗಾರರನ್ನು ಕಾಣಬಹುದು.

ತುಮಕೂರು ಜಿಲ್ಲಾ ಪತ್ರಿಕೆಗಳಲ್ಲಿ 'ಪ್ರಜಾ ಪ್ರಗತಿ'ಯಲ್ಲಿ ಆರ್.ಎಸ್.ಅಯ್ಯರ್, ಗರುಗದೊಡ್ಡಿ ನಟರಾಜ್, ವಕೀಲರಾದ ಸಾ.ಚಿ.ರಾಜ್‌ಕುಮಾರ್ ಅವರು ವರದಿಗಾರರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಸೊಗಡು ದಿನಪತ್ರಿಕೆ, ಕೋಲಾರ ಪತ್ರಿಕೆಗಳಲ್ಲಿ ಮುಖ್ಯ ವರದಿಗಾರರಾಗಿದ್ದ ಚಂದ್ರಮೌಳೇಶ್ವರ 'ಹೊಸ ದಿಗಂತ' ಪತ್ರಿಕೆಗೆ ಜಿಲ್ಲಾ ವರದಿಗಾರರಾಗಿದ್ದಾರೆ. ವಕೀಲ ನರಸಿಂಹಯ್ಯನವರು ಅಮೃತವಾಣಿ ಪತ್ರಿಕೆಯಲ್ಲಿ ವರದಿಗಾರರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ವಿದ್ಯುನ್ಮಾನ ಮಾಧ್ಯಮದಲ್ಲಿ ತುಕಾಲಿ ಟಿ.ವಿ,ಯಲ್ಲಿ ಮುರಳಿಕೃಷ್ಣ ಪ್ರಧಾನ ವ್ಯವಸ್ಥಾಪಕರಾಗಿದ್ದರು. ಈಗ ಅಮೋಘ ಟಿ.ವಿಯಾಗಿ ಪರಿವರ್ತಿತವಾಗಿದ್ದು, ಸುದ್ದಿಸಂಪಾದಕರಾಗಿ ಮಣ್ಣೆರಾಜು, ಛಾಯಾಗ್ರಾಹಕರಾಗಿ ವೆಂಕಟೇಶ್ ಸುದ್ಧಿಮಾಧ್ಯಮದಲ್ಲಿ ನಿರತರಾಗಿದ್ದಾರೆ. ರಮಾ ಏಕೇಶ್: ತಮ್ಮ ದಿಟ್ಟತನ ಮತ್ತು ಸಾಹಸದಿಂದ ಇವರು 'ಏಕೇಶ್ ದಿನಪತ್ರಿಕೆ'ಯ ಪ್ರಥಮ ಮಹಿಳಾ ಉಪ ಸಂಪಾದಕಿ ಹಾಗೂ ಸಾಹಸ ಶೀಲೆ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಜಿಲ್ಲಾ ಪತ್ರಕರ್ತರ ಸಂಘದ ಉಪಾಧ್ಯಕ್ಷೆಯಾಗಿ ಜಿಲ್ಲಾ ಸಂಪಾದಕ ಕಾರ್ಯಕಾರಿ ಸದಸ್ಯರಾಗಿದ್ದು, ಸಣ್ಣ ಮತ್ತು ಮಧ್ಯಮ ಪತ್ರಿಕೆಗಳ ರಾಷ್ಟ್ರೀಯ ಒಕ್ಕೂಟ ನವದೆಹಲಿ ದಕ್ಷಿಣ ಭಾರತ ವಲಯದ ಸದಸ್ಯರಾಗಿದ್ದರು. ಗ್ರಾಮೀಣ ಜನತೆಯ ಕುಂದುಕೊರತೆ, ಕಂದಾಚಾರ ಮೌಢ್ಯತೆಯನ್ನು ತೊಡೆದು ಹಾಕುವಲ್ಲಿ ಭಾರತ ಸೇವಾದಳದ ಜಿಲ್ಲಾ ಸಮಿತಿ ಸದಸ್ಯೆಯಾಗಿ ತಾ॥ ಸೇವಾದಳದ ಉಪಾಧ್ಯಕ್ಷೆಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಮಧುಗಿರಿಯಲ್ಲಿ ನಡೆದ ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ ವಾಸವಿ ಯುವಜನ ಮಂಡಳಿ, ಲಯನ್ಸ್ ಕ್ಲಬ್ ಮುಂತಾದ ಸಂಘ, ಸಂಸ್ಥೆಗಳಿಂದ ಗೌರವಿಸಲ್ಪಟ್ಟಿದ್ದಾರೆ.

**ಪೂರ್ಣಿಮಾ ರಾಮಣ್ಣ:** ತುಮಕೂರು ವಾರ್ತೆ ಪತ್ರಿಕೆ ಸಂಪಾದಕ ಎಚ್.ಎಸ್.ರಾಮಣ್ಣನವರ ಪತ್ನಿ ಪೂರ್ಣಿಮಾ ಅವರು ಚಿಕ್ಕಮಗಳೂರಿನ ಜನಮಿತ್ರ ಪತ್ರಿಕೆ ಸಂಪಾದಕ ದಿವಂಗತ ಕೃ.ನ.ಮೂರ್ತಿ ಅವರ ಪುತ್ರಿ. ಇವರು ತುಮಕೂರು ವಾರ್ತೆಯಲ್ಲಿ ಕಾರ್ಯನಿರತರಾಗಿದ್ದಲ್ಲದೇ ೧೯೯೯ರಿಂದ ನಗೆಮುಗುಳು ಎಂಬ ಹಾಸ್ಯ ಮಾಸಪತ್ರಿಕೆಯನ್ನು ಹೊರತರುತ್ತಿದ್ದು, ೧೯೯೭ರ ಹಿರಿಯ ಪತ್ರಕರ್ತ ಖಾದ್ರಿಶಾಮಣ್ಣ ಪ್ರಶಸ್ತಿಯನ್ನು ರಾಜ್ಯಕಾರ್ಯನಿರತ ಪತ್ರಕರ್ತರ ಸಂಘವು ನೀಡಿ ಗೌರವಿಸಿದೆ.

**ಕಮಲ ಗಂಗಹನುಮಯ್ಯ:** ಅಮೃತವಾಣಿ ದಿನಪತ್ರಿಕೆಯ ಸಹಸಂಪಾದಕಿಯಾಗಿ ಕೈಜೋಡಿಸುತ್ತಿರುವ ಕಮಲ ಅವರು ೧೯೭೫ರಲ್ಲಿ ಇಂದಿರಾ ಮಹಿಳಾ ಸಮಾಜ ಸೇವಾ ಸಂಘದ ನಿರ್ದೇಶಕಿಯಾಗಿ ಸೇವೆ ಸಲ್ಲಿಸಿ ೧೯೮೭ರಿಂದ ೧೯೯೫ರವರೆಗೆ ಜಿಲ್ಲಾ ಪಂಚಾಯಿತ್ತಿ ಸದಸ್ಯೆಯಾಗಿ ಎರಡು ಬಾರಿ ಜಯಗಳಿಸಿ ದಿನಾಂಕ: ೯-೪-೧೯೭೭ರಲ್ಲಿ ಜಿಲ್ಲಾ ಪಂಚಾಯಿತ್ತಿಗೆ ಪ್ರಥಮ ಮಹಿಳಾ ಅಧ್ಯಕ್ಷೆಯಾಗಿ ಸೇವೆ ಸಲ್ಲಿಸಿದ್ದಾರೆ.

**ನಾಗರತ್ನ**: ಮಾಜಿ ಶಾಸಕ ಎಸ್.ಶಿವಣ್ಣನವರ ಸಂಪಾದಕತ್ವದ 'ಸೊಗಡು' ಪತ್ರಿಕೆಯ ಮೇಲುಸ್ತುವಾರಿಯನ್ನು ಪತ್ನಿ ನಾಗರತ್ನ ಅವರು ನೋಡಿಕೊಳ್ಳುತ್ತಿದ್ದಾರೆ.

**ತಾಲೂಕುವಾರು ಪತ್ರಿಕೆಗಳು:** ಜಿಲ್ಲೆಯ ಬಹುಪಾಲು ತಾಲೂಕುಗಳಲ್ಲಿ ಸ್ಥಳೀಯ ಪತ್ರಿಕೆಗಳು ಲಭ್ಯವಿದ್ದು ಅವುಗಳ ತಾಲೂಕುವಾರು ವಿವರವನ್ನಿಲ್ಲಿ ಒದಗಿಸಲಾಗಿದೆ.

**ತುಮಕೂರು ತಾಲೂಕು**: ಗುರುಲಿಂಗೇಗೌಡ ಅವರ ಪ್ರಜಾದೇವರು; ಮಲ್ಲಾನಾಯಕ ಅವರ ಕೆಚ್ಚೆದೆ ಕೆಣಕು; ಶಾಮಣ್ಣ ಅವರ 'ಹೊಸಅಲೆ', ಜನತಾ ಪ್ರಗತಿ; ಪಿ.ಸದಾಶಿವಯ್ಯ (ಜ್ಯೋತಿ) ಅವರ ಭುಗಿಲು; ಕರುಣಾಕರ ಅವರ ಸತ್ಯದರ್ಶಿನಿ; ಕೇದಾರ್ ಮಠ್ ಅವರ ಕನ್ನಡ ಗಂಗೋತ್ರಿ ವಾರ ಪತ್ರಿಕೆ; ಕುಚ್ಚಂಗಿ ಪ್ರಸನ್ನ ಅವರ 'ಸುದ್ದಿ ಅಮೂಲ್ಯ' ವಾರಪತ್ರಿಕೆ; ಪತಂಜಲಿ ಯೋಗ ಶಿಕ್ಷಣ ಕೇಂದ್ರದ 'ಪತಂಜಲಿ ಯೋಗ ಶಿಕ್ಷಣ'; ನಜೀರ್ಬೇಗ್ ಅವರ 'ಲೋಕ'; ಮುನೀರ್ ಅಹಮದ್ ಅವರ 'ಮೆಹಫಿಲ್' ಉರ್ದು ಪತ್ರಿಕೆಗಳು; ವಿಜಯಲಕ್ಷ್ಮಿ ಮರಿಯಪ್ಪ ಅವರ 'ಜಯದುರ್ಗಿ'; ಕೆ.ನರಸಿಂಹಮೂರ್ತಿ ಅವರ 'ಸತ್ಯಬಿಂಬ'; ಸಿ.ರಂಗನಾಥ್ ಅವರ 'ಪ್ರಜಾಸಮತ', ಕಾತ್ಯಾಯಿನಿ ರುದ್ರಮೂರ್ತಿ ಸಂಪಾದಕತ್ವದ ಶಿವಡಂಗುರ; ಕುಮಾರ್ ಅವರ ಬಿಂಬ; ಆರ್.ಲಕ್ಷ್ಮಿನಾರಾಯಣ ಶೆಟ್ಟರ ಜೀವನಚಕ್ರ ವಾರಪತ್ರಿಕೆ; ಹಿರೇಮಠದ ಅಧ್ಯಕ್ಷರಾದ ಡಾ.ಶ್ರೀ ಶಿವಾನಂದ ಶಿವಾಚಾರ್ಯರ ಸಂಪಾದಕತ್ವದ ಶಿವದುಂದುಬಿ; ಬಂಡೇಪಾಳ್ಯ ನಾಗರಾಜು ಅವರ ಸಂಪಾದಕತ್ವದ 'ದಿಕ್ತಟ' ಮಾಸಪತ್ರಿಕೆ, 'ದಿಕ್ತಟ' ಮಾಸಿಕವು ದಶಮಾನೋತ್ಸವ ಪೂರೈಸಿ ಮುನ್ನಡೆದಿದೆ. ಚಂಪಕರಾವ್ ಅವರ ಸಂಪಾದಕತ್ವದ ಕಾಲೇಜು ಡೈರಿ ಮಾಸಿಕ ಪತ್ರಿಕೆ; ವೆಂಕಟೇಶಬಾಬು ಅವರ ವಿದ್ಯಾರಂಜಕ ವಾರಪತ್ರಿಕೆ; ಅಲ್ಲದೇ, ತುಮಕೂರು ಮಾಧ್ಯಮ, ನಿಮ್ಮ ಪತ್ರಿಕೆ, ಮುಂತಾದವು ಹೊರಬರುತ್ತಿವೆ.

**ಕುಣಿಗಲ್ ತಾಲೂಕು**: ಹನುಮಾನ್ ಸಿಂಗ್ ಅವರ ಕುಣಿಗಲ್ ನಗಾರಿ; ಜಾಣಗೆರೆ ಶಿವಣ್ಣ ಅವರ ಕುಣಿಗಲ್ ಕುದುರೆ; ರಾಮಚಂದ್ರಯ್ಯ ಅವರ ಕುಣಿಗಲ್ ಕಿಂಬರ್ಲಿ, ಜಯವರ್ಧಿನಿ; ೧೯೭೩ರಲ್ಲಿ ಅಮೃತೂರಿನಿಂದ ಚಾಮರಾಜನ್ ಎಂಬುವವರು ವಿಶ್ವಜಗತ್ ಎಂಬ ವಾರಪತ್ರಿಕೆ ನಡೆಸುತ್ತಿದ್ದರು. ೨೦೧೨ರಿಂದ 'ಮನಸು ಮನಸುಗಳ ಪ್ರೇರಣ' ಎಂಬ ಮಾಸಿಕ ಪತ್ರಿಕೆ, ಎಸ್.ತಾರಾನಾಥ್ ಅವರ ಸಂಪಾದಕತ್ವದಲ್ಲಿ ಹೊರಬರುತ್ತಿದೆ. ಗುರುಚರಣ್ ಸಿಂಗ್, ಆನಂದಸಿಂಗ್, ವೆಂಕಟೇಶ್, ಫಯಾಜ್, ಸಿದ್ಧಲಿಂಗಸ್ವಾಮಿ, ರಾಮಚಂದ್ರಯ್ಯ, ನರಸಿಂಹಪ್ರಸಾದ್ ಮುಂತಾದವರು ಪತ್ರಿಕೋದ್ಯಮದಲ್ಲಿ ಕಾರ್ಯನಿರತರಾಗಿದ್ದಾರೆ.

**ಗುಬ್ಬಿ ತಾಲೂಕು:** ಚಿದಂಬರಾಶ್ರಮದಿಂದ ಪ್ರಕಟವಾಗುತ್ತಿರುವ 'ಸೇವಾಸದನ' ಮಾಸಪತ್ರಿಕೆ; ಮಂಜುನಾಥ್ ಅವರು ೧೯೮೦ರಿಂದ ಹೊರತರುತ್ತಿರುವ ಸತ್ಯವೇದಿಕೆ, ಸದ್ಬೋಧ ಚಂದ್ರಿಕೆ ಮುಂತಾದವು; ನಿಟ್ಟೂರಿನ ಮರಿಲಿಂಗಯ್ಯ ಅವರು 'ಮೈಲಾರ ವಾಣಿ' ಪಾಕ್ಷಿಕ ಹೊರತರುತ್ತಿದ್ದಾರೆ. ಜಿ.ಬಿ.ರವೀಶ್, ಬಿದರೆ ಪ್ರಕಾಶ್, ಕೆ.ಹೆಚ್.ನಾಗರಾಜ್ ದೀಕ್ಷಿತ್, ಆಂಜಿನಪ್ಪ, ಸಂಜೀವಯ್ಯ ಮುಂತಾದ ಪತ್ರಕರ್ತರಿದ್ದಾರೆ.

**ತಿಪಟೂರು ತಾಲೂಕು:** ಟಿ.ಎ.ದಾಸಪ್ಪನವರು ಹೊರತರುತ್ತಿದ್ದ 'ಅಂತ್ಯೋದಯ', ತಿಪಟೂರು ಕೃಷ್ಣ ಅವರ ಆದಿತ್ಯವಾಣಿ, ತಿಪಟೂರು ಟೈಮ್ಸ್, ಕಲ್ಪತರು ನಾಡು, ನಾಡುನಿವೇದನ, ವರಾನ್ವೇಷಣೆ, ತೆಂಗಿನವಾರ್ತೆ ಮುಂತಾದವು. ಬೈಫ್ ಸಂಸ್ಥೆಯಿಂದ ಪ್ರಕಟವಾಗುತ್ತಿರುವ 'ಸಿರಿಸಮೃದ್ಧಿ' ಮಾಸಪತ್ರಿಕೆ ಕೃಷಿಕರಿಗೆ ಉಪಯುಕ್ತವಾದುದಾಗಿದೆ. ಟಿ.ಬಿ.ಪ್ರಶಾಂತ್ ಅವರ 'ಅನುರಣ' ಮಾಸಿಕ, ಉಜ್ಜಜ್ಜಿ ರಾಜಣ್ಣ ಅವರ 'ಹೊನ್ನಾರು' ನಿಯತಕಾಲಿಕೆಗಳು ಎನ್.ಕೆ.ಹನುಮಂತಯ್ಯ ಅವರ ಊರುಕೇರಿ ಸಾಹಿತ್ಯ ಪತ್ರಿಕೆ (ನಿಂತಿದೆ) ಗಮನ ಸೆಳೆದ ಪತ್ರಿಕೆಗಳಾಗಿವೆ. ಎಂ.ಗಂಗಾಧರಯ್ಯ, ತಿಪಟೂರು ಕೃಷ್ಣ, ಲಿಂಗರಾಜು, ರಂಗಸ್ವಾಮಿ ಮುಂತಾದವರು ಕಾರ್ಯನಿರತ ಪತ್ರಕರ್ತರಿದ್ದಾರೆ. ಎಂ.ಎಲ್.ಜಯರಾಂ ಅವರ 'ಸೇವಕ' ಎಂಬ ಪತ್ರಿಕೆ ಬರುತ್ತಿದೆ.

**ತುರುವೇಕೆರೆ ತಾಲೂಕು**: ಟಿ.ಬಿ.ಶ್ರೀನಿವಾಸ್ ಪ್ರಸಾದ್ ಅವರು 'ವಿದ್ಯಾತೀರ್ಥ' ಎಂಬ ವಾರಪತ್ರಿಕೆ ನಡೆಸುತ್ತಿದ್ದು ಅನೇಕ ಪತ್ರಿಕೆಗಳಿಗೆ ಪ್ರತಿನಿಧಿಯಾಗಿದ್ದರು. ದಂಡಿನಶಿವರದ ತಿಮ್ಮೇಗೌಡ, ತುರುವೇಕೆರೆ ಪ್ರಸಾದ್, ನಾಗಭೂಷಣ ಮುಂತಾದ ಪತ್ರಕರ್ತರಿದ್ದಾರೆ. ಅನೇಕರು ಸಾಮಾಜಿಕ, ರಾಜಕೀಯ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

**ಕೊರಟಗೆರೆ ತಾಲೂಕು**: ಜಿ.ಆರ್.ಪ್ರತಾಪರುದ್ರ ಅವರ, 'ಕೊರಟಗೆರೆ ವಾರ್ತೆ' ವೀರಶೈವ ಬಂಧು, ಜಿಲ್ಲಾ ಪೋಲೀಸ್, ಪದ್ಮನಾಭ ಅವರ ಆಗ್ನೇಯವಾಣಿ ವಾರಪತ್ರಿಕೆ, ಕೊರಟಗೆರೆ ಕ್ರೈಂ ಸುದ್ದಿ, ಗಜಧ್ವನಿ, ಪ್ರಜ್ಞಾ ಪ್ರಗತಿ, ಸಿದ್ದಗಿರಿ ವಾಯ್ಸ್ ಮುಂತಾದ ಪತ್ರಿಕೆಗಳಿವೆ. ಪ್ರಾರಂಭದಲ್ಲಿದ್ದ 'ಸುವರ್ಣಮುಖಿ' ಮೊದಲ ವಾರಪತ್ರಿಕೆ ಆಗಿದೆ. ಇಲ್ಲಿ ವಿಜಯನಾರಸಿಂಹ, ಕೆ.ಎಸ್.ಶ್ರೀನಿವಾಸ ಮೂರ್ತಿ, ತೋವಿನಕೆರೆ ಶ್ರೀನಿವಾಸ್, ವೀರಭದ್ರಯ್ಯ, ಉಮಾಶಂಕರ್, ರಮೇಶ್ ಮುಂತಾದ ಪತ್ರಕರ್ತರಿದ್ದಾರೆ.

**ಮಧುಗಿರಿ ತಾಲೂಕು**: ಉಮೇಶ್ ಅವರ ಸಂಪಾದಕತ್ವದ ದಿನಪತ್ರಿಕೆ ಮಧುಗಿರಿ ಟೈಮ್ಸ್ ಮುಂಚೂಣಿಯಲ್ಲಿದೆ. ಪತ್ರಿಕೆಯಾಗಿದೆ. ಹಸಿರು ತೋರಣ, ಸರ್ದಾರ್, ಮಧುಗಿರಿ ಮಿತ್ರ, ಸುದ್ದಿಚಿತ್ರ, ಒಳನಾಡು ವಾರ್ತೆ, ಮುಂತಾದವು ಹಿಂದೆ ಇದ್ದ ಪತ್ರಿಕೆಗಳಾಗಿವೆ. ಕೆ.ಸುಬ್ಬರಾವ್, ಚಿ.ಸೂ.ಕೃಷ್ಣಮೂರ್ತಿ, ಸಿ.ಎಸ್.ಗುರುರಾಜ್, ಸೋಮಶೇಖರ್, ಮಿಡಿಗೇಶಿ ಭೂಷಣ್, ಬಂಡಿ ಚೌಡಪ್ಪ (ಪ್ರಜ್ಞಾವಾಣಿ),ಚಂದ್ರಕಾಂತ್ ಮುಂತಾದ ಪತ್ರಕರ್ತರು ಕಾರ್ಯನಿರತರಾಗಿದ್ದಾರೆ.

**ಶಿರಾ ತಾಲೂಕು:** ಸುಬ್ಬರಾವ್ ನೇತೃತ್ವದಲ್ಲಿ ಗಾಂಧೀ ವಿಚಾರಗಳುಳ್ಳ ಗ್ರಾಮೀಣ ಪತ್ರಿಕೆ ಪ್ರಾರಂಭವಾದರೂ ಹೆಚ್ಚು ಕಾಲ ನಡೆಯಲಿಲ್ಲ. ಈಗಲೂ ಈ ತಾಲೂಕಿನಲ್ಲಿ ಪತ್ರಿಕೆಗಳು ವಿರಳ. ಅನಂತರಾಂಸಿಂಗ್, ಬುಕ್ಕಾಪಟ್ಟಣ ಮಂಜುನಾಥ್, ಬರಗೂರು ವಿರೂಪಾಕ್ಷ, ಗೋವಿಂದಪ್ಪ, ಶಿವಕುಮಾರ್, ಹನುಮಂತರಾಯಪ್ಪ ಮುಂತಾದ ಪತ್ರಕರ್ತರು ಈ ತಾಲೂಕಿನಲ್ಲಿದ್ದಾರೆ.

**ಪಾವಗಡ ತಾಲೂಕು**: ಅಂತಹ ಯಾವುದೇ ಪ್ರಮುಖ ಪತ್ರಿಕೆ ಕಂಡುಬರುವುದಿಲ್ಲ. ಹಿಂದೆ, ಪಾವಗಡ ಪರಾಕ್ರಮಿ, ಶಂಕರ್ ಖಡ್ಗ, ನಾಯಕವಾಣಿ ಮುಂತಾದ ಪತ್ರಿಕೆಗಳಿದ್ದವು. ಶಿವಕುಮಾರ್ 'ವಾಯ್ಸ್ ಆಫ್ ಪಾವಗಡ' ಎಂಬ ವಾರಪತ್ರಿಕೆಯನ್ನು ೨೦೧೨ ರಿಂದ ಹೊರತರುತ್ತಿದ್ದಾರೆ. ಶ್ಯಾ.ನಾ.ಪ್ರಸನ್ನಮೂರ್ತಿ, ವೆಂಕಟೇಶ್, ಶಿವಕುಮಾರ್, ನಾಗೇಂದ್ರ ಮುಂತಾದ ಪರ್ತಕರ್ತರಿದ್ದಾರೆ.

### ಛಾಯಾಗ್ರಾಹಕರು

ಶಾಂತರಾಜು ಅವರು ಅನು ಫೋಟೋಫ್ಲಾಷ್ ಛಾಯಾಗ್ರಾಹಕರಾಗಿ ೧೯೭೨ರಿಂದ ಪ್ರಜಾವಾಣಿ ಪತ್ರಿಕೆಯಲ್ಲಿ ೧೫ ವರ್ಷಗಳ ನಿರಂತರ ಸೇವೆ ಸಲ್ಲಿಸಿದ್ದು, ೧೯೭೭ರಲ್ಲಿ ಪತ್ರಿಕಾ ಸಲಹಾ ಸಮಿತಿ ಸದಸ್ಯರಾಗಿದ್ದರು. ಛಾಯಾಗ್ರಾಹಕರಾಗಿ ಟಿ.ಎಸ್.ತ್ರಿಯಂಬಕ, ಈರಣ್ಣ (ಸಣ್ಣಿ), ಎಸ್.ಉದಯ್‌ಕುಮಾರ್, ಮನು ಸ್ಟುಡಿಯೋದ ಸುರೇಶ್, ಶಿಲ್ಪ ಸ್ಟುಡಿಯೋದ ಸುರೇಂದ್ರ, ಪೂಜಾ ವಿಡಿಯೋ, ಪ್ರೆಸ್ ಫೋಟೋಗ್ರಾಫರ್ ಹೆಚ್.ಆರ್.ಎಸ್.ನಾಗರಾಜು, ಮೃತ್ಯುಂಜಯ, ಸಚಿನ್ ಫೋಟೊ ವಿಡಿಯೋಗ್ರಾಫರ್, ಪಿ.ಕೆ.ಭೋಮಳೆ, ಎಸ್.ಎಸ್.ಫೋಟೋ ಫ್ಲಾಷ್ ಹಾಗೂ ಉದಯ ಟಿ.ವಿ. ಛಾಯಾಗ್ರಾಹಕ ನಾಗರಾಜು ಟಿ.ಹೆಚ್.ಸುರೇಶ್, ರೇಣುಕಾ, ನರಸಿಂಹ ಹೀಗೆ ಹಲವಾರು ಛಾಯಾಗ್ರಾಹಕರು ಸೇವೆ ಸಲ್ಲಿಸುತ್ತಿದ್ದಾರೆ. ಅನೇಕರು ವಿದ್ಯುನ್ಮಾನ ಮಾಧ್ಯಮ (ಟಿ.ವಿ.ಚಾನಲ್) ವರದಿಗಾರರಾಗಿ ಕಾರ್ಯನಿರತವಾಗಿದ್ದಾರೆ. ಕರ್ನಾಟಕದ ರಾಜಕೀಯ ಸಾಮಾಜಿಕ ಹಾಗೂ ಸಾಹಿತ್ಯಕ ಜೀವನದಲ್ಲಿ ವೃತ್ತಪತ್ರಿಕೆಗಳು ಪ್ರಮುಖ ಪಾತ್ರವಹಿಸಿವೆ. ನಾಟಕ, ಸಂಗೀತ, ಸಿನೆಮಾಕಲೆ, ಕ್ರೀಡೆ, ಸಾಹಿತ್ಯದಂತಹ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಈ ಮೇಲೆ ತಿಳಿಸಿದ ಪತ್ರಿಕೆಗಳ ಪಾತ್ರ ಶ್ಲಾಘನೀಯ. ಹೊಸ ಹಾಗೂ ಪ್ರಗತಿಪರ ವಿಚಾರಗಳನ್ನು ಪ್ರಚಾರಪಡಿಸುವುದರಲ್ಲಿ ಅವು ಪ್ರಮುಖ ಪಾತ್ರ ವಹಿಸಿವೆ. ಸರ್ಕಾರಿ ಹಾಗೂ ಸಿದ್ದಾರ್ಥ ವಿದ್ಯಾ ಸಂಸ್ಥೆಗಳಲ್ಲಿನ ಪದವಿ ಕಾಲೇಜುಗಳಲ್ಲಿ ಪತ್ರಿಕೋದ್ಯಮ ಕಲಿಸಲಾಗುತ್ತಿದೆ. ಶ್ರೀ.ಸಿದ್ದಾರ್ಥ ಮಾಧ್ಯಮ ಅಧ್ಯಯನ ಕೇಂದ್ರವು ಅತ್ಯಾಧುನಿಕ ಸ್ಟುಡಿಯೋ ಹೊಂದಿದ್ದು, ಪತ್ರಿಕೋದ್ಯಮ ಹಾಗೂ ವಿದ್ಯುನ್ಮಾನ ಮಾಧ್ಯಮದಲ್ಲಿ ಸ್ನಾತಕೋತ್ತರ ಶಿಕ್ಷಣ ನೀಡುತ್ತಿದೆ. ರೇಡಿಯೋ ಸಿದ್ದಾರ್ಥ ಎಂಬ ಸಮುದಾಯ ಬಾನುಲಿ ಕೇಂದ್ರ ಕಾರ್ಯನಿರತವಾಗಿದೆ.

## ತುಮಕೂರು ಜಿಲ್ಲೆಯ ನೋಂದಾಯಿತ ಪತ್ರಿಕೆಗಳು

| ಕ್ರ. ಸಂ | ಪತ್ರಿಕೆ ಶೀರ್ಷಿಕೆ | ಸ್ವರೂಪ | ದಿನಾಂಕ | ಮಾಲೀಕರು/ಸಂಪಾದಕರು |
|---|---|---|---|---|
| ೧ | ಮಧುಗಿರಿ ಟೈಮ್ಸ್ | ಮಾಸಿಕ | ೧೯-೧೨-೧೯೫೭ | ಉಮೇಶ್ |
| ೨ | ಪೌರಯುಗ | ವಾರಪತ್ರಿಕೆ | ೧-೧೨-೧೯೬೦ | ಎಲ್.ರಾಜಾಚಾರ್ |
| ೩ | ವಿಜಯವಾಣಿ | ದೈನಂದಿನ | ೧-೧-೧೯೬೭ | ಎಚ್.ಆರ್. ಗುಂಡೂರಾವ್ |
| ೪ | ಗುಂಜಿಚೌಕ | ದೈನಂದಿನ | ೧೦-೧೧-೧೯೬೮ | ಇ.ವೆಂಕಟೇಶ್ |
| ೫ | ವೀರಾಗ್ರಣಿ | ದೈನಂದಿನ | ೧೮-೩-೧೯೭೨ | ಕೆ.ನಾಗರಾಜ್ |
| ೬ | ಅಮರ ಸಂದೇಶ | ವಾರ/ಸಂಜೆ/ದಿನ | ೨೮-೧-೧೯೭೮ | ಟಿ.ಜಿ.ಅಡವೀಶಪ್ಪ |
| ೭ | ಅಮೃತವಾಣಿ | ದೈನಂದಿನ | ೧೭-೪-೧೯೮೪ | ಗಂಗಹನುಮಯ್ಯ |
| ೮ | ಸೊಗಡು | ದೈನಂದಿನ | ೨೦-೨-೧೯೮೫ | ಎಸ್.ಶಿವಣ್ಣ |
| ೯ | ತುಮಕೂರು ಮಾಧ್ಯಮ | ವಾರಪತ್ರಿಕೆ | ೨೬-೫-೧೯೮೭ | ಪಿ.ಹೆಚ್.ನಾಗರಾಜ್ |
| ೧೦ | ತುಮಕೂರು ಜ್ಯೋತಿ | ದೈನಂದಿನ | ೧೪-೪-೧೯೮೮ | ಹೆಚ್.ಎಸ್.ರಾಜಾರಾವ್ |
| ೧೧ | ಗಂಗಾವಾಹಿನಿ | ದೈನಂದಿನ | ೨೨-೮-೧೯೮೯ | ಆರ್.ಕಾಮರಾಜ್ |
| ೧೨ | ಟುಮಕಿ | ವಾರಪತ್ರಿಕೆ | ೧೫-೫-೧೯೯೦ | ಟಿ.ಎಸ್.ಗಟ್ಟಿ |
| ೧೩ | ರಾಕ್ ಲೈನ್ | ಪಾಕ್ಷಿಕ/ವಾರ | ೧೮-೪-೧೯೯೬ | ಕೆ.ರವಿಕುಮಾರ್ |
| ೧೪ | ಶಿವದುಂಧುಬಿ | ಮಾಸಿಕ | ೨೦-೧೧-೧೯೯೭ | ಶಿವಾನಂದ ಶಿವಾಚಾರ್ಯ |
| ೧೫ | ಗ್ರಾಹಕವಾಣಿ | ಮಾಸಿಕ | ೬-೧-೧೯೯೮ | ಟಿ.ಎಸ್.ನಿರಂಜನ್ |
| ೧೬ | ಗ್ರಾಮೀಣ (ಶಿರಾ) | ವಾರಪತ್ರಿಕೆ | ೧೧-೨-೧೯೯೯ | ಎಸ್.ಆರ್.ಸುಬ್ಬರಾವ್ |
| ೧೭ | ಕನ್ನಡ ಗಂಗೋತ್ರಿ | ವಾರಪತ್ರಿಕೆ | ೧೧-೨-೧೯೯೯ | ಹೆಚ್.ಎಸ್.ರಾಜಾರಾವ್ |
| ೧೮ | ಸಿದ್ಧಗಂಗಾ | ಮಾಸಿಕ | ೧೧-೨-೧೯೯೯ | ಹೆಚ್.ಬಿ.ಗಂಗಾಧರಯ್ಯ |
| ೧೯ | ದಿ ಲೋಕ್ | ವಾರಪತ್ರಿಕೆ | ೧೧-೨-೧೯೯೯ | ನಸೀರ್ಬೇಗ್ ಜರ್ಜೂ |
| ೨೦ | ಆದಿತ್ಯವಾಣಿ | ವಾರಪತ್ರಿಕೆ | ೧೧-೨-೧೯೯೯ | ಕೃಷ್ಣ |
| ೨೧ | ನಗೆಮುಗುಳು | ಮಾಸಿಕ | ೨೦-೫-೧೯೯೯ | ಪೂರ್ಣಿಮಾ ರಾಮಣ್ಣ |
| ೨೨ | ಪ್ರಜಾಪ್ರಗತಿ | ವಾರ/ದಿನ | ೩-೮-೧೯೯೯ | ಎಸ್.ನಾಗಣ್ಣ |
| ೨೩ | ಜೈಮಾತ (ಇಂ) | ತ್ರೈಮಾಸಿಕ | ೧-೬-೨೦೦೦ | ಬಿ.ಎನ್.ಪ್ರಶಾಂತ್ |
| ೨೪ | ತುಮಕೂರು ವಾರ್ತೆ | ದೈನಂದಿನ | ೧-೮-೨೦೦೧ | ಹೆಚ್.ಎಸ್.ರಾಮಣ್ಣ |
| ೨೫ | ಪ್ರಜಾದೀಪ | ವಾರಪತ್ರಿಕೆ | ೧೫-೧೧-೨೦೦೧ | ಸಿ.ಪಿ.ನಾಗರಾಜ |
| ೨೬ | ಭುಗಿಲು | ದೈನಂದಿನ | ೧೧-೬-೨೦೦೨ | ಎನ್.ಸದಾಶಿವಯ್ಯ |
| ೨೭ | ವಿಜಯಪ್ರಗತಿ | ವಾರಪತ್ರಿಕೆ | ೨೯-೧೦-೨೦೦೨ | ಎಸ್.ಲಲಿತ |
| ೨೮ | ಬೆಂಕಿಯ ಬಲೆ | ವಾರಪತ್ರಿಕೆ | ೨೭-೮-೨೦೦೩ | ಎ.ಎನ್.ಧನಂಜಯ |
| ೩೦ | ಸತ್ಯದರ್ಶಿನಿ | ದೈನಂದಿನ | ೩೧-೮-೨೦೦೪ | ಜಿ.ಕರುಣಾಕರ |
| ೩೧ | ಸಂಹಿತೆ | ವಾರಪತ್ರಿಕೆ | ೩೦-೮-೨೦೦೫ | ಎ.ಎಂ.ನಾಗರಾಜ್ |
| ೩೨. | ವಿಸ್ಮಯ | ವಾರಪತ್ರಿಕೆ | ೮-೬-೨೦೦೬ | ಎಂ.ಸೈಫುಲ್ಲಾ |
| ೩೩ | ಮಾಚಿಪತ್ರಿಕೆ | ಮಾಸಿಕ | ೨೪-೪-೨೦೦೭ | ಹೆಚ್.ಹನುಮಂತಯ್ಯ |
| ೩೪ | ಹೇಮಾವತಿ ಟೈಮ್ಸ್ | ವಾರಪತ್ರಿಕೆ | ೧೭-೯-೨೦೦೭ | ಎನ್.ಬಾನುಪ್ರಶಾಂತ್ |
| ೩೫ | ಭವ್ಯ ಕರ್ನಾಟಕ | ಮಾಸಿಕ | ೨೮-೯-೨೦೦೭ | ಹೆಚ್.ಕೆ.ಶಂಕರ್ |
| ೩೬ | ಹಾಸ್ಯಲೋಕ | ಮಾಸಿಕ | ೨೦-೮-೨೦೦೮ | ಕೆ.ಆರ್.ಸೋಮಶೇಖರ್ |
| ೩೭ | ವಿಶ್ವಪರಿಸರ ಕ್ರಾಂತಿ | ಮಾಸಿಕ | ೨೩-೯-೨೦೦೮ | ಹೆಚ್.ಎ.ಶಿವಪ್ಪ |

| | | | | |
|---|---|---|---|---|
| ೩೮ | ಧರಣಿ ಮಂಡಲ | ದ್ವೈಮಾಸಿಕ | ೨೭-೧೦-೨೦೦೮ | ಸಿ.ಯತಿರಾಜು |
| ೩೯ | ದಾರಿ | ಪಾಕ್ಷಿಕ | ೨೮-೧-೨೦೦೯ | ಗೊಲ್ಲಹಳ್ಳಿ ಬಾಲಕೃಷ್ಣ |
| ೪೦ | ತುಮಕೂರು ಜಿಲ್ಲಾ ನ್ಯೂಸ್ | ಮಾಸಿಕ | ೩-೨-೨೦೦೯ | ಸಿ.ಎಲ್.ಬೆಟ್ಟಯ್ಯ |
| ೪೧ | ಪ್ರಜಾಸಾಮ್ರಾಜ್ಯ | ದೈನಂದಿನ | ೨೪-೪-೨೦೦೯ | ಎಂ.ಕೃಷ್ಣಪ್ಪ |
| ೪೨ | ಕೋಟೆ ಕೂಗು | ವಾರಪತ್ರಿಕೆ | ೨೯-೪-೨೦೦೯ | ಎಂ.ಎಸ್.ಬಿ.ಆರ್.ಪಿ ಕುಮಾರ್(ಬಾಬು) |
| ೪೩ | ರಾಜ್ಯ ರಸ್ತೆ ಸಾರಿಗೆ | ಮಾಸಿಕ | ೮-೬-೨೦೦೯ | ಸಿ.ಎಲ್.ಬೆಟ್ಟಯ್ಯ |
| ೪೪ | ಕರುನಾಡ ಮಿತ್ರ | ಮಾಸಿಕ | ೧೯-೬-೨೦೦೯ | ಜೆ.ಜಗದೀಶ್ |
| ೪೫ | ನಿವೃತ್ತರ ವಾಣಿ | ಮಾಸಿಕ | ೨೫-೬-೨೦೦೯ | ಮಹದೇವರಾವ್ ಬೋಬಡೆ |
| ೪೬ | ಸಿದ್ಧಗಿರಿ ವಾಯ್ಸ್ | ಮಾಸಿಕ | ೨೯-೬-೨೦೦೯ | ಜಿ.ಸಿ.ನಂಜುಂಡಸ್ವಾಮಿ |
| ೪೭ | ಸುಸ್ಥಿರ ಸ್ವಾವಲಂಬಿ ಕೃಷಿ | ಮಾಸಿಕ | ೨೯-೬-೨೦೦೯ | ಜಿ.ಎನ್.ಎಸ್.ರೆಡ್ಡಿ |
| ೪೮ | ಸೌಹಾರ್ದ ಗಡಿನಾಡು | ಮಾಸಿಕ | ೨೭-೮-೨೦೦೯ | ಪಾವಗಡ ಶ್ರೀ ರಾಂ |
| ೪೯ | ಸತ್ಯಚೇತನ | ವಾರಪತ್ರಿಕೆ | ೧೮-೯-೨೦೦೯ | ಎಂ.ಹೆಚ್.ಗೋಪಾಲ್ |
| ೫೦ | ಪ್ರಜಾಸಮತ | ದೈನಂದಿನ | ೧೦-೩-೨೦೧೦ | ಸಿ.ರಂಗನಾಥ್ |
| ೫೧ | ಜಯಕದಂಬ | ವಾರಪತ್ರಿಕೆ | ೧೫-೩-೨೦೧೦ | ಎಸ್.ವೆಂಕಟೇಶ್ |
| ೫೨ | ವೀರಶೈವ ಬಂಧು | ಮಾಸಿಕ | ೨೨-೩-೨೦೧೦ | ಜಿ.ಆರ್.ಪ್ರತಾಪರುದ್ರ |
| ೫೩ | ಕಾಲಾತೀತ | ಮಾಸಿಕ | ೫-೫-೨೦೧೦ | ಆರ್.ಇ.ರಾಜಣ್ಣ |
| ೫೪ | ವಾಯ್ಸ್ ಆಫ್ ಏಕಲವ್ಯ | ಪಾಕ್ಷಿಕ | ೨೧-೭-೨೦೧೦ | ಕೆ.ಓಬಳ ರಾಜು |
| ೫೫ | ಮಧುಗಿರಿ ವಾಣಿ | ದೈನಂದಿನ | ೨೮-೧-೨೦೧೧ | ಎಂ.ಎಸ್.ಬಾಬುರಾಜೇಂದ್ರ ಪ್ರಸನ್ನಕುಮಾರ್ |
| ೫೬ | ಸತ್ಯಬಿಂಬ | ಪಾಕ್ಷಿಕ | ೨೮-೨-೨೦೧೧ | ಕೆ.ಇ.ನರಸಿಂಹಮೂರ್ತಿ |
| ೫೭ | ವಿವೇಕ ದೀಪ್ತಿ | ದ್ವೈಮಾಸಿಕ | ೬-೪-೨೦೧೧ | ಸ್ವಾಮಿ ವೀರೇಶಾನಂದ ಸರಸ್ವತಿ |
| ೫೮ | ಬೆಂಗಳೂರು ಡಾನ್ | ಪಾಕ್ಷಿಕ | ೭-೪-೨೦೧೧ | ಜಿ.ಎನ್.ನಾಗರಾಜು |
| ೫೯ | ನೀತಿ ಕರ್ನಾಟಕ | ಪಾಕ್ಷಿಕ | ೬-೫-೨೦೧೧ | ಹೆಚ್.ಕೆ.ಲಿಂಗರಾಜು |
| ೬೦ | ದುರ್ಗದ ಗಂಟೆ | ವಾರಪತ್ರಿಕೆ | ೧೬-೫-೨೦೧೧ | ಹೆಚ್.ವಿ.ಕರಿಯಣ್ಣ |
| ೬೧ | ತುಮಕೂರು ವಾಹಿನಿ | ವಾರಪತ್ರಿಕೆ | ೨೬-೮-೨೦೧೧ | ಕೆ.ಎಸ್.ನಾರಾಯಣಸ್ವಾಮಿ |
| ೬೨ | ಜಯವರ್ಧಿನಿ | ವಾರ್ಷಿಕ | ೭-೧೦-೨೦೧೧ | ಎಸ್.ರವಿಕುಮಾರ್ |
| ೬೩ | ರೈತಪ್ರಗತಿ | ಮಾಸಿಕ | ೧೨-೧೦-೨೦೧೧ | ಕೆ.ಬಿ.ಮಂಜುನಾಥ್ |
| ೬೪ | ವಿದ್ಯುತ್ ಶಕ್ತಿ | ವಾರ್ಷಿಕ | ೭-೧೦-೨೦೧೧ | ಕೆ.ಪಿ.ಶಿವಕುಮಾರ್ |
| ೬೫ | ಸುಜಯ | ಮಾಸಿಕ | ೧-೧೨-೨೦೧೧ | ಬಿ.ಅಂದಾನಯ್ಯ |
| ೬೬ | ಸುದ್ದಿ ಕಾರಂಜಿ | ಪಾಕ್ಷಿಕ | ೨೦-೧೨-೨೦೧೧ | ಶ್ರೀನಿವಾಸ್ |
| ೬೭ | ಅಂಗೈಯಲ್ಲಿ ಅನುಭವ | ತ್ರೈಮಾಸಿಕ | ೨೧-೧೨-೨೦೧೧ | ಅಟವಿ ಕ್ಷೇತ್ರ |
| ೬೮ | ಅಣ್ಣೂರ್ | ಪಾಕ್ಷಿಕ | ೨೧-೧೨-೨೦೧೧ | ಎಂ.ಸೈಫುಲ್ಲಾ |
| ೬೯ | ಪ್ರಜಾಮೌಲಿಕ | ವಾರ್ಷಿಕ | ೨೩-೧೨-೨೦೧೧ | ಚನ್ನೇಗೌಡ |
| ೭೦ | ಬಣ್ಣದಲೋಕ | ಮಾಸಿಕ | ೨-೧-೨೦೧೨ | ಕೆ.ಎನ್.ಹೇಮಾವತಿ |
| ೭೧ | ಹೊಯ್ಸಳ ನ್ಯೂಸ್ | ಮಾಸಿಕ | ೨-೧-೨೦೧೨ | ಎನ್.ವಿ.ಶ್ರೀನಿವಾಸ್ |
| ೭೨ | ಪ್ರಜಾಆಜ್ಞೆ | ಪಾಕ್ಷಿಕ | ೨-೧-೨೦೧೨ | ವಿ.ಶಿವಶಂಕರ್ |

| | | | | |
|---|---|---|---|---|
| ೭೩ | ಶೀತಲ | ತ್ರೈಮಾಸಿಕ | ೪–೧–೨೦೧೨ | ಎಸ್.ಎಸ್.ಕೆ.ಸಂಘ |
| ೭೪ | ಸುವರ್ಣಸಾರಥಿ | ಮಾಸಿಕ | ೨೪–೧–೨೦೧೨ | ಟಿ.ಎಸ್.ಕೃಷ್ಣಮೂರ್ತಿ |
| ೭೫ | ವಾಯ್ಸ್ ಆಫ್ ವಾಲ್ಮೀಕಿ | ಪಾಕ್ಷಿಕ | ೨೫–೧–೨೦೧೨ | ಎನ್.ನಾರಾಯಣಸ್ವಾಮಿ |
| ೭೬ | ಬೆಹನ್ಜಿ | ಮಾಸಿಕ | ೩–೨–೨೦೧೨ | ಧನರಾಜ್ |
| ೭೭ | ಕಾಲೇಜ್ ಡೈರಿ | ಮಾಸಿಕ | ೩–೨–೨೦೧೨ | ಜಿ.ಸಿ.ಚಂಪಾರಾಣಿ |
| ೭೮ | ಜೇಡರ ಬಲೆ | ಪಾಕ್ಷಿಕ | ೩–೨–೨೦೧೨ | ಪಿ.ರಂಗಸ್ವಾಮಿ |
| ೭೯ | ವಾಯ್ಸ್ ಆಫ್ ಪಾವಗಡ | ವಾರಪತ್ರಿಕೆ | ೩–೨–೨೦೧೨ | ಶಿವಕುಮಾರ್ |
| ೮೦ | ಸತ್ಯಸಮರ | ಪಾಕ್ಷಿಕ | ೨೩–೨–೨೦೧೨ | ಜಯರಾಮೇಗೌಡ |
| ೮೧ | ಕ್ರಾಂತಿ ಸಂಪದ | ವಾರಪತ್ರಿಕೆ | ೨೮–೨–೨೦೧೨ | ವಾಜಿದ್ ಖಾನ್ |
| ೮೨ | ವಿದ್ಯಾರಂಜಕ | ವಾರಪತ್ರಿಕೆ | ೨೮–೨–೨೦೧೨ | ಇ.ಎಸ್.ವೆಂಕಟೇಶಬಾಬು |
| ೮೩ | ಬೆಂಗಳೂರು ಸೆಂಟರ್ | ಮಾಸಿಕ | ೧೪–೫–೨೦೧೨ | ಟಿ.ವಿ.ವೆಂಕಟರಾಮು |
| ೮೪ | ಜ್ಞಾನಪ್ರಸಾರ | ಮಾಸಿಕ | ೧೪–೫–೨೦೧೨ | ರೇಣುಕ ಸಿ.ಎಂ |
| ೮೫ | ಇದೇ ಗಜಧ್ವನಿ | ಪಾಕ್ಷಿಕ | ೧೫–೬–೨೦೧೨ | ಹೆಚ್.ಬಿ.ಕಿರಣ್ ಕುಮಾರ್ |
| ೮೬ | ಗ್ರಾಮಾಂತರ ಮಿತ್ರ | ಪಾಕ್ಷಿಕ | ೬–೭–೨೦೧೨ | ಪ್ರಭಾಕರ |
| ೮೭ | ಪ್ರಜಾಯೋಗ | ದೈನಂದಿನ | ೧೯–೭–೨೦೧೨ | ಡಿ.ಸಿ.ನಾಗಭೂಷಣ |
| ೮೮ | ಪ್ರಜಾಪೃಥ್ವಿ | ವಾರಪತ್ರಿಕೆ | ೮–೮–೨೦೧೨ | ಚಿದಾನಂದ ಜೆ.ಪಿ |
| ೮೯ | ಮಹಿಳಾ ಕೂಗು | ಮಾಸಿಕ | ೧೪–೮–೨೦೧೨ | ದಲಿತ್ |
| ೯೦ | ಏಕಶಿಲಾ ಪತ್ರಿಕೆ | ವಾರಪತ್ರಿಕೆ | ೨೧–೮–೨೦೧೨ | ಕಂಬಣ್ಣ ಎಂ |
| ೯೧ | ಶಿಕ್ಷಣ ಕ್ರಾಂತಿ | ಮಾಸಿಕ | ೨೧–೮–೨೦೧೨ | ಗಂಗಾಧರಮೂರ್ತಿ |
| ೯೨ | ಮಹಿಳಾ ವಾಯ್ಸ್ | ಮಾಸಿಕ | ೩೦–೮–೨೦೧೨ | ಬಿ.ಎನ್.ರಂಗಸ್ವಾಮಯ್ಯ |
| ೯೩ | ತುಮಕೂರು ವಾಣಿ | ವಾರಪತ್ರಿಕೆ | ೩೦–೮–೨೦೧೨ | ಗಣೇಶ್ ಪ್ರಸಾದ್ ಕೆ |
| ೯೪ | ಪ್ರತಿಸ್ಪಂದನ | ಮಾಸಿಕ | ೨೬–೧೧–೨೦೧೨ | ಕೆ.ಆರ್.ಬಸವರಾಜು |
| ೯೫ | ಹೇಮಾವತಿ ವಾಣಿ | ವಾರಪತ್ರಿಕೆ | ೨೭–೧೧–೨೦೧೨ | ಎನ್.ಭಾನುಪ್ರಶಾಂತ್ |
| ೯೬ | ನಾ ಕುಂಚಿಟಿಗ | ಮಾಸಿಕ | ೯–೧–೨೦೧೩ | ಟಿ.ಎಂ.ಮಂಜುನಾಥ |
| ೯೭ | ದೈವಜ್ಞ ವಾಹಿನಿ | ಮಾಸಿಕ | ೧೫–೧–೨೦೧೩ | ಎಂ.ಎಸ್.ಬಾಬುರಾಜೇಂದ್ರ, ಪ್ರಸನ್ನ ಕುಮಾರ್ |
| ೯೮ | ತುಮಕೂರು ಕಹಳೆ | ಪಾಕ್ಷಿಕ | ೧೫–೧–೨೦೧೩ | ಲಕ್ಷ್ಮೀಕಾಂತಯ್ಯ |
| ೯೯ | ದೈವಜ್ಞ ಕಿರಣ | ಮಾಸಿಕ | ೨೪–೧–೨೦೧೩ | ಎಸ್.ಗಣೇಶ್ |
| ೧೦೦ | ಕ್ರಾಂತಿಪ್ರಭ | ದಿನಪತ್ರಿಕೆ | ೨೪–೧–೨೦೧೩ | ವಾಜಿದ್ ಖಾನ್ |
| ೧೦೧ | ಸತ್ಯಪ್ರಗತಿ | ವಾರಪತ್ರಿಕೆ | ೨೪–೧–೨೦೧೩ | ಪುನೀತ್ ಟಿ.ಡಿ |
| ೧೦೨ | ಶಬ್ಧವೇಧಿ | ಪಾಕ್ಷಿಕ | ೨೪–೧–೨೦೧೩ | ಓಬಳರಾಜು ಕೆ.ಆರ್ |
| ೧೦೩ | ಕುಣಿಗಲ್ ಕ್ರಾಂತಿ | ವಾರಪತ್ರಿಕೆ | ೩೧–೧–೨೦೧೩ | ರಂಗಸ್ವಾಮಿ ಹೆಚ್.ಜಿ |
| ೧೦೪ | ಕಲ್ಪತರು ಕ್ರಾಂತಿ | ವಾರಪತ್ರಿಕೆ | ೧–೨–೨೦೧೩ | ಮಂಜುನಾಥ್ ಹೆಚ್.ಕೆ |
| ೧೦೫ | ಕಲ್ಪತರು ನ್ಯೂಸ್ | ಮಾಸಿಕ | ೭–೨–೨೦೧೩ | ಎಸ್.ಗಣೇಶ್ |
| ೧೦೬ | ಹಾಯ್ ಪಾವಗಡ | ಪಾಕ್ಷಿಕ | ೧೮–೨–೨೦೧೩ | ಕೆ.ಆರ್.ಜಯಸಿಂಹ |
| ೧೦೭ | ವಾಲ್ಮೀಕಿ ಮಿತ್ರ | ಮಾಸಿಕ | ೨೬–೨–೨೦೧೩ | ಎಸ್.ಕೆ.ರಾಜಣ್ಣ |
| ೧೦೮ | ಪ್ರಜಾಕಿರಣ | ಮಾಸಿಕ | ೨೮–೨–೨೦೧೩ | ಶ್ಯಾಂಪ್ರಕಾಶ್ ಜಿ. |

# ರಂಗಭೂಮಿ

ನಾಟಕ ಮತ್ತು ಜನಪದ ಕಲೆಗಳು ಜನತೆಯ ಜೀವಾಳವಾಗಿದ್ದು, ಜನತಾ ವಿಶ್ವವಿದ್ಯಾಲಯ ಎಂದು ಕರೆಯಲ್ಪಡುವ ರಂಗಭೂಮಿ ಮನರಂಜನೆಯ ಮೂಲಕ ಸಂಸ್ಕೃತಿ ಮತ್ತು ಜ್ಞಾನಪ್ರಸಾರದ ಪ್ರಭಾವೀ ಮಾಧ್ಯಮವೆನಿಸಿದೆ. ವಿಶ್ವದಾದ್ಯಂತ ನಾಟಕ ಕಲೆಗೆ ಗೌರವ ಸ್ಥಾನವಿದೆ. ರಂಗಭೂಮಿ ಜೀವನವನ್ನೇ 'ಕಾಯಕ'ವಾಗಿ ಸ್ವೀಕರಿಸಿ ಜೀವಿಸುತ್ತಿರುವ ರಂಗಕಲಾವಿದರಿಗೆ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಂಪರೆಯಲ್ಲಿ ಅಪಾರ ಗೌರವವಿದೆ. ಕಳೆದ ಒಂದು ಶತಮಾನದಲ್ಲಿ ಕನ್ನಡ ರಂಗಭೂಮಿಯ ಬೆಳವಣಿಗೆಗೆ ಕಾರಣರಾದ ಹಿರಿಯ ಚೇತನಗಳಲ್ಲಿ ನಾಟಕ ಶಿರೋಮಣಿ ಎ.ವಿ.ವರದಾಚಾರ್, ನಾಟಕರತ್ನ ಗುಬ್ಬಿವೀರಣ್ಣ, ಗರೂಡ ಸದಾಶಿವರಾವ್, ಶಿರಹಟ್ಟಿ ವೆಂಕೋಬರಾವ್, ವಾಮನರಾವ್ ಮಾಸ್ತರ್, ಗಂಗೂಬಾಯಿ ಗುಳೇದಗುಡ್ಡ, ಹಂದಿಗನೂರು ಸಿದ್ಧರಾಮಪ್ಪ ಮೊದಲಾದ ಅಪ್ರತಿಮ ಕಲಾವಿದರನ್ನು ಕರ್ನಾಟಕದ ರಂಗಭೂಮಿಯ ಇತಿಹಾಸ ಕೃತಜ್ಞತೆಯಿಂದ ಸ್ಮರಿಸುತ್ತದೆ. ರಂಗಭೂಮಿಗೆ ಪ್ರಾದೇಶಿಕ ಮಿತಿ ಇರುವುದಿಲ್ಲವೆಂಬುದು ಗಮನಾರ್ಹ.

ಇಪ್ಪತ್ತನೆಯ ಶತಮಾನ, ತುಮಕೂರು ಜಿಲ್ಲೆಯ ವೃತ್ತಿನಾಟಕ ಕಂಪನಿಗಳ ಸುವರ್ಣಯುಗವೇ ಆಗಿದೆ. ಜಿಲ್ಲೆಯಲ್ಲಿ ಜನ್ಮತಳೆದ ಮಹಾನ್ ಕಲಾಸಾಧಕರು ಮಾಡಿದ ಕಲಾಸಾಧನೆಯಿಂದ ಕಟ್ಟಿದ ನಾಟಕ ಸಂಸ್ಥೆಗಳು, ಬೆಳೆಸಿ-ಬೆಳಗಿಸಿದ ಅಪ್ರತಿಮ ಸಂಗೀತಗಾರರು, ನಟ-ನಟಿಯರು, ರಂಗತಜ್ಞರು ಭಾರತೀಯ ರಂಗಭೂಮಿಯ ಪರಂಪರೆಯಲ್ಲಿ ಹೆಗ್ಗುರುತಾಗಿ ಅವಿಸ್ಮರಣೀಯರಾಗಿದ್ದಾರೆ. ಜನಮನ್ನಣೆ, ರಾಜಮನ್ನಣೆಗಳು ದೊರೆತು ಬಿರುದು-ಸನ್ಮಾನಗಳಿಗೆ ಪಾತ್ರರಾಗಿ ಮಹಾನ್ ಕಲಾತಪಸ್ವಿಗಳೆನಿಸಿದ್ದಾರೆ. ಗುಬ್ಬಿ ವೀರಣ್ಣನವರ "ಗುಬ್ಬಿ ಕಂಪನಿ". ಕಣತ್ತೂರಿನ 'ಹಿರಣ್ಣಯ್ಯ ಮಿತ್ರ ಮಂಡಲಿ', ಗುಬ್ಬಿ ಹೊಸಹಳ್ಳಿಯ 'ಸೀತೂ ಕಂಪನಿ', ಚಿಕ್ಕನಾಯಕನ ಹಳ್ಳಿಯ 'ಶ್ರೀ ಚಂದ್ರಮೌಳೇಶ್ವರ ನಾಟಕ ಸಭಾ' ಅಲ್ಲದೆ "ಕನ್ನಡ ಥಿಯೇಟರ್ಸ್, ಮೈಸೂರು ಥಿಯೇಟ್ರಿಕಲ್ ಕಂಪನಿ, ಶ್ರೀಕಂಠೇಶ್ವರ ಕೃಪಾಪೋಷಿತ ನಾಟಕ ಮಂಡಲಿ ಮೊದಲಾದ ನಾಟಕ ಕಂಪನಿಗಳನ್ನು ಕಟ್ಟಿದವರೆಲ್ಲಾ ಗುಬ್ಬಿ ಕಂಪನಿಯಲ್ಲಿದ್ದ ಕಲಾವಿದರೇ ಆಗಿದ್ದಾರೆ. ಗುಬ್ಬಿ ವೀರಣ್ಣನವರು ತಯಾರಿಸಿದ 'ಮೂಕಿ' ಚಿತ್ರ 'ಹಿಸ್ ಲವ್ ಅಫೇರ್' ನಿರ್ದೇಶಿಸಿದ ಹೆಚ್.ಎಲ್.ಎನ್.ಸಿಂಹ ಮುಂದೆ ಕನ್ನಡದ ಹೆಸರಾಂತ ಚಲನಚಿತ್ರ ನಿರ್ದೇಶಕರಾಗಿ ಬೆಳೆದರು. ಸಂಸ್ಕೃತ ಭಾಷೆಯಲ್ಲಿ ಚಲನಚಿತ್ರಗಳನ್ನು ನಿರ್ಮಿಸಿ ಅಂತಾರಾಷ್ಟ್ರೀಯ ಖ್ಯಾತಿಗಳಿಸಿದ ಜಿ.ವಿ.ಅಯ್ಯರ್, ಪ್ರಖ್ಯಾತ ರಂಗಭೂಮಿತಜ್ಞ ಹಾಗೂ ಸಂಗೀತ ನಿರ್ದೇಶಕ ಬಿ.ವಿ.ಕಾರಂತ, ಎಂ.ವಿ.ಸುಬ್ಬಯ್ಯ ನಾಯ್ಡು, ಡಾ॥ ರಾಜಕುಮಾರ್, ಹೊನ್ನಪ್ಪ ಭಾಗವತರು, ಟಿ.ಆರ್.ನರಸಿಂಹರಾಜು, ಟಿ.ಎನ್.ಬಾಲಕೃಷ್ಣ, ಆರ್.ನಾಗೇಂದ್ರರಾವ್ ಮೊದಲಾಗಿ ಕನ್ನಡ ಚಲನಚಿತ್ರ ರಂಗದ ಖ್ಯಾತಿವೆತ್ತ ಮಹಾನ್ ಕಲಾವಿದರೆಲ್ಲ ಗುಬ್ಬಿ ಕಂಪನಿಯ ಕಲಾವಿದರೇ ಆಗಿದ್ದಾರೆ ಎಂದು ಹಿರಿಯ ಸಾಹಿತಿ ವಿನಾಯಕ ಕೃಷ್ಣ ಗೋಕಾಕರು ಹೇಳಿರುವ ಮಾತು ಸತ್ಯವಾಗಿದೆ.

## ವೃತ್ತಿ ರಂಗಭೂಮಿ

ಭಾರತದಲ್ಲಿ ವೃತ್ತಿರಂಗಭೂಮಿ ಹುಟ್ಟಿದ್ದು ಬಂಗಾಳದಲ್ಲಿ. ಕಲ್ಕತ್ತೆಯಲ್ಲಿ ನೆಲೆಸಿದ ಬ್ರಿಟಿಷರು ತಮ್ಮ ಮನರಂಜನೆಗಾಗಿ ಇಂಗ್ಲೀಷ್ ರಂಗಮಂದಿರಗಳನ್ನು ಕಟ್ಟಿ ನಾಟಕಗಳನ್ನು ಪ್ರಯೋಗಿಸುತ್ತಿದ್ದುದರ ಪ್ರಭಾವದಿಂದ ಭಾರತೀಯರೂ ಸಹ ಅದೇ ಮಾದರಿಯಲ್ಲಿ ನಾಟಕ ಪ್ರಯೋಗಗಳನ್ನು ನಡೆಸಲು ಪ್ರಾರಂಭಿಸಿದರು. ಪಾರಸಿಗಳಿಂದ ಪ್ರಾರಂಭವಾದ ಭಾರತೀಯ ರಂಗ ತಂಡಗಳು ದೇಶಾದ್ಯಂತ ಸಂಚರಿಸಿ ಎಲ್ಲೆಡೆ ಪ್ರಾಂತೀಯ ರಂಗಭೂಮಿಗಳ ಹುಟ್ಟಿಗೆ ಕಾರಣವಾದವು. ಹೀಗೆ ಪ್ರಾರಂಭವಾದ ವೃತ್ತಿತಂಡಗಳ ಸಾಲಿನಲ್ಲಿ ಅದ್ವಿತೀಯ ಸಾಧನೆ ಮಾಡಿ ಹೆಸರಾದ ಗುಬ್ಬಿ ಚನ್ನಬಸವೇಶ್ವರ ಥಿಯೇಟ್ರಿಕಲ್ ಕಂಪನಿ ತುಮಕೂರು ಜಿಲ್ಲೆಯದೆಂಬುದು ಬಹಳ ಗಮನಾರ್ಹವಾದ ಸಂಗತಿ. ಗುಬ್ಬಿ ಕಂಪನಿಯಲ್ಲಿ ಹೆಸರಾಂತ ನಟರಾಗಿ ಮೆರೆದ ಅನೇಕ ಕಲಾವಿದರು ತುಮಕೂರು ತಾಲೂಕಿನಲ್ಲಿ ತಮ್ಮದೇ ಸ್ವಂತ ಕಂಪನಿಗಳನ್ನು ಕಟ್ಟಿ ಕಲಾಸೇವೆಗೈದಿರುವುದನ್ನು ಗಮನಿಸಬಹುದಾಗಿದೆ. ೧೯ನೇ ಶತಮಾನದ ಉತ್ತರಾರ್ಧ ಹಾಗೂ ೨೦ನೇ ಶತಮಾನದ ಪೂರ್ವಾರ್ಧದಲ್ಲಿ ಉತ್ತುಂಗ ಶಿಖರದಲ್ಲಿ ಮೆರೆದ ವೃತ್ತಿರಂಗ ಭೂಮಿ ಮುಂದೆ ಚಲನಚಿತ್ರ ಮುಂತಾದ ಬದಲಾದ ಮಾನವನ ಅಭಿರುಚಿಗಳ ಹೊಡೆತಕ್ಕೆ ಸಿಲುಕಿ ನಲುಗಿರುವುದನ್ನು ಗಮನಿಸಬಹುದಾಗಿದೆ.

**ಗುಬ್ಬಿ ಕಂಪನಿ:** ಗುಬ್ಬಿಯ ಅಭಿಮಾನಿ ವರ್ತಕರ ಪ್ರೋತ್ಸಾಹದಿಂದ ಕಂಟ್ರಾಕ್ಟರ್ ಚಂದಣ್ಣ, ಅಬ್ದುಲ್ ಅಜೀಜ್, ಸಾಹುಕಾರ್ ನೀಲಕಂಠಪ್ಪ ಇವರು ೧೮೮೪ರಲ್ಲಿ 'ಗುಬ್ಬಿ ಶ್ರೀ ಚನ್ನಬಸವೇಶ್ವರಸ್ವಾಮಿ ಕೃಪಾಪೋಷಿತ ನಾಟಕ ಸಭಾ' ಪ್ರಾರಂಭಿಸಿದರು. ಈ ನಾಟಕ ಕಂಪನಿಗೆ ೧೮೯೬ರಲ್ಲಿ ಸೇರಿಸಲ್ಪಟ್ಟ ಆರು ವರ್ಷದ ಬಾಲಕ ವೀರಣ್ಣ, ಕಂಪನಿಯ ಇತರ

ಕಾರ್ಯಗಳ ಸಹಾಯಕರಾಗಿ, ಬಾಲಕಲಾವಿದರಾಗಿ, ರಂಗಕರ್ಮಿಯಾಗಿ, ಹಾಸ್ಯನಟನಾಗಿ ಹಂತಹಂತವಾಗಿ ಬೆಳೆದರು. ಮಾಲೀಕರಾದ ಚಂದಣ್ಣನವರಿಂದಲೇ ಕಂಪನಿಯಲ್ಲಿ ಬಾಲಕ ವೀರಣ್ಣನಿಗೆ ಅಕ್ಷರಾಭ್ಯಾಸ ನಡೆಯಿತು. ಚಂದಣ್ಣನವರ ನಿಧನಾನಂತರ ೧೯೧೭ರಲ್ಲಿ ಕಂಪನಿಯ ಪಾಲುದಾರರಾದ ವೀರಣ್ಣನವರು ೧೯೧೯ರಲ್ಲಿ, ಅದರ ಸಂಪೂರ್ಣ ಮಾಲೀಕತ್ವ ವಹಿಸಿಕೊಂಡರು. ಬೆಂಗಳೂರು, ಮೈಸೂರು, ಮಹಾರಾಷ್ಟ್ರ, ಮದರಾಸುಗಳಲ್ಲಿ ಗುಬ್ಬಿ ಕಂಪನಿಯ ನಾಟಕಗಳು ನಡೆದವು. ೧೯೨೩ರಲ್ಲಿ ವೀರಣ್ಣನವರು ಮೈಸೂರು ಮಹಾರಾಜರಿಂದ 'ವರ್ಸಟೈಲ್ ಕಮೆಡಿಯನ್' (ವಿನೋದ ರತ್ನಾಕರ) ಎಂಬ ಬಿರುದು ಪಡೆದರು. ೧೯೨೫ರಲ್ಲಿ ಹದಿನೈದು ವರ್ಷದ ಒಳಗಿನ ಬಾಲಕಲಾವಿದರನ್ನು ತಯಾರು ಮಾಡಲು "ಬಾಲ ಕಲಾವರ್ಧಿನಿ" ಎಂಬ ವಿಭಾಗ ತೆರೆದರು. ೧೯೩೭ರ ಸುಮಾರಿಗೆ ಗುಬ್ಬಿ ಕಂಪನಿ ದಕ್ಷಿಣ ಭಾರತದಲ್ಲಿಯೇ ಪ್ರಸಿದ್ಧಿ ಪಡೆಯಿತಲ್ಲದೆ ಆರ್ಥಿಕವಾಗಿಯೂ ಬೆಳೆಯಿತು. ೧೯೩೮ರಲ್ಲಿ ಅರವತ್ತು ಸಾವಿರ ರೂಪಾಯಿ ವೆಚ್ಚದಲ್ಲಿ 'ಕುರುಕ್ಷೇತ್ರ' ನಾಟಕ ಪ್ರದರ್ಶನ ನೀಡಿ ಗುಬ್ಬಿ ಕಂಪನಿಯು ತನ್ನ 'ಚಿನ್ನದ ಹಬ್ಬ' ಆಚರಿಸಿತು. ಕುರುಕ್ಷೇತ್ರ ನಾಟಕವನ್ನು ಆಂಧ್ರದಲ್ಲಿ ತೆಲುಗು ಭಾಷೆಯಲ್ಲಿ ಅಭಿನಯಿಸಿದಾಗ ಆಂಧ್ರದ ಜನತೆ ವೀರಣ್ಣನವರಿಗೆ 'ಕರ್ನಾಟಕಾಂಧ್ರ ನಾಟಕ ಸಾರ್ವಭೌಮ' ಬಿರುದು ನೀಡಿ ಗೌರವಿಸಿತು. ೧೯೪೮ರಲ್ಲಿ ವಿಶೇಷ ರಂಗತಂತ್ರಗಳನ್ನು ಅಳವಡಿಸುವುದರ ಮೂಲಕ "ರಾಜಾ ಗೋಪಿಚಂದ್" ನಾಟಕ ಪ್ರದರ್ಶಿಸಿ, ಕಂಪನಿಯ ವಜ್ರಮಹೋತ್ಸವವನ್ನು ಆಚರಿಸಲಾಯಿತು. 'ದಶಾವತಾರ' ನಾಟಕಕ್ಕೆ ಒಂದು ಲಕ್ಷ ರೂಪಾಯಿ ವೆಚ್ಚದಲ್ಲಿ ಭೂವೈಕುಂಠವೋ ಎಂಬಂತೆ ರಂಗಸಜ್ಜಿಕೆ ನಿರ್ಮಿಸಿ "ಕರ್ನಾಟಕ ರಂಗಭೂಮಿಯ ಶತಮಾನೋತ್ಸವ" ಆಚರಿಸಲಾಯಿತು. ಈ ಕಂಪನಿಯ ಕಲಾಸಂಸಾರ ಐದುನೂರು ಸಂಖ್ಯೆಗೂ ಮೀರಿತು. ರಂಗದ ಮೇಲೆ ಜೀವಂತ ಆನೆ, ಕುದುರೆ, ಜಿಂಕೆ, ನವಿಲು, ಪಾರಿವಾಳಗಳು ಬಂದವು. ಕಲಾವಿದರು ರಂಗಪರಿಕರಗಳನ್ನು ಊರಿಂದೂರಿಗೆ ಸಾಗಿಸಲು ವಿಶೇಷ ರೈಲುಗಳ ವ್ಯವಸ್ಥೆಯಾಯಿತು. ಕನ್ನಡಿಗರೇ ಅಲ್ಲದೆ ಗುಬ್ಬಿಕಂಪನಿಯ ನಾಟಕ ವೈಭವಕ್ಕೆ ಹೊರನಾಡಿನ ಜನರೂ ಸಹ ಮಾರುಹೋಗಿ ಮತ್ತೆ ಮತ್ತೆ ನಾಟಕಗಳನ್ನು ನೋಡಿ ಆನಂದಿಸಿದರು.

ದೃಢಕಾಯರೂ, ಮಧುರಕಂಠದ ಗಾನಪಟುಗಳೂ ತಮ್ಮ ಅಭಿನಯ ಪ್ರೌಢಿಮೆಯಿಂದ, ಕಂಪನಿಯ ಕೀರ್ತಿಯನ್ನು ಉತ್ತುಂಗಕ್ಕೇರಿಸಿದಂತಹ ಅಭಿನವಭಕ್ತಶಿರೋಮಣಿ ಸಿ.ಬಿ.ಮಲ್ಲಪ್ಪ, ನಟಭಯಂಕರ ಎಂ.ಎನ್.ಗಂಗಾಧರ ರಾಯರು, ಜಿ.ನಾಗೇಶರಾವ್, ಕೆ.ಹಿರಣ್ಣಯ್ಯ, ಬಿ.ಕೆ.ಈಶ್ವರಪ್ಪ ಬಿ.ವಿ.ಗುರುಮೂರ್ತಪ್ಪ ರಾಣಿಪಾರ್ಟ್ ರಂಗಪ್ಪ, ಜಿ.ಸುಂದರಮ್ಮ, ಮಾಲತಮ್ಮ, ಸ್ವರ್ಣಮ್ಮ, ಕಾಲಾಪಿಲ್ಲಯ್ಯ, ಮಳವಳ್ಳಿ ಸುಂದರಮ್ಮ, ಗಾನಕೋಗಿಲೆ ಅಶ್ವತ್ಥಮ್ಮ, ಬಿ.ಜಯಮ್ಮ, ಬಿ.ಎನ್. ಚಿನ್ನಪ್ಪ, ಶೇಷಾಚಾರ್, ಮುರಾರಾಚಾರ್, ವ್ಯಾಸರಾವ್, ಹಿರಿಯಣ್ಣಯ್ಯ, ಸಿಂಗಾನಲ್ಲೂರು ಪುಟ್ಟಸ್ವಾಮಯ್ಯ, ಯು. ಮಹಾಬಲರಾವ್, ನಂಜನಗೂಡು ನಾಗಪ್ಪ ಮೊದಲಾದ ಕಲಾಶ್ರೇಷ್ಠರು ಜನಮನದಲ್ಲಿ ಶಾಶ್ವತವಾಗಿ ನಿಂತರು. ಉತ್ತಮ ಕಥಾವಸ್ತು, ಔಚಿತ್ಯಪೂರ್ಣ ಸಂಭಾಷಣೆ ಮತ್ತು ಗೀತೆಗಳನ್ನು ಗುಬ್ಬಿ ಕಂಪನಿಗಾಗಿ ಪೌರಾಣಿಕ, ಐತಿಹಾಸಿಕ, ಜಾನಪದ ಹಾಗೂ ಸಾಮಾಜಿಕ ನಾಟಕಗಳನ್ನು ರಚಿಸಿದ ಗುಬ್ಬಿಯ ಕವಿ ವೀರಪ್ಪಶಾಸ್ತ್ರಿ, ಮೋಟಗಾನಹಳ್ಳಿ ವಿದ್ವಾನ್ ಶಂಕರಶಾಸ್ತ್ರಿ, ಬೆಳ್ಳಾವೆ ನರಹರಿಶಾಸ್ತ್ರಿ ಮತ್ತು ಬಿ.ಪುಟ್ಟಸ್ವಾಮಯ್ಯ; ಅಲ್ಲದೆ 'ತ.ರಾ.ಸು', ಎಂ.ಎಸ್.ಅನಂತರಾವ್, ಹುಣಸೂರು ಕೃಷ್ಣಮೂರ್ತಿ, ಮಹಾಂತೇಶ ಶಾಸ್ತ್ರಿ ಮೊದಲಾದ ಸುಪ್ರಸಿದ್ಧ ಸಾಹಿತಿಗಳೂ ಬರೆದುಕೊಟ್ಟರು. ವೀರಣ್ಣನವರು 'ಹರಿಮಾಯಾ', ಹಿಸ್ ಲವ್ ಅಫೇರ್, 'ಕಳ್ಳರ ಕೂಟ' ಮುಂತಾದ 'ಮೂಕಿ' ಚಿತ್ರಗಳನ್ನು, 'ಸದಾರಮೆ' (೧೯೩೫), ಸುಭದ್ರಾ (೧೯೪೧), ಹೇಮರೆಡ್ಡಿ ಮಲ್ಲಮ್ಮ (೧೯೪೫), ಗುಣಸಾಗರಿ (೧೯೫೦-೫೨) ಹಾಗೂ ಬೇಡರಕಣ್ಣಪ್ಪ (೧೯೫೨-೫೩) ಮೊದಲಾದ 'ಟಾಕಿ' ಚಿತ್ರಗಳನ್ನು ನಿರ್ಮಿಸಿ ಚಲನಚಿತ್ರರಂಗದಲ್ಲೂ ತಮ್ಮ ಕಲಾಪ್ರೌಢಿಮೆಯನ್ನು ಮೆರೆಸಿದರು. ವೀರಣ್ಣನವರ ಶಿಸ್ತು, ಶ್ರದ್ಧೆ, ಆದರ್ಶ ಹಾಗೂ ವ್ಯವಹಾರ ಚತುರತೆ ಗುಣಗ್ರಾಹಿತ್ವದಿಂದ ಗುಬ್ಬಿ ಕಂಪನಿ ವೈಭವಪೂರ್ಣ ಬೆಳವಣಿಗೆ ಹೊಂದಿ ಪ್ರಪಂಚದ ವೃತ್ತಿರಂಗಭೂಮಿಯ ಇತಿಹಾಸದಲ್ಲಿ ಸುವರ್ಣ ಅಧ್ಯಾಯ ನಿರ್ಮಿಸಿತು. ಈ ಮಹಾನ್ ಚೇತನ ಸುಮಾರು ಅರವತ್ತು ವರ್ಷ ದೀರ್ಘಕಾಲಾವಧಿಯಲ್ಲಿ ನಿರಂತರವಾಗಿ ರಂಗಭೂಮಿಯ ಸೇವೆ ಮಾಡಿ ೧೮-೧೦-೧೯೭೨ರಲ್ಲಿ ಅಸ್ತಮಿಸಿತು. ನಂತರ ಜಿ.ವಿ.ಚನ್ನಬಸವಣ್ಣನವರು ಗುಬ್ಬಿ ಕಂಪನಿಯ ಮಾಲೀಕತ್ವ ವಹಿಸಿಕೊಂಡು, "ಶ್ರೀ ಚನ್ನಬಸವೇಶ್ವರ ಥಿಯೇಟ್ರಿಕಲ್ ಕಂಪನಿ" ಎಂಬ ಹೆಸರಿನಿಂದ ಮುಂದುವರೆಸಿ ಶತಮಾನೋತ್ಸವ ಆಚರಿಸುವ ಮೂಲಕ ದಾಖಲೆ ಸ್ಥಾಪಿಸಿತು.

ಗುಬ್ಬಿ ಕಂಪನಿಯಿಂದ ನಾನಾ ಕಾರಣಗಳಿಂದ ಹೊರಬಂದು ವೃತ್ತಿನಾಟಕ ಸಂಸ್ಥೆಗಳನ್ನು ಕಟ್ಟಿ, ಸುಖ-ದುಃಖಗಳನ್ನು ಕಂಡುಂಡು ತಮ್ಮ ಜೀವನವನ್ನೇ ಅರ್ಪಿಸಿಕೊಂಡ ಮಹಾನ್ ಕಲಾತಪಸ್ವಿಗಳಿದ್ದರು. ಸುಬ್ಬಯ್ಯ ನಾಯ್ಡುರವರ 'ಶ್ರೀ ಸಾಹಿತ್ಯ ನಾಟಕ ಮಂಡಲಿ, ಸಂಗೀತ ವಿದುಷಿ ಮಳವಳ್ಳಿ ಸುಂದರಮ್ಮನವರ ಮೇಲ್ವಿಚಾರಣೆಯ 'ಚಾಮುಂಡೇಶ್ವರಿ ನಾಟಕ ಸಭಾ',

ಬಿ.ವಿ.ಗುರುಮೂರ್ತಪ್ಪನವರ ಪಾಲುದಾರಿಕೆಯ 'ವಿಶ್ವೇಶ್ವರ ನಾಟಕ ಮಂಡಲಿ, ಎಂ.ಸಿ.ಮಹಾದೇವಸ್ವಾಮಿಯವರ 'ಕನ್ನಡ ಥಿಯೇಟರ್ಸ್', ಡಿ.ಮುನಿರಂಗಪ್ಪನವರ 'ಮೈಸೂರು ಥಿಯೇಟ್ರಿಕಲ್ ಕಂಪನಿ', ಶೇಷಾಚಾರ್ ಅವರ 'ಶೇಷಕಮಲ ಕಲಾ ನಾಟಕ ಮಂಡಲಿ', ಎನ್.ಶ್ರೀಕಂಠಮೂರ್ತಿಯವರ 'ಶ್ರೀಕಂಠೇಶ್ವರ ಕೃಪಾಪೋಷಿತ ನಾಟಕ ಮಂಡಳಿ' ಮುಂತಾದವುಗಳ ಮೂಲಕ ನಟ–ನಟಿಯರು, ರಂಗಕರ್ಮಿಗಳು, ಸಂಗೀತಗಾರರು, ಆಡಳಿತ ವ್ಯವಸ್ಥಾಪಕರು ನೀಡಿದ ಕಲಾಸೇವೆ, ಸ್ತುತ್ಯಾರ್ಹವಾದುದಾಗಿದೆ. ತುಮಕೂರು ಶಿವಪ್ಪಶಾಸ್ತ್ರಿಗಳ ಚಾಮುಂಡೇಶ್ವರಿ ನಾಟಕ ಸಂಘ, ಬೆಳ್ಳಾವೆಯ ಸೋಮೇಶ್ವರ ವಿಲಾಸ ನಾಟಕ ಮಂಡಲಿ(೧೯೦೮), ಶಂಕರೀ ವಿಲಾಸ ನಾಟಕ ಸಂಘ (೧೯೦೫), ಜಯಗೌರಿ ನಾಟಕ ಸಂಘ ಮೊದಲಾದ ನಾಟಕ ಕಂಪನಿಗಳಿದ್ದವು. ಹೊನ್ನುಡಿಕೆ ಬಸವರಾಜು ಎಂಬುವವರು ನಟರಾಜ ಆರ್ಟ್ಸ್ ಅಂಡ್ ಥಿಯೋಟ್ರಿಕಲ್ಸ್ ಅನ್ನು ಸ್ಥಾಪಿಸಿ ಸುಮಾರು ೭೫ ನಾಟಕ ಪ್ರದರ್ಶಿಸಿದರು.

**ಶ್ರೀ. ಸೀತಾ ಮನೋಹರ ಕರ್ನಾಟಕ ನಾಟಕ ಮಂಡಳಿ:** ಸೀತೂ ಕಂಪನಿ ಎಂದು ಪ್ರಸಿದ್ಧವಾದ ಇದನ್ನು ೧೯೧೫ರಲ್ಲಿ ಪ್ರಾರಂಭಿಸಿದವರು ಗುಬ್ಬಿ ತಾಲೂಕು ಹೊಸಹಳ್ಳಿಯ ಕೆ.ಸೀತಾರಾಮಯ್ಯನವರು. ಇವರು ಗುಬ್ಬಿ ಕಂಪನಿಯಲ್ಲಿ ಅಗ್ರಪಂಕ್ತಿಯ ಸ್ತ್ರೀಪಾತ್ರಧಾರಿಯಾಗಿ ಹೆಸರಾದವರು. ಸ್ತ್ರೀಪಾತ್ರಗಳಿಗೆ ಒಪ್ಪುವ ಶರೀರ–ಶಾರೀರ, ನಡಿಗೆ–ವೈಯ್ಯಾರಗಳಿಂದ ಗುಬ್ಬಿ ಕಂಪನಿಯಲ್ಲಿ 'ರಂಗಭೂಮಿಯ ರಾಣಿ' ಎನಿಸಿಕೊಂಡಿದ್ದರು. ಭಿನ್ನಾಭಿಪ್ರಾಯದಿಂದ ೧೯೧೮ರಲ್ಲಿ ಗುಬ್ಬಿ ಕಂಪನಿಯನ್ನು ತೊರೆದು ಸ್ವಂತ "ಸೀತಾ ಮನೋಹರ ನಾಟಕ ಮಂಡಲಿ" ಸ್ಥಾಪಿಸಿದರು. ಸೀತಪ್ಪನವರು ಚಾರುಮತಿ, ಸತ್ಯಭಾಮೆ, ಸೀತೆ, ವಿದ್ಯಾಧರೆ, ದ್ರೌಪದಿಯ ಪಾತ್ರಗಳಲ್ಲಿ ಪ್ರಸಿದ್ಧಿ ಪಡೆದಿದ್ದರು. ಕಾಲಾಪಿಲ್ಲಯ್ಯ, ಬಿ.ವಿ.ಗುರುಮೂರ್ತಪ್ಪ, ಮಳವಳ್ಳಿ ಸುಂದರಮ್ಮ, ಗಾನಕೋಗಿಲೆ ಅಶ್ವತ್ಥಮ್ಮ, ಎಂ.ವಿ.ಸುಬ್ಬಯ್ಯನಾಯ್ಡು, ಹಾಸ್ಯಚಕ್ರವರ್ತಿ ಕೆ.ಹಿರಣ್ಣಯ್ಯ, ನಟಭಯಂಕರ ಗಂಗಾಧರರಾಯರು ಮೊದಲಾದ ಗುಬ್ಬಿ ಕಂಪನಿಯ ಅಗ್ರಪಂಕ್ತಿಯ ನಟ–ನಟಿಯರೂ ಸಹ ಸೀತೂ ಕಂಪನಿಯಲ್ಲಿದ್ದರು. ಅರವತ್ತು ಜನರ ಕಲಾಸಂಸಾರ ಹೊಂದಿದ್ದ ಈ ಕಂಪನಿ ಹದಿನೆಂಟು ವರ್ಷಕಾಲ ನಡೆದು ಆರ್ಥಿಕ ನಷ್ಟದಿಂದಾಗಿ ಕ್ರಮೇಣ ನಿಂತುಹೋಯಿತು.

**ಚಂದ್ರಮೌಳೇಶ್ವರ ನಾಟಕ ಸಭಾ:** ಚಿಕ್ಕನಾಯಕನಹಳ್ಳಿಯ ಸಿ.ಬಿ.ಮಲ್ಲಪ್ಪನವರು ಗುಬ್ಬಿ ಕಂಪನಿಯ ನಟಶ್ರೇಷ್ಠರಲ್ಲಿ ಒಬ್ಬರು, ೧೯೦೪ರಲ್ಲಿ ಕಲ್ಲೂರು ನಾಟಕ ಕಂಪನಿಯಿಂದ ತಮ್ಮ ರಂಗಭೂಮಿ ಜೀವನವನ್ನು ಆರಂಭಿಸಿದರು. ೧೯೧೯ರಲ್ಲಿ ಚಂದಣ್ಣನವರ ಕರೆಗೆ ಒಪ್ಪಿ ಗುಬ್ಬಿಕಂಪನಿ ಸೇರಿದರು. ನಾಯಕ ನಟರಿಗೆ ತಕ್ಕ ಮೈಕಟ್ಟು, ಸಾತ್ವಿಕ ಕಳೆಯ ರೂಪ, ಭಕ್ತಿಭಾವ ಸ್ಫುರಿಸುವ ಕಂಠಮಾಧುರ್ಯಗಳಿಂದ ಮಲ್ಲಪ್ಪನವರು ಸಮರ್ಥರೆನಿಸಿದ್ದರು. ಅಭಿನಯ, ಹಾಡುಗಾರಿಕೆಗಳೆರಡರಲ್ಲಿಯೂ ಸಿದ್ಧಹಸ್ತರೆನಿಸಿದ ಮಲ್ಲಪ್ಪನವರನ್ನು ಗುಬ್ಬಿಕಂಪನಿಯ 'ಅಕ್ಷಯಪಾತ್ರೆ' ಎನ್ನುತ್ತಿದ್ದರು. ಭಕ್ತಿರಸ ಪ್ರಧಾನ ಪಾತ್ರಗಳಲ್ಲಿ 'ಗುಬ್ಬಿ ಕಂಪನಿಯ ಆಸ್ತಿ' ಎನಿಸಿಕೊಂಡರು. ದಮಾಜಿಪಂಥ, ಭಕ್ತಕುಂಬಾರ, ಸಂತ ತುಕಾರಾಂ, ತುಳಸೀದಾಸ್, ಕಬೀರ್ದಾಸ್, ಕಂಸವಧೆ, ರುಕ್ಮಿಣೀ ಸ್ವಯಂವರ ಮುಂತಾದ ನಾಟಕಗಳಿಂದ ಕಂಪನಿಗೆ ಕೀರ್ತಿ–ಹಣ ಎರಡೂ ಲಭ್ಯವಾದುವು. ೧೯೨೧ರಲ್ಲಿ ಮಲ್ಲಪ್ಪನವರನ್ನು ಗುಬ್ಬಿಕಂಪನಿಯ ಭಾಗಸ್ಥರಾಗಿ ಮಾಡಲಾಯಿತು. ತಮಿಳುನಾಡಿನಲ್ಲಿ ಇವರ ಭಕ್ತಿರಸ ಪಾತ್ರಗಳಿಗೆ ಮೆಚ್ಚಿದ ಜನತೆ 'ಅಭಿನವ ಭಕ್ತ ಶಿರೋಮಣಿ' ಎಂಬ ಬಿರುದಿತ್ತು ಸನ್ಮಾನಿಸಿದರು. ೧೯೨೩ರಲ್ಲಿ ಗುಬ್ಬಿಕಂಪನಿಗೆ ವಿದಾಯ ಹೇಳಿ, ಚಿಕ್ಕಬಳ್ಳಾಪುರದ ಅಮಾಸೆ ನಂಜುಂಡಯ್ಯನವರೊಡನೆ ಸ್ವಂತ ಕಂಪನಿ "ಶ್ರೀ ಚಂದ್ರಮೌಳೇಶ್ವರ ನಾಟಕ ಸಭಾ" ಸ್ಥಾಪಿಸಿದರು. "ಭಕ್ತ ಕಬೀರ" ನಾಟಕ ಇವರಿಗೆ ಮತ್ತಷ್ಟು ಜನಪ್ರಿಯತೆ ಒದಗಿಸಿತು. ಇವರ ಕಬೀರ ಪಾತ್ರದ ತನ್ಮಯತೆ ಹಾಗೂ ಹೃದಯಸ್ಪರ್ಶಿ ಅಭಿನಯ ಸಭಿಕರಲ್ಲಿ ಅವಿಸ್ಮರಣೀಯವಾಗಿದ್ದು ಇದನ್ನು ನೋಡಲೆಂದೇ ಸುತ್ತಮುತ್ತಲ ಹಳ್ಳಿಗಳಿಂದ ಗಾಡಿಕಟ್ಟಿಕೊಂಡು ಜನ ಬರುತ್ತಿದ್ದರು. ಸ್ತ್ರೀ ಪಾತ್ರಗಳು, ರಾಣಿ ಪಾತ್ರದಿಂದಲೂ ಜನಮೆಚ್ಚುಗೆ ಗಳಿಸಿದ್ದರು. ಇವರ ಖ್ಯಾತಿಯನ್ನು ಕೇಳಿದ ಕೃಷ್ಣರಾಜ ಒಡೆಯರ್ ಅರಮನೆಯಲ್ಲಿ ಕಲಾ ಪ್ರದರ್ಶನ ನೀಡಲು ಕರೆಸಿಕೊಂಡರು. ಮೈಸೂರು ಅರಮನೆಯಲ್ಲಿ ನಾಟಕ ಪ್ರದರ್ಶನ ನಡೆಸಿ ಶ್ರೀ ಕೃಷ್ಣರಾಜೇಂದ್ರ ಒಡೆಯರಿಂದ ಮೆಚ್ಚುಗೆ ಪಡೆದರು. ನಂಜುಂಡಯ್ಯನವರ ನಿಧನಾನಂತರ ಇವರೇ ಕಂಪನಿಯ ಸಂಪೂರ್ಣ ಮಾಲೀಕರಾದರು. ೧೯೨೯ರಲ್ಲಿ ಗುಬ್ಬಿ ವೀರಣ್ಣನವರ 'ಭಕ್ತ ಕಬೀರ 'ಮೂಕಿ' ಚಿತ್ರದಲ್ಲೂ ಹೇಮರೆಡ್ಡಿ ಮಲ್ಲಮ್ಮ 'ಟಾಕಿ' ಚಿತ್ರದಲ್ಲೂ ಅಭಿನಯಿಸಿದರು. ಕೆ.ಹಿರಣ್ಣಯ್ಯನವರ 'ವಾಣಿ' ಹಾಗೂ ಇನ್ನಿತರೆ ತಮಿಳು ವಾಕ್ಚಿತ್ರಗಳಲ್ಲಿಯೂ ನಟಿಸಿದ್ದರು. ಸುಮಾರು ಒಂದುನೂರ ಇಪ್ಪತ್ತು ಕಲಾವಿದರಿಂದ ಕೂಡಿದ್ದ ಈ ಕಂಪನಿ ೧೯೫೭ರಲ್ಲಿ ನಿಂತುಹೋಯಿತು. ತಮ್ಮ ಜೀವಿತದ ಅರ್ಧಶತಮಾನ ಕಾಲ ವೃತ್ತಿರಂಗಭೂಮಿಯ ಸೇವೆಗೈದ ಈ ಮಹಾನ್ ಕಲಾವಿದ ೩–೪–೧೯೬೯ರಲ್ಲಿ ಕಾಲವಾದರು.

**ಹಿರಣ್ಣಯ್ಯ ಮಿತ್ರ ಮಂಡಲಿ:** ತುರುವೇಕೆರೆ ತಾಲೂಕು ಕಣತೂರಿನ ಅನಂತರಾಮಯ್ಯನವರ ಮಗ ಕೆ.ಹಿರಣ್ಣಯ್ಯನವರು ೧೯೩೨ರಲ್ಲಿ 'ಭಾರತ ಜನ ಮನೋಲ್ಲಾಸಿನೀ ನಾಟಕ ಸಭಾ' ದಿಂದ ಗುಬ್ಬಿ ಕಂಪನಿ ಸೇರಿದರು. ರಂಗದೃಶ್ಯ ಜೋಡಣೆ, ಪ್ರಸಾದನ, ನೆರಳು–ಬೆಳಕುಗಳ ಅವಳಡಿಕೆಯಲ್ಲದೆ ಸ್ತ್ರೀ–ಪುರುಷ ಪಾತ್ರಗಳಲ್ಲೂ ಪ್ರತಿಭಾವಂತರಾಗಿದ್ದರು. ಮುಂದೆ ೧೯೩೫ರಲ್ಲಿ ಸುಬ್ಬಯ್ಯನಾಯ್ಡುರವರ 'ಶ್ರೀ ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿ' ಸೇರಿದರು. ೧೯೪೦ರ ಸುಮಾರಿನಲ್ಲಿ ಎಂ.ಆರ್.ಪಾರ್ಥಸಾರಥಿ, ಸುಬ್ಬಣ್ಣ, ಅಣ್ಣಯ್ಯ ಇವರ ಜೊತೆಗೂಡಿ "ಹಿರಣ್ಣಯ್ಯ ಮಿತ್ರ ಮಂಡಲಿ" ಸ್ಥಾಪಿಸಿದರು. ಇವರೇ ಬರೆದ ಎಚ್ಚಮನಾಯಕ, ಬ್ರೋಕರ್ ಭೀಷ್ಮಾಚಾರಿ, ಮಕ್ಮಲ್ ಟೋಪಿ, ಪಂಗನಾಮ, ನಾಟಕಗಳೇ ಅಲ್ಲದೆ, ಸಂಪೂರ್ಣ ರಾಮಾಯಣ, ಬಸವೇಶ್ವರ ನಾಟಕಗಳು ಜನಪ್ರಿಯವಾದವು. ಇವರ 'ದೇವದಾಸಿ' ನಾಟಕ ಬೆಂಗಳೂರಿನಲ್ಲೇ ಆ ಕಾಲಕ್ಕೆ ೩೮೭ ಪ್ರದರ್ಶನ ಕಂಡಿತು. ೧೯೫೩ರಲ್ಲಿ ಹಿರಣ್ಣಯ್ಯನವರು ನಿಧನರಾದರು.

**ಮಾಸ್ಟರ್ ಹಿರಣ್ಣಯ್ಯ:** ಇವರು ಕೆ. ಹಿರಣಯ್ಯನವರ ಮಗನಾಗಿದ್ದು, ತಂದೆಯ ಮರಣಾನಂತರ ಕಂಪನಿಯ ಜವಾಬ್ದಾರಿ ಹೊತ್ತರು. ಇವರು ಬೀಚಿ, ರಾಶಿ ಮೊದಲಾದ ಹಿರಿಯ ಹಾಸ್ಯ ಸಾಹಿತಿಗಳ ಸಾಹಿತ್ಯದ ಪ್ರಭಾವದಿಂದ ಪ್ರೇರಿತರಾಗಿ, ಯೋಗಾನರಸಿಂಹ, ಕಣಗಾಲ್ ಪ್ರಭಾಕರ ಶಾಸ್ತ್ರಿ ಮೊದಲಾದ ಹಿರಿಯರ ನೆರವಿನೊಂದಿಗೆ ಸಂಭಾಷಣೆಗಳನ್ನು ರಚಿಸಿದರು. ಲಂಚಾವತಾರ, ಅನಾಚಾರ, ಭ್ರಷ್ಟಾಚಾರ, ನಡುಬೀದಿ ನಾರಾಯಣ, ಕಪಿಮುಷ್ಠಿ ಮುಂತಾದ ನಾಟಕಗಳು ಪ್ರಜಾಪ್ರಭುತ್ವದ ರಾಜಕೀಯ ಅಂಕು–ಡೊಂಕುಗಳನ್ನು ಹರಿತವಾದ ಹಾಸ್ಯ ಸಂಭಾಷಣೆಯ ಮೂಲಕ ನಾಡಿನಾದ್ಯಂತ ಜನಪ್ರಿಯಗೊಳಿಸಿದವು. ಹೈದರಾಬಾದ್, ಚೆನ್ನೈ, ಬೊಂಬಾಯಿ, ದೆಹಲಿ, ಕಾಸರಗೋಡು ಪ್ರಾಂತಗಳಲ್ಲದೆ, ಲಂಡನ್, ಆಸ್ಟ್ರೇಲಿಯಾ ಹಾಗೂ ಅಮೆರಿಕಾ ದೇಶಗಳ ಭಾರತೀಯ ಸಂಘ–ಸಂಸ್ಥೆಗಳಲ್ಲಿ ಕನ್ನಡ ನಾಟಕಗಳ ಪ್ರದರ್ಶನ ನೀಡಿದ ಹೆಮ್ಮೆ ಇವರದು. ರಾಜ್ಯಪ್ರಶಸ್ತಿ, ನಟರತ್ನಾಕರ ಮುಂತಾದ ಅನೇಕ ಬಿರುದುಗಳಲ್ಲದೆ, ಸಂಘ–ಸಂಸ್ಥೆಗಳ ಸನ್ಮಾನ–ಪ್ರಶಸ್ತಿಗಳು ಅಸಂಖ್ಯಾತ. ಇಂದಿಗೂ ಮಾಸ್ಟರ್ ಹಿರಣ್ಣಯ್ಯನವರು ಕ್ರಿಯಾಶಾಲಿಗಳಾಗಿದ್ದಾರೆ.

ಮಾಸ್ಟರ್ ಹಿರಣ್ಣಯ್ಯನವರ ಮಗ **ಬಾಬು ಹಿರಣ್ಣಯ್ಯ,** ತಂದೆ ತಾತಂದಿರ ವೃತ್ತಿರಂಗಭೂಮಿಯ ಕಲಾಪರಂಪರೆಯನ್ನು ಮುಂದುವರಿಸುತ್ತಿದ್ದಾರೆ. 'ಹಿರಣ್ಣಯ್ಯ ಮಿತ್ರ ಮಂಡಲಿ'ಯಲ್ಲಿ ಮೂರನೇ ತಲೆಮಾರಿನವರಾಗಿರುವ ಬಾಬು ಹಿರಣ್ಣಯ್ಯನವರು ಕಿರ್ಲೋಸ್ಕರ್ ಕಂಪನಿಯ ಇಂಜಿನಿಯರ್ ಹುದ್ದೆಯನ್ನು ತೊರೆದು ತಂದೆಯವರ ಕಾಯಕದಲ್ಲಿ ಕೈಜೋಡಿಸಿದ್ದಾರೆ. ಅಲ್ಲದೆ ಚಲನಚಿತ್ರ, ಕಿರುತೆರೆಗಳಲ್ಲಿಯೂ ಕೂಡ ನಟಿಸುತ್ತಿದ್ದಾರೆ.

**ಶ್ರೀ. ಶಂಕರಿ ವಿಲಾಸಿ ನಾಟಕ ತಂಡ**: ೧೯೦೫ರಲ್ಲಿ ಪ್ರಾರಂಭವಾದ ಇದು ೧೯೧೯ರವರೆಗೆ ನಾಟಕ ಪ್ರದರ್ಶನ ಮಾಡಿರುವುದಾಗಿ ತಿಳಿದುಬರುತ್ತದೆ. ಈ ತಂಡದಲ್ಲಿ ಸುಬ್ಬರಾವ್ ಮೊದಲಿಯಾರ್ ಕೃಷ್ಣ, ರಾಜಶೇಖರ, ರಾಜ ಮಾರ್ತಾಂಡ ಮುಂತಾದ ಪುರುಷ ಪಾತ್ರಗಳನ್ನು ವಹಿಸುತ್ತಿದ್ದರು. ಶಿವಲಿಂಗಯ್ಯ, ಗುರಪ್ಪ, ಬೇಲೂರಯ್ಯ ಟಿ. ಸಿದ್ದಪ್ಪ, ಎಲೆಸಿದ್ಧಪ್ಪ, ಗೋವಿಂದಯ್ಯ ಮುಂತಾದ ಕಲಾವಿದರು ವಿವಿಧ ಪಾತ್ರಗಳನ್ನು ವಹಿಸುತ್ತಿದ್ದರು.

**ಬೆಳ್ಳಾವೆ ಸೋಮೇಶ್ವರ ವಿಲಾಸ ನಾಟಕ ಮಂಡಳಿ:** ೧೯೦೮ರಲ್ಲಿ ಪ್ರಾರಂಭವಾದ ಈ ನಾಟಕ ಮಂಡಳಿಯಲ್ಲಿ ಬಿ.ಪಿ.ಹೊನ್ನಪ್ಪನವರು, ಸೋಮಶೇಖರಗೌಡ, ಸೋಮನಾಥ ಶೆಟ್ಟಿ, ಲಕ್ಷ್ಮೀಕಾಂತ ಶೆಟ್ಟಿ, ಪೆದ್ದನ್ನಯ್ಯ, ಚಿನ್ನಯ್ಯ, ಬಿ.ಎನ್.ಸಿದ್ಧಪ್ಪ, ಬಿ.ಎಸ್.ತಿಮ್ಮಯ್ಯ ಹಾಗೂ ನಟಿಯರಾದ ಪಾಪಸಾನಿ, ಸುಬ್ಬಸಾನಿ, ಗಂಗಾಸಾನಿಯರು ವಿವಿಧ ಪಾತ್ರಗಳನ್ನು ವಹಿಸುತ್ತಿದ್ದರು.

**ಸಹೋದರ ಮಿತ್ರ ಮಂಡಳಿ**: ಕೆ.ಕೃಷ್ಣಸ್ವಾಮಿ ಅಯ್ಯಂಗಾರ್ ಎಂ.ಎ.,ಬಿ.ಟಿ., (ತಾಪತ್ರಯ) ಇವರಿಂದ ಸ್ಥಾಪಿಸಲ್ಪಟ್ಟಿತು. ಭಕ್ತ ಮಾರ್ಕಂಡೇಯ, ಪ್ರಹ್ಲಾದ, ಕೃಷ್ಣಲೀಲಾ ಮುಂತಾದ ನಾಟಕಗಳಲ್ಲಿ ಎನ್.ಸಿ.ಪ್ರಾಣೇಶ, ನರಸಿಂಹಯ್ಯ, ಶ್ರೀಪಾಲಯ್ಯ, ಡಾ॥ ಹೆಚ್.ರಂಗನ್, ಶಾಂತಾಚಾರ್ ಮುಂತಾದವರು ಪಾತ್ರವಹಿಸಿದ್ದರು.

**ಶಾರದಾ ವಿಲಾಸ ನಾಟಕ ಸಭಾ:** ಈ ನಾಟಕ ಸಭೆಯನ್ನು ಬಿ.ರಂಗನಾಥ ಮೊದಲಿಯಾರರು ಸ್ಥಾಪಿಸಿದರು. ಪಿಟೀಲು ವಿದ್ವಾನ್ ಸುಬ್ಬಣ್ಣನವರು ಮ್ಯಾನೇಜರ್ ಆಗಿದ್ದರು. ಟಿ.ಲಕ್ಷ್ಮಿ ನಾರಾಯಣಪ್ಪ, ಚಿನಗದ ಮೂರ್ತಿರಾವ್, ಮುನಿಸ್ವಾಮಪ್ಪ, ಜೈಮುನಿ ಮುತ್ಯಾಲಪ್ಪ, ಆನೇಕಲ್ ಮೂರ್ತಿರಾವ್, ಬಫೂನ್ ಮುನಿಸ್ವಾಮಪ್ಪ, ವಿರ್ಲೆ ಶ್ರೀನಿವಾಸರಾವ್, ಹೆಚ್.ಎನ್.ರಾಮಸ್ವಾಮಯ್ಯ, ಸಿದ್ಧಲಿಂಗದೇವರು ಮುಂತಾದ ನಟರು ಕಾಳಿದಾಸ, ಸುಭದ್ರ ಮುಂತಾದ ನಾಟಕಗಳಲ್ಲಿ

ಪಾತ್ರವಹಿಸುತ್ತಿದ್ದರು. ಸುಂದರಮ್ಮನವರು ರಾಣಿ ಪಾತ್ರವನ್ನು ಹಾಗೂ ಇವರ ಸೋದರಿ ಪಾರ್ವತಮ್ಮ ಕೃಷ್ಣನ ಪಾತ್ರವನ್ನು ಮಾಡುತ್ತಿದ್ದರು.

**ಚಾಮುಂಡೇಶ್ವರಿ ನಾಟಕ ಸಂಘ:** ತುಮಕೂರು ಶಿವಪ್ಪಶಾಸ್ತ್ರಿಗಳಿಂದ ಸ್ಥಾಪಿಸಿಲ್ಪಟ್ಟ ಈ ನಾಟಕ ಸಂಘದಲ್ಲಿ ಚನ್ನಬಸವಯ್ಯ, ಉಗ್ರ ನರಸಿಂಹಯ್ಯ ಸ್ತ್ರೀಪಾತ್ರಧಾರಿ ಮೈಸೂರಿನ ಎಂ.ಕೆ. ನಂಜಪ್ಪ ಮುಂತಾದವರು ಪಾತ್ರ ವಹಿಸುತ್ತಿದ್ದರು. ಮೈಸೂರು ಶಿವಪ್ಪಶಾಸ್ತ್ರಿಗಳು ನಟರನ್ನು ತರಬೇತುಗೊಳಿಸುವುದರ ಜೊತೆಗೆ ತಾವೂ ದುರ್ಯೋಧನ, ಈಶ್ವರ ಮುಂತಾದ ಪಾತ್ರಗಳನ್ನು ಅಭಿನಯಿಸುತ್ತಿದ್ದರು.

**ಜಿಲ್ಲೆಯ ಇತರ ರಂಗಭೂಮಿ ಕಲಾವಿದರು:** ತುಮಕೂರು ಜಿಲ್ಲೆಯಲ್ಲಿ ರಂಗಭೂಮಿ ಕಲಾವಿದರು ಅಪಾರ ಸಂಖ್ಯೆಯಲ್ಲಿದ್ದಾರೆ: ೧೮೮೪ರಿಂದ ೧೯೧೭ರವರೆಗೆ ಶ್ರೀ ಚನ್ನಬಸವೇಶ್ವರ ಕೃಪಾಪೋಷಿತ ನಾಟಕ ಸಂಘ ನಡೆಸಿ, ಮಿಠಾಯಿ ಸಾಹುಕಾರ್ ಪಾತ್ರ ಮಾಡುತ್ತಿದ್ದ ಗುಬ್ಬಿ ಚಂದಣ್ಣ ಇದೇ ಕಂಪನಿಯಲ್ಲಿ ೨೨ ವರ್ಷಗಳ ಕಾಲ ನಾಟಕ ಕರ್ತರಾಗಿ, ಚೋರ ಕಥೆ ಗುಲಾಬ ಕಾವಲಿ, ಜಗನ್ಮೋಹನ ಚರಿತ್ರೆಗಳನ್ನು ಬರೆದು, ಅನೇಕ ನಟನಟಿಯರನ್ನು ತರಬೇತಿಗೊಳಿಸಿ, ತಾವೂ ನಾಟಕಗಳಲ್ಲಿ ಪಾತ್ರ ಮಾಡುತ್ತಿದ್ದ ವೀರಪ್ಪ ಶಾಸ್ತ್ರಿ, ನಕಲಿ ದೊಡ್ಡನಂಜಪ್ಪನೆಂದೇ ಜನಪ್ರಿಯರಾದ ಹಾಸ್ಯ ಪ್ರಧಾನ, ವಿನೋದ ಪಾತ್ರ ಮಾಡುತ್ತಿದ್ದ ದೊಡ್ಡನಂಜಪ್ಪ, ಸುಮಾರು ೧೨ ವರ್ಷಕಾಲ ಗುಬ್ಬಿ ಕಂಪನಿಯಲ್ಲಿ ನಂತರ ಬೆಳ್ಳಾವೆ ಕಂಪನಿಯಲ್ಲಿ ಪ್ರಧಾನಪಾತ್ರ ಮಾಡುತ್ತಿದ್ದ ಪ್ರಭುವನಹಳ್ಳಿ ರೇವಣ್ಣ, ಗುಬ್ಬಿ ಕಂಪನಿಯಲ್ಲಿ ಧರ್ಮರಾಯ, ದಶರಥ, ಹರಿಶ್ಚಂದ್ರ, ಅರ್ಜುನ, ಕೀಚಕ ಮುಂತಾದ ಪಾತ್ರ ಮಾಡುತ್ತಿದ್ದ ಚಿನಗದ ಮೂರ್ತಿರಾವ್, ಕೋರದ ರುದ್ರಯ್ಯ, ಸ್ತ್ರೀ ಪಾತ್ರ ಮಾಡುತ್ತಿದ್ದ (೧೮೯೪) ಕಲ್ಲೂರಿನ ಬೇಲೂರಯ್ಯ, ತಿಮ್ಮಯ್ಯ (೧೮೯೫) ಕೋಳಾಲದ ಬಿ.ಮುನಿಸ್ವಾಮಯ್ಯ(೧೮೯೭), ಅಂದವಾದ ಮೈಕಟ್ಟು, ಸುಮಧುರ ಹಾಡುಗಾರಿಕೆ ಹೊಂದಿದ್ದ ತುಮಕೂರಿನ ಟಿ.ರಂಗಪ್ಪನವರು ರಾಣಿಪಾರ್ಟ್ ರಂಗಪ್ಪ ಎಂದೇ ಪ್ರಸಿದ್ಧರಾದವರು. ೧೯೨೭ರಿಂದ ೧೯೩೫ರವರೆಗೆ ಸಿ.ಬಿ.ಮಲ್ಲಪ್ಪನವರ ಕಂಪನಿಯಲ್ಲಿ, ನಂತರ ಮೈಸೂರು ಚಾಮುಂಡೇಶ್ವರಿ ಕಂಪನಿಯಲ್ಲಿ, ೧೯೪೦ರಿಂದ ಗುಬ್ಬಿ ಕಂಪನಿಯಲ್ಲಿ ಸ್ತ್ರೀ ಪಾತ್ರಗಳನ್ನು ಮಾಡುತ್ತಿದ್ದರು.

ಗೋಪಾಲಯ್ಯ, ವರದರಾಜು (೧೯೪೧) ಬಸವರಾಜು (೧೯೪೫) ಕೇಶವಮೂರ್ತಿ, ಚಲುವಯ್ಯ, ಗುಬ್ಬಿ ಬಾಲಕಲಾವರ್ಧಿನಿ ಹಾಗೂ ಜಯಗೌರಿ ನಾಟಕ ಸಂಘದಲ್ಲಿದ್ದ ನರಸಿಂಹಯ್ಯ, ರಾಮರಾವ್ (೧೯೩೪) ಬೆಳ್ಳಾವೆ ಸೋಮೇಶ್ವರ ವಿಲಾಸ ನಾಟಕ ಮಂಡಲಿಯಲ್ಲಿ ದ್ರೌಪದಿ, ಜಾಂಬವತಿ ಪಾತ್ರ ನಿರ್ವಹಿಸುತ್ತಿದ್ದ ಬಿ.ಎಸ್. ತಮ್ಮಯ್ಯ (೧೯೦೮-೦೯) ಶಂಕರೀ ವಿಲಾಸ ನಾಟಕ ಸಂಘದಲ್ಲಿದ್ದ ಟಿ.ಬೇಲೂರಯ್ಯ (೧೯೦೫), ಎಲೆಸಿದ್ದಪ್ಪ, ಮಧುಗಿರಿ ತಾಲೂಕು ಚನ್ನಸಾಗರದ ವೈಕುಂಠಾಚಾರ್, ತುಮಕೂರಿನ ಸೀತಾ ಮನೋಹರ ನಾಟಕ ಮಂಡಲಿ ಹಾಗೂ ಯಳಂದೂರು ನಾಟಕ ಮಂಡಲಿಯ ಪೌರಾಣಿಕ ನಾಟಕಗಳಲ್ಲಿ ಸ್ತ್ರೀಪಾತ್ರ ಮಾಡುತ್ತಿದ್ದರು. ಚಾಮುಂಡೇಶ್ವರಿ ನಾಟಕ ಸಭಾದಲ್ಲಿದ್ದ ಉಗ್ರ ನರಸಿಂಹಯ್ಯ, ತುರುವೇಕೆರೆಯ ಟಿ.ಪುಟ್ಟಶಾಮಯ್ಯ, ಚೇಳೂರು ಸಿದ್ದಪ್ಪ, ಈಶ್ವರಪ್ಪ, ಶ್ರೀಕಂಠಾಚಾರ್, ಹನುಮಂತಯ್ಯ, ಚಿಕ್ಕನಾಯಕನಹಳ್ಳಿಯ ಬಿ.ಕೆ.ಕೆಂಪಲಿಂಗಯ್ಯ, ಕೊರಟಗೆರೆ ತಾಲೂಕು ತುಂಬಗಾನಹಳ್ಳಿಯ ಚಲುವಯ್ಯ, ಚಂದ್ರಮೌಳೇಶ್ವರ ನಾಟಕ ಸಂಘ ಹಾಗೂ ಮಹಮದ್ ಪೀರ್ ಸಾಹೇಬರ ಕಂಪನಿಯಲ್ಲಿದ್ದರು. ಹಾರ್ಮೋನಿಯಂ ವಾದಕರೂ, ಸಂಗೀತ ಹಾಗೂ ನಾಟಕ ನಿರ್ದೇಶಕರೂ ಆದ ತುಮಕೂರಿನ ಪಾಪಣ್ಣ, ಚಿಕ್ಕನಾಯಕನಹಳ್ಳಿಯ ಗಣೇಶಯ್ಯ, ಬೆಳಧರದ ಬಿ.ಎಂ.ಮಲ್ಲಿಕಾರ್ಜುನಪ್ಪ, ಬಿ.ಕೆ.ಚಂದ್ರಯ್ಯ, ಹಿರಣ್ಣಯ್ಯ ಮಿತ್ರ ಮಂಡಲಿಯಲ್ಲಿ ರಂಗಶಿಲ್ಪಿಯಾಗಿದ್ದ ಟಿ.ಮುನಿರಂಗಪ್ಪ, ಹೊಳವನಹಳ್ಳಿಯ ಎಸ್.ಕೆ.ಶೇಷಗಿರಿಯಾಚಾರ್, ಪಿ.ಎಸ್.ರಾಮನಾಥ್, ಕೆ.ಕೃಷ್ಣಸ್ವಾಮಿ ಅಯ್ಯಂಗಾರ್, ಟಿ.ಕೆ.ರಾಮಮೂರ್ತಿ, ಕೆ.ನರಸಿಂಹಯ್ಯ, ಗುರುಬಸವಯ್ಯ, ಎಸ್.ವಿ.ಆಚಾರ್, ಡಾ॥ ಶರ್ಮ, ಎನ್.ಎಸ್.ಸೀತಾರಾಮರಾವ್, ಹನುಮಂತರಾವ್, ಕೆ.ಸೂರ್ಯನಾರಾಯಣರಾವ್, ನಾರಾಯಣಸ್ವಾಮಿ, ಮಧುಗಿರಿ ತಾಲೂಕು ಶ್ರಾವಂಡನಹಳ್ಳಿಯ ಪಾಲಯ್ಯ, ಕೆ.ಕುಂಭಯ್ಯ, ಶಾಂತಾಚಾರ್, ರಾಮಯ್ಯ, ವಿದ್ವಾನ್ ಕೆ.ಎಸ್. ವಾಸುದೇವಮೂರ್ತಿ, ಓಂಕಾರೇಶ್ವರ ನಾಟಕ ಮಂಡಳಿ, ಕೆ.ಬಿ.ಆರ್. ಡ್ರಾಮಾ ಕಂಪನಿಗಳಲ್ಲಿದ್ದ ಟಿ.ಆರ್.ಜಯಕುಮಾರ್, ಯತಿರಾಜಲು ನಾಯ್ಡು, ಹಿರೇಹಳ್ಳಿಯ ಕೆಂಪೇಗೌಡ, ಆರೋಗ್ಯ ಇಲಾಖೆಯ ಬಿ.ಎಲ್.ಎಲ್.ರಾವ್, ವಿದ್ಯಾ ಇಲಾಖೆಯ ಚಲುವರಾಜು, ಅಂಚೆ ತಂತಿ ಇಲಾಖೆಯ ಚಂದ್ರಶೇಖರ್, ಖಜಾನೆಯ ಭೀಮಯ್ಯ, ಹೆಬ್ಬಾಕದ ಹೆಚ್.ಬಿ.ಸಿದ್ಧಲಿಂಗಪ್ಪ, ಕೃಷ್ಣಮೂರ್ತಿ, ಸೂರ್ಯನಾರಾಯಣರಾವ್, ಜೂನಿಯರ್ ನರಸಿಂಹರಾಜು ಎಂದು ಹೆಸರಾಗಿರುವ ಟಿ.ಕೆ.ಹರಿಯಪ್ಪ, ಜಿ.ಎಸ್.ಮೂರ್ತಿ, ಆರೋಗ್ಯ ಇಲಾಖೆಯ ಶಿವಗಂಗಾಚಾರ್,

ಹಿರಣ್ಣಯ್ಯ ಮಿತ್ರ ಮಂಡಲಿಯ ಚಿಕ್ಕನಾಯಕನಹಳ್ಳಿ ನಾಗೇಶ್, ವೈದ್ಯರಾದ ಡಾ॥ ಚಿಕ್ಕರಾಮಯ್ಯ, ವರ್ಣಾಲಂಕಾರ ಹಾಗೂ ಹಾಡುಗಾರಿಕೆಗೆ ಹೆಸರಾದ ನರಸಿಂಹಯ್ಯ, ೧೯೩೨ರಲ್ಲಿಯೇ ರಂಗಭೂಮಿಗೆ ಧುಮುಕಿ ಹಲವಾರು ನಾಟಕ ಕಂಪನಿಗಳಲ್ಲಿ ಅನುಭವ ಪಡೆದ ಎನ್.ಎಸ್.ಮೂರ್ತಿ ಜಿ.ವಿ.ಶ್ರೀನಿವಾಸಮೂರ್ತಿ, ಸಂಗೀತದಲ್ಲಿ ಸಾಧನೆ ಮಾಡಿದ ಆರ್.ಸಿದ್ಧಲಿಂಗಸ್ವಾಮಿ, ಚಲನಚಿತ್ರ ನಟ ಅಶೋಕ್ ಸೋದರ ಎಲ್.ಎನ್.ಮೂರ್ತಿ, ಹೆಚ್.ಬಿ.ಹುಚ್ಚಪ್ಪ, ಚಂದ್ರಾಚಾರ್, ಮಧುಗಿರಿ ತಾಲೂಕು ಕವಣದಾಲದ ಚಿಕ್ಕಣ್ಣ, ಕೆ.ವಿ.ನರಸಪ್ಪ, ತುಂಬಾಡಿಯ ಶ್ರೀನಿವಾಸ್, ಸಿ.ಡಿ.ಲಕ್ಷ್ಮಣಪ್ಪ, ಚೇಳೂರಿನ ನಂಜಪ್ಪ, ಸಣ್ಣ ಹನುಮಂತರಾಯಪ್ಪ, ಮಧುಗಿರಿ ತಾಲೂಕು ಹೊಸಹಳ್ಳಿಯ ಭದ್ರಯ್ಯ, ಹಾರ್ಮೋನಿಯಂ ಹನುಮಂತಯ್ಯ, ಗುಬ್ಬಿ ತಾಲೂಕು ಅಡಗೂರಿನ ಕೀರ್ತನಕಾರರಾದ ತಿಮ್ಮಪ್ಪ, ತಬಲಾ ದೊಡ್ಡ ಮಲ್ಲಯ್ಯ, ಕಿತ್ತಗಾನಹಳ್ಳಿಯ ಕೆ.ಎಸ್.ಸದಾಶಿವಯ್ಯ, ಮಲ್ಲಿಕಾರ್ಜುನ, ಟಿ.ಎನ್.ಶ್ರೀನಿವಾಸ್, ಹೆಚ್.ಎನ್.ಹನುಮಂತರಾವ್, ಆರ್.ನರಸಿಂಗರಾವ್, ಹೆಚ್.ಜಿ.ಮುರಳೀಧರ, ಖ್ಯಾತ ಹಾಸ್ಯ ನಟ ಟಿ.ಆರ್.ನರಸಿಂಹರಾಜು, ಅವರ ಚಿಕ್ಕಪ್ಪ ಹೆಚ್ಚು ಸ್ತ್ರೀಪಾತ್ರ ಮಾಡುತ್ತಿದ್ದ ಲಕ್ಷ್ಮೀಪತಿರಾಜು, ಎಂ.ಎನ್. ಕೋಟೆಯ ನರಸಿಂಹಯ್ಯ, ಟಿ.ಸಿ.ಬಸವರಾಜ್, ಮಧುಗಿರಿ ತಾಲೂಕು ದೊಡ್ಡಪಾಳ್ಯದ ರಾಮಣ್ಣ ಗುಬ್ಬಿ ತಾಲೂಕಿನ ಪೆದ್ದನಹಳ್ಳಿಯ ದೊಡ್ಡತಿಮ್ಮಯ್ಯ, ತುಮಕೂರು ತಾಲೂಕು ಗುಲಗಂಜಿ ಹಳ್ಳಿಯ ಜಿ.ಎಂ.ಬಸಪ್ಪ ಮುಂತಾದ ಸಾವಿರಾರು ನಾಟಕ ಕಲಾವಿದರು ಜಿಲ್ಲೆಯಲ್ಲಿದ್ದಾರೆ.

**ಚನ್ನಬಸಯ್ಯ:** ಗುಬ್ಬಿಯ ಚನ್ನಬಸಯ್ಯನವರು ೧೯೮೧ರಲ್ಲಿ ರಾಯಚೂರು ಜಿಲ್ಲೆಯಲ್ಲಿ ನಾಟಕ ಮಂಡಳಿಯನ್ನು ಸ್ಥಾಪಿಸಿದ್ದು, ಆಮೇಲೆ ತುಮಕೂರಿನಲ್ಲಿ ನೆಲೆಸಿದ್ದಾರೆ. ಅತ್ಯುತ್ತಮ ಕಲಾವಿದರಾದ ಇವರು ೧೯೪೫ರಲ್ಲಿ ಚಿತ್ತರಗಿಯ ಗಂಗಾಧರ ಶಾಸ್ತ್ರಿಗಳ 'ಕುಮಾರ ವಿಜಯ ನಾಟಕ ಸಂಘ' ಸೇರುವ ಮೂಲಕ ಕಲಾಜೀವನ ಪ್ರಾರಂಭಿಸಿದರು. ೧೯೬೦ರ ದಶಕದಲ್ಲಿ ಜಮಖಂಡಿಯ 'ಶ್ರೀ ಗಜಾನನ ಸಂಗೀತ ನಾಟಕ ಮಂಡಲಿ' ಸೇರಿದರು. ಇವರು ಪ್ರಾರಂಭಿಸಿದ್ದ ನಾಟಕ ಮಂಡಳಿ ಮೂಲಕ ರಾಯಚೂರು, ವಿಜಯಪುರ, ಕಲಬುರಗಿ ಜಿಲ್ಲೆಗಳಲ್ಲಿ ಅನೇಕ ನಾಟಕ ಪ್ರದರ್ಶನ ನೀಡಿದರು. ೧೯೮೫ರಲ್ಲಿ ಪ್ರಕೃತಿ ವಿಕೋಪದಿಂದಾಗಿ ಮಂಡಳಿ ಅನೇಕ ಕಷ್ಟ ನಷ್ಟ ಅನುಭವಿಸಿ ಲಕ್ಷಾಂತರ ರೂ. ಮೌಲ್ಯದ ಪರಿಕರಗಳು ನಾಶವಾದವು. ಇದರಿಂದ ಎದೆಗುಂದದೇ ಆರು ತಿಂಗಳ ನಂತರ ಮತ್ತೆ ನಾಟಕ ಮಂಡಳಿ ಸ್ಥಾಪಿಸಿ, ಹವ್ಯಾಸಿ ಮತ್ತು ವೃತ್ತಿ ನಟರನ್ನು ಒಂದುಗೂಡಿಸಿ ಅನೇಕ ಜನಪ್ರಿಯ ಪೌರಾಣಿಕ ಹಾಗೂ ಸಾಮಾಜಿಕ ನಾಟಕಗಳನ್ನು ಪ್ರದರ್ಶಿಸಿ ಕಲೆಯ ಅಭಿವೃದ್ಧಿಗೆ ಶ್ರಮಿಸುತ್ತಾ ಬಂದಿದ್ದಾರೆ.

### ಮಹಿಳಾ ಕಲಾವಿದರು

ತುಮಕೂರಿನ ಶ್ರೀರಾಮನಗರದ ಜಾನಕಮ್ಮನವರು ಸೀತೆ, ದ್ರೌಪದಿ ಮುಂತಾದ ಪಾತ್ರಗಳಿಂದ ಶ್ರೇಷ್ಠನಟಿ ಎಂಬ ಹೆಸರು ಪಡೆದಿದ್ದರು. ಗುಬ್ಬಿಯ ಸುಂದರಮ್ಮ (೧೯೧೬) ತುಮಕೂರಿನ ನಾಗರತ್ನಮ್ಮ, ಗುಬ್ಬಿ ಕಂಪನಿಯಲ್ಲಿದ್ದು ನಂತರ ಸ್ತ್ರೀನಾಟಕ ಮಂಡಳಿ ಸ್ಥಾಪಿಸಿ ಕೀರ್ತಿವಂತರಾದರು. ಸ್ವರ್ಣಮ್ಮ (೧೯೨೮) ಜಿ.ಸುಂದರಮ್ಮ (೧೯೧೫) ಮಾಲತಮ್ಮ ಗುಬ್ಬಿ ಕಂಪನಿಯಲ್ಲಿದ್ದವರು. ಚಲನಚಿತ್ರಗಳಲ್ಲಿಯೂ ಅಭಿನಯಿಸಿರುವರು. ಮಧುಗಿರಿಯ ಎಸ್.ಕೆ.ಪದ್ಮ ಉರುಫ್ ಮೀನಾಕ್ಷಿ ಎಚ್.ಎಲ್.ಎನ್.ಸಿಂಹ ಅವರ ಕಂಪನಿಯಲ್ಲಿ ಅನೇಕ ಸ್ತ್ರೀ ಪಾತ್ರ ಮಾಡುತ್ತಿದ್ದರು. ಶ್ರೀಕೃಷ್ಣ ಸುಧಾಮ ಎಂಬ ಕನ್ನಡ ವಾಕ್ಚಿತ್ರದಲ್ಲಿ ನಟಿಸಿದ್ದರು. ಕಿರಿಯ ವಯಸ್ಸಿನಲ್ಲಿಯೇ ನಟಿಯಾಗಿ, ಗಾಯಕಿ ಹಾಗೂ ನೃತ್ಯಗಾತಿಯಾಗಿ ಹೆಸರು ಪಡೆದ ಸುಜಾತ, ಗುಬ್ಬಿ ಕಂಪನಿಯಲ್ಲಿದ್ದ ತುಳಸಮ್ಮ, ರಾಜಮ್ಮ, ಎಂ.ಎನ್.ಲಕ್ಷ್ಮೀದೇವಮ್ಮ, ಟಿ.ನಾಗರತ್ನ, ಮಧುಗಿರಿಯ ಗೌರಮ್ಮ ರಾಧಾಮಣಿ, ಪುಷ್ಪ, ಶಾರದಮ್ಮ, ಶಾಂತಾ, ಲಕ್ಷ್ಮಮ್ಮ, ತಿಪಟೂರು ಜಯಮ್ಮ, ತಿಪಟೂರಿನ ಹೇಮಲತ ಮುಂತಾದ ಮಹಿಳಾ ಕಲಾವಿದರು ಗಮನ ಸೆಳೆದ ಕಲಾವಿದೆಯರಾಗಿದ್ದಾರೆ. ಅನಂತವೇಣಿ, ರಾಜೇಶ್ವರಿ,ಮಂಜುಳ, ಹೇಮ, ಆಶಾ, ರಾಧಾಸಂಪತ್, ವಿಜಯಲಕ್ಷ್ಮಿ, ಮಮತ, ಕುಣಿಗಲ್ ತಾಲೂಕು ಹುತ್ರಿದುರ್ಗ ಹೋಬಳಿ ಆಲ್ಕೆರೆ ಗ್ರಾಮದ ಜಯಶ್ರೀ ವಿಕಲ ಚೇತನವನ್ನೂ ಲೆಕ್ಕಿಸದೇ ಕಲಾಸೇವೆ ಮಾಡುತ್ತ ಹಾರ್ಮೋನಿಯಂ, ಸಂಗೀತ ಅಭ್ಯಾಸ ಮಾಡಿ, ಸುತ್ತಮುತ್ತಲ ಗ್ರಾಮಗಳ ಜನರ ಕಲಾಪ್ರತಿಭೆಗೆ ನೀರೆರೆದು ನಾಟಕ ನಿರ್ದೇಶನ ಮಾಡಿ ಪೋಷಿಸುತ್ತಿದ್ದಾರೆ.

**ಶ್ರೀ ಇಂದಿರಾ ಲಲಿತಕಲಾ ಸೇವಾಮಂಡಳಿ:** ಇದು ೧೯೪೬ ರಲ್ಲಿ ಡಾ॥ ಎಚ್.ಎನ್.ಎಸ್.ಶರ್ಮಾರವರಿಂದ ಸ್ಥಾಪಿಸಲ್ಪಟ್ಟಿತ್ತು. ಸಂಗೀತ ವಿದ್ವಾಂಸರೂ ಆಗಿದ್ದ ಇವರು 'ದೇವದಾಸಿ ಸೌಧಾಮಿನಿ' ಎಂಬ ಸಾಮಾಜಿಕ ನಾಟಕವನ್ನು ರಚಿಸಿ ನಿರ್ದೇಶಿಸಿದ್ದಾರೆ. ಅನೇಕ ಉತ್ತಮ ನಾಟಕಗಳನ್ನು ಈ ಸಂಘ ಪ್ರದರ್ಶಿಸಿದೆ.

## ಹವ್ಯಾಸಿ ರಂಗಭೂಮಿ

ವೃತ್ತಿರಂಗದ ವೈಪರೀತ್ಯ, ಪಾಶ್ಚಾತ್ಯ ನಾಟಕ ಹಾಗೂ ಪ್ರದರ್ಶನ ವೈವಿಧ್ಯದ ಪ್ರಭಾವ ಮತ್ತು ಸಾಂಪ್ರದಾಯಿಕ ಕಲಾಪ್ರಕಾರಗಳ ಮೇಲೆ ಬಂಡೆದ್ದ ಆಧುನಿಕ ಪ್ರತಿಕ್ರಿಯೆ ಈ ಮೂರು ಕಾರಣಗಳು ಸೇರಿ ರಂಗಭೂಮಿಯ ಹೊಸ ಪ್ರಕಾರವಾದ ಹವ್ಯಾಸಿ ರಂಗಭೂಮಿಗೆ ತಳಹದಿ ಹಾಕಿದವು. ಶ್ರೀ ನಟರಾಜ ಆರ್ಟ್ಸ್ ಥಿಯೇಟ್ರಿಕಲ್ಸ್ ಹೊನ್ನುಡಿಕೆ, ಮುರುಳಿ ಮಿತ್ರಮಂಡಳಿ, ಎನ್.ಎಸ್.ಮೂರ್ತಿ ಮಿತ್ರಮಂಡಳಿ ಮುಂತಾದ ತಂಡಗಳು ತುಮಕೂರಿನ ರಂಗಭೂಮಿಗೆ ತಮ್ಮದೇ ಆದ ಸೇವೆ ಸಲ್ಲಿಸಿರುವುದನ್ನು ಗಮನಿಸಬಹುದು.

ರಂಗಭೂಮಿಯೆಂದರೆ ಕೇವಲ ಮನರಂಜನೆಯಲ್ಲ. ಪ್ರೇಕ್ಷಕನ ಬುದ್ದಿಯನ್ನು ಕೆಣಕಿ, ಸಮಾಜದ ಆಗು–ಹೋಗುಗಳನ್ನು ಚಿಕಿತ್ಸಕ ದೃಷ್ಟಿಯಿಂದ ನೋಡುವಂತೆ ಮಾಡಬೇಕೆನ್ನುವ ಧ್ಯೇಯ ಹೊಂದಿ ಹೊಸ ಆಯಾಮಗಳಲ್ಲಿ ನೈಜತೆ, ಸಾಂಕೇತಿಕ ರಂಗಪರಿಕರಗಳು, ವಿಶಿಷ್ಟವಾದ ಬೆಳಕಿನ ವಿನ್ಯಾಸ, ರಂಗಸಜ್ಜಿಕೆ ಹೀಗೆ ಹೊಸಚಿಂತನೆಗಳು ಹವ್ಯಾಸಿ ರಂಗಭೂಮಿಯ ಕೊಡುಗೆ. ಇಲ್ಲಿ ನಟನೆಯನ್ನು ಒಂದು ವೃತ್ತಿಯನ್ನಾಗಿಸಿಕೊಳ್ಳದೆ ಬಿಡುವಿನ ವೇಳೆಯಲ್ಲಿ ರಂಗಭೂಮಿಯ ಕೆಲಸವನ್ನು ಮಾಡುವ ಬುದ್ಧಿಜೀವಿಗಳಿಂದ ಈ ರಂಗಭೂಮಿ ಬೆಳೆಯಿತೆನ್ನಬೇಕು.

ತುಮಕೂರು ನಾಟಕ ಸಭಾ (೧೯೪೩) ಬಹುಶ: ಜಿಲ್ಲೆಯ ಮೊದಲನೆಯ ಹವ್ಯಾಸಿ ನಾಟಕ ತಂಡ ಎನ್ನಬಹುದಾದರೂ ಹೆಚ್.ಎನ್.ಎಸ್.ಶರ್ಮ ಎಂಬ ವೈದ್ಯರು ಸ್ಥಾಪಿಸಿದ 'ಶರ್ಮ ಮಿತ್ರ ಮಂಡಳಿ' (೧೯೪೫), ವಿನೋದ ಟಾಕೀಸಿನ ಬಿ.ಎನ್.ನಿರಂಜನ್ ೧೯೪೭ರಲ್ಲಿ ಒಂದು ತಂಡ ಕಟ್ಟಿದ್ದರು. ಉದಯ ಕಲಾವಿದ ಎನ್.ಎಸ್. ಮೂರ್ತಿ(೧೯೬೮), ಮಿತ್ರಮಂಡಳಿ(೧೯೫೪), ಸಹೋದರ ಮಿತ್ರ ಮಂಡಳಿ (೧೯೫೬), ಉದಯ ಕಲಾ ಸಂಘ (೧೯೬೦), ಆರ್ಯ ಕಲಾಸಂಘ (೧೯೬೦), ಕನ್ನಡ ಕಲಾವಿದರ ಸಂಘ, ಲಲಿತ ಕಲಾ ಸಂಘ(೧೯೬೩), ಮಹಾಲಕ್ಷ್ಮಿ ನಾಟಕ ಸಭಾ(೧೯೬೮), ಹೊಂಬಾಳೆ(೧೯೭೫) ನಂತರದಲ್ಲಿ ಸಮುದಾಯ, ರಂಗಸಂಪದ, ರೂಪರಂಗ ಕಲಾಸಂಘ, ಮುಂತಾದವು ಕ್ರಿಯಾಶೀಲವಾಗಿದ್ದವು. ಶ್ರೀರಂಗರಂಗ, ನಾಟಕ ಮನೆ, ಡಮರುಗ, ಹೆಚ್.ಎಂ.ಟಿ. ಲಲಿತಕಲಾ ಸಂಘ, ಶೃಂಗರಂಗ ಮುಂತಾದವು ಬೆಳಕಿಗೆ ಬಂದವು. ಪತ್ರಕರ್ತ ಉಗಮ ಶ್ರೀನಿವಾಸ್ ನೇತೃತ್ವದ ಝೇನ್ ಟೀಂ ಕ್ರಿಯಾಶೀಲವಾಗಿದೆ.

ತುಮಕೂರು ತಾಲೂಕು ರಂಗಭೂಮಿ ಕಲಾವಿದರ ಸಂಘ, ಹಳೇ ಮಾರುಕಟ್ಟೆ ಚೌಕದ ಮಾರುತಿ ಕಲಾ ಸಂಘ, ಭೈರವ ಕಲಾಸಂಘ, ಹೆಬ್ಬೂರಿನ ಮಾರುತಿ ಸೇವಾ ಸಮಿತಿ, ರಾಘವೇಂದ್ರ ಕಲಾಸಂಘ, ಮಾರುತಿ ಗೆಳೆಯರ ಬಳಗ, ನಾಗಾರ್ಜುನ ಕಲಾ ಸಂಘ, ಸಂಕಷ್ಟ ಹರ ಗಣಪತಿ ಕಲಾ ಸಂಘ, ಅನ್ನಪೂರ್ಣೇಶ್ವರಿ ಕಲಾಸಂಘ, ಚಂದ್ರೋದಯ ಕಲಾಸಂಘ, ಲಕ್ಷ್ಮೀ ವೆಂಕಟೇಶ್ವರ ಕಲಾಸಂಘ, ಸಿದ್ಧಲಿಂಗೇಶ್ವರ ನಾಟಕ ಮಂಡಳಿ ಮುಂತಾದ ನೂರಾರು ಹವ್ಯಾಸಿ ರಂಗತಂಡಗಳು ಜಿಲ್ಲೆಯಲ್ಲಿ ಕಂಡುಬರುತ್ತವೆ.

ತುಮಕೂರು ಜಿಲ್ಲೆಯ ಹವ್ಯಾಸಿ ರಂಗಭೂಮಿಯ ಬೆಳವಣಿಗೆಯಲ್ಲಿ ತಿರುವು ನೀಡಿದ ಸಂಸ್ಥೆ ಎಂದರೆ ಹೆಚ್. ಎಂ.ಟಿ.ಯ ಲಲಿತಕಲಾ ಸಂಘ. ಇದು, ಕುಪ್ಪೂರು ಕೃಷ್ಣಮೂರ್ತಿ, ಗೌಡನಕಟ್ಟೆ ತಿಮ್ಮಯ್ಯ ಇವರ ನೇತೃತ್ವದಲ್ಲಿ ೧೯೮೦ರಲ್ಲಿ ಪ್ರದರ್ಶಿಸಿದ ಕಂಬಾರರ 'ಜೋಕುಮಾರಸ್ವಾಮಿ', 'ನಾ.ಕೃ.ಸ'ರವರ 'ನೆತ್ತಮನಾಡಿ ಭಾನುಮತಿ ಸೋಲ್ತೊಡೆ', ಲಂಕೇಶರ 'ಸಂಕ್ರಾಂತಿ', ಜಡಭರತರ 'ಸತ್ತವರ ನೆರಳು', ಗೋಪಾಲ ವಾಜಪೇಯಿಯವರ 'ದೊಡ್ಡಪ್ಪ, ಶ್ರೀರಂಗರ 'ಸ್ವರ್ಗಕ್ಕೆ ಮೂರೇ ಬಾಗಿಲು', ಬಿ.ವಿ.ವೈಕುಂಠರಾಜುರವರ ಉದ್ಭವ ಅಲ್ಲದೆ ಕೆ.ಹಿರಣ್ಣಯ್ಯನವರ 'ದೇವದಾಸಿ' ಎಚ್ಚಮನಾಯಕ ಹಾಗೂ ಕೈಲಾಸಂರವರ ನಾಟಕಗಳನ್ನೂ ಸಹ ಆಧುನಿಕ ರಂಗ ತಂತ್ರಗಳನ್ನು ಬಳಸಿ, ರಾಜ್ಯದಾದ್ಯಂತ ಸಂಚರಿಸಿ ನಾಟಕ ಸ್ಪರ್ಧೆಗಳಲ್ಲಿ ಪ್ರಶಸ್ತಿ ಹಾಗೂ ಕೀರ್ತಿ ತಂದ ಹೆಮ್ಮೆ ಹೆಚ್.ಎಂ.ಟಿ ಕಲಾವಿದರಿಗೆ ಸಲ್ಲುತ್ತದೆ. ಕೃಷ್ಣ ಅಡಿಗ, ಯೋಗೀಶ್ ಕುಮಾರ್, ಸಂಗೀತ್ ಶ್ರೀನಿವಾಸ್, ಸೈಯ್ಯದ್ ಅಹಮದ್ ಖಾನ್, ಪ್ರಕಾಶ್, ಅನಂತ ಪದ್ಮನಾಭ, ರಂಗಯ್ಯ, ಆನಂದಕುಮಾರ್ ಮೊದಲಾದ ಉತ್ತಮ ಕಲಾವಿದರು ಸ್ವಂತ ನಾಟಕ ಸಂಘಗಳನ್ನು ಸಹ ಕಟ್ಟಿ, ಜಾನಪದ, ವೈಚಾರಿಕ, ಕೌಟುಂಬಿಕ, ಐತಿಹಾಸಿಕ ನಾಟಕಗಳ ಪ್ರದರ್ಶನ ನೀಡಿ ಜನಮನ್ನಣೆಗೆ ಪಾತ್ರರಾಗಿದ್ದಾರೆ. ಅಲ್ಲದೆ ಚಲನಚಿತ್ರ ಹಾಗೂ ಕಿರುತೆರೆ ಕಲಾವಿದರಾಗಿದ್ದಾರೆ.

ತಿಪಟೂರಿನ ಅಭಿನಯ ಕಲಾತಂಡ 'ಪ್ರೊಥಿಯು' ನಾಟಕ ತಂಡಗಳು, ತುರುವೇಕೆರೆಯ ಅಮಾನಿಕೆರೆ ಮಂಜುನಾಥ್ ನೇತೃತ್ವದ 'ಶಿವಶಕ್ತಿ ಕಲಾವಿದರು' (ದಶಮಾನ ಕಂಡಿದೆ) ಪಾವಗಡದ 'ಪಾನಕ' ಸಂಘ, ಮಧುಗಿರಿಯ ಕಲಾರಂಗ

ಹಾಗೂ ಜಿಲ್ಲೆಯ ಅನೇಕ ಭಾಗಗಳಲ್ಲಿ ಹವ್ಯಾಸಿರಂಗ ತಂಡಗಳು ಕಾರ್ಯನಿರತವಾಗಿದ್ದು ಜಿಲ್ಲೆಯ ನಾಟಕ ಕಲಾಸೇವೆಯ ಮೂಲಕ ರಂಗಭೂಮಿಯ ಪರಂಪರೆಗೆ ಗೌರವ ನೀಡುತ್ತಿವೆ. ರಾಷ್ಟ್ರೀಯ ಮಟ್ಟದಲ್ಲಿ ಹೆಸರಾಗಿರುವ ಹೊನ್ನವಳ್ಳಿ ನಟರಾಜ್ ನಿರ್ದೇಶಿಸಿದ 'ಜುಗಾರಿ ಕ್ರಾಸ್' ೭೫ಕ್ಕೂ ಹೆಚ್ಚು ಪ್ರದರ್ಶನ ಕಂಡಿರುವುದು ವಿಶೇಷ.

**ಕವಿತಾಕೃಷ್ಣ:** ಇವರು ೨೦ ನಾಟಕಗಳನ್ನು ಬರೆದಿದ್ದಾರೆ. ಬಾಳೇಬಂಗಾರ, ಮಮತೆಯಮನೆ, ತ್ಯಾಗಮಯಿ, ರಾಮರಾಜ್ಯ, ಚಂಡಶಾಸನ, ರಾಧನಿವಾಸ, ಟಿಪ್ಪುಸುಲ್ತಾನ್, ಸಂಗೊಳ್ಳಿರಾಯಣ್ಣ ಹಲವು ಬಾರಿ ಮರುಮುದ್ರಣ ಕಂಡಿದೆ, ಬಾಳೇಬಂಗಾರ ೨೦ನೇ ಮರುಮುದ್ರಣ ಕಂಡಿದೆ. ಮಕ್ಕಳ ನಾಟಕಗಳನ್ನೂ ಬರೆದಿದ್ದಾರೆ.

**ಹೆಚ್.ಎಂ.ರಂಗಯ್ಯ:** ಹೆಚ್.ಎಂ.ಟಿ ಕಾರ್ಖಾನೆ ನೌಕರರಾಗಿ ನಿವೃತ್ತಿ ಪಡೆದಿರುವ ಇವರು ಸುಮಾರು ೩೦ ವರ್ಷಗಳಿಂದ ನಟನೆ, ತಂತ್ರಜ್ಞ, ನಿರ್ದೇಶನ, ಸಂಘಟಕರಾಗಿ (ರಂಗಭೂಮಿಯ ವಿವಿಧ ಆಯಾಮಗಳಲ್ಲಿ) ಸೇವೆ ಸಲ್ಲಿಸಿರುವರು. ಶ್ರೀರಂಗ ರಂಗ ಹವ್ಯಾಸಿ ಕಲಾವೃಂದ ಸ್ಥಾಪಿಸಿ, ಸುಮಾರು ೨೫ ವರ್ಷಗಳಿಂದ ರಾಜ್ಯಮಟ್ಟದ ಮಕ್ಕಳ ನಾಟಕೋತ್ಸವ, ಸ್ಪರ್ಧೆ, ಏರ್ಪಡಿಸುತ್ತಿದ್ದಾರೆ. ಕಿರುತೆರೆ, ಸಾಕ್ಷ್ಯಚಿತ್ರ, ಬೀದಿ ನಾಟಕ ಮುಂತಾದವುಗಳಲ್ಲಿ ಪಾತ್ರವಹಿಸಿ, ನಿರ್ದೇಶನ ಮಾಡಿದ್ದಾರೆ. ಹೆಚ್.ಎಂ.ಟಿ ಲಲಿತಕಲಾ ಸಂಘದ ಕಾರ್ಯದರ್ಶಿಯಾಗಿದ್ದರು. ಹಲವಾರು ನಾಟಕ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನಿತರಾಗಿದ್ದಾರೆ. ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ, ಲಕ್ನೋ ಕನ್ನಡ ಸಂಘದ ಪ್ರಶಸ್ತಿ, ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ರೋಟರಿ ಪ್ರಶಸ್ತಿಗಳಲ್ಲದೇ ಅನೇಕ ಸಂಘ ಸಂಸ್ಥೆಗಳು ಸನ್ಮಾನಿಸಿವೆ.

**ಚಿಕ್ಕಹನುಮಂತಯ್ಯ:** ತುಮಕೂರು ಟೌನ್ ಶೆಟ್ಟಿಹಳ್ಳಿಯ ಇವರು ನಿವೃತ್ತ ಬ್ಯಾಂಕ್ ಉದ್ಯೋಗಿ. ಪೌರಾಣಿಕ ನಾಟಕಗಳಲ್ಲಿ ಶ್ರೀರಾಮ, ಕರ್ಣ, ಅರ್ಜುನ, ಶಿವಭಕ್ತ, ರಾವಣ, ಮಾರ್ಕಂಡೇಯ ಮುಂತಾದ ಪಾತ್ರಗಳನ್ನು ನಿರ್ವಹಿಸಿ 'ನಾಟಕರತ್ನ' ಬಿರುದಾಂಕಿತರಾಗಿದ್ದಾರೆ. ಬಾಲ್ಯದಿಂದಲೇ ಪಾಂಡುವಿಜಯ ಎಂಬ ನಾಟಕದಲ್ಲಿ ನಕುಲನ ಪಾತ್ರಧಾರಿಯಾಗಿ ರಂಗಭೂಮಿ ಪ್ರವೇಶಿಸಿದ ಇವರು ಇಂದಿಗೂ ಕಲಾಸೇವೆಯಲ್ಲಿ ತೊಡಗಿಕೊಂಡಿದ್ದಾರೆ. 'ಶ್ರೀ ಭೈರವ ಕಲಾ ಸಂಘ' ಸ್ಥಾಪಿಸಿ ಸಂಘದ ಮೂಲಕ ಅನೇಕ ಕಲಾವಿದರನ್ನು ಬೆಳೆಸಿ, ಬಳಸಿ ಹಲವಾರು ಪೌರಾಣಿಕ ನಾಟಕಗಳನ್ನು ರಾಜ್ಯ ಹಾಗೂ ಹೊರರಾಜ್ಯಗಳಲ್ಲಿ ಪ್ರದರ್ಶನ ಮಾಡಿದ್ದಾರೆ. ಅನೇಕ ಸಂಘ ಸಂಸ್ಥೆ ಕಲಾಬಳಗದಲ್ಲಿ ಪದಾಧಿಕಾರಿಯಾಗಿದ್ದಾರೆ. ಇವರ ಕಲಾಸೇವೆಗಾಗಿ ಜಗಜೀವನರಾಂ ಪ್ರಶಸ್ತಿ, ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಕಲಾರತ್ನ, ಪುಲಿಕೇಶಿ ಪ್ರಶಸ್ತಿ, ಕದಂಬ ಪ್ರಶಸ್ತಿ, ಮಯೂರ, ಹೊಯ್ಸಳ, ಸುವರ್ಣ ಕರ್ನಾಟಕ ಕಲಾ ಕೌಸ್ತುಭ ಪ್ರಶಸ್ತಿ, ಅಂಬೇಡ್ಕರ್ ಪ್ರಶಸ್ತಿ ಮುಂತಾದ ಅನೇಕ ಪ್ರಶಸ್ತಿಗಳು ಸಂದಿವೆ.

**ಹೆಚ್.ಬಿ.ಪುಟ್ಟಬೋರಯ್ಯ:** ತುಮಕೂರು ಜಿಲ್ಲೆಯ ಕುಣಿಗಲ್ ತಾಲೂಕಿನ ಹುಲಿಯೂರು ದುರ್ಗದ ಡಿ.ಹೊಸಹಳ್ಳಿಯ ಇವರು ಬಾಲ್ಯದಿಂದಲೇ ನಾಟಕದತ್ತ ಆಕರ್ಷಿತರಾಗಿ, ಶಾಲಾ ಚಟುವಟಿಕೆ, ವಾರ್ಷಿಕೋತ್ಸವಗಳಲ್ಲಿ, ನಾಟಕಗಳಲ್ಲಿ ಅಭಿನಯಿಸುತ್ತಾ ಬಂದವರು. ಆರೋಗ್ಯ ಇಲಾಖೆಯಲ್ಲಿ ಸೇವೆ ಸಲ್ಲಿಸಿರುವ ಇವರು ಭೈರವ ಕಲಾ ಸಂಘದ ಸ್ಥಾಪಕ ಕಾರ್ಯದರ್ಶಿ. (೧೯೮೪) ಕಲಾವಿದರೂ, ಹಾರ್ಮೋನಿಯಂ ಪ್ರವೀಣರೂ ಆದ ಇವರು ಅನೇಕ ಪೌರಾಣಿಕ ನಾಟಕಗಳಲ್ಲಿ ಪಾತ್ರ ಮಾಡಿರುತ್ತಾರೆ. ಅನೇಕ ಸಂಘ ಸಂಸ್ಥೆ, ಅಶಕ್ತ ಕಲಾವಿದರು, ತೋಟದ ಶನಿದೇವರ ದೇವಾಲಯದ ಕಟ್ಟಡ ನಿರ್ಮಾಣ ಸಹಾಯಾರ್ಥ ನಾಟಕ ಪ್ರದರ್ಶನ ಮಾಡಿರುತ್ತಾರೆ. ಇವರ ಕಲಾಸೇವೆಗಾಗಿ ಅನೇಕ ಸಂಘಸಂಸ್ಥೆಗಳು ಬಿರುದು ನೀಡಿ ಸನ್ಮಾನಿಸಿವೆ.

**ಕುಪ್ಪೂರು ಕೃಷ್ಣಮೂರ್ತಿ:** ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲೂಕು ಕುಪ್ಪೂರಿನ ಇವರು ಹೆಚ್.ಎಂ.ಟಿ.ಕೈಗಡಿಯಾರ ಕಾರ್ಖಾನೆಯಲ್ಲಿ ಉದ್ಯೋಗಿಯಾಗಿ, ಅಧಿಕಾರಿಯಾಗಿ ಸೇವೆ ಸಲ್ಲಿಸಿ, ನಿವೃತ್ತರಾದ ಮೇಲೆ ಹೊಯ್ಸಳ ಟೂಲ್ ರೂಂ ಎಂಬ ಸ್ವಂತ ಕೈಗಾರಿಕೆ ಸ್ಥಾಪಿಸಿದ್ದರು. ಬೆಂಗಳೂರಿನಲ್ಲಿ 'ಕಲಾಜ್ಯೋತಿ ಗೆಳೆಯರ ಬಳಗ' ಮತ್ತು ತುಮಕೂರಿನಲ್ಲಿ ನುಡಿಕನ್ನಡ ಕಲಾಸಂಘ ಸ್ಥಾಪಿಸಿ ಖ್ಯಾತ ನಾಟಕಕಾರರ ನಾಟಕಗಳನ್ನು ನಿರ್ದೇಶಿಸಿ, ನಟಿಸಿದ್ದಾರೆ. ತುಮಕೂರಿನ 'ಹೆಚ್‌ಎಂಟಿ ಲಲಿತ ಕಲಾ ಸಂಘ' ಸ್ಥಾಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿ, ಸ್ಥಾಪಕ ಕಾರ್ಯದರ್ಶಿಯಾಗಿ ಕೆಲಸ ಮಾಡಿರುವರು. ಇದು ತುಮಕೂರಿನಲ್ಲಿ ಹವ್ಯಾಸಿ ರಂಗಭೂಮಿ ಬೆಳವಣಿಗೆಯಲ್ಲಿ ಅಮೂಲ್ಯ ಕೊಡುಗೆ ನೀಡಿದೆ. ಕರ್ನಾಟಕ ನಾಟಕ ಅಕಾಡೆಮಿ, ಕರ್ನಾಟಕ ಕೈಗಾರಿಕಾ ರಾಜ್ಯ ಪ್ರಶಸ್ತಿ, ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಮುಂತಾದ

ಗೌರವ ಸಂದಿವೆ. ಹಲವಾರು ಸಂಘ ಸಂಸ್ಥೆಗಳು ಕಲಾಚತುರ, ಕಲಾಕೌಸ್ತುಭ ಮುಂತಾದ ಬಿರುದು ನೀಡಿ ಗೌರವಿಸಿವೆ. ಕೈಲಾಸಂ ಅವರ ಹೋಂರೂಲು, ನಂಕಂಪ್ನಿ, ಬಂಡ್ವಾಳ್ವಿಲ್ಲದ್ ಬಡಾಯಿ ಹಾಗೂ ದೇವದಾಸಿ, ಎಚ್ಚಮನಾಯಕ, ರಕ್ತಾಕ್ಷಿ, ಜೋಕುಮಾರಸ್ವಾಮಿ, ಸತ್ತವರ ನೆರಳು, ಸಂಕ್ರಾಂತಿ ಮುಂತಾದ ನಾಟಕಗಳನ್ನು ನಿರ್ದೇಶಿಸಿದ್ದಲ್ಲದೇ ಪಾತ್ರವನ್ನೂ ವಹಿಸಿದ್ದಾರೆ.

**ರಂಗಯ್ಯ ಅಳಿಲುಘಟ್ಟ:** ಕಂದಾಯ ಇಲಾಖೆಯ ನಿವೃತ್ತ ನೌಕರರಾದ ಇವರು ೧೨ನೇ ವಯಸ್ಸಿನಲ್ಲಿಯೇ ಶ್ರೀ ಕೃಷ್ಣಲೀಲಾ ನಾಟಕದಲ್ಲಿ ಬಾಲಕೃಷ್ಣನ ಪಾತ್ರ ನಿರ್ವಹಿಸುವ ಮೂಲಕ ರಂಗದ ಮೇಲೆ ಪಾದಾರ್ಪಣೆ ಮಾಡಿ, ನಾಟಕ ರಚನೆ, ಗೀತರಚನೆ, ನಿರ್ದೇಶನ, ರಂಗ ತಂತ್ರಜ್ಞ ಮುಂತಾಗಿ ಹಲವು ಹತ್ತು ರೀತಿಯಲ್ಲಿ ರಂಗಸಾಧನೆ ಹಾಗೂ ರೂಪರಂಗ ಕಲಾ ಸಂಘ ಸ್ಥಾಪಿಸಿ ತನ್ಮೂಲಕ ಕಲಾಸೇವೆ ಮಾಡಿದ್ದಾರೆ. ಇತರೆ ಸಾಮಾಜಿಕ, ಪೌರಾಣಿಕ ನಾಟಕಗಳ ಜೊತೆಗೆ ಸರ್ಕಾರದ ಆಶಯ ಹೊತ್ತ ಭೂಸುಧಾರಣೆ, ಸಾಕ್ಷರತೆಗೆ ಸಂಬಂಧಿಸಿದಂತೆ ' ಉಳುವವನೆ ಹೊಲದೊಡೆಯ' ಸಮರ್ಥರು, ನಾವು ಕಲಿತೆವು, ರಾಮ ರಹೀಂ ರಾಮ್ ಸಿಂಗ್ ಮುಂತಾದ ನಾಟಕ ರಚಿಸಿ ನಿರ್ದೇಶಿಸಿದ್ದಾರೆ. ಕುರುಕ್ಷೇತ್ರ, ರಕ್ತರಾತ್ರಿ, ದಾನಶೂರಕರ್ಣ, ಹೊಯ್ಸಳೇಶ್ವರ ವಿಷ್ಣುವರ್ಧನ, ಪ್ರೇಮ ಪರಾಜಯ, ಸಾಮಾಜಿಕ ನಾಟಕಗಳಾದ ಸುಮಂಗಲಿ, ಹೊಸಲು ದಾಟಿದ ಹೆಣ್ಣು, ಅಣ್ಣ ಅತ್ತಿಗೆ, ಪ್ರೇಮಬಲಿ, ಸಹೋದರಿ, ವರದಕ್ಷಿಣೆ, ಕೊಂಡು ತಂದ ಗಂಡ ಮುಂತಾದ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಇವರ ಕಲಾಸೇವೆಗಾಗಿ ಅನೇಕ ಸಂಘ ಸಂಸ್ಥೆಗಳು ಇವರನ್ನು ಸನ್ಮಾನಿಸಿ ಗೌರವಿಸಿವೆ. 'ಹೋರಾಟ' ಮುಂತಾದ ನಾಟಕಗಳು ಪ್ರಕಟವಾಗಿವೆ.

**ಅನಂತಪದ್ಮನಾಭ:** ತುಮಕೂರು ಹೆಚ್.ಎಂ.ಟಿ ಅನಂತು ಎಂದೇ ಚಿರಪರಿಚಿತರಾದ ಇವರು ಸ್ವಯಂನಿವೃತ್ತಿ ಪಡೆದು ಪೂರ್ಣ ಪ್ರಮಾಣದ ಕಲಾವಿದರಾಗಿ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ತುಮಕೂರಿನ ಹೆಚ್.ಎಂ.ಟಿ ಲಲಿತಕಲಾ ಸಂಘದ ಮೂಲಕ ಬೆಳಕಿಗೆ ಬಂದ ನೂರಾರು ಕಲಾವಿದರು ರಾಜ್ಯಾದ್ಯಂತ ಹೆಸರು ಮಾಡಿದ್ದಾರೆ. ಅವರಲ್ಲಿ ಇವರೂ ಒಬ್ಬರು. ಹೆಚ್.ಎಂ.ಟಿ.ನಾಟಕೋತ್ಸವ, ನಾಟಕ ಸ್ಪರ್ಧೆಗಳಲ್ಲಿ ಅಭಿನಯ, ನಿರ್ದೇಶನಗಳಿಂದ ಖ್ಯಾತಿ ಪಡೆದು ಅನೇಕ ಪೌರಾಣಿಕ, ಸಾಮಾಜಿಕ, ಹೊಸಅಲೆಯ ನಾಟಕಗಳಲ್ಲಿ ಅನುಭವ ಹೊಂದಿದರು. ಬೆಲ್ಚಿ, ಸಾಹೇಬರು ಬರುತ್ತಿದ್ದಾರೆ, ಗುಣಮುಖ, ಕಾಶಿರಾಂ ಕೊತ್ವಾಲ್, ಕೃಷ್ಣ ಸಂಧಾನ, ತುಘಲಕ್, ಮುಂತಾದ ನಾಟಕಗಳು ಅಭಿನಯಕ್ಕೆ ಸಾಣೆ ಹಿಡಿದವರು. ಬೆಂಗಳೂರಿನಲ್ಲಿ ಸಿಜಿಕೆ ಸಂಪರ್ಕದಿಂದ 'ರಂಗನಿರಂತರ' ತಂಡದಲ್ಲಿ ತೊಡಗಿ ಹಿಂತಿರುಗಿ ನೋಡದಂತೆ ರಂಗಭೂಮಿಯಲ್ಲಿ ತೊಡಗಿಸಿ ಕೊಂಡರು. ಕಿರುತೆರೆಯಲ್ಲಿಯೂ ವಠಾರ, ಬದುಕು,ಕಲ್ಯಾಣಿ, ರಂಗೋಲಿ, ಸುಕನ್ಯಾ, ಅರುಂಧತಿ, ರಾಘವೇಂದ್ರ ವೈಭವ ಮುಂತಾದ ಧಾರಾವಾಹಿಗಳಲ್ಲಿ ನಟಿಸಿದರು. ಭಕ್ತ ಅಯ್ಯಪ್ಪ, ಭೂಮಿ, ಸತ್ಯಮೇವ ಜಯತೇ, ಶಿವಶಕ್ತಿ ಮುಂತಾದ ಸುಮಾರು ೧೦-೧೫ ಚಲನಚಿತ್ರಗಳಲ್ಲಿ ನಟಿಸುವ ಮೂಲಕ ಬೆಳ್ಳಿತೆರೆಗೂ ಕಾಲಿಟ್ಟರು. ೩೫೦ಕ್ಕೂ ಹೆಚ್ಚು ಪ್ರದರ್ಶನದಲ್ಲಿ ಬಸವಣ್ಣನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಇವರ ಅನೇಕ ನಾಟಕಗಳು ೧೦೦ರಿಂದ ೫೦೦ ಪ್ರದರ್ಶನ ಕಂಡಿವೆ. ಅಲ್ಲದೇ ನಾನೆ ಶಕುನಿ, ಕೆರೆಗಳ ಕೂಗು ನಾಟಕಗಳನ್ನೂ ರಚಿಸಿದ್ದಾರೆ.

**ಪ.ವಿ.ಸುಬ್ರಹ್ಮಣ್ಯಂ:** ಮಧುಗಿರಿಯಲ್ಲಿ ಪ.ವಿ.ಸು. ಎಂದು ಖ್ಯಾತರಾದ ಇವರು ಕೆ.ಪಿ.ಟಿ.ಸಿ.ಎಲ್ ಉದ್ಯೋಗಿ. ವಿದ್ಯಾರ್ಥಿದೆಸೆಯಲ್ಲಿಯೇ ಏಕಪಾತ್ರಾಭಿನಯ ಮಾಡುತ್ತಿದ್ದು, ರಕ್ತರಾತ್ರಿ ಮುಂತಾದ ನಾಟಕಗಳಲ್ಲಿ ಪಾತ್ರವಹಿಸುತ್ತಿದ್ದರು. ರಂಗಾಸಕ್ತಿಯ ಕಾರಣದಿಂದ ಕನ್ನಡ ಯುವಕ ಸಂಘ ಪ್ರಾರಂಭಿಸಿ, ೧೯೮೦ರಲ್ಲಿ ಅದನ್ನು ಕಲಾರಂಗ ಎಂದು ಮರುನಾಮಕರಣ ಮಾಡಿ ರಾಜ್ಯಮಟ್ಟದ ನಾಟಕ ಸ್ಪರ್ಧೆ, ನಾಟಕೋತ್ಸವ ಏರ್ಪಡಿಸುತ್ತಿದ್ದರು. ಕುರುಕ್ಷೇತ್ರ, ಭೂಕೈಲಾಸ, ಶ್ರೀಕೃಷ್ಣ ಗಾರುಡಿ, ಸತ್ಯ ಹರಿಶ್ಚಂದ್ರ ಮುಂತಾದ ನಾಟಕಗಳಲ್ಲಿ ಪಾತ್ರ ವಹಿಸಿದ್ದಾರೆ. ಬೆಂಗಳೂರು, ವಿಜಯಪುರ, ಹುಬ್ಬಳ್ಳಿ, ದಾವಣಗೆರೆ, ಚಿತ್ರದುರ್ಗ, ಧಾರವಾಡ, ಬಾಗಲಕೋಟೆ ಹಾಗೂ ತುಮಕೂರು ಜಿಲ್ಲೆಗಳೂ ಸೇರಿದಂತೆ ವಿವಿಧ ಭಾಗಗಳಲ್ಲಿ ವಿದ್ಯುತ್ ಬಳಕೆ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಸುಮಾರು ೧೫೦೦ ಬೀದಿ ನಾಟಕಗಳನ್ನು ಪ್ರದರ್ಶಿಸಿದ್ದಾರೆ. ೨೦೦೫ರಲ್ಲಿ ರಾಜ್ಯ ನಾಟಕ ಅಕಾಡೆಮಿ ಪ್ರಶಸ್ತಿ, ತಾಲೂಕು ರಾಜ್ಯೋತ್ಸವ ಪ್ರಶಸ್ತಿ ಮುಂತಾದ ಪ್ರಶಸ್ತಿ ಗೌರವಗಳು ಸಂದಿವೆ.

**ಹಾಲ್ಕುರಿಕೆ ಶಿವಶಂಕರ್:** ತಿಪಟೂರು ತಾಲೂಕು ಹಾಲ್ಕುರಿಕೆ ಗ್ರಾಮದ ಇವರು ಅರ್ಥಶಾಸ್ತ್ರ ಎಂ.ಎ., ಮಾಡಿ ರಂಗಭೂಮಿಯತ್ತ ಆಕರ್ಷಿತರಾಗಿ ಹೆಗ್ಗೋಡಿನ ನೀನಾಸಂನಲ್ಲಿ ರಂಗಶಿಕ್ಷಣ ಪಡೆದು ರಂಗಭೂಮಿ, ಕಲೆ, ಸಾಹಿತ್ಯದ

ಸಮ್ಮಿಲನಗೊಳಿಸಲು 'ಹಾಲ್ಕುರಿಕೆ ಥಿಯೇಟರ್ ಮಿರರ್' ಮಾಸಪತ್ರಿಕೆ ಹೊರತರುತ್ತಿದ್ದಾರೆ. ಕನ್ನಡ ರಂಗಭೂಮಿಯನ್ನು ಬೌದ್ಧಿಕ ನೆಲೆಯಲ್ಲಿ ಕಟ್ಟಲು 'ಶೂನ್ಯ ಪರಿಕಲ್ಪನೆಯ ಆಧುನಿಕ ಅಭಿನಯ ಸಿದ್ಧಾಂತ' ಎಂಬ ವಿಷಯದ ಬಗ್ಗೆ ಸಂಶೋಧನೆ ನಡೆಸುತ್ತಿದ್ದಾರೆ. ಆ ಬಿಳಿ ಹೂಗಳು, ಆ ಕನಸಿನ ಬಣ್ಣಗಳು, ಕೋರೆಗಾಂವ್, ರಂಗಮಸೂರ ಹಾಗೂ 'ಮೊನ್ನೆ ತಾನೆ' ಎಂಬ ಕವನ ಸಂಕಲನ ಇವರ ಪ್ರಕಟಿತ ಕೃತಿಗಳಾಗಿವೆ.

**ಎನ್.ಎಸ್.ಮೂರ್ತಿ:** ಮೇಕಪ್ ಮೂರ್ತಿ ಎಂದೇ ಜಿಲ್ಲೆಯಲ್ಲಿ ಹೆಸರಾದ ಇವರು ರಂಗಭೂಮಿಯ ಜೀವಾಳವಾಗಿದ್ದರು. ಕಲಾವಿದರಿಗೆ ಬಣ್ಣ ಹಚ್ಚುವ ಮೇಕಪ್ ಮ್ಯಾನ್, ಸೀನರಿ ಅಳವಡಿಸುವುದು, ವಸ್ತ್ರಾಲಂಕಾರ ಮಾತ್ರವಲ್ಲದೇ ಕಲಾವಿದರಾಗಿಯೂ ಅಭಿನಯಿಸುವುದು ಇವರ ಕೈಂಕರ್ಯ. ಬಾಲನಟನಾಗಿ ರಂಗಭೂಮಿ ಪ್ರವೇಶಿಸಿ, ಹಿಕ್ಕಿ ಮಾಧವರಾಯರು, ರಾಜಕುಮಾರ್, ನರಸಿಂಹರಾಜು, ಮುಸುರಿ ಕೃಷ್ಣಮೂರ್ತಿ ಮುಂತಾದವರೊಂದಿಗೆ ಸಂಸಾರನೌಕೆ, ಎಚ್ಚಮನಾಯಕ, ಸದಾರಮೆ, ಮಕ್ಮಲ್ ಟೋಪಿ ಮುಂತಾದ ನಾಟಕಗಳಲ್ಲಿ ಅಭಿನಯಿಸಿದ್ದಲ್ಲದೇ ಚಲನಚಿತ್ರಗಳಲ್ಲಿಯೂ ಅಭಿನಯಿಸಿರುತ್ತಾರೆ. ಸುಮಾರು ೨೨೦೦ ನಾಟಕಗಳಲ್ಲಿ ಕೆಲಸ ಮಾಡಿದ್ದು, ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಮುಂತಾದ ನೂರಾರು ಗೌರವ ಸನ್ಮಾನಗಳು ಸಂದಿವೆ.

**ರಮೇಶ್:** ಸ್ತ್ರೀಪಾತ್ರಕ್ಕೆ ಹೆಸರಾದ ಕುಣಿಗಲ್ ತಾಲೂಕು ತುರುಗನೂರು ಗ್ರಾಮದ ರಮೇಶ್ ಇದುವರೆಗೂ ೭೦೦–೮೦೦ ನಾಟಕಗಳಲ್ಲಿ ಸ್ತ್ರೀಪಾತ್ರ ಮಾಡಿದ್ದಾರೆ. ಸ್ತ್ರೀಪಾತ್ರಗಳೇ ಪೌರಾಣಿಕ ನಾಟಕಗಳಿಗೆ ಜೀವಾಳ. ಜಿಲ್ಲೆಯ ವಿವಿಧ ಗ್ರಾಮಗಳೂ ಸೇರಿದಂತೆ ಬೆಂಗಳೂರು, ಮೈಸೂರು ಮುಂತಾದ ಪಟ್ಟಣಗಳಲ್ಲೂ ಇವರು ನಾಟಕ ಪ್ರದರ್ಶನ ನೀಡಿದ್ದಾರೆ. ಸ್ತ್ರೀಪಾತ್ರಕ್ಕೆ ಅವಶ್ಯವಿರುವ ಮೇಕಪ್ ಹಾಗೂ ವಸ್ತ್ರಾಲಂಕಾರವನ್ನು ಸ್ವತಃ ತಾವೇ ನಿರ್ವಹಿಸಿಕೊಳ್ಳುತ್ತಿದ್ದರು.

**ಹಾಪ್‌ಕಾಮ್ಸ್ ವೆಂಕಟೇಶ್:** ಕುಣಿಗಲ್ ತಾಲೂಕು ಅಮೃತೂರು ಹೋಬಳಿ ಕಂಟನಹಳ್ಳಿ ಗ್ರಾಮದ ಇವರು ಬಾಲ್ಯದಿಂದಲೂ ಕಲೆಯತ್ತ ವಾಲಿ ವಿದ್ಯಾರ್ಥಿಯಾಗಿದ್ದಾಗಲೇ ನಾಟಕಗಳಲ್ಲಿ ಅಭಿನಯಿಸಲಾರಂಭಿಸಿದರು. ಅದರಲ್ಲೂ 'ಶಕುನಿ'ಪಾತ್ರವನ್ನು ಮನಮುಟ್ಟುವಂತೆ ಅಭಿನಯಿಸುತ್ತಾ ಜನಮನ ಸೆಳೆದರು. ಕಾಲೇಜು ದಿನಗಳಲ್ಲೂ ಕಲೆಯ ನಂಟು ಮುಂದುವರಿಯಿತು. ಇವರದು ಕಲಾವಿದರ ಕುಟುಂಬವೂ ಹೌದು. ಇವರ ತಂದೆ ಹಾರ್ಮೋನಿಯಂ ಪಟು, ಹರಿಕಥಾ ವಿದ್ವಾನ್, ನಾಟಕ ಕಲಿಸುವ ಮೇಷ್ಟ್ರು ಜೊತೆಗೆ ನಟರು. ಮಾವ ಚೌಡಯ್ಯನವರೂ ಕಲಾವಿದರೇ ಆಗಿದ್ದು, ಕಿವಿಯ ಮೇಲೆ ಬೀಳುತ್ತಿದ್ದ ಸಂಗೀತ, ವಾದ್ಯ, ಕಂದಪದ್ಯ ನಾಟಕದ ತಾಲೀಮುಗಳು ಇವರೊಳಗಿನ ಕಲಾವಿದನನ್ನು ಎಚ್ಚರಿಸಿದವು. ಕೃಷ್ಣ ಪಾತ್ರಧಾರಿಯಾಗಿ ದಾಖಲೆ ಮಾಡಿದ್ದಾರೆ. ಕುರುಕ್ಷೇತ್ರ, ಸಂಪೂರ್ಣರಾಮಾಯಣ, ಲವಕುಶ, ರಕ್ತಭೂಮಿ, ಪಾದುಕಾ ಪಟ್ಟಾಭಿಷೇಕ, ಪಂಚವಟಿ ರಾಮಾಯಣ, ಸಾಮ್ರಾಟ್ ಸುಯೋಧನ, ರಾಮಾಂಜನೇಯ ಯುದ್ಧ ಮುಂತಾದ ನಾಟಕಗಳಲ್ಲಿ ಬಗೆಬಗೆಯ ಪಾತ್ರವಹಿಸಿ ಸೈ ಎನಿಸಿಕೊಂಡರು. ಇದುವರೆಗೂ ಸುಮಾರು ೩೦೦ ನಾಟಕಗಳಲ್ಲಿ ಅಭಿನಯಿಸಿದ್ದು, ೨೦೦ ಬಾರಿ ಕೃಷ್ಣನಾಗಿ, ೫೦ಕ್ಕೂ ಹೆಚ್ಚು ಬಾರಿ ರಾಮನಾಗಿ ಕಾಣಿಸಿಕೊಂಡಿರುವರು. ಜಲಗಾರ, ರಕ್ತಾಕ್ಷಿಯಂತಹ ಹಲವಾರು ನಾಟಕಗಳಲ್ಲಿಯೂ ಅಭಿನಯಿಸಿದ್ದಾರೆ. ಕಿರುತೆರೆಯ ಕೆಲವು ಧಾರಾವಾಹಿಗಳಲ್ಲೂ ಕಾಣಿಸಿಕೊಂಡಿದ್ದಾರೆ. ಅನೇಕ ಪ್ರಶಸ್ತಿ ಬಹುಮಾನಗಳಿಗೆ ಪಾತ್ರರಾಗಿದ್ದಾರೆ.

**ಎಂ. ವಿ. ನಾಗಣ್ಣ:** ರಂಗಭೂಮಿಯ ಉತ್ತಮ ಕಲಾವಿದರೆನಿಸಿದ ಇವರು ವೃತ್ತಿಯಲ್ಲಿ ಭಾರತೀಯ ಸರ್ವೇಕ್ಷಣ ಇಲಾಖೆಯಲ್ಲಿ ಎಂಜಿನಿಯರ್ ಆಗಿದ್ದಾರೆ. ಹಲವಾರು ಪೌರಾಣಿಕ ನಾಟಕಗಳಲ್ಲಿ ನಾಯಕನಟನಾಗಿ ಅಭಿನಯಿಸಿ ಜನಮನ್ನಣೆ ಗಳಿಸಿದ್ದಾರೆ. **ಡಾ. ಲಕ್ಷ್ಮಣದಾಸ್:** ರಂಗಭೂಮಿಯ ನಟರಾದ ಇವರಿಗೆ ಕೇಂದ್ರ ನಾಟಕ ಸಂಗೀತ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಹರಿಕಥಾ ವಿದ್ವಾಂಸರೂ, ಉತ್ತಮ ನಟರೂ ಆದ ಇವರಿಗೆ ತುಮಕೂರು ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ನೀಡಿದೆ.

**ರವೀಂದ್ರನಾಥ್ ಸಿರಿವರ:** ಇವರು ಕಲಾವಿದರಾಗಿ ಕಲಾ ನಿರ್ದೇಶನ, ರಂಗಭೂಮಿ, ವಿನ್ಯಾಸಕಾರ, ಲೇಖಕನಾಗಿದ್ದು, ಹಾಲಿ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಸಿರಿವರ ಪ್ರಕಾಶನದ ಮೂಲಕ ಸುಮಾರು ನೂರು ಕೃತಿಗಳನ್ನು ಪ್ರಕಟಿಸಿದ್ದು, ಸಿರಿವರ ಕಲ್ಚರಲ್ ಅಕಾಡೆಮಿ ಮೂಲಕ ಸಂಸ್ಕೃತಿ ಪ್ರಸರಣಕಾರ್ಯದಲ್ಲಿ ನಿರತರಾಗಿದ್ದಾರೆ.

ಆಧುನಿಕ ರಂಗಭೂಮಿಯಲ್ಲಿ ಬಹುಮುಖ್ಯವಾಗಿ ನಾಗಣ್ಣನಪಾಳ್ಯದ ಕೆ.ಪುಟ್ಟರುದ್ರಯ್ಯ, ವೈ.ಎಸ್.ಶಿವಣ್ಣ, ಕುಪ್ಪೂರು ಶಂಕರಪ್ಪ, ಮೀಸೆ ಮಲ್ಲಿಕಾರ್ಜುನಯ್ಯ, ಕೈದಾಳದ ನಾಗರಾಜ್, ದೊಡ್ಡಬೆಲೆ ನಟರಾಜ್, ಅದಲಾಪುರದ ಡಿ.ಶಿವಮಹದೇವಯ್ಯ, ಮಣೀಕುಪ್ಪೆ ಎಂ.ವಿ.ನಂಜಪ್ಪಶೆಟ್ಟಿ, ಹೆಗ್ಗೆರೆ ರಂಗಪ್ಪ, ಮಾಕನಹಳ್ಳಿ ಎಂ.ವಿ.ನಾಗಣ್ಣ, ಬೆಳಗುಂಬ ತಿಮ್ಮರಾಜು, ಉದಯಕುಮಾರ್, ಹನುಮಂತಪುರದ ಭೀಮರಾಜು, ನರಸಿಂಹಮೂರ್ತಿ, ಆಡಿಟರ್ ಕೆ.ಸಿ.ನರಸಿಂಹಮೂರ್ತಿ, ಸಿ.ಜಯಣ್ಣ, ಪೋಸ್ಟಲ್ ನಾಗರಾಜ್, ಸಿದ್ಧಗಂಗೆಯ ಬಿ.ಎಸ್.ಸಿದ್ಧಗಂಗಯ್ಯ, ಟ್ರಜರಿ ಸಿದ್ಧಗಂಗಯ್ಯ, ಚೆಲುವರಾಜು, ಸೀಬಿ ನರಸಿಂಹಯ್ಯ, ಜಲಾನಯನ ಇಲಾಖೆಯ ಎನ್.ಕೃಷ್ಣಪ್ಪ, ರಂಗಸ್ವಾಮಯ್ಯ, ಒರಿಯಂಟಲ್ ಚಂದ್ರಶೇಖರ್, ಉಪ್ಪಾರಹಳ್ಳಿ ಹನುಮಂತರಾವ್, ಬಿ.ಎಂ.ವೆಂಕಟೇಶ್, ಆರಾಧ್ಯ, ಮರಳೂರಿನ ಮುಕ್ತಿಯಾರ್, ಕಾರ್ ಮೊಬೈಲ್ಸ್ ವಾಸುದೇವಮೂರ್ತಿ, ಬನಶಂಕರಿ ರಂಗರಾಜು, ರೇಷ್ಮೆ ಇಲಾಖೆ ಜಯರಾಮ್, ಚಿಪ್ಸ್ ಹನುಮಂತರಾಯಪ್ಪ, ಜಿಲ್ಲಾ ಪಂಚಾಯತ್ ಬಿ.ಆರ್.ಶಿವಣ್ಣ, ಪೊಲೀಸ್ ಇಲಾಖೆಯ ಚಿಕ್ಕೀರಪ್ಪ, ಶಿವಬಸಪ್ಪ, ಮಹೇಶ್, ದುರ್ಗದಹಳ್ಳಿ ಪ್ರೇಮಕುಮಾರ್, ದೇವರಾಯಪಟ್ಟಣ ಡಿ.ಎಸ್. ಹರೀಶ್, ಕುಂಭಿ ನರಸಯ್ಯ, ನರಸಿಂಹಮೂರ್ತಿ, ಕ್ಯಾತಸಂದ್ರ ಮಲ್ಲಿಕಾರ್ಜುನ, ಫೋಟೋ ಜಗದೀಶ್, ನಾಗಣ್ಣನಪಾಳ್ಯದ ಲಾಯರ್ ಸುರೇಶ್, ಲಾಯರ್ ರಾಜಣ್ಣ, ಚಿಕ್ಕಲಿಂಗಯ್ಯ, ಸತ್ಯಮಂಗಲದ ಟಿ.ಎಸ್.ಸದಾಶಿವಯ್ಯ, ಗಜೇಂದ್ರಕುಮಾರ್, ಭರತೇಶ್, ತಾಂಡವಮೂರ್ತಿ, ನರಸಾಪುರದ ತಿಮ್ಮಗಿರಿಗೌಡ, ಪುಟ್ಟರಾಜು, ಪಂಚನಹಳ್ಳಿ ಜಯಕುಮಾರ್, ನಗರಸಭೆ ಲಕ್ಷ್ಮೀ ನಾರಾಯಣ್, ವಿದ್ಯಾನಗರದ ಚಿಕ್ಕಹನುಮಂತಯ್ಯ, ಟಿ.ಆರ್.ಸತೀಶ್, ಹೆಚ್.ಆರ್.ವೆಂಕಟೇಶ್, ಗಂಗಾ ನರ್ಸಿಂಗ್ ಹೋಂನ ಡಾ.ಹಿರೇಮಠ್, ತುಮಕೂರಿನ ಚಿತ್ರನಟ ನಟರಾಜ್, ಗೂಳೂರಿನ ತಿಮ್ಮಣ್ಣ, ರಂಗಸ್ವಾಮಯ್ಯ, ಹೆತ್ತೇನಹಳ್ಳಿ ರಂಗಸ್ವಾಮಿ, ಹಿರೇಹಳ್ಳಿ ಚಂದ್ರಶೇಖರ್, ರಂಗಾಪುರ ಜಿ.ನಂಜಪ್ಪ ಮುಂತಾದವರು ಉಲ್ಲೇಖಾರ್ಹ ಸಾಧನೆ ಮಾಡಿದ್ದಾರೆ.

ವಾದ್ಯವೃಂದ ಕಲಾವಿದರಾದ ರಾಮನಾಥನ್, ಸಿದ್ಧಗಂಗೆಯ ವೆಂಕಟರಾಮ ಭಾಗವತ್, ಪಂಡಿತನಹಳ್ಳಿ ಚಂದ್ರಚಾರ್, ಸೀತಕಲ್ ಕೃಷ್ಣಮೂರ್ತಿ, ಸೋರೆಕುಂಟೆ ನಾಗರಾಜಾಚಾರ್, ಐ.ಎಲ್.ರಂಗಸ್ವಾಮಯ್ಯ, ಚಿಕ್ಕೀರಪ್ಪ, ಸಿರಿವರ ನರಸೇಗೌಡ, ಮೇಳೇಕೋಟೆ ವೆಂಕಟಾಚಲಯ್ಯ, ದೇವರಹಟ್ಟಿ ಸಿದ್ದಲಿಂಗಪ್ಪ, ಸುಣ್ಣದಕಲ್ಲು ರಾಮಚಂದ್ರಯ್ಯ, ಹೆಗ್ಗೆರೆ ಸೀಬಿ ರಂಗಯ್ಯ, ಸತ್ಯಮಂಗಲದ ಚನ್ನಬಸವಯ್ಯ, ಚಿಕ್ಕಹಳ್ಳಿ ಬಸವರಾಜು, ರಘುನಂದನ್, ಮೂಡಲಕೋಡಿ ಪಾಳ್ಯದ ಚಿಕ್ಕಣ್ಣ, ಪಾಲಸಂದ್ರದ ಲಕ್ಷ್ಮೀನಾರಾಯಣ, ಉಪ್ಪಾರಹಳ್ಳಿ ರಾಮಣ್ಣ, ತಬಲ ಅಂಜನ್, ಶೆಟ್ಟಳ್ಳಪ್ಪ, ಕ್ಯಾಷಿಯೋ ರಂಗಸ್ವಾಮಿ, ತಬಲ ಮುನಿರಾಜು, ಪಿಟೀಲು ಮುನಿವೆಂಕಟಪ್ಪ, ಮೆಡಿಕಲ್ ಭೀಮಣ್ಣ, ತಿಮ್ಮರಾಜು, ಸಂಪತ್ ಕುಮಾರ್, ಬಟವಾಡಿ ರಾಮಕೃಷ್ಣಯ್ಯ, ಸಂಕಾಪುರದ ಲಕ್ಷ್ಮೀನಾರಾಯಣ, ಷಣ್ಮುಗಂ, ನಾಗಭೂಷಣ, ಬಂಡೆಪಾಳ್ಯ ಗಿಟಾರ್ ಪ್ರಕಾಶ್, ಶಿರಾಗೇಟ್ ಹನುಮಂತರಾಜು ಸತ್ಯಮಂಗಲದ ಚನ್ನಬಸವಯ್ಯ, ಗೂಳೇಹರವಿ ಶ್ರೀಧರ್ ಮುಂತಾದವರು ಕಂಡುಬರುತ್ತಾರೆ. ನಾಟಕಗಳಿಗೆ ಸೀನರಿ ವಸ್ತ್ರ–ವರ್ಣಾಲಂಕಾರ ಒದಗಿಸುವಲ್ಲಿ ಹೆಸರು ಪಡೆದಿರುವ ಶಿರಾಗೇಟ್ ಗೋವಿಂದಪ್ಪನವರ ಬಸವೇಶ್ವರ ಡ್ರಾಮಾ ಸೀನರಿ, ಚಲುವಯ್ಯನವರ ಸೀನರಿ, ಕೃಷ್ಣಾ ಸೀನರಿ, ಕಲಾ ಡ್ರಾಮಾಸೀನ್ಸ್, ವಿನಾಯಕ ಹೈಟೆಕ್ ಡ್ರಾಮಾ ಸೀನರಿ, ಕಿತ್ತಗಾನಹಳ್ಳಿ ಲೋಕೇಶರ ತಿರುಮಲರಂಗ ವಿಲಾಸ ಸೀನರಿ, ಸಿದ್ದಲಿಂಗೇಶ್ವರ ಡ್ರಾಮಾ ಸೀನರಿ ಮುಂತಾದ ನಾಟಕ ಸೀನರಿಗಳ ಮಾಲೀಕರ ಸೇವೆಯೂ ರಂಗಭೂಮಿ ಬೆಳವಣಿಗೆಗೆ ಪೂರಕವಾಗಿದೆ. ಹೀಗೆ ರಂಗಭೂಮಿ ನಟರು, ಕಲಾಪೋಷಕರು, ಸಂಘ ಸಂಸ್ಥೆಗಳು, ಸಂಗೀತಗಾರರು, ನಟಿಯರು, ರಂಗಸಜ್ಜಿಕೆಯವರು, ರಂಗ ಸಂಘಟಕರು ತಮ್ಮ ಕಾಣಿಕೆ ಸಲ್ಲಿಸಿರುತ್ತಾರೆ.

## ಚಲನಚಿತ್ರ

ವೀರಣ್ಣ ಜಿ.ಹೆಚ್. (೧೮೯೧–೭೨) ಕನ್ನಡ ರಂಗಭೂಮಿ ಗುರುಕುಲದ ಆಚಾರ್ಯ ತುಮಕೂರು ಜಿಲ್ಲೆಯ ಗುಬ್ಬಿಯಲ್ಲಿ ೧೮೯೧ರಲ್ಲಿ ಜನಿಸಿದರು. ಆರನೇ ವಯಸ್ಸಿನಲ್ಲೇ ಗುಬ್ಬಿ ಚನ್ನಬಸವೇಶ್ವರ ಕೃಪಾಪೋಷಿತ ನಾಟಕ ಕಂಪನಿ ಸೇರಿದರು. ಈ ಸಂಸ್ಥೆ ೧೮೮೪ರಲ್ಲಿ ಚಂದ್ರಣ್ಣ ಹಾಗೂ ಇತರರಿಂದ ರೂಪುಗೊಂಡಿತ್ತು. ಆರಂಭದಲ್ಲಿ ಸಣ್ಣ ಪುಟ್ಟ ಪಾತ್ರಗಳನ್ನು ನಿರ್ವಹಿಸಿಕೊಂಡು ಬಂದರು. ಆದರೆ, ೧೯೧೭ರ ವೇಳೆಗೆ ವೀರಣ್ಣನವರು ಪ್ರಮುಖ ನಟರಷ್ಟೇ ಅಲ್ಲದೆ ಕಂಪನಿಯ ಆಧಾರಸ್ತಂಭವೂ ಆದರು. ೧೯೧೯ರಲ್ಲಿ ಸಂಸ್ಥೆಯ ಒಡೆಯರೂ ಆದರು. ಮಾತನಾಡುವ ಚಿತ್ರಗಳಿಗೂ ಮುನ್ನ ೧೯೨೯–೩೦ರಲ್ಲಿ 'ಹಿಸ್ ಲವ್ ಅಫೇರ್' ಹರಿಮಾಯ, ಸಾಂಗ್ ಆಫ್ ಲೈಫ್, ಮೂಕಿ ಚಿತ್ರಗಳನ್ನು ತಯಾರಿಸಿದರು. ಸದಾರಮೆ (೧೯೩೫) ವೀರಣ್ಣನವರು ನಿರ್ಮಿಸಿದ ಮೊದಲ ಟಾಕಿ ಚಿತ್ರ. ಈ ಚಿತ್ರದಲ್ಲಿ ಇವರು ಕಳ್ಳನ ಪಾತ್ರವನ್ನು ಸಮರ್ಥವಾಗಿ ನಿರ್ವಹಿಸಿದರು. ಸ್ನೇಹಿತರೊಂದಿಗೆ ಸೇರಿ ಮಲ್ಲೇಶ್ವರಂನಲ್ಲಿ ಸಹಕಾರಿ ತತ್ವದ ಆಧಾರದ ಮೇಲೆ ಕರ್ನಾಟಕ ಪಿಕ್ಚರ್ಸ್ ಕಾರ್ಪೋರೇಷನ್ ಸ್ಟುಡಿಯೋವನ್ನು ಸ್ಥಾಪಿಸಿ ಚಿತ್ರತಯಾರಿಕೆಗೆ ತೊಡಗಿದರು. ೧೯೩೫ರಲ್ಲಿ ಸದಾರಮೆ,

೧೯೪೧ರಲ್ಲಿ ಸುಭದ್ರ, ೧೯೪೨ರಲ್ಲಿ ಜೀವನ ನಾಟಕ, ೧೯೪೫ರಲ್ಲಿ ಹೇಮರೆಡ್ಡಿ ಮಲ್ಲಮ್ಮ, ೧೯೫೩ರಲ್ಲಿ ಗುಣಸಾಗರಿ, ೧೯೫೪ರಲ್ಲಿ ಬೇಡರ ಕಣ್ಣಪ್ಪ ಚಿತ್ರಗಳನ್ನು ನಿರ್ಮಿಸಿದರು. ಇಂದಿನ ಅನೇಕ ಪ್ರಸಿದ್ಧ ಹಿರಿಯ ನಟ ನಟಿಯರು ಗುಬ್ಬಿ ಕಂಪನಿಯಿಂದ ತಯಾರಾದ ಪ್ರತಿಭಾವಂತರೆನ್ನುವುದು ಹೆಗ್ಗಳಿಕೆಯ ವಿಷಯವಾಗಿದೆ.

೧೯೪೩ರಲ್ಲಿ ಕಲ್ಯಾಣಿ ಫಿಲಂಸ್ ಲಾಂಛನದಲ್ಲಿ ಕೆ.ಸುಬ್ರಹ್ಮಣ್ಯಂ ನಿರ್ದೇಶನದಲ್ಲಿ ತಯಾರಾದ 'ಕೃಷ್ಣ ಸುಧಾಮ' ಎಂಬ ಚಲನಚಿತ್ರದಲ್ಲಿ ಬೆಳ್ಳಾವೆ ನರಹರಿ ಶಾಸ್ತ್ರಿಯವರ ಜೊತೆ ಮಧುಗಿರಿ ಮೀನಾಕ್ಷಿ ನಟಿಸಿದ್ದರು. ಈಕೆಯ ಹೆಸರು ಎಸ್. ಕೆ.ಪದ್ಮಾದೇವಿ. ೨೪ ವರ್ಷವೂ ತುಂಬಿರದ ಈಕೆ ೨೪ ಮಕ್ಕಳ ತಾಯಿಯಾಗಿ ಪಾತ್ರ ಮಾಡಿದ್ದರು. ನಾಯಕ ಪ್ರಧಾನ ಚಿತ್ರವಾದ್ದರಿಂದ ಇವರ ಪಾತ್ರಕ್ಕೆ ಪ್ರಾಧಾನ್ಯತೆ ದೊರಕಲಿಲ್ಲ. ಆದರೆ 'ಯದುಕುಲಾನಂದನ ಪಾಲಿಸೋ" ಎಂಬ ಹಾಡು ತುಂಬಾ ಜನಪ್ರಿಯವಾಯಿತು. ವಸಂತಸೇನ ಚಿತ್ರದಲ್ಲಿ ಚಂದ್ರಮ್ಮ ಎಂಬ ನಟಿಗೆ ಹಾಡುವುದಕ್ಕೆ ಬರುತ್ತಿರಲಿಲ್ಲ. ಆದರೆ, 'ಪಾಲಿಸೋ ಜಗದಂತೆ' ಎಂಬ ಹಾಡು ಹಾಡಬೇಕಾಗಿತ್ತು. ಈ ಹಾಡನ್ನು ಅವರಿಗಾಗಿ ಎಸ್.ಕೆ.ಪದ್ಮಾದೇವಿ (ಮಧುಗಿರಿ ಮೀನಾಕ್ಷಿ) ಯಿಂದ ಹಾಡಿಸಲಾಯಿತು. ಹೀಗಾಗಿ ಅರಿವಿಲ್ಲದಂತೆ ಹಿನ್ನೆಲೆ ಗಾಯಕಿಯಾಗಿಬಿಟ್ಟರು. ಅದೇ ಚಿತ್ರದಲ್ಲಿ ಇವರು ನಟಿಸಿಯೂ ಇದ್ದರು.

ಸುಭದ್ರ, ಜೀವನ ನಾಟಕ, ಹೇಮರೆಡ್ಡಿ ಮಲ್ಲಮ್ಮ, ಗುಣಸಾಗರಿ, ಬೇಡರ ಕಣ್ಣಪ್ಪ ಮುಂತಾದವು ಇವರು ನಿರ್ಮಿಸಿದ ಇತರ ಚಿತ್ರಗಳು. ಮಹಾರಾಜರಿಂದ ' ವಿನೋದ ರತ್ನಾಕರ' ಬಿರುದು ಪಡೆದುಕೊಂಡು ಕೈಗೆ 'ಗಂಡಭೇರುಂಡ' ಕಪ್ಪವನ್ನು ತೊಡಿಸಿಕೊಂಡರು. ೧೯೭೦ರಲ್ಲಿ ಮೈಸೂರು ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ನೀಡಿತು. ೧೯೭೨ರಲ್ಲಿ ಕೇಂದ್ರ ಸರ್ಕಾರದಿಂದ 'ಪದ್ಮಶ್ರೀ' ಪ್ರಶಸ್ತಿಗೆ ಭಾಜನರಾದರು. ಗುಬ್ಬಿ ವೀರಣ್ಣನವರ ಪತ್ನಿ ಬಿ.ಜಯಮ್ಮ, ಮಗ ಜಿ.ವಿ.ಶಿವಾನಂದ, ಮೊಮ್ಮಗಳು ಬಿ.ಜಯಶ್ರೀ ಸೇರಿದಂತೆ ಇವರ ಕುಟುಂಬದ ಎಲ್ಲರೂ ಕಲಾವಿದರು. ಜೀವನಸಂಧ್ಯಾ ಸಮಯದಲ್ಲೂ ಚಿತ್ರರಂಗದ ಉಚ್ಛ್ರಾಯಸ್ಥಿತಿಗೆ ದುಡಿದರು. ಇವರು ತಮ್ಮ ೮೨ನೇ ವಯಸ್ಸಿನಲ್ಲಿ ದಿನಾಂಕ ೧೮-೧೦-೧೯೭೨ರಲ್ಲಿ ನಿಧನರಾದರು. ರಾಜಕುಮಾರ್ ಸೇರಿದಂತೆ ಅನೇಕ ಕಲಾವಿದರು, ತಂತ್ರಜ್ಞರು ಗುಬ್ಬಿ ಕಂಪನಿಯಿಂದ ಬಂದು ಚಿತ್ರರಂಗದಲ್ಲಿ ಹೆಸರು ಮಾಡಿದರು. ಚಿತ್ರ ತಯಾರಿಕೆಯ ಜೊತೆಯಲ್ಲಿ ೧೯೪೨ರಲ್ಲಿ ವೀರಣ್ಣನವರು ಕರ್ನಾಟಕ ಫಿಲಂಸ್ ಹೆಸರಿನಲ್ಲಿ ಚಿತ್ರ ವಿತರಣಾ ಸಂಸ್ಥೆಯನ್ನು ಸ್ಥಾಪಿಸಿದರು. ಚಿತ್ರ ಪ್ರದರ್ಶನಕಾರರಾಗಿಯೂ ಸಹ ವೀರಣ್ಣನವರು ತಮ್ಮ ಸಾಹಸ ಪ್ರವೃತ್ತಿಯನ್ನು ತೋರಿದರು. ಬೆಂಗಳೂರು, ತುಮಕೂರು, ಹಾಗೂ ತಿಪಟೂರುಗಳಲ್ಲಿ ಚಿತ್ರಮಂದಿರಗಳನ್ನು ಕಟ್ಟಿ ಕನ್ನಡ ಚಿತ್ರಗಳ ಪ್ರದರ್ಶನಕ್ಕೆ ದಾರಿ ಮಾಡಿಕೊಟ್ಟ ಸಾಹಸಿಗರಾದರು. (ತುಮಕೂರಿನಲ್ಲಿ ಪ್ರಶಾಂತ್ ಟಾಕೀಸ್) ೧೯೬೬ರಲ್ಲಿ ತಮ್ಮ ವಿತರಕರೊಡಗೂಡಿ ಬೆಂಗಳೂರಿನಲ್ಲಿ ಕನ್ನಡ ಚಿತ್ರಗಳ ತಯಾರಿಕೆಗೆ ಬೆಂಬಲವಾಗಿ ಶ್ರೀ ಕಂಠೀರವ ಸ್ಟುಡಿಯೋಸ್ ಲಿಮಿಟೆಡ್ ಸ್ಥಾಪಿಸಿ, ಸ್ಥಾಪಕ ನಿರ್ದೇಶಕರಾಗಿ ದುಡಿದರು. ಗುಬ್ಬಿ ವೀರಣ್ಣನವರು ವಿಧಾನ ಪರಿಷತ್ ಸದಸ್ಯರಾಗಿ ನಾಮಕರಣಗೊಂಡಿದ್ದರು. ವೀರಣ್ಣನವರು ನಟರಾಗಿ, ಆಯೋಜಕರಾಗಿ ನಾಟಕ ಕಂಪನಿಯ ಒಡೆಯರಾಗಿ, ಚಲನಚಿತ್ರ ನಿರ್ಮಾಪಕ-ವಿತರಕ-ಪ್ರದರ್ಶಕ-ಸ್ಟುಡಿಯೋ ಸ್ಥಾಪಕರಾಗಿ ಹೀಗೆ ತಮ್ಮ ಬಹುಮುಖ ಪ್ರತಿಭೆಯಿಂದ ಕನ್ನಡ ಚಿತ್ರರಂಗಕ್ಕೆ ಭದ್ರ ಬುನಾದಿ ಹಾಕಿಕೊಟ್ಟರು. ಮೈಸೂರು ವಿಶ್ವವಿದ್ಯಾಲಯದ ಲಲಿತಕಲಾ ಕಾಲೇಜಿನಲ್ಲಿ ಗುಬ್ಬಿ ವೀರಣ್ಣ ಪ್ರಶಸ್ತಿಯನ್ನು ಸ್ಥಾಪಿಸಿತು. ಮೊದಲ ಪ್ರಶಸ್ತಿ ರಾಜಕುಮಾರ್ ಪಡೆದರು. ಈಗ ಅದು ರಂಗಭೂಮಿಗೆ ಮಾತ್ರ ಮೀಸಲಾಗಿದೆ. ಬೆಂಗಳೂರು ಮಹಾನಗರ ಪಾಲಿಕೆಯು ಗಾಂಧಿನಗರದ ಎರಡನೆಯ ಅಡ್ಡರಸ್ತೆಯಲ್ಲಿ ಹಿಂದೆ ಗುಬ್ಬಿ ವೀರಣ್ಣನವರ ರಂಗಮಂದಿರವಿದ್ದ ಸ್ಥಳದಲ್ಲಿಯೇ ನೂತನವಾಗಿ ಗುಬ್ಬಿ ವೀರಣ್ಣ ರಂಗಮಂದಿರವನ್ನು ನಿರ್ಮಿಸಿ ವೃತ್ತಿ ರಂಗಭೂಮಿಯವರು ತಮ್ಮ ನಾಟಕಗಳನ್ನು ಪ್ರದರ್ಶಿಸಲು ಅನುಕೂಲ ಮಾಡಿಕೊಟ್ಟು ಗುಬ್ಬಿ ವೀರಣ್ಣನವರ ಹೆಸರನ್ನು ಶಾಶ್ವತಗೊಳಿಸಿದೆ. ತಿಪಟೂರಿನ ಟಿ.ವಿ.ಸಿಂಗ್ ಠಾಕೂರ್ ೧೯೫೫ರಲ್ಲಿ ಸೋದರಿ, ೧೯೫೬ರಲ್ಲಿ ಹರಿಭಕ್ತ, ಓಹಿಲೇಶ್ವರ, ೧೯೫೯ರಲ್ಲಿ ಜಗಜ್ಯೋತಿ ಬಸವೇಶ್ವರ, ಕೈವಾರ ಮಹಾತ್ಮೆ, ೧೯೬೧ರಲ್ಲಿ ಕಣ್ತೆರೆದು ನೋಡು, ೧೯೬೨ರಲ್ಲಿ ಕರುಣೆಯೇ ಕುಟುಂಬದ ಕಣ್ಣು, ೧೯೬೩-ಕುಲವಧು, ೧೯೬೪-ಚಂದವಳ್ಳಿಯ ತೋಟ, ೧೯೬೬-ಮಂತ್ರಾಲಯ ಮಹಾತ್ಮೆ, ೧೯೬೯ ಭಾಗೀರಥಿ, ೧೯೭೪-ಹೇಮರೆಡ್ಡಿ ಮಲ್ಲಮ್ಮ ಮುಂತಾದ ೧೮ ಚಿತ್ರಗಳನ್ನು ನಿರ್ದೇಶಿಸಿದ್ದು, ಹೇಮರೆಡ್ಡಿ ಮಲ್ಲಮ್ಮ ಇವರ ಕೊನೆಯ ಚಿತ್ರ. ೧೯೭೯ರ ನವೆಂಬರ್ ೧೭ ರಂದು ನಿಧನರಾದರು.

೧೯೬೨ರಲ್ಲಿ ಕೃಷ್ಣಮೂರ್ತಿ ಪುರಾಣಿಕರ ಕಾದಂಬರಿ 'ಧರ್ಮದೇವತೆ' ಕಾದಂಬರಿ ಆಧಾರಿತ ಕರುಣೆಯೇ ಕುಟುಂಬದ ಕಣ್ಣು ಚಿತ್ರಕ್ಕೆ ತುಮಕೂರು ಜಿಲ್ಲೆ ಗುಬ್ಬಿ ತಾಲೂಕು ಚಿಟ್ಟನಹಳ್ಳಿಯ ಚಿ.ಸದಾಶಿವಯ್ಯನವರು ಸಂಭಾಷಣೆ ಬರೆದರು. ಇವರು ಅಮರಶಿಲ್ಪಿ ಜಕಣಾಚಾರಿ ಚಿತ್ರದಲ್ಲಿ ಅಭಿನಯಿಸಿದ್ದರು. ಚಿ.ಉದಯಶಂಕರ್ ಸಂಭಾಷಣೆ ಬರೆದ ಮೊದಲ ಚಿತ್ರ ಸಂತ ತುಕಾರಾಂ. ೧೯೬೬ರಲ್ಲಿ ಗುಬ್ಬಿ ವೀರಣ್ಣನವರ ಸಹವರ್ತಿಯಾಗಿದ್ದ ತಿಪಟೂರಿನ ಟಿ.ಎಸ್.ಕರಿಬಸವಯ್ಯನವರ ನೇತೃತ್ವದಲ್ಲಿ ಕಂಠೀರವ ಸ್ಟುಡಿಯೋ ಸ್ಥಾಪನೆಯಾಗಿ ೧೯೭೦ನೇ ಜನವರಿ ೧೬ರಿಂದ ಕಾರ್ಯಾರಂಭ ಮಾಡಿತು.

ಅಂತೆಯೇ ನಾಟಕಗಳಿಗೆ ಸಂಭಾಷಣೆ ಬರೆಯುತ್ತಿದ್ದ ಬೆಳ್ಳಾವೆಯ ನರಹರಿಶಾಸ್ತ್ರಿ ಅವರು ಚಲನಚಿತ್ರಗಳಿಗೂ ಸಂಭಾಷಣೆಯನ್ನು ಬರೆದಿದ್ದಾರೆ. ಪ್ರಾರಂಭದಲ್ಲಿ ಹೆಚ್ಚಾಗಿ ಚಲನಚಿತ್ರಗಳಲ್ಲಿ ಅಭಿನಯಿಸುತ್ತಿದ್ದವರು, ನಿರ್ಮಾಪಕ, ನಿರ್ದೇಶಕರಾಗಿರುತ್ತಿದ್ದವರು ನಾಟಕದವರೇ ಆಗಿರುತ್ತಿದ್ದರು. ಜಿಲ್ಲೆಯ ರಂಗಭೂಮಿ ಶ್ರೀಮಂತಿಕೆಯಿಂದ ಕೂಡಿದ್ದರಿಂದ ನೂರಾರು ನಾಟಕ ಕಲಾವಿದರು ಸಿನಿಮಾ ನಟ–ನಟಿಯರಾಗಿ ಅಭಿನಯಿಸಿದ್ದಾರೆ.

**ನರಹರಿಶಾಸ್ತ್ರಿ ಬೆಳ್ಳಾವೆ (೧೮೮೨–೧೯೬೧):** ಇವರು ತುಮಕೂರು ಜಿಲ್ಲೆಯ ಬೆಳ್ಳಾವೆಯಲ್ಲಿ ೨೧ನೇ ಸೆಪ್ಟೆಂಬರ್ ೧೮೮೨ರಲ್ಲಿ ಜನಿಸಿದರು. ವೃತ್ತಿಯಲ್ಲಿ ಶಿಕ್ಷಕರು ಹಾಗೂ ಸಂಸ್ಕೃತ ಪಂಡಿತರು ಹಾಗೂ ನಾಟಕಕಾರರಾಗಿ ರಂಗಭೂಮಿಯಲ್ಲಿ ಹೆಸರಾದವರು. ಇವರ ರಾಜಭಕ್ತಿ ಕಾವ್ಯಕ್ಕೆ ಮೈಸೂರಿನ ಅರಸರ ಮನ್ನಣೆ ದೊರೆತಿತ್ತು. ಬಹುತೇಕ ಗುಬ್ಬಿ ಕಂಪನಿಯಲ್ಲಿ ನಾಟಕ ರಚಿಸಿ ಅಭಿನಯದಲ್ಲಿ ತರಬೇತಿ ನೀಡುತ್ತಿದ್ದರು. ಮೊದಲ ವಾಕ್ಚಿತ್ರ ಸುಲೋಚನಾದಿಂದ ಆರಂಭಿಸಿ ಕನ್ನಡದ ಹಲವು ಚಿತ್ರಗಳಿಗೆ ಕಥೆ, ಚಿತ್ರಕಥೆ, ಸಂಭಾಷಣೆ, ಗೀತೆಗಳನ್ನು ರಚಿಸಿದ್ದಾರೆ. ಕನ್ನಡ ಚಿತ್ರ ಸಾಹಿತ್ಯ ಕ್ಷೇತ್ರದ ಪ್ರಥಮರು. ಸದಾರಮೆ, ಪುರಂದರದಾಸ, ಭಕ್ತ ಪ್ರಹ್ಲಾದ, ಸುಭದ್ರಾ, ಹೇಮರೆಡ್ಡಿ ಮಲ್ಲಮ್ಮ ಚಿತ್ರಗಳಿಗೆ ಸಾಹಿತ್ಯ ನೀಡಿ ಭಕ್ತ ಸುಧಾಮದಲ್ಲಿ ಸುದಾಮನಾಗಿ ಅಭಿನಯಿಸಿದ್ದರು. ಗೀತೆಗಳನ್ನು ಕೆಲವು ಕ್ಷಣಗಳಲ್ಲಿ ರಚಿಸಿಕೊಡುವಷ್ಟು ಅವರ ಶಬ್ದ ಸಂಪತ್ತು ಶಕ್ತವಾಗಿತ್ತು. ರಂಗಭೂಮಿ ಖ್ಯಾತಿಯ ಮಹಮ್ಮದ್ ಪೀರ್ ಅವರಿಗಾಗಿ ಒಂದೇ ರಾತ್ರಿಯಲ್ಲಿ ಭಕ್ತ ಮಾರ್ಕಂಡೇಯ ನಾಟಕವನ್ನು ಬರೆದು ಮುಗಿಸಿದ ಶಾಸ್ತ್ರಿಗಳು ಪೀರ್ ಸಾಹೇಬರನ್ನು ನಿಬ್ಬೆರಗಾಗಿಸಿದ ನಿದರ್ಶನವೂ ಇದೆ.ಇವರು ತಮ್ಮ ೭೯ನೆಯ ವಯಸ್ಸಿನಲ್ಲಿ (೨೧ ಜೂನ್ ೧೯೬೧) ನಿಧನರಾದರು.

**ನರಸಿಂಹರಾಜು ಟಿ.ಆರ್ (೧೯೨೬–೭೯):** ತುಮಕೂರು ಜಿಲ್ಲೆ ತಿಪಟೂರಿನಲ್ಲಿ ಇವರ ಜನನ, ತಂದೆ ರಾಮರಾಜು ಪೋಲೀಸ್ ಪೇದೆಯಾಗಿದ್ದರು. ಕನ್ನಡ ಚಿತ್ರರಂಗದಲ್ಲಿ ಸಹಜ ಹಾಸ್ಯದ ಛಾಪನ್ನು ಮೂಡಿಸಿದ ಕಲಾವಿದ. ಸಿ.ಬಿ.ಮಲ್ಲಪ್ಪನವರ ಶ್ರೀ ಚಂದ್ರಮೌಳೇಶ್ವರ ನಾಟಕ ಮಂಡಲಿ ಮೂಲಕ ಬಾಲನಟರಾಗಿ ರಂಗಭೂಮಿ ಪ್ರವೇಶ. ಶಾಲೆಯ ಮೆಟ್ಟಲನ್ನೇ ಹತ್ತದೇ ಇವರು ಅಕ್ಷರ ಕಲಿತವರು. ಸ್ವಂತ ನಾಟಕ ಸಂಸ್ಥೆ ಕಟ್ಟಿ ನಂತರ ಹಲವಾರು ನಾಟಕ ಸಂಸ್ಥೆಗಳಲ್ಲಿ ಅಭಿನಯಿಸಿ ಕೊನೆಗೆ ಗುಬ್ಬಿ ಕಂಪನಿ ಸೇರಿದರು. ಗುಬ್ಬಿ ಸಂಸ್ಥೆ ತೆರೆಗೆ ತಂದ ಬೇಡರ ಕಣ್ಣಪ್ಪ(೧೯೫೪) ಚಿತ್ರದ ಮೂಲಕ ಚಲನಚಿತ್ರರಂಗ ಪ್ರವೇಶಿಸಿದರು. ಕನ್ನಡ ಚಲನಚಿತ್ರಗಳಲ್ಲಿ ನಾಯಕನಷ್ಟೇ ಅಲ್ಲ ಹಾಸ್ಯ ನಟನೂ ಪ್ರಮುಖ ಎಂಬುದನ್ನು ಸಾಧಿಸಿ ತೋರಿಸಿದವರು. ಇವರ ಕಾಲ್ ಶೀಟ್ ದೊರಕಿದ ನಂತರವೇ ರಾಜಕುಮಾರ್ ಕಾಲ್‌ಶೀಟ್ ಕೊಡುತ್ತಿದ್ದರಂತೆ. ನಕ್ಕರೇ ಅದೇ ಸ್ವರ್ಗ ಅವರ ೧೦೦ನೆಯ ಚಿತ್ರ. ಬೆಂಗಳೂರು ಮೈಲ್, ಸ್ಕೂಲ್ ಮಾಸ್ಟರ್, ರತ್ನಮಂಜರಿ, ಸತ್ಯಹರಿಶ್ಚಂದ್ರ, ಹೇಮರೆಡ್ಡಿ ಮಲ್ಲಮ್ಮ, ಬ್ಲಾಕ್ ಮಾರ್ಕೆಟ್, ಪ್ರೊ.ಹುಚ್ಚೂರಾಯ (ಇವರೇ ನಿರ್ಮಿಸಿದ ಚಿತ್ರ) ಮುಂತಾದ ೧೭೦ ಚಿತ್ರಗಳಲ್ಲಿ ಅಭಿನಯಿಸಿದ ನರಸಿಂಹರಾಜು ಆರೋಗ್ಯಕರ ಹಾಸ್ಯ ಸನ್ನಿವೇಶಗಳ ನೆನಪನ್ನು ಕನ್ನಡಿಗರಿಗೆ ಬಿಟ್ಟು ಹೋಗಿದ್ದಾರೆ. ಕಲಾರಸಿಕರು ಮೆಚ್ಚಿ ಇವರಿಗೆ 'ಹಾಸ್ಯ ಚಕ್ರವರ್ತಿ' ಎಂಬ ಬಿರುದನ್ನು ನೀಡಿ ಗೌರವಿಸಿದ್ದಾರೆ. ಇವರು ತಮ್ಮ ೫೩ನೇ ವಯಸ್ಸಿನಲ್ಲಿ ೧೯೭೯ ಜುಲೈ ೧೧ರಂದು ನಿಧನರಾದರು. ಇವರ ಪುತ್ರಿ ಸುಧಾ ನರಸಿಂಹರಾಜು ಕೂಡ ಚಲನಚಿತ್ರ ಕಲಾವಿದೆ.

**ನಾಜರೆ–ನಾರಾಯಣ್:** ಇವರು ಹುಟ್ಟಿದ್ದು ತುಮಕೂರಿನಲ್ಲಿ. ನಾಲ್ಕನೇ ತರಗತಿಯವರೆಗೂ ಓದಿ ಜೀವನೋಪಾಯಕ್ಕಾಗಿ ಬೆಂಗಳೂರಿಗೆ ಬಂದರು. ಬೆಂಗಳೂರಿನಲ್ಲಿ ನಜರೆ ಟೈಲರ್ಸ್ ಎಂಬ ಚಿಕ್ಕದೊಂದು ಅಂಗಡಿಯನ್ನು

ಪ್ರಾರಂಭಿಸಿದರು. ನಂತರ ನಜರೆ ಟೆಕ್ಸ್‌ಟೈಲ್ಸ್ ಎಂದು ಪರಿವರ್ತನೆಗೊಂಡಿತು. ಗಾಂಧಿನಗರದ ಚಿತ್ರರಂಗದ ಮಂದಿಯ ಪರಿಚಯವಾಯಿತು. ರಾಜಕುಮಾರ್ ಅವರ ನಾಯಕತ್ವದ ಭಾಗ್ಯದ ಬಾಗಿಲು ಚಿತ್ರದಲ್ಲಿ ಕಾಸ್ಟೂಮ್ ಡಿಸೈನರ್ ಆಗಿ ಚಿತ್ರರಂಗ ಪ್ರವೇಶಿಸಿದರು. ಗಂಧದಗುಡಿ, ಎರಡು ಕನಸು, ನಾಗರಹಾವು, ಬೆಸುಗೆ, ಮಾನಸ ಸರೋವರ ಮೊದಲಾದ ಚಿತ್ರಗಳಿಗೆ ವಸ್ತ್ರವಿನ್ಯಾಸಕರಾಗಿ ಕಾರ್ಯನಿರ್ವಹಿಸಿದ್ದಾರೆ. ನಿರ್ಮಾಪಕರಾಗಿ ೧೯೭೮ರಲ್ಲಿ ಅಮರನಾಥ್ ಚಿತ್ರವನ್ನು ನಿರ್ಮಿಸಿ ಅಂಬರೀಷ್ ಅವರನ್ನು ನಾಯಕನನ್ನಾಗಿ ಮಾಡಿದರು. ನಂತರದ ದಿನಗಳಲ್ಲಿ ಚಕ್ರವರ್ತಿ, ಕಾಳಿಂಗಸರ್ಪ ಮುಂತಾದ ಚಿತ್ರಗಳಿಗೆ ಹಂಚಿಕೆದಾರರಾಗಿದ್ದರು.

**ಬಸವರಾಜ್ ಬಿ.ಎಸ್:** ಅವರು ೧೯೪೧ರಲ್ಲಿ ತಿಪಟೂರಿನಲ್ಲಿ ಜನಿಸಿದರು. ಬಿ.ಎಸ್.ಸಿ., ಪದವಿಯೊಂದಿಗೆ ಛಾಯಾಗ್ರಹಣದಲ್ಲಿ ಡಿಪ್ಲೊಮಾ ಪಡೆದು ೧೯೬೩ರಲ್ಲಿ ಚಿತ್ರರಂಗ ಪ್ರವೇಶಿಸಿ ಖ್ಯಾತ ಛಾಯಾಗ್ರಾಹಕರಾದ ವಿ.ಕೆ ಮೂರ್ತಿ ಹಾಗೂ ರಾಜೇಂದ್ರ ಮೆಲೋಸ್ ರವರ ಬಳಿ ಸಹಾಯಕರಾಗಿ ದುಡಿದರು. ನಂತರ ಮತ್ತೊಬ್ಬ ಖ್ಯಾತ ಛಾಯಾಗ್ರಾಹಕ ಡಿ.ವಿ.ರಾಜಾರಾಂ ಅವರ ಬಳಿ ಆರು ವರ್ಷಗಳ ಕಾಲ ಸಹಾಯಕರಾಗಿದ್ದರು. ೧೯೭೮ರಲ್ಲಿ ಒರಿಯಾ ಚಿತ್ರ 'ಹೀರಾ ಮೋತಿ ಔರ್ ಮಾಣಿಕ್ಯ' ಚಿತ್ರದಲ್ಲಿ ಸ್ವತಂತ್ರ ಛಾಯಾಗ್ರಾಹಕರಾದರು. 'ಅಂದದ ಅರಮನೆ' ಚಿತ್ರದಿಂದ ಕನ್ನಡ ಚಿತ್ರರಂಗ ಪ್ರವೇಶಿಸಿ ಅಮೃತ ಘಳಿಗೆ, ಮಾನಸ ಸರೋವರ, ರಾವಣ ರಾಜ್ಯ, ನೆನಪಿನ ದೋಣಿ, ಉದ್ಭವ, ಬಾ ನನ್ನ ಪ್ರೀತಿಸು, ಕಾವ್ಯ, ನೀ ಮುಡಿದಾ ಮಲ್ಲಿಗೆ, ಅಣ್ಣಾವ್ರ ಮಕ್ಕಳು ಮೊದಲಾದ ಚಿತ್ರಗಳಿಗೆ ಛಾಯಾಗ್ರಹಣ ಮಾಡಿದ್ದಾರೆ. ೧೯೮೩-೮೪ರಲ್ಲಿ ಅಮೃತ ಘಳಿಗೆ ಚಿತ್ರದ ಛಾಯಾಗ್ರಹಣಕ್ಕಾಗಿ ರಾಜ್ಯ ಸರ್ಕಾರದ ಶ್ರೇಷ್ಠ ಛಾಯಾಗ್ರಾಯಕ ಪ್ರಶಸ್ತಿಯನ್ನು ರಾಜ್ಯ ಸರ್ಕಾರದಿಂದ ಪಡೆದಿದ್ದಾರೆ.

**ಮಂಜುಳಾ (೧೯೫೧-೮೬):** ೧೯೫೧ರಲ್ಲಿ ತುಮಕೂರು ಜಿಲ್ಲೆಯ ಹೊನ್ನೇನಹಳ್ಳಿಯಲ್ಲಿ ಜನಿಸಿದರು. ತಂದೆ ಶಿವಣ್ಣ. ಪೋಲಿಸ್ ಸಬ್ ಇನ್ಸ್‌ಪೆಕ್ಟರ್. ಚಿತ್ರಗಳಿಗೆ ಜೀವಕಳೆ ತುಂಬಿ ಅಭಿನಯಿಸುತ್ತಿದ್ದ ನಾಯಕಿ ನಟಿ. ಬಾಲ್ಯದಲ್ಲೇ ನಾಟ್ಯಾಭ್ಯಾಸ ಮಾಡಿ ಪ್ರಭಾತ್ ಕಲಾವಿದರ ಸಂಸ್ಥೆ ಸೇರಿದರು. ಸಿ.ವಿ.ಶಿವಶಂಕರ್ ತಮ್ಮ 'ಮನೆಕಟ್ಟಿ ನೋಡು' ಚಿತ್ರದಲ್ಲಿ ಬಾಲನಟಿಯಾಗಿ ಅಭಿನಯಿಸುವ ಅವಕಾಶ ನೀಡಿದರು. ಯಾರ ಸಾಕ್ಷಿ ಚಿತ್ರದಲ್ಲಿ ನಾಯಕಿಯಾಗಿ ಅಭಿನಯಿಸಿದರು. ಎರಡು ಕನಸು ಚಿತ್ರದ ಮೂಲಕ ಜನಪ್ರಿಯಗೊಂಡ ಇವರು ಸಂಪತ್ತಿಗೆ ಸವಾಲ್ ಚಿತ್ರದಲ್ಲಿ ಗಯ್ಯಾಳಿಯಾಗಿ ಅಭಿನಯಿಸಿ ಚಿತ್ರರಂಗದಲ್ಲಿ ಭದ್ರಗೊಂಡರು. ರಾಜಕುಮಾರ್ ಅವರೊಂದಿಗೆ ಹಲವಾರು ಚಿತ್ರಗಳಲ್ಲಿ ನಟಿಸಿ, ಶ್ರೀನಾಥ್ ಅವರೊಂದಿಗೆ ಜನಪ್ರಿಯ ಜೋಡಿಯಾದರು. ಇವರ ಅಭಿನಯದ ಯಶಸ್ವೀ ಚಿತ್ರಗಳ ಬಹುದೊಡ್ಡ ಪಟ್ಟಿಯೇ ಇದೆ. ವೈವಿಧ್ಯಮಯ ಪಾತ್ರಗಳು ಆಕೆಗೆ ದೊರೆತವು. 'ಸೀತಾರಾಮು' ಮಂಜುಳಾರ ನೆನಪನ್ನು ಹಸಿರಾಗಿರಿಸಿದ ಚಿತ್ರ. ಚಲನಚಿತ್ರ ನಿರ್ದೇಶಕ ಅಮೃತಂ ಅವರ ಕೈ ಹಿಡಿದು ಗೃಹಿಣಿಯಾಗಿ ಜೀವನ ನಡೆಸಿದರು. ಬೆಂಕಿ ಆಕಸ್ಮಿಕಕ್ಕೀಡಾಗಿ ತಮ್ಮ ೩೫ನೇ ವಯಸ್ಸಿನಲ್ಲಿ ೧೨-೦೯-೧೯೮೬ರಲ್ಲಿ ನಿಧನರಾದರು.

ಅಣ್ಣ-ತಂಗಿ, ಮನಮೆಚ್ಚಿದ ಮಡದಿ, ಪ್ರೇಮಜ್ವಾಲೆ ಮುಂತಾದ ಸುಮಾರು ೫೦ ಚಿತ್ರಗಳಲ್ಲಿ ಅಭಿನಯಿಸಿರುವ ಚಿಕ್ಕನಾಯಕನಹಳ್ಳಿ ಈಶ್ವರಪ್ಪ, ಬೀಸಿದ ಬಲೆ, ಕರಿಮಾಯಿ ಮುಂತಾದ ಚಿತ್ರಗಳಲ್ಲಿ ಅಭಿನಯಿಸಿದ ಮಧುಗಿರಿ ತಾಲೂಕು ಗರಣಿಯ ಜಿ.ಮೈಲಾರಿರಾವ್ ವೃತ್ತಿಯಲ್ಲಿ ಪ್ರೌಢಶಾಲಾ ಮುಖ್ಯೋಪಾಧ್ಯಾಯರಾಗಿದ್ದು ಕೀರ್ತನಕಾರರಾಗಿ ಪ್ರಥಮಬಾರಿ ತಯಾರಾದ 'ಪುರಂದರ ದಾಸರು' ಕನ್ನಡ ಚಿತ್ರದಲ್ಲಿ ದಾಸರ ಪಾತ್ರ ವಹಿಸಿದ್ದರು. ಜಿ.ಕೃಷ್ಣಸ್ವಾಮಯ್ಯಂಗಾರ್, ಹೋಟೆಲ್ ಉದ್ಯಮದಲ್ಲಿದ್ದರೂ ಕಲೆಯತ್ತ ವಾಲಿದ ಕುಣಿಗಲ್ ರಾಮನಾಥ್ ಸುಮಾರು ೨೦ಕ್ಕೂ ಹೆಚ್ಚಿನ ಚಿತ್ರಗಳಲ್ಲಿ ಪೋಷಕ ನಟರಾಗಿ ಅಭಿನಯಿಸಿದ್ದಾರೆ. ಗುಬ್ಬಿ ಕಂಪನಿಯ ಕಲಾವಿದರಾಗಿದ್ದ ಗುಬ್ಬಿಯ ಜಿ.ವಿ.ರಂಗಪ್ಪನವರ ಮಗನಾದ ಚಿನ್ನಸ್ವಾಮಿ ಮಯೂರ, ಪರಸಂಗದ ಗೆಂಡೆತಿಮ್ಮ, ಬಡವರ ಬಂಧು, ಕಾವೇರಿ ಮೊದಲಾದ ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ವಸ್ತ್ರಾಲಂಕಾರದಲ್ಲಿ ಸಹಾಯಕರಾಗಿ ಕೆಲಸ ಮಾಡಿರುವರು.

ಕೊರಟಗೆರೆಯ ಸುಕುಮಾರ್ ಭಲೇ ಭಟ್ಟ ಚಿತ್ರದಲ್ಲಿ ಅಭಿನಯಿಸಿದ್ದು, ಬಂಗಾರದ ಜಿಂಕೆ ಚಿತ್ರ ನಿರ್ಮಿಸಿದ್ದರು. ಕರ್ನಾಟಕ ರಾಜ್ಯದ ಮಾಜಿಮಂತ್ರಿ ದಿವಂಗತ ಚನ್ನಿಗರಾಮಯ್ಯನವರ ಪುತ್ರ ರಾಜವರ್ಧನ್ ಸಂಘರ್ಷ ಚಿತ್ರದಲ್ಲಿ

ನಾಯಕನಾಗಿ ಅಭಿನಯಿಸಿದ್ದರು, 'ಕಾಲೇಜುರಂಗ'ದಲ್ಲಿ ಅಭಿನಯಿಸಿದ ಚಲಪತಿ, ಚರ್ಮ ಅಭಿವೃದ್ಧಿ ಕಾರ್ಪೋರೇಷನ್ ಅಧ್ಯಕ್ಷರಾಗಿದ್ದ ಹೆಸರಾಂತ ಆಡಿಟರ್ ಗುಂಡೂರಾವ್, ಚಿರಂಜೀವಿ ಹಾಗೂ ತ್ರಿವೇಣಿ ಮುಂತಾದ ಚಿತ್ರಗಳಲ್ಲಿ ಅಭಿನಯಿಸಿದ ಗುಬ್ಬಿವೀರಣ್ಣನವರ ಮಗನಾದ ಜಿ.ವಿ.ಶಿವಾನಂದ್, ಮೊಮ್ಮಗನಾದ ಮಾಸ್ಟರ್ ನಟರಾಜ್, ಬಾಲನಟನಾಗಿ ಅಭಿನಯಿಸಿದ ಮೊದಲ ಚಿತ್ರಕ್ಕೆ ಪ್ರಶಸ್ತಿ ಪಡೆದಿದ್ದನು. ರಾಣಿ ಪಾರ್ಟ್ ರಂಗಪ್ಪನವರ ಮಗನಾದ ಅಶ್ವತ್ಥನಾರಾಯಣ್ ಚಂದವಳ್ಳಿಯ ತೋಟ ಚಿತ್ರದಲ್ಲಿ ಸುಬ್ಬಾಭಟ್ಟನ ಪಾತ್ರ ಅಭಿನಯಿಸಿದ್ದರು. ಪೋಸ್ಟ್ ಮಾಸ್ಟರ್, ತ್ರಿವೇಣಿ ಮೊದಲಾದ ಚಿತ್ರಗಳಲ್ಲಿ ನಟಿಸಿದ್ದ ಸಿ.ಜಿ.ಸತ್ಯನಾರಾಯಣ್ ಆರೋಗ್ಯ ಇಲಾಖೆ ನೌಕರರಾಗಿದ್ದು, ಸರ್ಕಾರಿ ನೌಕರರ ಸಂಘದ ಜಿಲ್ಲಾ ಅಧ್ಯಕ್ಷರಾಗಿದ್ದರು. ಕೊರಟಗೆರೆಯ ಮಯೂರ ಗೋವಿಂದರಾಜು ಈ ಕ್ಷೇತ್ರದಲ್ಲಿದ್ದಾರೆ. 'ಒಂದೇ ಬಳ್ಳಿಯ ಹೂವುಗಳು' ಚಿತ್ರದಲ್ಲಿ ಗುಬ್ಬಿ ವೀರಣ್ಣನವರ ಕಿರಿಯ ಮಗ ಜಿ.ವಿ.ಶಿವರಾಜ್ ನಟಿಸಿದ್ದರು.

ರಾಜಾಶಂಕರ್ ಮಧುಗಿರಿಯವರು. ದಶಾವತಾರ ಚಿತ್ರದಲ್ಲಿ ಕೃಷ್ಣನ ಪಾತ್ರದ ಮೂಲಕ ಚಿತ್ರರಂಗ ಪ್ರವೇಶಿಸಿ ಅಬ್ಬಾ ಆ ಹುಡುಗಿ, ಜಾಣರ ಜಾಣ, ಕಿತ್ತೂರ ಚನ್ನಮ್ಮ, ಸಂತ ತುಕಾರಾಂ, ಶ್ರೀನಿವಾಸ ಕಲ್ಯಾಣ ಮುಂತಾದ ೫೦ಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿದ್ದಲ್ಲದೇ ಬಂಗಾರದ ಪಂಜರ ಎಂಬ ಚಿತ್ರ ತಯಾರಿಸಿದ್ದರು. ಮೂಲತ: ಮಧುಗಿರಿಯವರೇ ಆಗಿದ್ದ ಶಕ್ತಿಪ್ರಸಾದ್ ಒಂದು ರೀತಿ ಖಳನಾಯಕ, ಪೋಷಕನಟನ ಪಾತ್ರಗಳನ್ನು ಮಾಡುತ್ತಿದ್ದರು. ಕಂಚಿನಕಂಠದ ಇವರು ಫೈಟಿಂಗ್ನಲ್ಲಿ ಎತ್ತಿದ ಕೈ. ಇವರ ಪುತ್ರರಾದ ಅರ್ಜುನ್ ಸರ್ಜಾ ಮುಂತಾದವರು ಇಂದು ಕನ್ನಡ ಹಾಗೂ ತಮಿಳು ಚಿತ್ರರಂಗದಲ್ಲಿ ಮಿನುಗುತ್ತಿದ್ದಾರೆ.

ಬಂಗಾರದ ಮನುಷ್ಯ ಖ್ಯಾತಿಯ ಸಿದ್ಧಲಿಂಗಯ್ಯ ಅವರು ಹುಟ್ಟಿದ್ದು ಡಿಸೆಂಬರ್ ೧೫, ೧೯೩೬ರಂದು ಜಿಲ್ಲೆಯ ಶಿರಾ ತಾಲೂಕಿನ ತರೂರು ಎಂಬ ಹಳ್ಳಿಯ ರೈತ ಕುಟುಂಬದಲ್ಲಿ ಇವರ ತಾತ ಮತ್ತು ಸೋದರ ಮಾವ ಆ ದಿನಗಳಲ್ಲಿ ಖ್ಯಾತ ರಂಗಭೂಮಿ ನಟರಾಗಿದ್ದರು. ಹಾಗಾಗಿ ಸಿದ್ಧಲಿಂಗಯ್ಯನವರಿಗೆ ಚಿಕ್ಕಂದಿನಿಂದಲೇ ನಟನಾಗುವ ಬಯಕೆ ಹುಟ್ಟಿತು. ಕನ್ನಡ ಚಿತ್ರರಂಗದಲ್ಲಿ ಚಿರಸ್ಥಾಯಿಯಾಗಿ ನಿಲ್ಲುವ ಕೆಲವೇ ಹೆಸರುಗಳಲ್ಲಿ ನಿರ್ದೇಶಕ ಸಿದ್ಧಲಿಂಗಯ್ಯನವರದೂ ಒಂದು. ಪ್ರಾಥಮಿಕ ವಿದ್ಯಾಭ್ಯಾಸದ ನಂತರ ಮನೆಯವರಿಂದಲೇ ಮುಂದಿನ ಓದಿಗೆ ಅಡ್ಡಿ ಬಂತು. ಮನಸ್ಸಿನೊಳಗೆ ಹುದುಗಿದ್ದ ನಟನಾಗುವ ಬಯಕೆಯಿಂದ ಇವರು ಮನೆಬಿಟ್ಟು ಮೈಸೂರಿಗೆ ಹೋದರು. ೧೯೫೨-೫೩ ನವಜ್ಯೋತಿ ಸ್ಟುಡಿಯೋದಲ್ಲಿ ಲೈಟ್‌ಬಾಯ್ ಆಗಿ ಬಡ್ತಿ, ಕೊನೆಗೆ ನಿರ್ಮಾಪಕ-ನಿರ್ದೇಶಕ ಶಂಕರ್ ಸಿಂಗ್ ಬಳಿ ಸಹಾಯಕ ನಿರ್ದೇಶಕರಾಗಿ ದುಡಿದರು. ಸಿದ್ಧಲಿಂಗಯ್ಯನವರಿಗೆ ಬೇರೆ ಭಾಷೆಗಳನ್ನು ಕಲಿಯುವುದರಲ್ಲಿ ಹೆಚ್ಚು ಆಸಕ್ತಿ ಇದ್ದು ತೆಲುಗು, ತಮಿಳು ಭಾಷೆಗಳನ್ನು ಓದಿ ಬರೆಯಲು ಕಲಿತರು. ನಂತರ ಮದರಾಸಿಗೆ ಹೋಗಿ ಬಿ.ವಿಠಲಾಚಾರ್ಯರ ಬಳಿ ತೆಲುಗು, ಕನ್ನಡ ಸಿನೆಮಾಗಳಿಗೆ ಸಹಾಯಕ ನಿರ್ದೇಶಕರಾಗಿ ದುಡಿದರು. ನಟನಾಗುವ ಆಸೆ ಬಿಟ್ಟು, ನಿರ್ದೇಶಕನಾಗಲು ನಿರ್ಧರಿಸಿ ಚಿತ್ರರಂಗದ ವಿವಿಧ ವಿಭಾಗಗಳ ನಿಕಟ ಪರಿಚಯ ಮಾಡಿಕೊಂಡರು. ೧೯೬೯ರಲ್ಲಿ ದ್ವಾರಕೀಶ್ ನಿರ್ಮಿಸಿದ ಮೇಯರ್ ಮುತ್ತಣ್ಣ, ಇವರ ಪ್ರಥಮ ನಿರ್ದೇಶನದ ಚಿತ್ರ. ಈ ಚಿತ್ರ ಗಳಿಸಿದ ದೊಡ್ಡ ಯಶಸ್ಸು ಸಿದ್ಧಲಿಂಗಯ್ಯನವರ ಭವಿಷ್ಯಕ್ಕೆ ಭದ್ರವಾದ ಅಡಿಪಾಯ ಹಾಕಿತು. ೧೯೭೨ರಲ್ಲಿ ಸಿದ್ಧಲಿಂಗಯ್ಯ ಅವರು ಕನ್ನಡ ಚಿತ್ರರಂಗದ ಮೈಲಿಗಲ್ಲುಗಳಲ್ಲಿ ಒಂದಾದ ಬಂಗಾರದ ಮನುಷ್ಯ ನಿರ್ದೇಶಿಸಿ ತಮ್ಮ ಅಸಾಮಾನ್ಯ ಪ್ರತಿಭೆ ತೋರಿದರು. ಆ ಚಿತ್ರ ಬೆಂಗಳೂರಿನಲ್ಲಿ ಸತತವಾಗಿ ಎರಡು ವರ್ಷ ಕಾಲ ಪ್ರದರ್ಶಿತವಾಗಿ ಹೊಸ ದಾಖಲೆ ಮಾಡಿತಲ್ಲದೇ, ೧೯೭೧-೭೨ ರ ದ್ವಿತೀಯ ಅತ್ಯುತ್ತಮ ಚಿತ್ರವಾಗಿ ರಾಜ್ಯ ಪ್ರಶಸ್ತಿ ಪಡೆಯಿತು. ಈ ಚಿತ್ರ ಕನ್ನಡ ಚಿತ್ರರಂಗದಲ್ಲಿ ಇಂದಿಗೂ ಧ್ರುವತಾರೆಯಾಗಿದೆ. ಭೂತಯ್ಯನ ಮಗ ಅಯ್ಯು ಇವರ ಮತ್ತೊಂದು ಶ್ರೇಷ್ಠ ಚಿತ್ರ. ಈ ಚಿತ್ರದ ಪ್ರವಾಹದ ದೃಶ್ಯಗಳನ್ನು ಸೆರೆ ಹಿಡಿಯುವುದರಲ್ಲಿ ಅವರು ತೋರಿದ ತಾಂತ್ರಿಕ ಕೌಶಲ್ಯ ಇಂದಿಗೂ ಮನೆಮಾತಾಗಿದೆ. ಸಿದ್ಧಲಿಂಗಯ್ಯನವರು ಅನೇಕ ಪ್ರತಿಭೆಗಳನ್ನು ಕನ್ನಡ ಚಿತ್ರರಂಗಕ್ಕೆ ಪರಿಚಯಿಸಿದ್ದಾರೆ. ಇದುವರೆಗೆ ೨೩ ಚಿತ್ರಗಳನ್ನು ನಿರ್ದೇಶಿಸಿದ್ದಾರೆ. ಅವುಗಳಲ್ಲಿ ಪ್ರಮುಖವಾದವು – ನಮ್ಮ ಸಂಸಾರ, ತಾಯಿ ದೇವರು, ನ್ಯಾಯವೇ ದೇವರು, ದೂರದ ಬೆಟ್ಟ, ಹೇಮಾವತಿ, ಬಿಳಿಗಿರಿಯ ಬನದಲ್ಲಿ, ಪ್ರೇಮಪರ್ವ ಮತ್ತು ಬಾ ನನ್ನ ಪ್ರೀತಿಸು ಮುಂತಾದವು. ತಮ್ಮ ಮಗ ಮುರಳಿಯನ್ನು ನಾಯಕನನ್ನಾಗಿ ಮಾಡಿದರು. ಪ್ರೇಮಪರ್ವ, ಪ್ರೇಮಗಂಗೆ, ಅಜೇಯ, ಸಂಭವಾಮಿ ಯುಗೇ ಯುಗೇ, ಬಾರೆ ನನ್ನ ಮುದ್ದಿನ ರಾಣಿ, ಭೂತಾಯಿ ಮಕ್ಕಳು, ಪ್ರೇಮ ಪ್ರೇಮ ಪ್ರೇಮ ಚಿತ್ರಗಳನ್ನು ನಿರ್ಮಿಸಿದರು. ತಮ್ಮ ಪ್ರತಿ ಚಿತ್ರದ

ಅಂತ್ಯದಲ್ಲಿಯೂ ಸಿದ್ಧಲಿಂಗಯ್ಯನವರು ಪ್ರೇಕ್ಷಕರಿಗೆ ಯಾವುದಾದರೊಂದು ಸಂದೇಶವನ್ನು ನೀಡಲು ಪ್ರಯತ್ನಿಸುವುದು ವಾಡಿಕೆ. ಹೊಸ ಕಲಾವಿದರನ್ನು ಚಿತ್ರರಂಗಕ್ಕೆ ಕೊಟ್ಟರು. ಕನ್ನಡ ಚಿತ್ರರಂಗಕ್ಕೆ ಇವರು ಸಲ್ಲಿಸಿರುವ ಸೇವೆಗಾಗಿ ಇವರಿಗೆ ರಾಜ್ಯ ಸರ್ಕಾರ (೧೯೯೩-೯೪)ರಲ್ಲಿ ಪುಟ್ಟಣ್ಣ ಕಣಗಾಲ್ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

**ಮಾಸ್ಟರ್ ಹಿರಣ್ಣಯ್ಯ:** ಇವರು ಜನಿಸಿದ್ದು ೧೫-೦೨-೧೯೩೫ರಂದು ತುರುವೇಕೆರೆ ತಾಲೂಕು, ಕಣತೂರು ಗ್ರಾಮದಲ್ಲಿ ಕನ್ನಡದ ಖ್ಯಾತ ರಂಗಭೂಮಿ ನಟ, ವೃತ್ತಿರಂಗಭೂಮಿಯಲ್ಲಿ ಸಾಮಾಜಿಕ ನಾಟಕಗಳಿಗೆ ಹೊಸ ಆಯಾಮವನ್ನು ತಂದುಕೊಟ್ಟ ಬಹುಮುಖಿ ಕೆ.ಹಿರಣ್ಣಯ್ಯನವರ ಪುತ್ರ. ಇವರ ಸಂಭಾಷಣೆಗಳಿಗೆ ಕತ್ತಿಯ ಅಲುಗಿನ ಹರಿತವಿದೆ. ಪ್ರಚಂಡವೆನಿಸುವ ಸಮಯ ಸ್ಫೂರ್ತಿಯಿದೆ. ಸಮಾಜದ ಓರೆಕೋರೆಗಳನ್ನು ನಿರ್ದಾಕ್ಷಿಣ್ಯವಾಗಿ ಹೊರಹಾಕುವ ವಿಶೇಷ ಸಾಮರ್ಥ್ಯವಿದೆ. ತಂದೆ ಹಿರಣ್ಣಯ್ಯನವರು ನಿಧನರಾದಾಗ ಕಾಲೇಜು ವ್ಯಾಸಂಗ ನಿಲ್ಲಿಸಿ ನಾಟಕ ಕಂಪನಿಯ ಚುಕ್ಕಾಣಿ ಹಿಡಿದರು. ತಂದೆ ಹಿರಣ್ಣಯ್ಯನವರು ನಿರ್ಮಿಸಿದ ವಾಣಿ ಚಿತ್ರದಲ್ಲಿ ಬಾಲನಟರು, ಪಂತುಲು ಅವರ ಪದ್ಮಿನಿ ಸಂಸ್ಥೆಯಲ್ಲಿ ಸಹ ನಿರ್ದೇಶಕರಾಗಿ ಅನುಭವ. ತಂದೆಯವರ ಖ್ಯಾತ ನಾಟಕ ದೇವದಾಸಿ ೧೯೭೮ರಲ್ಲಿ ತೆರೆಗೆ ಬಂದಾಗ ಅದರ ಸಾಹಿತ್ಯವನ್ನು ತಾವೇ ರಚಿಸಿ ಚಿತ್ರದಲ್ಲಿ ಪ್ರಮುಖ ಪಾತ್ರವನ್ನೂ ನಿರ್ವಹಿಸಿದರು. ಆನಂದ ಸಾಗರ, ಋಣಮುಕ್ತಳು, ಚಿತ್ರಗಳಲ್ಲಿ ಅಭಿನಯಿಸಿದರು. ಸಂಪ್ರದಾಯ ಚಿತ್ರವನ್ನು ತಾವೇ ನಿರ್ದೇಶಿಸಿದರು. ದೇಶ ವಿದೇಶ ಸುತ್ತಿ ಕನ್ನಡ ರಂಗಭೂಮಿಯ ಚಟುವಟಿಕೆಗಳನ್ನು ಅಲ್ಲಿಗೂ ವಿಸ್ತರಿಸಿದ ಸಾಹಸಿ. ಡಾ.ಗುಬ್ಬಿ ವೀರಣ್ಣ ಪ್ರಶಸ್ತಿ, ಶಂಕರೇಗೌಡ ಪ್ರಶಸ್ತಿ, ರಾಜ್ಯ ಪ್ರಶಸ್ತಿಯೂ ಸೇರಿದಂತೆ ಹಲವಾರು ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ.

**ಆರ್.ಆರಾಧ್ಯ:** ಇವರು ಪ್ರತಿಭಾವಂತ ಛಾಯಾಗ್ರಾಹಕ. ತುಮಕೂರಿನವರು. ಅಭಿಮಾನ್ ಸ್ಟುಡಿಯೋದಲ್ಲಿ ಕ್ಯಾಮರಾಮನ್ ಸಹಾಯಕನಾಗಿ ಕೆಲಸಕ್ಕೆ ಸೇರಿದರು. ಹೆಚ್.ಜಿ.ರಾಜು ಬಳಿ ಸಹಾಯಕರಾಗಿ ಒಂಬತ್ತು ವರ್ಷಗಳ ಕಾಲ ದುಡಿಮೆ. 'ಮಿಂಚಿನ ಓಟ' ಇವರು ಸಹಾಯಕರಾಗಿ ಕೆಲಸ ಮಾಡಿದ ಚಿತ್ರ. ಸ್ವತಂತ್ರ ಛಾಯಾಗ್ರಾಹಕರಾಗಿ ೧೯೯೨ ರಲ್ಲಿ ಪರಿಚಿತರಾದ ಇವರು ಹಲವಾರು ಸಾಕ್ಷ್ಯ ಚಿತ್ರಗಳಿಗೆ ಛಾಯಾಗ್ರಹಣ ನೀಡಿದ್ದಾರೆ. ಭಲೇ ಕೇಶವ, ಮರ್ಡರ್, ಹೆತ್ತವಳ ಕೂಗು, ವಿಜಯಕಂಕಣ, ತಾಯಿಯ ಋಣ, ಕಡ್ಡಿಮಟ್ಟಿ ಸ್ಟೇಷನ್‌ಮಾಸ್ಟರ್, ಮೈಸೂರು ಹುಲಿ, ನಾಗರಿಕ ಮೊದಲಾದ ಚಿತ್ರಗಳಲ್ಲಿ ಛಾಯಾಗ್ರಾಹಕರಾಗಿ ಕಾರ್ಯನಿರ್ವಹಿಸಿದ್ದಾರೆ.

**ಆಶಾಲತಾ** ಅವರಿಗೆ ರಂಗಭೂಮಿ ನಂಟಿನಿಂದ ರಕ್ತಗತವಾಗಿ ಬಂದಿದ್ದ ಅಭಿನಯ ಕಲೆ ಚಿತ್ರರಂಗಕ್ಕೆ ಕರೆತಂದಿತು. ಗುಬ್ಬಿ ವೀರಣ್ಣನವರ ಮನೆತನಕ್ಕೆ ಸೇರಿದ ಇವರು ಬಿ.ಆರ್.ಪಂತುಲು ಅವರ ಶ್ರೀಕೃಷ್ಣದೇವರಾಯ ಚಿತ್ರದಲ್ಲಿ ಬಾಲನಟಿಯಾಗಿ ಪ್ರವೇಶಿಸಿದರು. ನಾಗ ಕಾಳ ಭೈರವ, ಭೂಮಿಗೆ ಬಂದ ಭಗವಂತ, ಆಹುತಿ, ಊರ್ವಶಿಕಲ್ಯಾಣ, ಋಣಮುಕ್ತಳು ಮೊದಲಾದ ಅನೇಕ ಚಿತ್ರಗಳಲ್ಲಿ ಪೋಷಕನಟಿಯಾಗಿ ಅಭಿನಯಿಸಿದ್ದಾರೆ. ಕಿರುತೆರೆಯಲ್ಲೂ ಜನಪ್ರಿಯರು.

**ಚಿ.ಉದಯಶಂಕರ್** ಅವರು ಚಲನಚಿತ್ರಗಳಿಗಾಗಿ ಅತಿ ಹೆಚ್ಚು ಗೀತೆ ಚಿತ್ರಕಥೆ ಹಾಗೂ ಸಂಭಾಷಣೆಗಳನ್ನು ರಚಿಸಿದ ಕೀರ್ತಿಗೆ ಪಾತ್ರರಾದವರು. ತುಮಕೂರು ಜಿಲ್ಲೆಯ ಗುಬ್ಬಿ ತಾಲೂಕಿನ ಚಿಟ್ನಹಳ್ಳಿ ಗ್ರಾಮದಲ್ಲಿ ೧೯-೦೨-೩೪ರಲ್ಲಿ ಜನಿಸಿದರು. ಇವರ ತಂದೆ ಚಿ.ಸದಾಶಿವಯ್ಯ ಸಹ ಚಲನಚಿತ್ರ ಸಾಹಿತಿ. ಬೆಂಗಳೂರು ನ್ಯಾಷನಲ್ ಪ್ರೌಢಶಾಲೆಯಲ್ಲಿ ವಿದ್ಯಾಭ್ಯಾಸ, ಮಕ್ಕಳ ಕೂಟದ 'ಬಾವುಟ' ಪತ್ರಿಕೆಗೆ ಆಗಲೇ ಸಂಪಾದಕ. ಪ್ರೌಢಶಾಲೆ ನಂತರ ಸಿನಿಮಾಟೋಗ್ರಾಫಿ ಕಲಿಕೆ. 'ವಿಜಯನಗರದ ವೀರಪುತ್ರ' ಸೇರಿದಂತೆ ಹಲವು ಚಿತ್ರಗಳಲ್ಲಿ ಸಣ್ಣ ಪುಟ್ಟ ಪಾತ್ರ ದೊರೆತವು. 'ಸಂತ ತುಕಾರಾಂ' (೧೯೬೩) ಚಿತ್ರಕ್ಕೆ ಸಂಭಾಷಣೆ ರಚಿಸುವ ಮೂಲಕ ಸಾಹಿತಿಯಾಗಿ ಚಿತ್ರರಂಗ ಪ್ರವೇಶ ಮಾಡಿದರು. 'ಶಿವರಾತ್ರಿ ಮಹಾತ್ಮೆ' (೧೯೬೪) ಚಿತ್ರಕ್ಕಾಗಿ ಮೊದಲ ಹಾಡು ರಚಿಸಿದರು. ಮಹಾಸತಿ ಅನುಸೂಯ ಇವರು ಸಂಭಾಷಣೆ, ಹಾಡುಗಳನ್ನು ಬರೆದ ಪ್ರಥಮ ಚಿತ್ರ. ನಂತರ ನೂರಾರು ಚಿತ್ರಗಳಿಗೆ ಸಾಹಿತ್ಯ, ಸಂಭಾಷಣೆ ಹಾಗೂ ಸಾವಿರಾರು ಹಾಡುಗಳನ್ನು ರಚಿಸಿದರು. ಸಾಹಿತ್ಯ, ಗೀತರಚನಾ ವಿಧಾನದಲ್ಲಿ ಇವರಿಗೆ ಸಾಧಿತವಾಗಿದ್ದ ವೇಗ ಮತ್ತು ಅಷ್ಟೇ ಉತ್ತಮ ಲಯಬದ್ಧ ನಡೆ, ಸರಳತೆ ಇವರನ್ನು ಉದ್ಯಮದ ಅನಿವಾರ್ಯ ವ್ಯಕ್ತಿಯಾಗಿಸಿತ್ತು. ಇವರ ಮೊದಲ ಗೀತೆ ಮನಮೋಹಿನಿ ಸರಿಸೆಯಾ

ನಾಚಿಕೆಯ ತೆರೆಯಾ..' ಯನ್ನು ಪಿ.ಬಿ.ಶ್ರೀನಿವಾಸ್ ರವರು ರಾಜಕುಮಾರ್ ಅವರಿಗಾಗಿ ಹಾಡಿದರು. 'ಮಯೂರ' ಚಿತ್ರಕ್ಕಾಗಿ ದೀರ್ಘವಾದ ಸಂಭಾಷಣೆಗಳನ್ನು ರಚಿಸಿದ್ದರು. ಐವತ್ತಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ಲಗ್ನಪತ್ರಿಕೆ ಚಿತ್ರದಲ್ಲಿ 'ಬಲು ಅಪರೂಪ ನಮ್ ಜೋಡಿ' ಹಾಡಿಗೆ ಅಭಿನಯಿಸಿ ಜನಪ್ರಿಯರಾದರು. ಇವರ ಪುತ್ರ ರವಿಶಂಕರ್ ಉದಯೋನ್ಮುಖ ನಟ ಚಿಕ್ಕ ವಯಸ್ಸಿನಲ್ಲೇ ಅಪಘಾತವೊಂದರಲ್ಲಿ ಮರಣ ಹೊಂದಿದರು. ಚಿತ್ರ ನಿರ್ದೇಶಕ ಚಿ.ದತ್ತರಾಜ್ ಇವರ ಸಹೋದರ. ಚಿ.ಉದಯಶಂಕರ್ ಅವರಿಗೆ ಕುಲಗೌರವ, ನಾಗರಹಾವು, ಪ್ರೇಮದ ಕಾಣಿಕೆ, ಜೀವನ ಚೈತ್ರ ಚಿತ್ರಗಳ ಸಂಭಾಷಣೆಗಳಿಗಾಗಿ ಹಾಗೂ ಭಾಗ್ಯದ ಲಕ್ಷ್ಮೀ ಬಾರಮ್ಮ ಮತ್ತು ಆನಂದ್ ಚಿತ್ರಗಳ ಚಿತ್ರಕಥೆಗಾಗಿ ರಾಜ್ಯ ಸರ್ಕಾರದ ಶ್ರೇಷ್ಠ ಸಂಭಾಷಣಕಾರ ಹಾಗೂ ಶ್ರೇಷ್ಠ ಚಿತ್ರ ನಾಟಕ ಕರ್ತೃ ಪ್ರಶಸ್ತಿ ಲಭಿಸಿದೆ. ಇನ್ನೂ ಹಲವಾರು ಸಂಸ್ಥೆಗಳ ಪ್ರಶಸ್ತಿ ಸನ್ಮಾನಗಳು ಇವರಿಗೆ ದೊರೆತಿವೆ. ತಮ್ಮ ೫೯ನೇ ವಯಸ್ಸಿನಲ್ಲಿ ದಿನಾಂಕ ೦೨-೦೭-೧೯೯೩ರಲ್ಲಿ ನಿಧನರಾದರು.

**ಕೀರ್ತಿ:** ಸುಪರಿಚಿತ ಖಳನಟ. ಇವರ ಹುಟ್ಟು ಹೆಸರು ಜಯಕುಮಾರ್. ತುಮಕೂರು ಜಿಲ್ಲೆಯ ಕೊರಟಗೆರೆ ಗ್ರಾಮದಲ್ಲಿ ಜನಿಸಿದ ಇವರ ತಂದೆ ಜಸ್ಟೀಸ್ ಕೆ.ಭೀಮಯ್ಯ. ಬಿ.ಎ ಪದವಿ ನಂತರ ನ್ಯಾಯಶಾಸ್ತ್ರದ ಅಧ್ಯಯನ ಮಾಡಿ ೧೯೭೭ರಲ್ಲಿ ಸಣ್ಣ ಪಾತ್ರದ ಮೂಲಕ ರಜತ ಪರದೆಗೆ ಪ್ರವೇಶ. ಸಹಾಯಕ ನಿರ್ದೇಶಕರಾಗಿ ಹಿರಿಯ ನಿರ್ದೇಶಕರಾದ ಎಂ.ಆರ್.ವಿಠಲ್, ಅರಸು ಕುಮಾರ್, ಪುಟ್ಟಣ್ಣ ಕಣಗಾಲ್ ರವರ ಕೈಕೆಳಗೆ ದುಡಿದರು. ದೀಪ, ಮೈತ್ರಿ, ಪಿತಾಮಹ, ಕಮಲ, ಪ್ರೀತಿಸಿನೋಡು, ಕರ್ಣ ಮೊದಲಾದ ಚಿತ್ರಗಳಲ್ಲಿ ಚಿಕ್ಕ, ಚಿಕ್ಕ ಪಾತ್ರಗಳನ್ನು ನಿರ್ವಹಿಸುತ್ತಾ ಅಗೋಚರವಾಗಿದ್ದ ಜಯಕುಮಾರ್ ನಿರ್ದೇಶಕ ಡಿ.ರಾಜೇಂದ್ರ ಬಾಬು ನಿರ್ದೇಶನದ ಒಲವಿನ ಉಡುಗೊರೆ ಚಿತ್ರದಲ್ಲಿ ನಾಯಕನಿಗೆ ಸಮಾನಾಂತರ ಪಾತ್ರದಲ್ಲಿ ಕಂಡರು. ನಂತರ ತಮ್ಮ ಹೆಸರನ್ನು ಕೀರ್ತಿ ಎಂದು ಬದಲಾಯಿಸಿಕೊಂಡರು. ಡ್ಯಾನ್ಸ್ ರಾಜಾ ಡ್ಯಾನ್ಸ್, ರಾವಣರಾಜ್ಯ, ಪ್ರಜಾಪ್ರಭುತ್ವ, ಕೃಷ್ಣ ನೀ ಕುಣಿದಾಗ, ಒಲವಿನ ಆಸರೆ, ಹಾಗೂ ಗೃಹಪ್ರವೇಶ ಮೊದಲಾದವು ಇವರು ಅಭಿನಯಿಸಿದ ಕೆಲವು ಮುಖ್ಯ ಚಿತ್ರಗಳು.

**ಹುಲಿವಾನ ಗಂಗಾಧರಯ್ಯ** ಇವರು ೧೯೫೦ರಲ್ಲಿ ಜಿಲ್ಲೆಯ ಹುಲಿವಾನದಲ್ಲಿ ಜನಿಸಿದರು. ಇವರು ಬಿ.ಎಸ್.ಸಿ., ಪದವೀಧರರು. ರಂಗಭೂಮಿ ನಟರಾದ ಇವರು ಸುಮಾರು ೧೫೦ ನಾಟಕಗಳ ಅಸಂಖ್ಯಾತ ಪ್ರಯೋಗಗಳಲ್ಲಿ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿ ಹೆಸರು ಗಳಿಸಿರುವರು. ದೊರೆ ಭಗವಾನ್ ನಿರ್ದೇಶನದ ಸೇಡಿನ ಹಕ್ಕಿ ಚಿತ್ರದ ಮೂಲಕ ಚಿತ್ರೋದ್ಯಮವನ್ನು ಪ್ರವೇಶಿಸಿದರು. ಜ್ವಾಲಾಮುಖಿ, ಅದೇ ಕಣ್ಣು, ಕುಲಪುತ್ರ, ನವತಾರೆ, ಚೈತ್ರದ ಚಿಗುರು, ಸ್ವಸ್ತಿಕ್, ಭೂಮಿ ತಾಯಿಯ ಚೊಚ್ಚಲ ಮಗ, ಉಲ್ಟಾ ಪಲ್ಟಾ, ಎ, ಶಬ್ದವೇಧಿ ಸೇರಿದಂತೆ ೨೫ಕ್ಕೂ ಹೆಚ್ಚು ಚಿತ್ರಗಳಲ್ಲಿ ಪೋಷಕ ನಟನಾಗಿ ಅಭಿನಯಿಸಿದ್ದಾರೆ. ಗತ್ತು-ಗಾಂಭೀರ್ಯ ಪಾತ್ರಗಳಿಗೆ ಹೇಳಿ ಮಾಡಿಸಿದಂತಿದ್ದಾರೆ. ಇತ್ತೀಚೆಗೆ ಕಿರುತೆರೆಯ ಧಾರಾವಾಹಿಗಳಲ್ಲಿಯೂ ಜನಪ್ರಿಯವಾಗಿರುವ ಗಂಗಾಧರಯ್ಯ ಕೆಲವು ಟೆಲಿ ಫಿಲಂಗಳಲ್ಲಿಯೂ ಗಮನ ಸೆಳೆಯುವ ಅಭಿನಯ ನೀಡಿದ್ದಾರೆ.

**ಎಂ.ತಾತಯ್ಯ:** ೧೯೩೨ರಲ್ಲಿ ತುಮಕೂರಿನ ಮೂಕನಹಳ್ಳಿಯಲ್ಲಿ ಜನಿಸಿದರು. ನಾಲ್ಕನೆಯ ತರಗತಿಯವರೆಗೆ ಓದಿದ ಇವರು ಗಂಗಾಧರರಾವ್, ಸುಬ್ಬರಾವ್ ನಾಟಕ ಕಂಪನಿ, ವಿಶ್ವೇಶ್ವರ ನಾಟಕ ಮಂಡಲಿಗಳ ನಾಟಕಗಳಲ್ಲಿ ಅಭಿನಯಿಸಿದರು. ಸುಬ್ಬಯ್ಯ ನಾಯ್ಡು ಅವರು ಹರಿಶ್ಚಂದ್ರ ಚಿತ್ರದಲ್ಲಿ ಲೋಹಿತಾಶ್ವನ ಪಾತ್ರಕ್ಕೆ ಕರೆದೊಯ್ದರು. ನಂತರ ನವಜ್ಯೋತಿ ಅವರ ಕೃಷ್ಣಲೀಲಾ ಚಿತ್ರದಲ್ಲಿ ಬಲರಾಮನ ಪಾತ್ರದಲ್ಲಿ ಅಭಿನಯಿಸಿದರು. ನಿರ್ದೇಶಕ ಸಂಕಲನಕಾರ ಸಿ.ವಿ.ರಾಜು ಅವರ ಬಳಿ ಸಂಕಲನಕಾರರಾಗಿ ಕಲಿಕೆ ಆರಂಭಿಸಿದರು. ನಂತರ ಬಾಲಾಜಿಯಾದವ್ ಅವರ ಸಹಾಯಕರಾಗಿ ಕೆಲವು ಚಿತ್ರಗಳಲ್ಲಿ ದುಡಿದರು. ನಂತರ ಆರೂರು ಪಟ್ಟಾಭಿ ಅವರ ಭಕ್ತ ವಿಜಯದಲ್ಲಿ ಸ್ವತಂತ್ರ ಸಂಕಲನಕಾರರಾಗಿ ಕಾರ್ಯನಿರ್ವಹಿಸಿದ ಅವರು ಮುಂದೆ ಶುಕ್ರದೆಸೆ, ಧರ್ಮ ವಿಜಯ ಮೊದಲಾದ ಚಿತ್ರಗಳಿಗೆ ಕೆಲಸ ಮಾಡಿದರು. ಯಾದವ್ ಅವರೊಂದಿಗೆ ಮಣ್ಣಿನ ಮಗ, ಶ್ರೀ ರಾಮಾಂಜನೇಯ ಯುದ್ಧ, ರಾಣಿ ಹೊನ್ನಮ್ಮ, ಮನಮೆಚ್ಚಿದ ಮಡದಿ ಮೊದಲಾದ ಚಿತ್ರಗಳಲ್ಲಿ ಕಾರ್ಯ ನಿರ್ವಹಿಸಿದರು. ನಿರ್ದೇಶಕರ ಸಂಘ ಇವರ ಅನುಪಮ ಸೇವೆಯನ್ನು ಗುರುತಿಸಿ ಪ್ರಶಸ್ತಿ ನೀಡಿ ಗೌರವಿಸಿದೆ.

**ದೊಡ್ಡರಂಗೇಗೌಡರು:** ತುಮಕೂರು ಜಿಲ್ಲೆಯ ಮಧುಗಿರಿ ತಾಲೂಕಿನ ಕುರುಬರಹಳ್ಳಿಯ ಇವರು ಶಿಕ್ಷಣ, ಸಾಹಿತ್ಯ, ಚಲನಚಿತ್ರ, ಸುಗಮ ಸಂಗೀತ ಹೀಗೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯದಿಂದ ಎಂ.ಎ., ಪದವಿ ಗಳಿಸಿಕೊಂಡು ಬೆಂಗಳೂರಿನ ಎಸ್.ಎಲ್.ಎನ್ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದರು. ವಿದ್ಯಾರ್ಥಿ ದೆಸೆಯಿಂದಲೇ ಕಥೆ, ಕವಿತೆ, ವಿಮರ್ಶೆಗಳನ್ನು ಬರೆಯುತ್ತಿದ್ದು ನಾಲ್ಕು ನೂರಕ್ಕೂ ಹೆಚ್ಚು ಚಲನಚಿತ್ರ ಗೀತೆಗಳನ್ನು ಬರೆದಿದ್ದಾರೆ. ೧೯೭೭ರಲ್ಲಿ 'ಮಾಗಿಯ ಕನಸು' ಚಿತ್ರದ 'ಬಂದಿದೆ ಬದುಕಿನ ಬಂಗಾರದ ದಿನದ' ಹಾಡಿನ ರಚನೆಯ ಮೂಲಕ ಗೀತ ರಚನಕಾರರಾಗಿ ಚಿತ್ರರಂಗ ಪ್ರವೇಶ ಮಾಡಿದರು. 'ಪರಸಂಗದ ಗೆಂಡೆತಿಮ್ಮ, ಬಂಗಾರದ ಜಿಂಕೆ, ಪಡುವಾರಹಳ್ಳಿ ಪಾಂಡವರು, ಅನುಪಮ, ಆಲೆಮನೆ, ಅರುಣರಾಗ, ಜನುಮದ ಜೋಡಿ ಮುಂತಾದ ಚಿತ್ರಗಳಿಗೆ ಗೀತೆಗಳನ್ನು ರಚಿಸಿದ್ದಾರೆ. ಕರ್ನಾಟಕ ರಾಜ್ಯ ಸರ್ಕಾರದ ವತಿಯಿಂದ ೧೯೯೦-೯೧ ೧೯೯೫-೯೬ ರಲ್ಲಿ ತಾವು ರಚಿಸಿರುವ ಹಾಡಿಗಾಗಿ ನಾಲ್ಕು ಬಾರಿ ಪ್ರಶಸ್ತಿ ಪಡೆದಿದ್ದಾರೆ. ಸಾವಿರ ಹಾಡಿನ ಸರದಾರ ಎಂಬ ಹೆಗ್ಗಳಿಕೆಗೆ ಇವರು ಪಾತ್ರರಾಗಿದ್ದಾರೆ.

**ಭಾಗ್ಯಶ್ರೀ:** ಕಿರಿಯ ವಯಸ್ಸಿನಲ್ಲಿಯೇ ಚಿತ್ರರಂಗ ಪ್ರವೇಶಿಸಿದ ಇವರು 'ಹೂಮಳೆ', 'ಕರಿಮಾಯಿ' ಮುಂತಾದ ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ಕೃಷಿ ಇಲಾಖೆಯ ಮಹದೇವ್ ಹೇಮಾವತಿ ಚಿತ್ರದಲ್ಲಿ ಸುಂದರನ ಪಾತ್ರ ವಹಿಸಿದ್ದಾರೆ. ಗುಬ್ಬಿ ವೀರಣ್ಣನವರ ಅಳಿಯ ಬಸವರಾಜು, ಮಿಸ್ ಲೀಲಾವತಿ ಚಿತ್ರದಲ್ಲಿ ಅಭಿನಯಿಸಿದ್ದರು. ಜಯರೆಡ್ಡಿ ವಿದ್ಯಾರ್ಥಿ ದೆಸೆಯಲ್ಲಿಯೇ ಕಾಲೇಜು ರಂಗ, ಫಲಿತಾಂಶ ಮೊದಲಾದ ಚಿತ್ರಗಳಲ್ಲಿ ಅಭಿನಯಿಸಿದ್ದರು.

**ಎಂ.ಎನ್.ಲಕ್ಷ್ಮಿದೇವಿ:** ಇವರು ರಂಗನಟಿ ನಾಗಮ್ಮನವರ ಸಾಕುಮಗಳಾಗಿ ಬೆಳೆದ ಇವರು ನರಸಿಂಹರಾಜು, ಬಾಲಕೃಷ್ಣ ಮುಂತಾದವರ ಜೋಡಿಯಾಗಿ ಹಾಸ್ಯಮಿಶ್ರಿತ ಪಾತ್ರ ಮಾಡುವಲ್ಲಿ ಪ್ರಸಿದ್ಧರಾದರು. ನೂರಾರು ಚಿತ್ರಗಳಲ್ಲಿ ಅಭಿನಯಿಸಿರುವ ಇವರು ಈಗಲೂ ಕಿರುಚಿತ್ರ ಹಾಗೂ ಚಿತ್ರರಂಗದಲ್ಲಿ ಕ್ರಿಯಾಶೀಲವಾಗಿದ್ದಾರೆ.

ಜಿಲ್ಲೆಯ ಆರಾಧ್ಯ ಅವರು 'ಕಣ್ಣೀರು' ಎಂಬ ಚಿತ್ರವನ್ನು ಮೂಡಲಗಿರಿಗೌಡ ಹಾಗೂ ಟಿ.ಸಿ.ಬಸವರಾಜು ಎಂಬುವವರು ಸೇರಿ ತುಮಕೂರು ಚಿತ್ರಾಲಯದ ಅಡಿಯಲ್ಲಿ 'ಪ್ರೇಮಜ್ವಾಲೆ' ಚಿತ್ರವನ್ನೂ, ಬದರಿನಾಥ್ ರವರು ಶ್ರೀ ಮಾರುತಿ ಚಿತ್ರ ಲಾಂಛನದಡಿ 'ದೇವರತೀರ್ಪು' ಚಿತ್ರವನ್ನು ಪ್ರಸಿದ್ಧ ಚಿತ್ರ ನಿರ್ಮಾಪಕ ನಟ ನಿರ್ದೇಶಕರೆನಿಸಿದ ತಿಪಟೂರಿನ ಶಿವಶಂಕರ್ ತಿಪಟೂರು ಫಿಲಂಸ್ ಲಾಂಛನದಡಿ ಮನೆಕಟ್ಟಿ ನೋಡು, ಮಹಾತಪಸ್ವಿ ಮುಂತಾದ ಚಿತ್ರ ಮಾಡಿದ್ದು ಇವುಗಳಿಗೆ ಸಾಹಿತ್ಯವನ್ನು ಗುಬ್ಬಿ ತಾಲೂಕು ಸಿ.ಎಸ್.ಪುರದ ಸಿ.ವಿ.ಶಿವಶಂಕರ್ ಬರೆದಿದ್ದಾರೆ. ಎಸ್.ಆರ್.ಎಸ್ ಮೂವೀಸ್ ಲಾಂಛನದಡಿ ಅತ್ಯುತ್ತಮ ಮಕ್ಕಳ ಚಿತ್ರವಾದ 'ಸಿಂಹದ ಮರಿಸೈನ್ಯ'ವನ್ನು ತಯಾರಿಸಿದ ಎನ್.ಆರ್.ಸೋಮಶೇಖರ್ ಮತ್ತು ಟಿ.ಎಸ್.ನಾಗಪ್ರಕಾಶ್ ಇಂದಿಗೂ ಸ್ತುತ್ಯಾರ್ಹರಾಗಿದ್ದಾರೆ. ತುರುವೇಕೆರೆಯ ಗೋಪಾಲ್, ಶ್ರೀನಿಧಿ ಪ್ರೊಡಕ್ಷನ್ಸ್ ಎಂಬ ಲಾಂಛನದಡಿ ಭೂತಯ್ಯನ ಮಗ ಅಯ್ಯು, ಬಂಗಾರದ ಮನುಷ್ಯ ಚಿತ್ರ ನಿರ್ಮಿಸಿದ್ದಾರೆ. ಹಲವಾರು ಚಿತ್ರಗಳಿಗೆ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿ 'ಊರ್ವಶಿ' ಸ್ವರ್ಣ ಮಹಲ್ ರಹಸ್ಯ ಮುಂತಾದ ಚಿತ್ರಗಳನ್ನು ಸ್ವತಂತ್ರವಾಗಿ ನಿರ್ದೇಶಿಸಿದ್ದಾರೆ.

**ಕುಣಿಗಲ್ ನಾಗಭೂಷಣ್:** ಇವರು ೧೯೪೨ರಲ್ಲಿ ಕುಣಿಗಲ್ಲಿನಲ್ಲಿ ಜನಿಸಿದರು. ೧೯೬೧ರಲ್ಲಿ ಸಿನಿಮಾಟೋಗ್ರಫಿಯಲ್ಲಿ ಡಿಪ್ಲೊಮಾ ಪದವೀಧರರಾದ ಇವರು ಚಲನಚಿತ್ರ ಸಂಭಾಷಣಕಾರ, ಸಾಹಿತಿ, ನಿರ್ದೇಶಕ ಹಾಗೂ ನಟರಾಗಿದ್ದಾರೆ. ಇವರು ನಾಂದಿ ಚಿತ್ರದ ಸಹಾಯಕ ನಿರ್ದೇಶಕರಾಗಿ ಚಿತ್ರರಂಗ ಪ್ರವೇಶಿಸಿದರು. ನಂತರ ೧೦೦ ಚಿತ್ರಗಳಲ್ಲಿ ಸಹ ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ಇವರು ನಿರ್ದೇಶಿಸಿದ ಚಿತ್ರಗಳು ಆಶೀರ್ವಾದ, ಬಾಳು ಜೇನು. ಸಂಭಾಷಣೆಕಾರರಾಗಿ ಸುಮಾರು ೨೦೦ಕ್ಕೂ ಹೆಚ್ಚು ಚಿತ್ರಗಳಲ್ಲಿ ದುಡಿದಿರುವ ಇವರು ಮೊದಲು ಸಂಭಾಷಣೆ ಬರೆದ ಚಿತ್ರ ಸಿಂಹದ ಜೋಡಿ. ಇದಲ್ಲದೆ ಸುಮಾರು ೩೦೦ಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ಕಿರುತೆರೆ ಧಾರವಾಹಿಗಳಲ್ಲೂ ಸಹ ಅಭಿನಯಿಸಿದ್ದಾರೆ. ಪತ್ನಿ ಸರ್ವಮಂಗಳ ಲೇಖಕಿ, ನಟಿ ಹಾಗೂ ಪತಿಯ ಎಲ್ಲಾ ಕೆಲಸಗಳಿಗೂ ನೆರವಿತ್ತಿದ್ದಾರೆ. ಗೌರಿ-ಗಣೇಶ ಚಿತ್ರಕ್ಕೆ ೧೯೯೧-೯೨ ಹಾಗೂ ಯಾರಿಗೂ ಹೇಳ್ಬೇಡಿ ಚಿತ್ರಕ್ಕೆ ೧೯೯೪-೯೫ನೇ ಸಾಲಿನ ರಾಜ್ಯ ಸರ್ಕಾರದ ಅತ್ಯುತ್ತಮ ಸಂಭಾಷಣಾ ಕರ್ತೃ ಪ್ರಶಸ್ತಿ ಸಂದಿದೆ. ಇವರು ೨೨-೦೬-೨೦೧೫ರಂದು ವಿಧಿವಶವಾದರು.

**ಉಮಾಶ್ರೀ:** ತುಮಕೂರು ಜಿಲ್ಲೆ ತಿಪಟೂರು ತಾಲೂಕಿನ ನೊಣವಿನಕೆರೆಯಲ್ಲಿ ಜನಿಸಿದ ಉಮಾಶ್ರೀ ರವರು ರಂಗಭೂಮಿ ನಟಿಯಾಗಿ ನಂತರ ಚಲನಚಿತ್ರ ನಟಿಯಾಗಿ ಹೆಸರು ಮಾಡಿದ್ದಾರೆ. ಪ್ರಸ್ತುತ ಬಾಗಲಕೋಟೆ ಜಿಲ್ಲೆಯ ತೇರದಾಳ ವಿಧಾನ ಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ವಿಧಾನಸಭಾ ಸದಸ್ಯರಾಗಿ ಆಯ್ಕೆಯಾಗಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ, ವಿಕಲಚೇತನರು ಹಾಗೂ ಹಿರಿಯ ನಾಗರಿಕರ ಅಭಿವೃದ್ಧಿ, ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯಸಚಿವರಾಗಿದ್ದಾರೆ. ೪೦೦ಕ್ಕೂ ಹೆಚ್ಚು ಕನ್ನಡ ಚಲನಚಿತ್ರಗಳಲ್ಲಿ ನಟಿಸಿದ ಖ್ಯಾತಿ ಇವರದು. ಇವರು ನಾಟಕದಿಂದ ವೃತ್ತಿ ಜೀವನ ಪ್ರಾರಂಭಿಸಿ ಖ್ಯಾತ ನಿರ್ದೇಶಕರಾದ ಜರ್ಮನಿಯ ಫ್ರಿಟ್ಜ್ ಬೆನ್ನಿವಿಡ್ಜ್, ಬಿ.ವಿ.ಕಾರಂತ್, ಗಿರೀಶ್ ಕಾರ್ನಾಡ್, ಸಿ.ಜಿ.ಕೃಷ್ಣಸ್ವಾಮಿ, ಆರ್.ನಾಗೇಶ್ ಮತ್ತು ಟಿ.ಎಸ್.ನಾಗಾಭರಣರವರ ಮಾರ್ಗದರ್ಶನದಲ್ಲಿ ಅಭಿನಯಿಸಿ ಖ್ಯಾತಿ ಹೊಂದಿದ್ದಾರೆ. ಹವ್ಯಾಸಿ ಕಲಾವಿದರಾಗಿ ೧೦೦ಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ೧೮ರ ಯುವತಿಯಿಂದ ೮೦ರ ಮುದುಕಿಯವರೆವಿಗೂ ವಿವಿಧ ರೀತಿಯ ಪಾತ್ರಗಳಲ್ಲಿ ಅದ್ಭುತವಾಗಿ ಅಭಿನಯಿಸಿ ಕನ್ನಡ ನಾಡಿನ ಮನೆಮಾತಾಗಿದ್ದಾರೆ. ಇವರಿಗೆ ೫೫ನೇ ಚಲನಚಿತ್ರ ಹಬ್ಬದಲ್ಲಿ 'ಗುಲಾಬಿ ಟಾಕೀಸ್' ಚಿತ್ರಕ್ಕೆ ರಾಷ್ಟ್ರಪ್ರಶಸ್ತಿ (ರಜತ ಕಮಲದಿಂದ ಕೂಡಿದೆ), ೧೯೯೯-೨೦೦೦ರ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ೬ ಬಾರಿ ರಾಜ್ಯ ಪ್ರಶಸ್ತಿಗಳು (ವಿವಿಧ ಚಿತ್ರಾಭಿನಯಕ್ಕಾಗಿ), ೧೯೯೭-೯೮ರ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ, ೧೯೯೬ರಲ್ಲಿ ದೇವಿಕಾ ರಾಣಿ ಸ್ಮರಣಾ ಪ್ರಶಸ್ತಿ, ಮೂರು ಬಾರಿ ಮದ್ರಾಸ್ ಫಿಲಂ ಫ್ಯಾನ್ಸ್ ಪ್ರಶಸ್ತಿಗಳು, ೨೦೧೧ರಲ್ಲಿ ಟಿವಿ ರತ್ನ ಪುರಸ್ಕಾರ, ಎರಡು ಬಾರಿ ಆರ್ಯಭಟ ಪ್ರಶಸ್ತಿ, ೨೦೦೪-೦೫ರಲ್ಲಿ ಕೆ.ವಿ.ಶಂಕರೇಗೌಡ ಪ್ರಶಸ್ತಿ, ಬಸವಗುರು ಕಾರುಣ್ಯ ಪ್ರಶಸ್ತಿ, ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸ್ ರಾಷ್ಟ್ರೀಯ ಸ್ತ್ರೀ ರತ್ನ ಪ್ರಶಸ್ತಿ, ಸಮಾಜಸೇವೆಗಾಗಿ ಸರ್.ಎಂ.ವಿಶ್ವೇಶ್ವರಯ್ಯ ಸ್ಮರಣಾ ಪ್ರಶಸ್ತಿ, ದೇವಾಂಗ ಸಂಘದವರಿಂದ ನೇಕಾರರ ಭೂಷಣ ಪ್ರಶಸ್ತಿ, ಪಾಲ್ ಹ್ಯಾರೀಸ್ ಫೆಲೋಶಿಪ್ (ರೋಟರಿ ಇಂಟರ್ ನ್ಯಾಷನಲ್) ರವರ ಇಂಟರ್ ನ್ಯಾಷನಲ್ ಫೆಲೋಷಿಪ್ ಪ್ರಶಸ್ತಿ ಲಭಿಸಿದೆ.

**ಸುಂದರಶ್ರೀ:** ಗುಬ್ಬಿ ವೀರಣ್ಣನವರ ಮೊಮ್ಮಗಳು. ರಂಗಭೂಮಿ ಹಿನ್ನೆಲೆಯುಳ್ಳ ಸುಂದರಶ್ರೀ ರಾಷ್ಟ್ರೀಯ ನಾಟಕ ಶಾಲೆಯ ಪದವೀಧರೆ. ಆಕೆ ಚಿತ್ರರಂಗಕ್ಕೆ ೧೯೭೭ರಲ್ಲಿ ನಿರ್ದೇಶಕ ವಿ.ಆರ್.ಕೆ ಪ್ರಸಾದ್ ಅವರ ಋಷ್ಯಶೃಂಗ ಚಿತ್ರದ ಮೂಲಕ ನಾಯಕಿಯಾಗಿ ಪ್ರವೇಶಿಸಿದರು. ನಂತರ ಕಾಡುಕುದುರೆ, ಅರಿವು ಮೊದಲಾದ ಪ್ರಶಸ್ತಿ ಪುರಸ್ಕೃತ ಚಿತ್ರಗಳಲ್ಲಿ ಅಭಿನಯಿಸಿದರು. ವೃತ್ತಿ ನಿರತ ರಂಗಭೂಮಿ ಹಾಗೂ ಹವ್ಯಾಸಿ ರಂಗಭೂಮಿ ಮತ್ತು ಕಿರುತೆರೆಗಳಲ್ಲೂ ಸಕ್ರಿಯವಾಗಿರುವ ಇವರು ಕಂಠದಾನ ಕಲಾವಿದೆಯಾಗಿಯೂ ನಿರೂಪಕಿಯಾಗಿಯೂ, ಕಾರ್ಯನಿರ್ವಹಿಸಿದರು. ರಂಗಕರ್ಮಿ, ನಿರ್ದೇಶಕ, ಚಲನಚಿತ್ರ ಸಾಹಿತಿ, ಕಿರುತೆರೆಯಲ್ಲಿ ಖ್ಯಾತರಾಗಿರುವ ರಾಷ್ಟ್ರೀಯ ನಾಟಕ ಶಾಲೆಯಲ್ಲಿ ಸಹಪಾಠಿಯಾಗಿದ್ದ ಸುರೇಂದ್ರನಾಥ್ ಜೊತೆ ವಿವಾಹಗೊಂಡರು.

**ಸುಧಾ ನರಸಿಂಹರಾಜು:** ಮೂಲತಃ ತುಮಕೂರು ಜಿಲ್ಲೆ ತಿಪಟೂರಿನವರು. ಖ್ಯಾತ ಹಾಸ್ಯನಟ ದಿವಂಗತ ನರಸಿಂಹರಾಜು ಅವರ ಸುಪುತ್ರಿ. ಬಿ.ಕಾಂ., ಪದವೀಧರರು. ಈಕೆ ಕನ್ನಡ ಚಿತ್ರರಂಗದ ಪೋಷಕ ನಟಿಯಾಗಿ ಖ್ಯಾತರಾದವರು. ಕೆ.ವಿ.ಜಯರಾಂ ನಿರ್ದೇಶನದ ಅರುಣರಾಗ ಚಿತ್ರದ ಒಂದು ಪುಟ್ಟ ಪಾತ್ರದ ಮೂಲಕ ಚಿತ್ರರಂಗಕ್ಕೆ ಬಂದರು. ಶುಭಮಿಲನ, ಆಸ್ಫೋಟ, ಸಂಯುಕ್ತ, ರಥಸಪ್ತಮಿ, ಪೋಲೀಸ್ ಹೆಂಡತಿ, ಅರಿಶಿನ ಕುಂಕುಮ, ಮನಮೆಚ್ಚಿದ ಸೊಸೆ, ಮುಂತಾದ ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ತಮ್ಮ ತಂದೆಯ ಹೆಸರಿನಲ್ಲಿ ಪ್ರಶಸ್ತಿಯೊಂದನ್ನು ಸ್ಥಾಪಿಸಿ ಪ್ರತೀ ವರ್ಷ ನಾಟಕೋತ್ಸವಗಳನ್ನು ಏರ್ಪಡಿಸಿ ಪ್ರಶಸ್ತಿ ನೀಡುತ್ತಾ ಬಂದಿದ್ದಾರೆ. ದೂರದರ್ಶನಕ್ಕಾಗಿ ನರಸಿಂಹರಾಜು ಅವರ ಜೀವನವನ್ನು ಆಧರಿಸಿ ಧಾರಾವಾಹಿಯೊಂದನ್ನು ನಿರ್ಮಿಸಿ ನಿರ್ದೇಶಿಸಿದ್ದಾರೆ. ಕಿರುತೆರೆ ನಟಿಯಾಗಿ ಹಲವು ಧಾರಾವಾಹಿಗಳಲ್ಲಿ ಅಭಿನಯಿಸಿದ್ದಾರೆ. ಕುಣಿಗಲ್ ವಸಂತ್, ಕುಣಿಗಲ್ ರಾಮನಾಥ್ ಮುಂತಾದ ಕಲಾವಿದರು ಚಿತ್ರರಂಗದಲ್ಲಿ ಮಿಂಚಿದ್ದಾರೆ.

ಇನ್ನೊಬ್ಬ ಉದಯೋನ್ಮುಖ ಚಲನಚಿತ್ರ ನಿರ್ದೇಶಕ **ಪವನ್ ಒಡೆಯರ್** ಗೂಗ್ಲಿ ಚಿತ್ರದ ನಿರ್ದೇಶಕ. ಇವರ ಇಡೀ ಕುಟುಂಬ ಕಲೋಪಾಸನಾ ಕುಟುಂಬ. ಇವರ ತಾತ ಡಿ.ಎನ್.ಒಡೆಯರ್ 'ಜಮಖಂಡಿ ನಾಟಕ ಮಂಡಲಿ' ಸ್ಥಾಪಿಸಿದ್ದು, ಅದು ರಾಜ್ಯಾದ್ಯಂತ ಹೆಸರು ಮಾಡಿ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನವಾಗಿತ್ತು. ಇವರ ತಂದೆ ಗಜಾನನ ಒಡೆಯರ್ ತಬಲ, ಹಾರ್ಮೋನಿಯಂ ಕಲಾವಿದರು. ಕುಣಿಗಲ್ಲಿನಲ್ಲಿ ಪ್ರಥಮ ಬಾರಿಗೆ 'ವಾಣಿ ವಾದ್ಯಗೋಷ್ಠಿ' ಸ್ಥಾಪಿಸಿ ಕುಣಿಗಲ್

ವಸಂತ್ ರೊಂದಿಗೆ ಕಾರ್ಯಕ್ರಮ ನೀಡುತ್ತಿದ್ದರು. ಯೋಗ್‌ರಾಜ್‌ಭಟ್ಟರ ಗರಡಿಯಲ್ಲಿ ಪಳಗಿದ ಈತ 'ಪಂಚರಂಗಿ' ಚಿತ್ರಕ್ಕೆ ಸಹ ನಿರ್ದೇಶನ ಮಾಡಿದ್ದಲ್ಲದೆ ಗೋವಿಂದಾಯ ನಮ: ಚಿತ್ರಕ್ಕೆ ಸ್ವತ: ಕಥೆ, ಚಿತ್ರಕಥೆ, ಸಂಭಾಷಣೆಗಳನ್ನು ಬರೆದು ನಿರ್ದೇಶನವನ್ನೂ ಮಾಡಿದ್ದಾರೆ. ಇವರ 'ಪ್ಯಾರ್ ಗೆ ಆಗ್ಬುಟೈತೆ' ಹಾಡು ಯೂಟ್ಯೂಬ್‌ನಿಂದ ಅತ್ಯಂತ ಜನಪ್ರಿಯವಾಗಿತ್ತು.

**ತಿಪಟೂರು ರಘು:** ಇವರು, ಸಹೋದರ ಮಾಪಾಕ್ಷಿ ಜೊತೆ ಮುಂಬಯಿ ಟೆಲಿವಿಷನ್ ಕೇಂದ್ರದಲ್ಲಿ ಕೆಲಸ ಮಾಡುತ್ತಾ, ಹಲವಾರು ಕನ್ನಡ ಚಿತ್ರಗಳಿಗೆ ಛಾಯಾಗ್ರಾಹಕರಾಗಿ ಕೆಲಸ ಮಾಡಿರುವವರು. ಬೆಂಗಳೂರಿನ ಚಾಮರಾಜೇಂದ್ರ ಪಾಲಿಟೆಕ್ನಿಕ್‌ನಲ್ಲಿ ಛಾಯಾಗ್ರಹಣ ವಿಭಾಗದಲ್ಲಿ ಶಿಕ್ಷಣ ಪಡೆದ ಬಸವರಾಜು ಚಿತ್ರರಂಗದಲ್ಲಿ ಕಾರ್ಯನಿರತರಾಗಿದ್ದಾರೆ. ಮಾವಿನಕೆರೆ ರಂಗನಾಥ್ ಸಾಹಿತಿಗಳಾಗಿದ್ದು 'ಸಂಘರ್ಷ' ಚಿತ್ರಕ್ಕೆ ಚಿತ್ರಕಥೆ, ಸಂಭಾಷಣೆ ಬರೆದಿದ್ದಾರೆ. ಜಿ.ಎಸ್.ಸೋಮಶೇಖರ್ (ಸೋಮಣ್ಣ) ತುಮಕೂರಿನ ಸಾಂಸ್ಕೃತಿಕ ಕ್ಷೇತ್ರದ ಎಲ್ಲಾ ವಲಯಗಳಲ್ಲಿಯೂ ಕೆಲಸ ಮಾಡಿದ್ದು ಇವರು ಮೂಲತ: ಕ್ರೀಡಾಪಟು. ಕ್ರೀಡಾ ಸಂಸ್ಥೆ, ಸಾಂಸ್ಕೃತಿಕ ಸಂಸ್ಥೆ ಸಮಾಜಸೇವೆ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ್ದು, ಚಲನಚಿತ್ರರಂಗದಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದ ಮುನ್ನುಡಿ, ವಿಮುಕ್ತಿ ಮುಂತಾದ ಚಿತ್ರ ನಿರ್ಮಾಣ ಮಾಡಿದ್ದಾರೆ.

**ಟಿ.ಸಿ.ನಟರಾಜು:** ತುಮಕೂರಿನವರಾದ ಇವರು 'ವಿಷಗಂಧರ್ವ' ಎಂಬ ಚಿತ್ರದ ಮೂಲಕ ಚಲನಚಿತ್ರರಂಗವನ್ನು ಪ್ರವೇಶಿಸಿದರು. ಡಾ.ವಿಷ್ಣುವರ್ಧನ್, ಡಾ.ರಾಜ್ ಕುಮಾರ್, ಅನಂತ್ ನಾಗ್, ಶಂಕರ ನಾಗ್, ಪ್ರಭಾಕರ್, ಶಿವರಾಜ್ ಕುಮಾರ್, ಮುಂತಾದ ನಾಯಕ ನಟರ ಜೊತೆಯಲ್ಲಿ ನಟಿಸಿದ್ದಾರೆ. ಅಲ್ಲದೇ ಅರಣ್ಯ, ಪರಿಸರ, ಜಲಸಂವರ್ಧನೆ, ಮೀನುಗಾರಿಕೆ ಮುಂತಾದ ಇಲಾಖೆಗಳ ಸಾಕ್ಷ್ಯಚಿತ್ರಗಳನ್ನು ನಿರ್ದೇಶಿಸಿದ್ದಾರೆ. ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಸಂದಿದೆ.

**ಟಿ.ಎಸ್.ಲೋಹಿತಾಶ್ವ:** ತುಮಕೂರು ತಾಲೂಕು ಹೆಬ್ಬೂರು ಹೋಬಳಿಯ ತೊಂಡೆಗೆರೆ ಗ್ರಾಮದಲ್ಲಿ ೦೫-೦೮-೧೯೪೨ರಂದು ಜನಿಸಿದರು. ಆಂಗ್ಲಭಾಷಾ ಉಪನ್ಯಾಸಕರಾಗಿ ನಂತರ ಪ್ರಾಚಾರ್ಯರಾಗಿ ನಿವೃತ್ತಿ ಹೊಂದಿದ್ದಾರೆ. ಸಮುದಾಯ ರಂಗಭೂಮಿ ಮೂಲಕ ಹೊರಬಂದ ಪ್ರತಿಭಾವಂತರು. ೫೦೦ಕ್ಕೂ ಹೆಚ್ಚು ಚಲನಚಿತ್ರಗಳಲ್ಲಿ ತಂದೆಯಾಗಿ, ಖಳನಟನಾಗಿ, ಪೋಷಕ ಪಾತ್ರಗಳಲ್ಲಿ ಅಭಿನಯಿಸಿ ಪ್ರಖ್ಯಾತರಾಗಿರುವ ಇವರು ಕಂಚಿನ ಕಂಠ ಹೊಂದಿದ್ದಾರೆ. ಮಾರ್ಜಾಲ, ಗೀತ, ಗಜೇಂದ್ರ, ಹುಲಿಯ, ಸಿಂಹಾಸನ, ಚದುರಂಗ ಹೀಗೆ ಅನೇಕ ಚಿತ್ರಗಳಲ್ಲಿ ವಿಭಿನ್ನ ಪಾತ್ರಗಳಿಗೆ ಜೀವ ತುಂಬಿದ್ದಾರೆ. ಕಿರುತೆರೆಯಲ್ಲೂ ಶಂಕರ ನಾಗ್, ಗಿರೀಶ್ ಕಾಸರವಳ್ಳಿ ಮುಂತಾದ ಪ್ರಮುಖ ನಿರ್ದೇಶಕರ ಧಾರಾವಾಹಿಗಳಲ್ಲಿ ನಟಿಸಿದ್ದಾರೆ. ಸಾಹಿತ್ಯ ಕೃಷಿಯಲ್ಲೂ ಸಾಕಷ್ಟು ಸೇವೆ ಮಾಡಿರುವ ಇವರು 'ಹೊತ್ತು ಹೋಗುವ ಮುನ್ನ' ಎಂಬ ಕವನ ಸಂಕಲನ ಮತ್ತು 'ಅಕ್ಕಡಿ ಸಾಲು' ಎಂಬ ವಿಚಾರಗಳ ಸಂಪಾದನೆ ಮತ್ತು 'ಸಂತೆಯಲ್ಲಿ ನಿಂತ ಕಬೀರ ಮತ್ತು ಡಾ॥ ತಿಪ್ಪೇಶಿ ಎಂಬ ನಾಟಕಗಳನ್ನು ಮತ್ತು ಸಲ್ಲಾಪ, ಮುಖ್ಯಮಂತ್ರಿ (ಮುಖ್ಯಮಂತ್ರಿ ಚಂದ್ರುರವರಿಗೆ ಹೆಸರು ತಂದುಕೊಟ್ಟ ನಾಟಕ), ಮಧು ಸಿಕ್ಕದಲ್ಲ, ಎ ಮಿಲಿಯನ್ ಮ್ಯಾನ್ಷನ್ಸ್ ಹಾಗೂ ಸಿದ್ಧಗಂಗೆಯ ಸಿದ್ಧಪುರುಷ ಇವರು ಬರೆದು ಪ್ರಕಟಿಸಿರುವ ಕೆಲವು ಕೃತಿಗಳು. ಇವರಿಗೆ ೧೯೯೭ರಲ್ಲಿ ಕರ್ನಾಟಕ ರಾಜ್ಯ ನಾಟಕ ಅಕಾಡೆಮಿ ಪ್ರಶಸ್ತಿ ಮತ್ತು ೨೦೦೬ರಲ್ಲಿ ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳು ಲಭಿಸಿವೆ. ಕರ್ನಾಟಕ ರಾಜ್ಯದಾದ್ಯಂತ ಹಲವಾರು ಸಂಘ ಸಂಸ್ಥೆಗಳು, ನೂರಾರು ಮಠ ಮಾನ್ಯಗಳು ಗೌರವಿಸಿ ಸನ್ಮಾನಿಸಿವೆ. ಇವರ ಮಕ್ಕಳಾದ ಶರತ್ ಲೋಹಿತಾಶ್ವ ಸಹ ಪ್ರಖ್ಯಾತ ಚಲನಚಿತ್ರ ಹಾಗೂ ಕಿರುತೆರೆಯ ನಾಯಕ ಹಾಗೂ ಖಳನಟ. ಇವರದೂ ಕಂಚಿನ ಕಂಠ, ನೂರಾರು ಚಲನಚಿತ್ರಗಳು ಹಾಗೂ ಹತ್ತಾರು ಕಿರುತೆರೆಯ ಧಾರಾವಾಹಿಗಳಲ್ಲಿ ನಟಿಸಿ ಪ್ರಸಿದ್ಧರಾಗಿದ್ದಾರೆ.

**ಅಶೋಕ್:** ಇವರ ಮೂಲ ಹೆಸರು ಎ.ಎಲ್.ವೇಣುಗೋಪಾಲ್. ಇವರ ತಂದೆ ಮೂಲತ: ಆನೇಕಲ್ಲಿನವರಾದರೂ ಕಳೆದ ೪೦ ವರ್ಷಗಳಿಂದ ತುಮಕೂರು ತಾಲೂಕು ಹೆಬ್ಬೂರು ಹೋಬಳಿ ಚನ್ನಿಗಪ್ಪನಪಾಳ್ಯ ಎಂಬ ಗ್ರಾಮದಲ್ಲಿ ವ್ಯವಸಾಯ ಮಾಡಿಕೊಂಡು ನೆಲೆಸಿದ್ದಾರೆ. ಇವರು ನಟಿಸಿದ 'ಹೆಣ್ಣು ಸಂಸಾರದ ಕಣ್ಣು', 'ರಂಗನಾಯಕಿ', 'ಕ್ರಾಂತಿಯೋಗಿ ಬಸವಣ್ಣ' ಚಿತ್ರಗಳು ಬಹಳ ಯಶಸ್ಸು ಕಂಡಿತು. ಖ್ಯಾತ ನಿರ್ದೇಶಕ ಪುಟ್ಟಣ್ಣ ಕಣಗಾಲ್ ಅವರ ಗರಡಿಯಲ್ಲಿ ಬೆಳೆದ ನಟ. ಇವರೇ ಶಿವರಾಜ್ ಕುಮಾರ್ ಮತ್ತು ಶೃತಿಯವರನ್ನು ಬಳಸಿಕೊಂಡು 'ನಮ್ಮೂರ ಹುಡುಗ' ಚಿತ್ರವನ್ನು ನಿರ್ಮಿಸಿದರು. ಇವರು

೨೦೦೮ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಬಹುಜನ ಸಮಾಜ ಪಕ್ಷದಿಂದ ಅಭ್ಯರ್ಥಿಯಾಗಿ 'ಆನೆ' ಗುರುತಿನಿಂದ ಸ್ಪರ್ಧಿಸಿ ಪರಾಭವಗೊಂಡರು. 'ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು' ಎಂಬುದು ಇವರ ಸಿದ್ಧಾಂತ.

**ಜಗ್ಗೇಶ್ ಮತ್ತು ಕೋಮಲ್:** ಚಲನಚಿತ್ರ ರಂಗದಲ್ಲಿ ಹಾಸ್ಯನಟರಾಗಿ ಹಾಗೂ ನಾಯಕನಟರಾಗಿ ಖ್ಯಾತಿ ಹೊಂದಿದ್ದು, ನಟ, ನಿರ್ಮಾಪಕ ಜಗ್ಗೇಶ್ ಮತ್ತು ಇವರ ಸಹೋದರ ಕೋಮಲ್ ಹುಟ್ಟಿದ್ದು ತುಮಕೂರು ಜಿಲ್ಲೆಯ ತುರುವೇಕೆರೆ ತಾಲೂಕಿನ ಜಡೆಯ ಗ್ರಾಮದಲ್ಲಿ. ಇವರ ತಂದೆ ಶಿವಲಿಂಗಪ್ಪ ಮತ್ತು ತಾಯಿ ನಂಜಮ್ಮ. ಸಾಮಾನ್ಯವಾಗಿ ಕಲಾವಿದರು ಕಲೆಯನ್ನು ದೇವರೆಂದು ಆರಾಧಿಸುತ್ತಾರೆ. ಆದರೆ ಜಗ್ಗೇಶ್ ಅದನ್ನು ತಾಯಿ ಎಂದು ಪೂಜಿಸುತ್ತಾರೆ. ಅರಿವಿಲ್ಲದೇ ಕಲೆಯ ಒಲವು ಬೆಳೆಸಿಕೊಂಡವರು ಅವರು. ಚಿಕ್ಕಂದಿನಿಂದಲೇ ನಟನೆಯತ್ತ ವಿಪರೀತ ಆಸಕ್ತಿ ಇದ್ದು 'ಆಕ್ಟಿಂಗ್ ಮೇನಿಯಾದಿಂದ ಹೊರ ಬಾ' ಎಂದು ಅಪ್ಪ ಶಿವಲಿಂಗಪ್ಪ ಅವರಿಂದ ಎಡಗೈ ಮುರಿಸಿಕೊಂಡಿದ್ದರು ಜಗ್ಗೇಶ್. ನಟನೆಯನ್ನು ಹೃದಯದಿಂದ ಪ್ರೀತಿಸುತ್ತೇನೆ. ಕಲಾವಿದನಾದದ್ದು ಯಾವುದೋ ಜನ್ಮದ ಸುಕೃತ. ದೇವರು ನೂರು ಜನ್ಮ ಕೊಟ್ಟರೂ ಪ್ರತಿ ಜನ್ಮದಲ್ಲೂ ಕಲಾವಿದನಾಗಿಯೇ ಹುಟ್ಟಲು ಬಯಸುತ್ತೇನೆ ಎನ್ನುವ ಅವರು ಮಹಾನ್ ದೈವಭಕ್ತರು. ಜೀವನದಲ್ಲಿ ಏಳು-ಬೀಳುಗಳನ್ನು ಅನುಭವಿಸಿ ಗೆದ್ದಿರುವ ಇವರು 'ದಿ ಬೆಸ್ಟ್ ಎಂಟರ್ಟೇನರ್' ಎಂಬ ಬಿರುದನ್ನು ಪಡೆದಿದ್ದಾರೆ. ನಟನೆಯ ಜೊತೆಗೆ ವಿಧಾನಪರಿಷತ್ ಸದಸ್ಯ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ ಇವರು ಸಿನಿಮಾ, ರಾಜಕಾರಣ, ಕುಟುಂಬ ಎಲ್ಲವನ್ನೂ ಸಮರ್ಥವಾಗಿ ನಿಭಾಯಿಸುತ್ತಿದ್ದಾರೆ. ಇವರ ಸಹೋದರ **ಕೋಮಲ್** ಕೂಡಾ ಕನ್ನಡ ಚಿತ್ರರಂಗದಲ್ಲಿ ಹಾಸ್ಯನಟರಾಗಿ, ಮುಗ್ಧ ಹುಡುಗನ ಪಾತ್ರಗಳಲ್ಲಿ ಹೆಚ್ಚಾಗಿ ಮಿಂಚುತ್ತಿದ್ದಾರೆ. ಈಗ ನಾಯಕನಟರಾಗಿಯೂ ಕಾಣಿಸಿಕೊಳ್ಳುತ್ತಿರುವ ಇವರು ಅದ್ಭುತ ನಟನಾ ಕೌಶಲ್ಯದಿಂದ ಕನ್ನಡ ಚಿತ್ರಪ್ರೇಮಿಗಳ ಮನ ಗೆದ್ದಿದ್ದಾರೆ.

**ಪಿ.ಶೇಷಾದ್ರಿ:** ತುರುವೇಕೆರೆ ತಾಲೂಕು ದಂಡಿನಶಿವರ ಗ್ರಾಮದ ಇವರು ಪತ್ರಕರ್ತ, ಲೇಖಕ, ಕವಿ. ಟಿ.ಎಸ್.ನಾಗಾಭರಣ ಅವರ ಬಳಿ ಸಹಾಯಕ ನಿರ್ದೇಶಕನಾಗಿ, ಚಿತ್ರಕಥೆ, ಸಂಭಾಷಣಕಾರರಾಗಿ ಪ್ರತಿಭೆ ಹೊಮ್ಮಿಸಿದ ಇವರು ಮೊದಲು ನಿರ್ದೇಶಿಸಿದ ಚಿತ್ರ 'ಮುನ್ನುಡಿ' ಅತ್ಯುತ್ತಮ ಸಾಮಾಜಿಕ ಕಳಕಳಿಯುಳ್ಳ ಚಿತ್ರವೆಂದು ಕೇಂದ್ರ ಸರ್ಕಾರದ ಪ್ರಶಸ್ತಿ, ಕೇರಳದ ಅರವಿಂದನ್ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿ ಬಂದಿವೆ. ಅನೇಕ ಸಾಕ್ಷ್ಯಚಿತ್ರ, ಟೆಲಿಚಿತ್ರಗಳನ್ನು ನಿರ್ಮಿಸಿದ್ದಾರೆ. ಮುನ್ನುಡಿ, ಅತಿಥಿ, ಬೇರು, ವಿಮುಕ್ತಿ, ತುತ್ತೂರಿ, ಭಾರತ್ ಸ್ಟೋರ್ಸ್ ಹೀಗೆ ಏಳು ಚಿತ್ರಗಳನ್ನು ತೆಗೆದು ಎಲ್ಲ ಚಿತ್ರಗಳಿಗೂ ಪ್ರಶಸ್ತಿ ಪಡೆದ ವಿಶಿಷ್ಟ ವ್ಯಕ್ತಿ. ಕಿರುತೆರೆಯ ಧಾರಾವಾಹಿಗಳನ್ನೂ ನಿರ್ದೇಶಿಸಿದ್ದಾರೆ. ಚಿತ್ರಕಥೆ, ಸಂಭಾಷಣೆ ಬರೆದಿದ್ದಾರೆ.

**ಬರಗೂರು ರಾಮಚಂದ್ರಪ್ಪ:** ಕನ್ನಡದ ಖ್ಯಾತ ಬರಹಗಾರರಾದ ಇವರ ಮೊದಲ ನಿರ್ದೇಶನದ ಚಿತ್ರ 'ಒಂದು ಊರಿನ ಕಥೆ', ಇದಕ್ಕಾಗಿ ಶ್ರೇಷ್ಠ ಕಥೆ, ಸಂಭಾಷಣೆ ಪ್ರಶಸ್ತಿ, 'ಶಾಂತಿ' ಚಲನಚಿತ್ರಕ್ಕಾಗಿ ೨೦೦೩-೦೪ರ ದ್ವಿತೀಯ ಅತ್ಯುತ್ತಮ ಚಿತ್ರ ಪ್ರಶಸ್ತಿ  ಹಾಗೂ ಪ್ರಯೋಗಾತ್ಮಕ ವಿಶ್ವಸಂಸ್ಥೆಯಲ್ಲಿ ಪ್ರದರ್ಶನಕ್ಕೆ ಆಹ್ವಾನ ಪಡೆದ ಚಿತ್ರ. ೧೯೮೩-೮೪ರಲ್ಲಿ ಬೆಂಕಿ ಹಾಗೂ ಸೂರ್ಯ ಚಿತ್ರಕ್ಕೆ ದ್ವಿತೀಯ ಅತ್ಯುತ್ತಮ ಚಿತ್ರ ಪ್ರಶಸ್ತಿ, ಕೋಟೆ, ಕರಡೀಪುರ, ಹಗಲುವೇಷ, ಕ್ಷಾಮ, ತಾಯಿ, ಭಾಗೀರಥಿ ಮುಂತಾದ ಚಿತ್ರಗಳ ನಿರ್ದೇಶನ ಮಾಡಿದ್ದಾರೆ. ಎಲ್ಲಾ ಚಿತ್ರಗಳಿಗೂ ಒಂದಲ್ಲಾ ಒಂದು ವಿಭಾಗದಲ್ಲಿ ಅಂದರೆ ನಿರ್ದೇಶನ, ಸಂಭಾಷಣೆ, ಗೀತರಚನೆಗಳಿಗಾಗಿ ರಾಜ್ಯ ಪ್ರಶಸ್ತಿ ಪಡೆದಿದ್ದಾರೆ. ೨೦೦೫-೦೬ರಲ್ಲಿ 'ತಾಯಿ' ಸಾಮಾಜಿಕ ಪರಿಣಾಮ ಬೀರುವ ಚಿತ್ರ ಹಾಗೂ ಇದೇ ಚಿತ್ರದ ಗೀತರಚನೆಗಾಗಿ ಕೂಡ ಪ್ರಶಸ್ತಿ ಪಡೆದಿದ್ದಾರೆ. ಸಾಹಿತ್ಯ, ಸಂಘಟನೆ, ಆಡಳಿತಗಾರ, ಅತ್ಯುತ್ತಮ ಅಧ್ಯಾಪಕ ಹಾಗೂ ಲೇಖಕರಾಗಿ ಜನಪ್ರಿಯರಾಗಿದ್ದಾರೆ.

**ಶ್ವೇತಾ ರಾವ್:** ಉದಯ ಟಿ.ವಿಯಲ್ಲಿ ನಿರೂಪಕಿಯಾಗಿ ಕೆಲಸ ಮಾಡಿದ್ದು, 'ಒಂದೇ ಒಂದು ಸಾರಿ', ಕಣ್ಣಂಚಲಿ ಮುಂತಾದ ಚಿತ್ರಗಳಲ್ಲಿ, ಕಿರುತೆರೆಯಲ್ಲಿ ಹಾಗೂ ಸುವರ್ಣ ಚಾನಲ್‌ನ 'ಪೇಟೆ ಹುಡುಗಿ ಹಳ್ಳಿ ಲೈಫ್' ಎಂಬ ರಿಯಾಲಿಟಿ ಶೋನಲ್ಲಿ ಭಾಗವಹಿಸಿದ್ದಾರೆ. ತುಮಕೂರಿನಲ್ಲಿ ಗುತ್ತಿಗೆದಾರರಾಗಿರುವ **ಮಹಾಂತಪ್ಪ** ಶ್ರೀ ಸಿದ್ಧಗಂಗಾ ಕ್ಷೇತ್ರದ ಡಾ.ಶ್ರೀ.ಶ್ರೀ.ಶ್ರೀ. ಶಿವಕುಮಾರ ಮಹಾಸ್ವಾಮಿಗಳ ಜೀವನ ಚರಿತ್ರೆಯನ್ನಾಧರಿಸಿ ಚಲನಚಿತ್ರ ನಿರ್ಮಿಸಿದ್ದಾರೆ.

**ಉರ್ಡಿಗೆರೆ ರಘು:** 'ಗಂಧರ್ವ' ಕಾವ್ಯನಾಮದ ಇವರು ಹೆಚ್.ಎಂ.ಟಿ ಉದ್ಯೋಗಿಯಾಗಿದ್ದಾಗಿನಿಂದಲೂ ರಂಗಭೂಮಿ, ಕಿರುತೆರೆ, ಬೆಳ್ಳಿ ತೆರೆಗಳತ್ತ ಆಕರ್ಷಿತರಾಗಿ ಅಭಿನಯ, ನಿರ್ದೇಶನ, ನಾಟಕ ರಚನೆ, ಸಂಭಾಷಣೆ, ಗೀತರಚನೆ, ಸಂಗೀತ ನಿರ್ದೇಶನ ಮುಂತಾದ ಎಲ್ಲಾ ರಂಗದಲ್ಲಿಯೂ ಸಾಧನೆಗೈದವರು. 'ಕರ್ನಾಟಕ ಕವಿ ಪರಂಪರೆ' ಎಂಬ ಅಪೂರ್ವ ಧಾರಾವಾಹಿಯನ್ನು ದೂರದರ್ಶನಕ್ಕಾಗಿ ಮಾಡಿದ್ದರು. ನಂತರ ದನಿಯಿಲ್ಲದವರು, ಉಲ್ಕೆ, ಫ್ಲೋರ್ ಮಿಲ್, ಎಂಬ ಕಿರುಚಿತ್ರ ಮಾಡಿ ರಾಜ್ಯಮಟ್ಟದಲ್ಲಿ ಬಹುಮಾನ ಪಡೆದರು. 'ಗಾಜಿನ ಮನೆ' ಚಿತ್ರಕ್ಕೆ ಸಹಾಯಕ ನಿರ್ದೇಶಕರಾಗಿ ಸಂಗೀತ ನಿರ್ದೇಶಕರಾಗಿ ದುಡಿದ ಇವರು ವೃತ್ತಿಪರತೆ ಕೈಗೊಂಡರು. ಭೂಮಿ, ಭಕ್ತ ಅಯ್ಯಪ್ಪ, ಕಳ್ಳ ಪೋಲೀಸ್, ಒಂದು ಪ್ರೀತಿಯ ಕಥೆ, ಸತ್ಯಮೇವ ಜಯತೆ ಮುಂತಾದ ಸುಮಾರು ಮೂವತ್ತಕ್ಕೂ ಹೆಚ್ಚು ಚಿತ್ರಗಳಿಗೆ ಸಂಗೀತ ನೀಡಿದ್ದಾರೆ. ಸುಮಾರು ೧೫೦ಕ್ಕೂ ಹೆಚ್ಚು ಗೀತರಚನೆ ಮಾಡಿದ್ದಾರೆ.

**ಎಂ.ಎನ್.ಕೃಪಾಕರ್:** ೨೫ಕ್ಕೂ ಹೆಚ್ಚು ಚಿತ್ರಗಳಿಗೆ ಸಂಗೀತ ನಿರ್ದೇಶನ ಮಾಡಿ ಜನಪ್ರಿಯರಾಗಿದ್ದಾರೆ. ಕೊರಟಗೆರೆ ತಾಲೂಕು ತೋವಿನಕೆರೆಯ ಟಿ.ಎಸ್.ಹನುಮಂತೇಗೌಡ ಕಿರುತೆರೆಯ ಧಾರಾವಾಹಿಗಳಲ್ಲಿ ಜೀವತುಂಬಿ ಅಭಿನಯಿಸುವ ಮೂಲಕ ಮನೆಮಾತಾದವರು. ಮೂಲತಃ ರಂಗಭೂಮಿಯಿಂದ ಬಂದು, 'ಮುಕ್ತ ಮುಕ್ತ' ಧಾರಾವಾಹಿಯ 'ಬಿಂಗ' ಪಾತ್ರದಿಂದ ವಿಶಿಷ್ಟ ಛಾಪು ತಂದುಕೊಟ್ಟು, ಮಹಾನದಿ, ಬೀರಬಲ್, ತೇಲಿ ಹೋದ ನೌಕೆ, ಪದ್ಮವ್ಯೂಹ, ಕನಕ, ನಾಗಾಭರಣ, ಟಿ.ಎನ್.ಸೀತಾರಾಮು ಮುಂತಾದವರು ನಿರ್ಮಿಸಿದ ಅನೇಕ ಧಾರಾವಾಹಿಗಳು, ನಮ್ಮ ಪ್ರೀತಿಯ ರಾಮು, ಶಾಸ್ತ್ರಿ, ಸ್ವಾಮಿ, ಸುಂಟರಗಾಳಿ, ಎಲೆಕ್ಷನ್, ಮುಂತಾದ ಚಲನಚಿತ್ರಗಳಲ್ಲಿ ಅಭಿನಯಿಸಿದ್ದಾರೆ.

**ಅಚ್ಯುತಕುಮಾರ್:** ತಿಪಟೂರು ತಾಲೂಕು ಹೊನ್ನವಳ್ಳಿಯವರು. ರಂಗಭೂಮಿ, ಕಿರುತೆರೆ, ಬೆಳ್ಳಿತೆರೆಗಳಲ್ಲಿ ತಮ್ಮದೇ ಛಾಪು ಮೂಡಿಸಿರುವರು. ನೀನಾಸಂನಲ್ಲಿ ತರಬೇತುಗೊಂಡ ಇವರು ಗೃಹಭಂಗ, ಪ್ರೀತಿಯಿಂದ, ಮೂಡಲಮನೆ, ಗುಪ್ತಗಾಮಿನಿ ಮುಂತಾದ ಅನೇಕ ಧಾರಾವಾಹಿಗಳಲ್ಲಿ ನಟಿಸಿದ್ದು, ಅನೇಕ ಚಲನಚಿತ್ರಗಳಲ್ಲಿಯೂ ನಟಿಸಿದ್ದಾರೆ. ತಮಿಳು ಚಿತ್ರವೊಂದರಲ್ಲಿಯೂ ಸಹ ನಟಿಸುತ್ತಿದ್ದಾರೆ. 'ಹೆಜ್ಜೆಗಳು' ಚಿತ್ರದ ನಟನೆಗಾಗಿ ಕರ್ನಾಟಕ ರಾಜ್ಯದ ೨೦೧೦-೧೧ನೇ ಸಾಲಿನ ಅತ್ಯುತ್ತಮ ಪೋಷಕನಟ ಪ್ರಶಸ್ತಿ ಲಭಿಸಿದೆ. ಇದೇ ಊರಿನ ಹೊನ್ನವಳ್ಳಿ ಕೃಷ್ಣ ಅರ್ಧಶತಮಾನ ಕಾಲ ಈ ರಂಗದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಹಾಸ್ಯ, ಗಂಭೀರ, ಎರಡರಲ್ಲೂ ಅಭಿನಯಿಸಿರುವ ಇವರು ನೂರಾರು ಚಲನಚಿತ್ರ, ಧಾರಾವಾಹಿಗಳಿಂದ ಮನೆಮಾತಾಗಿದ್ದಾರೆ. ತುಮಕೂರಿನಲ್ಲಿ ನೆಲೆಸಿರುವ ಕೃಷ್ಣ ಅಡಿಗರು ಎಚ್.ಎಂ.ಟಿ ಉದ್ಯೋಗದಿಂದ ನಿವೃತ್ತಿ ಪಡೆದು. ಕಿರುತೆರೆ, ರಂಗಭೂಮಿ, ಚಲನಚಿತ್ರಗಳಲ್ಲಿ ಭಾವಪೂರ್ಣ ಅಭಿನಯದಿಂದ ಗಮನ ಸೆಳೆದಿದ್ದಾರೆ. ಕಿರುತೆರೆಯಲ್ಲಿ ಜಿಲ್ಲೆಯ ಮಧುಗಿರಿಯ ರವಿ ಆರ್.ಗರಣಿ, ಲಿಂಗೇನಹಳ್ಳಿ ಸುರೇಶ್ ಚಂದ್ರ, ಲಿಂಗರಾಜು ಮುಂತಾದ ಹಲವಾರು ಮಂದಿ ವಿವಿಧ ರೀತಿಯ ಕಾರ್ಯ ಚಟುವಟಿಕೆಗಳಲ್ಲಿ ನಿರತರಾಗಿದ್ದಾರೆ.

**ಡಾ. ಬಿ. ಜಯಶ್ರೀ:** ಡಾ.ಗುಬ್ಬಿ ವೀರಣ್ಣನವರ ಮೊಮ್ಮಗಳಾದ ಇವರು ೨೦೧೩ರ ಪದ್ಮಶ್ರೀ ಪ್ರಶಸ್ತಿ ಪಡೆದಿದ್ದಾರೆ. ರಂಗಕರ್ಮಿಯಾಗಿ ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿರುವ ಇವರು ಸ್ಪಂದನ ತಂಡದ ಮೂಲಕ ನಾಟಕ ಪ್ರದರ್ಶಿಸುತ್ತಲೇ ಕಂಚಿನ ಕಂಠದ ಗಾಯನದಿಂದ ಹೊಸಗಾನ ಪ್ರಪಂಚವನ್ನು ತೆರೆದಿಟ್ಟರು. ನಾಗಮಂಡಲ ಚಿತ್ರದಲ್ಲಿ ಕುರುಡಜ್ಜಿಯ ವಿಶಿಷ್ಟ ಪಾತ್ರವನ್ನು ನಿರ್ವಹಿಸಿರುವ ಇವರು ಬಿ.ವಿ.ಕಾರಂತರಂತಹ ನಾಟಕಕಾರರೊಡನೆ ಕೆಲಸ ಮಾಡಿದ್ದಾರೆ. ದೆಹಲಿಯ ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾ ಪದವೀಧರರು. ಕೆಲಕಾಲ ಮೈಸೂರಿನ ರಂಗಾಯಣದ ನಿರ್ದೇಶಕರಾಗಿಯೂ ಕಾರ್ಯನಿರ್ವಹಿಸಿರುವ ಇವರು ಶ್ರೇಷ್ಠ ಕಲಾವಿದೆ. ಹಾಗೂ ರಾಜ್ಯಸಭಾ ಸದಸ್ಯರಾಗಿದ್ದಾರೆ.

**ಸಿರಿವರದ ಆಂಜನಪ್ಪ:** 'ಶಂಖನಾದ' ಚಿತ್ರದಲ್ಲಿನ ಅಭಿನಯದಿಂದ ಚಿತ್ರರಂಗದಲ್ಲಿ ಬಲವಾದ ಹೆಜ್ಜೆ ಊರಿದರು. ಅದಕ್ಕೂ ಮುಂಚೆ ರಂಗಭೂಮಿ ನಟರಾಗಿದ್ದರು. ರಂಗನಾಯಕಿ, ಕೆಂಪೇಗೌಡ, ಗಂಡು-ಗೂಳಿಗಳು, ಉತ್ತರಭೂಪ, ಮೈಸೂರು ಮಲ್ಲಿಗೆ, ಹೃದಯರಾಗ, ಧರಣಿ ಮಂಡಲ ಮಧ್ಯದೊಳಗೆ, ಆಕಸ್ಮಿಕ, ಪರಶುರಾಮ, ಆಟೋರಾಜ, ಪರಬ್ರಹ್ಮ, ಗಾಂಧಿಜಯಂತಿ ಮುಂತಾದ ಚಿತ್ರಗಳಲ್ಲಿ, ಪಾರಿಜಾತ, ಕೋಗಿಲೆ, ತಂಗಾಳಿ, ಕಾರ್ತೀಕದೀಪ ಮುಂತಾದ ಧಾರಾವಾಹಿಗಳಲ್ಲಿಯೂ ಅಭಿನಯಿಸಿದ್ದಾರೆ.

***